TIGHT BINDING BOOK

Osmania University Library

Call No

Name Of Book

Name Of Authur

UNIVERSAL LIBRARY

OU_198061

UNIVERSAL LIBRARY

ಭಾರತೀಯರ ಇತಿಹಾಸ

(ಪ್ರಾಚೀನ)

ಲೇಖಕ:—

ಶ್ರೀ. ನಾರಾಯಣ ಶರ್ಮಾ.


ಪ್ರಕಾಶಕ:

ಶ್ರೀ. ಸುರೇಂದ್ರ, ಶಿವರಾವ ದೇಸಾಯಿ, ಬಿ. ಎ.
(ಧಾರವಾಡ ರಾಷ್ಟ್ರೀಯ ಶಿಕ್ಷಣ ಸಮಿತಿಯ,)
ಕಾರ್ಯದರ್ಶಿ.

ಮೊದಲನೇ ಮುದ್ರಣ ೫೦೦ ಪ್ರತಿಗಳು.

ಶಾ. ಶಕೆ. ೧೮೪೫] ಧಾರವಾಡ [ಕ್ರಿ. ಶಕೆ. ೧೯೨೩

ಈ ಪುಸ್ತಕವನ್ನು
ಬೇಡೂ ನಾರಾಯಣ ಮುಕಾಶಿ ದೇಸಾಯಿ,
ಇವರು ತಮ್ಮ
ಶ್ರೀಕೃಷ್ಣ ಮುದ್ರಾಲಯ ಧಾರವಾಡ
ದಲ್ಲಿ ಮುದ್ರಿಸಿದರು.



ಅಮ್ಮಾ!

ನಿನ್ನ ಆಯುಷ್ಯವರ್ಧಕಗಳಿಗಿದು!

ಆಧಾರ ಗ್ರಂಥಗಳು.

೧. ಮಹಾರಾಷ್ಟ್ರ ಜ್ಞಾನಕೋಶ.

೨. Rig-vedic India by Abinash Chandra Das, M. A. B. L. Calcutta.

೩. The History of Aryan Rule in India by E. B. Havell.

೪. History of India by Vincent Smith.

೫. ಶ್ರೀ. ವೈದ್ಯರವರ ಮಧ್ಯಯುಗೀನ ಭಾರತ (ಮಹಾರಾಷ್ಟ್ರ)

೬. The beginnings of south Indian History by Prof. S. Krishnaswamy Iyengar.

೭. History of India by P. T. Shrinivas Iyengar M. A.

೮. The Riddle of Ramayana by C. V. Vaidya.

೯. ಶ್ರೀ. ವೈದ್ಯರವರ ಮಹಾಭಾರತದ ಉಪಸಂಹಾರ (ಮಹಾರಾಷ್ಟ್ರ)

೧೦. Corporate life in Ancient India.

೧೧. Ancient civilization by R. C. Dutt.

ವಿಷಯಗಳ ಪಟ್ಟಿ.

ವೇದಕಾಲದಿಂದ ಕ್ರಿ. ಶ. ೮೦೦ ವರೆಗೆ.

ಪ್ರಕರಣ. ವಿಷಯ ಪುಟ.

೧. **ಪ್ರಾಕೃತಿಕ ಸ್ವರೂಪವು**:- ಉತ್ತರಭಾರತ; ದಕ್ಷಿಣಭಾರತ; ನಮ್ಮ ಮಾತೃಭೂಮಿ; ಹವೆ ನೀರು; ಧರ್ಮವೇ ಭಾರತದ ಜೀವವು; ಭರತಖಂಡವೆಂದು ಹೆಸರು ಬರಲಿಕ್ಕೆ ಕಾರಣ; ವೇದ ಪುರಾಣಗಳಲ್ಲಿ ಭಾರತದ ಹೆಸರು. ೧–೧೦

೨. **ಮಾನವನ ಜನ್ಮಭೂಮಿ ಯಾವುದು**:- ಆರ್ಯರ ತಿರುಗುವ ಸ್ಥಿತಿ; ಆರ್ಯರು ಒಕ್ಕಲತನಕ್ಕೆ ಮೊದಲುಮಾಡಿದುದು; ಆರ್ಯರಲ್ಲಿ ಎರಡು ಪಂಗಡಗಳು; ಆರ್ಯರು ಸರಸ್ವತೀ ದಂಡೆಯಲ್ಲಿ ಮನೆ ಕಟ್ಟಿಕೊಂಡುದು; ಆರ್ಯರ ಬಾಳುವೆ. ೧೨–೨೧

೩. **ವೈದಿಕ ಆರ್ಯರ ಸೃಷ್ಟಿಯ ಉಪಾಸನೆ**:- ಇಂದ್ರದೇವರು; ಮತ್ತೆ ಕೆಲವು ಪಂಗಡಗಳು; ವಾನೀಸರು; ದ್ರಾವಿಡರೊಡನೆ ಆರ್ಯರು ಒಂದಾದುದು; ಆರ್ಯರ ಗುಣರೂಪಾದಿಗಳು; ದ್ರಾವಿಡರು; ವಾನೀಸರು; ಚೋಳರು; ವೇದಗಳು; ಆರ್ಯರ ರಾಷ್ಟ್ರೀಯ ದೇವರು; ಗೃಹದೇವತೆಯಾದ ಅಗ್ನಿ; ವರುಣ ಮತ್ತು ಉಷಾಸೂಕ್ತಗಳು; ದಾಶರಾಜ್ಞ ಯುದ್ಧವು; ದಿವೋದಾಸ; ಆರ್ಯರ ಸಾಮಾಜಿಕ ಸ್ಥಿತಿಯು; ಕುಟುಂಬ ಪದ್ಧತಿಯು; ಆಹಾರಾದಿ ಪದಾರ್ಥಗಳು; ಕಸಬು ಕೈಗಾರಿಕೆ ವ್ಯವಹಾರ; ರಾಜ್ಯಭಾರಕ್ರಮ; ಧಾರ್ಮಿಕಮತಗಳು; ದೇವರ ಸರ್ವವ್ಯಾಪ್ತಿತ್ವ; ವೈದಿಕ

ಕಾಲದ ಪುಣ್ಯಶ್ಲೋಕರಾದ ಮಹನೀಯರು; ನಾಮವೇದ; ಯಜುರ್ವೇದ; ಅಥರ್ವವೇದ. ೨೨—೩೨

೪. **ಬ್ರಾಮ್ಹಣಗಳೂ, ಉಪನಿಷತ್ತುಗಳೂ:-** ಬ್ರಾಮ್ಹಣಗಳು; ಜಗದುತ್ಪತ್ತಿಯ ಕಥೆ; ಜಲಪ್ರಳಯದ ಕಥೆ; ಯಜ್ಞವಿಚಾರ; ಯಜ್ಞದ ಮಹತ್ವ; ಯಜ್ಞದ ಧ್ಯೇಯ; ಆರಣ್ಯಕಗಳೂ ಉಪನಿಷತ್ತುಗಳೂ; ಉಪನಿಷತ್ಕಾಲದ ಮಹಿಮೆ; ಸತ್ಯಕಾಮ-ಜಾಬಾಲೀ ಕಥೆ; ನಚಿಕೇತನ ಕಥೆ; ಬ್ರಾಹ್ಮಣ ಹಾಗೂ ಉಪನಿಷತ್ತುಗಳ ನಿರೀಕ್ಷಣೆ; ನಾಮಾಜಿಕ ನಡೆನುಡಿಗಳು; ಬ್ರಾಮ್ಹಣ ಹಾಗೂ ಉಪನಿಷತ್ಕಾಲದ ಧರ್ಮ ಹಾಗೂ ಮತ; ಉಪನಿಷತ್ಕಾಲದ ವಿಭೂತಿಗಳು; ಯೋಗೀಶ್ವರ ಯಾಜ್ಞವಲ್ಕ್ಯರು. ೩೩—೭೫

೫. **ರಾಮಾಯಣಕಾಲವು:**—ಸೂರ್ಯವಂಶದ ಮೂಲ; ಅವತಾರ ಕಲ್ಪನೆ; ರಾಮಾಯಣ ಮಹಾಕಾವ್ಯವು; ರಾಮಾಯಣ ಕಥೆ; ರಾಮಾಯಣಕಾಲದ ನಡೆನುಡಿಗಳು; ಸಮಾಜಸ್ಥಿತಿ; ರಾಜಧರ್ಮ; ರಾಕ್ಷಸರು; ರಾಮಾಯಣದೊಳಗಿನ ವಾನರರು ಮಂಗಗಳೋ; ರಾಮಾಯಣಕಾಲದ ಸೀಮಾಪುರುಷರು; ವಾಲ್ಮೀಕಿಮುನಿಯು ಬೇಡನೋ ಬ್ರಾಮ್ಹಣನೋ!; ರಾಮಾಯಣ ರಚನೆ; ವಸಿಷ್ಠ-ವಿಶ್ವಾಮಿತ್ರ; ಮಹಾಭಾರತಕಾಲ; ಭಾರತವನ್ನು ಬರೆದವರು. ೭೬-೮೬

೬. **ಶ್ರೀಮಹಾಭಾರತ:—** ಭಾರತದ ಮಹಿಮೆ; ಭಾರತವು ರಾಷ್ಟ್ರೀಯ ಗ್ರಂಥವು; ಚಂದ್ರವಂಶದ ಚರಿತ್ರೆ; ಕುರುಪಾಂಡವರು ಯಾರು; ಪಾಂಡವರ ಬಾಲ್ಯಶಿಕ್ಷಣ; ಪಾಂಡವರ ವಾಸ; ಭಾರತಕಾಲದವರ ಬಾಳುಬದುಕು; ಭಾರತೀಯರ ಬಣ್ಣ; ಜೀವಮಾನವು; ಆರ್ಯರ ವರ್ಣವ್ಯವಸ್ಥೆ; ವರ್ಣಸಂಕರದ ಗಂಡಾಂತರ; ಉದ್ಯೋಗ ಭೇದಗಳು; ಬ್ರಾಮ್ಹಣರ ಉದ್ಯೋಗ; ಕ್ಷತ್ರಿಯರು; ವೈಶ್ಯ ಮತ್ತು ಶೂದ್ರರು;

ಆಶ್ರಮವ್ಯವಸ್ಥೆ; ಗೃಹಸ್ಥಾಶ್ರಮಧರ್ಮ; ವಾನಪ್ರಸ್ಥ ಮತ್ತು ಸನ್ಯಾಸ; ಸಾಮಾಜಿಕಸ್ಥಿತಿ; ವಿವಾಹಪದ್ಧತಿ; ವಿವಾಹಭೇದ; ಪತಿಪತ್ನಿಯ ಸಂಬಂಧ; ಸತಿಯ ಪದ್ಧತಿಯು; ಊಟಉಡಿಗೆಗಳು; ತತ್ಕಾಲೀನ ಸ್ತ್ರೀಯರ ಉಡಿಗೆ; ಆಭರಣಾದಿಗಳು; ಮಿಕ್ಕ ನಡೆವಳಿಕೆಗಳು; ಉದ್ಯಮವಾದವು; ಸತ್ತರೆ ರಣದಲ್ಲಿ ಅಥವಾ ವನದಲ್ಲಿ; ರಾಜಕೀಯಸ್ಥಿತಿ; ರಾಜ್ಯದ ಅಂಗಗಳು; ಅರಸುಮನೆತನ; ರಾಜನ ದಿನಚರ್ಯೆ; ಶಾಸನ ತೆರಿಗೆ ಮುಂತಾದವು; ನ್ಯಾಯಪದ್ಧತಿ; ಸ್ವಾತಂತ್ರ್ಯಪ್ರೀತಿಯು; ರಾಜನೀತಿ; ಎರಡು ಉದಾಹರಣೆಗಳು; ಯುದ್ಧ ಹಾಗೂ ಸೈನ್ಯ; ಸೈನ್ಯರಚನೆ; ಭಾರತ ಕಾಲದ ಧರ್ಮವಿಚಾರ; ಭಾರತೀಯರ ವೈಶಿಷ್ಟ್ಯವು; ಭಗವಾನ್ ಶ್ರೀಕೃಷ್ಣ; ಶ್ರೀವೇದವ್ಯಾಸರ ಅಲ್ಪ ಚರಿತ್ರೆ; ಆತ್ಮನನ್ನು ಹುಡುಕುವದೇ ತತ್ವಜ್ಞಾನದ ಉದ್ದೇಶವು; ಸೂತ್ರಕಾಲ; ಉಪವೇದಗಳು ಅಥವಾ ವಿದ್ಯೆಗಳು; ವೈದಿಕ ಸಾಹಿತ್ಯ; ಷಡ್ದರ್ಶನಗಳು; ಸಾಂಖ್ಯ; ಯೋಗ; ನ್ಯಾಯ; ಪೂರ್ವಮೀಮಾಂಸೆ; ಉತ್ತರಮೀಮಾಂಸೆ; ಧರ್ಮಶಾಸ್ತ್ರಗಳು; ಶ್ರೌತಸೂತ್ರಗಳು; ಗೃಹ್ಯಸೂತ್ರಗಳು; ದೇವಯಜ್ಞ; ಋಷಿಯಜ್ಞ; ಪಿತ್ರಯಜ್ಞ; ಭೂತಯಜ್ಞ; ಅತಿಥಿಯಜ್ಞ; ಧರ್ಮಸೂತ್ರಗಳು; ಸಾಮಾನ್ಯಸ್ಥಿತಿ; ರಾಜಕೀಯಸ್ಥಿತಿ; ಜನಾಂಗಸ್ಥಿತಿ; ಮತ್ತೊಂದು ಪ್ರಚಂಡವಾದ ತೆರೆಯು; ಭಾಗವತಧರ್ಮ; ಪಾಶುಪತಧರ್ಮ; ಜೈನ-ಬೌದ್ಧಮತಗಳು; ಜೈನಮತವು; ಮಹಾವೀರಪಂಥ; ಜೈನಮತದ ಸಿದ್ಧಾಂತ; ಜೈನಧರ್ಮದಿಂದಾದ ಲಾಭ ಅಥವಾ ಹಾನಿ; ಜೈನರನಡೆನುಡಿಗಳು. ಪಿಠಿ-೧೫೧

೭. **ಬೌದ್ಧಕಾಲ:**- ಸೀಮಾಪುರುಷರ ಕಾರ್ಯ; ಬುದ್ಧನಕಾಲದ ಸ್ಥಿತಿ; ಬುದ್ಧಜನ್ಮ; ಬುದ್ಧನ ಬಾಲ್ಯ; ಬುದ್ಧನ ಮದುವೆ

ಮತ್ತು ವೈರಾಗ್ಯ; ಗೌತಮನು ಬುದ್ಧನಾದುದು; ಜ್ಞಾನೋತ್ತರ ಬುದ್ಧಕಾರ್ಯ; ಬುದ್ಧನ ನಿರ್ವಾಣವು; ಬೌದ್ಧಸಂಪ್ರದಾಯ; ಬೌದ್ಧಸಂಪ್ರದಾಯದ ಐತಿಹಾಸಿಕ ಬೆಲೆ; ಬುದ್ಧಕಾಲದ ಸಾಮಾಜಿಕಸ್ಥಿತಿಯು; ಸಾರ್ವಜನಿಕವಾದ ಸ್ನಾನದ ಮನೆಗಳು; ಜಾತಿಸಂಸ್ಥೆ ಮತ್ತು ಅರಮನೆ; ವ್ಯಾಪಾರ; ಜನರ ಆರ್ಥಿಕಸ್ಥಿತಿ ಹಾಗೂ ಓದು-ಬರಹ; ಬ್ರಾಹ್ಮಣರು ತಮ್ಮ ಸಂಸ್ಕೃತಿಯನ್ನು ಕಾಯ್ದುದ್ದು; ರಾಜಕೀಯಸ್ಥಿತಿಯು; ಹಿಂದೂದೇಶದ ಮೇಲೆ ಇರಾಣಿಯರ ಕಣ್ಣು; ನಂದ ವಂಶವು; ಗ್ರೀಕರ ದಾಳಿ; ವ್ಯಾಸನದಿಯ ವರೆಗೆ ಪಯಣ; ಮಲ್ಲರೊಡನೆ ಲಗ್ಗೆ; ಅಲೆಕ್ಸಾಂಡರನ ಗುಣಕಲಾಪ; ಆರ್ಯ ಚಾಣಕ್ಯ; ನಂದರನ್ನು ನಿರ್ಮೂಲಗೊಳಿಸಲು ನಿಶ್ಚಯ; ಯುದ್ಧಸಿದ್ಧತೆ. ೧೮೨–೨೧೮

೮. **ಮೌರ್ಯರ ಅಳಿಕೆ:**– ಚಕ್ರವರ್ತಿ ಮೌರ್ಯ ಚಂದ್ರಗುಪ್ತನು; ಹಿಂದುಸ್ಥಾನದ ಮೊದಲನೇ ಚಕ್ರವರ್ತಿ; ಚಂದ್ರಗುಪ್ತನ ರಾಜಧಾನಿ; ಅರಮನೆ; ಅರಸನ ನಡೆನುಡಿ; ರಾಜ್ಯಭಾರ ನಡಿಸುವ ಕ್ರಮ। ಕೈಗಾರಿಕೆ ವ್ಯವಸಾಯ; ದಂಡಿನ ಖಾತೆ; ಪ್ರಜೆಗಳ ಸ್ಥಿತಿ; ಬಿಂದುಸಾರ; ಅಶೋಕ; ಅಶೋಕ ಚಕ್ರವರ್ತಿಯ ರಾಜನೀತಿ; ಕಲಾಭಿವೃದ್ಧಿ ಬೌದ್ಧಧರ್ಮದ ಮಹಾಸಭೆ; ಬೌದ್ಧಸಂಪ್ರದಾಯ ಪ್ರಸಾರ; ಮೌರ್ಯರ ಮುಳುಗು; ರಾಷ್ಟ್ರಜೀವನ. ೨೧೯–೨೩೫

೯. **ಆನಾಯಕರ ಕಾಲವು:**– ಸಂಗಮನೆತನ; ಪುಷ್ಯಮಿತ್ರನ ಅಶ್ವಮೇಧಯಜ್ಞ; ಆಂಧ್ರರು; ವೀರವಿಕ್ರಮಾರ್ಕ; ಕುಶಾನರು; ಬೌದ್ಧಮತದ ಹಬ್ಬುಗೆ; ದಕ್ಷಿಣಹಿಂದೂದೇಶ; ಈ ಕಾಲದ ಜನರ ಸ್ಥಿತಿ; ಬೌದ್ಧಿಕಸ್ಥಿತಿ; ಹಿಂದುಗಳ ವ್ಯಾಪಾರದ ಸಾಹಸವು ಮತ್ತು ಪರನಾಡುಗಳಲ್ಲಿ ಹೋಗಿ ನೆಲಸಿದುದು; ಓಸಿಯದ ಮಹತ್ಕಾರ್ಯ. ೨೩೬–೨೫೨

೧೦. ಗುಪ್ತವಂಶ ಸ್ಥಾಪಕನಾದ ಚಂದ್ರ:– ಗುಪ್ತವಂಶವು; ದಿಗ್ವಿಜಯಿಯಾದ ಸಮುದ್ರಗುಪ್ತ; ೨ನೇ ಚಂದ್ರಗುಪ್ತನು; ಹಿಂದೂದೇಶದಲ್ಲಿ ಹೂಣರ ರಾಜ್ಯ; ದಕ್ಷಿಣಹಿಂದುಸ್ಥಾನ; ಬೌದ್ಧಿಕ ಬೆಳವಳಿಗೆ; ಧಾರ್ಮಿಕಸ್ಥಿತಿ; ಶಿಲ್ಪಕಲೆ; ಕರ್ನಾಟಕದ ಬೆಳಿಗೆ. ೨೫೩–೩೧೦

೧೧. ಹಿಂದೂದೇಶದ ಸಿರಿಗಾಲವು:– ಕತ್ತಲೆಗಾಲ; ಥಾಣೇಶ್ವರ ಮನೆತನ; ಶ್ರೀಹರ್ಷವರ್ಧನ; ಹರ್ಷನ ಸಾಮ್ರಾಜ್ಯ ವಿಸ್ತಾರ; ಮನೆತನದ ಸ್ಥಿತಿ ಹಾಗೂ ಅಂತಕಾಲ; ಹರ್ಷಕಾಲದ ಜಾತಿ ವ್ಯವಹಾರಗಳು; ಸಾಮಾಜಿಕ ದೇಶಾಚಾರಗಳು; ಶಿಕ್ಷಣ ಪದ್ಧತಿ; ಜನರ ರಾಜಕೀಯ ಕಲ್ಪನೆಗಳು; ರಾಜ್ಯವ್ಯವಸ್ಥೆ ದಂಡು ಮುಂತಾದವು; ಧರ್ಮಮತವಿಚಾರಗಳು; ದಕ್ಷಿಣಹಿಂದೂದೇಶ; ಕರ್ನಾಟಕ ಸಾಮ್ರಾಜ್ಯದ ಹಬ್ಬುಗೆ; ಪುಲಿಕೇಶಿಯ ಕೊನೆಗಾಲ; ಕನ್ನಡಿಗರ ಚೆನ್ನಗಾಲವು; ರಾಷ್ಟ್ರಕೂಟರ ಏಳಿಗೆ; ಇಸ್ಲಾಮಧರ್ಮ ಸ್ಥಾಪಕನಾದ ಮಹಮ್ಮದ ಪೈಗಂಬರ; ಧರ್ಮಕಾರ್ಯಕ್ಕೆ ಪ್ರಾರಂಭ; ಮಹಮ್ಮದವರ ಬಾಳ್ವೆ ಮತ್ತು ನೈತಿಕಸುಧಾರಣೆ; ಇಸ್ಲಾಮಧರ್ಮದಿಂದ ಹಿಂದುಸ್ಥಾನದ ಮೇಲಾದ ಪರಿಣಾಮ.

೧೨. ಗಂಡುಗೆಟ್ಟ ಹಿಂದೂದೇಶಕ್ಕೆ ಅರಬರ ದಾಳಿ:– ಹರ್ಷನ ತರುವಾಯದ ಹಿಂದುಸ್ಥಾನವು; ಕಾಶ್ಮೀರದ ಕರ್ಕೋಟಕ ವಂಶದ ಲಲಿತಾದಿತ್ಯನು; ಸಿಂಧಪ್ರಾಂತಕ್ಕೆ ಅರಬರ ದಾಳಿ; ಅಫಗಾಣಿಸ್ಥಾನದಲ್ಲಿಯ ಹಿಂದೂರಾಜ್ಯವು; ಉತ್ತರಹಿಂದೂದೇಶದ ರಾಜಕೀಯ ಹಾಗೂ ಧಾರ್ಮಿಕಸ್ಥಿತಿ; ದಕ್ಷಿಣ ಹಿಂದೂದೇಶ; ರಾಜಕೀಯ ಸ್ಥಿತಿಯೂ, ಶೈವಮತದ ಪ್ರಾಬಲ್ಯವೂ; ಆರ್ಯರ ವೈರವ್ಯವಸ್ಥೆಯೂ, ಜನಜೀವನವೂ; ಶ್ರೀಮಚ್ಛಂಕರಾಚಾರ್ಯರು; ಧಾರ್ಮಿಕದಿಗ್ವಿಜಯ.

ಒಪ್ಪೋಲೆ.

ವಿ. ಸೂಚನೆ.— ಕಣ್ಣಿನ ತಪ್ಪಿ ಉಳಿದ ತಪ್ಪುಗಳನ್ನು ಇದರಿಂದ ಕಾಣಿಸಿದೆ. ಓದುವವರು ದಯವಿಟ್ಟು ಇದರಂತೆ ತಿದ್ದಿಕೊಳ್ಳಬೇಕು.

ಪುಟ.	ಸಾಲು.	ತಪ್ಪು.	ಒಪ್ಪು.
೨೫	೧೭	ಪಾನೀಸರೆಂದರೆ	ಪಾನೀಸ ಅಂದರೆ
೫೭	೧೬	ಶತವಧ	ಶತಪಥ
೬೪	೧೧	ಬಲಿದಿತ್ತೆಂಬುದು	ಬಲಿದಿತ್ತೆಂಬದು
೭೦	೧೪	ಮಗುವಿನಲ್ಲಿ	ಮಗುವಿನ
೯೦	೧೪	ವಾನರ	ವಾನರರು
೯೩	೧೫	ಕಾಮಮೋಹಿತಃ	ಕಾಮಮೋಹಿತಂ
೯೫	೨೩	ಆಳವಾಗಿ	ಆಳವಾಗಿ
೯೭	೧	ಭಾರತದ ಮಹಿಮೆ	ಮಹಾಭಾರತದ
೯೭	೧೯	ಬೆರಸ ಪಡಿಸ	ಬೇರ್ಪಡಿಸ
೧೦೦	೧೩	ಆಯಾ	ಆಯು
೧೦೨	೪	ರಾಜ್ಯದಾಡಿಳಿತವು	ರಾಜ್ಯದಾಡಳಿತವು
೧೦೩	೨೦	ಮೊದಲನೇವನವಾಸ	ವನವಾಸ
೧೦೫	೮	ಎಬ್ಬಿಟ್ಟು	ಎಬ್ಬಟ್ಟು
೧೧೦	೬	ಪೀಳಿಗೆಯು	ಪೀಳಿಗೆಯನ್ನು
೧೨೨	೨೬	ನಡುವಳಿಕೆಯೂ	ನಡೆವಳಿಕೆಯೂ
೧೩೫	೨೨	ಜೈನ	ಜೈನರು ದೇವರಿದ್ದಾನೆನ್ನುತ್ತಾರೆ.
೧೩೬	೯	ನಾಂಪ್ರದಾಯಿಕರು	ಸಂಪ್ರದಾಯಿಕರು
೧೪೩	೧೧	ಕಟ್ಟಿಗೆ	ಕಟ್ಟಿಗೆ
೧೯೬	೧೪	ಬೀದಿ	ದಾರಿ
೧೯೮	೩	ಬುದ್ಧಧರ್ಮ ಹಾಗು	ಬುದ್ಧಧರ್ಮಕ್ಕಾಗಿ
೨೦೩	೨೩	ಅರಸನಾದ	ಅರಸನಾಡ

ಪುಟ.	ಸಾಲು.	ಒಪ್ಪು	ತಪ್ಪು.
೨೦೩	೨೭	ಮೆಲ್ಲಮೊಲ್ಲಿಗೆ	ಮೆಲ್ಲಮೆಲ್ಲಗೆ
೨೨೭	೧	ಪಿಂದೂನಾರ	ಪಿಂದುನಾರ
೨೩೬	೧	೩೨೦—೩೩೦	೨೩೦-ಕ್ರಿ. ಶ.—೩೦೦
೨೩೯	೧	ಆಂಧ್ರರು	ಆಂಧ್ರರು
೨೪೩	ಲ	ಪುಜ್ಯ	ಪೂಜ್ಯ
೨೫೩	(ಪೆಡಿಂಗ)	ಕ್ರಿ. ಶ. ಪೂರ್ವ	ಕ್ರಿ. ಶ.
೨೮೬	೧	ಭಾರತೀಯ	ಭಾರತ
೨೮೮	೨	ಶಿಲ್ಪು	ಶಿಲ್ಪಿ
೨೯೭	೧೮	ಆಣಿಗಸ	ಅಣಗಸ
೩೦೫	೨೧	ಒಬ್ಬ	೦
೩೦೮	೧	ಪ್ರತಿತ್ವದ	ಪತಿತ್ವದ
೩೨೦	೧೩	ಹೇಳಿರುವಪಲ್ಲದೆ	ಹೇಳಿರುವದಲ್ಲದೆ

ಮುನ್ನುಡಿ.

"ಮಹತ್ವಕ್ಕೇರುವ ಮನುಷ್ಯನು ಇತಿಹಾಸ, ಪುರಾಣ ಹಾಗು ವೀರಕಾರ್ಯಗಳ ಕಥೆಗಳನ್ನು ಕೇಳಬೇಕು; ಈ ಮಾತನ್ನರಿಯುವ ವನು ಇತಿಹಾಸ, ಪುರಾಣ ಮತ್ತು ವೀರ್ಯವತ್ತರವಾದ ಕಾರ್ಯಗಳನ್ನೇ ತನ್ನ ಪ್ರಿಯ ಸ್ಥಾನಗಳನ್ನಾಗಿ ತಿಳಿಯುತ್ತಾನೆ."

(ಅಥರ್ವವೇದಕಾಂಡ)

ಇತಿಹಾಸದ ಬಗ್ಗೆ ಆರ್ಯರ ಮೇಲಣ ಕಲ್ಪನೆಯೆತ್ತ? ಈಗಿನವರ ಕಲ್ಪನೆಯೆತ್ತ? ಒಂದು ವೇಳೆ ಈಗಣವರ ಕಲ್ಪನೆಯೂ ಮೇಲಿನಂತೆಯೇ ಇದ್ದರೂ, ಆಚರಣೆಯಲ್ಲಿ ಮಾತ್ರ ಈಗಣ ಕಾಲದ ಇತಿಹಾಸಗಳೆಂದರೆ, ರಾಜವಂಶಾವಳಿಗಳ ಪಟ್ಟಿ ಹಾಗೂ ಯುದ್ಧದ ವರ್ಣನೆಗಳನ್ನು ಹೇಳುವ ಹಾಳು ಕಂತೆಗಳು. ಒಂದರಲ್ಲೂ ಪ್ರಾಚೀನಕಾಲದ ಜನಜೀವನದ ಚಿತ್ರವಿಲ್ಲ; ಭಾರತೀಯರ ಸಂಸ್ಕೃತಿಯ ಕುರುಹಿಲ್ಲ; ಭಾರತೀಯರ ಬೇರೆಬೇರೆ ರಾಜಕೀಯ ಸಾಮಾಜಿಕ ಧಾರ್ಮಿಕ ಸಂಸ್ಥೆಗಳ ಸಂಗತಿಯಿಲ್ಲ. ನಿರ್ಜೀವವಾದ ಇಂತಹ ಚರಿತ್ರೆಗಳಿಂದ ಯುವಕರಲ್ಲಿ ತಮ್ಮ ನಾಡು, ತಮ್ಮ ನುಡಿ, ತಮ್ಮ ಪೂರ್ವಿಕರು, ತಮ್ಮ ಸಂಸ್ಕೃತಿ ಅವೆಲ್ಲವುಗಳ ದೆಸೆಯಿಂದ ಅಭಿಮಾನವು ಮೈದೋರುವದೆಂತು! ಚರಿತ್ರೆಯ ವಿಷಯದಲ್ಲಿರುವ ಈ ಕ್ಷಾಮಕಾಲವನ್ನು ಕೆಲಮಟ್ಟಿಗಾದರೂ ಹೋಗಲಾಡಿಸುವಂಥದೊಂದು ಜನಜೀವನದರ್ಶಕವಾದ ಚರಿತ್ರೆಯನ್ನು ಬರೆಯಬೇಕೆಂಬುದೊಂದು ವಿಚಾರವು ಬಹು ದಿನಗಳಿಂದಲೂ ಮನಸಿನಲ್ಲಿ ಕುದಿಯುತ್ತಿದ್ದಿತು. ಧಾರವಾಡ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ದೇಸಾಯರು ಈ ತೆರನಾದೊಂದು ಚರಿತ್ರೆಯು ನಮ್ಮ ತರುಣರಿಗೆ ಬೇಕೆಂದು ಆಗಾಗ್ಗೆ ನುಡಿಯುತ್ತಿದ್ದರು; ಆದರೆ ಕಾಲಕ್ಕೂ ಕರ್ಮಕ್ಕೂ ಕೂಡಿ ಬರುವಂಥ ಹದಗಾಲವು ಬರದೇ ಮನುಷ್ಯನಿಂದಾವ ಕಾರ್ಯ ತಾನೇ ಆಗಬಲ್ಲದು? ಒಂದು ದಿನ ನಾವಿರ್ವರು ತಿರುಗಾಡಲಿಕ್ಕೆ ಹೋದಾಗ ಇದರದೇ ಪ್ರಸ್ತಾಪ ನಡೆದು

"ಇನ್ನು ಮಾತ್ರ ಚರಿತ್ರೆಯ ಬರೆವಣಿಗೆಯ ಕಾರ್ಯಕ್ಕೆ ಕೈಹಾಕಲಿಕ್ಕೇ ಬೇಕೆಂದು" ಮಾತನಾಡಿಕೊಂಡೆವು. ಶ್ರಿ. ದೇಸಾಯರೂ ಶಿಕ್ಷಣಸಮಿತಿಯ ಸಭಾಸದರ ಅನುಮತಿ ಪಡೆದು ಬರೆಯಬಹುದೆಂದು ಕೊನೆಮಾತು ಹೇಳಿದರು. ಇಷ್ಟು ನಿಶ್ಚಯವಾಯಿತು. ನಾನಾದರೂ ಅದಕ್ಕೆ ಬೇಕಾಗುವ ಆಧಾರ ಗ್ರಂಥಗಳನ್ನು ಶೇಖರಿಸಲಿಕ್ಕೆ ಮೊದಲುಮಾಡಿದೆನು.

ಭಾರತೀಯರ ಇತಿಹಾಸದಲ್ಲಿ "ಭಾರತೀಯರು ಇಲ್ಲಿಯವರೇ ಹೊರತು ಅವರ ಬೇರೊಂದು ದೇಶದಿಂದ ಬಂದವರಿಲ್ಲವೆಂಬ ಭಾವನೆಯಿಂದ ಭಾರತೀಯರ ಆನಂದಕ್ಕೆ ಹೇಗೆ ಉಕ್ಕು ಬರುವದೋ ಹಾಗೆ ಅವರು ಮಧ್ಯಏಸಿಯದಿಂದ ಬಂದವರು, ಉತ್ತರಧ್ರುವದಿಂದ ಬಂದವರೆಂಬ ಕಲ್ಪನೆಗಳಿಂದ ಬಾರದಷ್ಟೇ! ಇದುವರೆಗಾದ ಇತಿಹಾಸಗಳಲ್ಲೆಲ್ಲ "ಭಾರತೀಯ ಆರ್ಯರು ಮಧ್ಯಏಸಿಯದಿಂದ ಬಂದವರೆಂಬ ಸಿದ್ಧಾಂತವನ್ನು ಮುಂದಿಟ್ಟುಕೊಂಡೇ" ನಮ್ಮ ಇತಿಹಾಸಗಾರರು ಮುಂದೆ ಸಾಗಿದ್ದಾರೆ; ಆದರೆ ಈ ಸಿದ್ಧಾಂತವನ್ನು ಖಂಡಿಸಿ "ಭಾರತೀಯ ಆರ್ಯರು ಇಲ್ಲಿಯವರು; ಪ್ರಪಂಚಕ್ಕೇ ಭಾರತೀಯ ಜನಾಂಗವು ತೊಟ್ಟಿಲು" ಎಂಬೀ ಸಿದ್ಧಾಂತವನ್ನು ಸಾಧಿಸಲಿಕ್ಕೆ ಅನುವಾದ ಹೊಸ ಗ್ರಂಥಗಳು ಸಿಕ್ಕರೆ ಎಷ್ಟು ಚೆನ್ನಾದೀತೆಂದು ನನ್ನಷ್ಟಕ್ಕೆ ನಾನೇ ಮನಸಿನಲ್ಲಿ ಅಂದುಕೊಂಡು ಅಲ್ಲಲ್ಲಿಯ ಇತಿಹಾಸಗಳನ್ನು ಓದಿನೋಡುತ್ತಿದ್ದೆನು; ಒಂದು ದಿನ ಧಾರವಾಡ ರಾಷ್ಟ್ರೀಯ ಶಾಲೆಯ ಪುಸ್ತಕ ಸಂಗ್ರಹಾಲಯದಲ್ಲಿ ಎಷ್ಟು ತರದ ಇತಿಹಾಸಗಳಿರುವವೋ ನೋಡಬೇಕೆಂದು ಹುಡುಕುತ್ತಿರುವಾಗ್ಗೆ "Rig-vedic India" ಎಂಬುದೊಂದು ಇಂಗ್ಲೀಷ ಗ್ರಂಥವು ಕೈಗೆ ಸಿಕ್ಕಿತು. ಇದರಲ್ಲೇನಿರುವದೋ ಎಂದು ಓದಿನೋಡುವಷ್ಟರಲ್ಲಿ "ಭಾರತೀಯ ಆರ್ಯರು ಇಲ್ಲಿಯವರೇ, ಇಲ್ಲಿಂದಲೇ ಜನಗಳು ಬೇರೆ ಬೇರೆ ಜನಾಂಗಗಳಿಗೆ ಒಕ್ಕಲಾಗಿರಲಿಕ್ಕೆ ಹೋದರೆ"ಂಬ ಸಿದ್ಧಾಂತವನ್ನು ಪ್ರೊ. ಅವಿನಾಶ ಚಂದ್ರ ದಾಸರವರು ಸಿದ್ಧಪಡಿಸಿದ್ದನ್ನು ಕಂಡು ನನಗೆ ಹಿಡಿಸಲಾರದಷ್ಟು ಆನಂದವಾಯಿತು. ಇತಿಹಾಸ ಬರೆಯಬೇಕೆಂಬ ಹಸಿವುಳ್ಳ ನನಗೆ

ಹೊಸ ಶೋಧನೆಯ ಈ ಸಂಗತಿಯಿಂದ ಮೊದಲನೇ ತುತ್ತಿಗೇನೇ ಮುತ್ತು ಕೈಗೆ ಬಂದಷ್ಟು ಆನಂದವಾಗಿ ನನ್ನ ಹುರುಪು ಇಮ್ಮಡಿಯಾಗಿ ಹೆಲಸಕ್ಕೆ ದುಮ್ಮಿಕ್ಕಿದೆನು. ಮುಂದೆ ಶಿಕ್ಷಣಸಮಿತಿಯ ಕಾರ್ಯದರ್ಶಿಗಳಾದ ಶ್ರಿ. ದೇಸಾಯರೂ ನನಗೆ ಬೇಕಾದ ಆಧಾರ ಗ್ರಂಥಗಳನ್ನೆಲ್ಲ ಸಾಧ್ಯವಿರುವಮಟ್ಟಿಗೆ ಹುಡುಕಿ ಒದಗಿಸಿಕೊಟ್ಟರು. ಇದೀಗ ಕಾರ್ಯ ಸಿದ್ಧಿಯ ಪುರಾಣವು.

ನಾಂಸ್ಕೃತಿಕ ಹಾಗೂ ಜನಜೀವನದ ಚಿತ್ರವನ್ನೊಳಗೊಂಡಿರುವ ಚರಿತ್ರೆಯನ್ನು ಬರೆಯಬೇಕೆಂದು ಮೊದಲು ನಾನು ಹವಣಿಸಿರುವಂತೆ, ಪ್ರಕೃತಕ್ಕೆ ಮುದ್ರಿತವಾಗಿರುವ ನಾಧ್ಯವಿದ್ದ ಗ್ರಂಥಗಳನ್ನೆಲ್ಲ ಓದಿ ಕೊಂಡು ಮುನ್ನೂರೈದಕಾಲದಿಂದಲೂ ಹಿಂದೂದೇಶಕ್ಕೆ ಅರಬರು ಬರುವ ವರೆಗಿನ ಭಾರತೀಯರ ಚರಿತ್ರೆಯನ್ನು ಕೈಲಾದಮಟ್ಟಿಗೆ ಆಚ್ಚುಕಟ್ಟಾಗಿ, ಹುರಿಕಟ್ಟಾಗಿ, ಹಸನಾಗಿ, ಹುರುಳಾಗಿ ಬರೆಯಲು ಎತ್ತುಗಡೆ ಮಾಡಿ ಡ್ದೇನೆ. ನಿಜವಾಗಿಯೂ, ಭಾರತದಂಥ 'ದಿವ್ಯ' ಜನಾಂಗದ ಹಿಂದಣ ಚರಿತ್ರೆಯನ್ನು ಬರೆಯಲು ಎದೆಗೊಳ್ಳುವವನು ಆರ್ಯಸಂಸ್ಕೃತಿಯ ಮಟ್ಟುಗುಟ್ಟುಗಳನ್ನರಿತ ಮಿಗಿಲಾದ ಗೊತ್ತುಗಾರಿಯೂ, ಗೊತ್ತಿದ್ದುದನ್ನು ಕಣ್ಮುಟ್ಟಿ ನೋಡಿದಂತೆ, ಆ ನೋಟವು ಓದುಗರ ಕಣ್ಣಿಗೆ ಕಟ್ಟುವಂತೆ ಬರೆಯುವ ಬಲ್ಲ ಬರಹಗಾರನೂ ಇದ್ದೇ ತೀರಬೇಕು; ಆದರೆ ಕುಂಡವರ ಪಾಲಿಗೆ ಬರುವ ಮಾತಲ್ಲವದು! ವರ ಬರಹಗಾರನಿಗೆ ಮೀಸಲು ಕಟ್ಟಿದ ಭಾಗ್ಯವದು!! ಅಂಥದನ್ನು ಬೇಡಿ ಪ್ರಪಂಚಕ್ಕೆ ನ್ರೀಡಲು ಬಂದ ಚರಿತ್ರೆಯ ಚಿತ್ರಗಾರನು ಕನ್ನಡನಾಡಿನಲ್ಲಿ ಎಂದು ಮೈಗೊಂಡು ಬರುವನೋ ಬರಲಿ! ಮನಸಿನೊಳಗಿನ ಈ ಕಂದು ಆಳಿವು ದೆಂದೋ ಆಳಿಯಲಿ!! ಆ ಕಂದುಕುಂದಿನಿಂದ ಕುಗ್ಗದೆ ಮುಗ್ಗದೆ, ನಾನಂತೂ ಕೈಲಿದ್ದ ನಾಮಗ್ರಿಗಳನ್ನೆಲ್ಲ ಅಳವಡಿಸಿಕೊಂಡು ಬೆಳಗನ್ನಡಿಗರಿಗಾಗಿ ಬೆಳುಗನ್ನಡದೊಳಗೀ ಭಾರತೀಯರ ಬೆಳಗುವ ಜನಜೀವನದ ಚರಿತ್ರೆಯನ್ನು ಬರೆಯಲು ಸಾಹಸಗೊಂಡಿದ್ದಾಯಿತು.

ಹೊಸ ವಿಷಯವು ಸ್ಪಷ್ಟವಾಗಲಿಕ್ಕೆ ಅಲ್ಲಲ್ಲಿ ಹಲಕೆಲ ಟಿಪ್ಪಣಿಗಳನ್ನು ಕೊಟ್ಟಿದ್ದೇನೆ. ದಿನದಿನಕ್ಕೆ ಐತಿಹಾಸಿಕ ಹೊಸ ಹೊಸ

ಶ್ರೋದ್ಧನೆಗಳು ನಡೆದುದರಿಂದ ನಾನೀ ಪುಸ್ತಕ ಬರೆಯುವದರೊಳಗಾಗಿ ಮತ್ತೆಷ್ಟೋ ಹೊಸ ವಿಷಯಗಳು ಬೆಳಕಿಗೆ ಬಂದಿರಲಿಕ್ಕೆ ಸಾಕ್ಷ!; ಈ ಪುಸ್ತಕ ಕಾರ್ಯ ಕೈಕೊಂಡ ಸಮಯದಲ್ಲಿಯೇ ಒಂದೆರಡು ತಿಂಗಳು ನನಗೆ ಮೈಯಲ್ಲಿ ಸರಿಯಾಗಿರದ್ದರಿಂದ ಅಲ್ಲಲ್ಲಿ ಕೆಲ ತಪ್ಪುತಡೆಗಳು ನಿಂತುಕೊಂಡಿವೆ. ಅವೆಲ್ಲವುಗಳನ್ನು ಸಾಧ್ಯವಿದ್ದಮಟ್ಟಿಗೆ ಒಪ್ಪೋಲೆಯಲ್ಲಿ ತಿದ್ದಿದ್ದೇನೆ. ಮುಖ್ಯವಾಗಿ ಈ ಪುಸ್ತಕವನ್ನು ನಾನು ತರುಣ ಕನ್ನಡಿಗರಿಗಾಗಿ ಬರೆದಿರುವದರಿಂದ ಅವರಿದನ್ನೋದಿ ರವೆಯಷ್ಟಾದರೂ ಹುರಿಗೊಂಡರೆ ನನ್ನ ಹವಣಿಕೆಯು ಕೈಗೂಡಿದಂತಾಯಿತೆಂದು ಬಗೆಯುವೆನು.

ಈ ಇತಿಹಾಸವನ್ನು ಬರೆಯುವ ಕೆಲಸದೊಳಗೆ ಅನೇಕ ಸಲಹೆಗಳನ್ನು ಕೊಟ್ಟ ಶ್ರಿ. ಆಲೂರ ವೆಂಕಟರಾವ್, ಶ್ರಿ. ರಾಜಪುರೋಹಿತ, ಶ್ರಿ. ದೇವಾಯಿ, ಕವಿಭೂಷಣ ಶ್ರಿ. ಬೆಟ್ಟಗೆರೆ ಕೃಷ್ಣರಾವ, ಶ್ರಿ. ಖಾನೋಳಕರ ಶ್ರೀಧರರಾವ ಮೊದಲಾದವರಿಗೆ ನಾನು ಕೃತಜ್ಞನಾಗಿರುವೆನು.

ಹೊಸ ಪಾದರಿಯ ಈ ಚರಿತ್ರೆಗೆ ಹೊಸ ಪಾದರಿಯ ಭಾವಚಿತ್ರಗಳನ್ನೇ ಹಾಕಬೇಕೆಂದು ಬಹು ದಿವಸದ ನನ್ನ ಹಂಬಲವಿತ್ತು; ಆದರೆ ಅವು ದೊರೆಯಬೇಕೆಂತು? ಚಿತ್ರಗಾರರಾದ ನನ್ನ ಕೆಲ ಮಿತ್ರರು ಹೊಸ ತೆರದ ಕೆಲವು ಭಾವಚಿತ್ರಗಳನ್ನು ನನಗೆ ತೋರಿಸಿದರು; ನಿಜವಾಗಿಯೂ ಇಂತಹ ಭಾವಚಿತ್ರಗಳೆಲ್ಲವೂ ಕನ್ನಡಿಗ ಚಿತ್ರಗಾರನ ಕೈಯಿಂದಲೇ ಕೊರೆದಂಥವಾಗಿರಬೇಕೆಂಬ ನನ್ನ ಹಂಬಲವು ಪೂರ್ತಿಯಾಗದಿದ್ದರೂ, ಅವುಗಳು ಭಾರತೀಯ ಚಿತ್ರಗಾರನ ಕೈಮಾಟದವು ಇರುವವೆಂಬ ವ್ಯಾಪಕ ಅಭಿಮಾನದಿಂದ ಇದರಲ್ಲಿ ಹಾಕಿಸಿರುವೆನು. ಅವಸರವಿಲ್ಲದ್ದರಿಂದ ಅಯಾ ಚಿತ್ರಗಾರರ ಅಪ್ಪಣೆಯನ್ನು ಪಡೆಯುವದು ಸಾಧ್ಯವಾಗದ್ದರಿಂದ ಹೊತ್ತಿಗೆ ನನಗೆ ಅನುವಾದ ಅಯಾ ಚಿತ್ರಗಳ ಚಿತ್ರಗಾರರಿಗೆ ನಾನು ತುಂಬಾ ಋಣಿಯಾಗಿರುವೆನೆಂಬುದನ್ನು ಅಡಿ ತೋರಿಸಲಿಕ್ಕೆ ಬೇಡ.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮಿತಿಯವರು ನನಗೀ ಪುಸ್ತಕವನ್ನು ಬರೆಯುವದಕ್ಕೆ ಪ್ರೋತ್ಸಾಹಿಸಿ, ಅಚ್ಚು ಹಾಕಿಸಿ, ಬೆಳಕಿಗೆ ತಂದು ದಕ್ಕಾಗಿ ಅವರಿಗೆ ನಾನು ಋಣಿಯಾಗಿದ್ದೇನೆ.

ಧಾರವಾಡ.
ಮಿ. ಚೈತ್ರ ಬ. ಹುಣ್ಣಿವೆ.

ಕನ್ನಡಿಗರ ಆಡಿಯಾಳು,
ನಾರಾಯಣಶರ್ಮಾ.

ಪ್ರಕಾಶಕರ ನಾಲ್ಕು ಮಾತುಗಳು.

ಇತಿಹಾಸ ವೆಂದರೆ ಹಿಂದಕ್ಕೆ ಹೀಗಾಯಿತೆಂದು ಹೇಳುವದು. ಆಗಿಹೋದ ಕಾಲದ ವೃತ್ತಾಂತ. "ಅದದ್ದಾಗಿ ಹೋಗಿ ಹೋಯಿತು. ಅದೇನೂ ತಿರಿಗಿ ಬರುವಂತಿಲ್ಲ. ಅದನ್ನು ನೆನಿಸುತ್ತ ಕುಳಿತರೇನು ಪಯೋಗ? ಅದರಂತೆ ಮುಂದಾಗಬಹುದಾದ್ದನ್ನು ಯೋಚಿಸುವದು ಕನ್ನಡಿಯೊಳಗಿನ ಗಂಟಿಗೆ ಕೈಯಿಕ್ಕಿದಂತೆ ವ್ಯರ್ಥವೇ ಸರಿ. ನಾವಿರುವದು ಈಗ. ಈಗಿನ ವಿಷಯಗಳನ್ನಷ್ಟು ನೋಡಿಕೊಂಡರೆ ನಾಕು. ಹಿಂದಾದ ಮತ್ತು ಮುಂದಾಗುವ ರಗಳೆಯನ್ನು ತಲೆಯಲ್ಲಿ ಹೇರಿಕೊಂಡರೆ ಆಗುವದೇನು?" ಎಂದು ಅಲೋಚಿಸಬಹುದು. ಹಾಗಲ್ಲ. ಹಿಂದು ಮುಂದಿನ ಚರಿತ್ರೆಗಳು ನಮ್ಮ ಈಗಿನ ಚರಿತ್ರೆಯ ಮೇಲೆ ವಿಲಕ್ಷಣ ಪರಿಣಾಮವನ್ನುಂಟು ಮಾಡುವವು. ನಾವು ಚಿಕ್ಕ ಬಾಲಕರಿದ್ದಾಗ ಅಜ್ಜಿಯು ನಮ್ಮನ್ನು ತನ್ನೆದುರಿಗೆ ಕುಳ್ಳಿರಿಸಿಕೊಂಡು ನಮ್ಮ ಮನೆತನದ ಹಿಂದಿನ ಹಿರಿಯರು ಮಾಡಿದ ಅದ್ಭುತ ಕಾರ್ಯಗಳನ್ನೂ ತೋರಿಸಿದ ಶೌರ್ಯವನ್ನೂ ಸಂಪಾದಿಸಿದ ಸದ್ಗುಣಗಳನ್ನೂ ವರ್ಣಿಸಿ ಹೇಳುವಾಗ ಯಾರ ಹೃದಯವು ಹುರುಪುಗೊಳ್ಳಲಿಕ್ಕಿಲ್ಲ? ಯಾರ ಮೈಮೇಲಿನ ಕೂದಲುಗಳು ರೋಮಾಂಚಿತವಾಗಲಿಕ್ಕಿಲ್ಲ! ಮೊನ್ನೆ ಮೊನ್ನೆ ಆಗಿಹೋದ ನರಗುಂದ ಬಂಡಾಯದ ವೃತ್ತಾಂತ, ಸಂಗೊಳ್ಳಿರಾಯನ ಚರಿತ್ರೆ, ಕಿತ್ತೂರ ಚನ್ನಮ್ಮನ ಆರ್ಯತೇಜಪ್ರಭಾವಗಳ ವರ್ಣನೆಯನ್ನು ಲಾವಣೀರೂಪದಿಂದ ಕೇಳಿ ಹಳ್ಳಿಪಳ್ಳಿಯ ಜನರು ಈಗಲೂ ಹುರುಪುಗೊಳ್ಳುವದನ್ನು ಕಣ್ಣಾರೆ ಕಾಣುವ ಮಾತಾಗಿದೆ. ಓದುಬರಹ ಬಾರದ ಜನರಿಗೆ ಲಾವಣಿಗಳೇ ಇತಿಹಾಸಗಳು. ಅರಸರಲ್ಲಿಯೂ ಸರದಾರ ಇನಾಮದಾರರಲ್ಲಿಯೂ ಇರುವ ಭಟ್ಟಂಗಿ ಹೆಳವರ ಉದ್ದೇಶವಾದರೂ ಇದೇ. ನಮ್ಮ ಹಿರಿಯರ ಕಾರ್ಯತೇಜಗಳ ನೆನಪು ಮಾಡಿಕೊಟ್ಟು ಅವರ ಮಕ್ಕಳಾದ ನಾವು ನಮ್ಮ ಚರಿತ್ರೆಯನ್ನೂ ಅಷ್ಟೇ ಉಜ್ವಲವಾಗಿ ಮಾಡಬಲ್ಲೆವೆಂದು ಹುರಿದುಂಬಿಸುವದೇ ಇವುಗಳ ಅಂತಿಮ ಸಾಧ್ಯವು.

ಜನಾಂಗದ ಇತಿಹಾಸವು ತನ್ನ ಕಾರ್ಯವನ್ನು ಚನ್ನಾಗಿ ನೆರವೇರಿಸ ಬೇಕಾದರೆ ಪೂರ್ವಿಕರ ಚರಿತ್ರೆಯನ್ನು ಹುರುಪುಗೊಳಿಸುವ ಭಾಷೆಯಲ್ಲಿ ವರ್ಣಿಸಿ ತರುಣ ಪೀಳಿಗೆಯ ಅಂತಃಕರಣದಲ್ಲಿ ಶೌರ್ಯ, ಧೈರ್ಯ, ಸಾಹಸ, ಕ್ಷಾತ್ರತೇಜಗಳನ್ನು ಒಡಮೂಡಿಸಬೇಕು; ಆ ಜನಾಂಗದ ಭಟ್ಟಂಗಿಯಾಗಬೇಕು; ಹೆಳವನಾಗಬೇಕು! ಶಿವಾಜಿಮಹಾರಾಜರು ಚಿಕ್ಕಂದಿನಲ್ಲಿಯೇ ರಾಮಾಯಣ ಮಹಾಭಾರತಾದಿ ಇತಿಹಾಸ ಪುರಾಣ ಗಳ ಶ್ರವಣವನ್ನು ದಿನಾಲು ಮಾಡಿದ್ದರಿಂದ ಅವರ ಹೃದಯದಲ್ಲಿ ಒಳ್ಳೇ ಸಂಸ್ಕಾರವಾಗಿ ಆ ಪೂರ್ವಜ ವೀರರಂತೆ ತಾವು ತಮ್ಮ ಚರಿತ್ರೆಯನ್ನು ಹೊಳಪುಳ್ಳದ್ದಾಗಿ ಮಾಡಬೇಕೆಂದು ನಿಶ್ಚಯಿಸಿದರಂತೆ. ರಜಪೂತರ ಜೀವನವು ಕ್ಷಾತ್ರತೇಜದಿಂದ ಉಕ್ಕಿ ಇದುವರೆಗೂ ನಮ್ಮ ಕಣ್ಣನ್ನು ಕೂಡ ಕುಕ್ಕಿಸುವ ಮುಖ್ಯ ಕಾರಣವೆಂದರೆ ಪೂರ್ವಜರ ಚರಿತ್ರೆಶ್ರವ ಣವು ಅದರಿಂದ ಅವರ ಅಂತಃಕರಣದಲ್ಲಿ ನೆಲೆಗೊಂಡ ಸ್ವಾಭಿಮಾನ, ಸ್ವಕುಲಾಭಿಮಾನ, ಸ್ವದೇಶಾಭಿಮಾನ, ಅಪ್ರತಿಮ ಸ್ವಾರ್ಥತ್ಯಾಗ ಇವೇ.

ಈ ಹುರುದುಂಬಿಸುವ ಕಾರ್ಯವಲ್ಲದೆ ಮತ್ತೊಂದು ಮಹತ್ವದ ಕಾರ್ಯವನ್ನು ಇತಿಹಾಸವು ಮಾಡತಕ್ಕದ್ದು. ನಮ್ಮ ಹಿರಿಯರಾದರೂ ದೇವರಿದ್ದಿಲ್ಲ. ಅವರಲ್ಲಿ ಕೆಲವು ದೋಷಗಳಿದ್ದವು. ಆ ದೋಷಗಳಿಂ ದಲೇ ಅವರು ಕೆಲವು ಅನರ್ಥಗಳನ್ನು ಅನುಭವಿಸಬೇಕಾಯಿತು. ಅವರು ಮಾಡಿದ ತಪ್ಪುತಡೆಗಳ ವರ್ಣನೆಯನ್ನು ಕೇಳಿ ಅವುಗಳ ವಿಷ ಯದಲ್ಲಿ ತಿರಸ್ಕಾರಬುದ್ಧಿಯುಂಟಾಗಿ ಆ ತರಹದ ದೋಷಗಳು ನಮ್ಮಿಂದ ಸಂಭವಿಸದಂತೆಯೂ ಆ ಅನರ್ಥ ಪರಂಪರೆಗೆ ನಾವು ಗುರಿ ಯಾಗದಿರಂತೆಯೂ ನಾವು ಎಚ್ಚರಗೊಳ್ಳತಕ್ಕದ್ದು. ಪೂರ್ವಜರ ಅನು ಭವದ ಲಾಭವು ನಮಗೊದಗುವದು. ಅವರಿಗೆ ಕಂಡುಬಂದ ಕುಮಾರ್ಗ ಗಳನ್ನು ಬಿಟ್ಟು ಸನ್ಮಾರ್ಗವನ್ನು ಇತಿಹಾಸವು ತೋರಿಸಿಕೊಡುತ್ತದೆ. ನಮ್ಮ ಪೂರ್ವಜರ ಅವನತಿಗೆ ಅವರ ದುಂದುಗಾರಿಕೆಯೂ ಸ್ತ್ರೀಲೋ ಲುಪತೆಯೂ ವಿಲಾಸಭೋಗವೂ ಪ್ರಜೆಗಳ ಹಿತಾಹಿತದ ವಿಷಯದಲ್ಲಿ ಅನಾದರವೂ ಕರ್ತವ್ಯಪರಾಙ್ಮುಖತೆಯೂ ಹೇಗೆ ಕಾರಣೀಭೂತವಾದ

ವೆಂಬದನ್ನೂ ಜನಾಂಗದಲ್ಲಿ ನೆಲೆಗೊಂಡ ಯಾವ ದುರ್ಗುಣಗಳ ದೆಶೆಯಿಂದ ಪರದೇಶೀಯರು ಇಲ್ಲಿಗೆ ಬಂದು ನಮ್ಮನ್ನು ಮೂಲಿಗೆ ತಳ್ಳಿ ಗುಲಾಮರನ್ನಾಗಿ ಮಾಡಿ ಆಳುತ್ತಿರಲಿಕ್ಕೆ ಅನುವುಂಟಾಯಿತೆಂಬದನ್ನೂ ಇತಿಹಾಸವು ತಿಳಿಹೇಳಿ ಎಚ್ಚರಿಸುವದು.

ಹೀಗೆ ಇತಿಹಾಸವು ಸಾರ್ಥಕಗೊಳ್ಳಬೇಕಾದರೆ ಅದು ನಿಜವಾಗಿ ಜನತೆಯ ಚರಿತ್ರೆಯಾಗಿರಬೇಕು. ಜನತಾರೂಪೀ ಪ್ರವಾಹವು ಧರ್ಮ, ನೀತಿ, ರಾಜಕಾರ್ಯ, ವಾಙ್ಮಯ, ಕಲಾಕೌಶಲ್ಯ, ವ್ಯಾಪಾರೋದ್ಯೋಗ, ಕೈಗಾರಿಕೆ, ಒಕ್ಕಲತನ, ಕಟ್ಟಿಡಪದ್ಧತಿ, ವಿವಾಹ ಮೊದಲಾದ ಸಂಸ್ಕಾರಪದ್ಧತಿಗಳು, ನಡೆನುಡಿಗಳು, ಭೌತಿಕಶಾಸ್ತ್ರ, ತತ್ವಜ್ಞಾನ ಹೀಗೆ ಅನೇಕ ಮುಖವಾಗಿ ಹರಿಯುತ್ತದೆ. ಆಯಾ ಜನಾಂಗದ ಪ್ರಾಕೃತಿಕಸ್ಥಿತಿ, ಹವೆ, ಭೂಮಿ, ನೀರು ಮೊದಲಾದವುಗಳಿಂದ ಪರಿಣಾಮಿಸಲ್ಪಟ್ಟ ಸ್ವಧರ್ಮಕ್ಕನುಸರಿಸಿ ಆ ಜನಾಂಗವು ಹೀಗೆ ಅನೇಕ ಮುಖವಾಗಿ ಹರಿಯುತ್ತದೆ. ಇವುಗಳ ಸಮುದಾಯಕ್ಕೆ ಆ ಜನಾಂಗದ ಸಂಸ್ಕೃತಿಯೊಂದೆನ್ನಬಹುದು. ಅವರವರ ಸ್ವಧರ್ಮವೂ ಸಂಸ್ಕೃತಿಯೂ ಪರಂಪರಾಗತವಾಗಿ ಹಿರಿಯರ ಅನೇಕ ವರ್ಷಗಳ ಅನುಭವದಿಂದ ಬಲಗೊಂಡು ಬಂದದರಿಂದ ಅವರವರಿಗೆ ಕಲ್ಯಾಣಪ್ರದವು. ಅವೆಲ್ಲವುಗಳ ಜ್ಞಾನವನ್ನು ಇತಿಹಾಸವು ಮಾಡಿಕೊಡುವದು ಅವಶ್ಯ. ಆದ್ದರಿಂದಲೇ ಅದು ಸಂಸ್ಕೃತಿಪ್ರಧಾನವಾಗಿರಬೇಕು.

ಇವೆಲ್ಲ ದೃಷ್ಟಿಯಿಂದ ನೋಡಲಾಗಿ ನಮ್ಮ ಪ್ರಾಚೀನ ಹಿಂದುಸ್ಥಾನದ ಇತಿಹಾಸದಷ್ಟು ಮಹತ್ವವಾದ ಭಾಗವು ಮತ್ತೊಂದಿಲ್ಲ. ನಮ್ಮ ಜನಾಂಗದ ಚರಿತ್ರೆಯಲ್ಲಿ ಅದು ಬಹಳ ಉಜ್ವಲವಾದ ಕಾಲವು. ಪ್ರಾಚೀನ ಆರ್ಯರಿಗಿದ್ದ ಬಿಕ್ಕಟ್ಟಿನ ಪರಿಸ್ಥಿತಿ, ನೋಡಿದಲ್ಲೆಲ್ಲ ದೊಡ್ಡ ದೊಡ್ಡ ಹಳವುಗಳೂ, ಅರಣ್ಯಗಳೂ, ಕಾಡುಹಿಂಸ್ರಪಶುಗಳೂ, ನಾಗಾಗದೆ ಇದ್ದ ಭೂಮಿ ವಿಸ್ತಾರವೂ, ಅತಿಶಯ ಮಳೆಯೂ, ಅಲ್ಲಲ್ಲಿಗೆ ಶೀತವುಳ್ಳ ಜವಳು ಪ್ರದೇಶಗಳೂ, ಈಗಿನಂತೆ ತೀವ್ರವಾಹನಗಳ ಅಭಾವ, ದುಷ್ಟಸ್ವಭಾವದ ರಾಕ್ಷಸರ ನೆರೆಹೊರೆಯು ಇವೆಲ್ಲ ಅನಾನುಕೂಲತೆಗಳನ್ನು ಸರಿಪಡಿಸಿಕೊಂಡು ಮಾಡಿದ ಸಾಹಸಕೃತ್ಯಗಳೂ ತೋರ್ಪಡಿ

ಸಿದ ಶೌರ್ಯ ಕ್ಷಾತ್ರತೇಜಗಳೂ ವರ್ಣನೀಯವಾಗಿವೆ. ಅವರ ಮೈ ಬಣ್ಣ, ಮೈಕಟ್ಟು, ಸ್ನಾಯುಬಲ, ಪ್ರತಿಭಾಶಾಲಿಯಾದ ಬುದ್ಧಿ, ಪರಿಸ್ಥಿತಿಗನುಸರಿಸಿ ಸಮಾಜದಲ್ಲಿ ಮಾಡಿಕೊಂಡು ತಿದ್ದುವಾಟುಗಳು, ತಮ್ಮ ಸಂಸ್ಕೃತಿ ಸುಧಾರಣೆಯ ಪತಾಕೆಯನ್ನು ಎಲ್ಲ ಕಡೆಗೂ ಊರಿ ಕಾಡು ಜನರನ್ನೂ ಉದ್ಧರಿಸಿ ತಮ್ಮಲ್ಲಿ ಒಂದುಮಾಡಿಕೊಳ್ಳೋಣ, ಶಾಂತರೀತಿಯಿಂದ ಧರ್ಮಪ್ರಸಾರ ಇವೇ ಮೊದಲಾದ ವಿಷಯಗಳು ದಂಗುಬಡಿಸುವಂಥವೂ ಬೋಧಪ್ರದವೂ ಆಗಿರುತ್ತವೆ. ಈ ಕಾಲದಲ್ಲಿಯೇ ನಮ್ಮ ದೇಶವು ಸುಧಾರಣೆಯ ಉಚ್ಚಶಿಖರವನ್ನು ಏರಿತ್ತು. ಜಗತ್ತಿನೊಳಗಿನ ಉಳಿದ ಅನೇಕ ದೇಶಗಳು ಅಜ್ಞಾನಾಂಧಕಾರದಲ್ಲಿ ಮುಳುಗಿ ತೀರ ಕಾಡುಸ್ಥಿತಿಯಲ್ಲಿರುತ್ತಿದ್ದವು. ಈ ನಮ್ಮ ಪ್ರಾಚೀನ ಆರ್ಯರ ವೈಭವ ಕಾಲದ ಚರಿತ್ರೆಯನ್ನು ನಾವು ಪುನಃ ಪುನಃ ಓದಿ ಮನನಮಾಡಿ ಅವರ ತೇಜಸ್ಸು ನಮ್ಮಲ್ಲಿಯೂ ಇಳಿದು ಒಡಮೂಡುವಂತೆ ಯತ್ನಿಸಬೇಕು.

ಆದರೆ ಈಗಿನ ಶಿಕ್ಷಣಪದ್ಧತಿಯೇ ವಿಲಕ್ಷಣವಾಗಿದೆ. ಈಗ ಶಾಲೆ ಕಾಲೇಜುಗಳಲ್ಲಿ ಕಲಿಸುವ ಇತಿಹಾಸವು ಹುರುಪುಗೊಳಿಸುವದೂ ಇಲ್ಲ; ಪೂರ್ವಜರ ಅನುಭವದ ಲಾಭವನ್ನು ಮಾಡಿಕೊಡುವದೂ ಇಲ್ಲ; ಜನತೆಯ ನಿಜವಾದ ಸಂಸ್ಕೃತಿಪ್ರಧಾನವಾದ ಚರಿತ್ರೆಯೂ ಅಲ್ಲ. ಅದು ಕೇವಲ ರಾಜರ ವಂಶಾವಳಿಯೂ ಇಸವಿಗಳ ಪಟ್ಟಿಯೂ ಆಗಿರುತ್ತದೆ. ಯುದ್ಧಗಳ ಹೆಸರುಗಳು, ಸ್ಥಳ, ನಮ್ಮ ಸೈನ್ಯದ ಬಹುಸಂಖ್ಯೆ, ಶತ್ರುಪಕ್ಷದ ಅಲ್ಪಸಂಖ್ಯೆ, ಆದರೂ ಜಯವು ಶತ್ರುಗಳಿಗೇ, ನಮಗೆ ಕಟ್ಟಿಟ್ಟದ್ದು ಸೋಲು, ರಾಜರಿಗಿದ್ದ ಸ್ತ್ರೀಯರ ಸಂಖ್ಯೆ, ಅವರ ಹಲ್ಲಿನ ನ್ಯಾರ ಕಕ್ಕಾಗಿ ಕಟ್ಟಿದ ಗೋರೆಗಳು ಇವೇ ಮೊದಲಾದ ಅನುಪಯುಕ್ತ ವಿಷಯಗಳ ಕತ್ತೆಯ ಭಾರದಿಂದ ತುಂಬಿದ ಚರಿತ್ರೆಗಳನ್ನು ಶ್ರವಣಮಾಡಿದ ಈಗಿನ ಯುವಕರಲ್ಲಿ ರಾಮಾಯಣ ಮಹಾಭಾರತಾದಿ ಉದ್ಗ್ರಂಥಗಳನ್ನು ಶ್ರವಣಮಾಡಿದ ಶಿವಾಜಿಮಹಾರಾಜರ ಓಜಸ್ವಿತೆಯು ಎತ್ತ ತಲೆದೋರಬೇಕು? ಬಾಲಕರ ಅಂತಃಕರಣದಲ್ಲಿ ರಜಪೂತರ ಸ್ವದೇಶಾಭಿಮಾನವೂ ಕ್ಷಾತ್ರತೇಜವೂ ಹೇಗೆ ಒಡಮೂಡಬೇಕು? ನಮ್ಮ ಅವನತಿಯ ಕಾಲದ ಚರಿತ್ರೆಯನ್ನೇ ಮೊದಲಿನಿಂದ ಕಡೆತನಕ ಓದು

ವದು. ನಾವು ದುರ್ಬಲರಿದ್ದೆವು, ವಿಷಯಾಸಕ್ತರಾಗಿದ್ದೆವು, ನಮ್ಮ ನಮ್ಮೊಳಗೆ ಬಡಿದಾಡುತ್ತಿದ್ದೆವು, ಪರದೇಶಿಯರು ಬಂದು ನಮ್ಮನ್ನು ಒಯ್ದರು, ನಾವು ಸೋತೆವು, ಗುಲಾಮರಾದೆವು, ನಾವಿನ್ನೂ ಬಾಲ್ಯಾವಸ್ಥೆಯಲ್ಲಿಯೇ ಇರುವೆವು, ನಮ್ಮ ಸಮಾಜರಚನೆಯು ದೋಷಮಯವಾದದ್ದು, ನಮ್ಮ ಉದ್ಧಾರವಾಗಬೇಕಾದರೆ ಪರದೇಶಿಯರ ವಾದಕ್ಕೆ ಶರಣುಹೋಗಬೇಕು, ಅವರ ಗುರುತ್ವವನ್ನು ಆಮರಣಪರ್ಯಂತವಾಗಿ ಸ್ವೀಕರಿಸಬೇಕು; ಇವೇ ಮೊದಲಾದ ವಿಚಾರಗಳು ಚಿಕ್ಕಂದಿನಿಂದಲೂ ನಮ್ಮ ತಲೆಯಲ್ಲಿ ತಾಂಡವವನ್ನು ಆಡಿ ಕವಿಯಲ್ಲಿ ತಾಳ ಹೊಪೆದು ಕಣ್ಣುಗಳ ಮುಂದೆ ಕಟ್ಟಿದಂತಾಗಿ ಭ್ರಮರಕೀಟಕ ನ್ಯಾಯದಂತೆ ನಮ್ಮನ್ನು ಭ್ರಮೆಗೊಳಿಸುತ್ತವೆ. ನಾವು ಕ್ರಿಮಿಕೀಟಕಗಳೆಂಬ ಭಾವನೆಯೇ ನಮಲ್ಲಿ ತಳವೂರಿದೆ. ಇನ್ನುಮೇಲೆ ಇದಾಗದು! ನಾವು ಉನ್ನತಿಯನ್ನು ಹೊಂದಬೇಕಾದರೆ ನಮ್ಮ ಪೂರ್ವಚರಿತ್ರೆಯನ್ನು ಹೊಸರೀತಿಯಲ್ಲಿ ಬರೆಯಲೇಬೇಕು. ಪ್ರಾಚೀನ ಆರ್ಯರ ಉಜ್ವಲ ಚರಿತ್ರೆಯನ್ನು ಪಠಿಸಲೇ ಬೇಕು.

ಇನ್ನೊಂದು ಮಹತ್ವದ ವಿಷಯ. ಚರಿತ್ರೆಯು ಶತ್ರುಗಳ ವಿಷಯದಲ್ಲಿ ದ್ವೇಷವನ್ನು ಹುಟ್ಟಿಸಬಾರದು. ಕರ್ತವ್ಯವನ್ನು ದ್ವೇಷವಿರಹಿತವಾಗಿ ನೆರವೇರಿಸಬೇಕು. ಗುಣಗಳು ತಮ್ಮಲ್ಲಿ ತಾವು ಕೆಲಸ ಮಾಡುತ್ತವೆ; ಎಲ್ಲ ಕಪೆಯಲ್ಲಿಯೂ ಪ್ರಕೃತಿಯ ಗುಣಗಳಿಂದ ಕರ್ಮಗಳು ಮಾಡಲ್ಪಡುತ್ತಿರುತ್ತವೆ; ಅಹಂಕಾರವಿಮೂಢಾತ್ಮನಾದ ಮನುಷ್ಯನು ಮಾತ್ರ ತಾನು ಕರ್ತನೆಂದು ತಿಳಿದುಕೊಳ್ಳುತ್ತಾನೆಂಬ ವಿಚಾರಸರಣಿಯು ಚರಿತ್ರೆಯಲ್ಲಿ ಅಲ್ಲಲ್ಲಿ ಎದ್ದು ತೋರುತ್ತಿರಬೇಕು. ಸಂಸಾರವೆಂಬುದೊಂದು ನಾಟಕವು. ಜಗತ್ತೇ ರಂಗಭೂಮಿಯು, ನಾವೆಲ್ಲರೂ ನೋಗುಗಳು, ಪರಮಾತ್ಮನು ಕರ್ತೆಗಾರನು, ಸೂತ್ರಧಾರನು. ಅವನ ಪ್ರೇರಣೆಯಂತೆಯೇ ನಾವೂ ನಮ್ಮ ಶತ್ರುಗಳೂ ಕುಣಿಯುತ್ತೇವೆ. ಯಾರ ಮೇಲೆಯೂ ನಾವು ಕೋಪಿಸಬಾರದು. ಯಾರನ್ನೂ ದ್ವೇಷಿಸಬಾರದು. ಶತ್ರುವು ಕೂಡ ಪ್ರಚ್ಛನ್ನಮಿತ್ರನು. ಶತ್ರುವಿನಂತೆ ನಟಿಸಿದ ಕೈಕೆಯಿಯ ವಿಷಯದಲ್ಲಿ ಶ್ರೀರಾಮಚಂದ್ರನು ತೋರ್ಪಡಿಸಿದ

ಪ್ರೇಮಾದರಗಳೂ ಕಡೆತನಕ ಹಗೆತನವನ್ನು ಬಿಳಿಸಿ ವಿರೋಧಭಕ್ತಿಯನ್ನು ತೋರ್ಪಡಿಸಿದ ರಾವಣನಿಗೆ ಮುಕ್ತಿಯನ್ನು ಕೊಟ್ಟದ್ದೂ ಆದರ್ಶಭೂತವಾಗಿವೆ. ನಮ್ಮ ಪ್ರಾಚೀನ ಇತಿಹಾಸ ಪುರಾಣಗಳಲ್ಲಿ ಈ ವಿಚಾರಸರಣಿಯು ತುಂಬಿ ತುಳುಕುತ್ತದೆ. ಈಗಿನ ಚರಿತ್ರೆಯಲ್ಲಿಯೂ ಅದೇ ಪ್ರೇಮಮಯವಾದ ವಾತಾವರಣವಿದ್ದರೆ ಬಳ್ಳೇ ಸಂಸ್ಕಾರವಾಗುವದು.

ಈ ಎಲ್ಲ ವಿಚಾರಗಳನ್ನೊಳಗೊಂಡು ಈ ಇತಿಹಾಸವನ್ನು ಬರೆಯಲಾಗಿದೆ. ಈ ಆರ್ಯವೀರರ ಚರಿತ್ರೆಯನ್ನು ಆಬಾಲವೃದ್ಧರೂ ವಿದ್ಯಾರ್ಥಿಗಳೂ ಓದಿ ಬೋಧ ಪಡೆಯುವಂತೆಯೂ, ವರ್ಣನಾತ್ಮಕ ರೀತಿಯಲ್ಲಿ ಮನೋರಂಜನೆಯಾಗುವಂತೆಯೂ, ತಲೆಭಾರವಾಗದಂತೆಯೂ, ಅವರ ಗುಣಕೀರ್ತನೆಗಳನ್ನು ಹೆಚ್ಚು ಹೆಚ್ಚು ಕೇಳಲು ಕುತೂಹಲವನ್ನುಂಟುಮಾಡುವಂತೆಯೂ ಬರೆಯಲು ಯತ್ನಿಸಲಾಗಿದೆ. ಅದು ಎಷ್ಟರಮಟ್ಟಿಗೆ ಸಫಲವಾಗಿದೆಂಬದನ್ನು ವಾಚಕರೇ ನಿರ್ಣಯಿಸಬಹುದು. ಇಂಥದೊಂದು ಇತಿಹಾಸವನ್ನು ಬರೆಯಬೇಕೆಂದು ನಾವು ಮಾಡಿದ ವಿನಂತಿಯನ್ನು ಮನ್ನಿಸಿ, ಅನೇಕ ಗ್ರಂಥಗಳನ್ನು ಓದಿ ಮಥನ ಮಾಡಿ ಶ್ರಮಪಟ್ಟು ನಮ್ಮನ್ನು ಋಣಿಯಾಗಿ ಮಾಡಿದ ಶ್ರೀ. ನಾರಾಯಣ ಶರ್ಮಾ ಅವರ ಉಪಕಾರವನ್ನು ನಾವು ಪುನಃಪುನಃ ಸ್ಮರಿಸುವೆವು. ವೇಳೆಗೆ ಸರಿಯಾಗಿ ಅಂದವಾಗಿ ಅಚ್ಚುಹಾಕಿದ ಶ್ರೀ. ಮುತಾಲಿಕ ದೇಸಾಯಿ ಹಣಮಂತರಾಯರಿಗೂ ನಾವು ಬಹಳ ಋಣಿಯಾಗಿದ್ದೇವೆ. ಯೋಗ್ಯ ಪ್ರೋತ್ಸಾಹನವನ್ನು ಕೊಡುವದು ಕನ್ನಡಿಗರ ಕೆಲಸ.

ಧಾರವಾಡ ರಾಷ್ಟ್ರೀಯ ಶಿಕ್ಷಣ ಸಮಿತಿ
ಧಾರವಾಡ.
ಕ್ಷಯಸಂವತ್ಸರ ಚೈತ್ರ ಬ. ೫.

ಸುರೇಂದ್ರ ಶಿವರಾವ ದೇಸಾಯಿ,
ಕಾರ್ಯದರ್ಶಿ.

ಭಾರತೀಯರ ಇತಿಹಾಸವು.

೧ನೇ ಪ್ರಕರಣ.

ಪ್ರಾಕೃತಿಕ ಸ್ವರೂಪವು.

ಯಾವುದೊಂದು ಜನಾಂಗದ ಪ್ರಾಕೃತಿಕ ಸ್ವರೂಪವೆಂದರೆ ಅದರ ಬಾಹ್ಯ ಸ್ವರೂಪವು. ಜನಾಂಗದೊಳಗಿನ ಹವೆ, ನೀರು, ಗುಡ್ಡ ಗಾಡು, ಭೂಗುಣ ಅವೇ ಮುಂತಾದ ಬಾಹ್ಯ ಸ್ವರೂಪಗಳು, ಆ ಜನಾಂಗದಲ್ಲಿ ಹುಟ್ಟುವ ಮನುಷ್ಯ ಪ್ರಾಣಿ ಮೊದಲಾದವುಗಳ ಸ್ವಭಾವ ಗುಣಧರ್ಮಗಳನ್ನು ಮಾರ್ಪಡಿಸಲಿಕ್ಕೆ ಕಾರಣವಾಗುತ್ತವೆ. ಒಂದು ಬಗೆಯಿಂದ ಮನುಷ್ಯನಾಗಲಿ, ಪ್ರಾಣಿಯಾಗಲಿ, ಯಾವ ಭೂಮಿಯಲ್ಲಿ ಹುಟ್ಟಿ ಬೆಳೆಯುವವೋ, ಆ ಭೂಮಿತಾಯಿಯ ಅನ್ನ, ನೀರು, ಹವೆ, ಇವುಗಳನ್ನುಂಡು ಬೆಳೆದ ಭೂಮಿತಾಯಿಯ ಮಕ್ಕಳೇ; ಆದ್ದರಿಂದ ಆ ಭೂಮಿಯಲ್ಲಿ ಅನ್ನ, ನೀರು, ಹವೆ, ಗುಡ್ಡಗಾಡು ಮೊದಲಾದವುಗಳಲ್ಲಿರುವ ಗುಣಗಳೆಲ್ಲವೂ ಆ ಮನುಷ್ಯ-ಪ್ರಾಣಿಗಳಲ್ಲಿ ಸೇರಿ, ಒಳಗಿಂದೊಳಗೆ ಯಾರಿಗೂ ತಿಳಿಯಗೊಡದಂತೆ, ಶಾರೀರಿಕ ಹಾಗೂ ಮಾನಸಿಕ ಅಂತಃಶಕ್ತಿಗಳನ್ನು ಕಣ್ಣಿಗೆ ಕಾಣಿಸುವಂತೆ ರೂಪುಗೊಳಿಸಿ ಬೆಳೆಸುತ್ತಿರುತ್ತವೆ. ಇದನ್ನು ಮನಗಾಣಿಸಿಕೊಳ್ಳಬೇಕೆಂದರೆ, ನಾವು ಬೇರೆ ಬೇರೆ ನಾಡುಗಳಲ್ಲಿರುವ ಹವೆ, ನೀರು, ಭೂಗುಣಗಳನ್ನು ತಿಳಿದು, ಆ ನಾಡಿನಲ್ಲಿ ಹುಟ್ಟಿ ಬೆಳೆದ ಮನುಷ್ಯಪ್ರಾಣಿಗಳ ಆರೋಗ್ಯ, ಮನೋಧರ್ಮಗಳನ್ನು ಅಳೆದು ನೋಡತಕ್ಕದ್ದು. ಹೀಗೆ ನೋಡಿದರೆ, ತೊರಗಿನ ನಿಸರ್ಗಸೃಷ್ಟಿಯು ತನ್ನ ಮಕ್ಕಳಾದ ಮನುಷ್ಯಪ್ರಾಣಿಗಳ ಹೊರಒಳಗಿನ ಶಕ್ತಿಗಳನ್ನು ಹೇಗೆ ಅಳುತ್ತಿರುತ್ತದೆಂಬುದು ಮನದಟ್ಟಾಗಿ, ಹೊರಗಣ ಸೃಷ್ಟಿಯು ಒಳಗಿನ ಸೃಷ್ಟಿಯಲ್ಲಿ ಮೂಡಿ ತನ್ನ ಕಾರ್ಯವನ್ನೆಷ್ಟು

ಸೂಕ್ಷ್ಮವಾಗಿ ಪ್ರಕಟಗೊಳಿಸುತ್ತಿರುವದೆಂಬುದು ಅನುಭವಕ್ಕೆ ಬರುತ್ತಿದೆ. ಒಂದು ಜನಾಂಗದ ವ್ಯಾಕೃತಿಕಸ್ವರೂಪವೆಂದರೆ, ಅದರ ಒಳಗಿನ ಸ್ಥಿತಿಯ ಹೊರಚಿತ್ರವು.

ಉತ್ತರಭಾರತ:- ಇನ್ನು, ಈ ದೃಷ್ಟಿಯಿಂದ ಆರ್ಯಾವರ್ತದ ಹೊರಗಣ ಸ್ವರೂಪವನ್ನಷ್ಟು ನೋಡುವ. ಪರ್ವತರಾಜನಾದ ಹಿಮಾಲಯನು ಉತ್ತರದ ಮಹಾದ್ವಾರದಲ್ಲಿ ಹಬ್ಬಿಕೊಂಡಿರುವನು. ಅತನ ಸ್ವರ್ಗೀಯವಾದ ವೈಭವವನ್ನೆಷ್ಟೆಂತು ಬಣ್ಣಿಸುವದು? ಚಿತ್ತಾಕರ್ಷಕವಾದ ಸೃಷ್ಟಿಸೌಂದರ್ಯದಿಂದಲೂ, ಗಾಢವೂ ಅದ್ಭುತವೂ ಆದ ರಮ್ಯತೆಯಿಂದಲೂ, ಕಣ್ಣಿಗೆ ಹಬ್ಬವನ್ನು ಮಾಡುವ ದಿವ್ಯನೋಟಗಳಿಂದಲೂ, ಒಂದರ ಮೇಲೊಂದು ನಾಲುನಾಲಾಗಿ ಏರಿಸಿದಂತಿರುವ ಹಿಮಾಚ್ಛಾದಿತ ಪರ್ವತಾವಳಿಗಳಿಂದಲೂ, ಅತನು ಇಡೀ ಪ್ರಪಂಚದಲ್ಲಿಯೇ ಮೀರಿ ನಿಂತಿರುವನು. ಇನ್ನೊಂದು ಬಗೆಯಿಂದ ನೋಡಿದರೆ, ಈ ನಗಾಧಿರಾಜನು ತನ್ನ ಅಪಾರವಾದ ಸಣ್ಣಪುಟ್ಟ ಹಿಮಮಯವಾದ ಪರ್ವತಾವಳಿಗಳ ಸೇನಾಸಮೂಹವನ್ನು ಕಟ್ಟಿಕೊಂಡು "ದಿವ್ಯದೇಶ"ವಾದ ಆರ್ಯಾವರ್ತವನ್ನು ಭದ್ರವೂ, ಅಭೇದ್ಯವೂ ಆದ ಕೋಟೆಯೋ ವಾದಿಯಲ್ಲಿ ಪರರಾಯರ ದಾಳಿಗಳಿಂದ ಹಗಲು ರಾತ್ರೆ ಕಾಯುತ್ತ ಕುಳಿತಿರುವನೇನೋ ಎನ್ನುವಂತಿರುವನು. ಈತನು ತನ್ನಲ್ಲಿ ಬರಿಯ ಹಿಮಮಯವಾದ ಪರ್ವತಗಳನ್ನಷ್ಟೇ ಇಟ್ಟುಕೊಂಡಿರದೆ, ಅಮೃತಮಯವಾದ ಔಷಧ ವನಸ್ಪತಿಗಳನ್ನಿಟ್ಟುಕೊಂಡು ತನ್ನನ್ನಾಶ್ರಯಿಸುವವರನ್ನು ಅಮರರನ್ನಾಗಿಸುವನು. "ನ್ಥಾವರಾಣಾಂ ಹಿಮಾಲಯಃ" ಎಂದು ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನು ಹೇಳಿ ಈ ಹಿಮಾಲಯನ ಯೋಗ್ಯತೆಯನ್ನು ಚನ್ನಾಗಿಯೇ ಬೆಳಗಿಸಿರುವನು. ನಿಜವಾದ ಸೃಷ್ಟಿಸೌಂದರ್ಯದ ನಿತ್ಯ ನೂತನವಾದ ನೋಟಗಳಿಂದ ಪಾಮರರ ಕಣ್ಣುಗಳನ್ನು ಉಣಿಸಿ, ತಣಿಸಿ ಅವುಗಳನ್ನು ಒಂದೇ ಸಲಕ್ಕೆ ವಿಷಯಾನಂದದಿಂದ ಹಿಮ್ಮುಖಗೊಳಿಸಿ, ಸ್ವರ್ಗೀಯಾನಂದದ ರನಾನ್ವಾದದಲ್ಲಿ ಕ್ಷಣಹೊತ್ತು ಮೈಮರೆಯುವಂತೆ ಮಾಟ ಮಾಡುವ ಪ್ರತ್ಯಕ್ಷ ಯೋಗಿರಾಜನಂತಿರುವ ಮೂಲಕ ಅನೇಕ ಯೋಗಿಜನಗಳಿಗೆ ಈತನು ತವ

ರ್ಮನೆಯಾಗಿರುವನು. ಈತನು ತನ್ನ ವಿಭೂತಿಯ ಪ್ರಭಾವದಿಂದ ತನ್ನ ತಲೆಯ ಮೇಲೆ ಹರಿಹರಬ್ರಹ್ಮಾದಿಗಳನ್ನು ಹೊತ್ತುಕೊಂಡು ನಿಂತಿರುವನೆಂಬ ನೆಚ್ಚಿನ ನಂಬುಗೆಯಿರುವದರಿಂದಲೇ ಅನಾದಿಕಾಲದಿಂದ ಈಗಿನ ವರೆಗೆ ಅಸಂಖ್ಯ ಮುಮುಕ್ಷುಜನಗಳಿಗೆ ವಿಶ್ರಾಂತಿಸ್ಥಾನವಾಗಿ ಪರಿಣಮಿಸಿರುವನು. ಪವಿತ್ರವಾದ ಈತನ ದೇಹದೊಳಗಿಂದ ಹೊರಟಿಂಥ ಗಂಗಾ, ಯಮುನಾ, ಸಿಂಧು, ಬ್ರಹ್ಮಪುತ್ರ ಮೊದಲಾದ ನದಿನದಗಳು ಭೂಲೋಕದೊಳಗಿನ ಪಾಪವನ್ನೂ, ಹೊಲಸನ್ನೂ ತೊಳೆದು ತಮ್ಮ ದಿವ್ಯಪ್ರಭಾವದಿಂದ ಪಂಜಾಬ, ಅಯೋಧ್ಯಾ, ಬಂಗಾಲ ದೇಶಗಳಿಗೆ ಹುಲುನಾದ ಬೆಳೆಯನ್ನೂ, ತಿಳಿಯಾದ ನೀರನ್ನೂ ಕೊಟ್ಟು, ಸುಖವನ್ನೂ, ಆನಂದವನ್ನೂ, ಪಾವಿತ್ರ್ಯವನ್ನೂ ಉಂಟುಮಾಡುತ್ತಿರುವವು. ಈ ಮೇರೆ, ಉತ್ತರಭಾರತವು ಗಂಗಾ ಯಮುನಾ ನದಿಗಳ ಪವಿತ್ರವಾದ ಪ್ರವಾಹಗಳಿಂದ ಕೂಡಿದ್ದೊಂದು ವಿಹಾರಭೂಮಿಯೇ ಆಗಿದೆ. ಹಿಮಪರ್ವತರಾಜನ ಅನ್ಯಾದೃಶವಾದ ಸೌಂದರ್ಯದೊಳಗೆ ಹುಟ್ಟಿ, ನಿಸರ್ಗಸುಖದೊಳಗೆ ಓಲಾಡುತ್ತಿರುವ ಕಾಶ್ಮೀರದೇಶದ ಸೌಭಾಗ್ಯವನ್ನೆಂತು ಬಣ್ಣಿಸೋಣ! ಇಂದಿಗೆ ಕಾಶ್ಮೀರದೇಶವು ಭಾರತೀಯರಿಗೆ ಉತ್ತರದ ನಂದನವನವಾಗಿದೆ. ಹೃಷೀಕೇಶ, ಬದರಿ, ಕೇದಾರ, ಹರಿದ್ವಾರ, ಮಥುರಾ, ಕಾಶೀ, ಪ್ರಯಾಗ, ಅಯೋಧ್ಯಾ, ಗಯಾ ಮುಂತಾದ ಲೋಕಪಾವನಕ್ಷಮವಾದ ತೀರ್ಥಕ್ಷೇತ್ರಾದಿಗಳಿಂದ ಧನ್ಯವಾಗಿ ದಿನಾಲು ಲಕ್ಷಾವಧಿ ಯಾತ್ರಿಕರಾದ ವಾಮರರನ್ನು ವಾಪನ ಗೊಳಿಸುತ್ತಿರುವ ಉತ್ತರಭಾರತದ ಭಾಗ್ಯಕ್ಕೆಣೆಯಿಲ್ಲ. ಸ್ವಲ್ಪ ಕೆಳಗೆ ಇಳಿದು ಬಂದರೆ, ಹಿಮಪರ್ವತರಾಜನ ಸೋದರನಾದ ವಿಂಧ್ಯರಾಜನು ನಮಗೆ ಕಣ್ಣೋಳಿಸುವನು. ಅತನು ಉತ್ತರ ದಕ್ಷಿಣಭಾರತದ ನಡುವೆ ಅಡ್ಡವಾಗಿ ಮಲಗಿದ್ದರಿಂದ ಆರ್ಯಮಾತೆಯ ಚೊಂಕದೊಳಗೆ ಒಡ್ಯಾಣದಂತೆ ಶೋಭಿಸುತ್ತಿರುವನು. ಅತನ ಶಾಖೋಪಶಾಖೆಗಳಾದ ಅರವಲಿ, ನಾತಪುಡಾ ಪರ್ವತಗಳ ನಾಲುಗಳು ರಜಪೂತ ವೀರರ ವೀರಕ್ಷೇತ್ರಗಳಾಗಿವೆ. ನರ್ಮದಾ, ತಾಪೀನದಿಗಳು ಇದೇ ಪರ್ವತದಲ್ಲಿ ಉಗಮಹೊಂದಿ ಮಧ್ಯದೇಶದ ಭಾಗವನ್ನೆಲ್ಲ ಪೋಷಿಸುತ್ತಿರುವವು.

ದಕ್ಷಿಣ ಭಾರತ:- ಮುಂದೆ ಹಾಗೆಯೇ ದಕ್ಷಿಣಕ್ಕೆ ನಾಗಿದರೆ, ಎಡಬಲ ಭಾಗಗಳಲ್ಲಿ ಪೂರ್ವ ಪಶ್ಚಿಮ ಘಟ್ಟಗಳುಳ್ಳ ತೆಂಕಣದ ತಪ್ಪಲಸೀಮೆಯು ನಮಗೆ ಕಾಣುವದು. ಸಹ್ಯಾದ್ರಿ, ಕಪೋತ, ನೀಲ ಗಿರಿ ಮೊದಲಾದ ಪರ್ವತಗಳ ನಾಲುಗಳು ತಮ್ಮ ಗಗನಚುಂಬಿತವಾದ ವೃಕ್ಷಗಳಿಂದಲೂ, ದಟ್ಟಾದ ಹಳವು ಅರಣ್ಯಗಳಿಂದಲೂ, ಔಷಧ ವನ ಸ್ಪತಿಗಳಿಂದಲೂ ಕಣ್ಣುಗಳೊಳಗೆ ಹೊಕ್ಕು ಮನವನಲ್ಲಾಡಿಸುವವು. ಇದೇ ಪರ್ವತ ನಾಲುಗಳಿಂದ ಕೃಷ್ಣಾ, ತುಂಗಭದ್ರಾ, ಕಾವೇರಿ ಮುಂತಾದ ಪ್ರಚಂಡವಾದ ಪುಣ್ಯನದಿಗಳು ಉಗಮ ಹೊಂದಿ, ಮುಂದೆ ದಕ್ಷಿಣ ದೇಶದಲ್ಲೆಲ್ಲ ಹರಿದು, ತಮ್ಮ ಪ್ರವಾಹಗಳಿಂದ ಭೂಮಿತಾಯಿಗೆ ತುಷ್ಟಿಯನ್ನೂ ಪುಷ್ಟಿಯನ್ನೂ ಕೊಡುತ್ತಿರುವವು. ಕೃಷ್ಣಾ, ತುಂಗಾ, ಗೋದಾ ನದಿಗಳು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ನಾಡುಗಳಿಗೆ ನೀರು ಪೂರೈಸುವ ಭಾರವನ್ನು ಹೊತ್ತಿದ್ದು, ಕಾವೇರಿಯು ತಮಿಳ ನಾಡಿನ ಗುತ್ತಿಗೆಯನ್ನು ಹೊತ್ತಿರುವಳು. ಇನ್ನೂ, ಕೆಳಕೆಳಗೆ ಹೋದಂ ತೆಲ್ಲ ಹಿಂದೂದೇಶದ ಅಗಲವು ಕಡಿಮೆಯಾಗುತ್ತಿರುವದರಿಂದ ಬಹು ಜನರಿಗೆ ಸಮುದ್ರದ ತಂಗಾಳಿಯನ್ನನುಭವಿಸುವ ಸೌಖ್ಯವೂ ದೊರೆಯುತ್ತದೆ. ಪಶ್ಚಿಮ ಘಟ್ಟದ ನಾಲುಗಳು ಮಲಿಯಾಳದ ವರೆಗೂ ತಮ್ಮ ಕಾಲುಗಳನ್ನು ಚಾಚಿರುವದರಿಂದ, ಬಂದು ಕಡೆ ವಿಶಾಲವಾದ ಸಮುದ್ರದ ನೋಟ, ಆ ಕಡೆಯಿಂದ ಬೀಸುವ ತಂಗಾಳಿ, ಮತ್ತೊಂದು ಕಡೆ ದಟ್ಟಡವಿಗಳ ನೈಸರ್ಗಿಕವಾದ ರಮ್ಯತೆ, ಇವೆರಡೂ ಬಂದಕ್ಕೊಂದು ಕೂಡಿದ್ದರಿಂದ, ಮಲಿಯಾಳದ ಪ್ರದೇಶವು ನೈಸರ್ಗಿಕವಾಗಿಯೇ ಉಷ್ಣಕಟಿಬಂಧಕ್ಕೆ ಸಮೀಪವಿದ್ದರೂ, ದಕ್ಷಿಣದ ನಂದನವನವೆನಿಸುವಷ್ಟು ಸೌಖ್ಯಾನಂದಕರವಾಗಿದೆ. ಉತ್ತರಹಿಂದೂದೇಶವು ಹೇಗೆ ತೀರ್ಥಕ್ಷೇತ್ರಾದಿಗಳಿಂದ ಸಂಪನ್ನಗೊಂಡಿರುವದೋ ಹಾಗೆಯೇ, ದಕ್ಷಿಣ ಹಿಂದೂದೇಶವಾದರೂ ಕಂಚಿ, ಮಧುರೆ, ಚಿದಂಬರಂ, ತಿರುಪತಿ, ರಾಮೇಶ್ವರ ಅವೇ ಮುಂತಾದ ಪಾವನಕ್ಷಮವಾದ ಪುರಾತನ ತೀರ್ಥಕ್ಷೇತ್ರಾದಿಗಳಿಂದ ಕಿಕ್ಕಿರಿದು ಬೆಳಗುತ್ತಿದೆ.

ನಮ್ಮ ಮಾತೃಭೂಮಿ :- ಈ ಮೇರೆಗೆ, ದೈವಿಕವಾದ ಈ

ಆರ್ಯ ಪುಣ್ಯಭೂಮಿಯನ್ನು ಕಾಯಲು ಉತ್ತರಕ್ಕೆ ಹಿಮಾಲಯದಲ್ಲಿ ಯೋಗಿವರ್ಯನಾದ ಶ್ರೀಶಂಕರನೂ, ದಕ್ಷಿಣಕ್ಕೆ ಕನ್ಯಾಕುಮಾರಿಯ ರೂಪದಿಂದ ಆತನ ಅರ್ಧಾಂಗಿಯಾದ ಪಾರ್ವತಿದೇವಿಯೂ, ಸುತ್ತು ಕಡೆಯಿಂದ ಕಂದಕಗಳಂತೆ ಬೇರೆ ಬೇರೆ ಸಮುದ್ರ ಉಪನಾಗರಗಳ ರೂಪವನ್ನು ಧರಿಸಿಕೊಂಡ ಸಮುದ್ರನಾಥನೂ ಅಖಂಡವಾಗಿ ಕಾವಲ ನಡಿಸಿರುವರು. ಇನ್ನೂ ಒಂದು ಬಗೆಯಿಂದ ಭಾರತದೇಶವನ್ನು ಕುರಿತು ರೂಪಕಮಾಡಬಹುದು. ಮಾತೃಭೂಮಿಯೆಂದರೆ ತಾಯ್ನಾಡು. ತಾಯಿಯು ಒಬ್ಬನನ್ನಾಗಲಿ, ಹೆಚ್ಚು ಮಕ್ಕಳನ್ನಾಗಲಿ ಹೆತ್ತು ಹೊತ್ತು ಸಲಹುವಳು. ಆದರೆ ಭೂಮಿತಾಯಿಯು ಕೋಟ್ಯವಧಿ ಜನಗಳನ್ನು ಅನ್ನ ನೀರು ಕೊಟ್ಟು ಪೋಷಿಸುತ್ತಾಳೆ. ಕಾಶ್ಮೀರವೇ ಮುಖವುಳ್ಳವಳಾಗಿಯೂ, ಸಿಂಧಪ್ರಾಂತ ಹಾಗೂ ಬ್ರಹ್ಮದೇಶಗಳೇ ಕೈಗಳುಳ್ಳವಳಾಗಿಯೂ ಉದ್ದಕ್ಕೂ ಹಾಗೆಯೇ ಕೆಳಗೆ ಕನ್ಯಾಕುಮಾರಿಯ ವರೆಗೆ ಪೂರ್ವ ಪಶ್ಚಿಮ ದಂಡೆಗಳೇ ಕಾಲುಗಳುಳ್ಳವಳಾಗಿಯೂ ಎದ್ದು ನಿಂತಿರುವ ಭಾರತ ಭೂಮಾತೆಯ ಮನೋಹರ ಭಾವಚಿತ್ರವನ್ನು ಮನದೊಳಗೆ ಕಲ್ಪಿಸಿಕೊಂಡು ಧ್ಯಾನ ಮಾಡತೊಡಗಿದರೆ, ನಮಗೆಷ್ಟು ಆನಂದವು ಉಕ್ಕೇರಿ ಬರುವದು! ಬೇರೆಯವರಂತೆ ಭಾರತೀಯರಿಗೆ ಮಾತೃಭೂಮಿಯೆಂದರೇನೋ ಒಂದು ನಿರ್ಜೀವ ವಸ್ತುವಲ್ಲ. ಮಾತೃಸೌಹಾರ್ದದಿಂದ ತುಂಬಿ ತುಳುಕುತ್ತ ರೂಪುಗೊಂಡು ನಿಂತಿರುವ ಸಾಕ್ಷಾತ್ ತಾಯಿಯೇ! ಅಂತೆಯೇ ಆರ್ಯರು ತಾಯಿ ಹಾಗೂ ತಾಯ್ನಾಡು ಅವೆರಡೂ ಸ್ವರ್ಗಕ್ಕೂ ಮೇಲೆಂದು ಉಗ್ಗಡಿಸಿರುವರು.

ಹವೆ, ನೀರು, ಆಹಾರ:- ಸಾಮಾನ್ಯವಾಗಿ ಹಿಂದೂದೇಶವನ್ನೊಂದು ಖಂಡವೆಂದು ಹೇಳಬಹುದು. ವಿಶಾಲವಾದ ಈ ಖಂಡದೊಳಗೆ ಇಂಗ್ಲಂಡದಂಥ ಚಳಿನಾಡನ್ನೂ, ಅನೇಕ ಹರದಾರಿಗಳ ವರೆಗೆ ನೆರಳಿನ ಸುಳಿವಿಲ್ಲದೆ, ಹುಲ್ಲು ಗಿಡಗಂಟಿ ತೊಪ್ಪಲಗಳನ್ನು ಸಹ ಬಣಗಿಸಿ ಸುಟ್ಟು ಬಿಡುವ ಆಫ್ರಿಕೆಯಂಥ ಬಿಸಿಲುಳ್ಳ ಬೈಲನಾಡನ್ನೂ ಕಾಣಬಹುದು. ಒಟ್ಟಿನಲ್ಲಿ, ಇಡೀ ಭರತಖಂಡವೇ ಸಮಸೀತೋಷ್ಣಕಟಿಬಂಧದಲ್ಲಿರುವದರಿಂದ, ಚಳಿಯಿಂದಾಗಲಿ, ಬಿಸಿಲಿನಿಂದಾಗಲಿ, ಹೇಳು

ವಂಥ ಅನಾಹುತಗಳೇನೂ ಒದಗದಿದ್ದರೂ, ವಿಧವಿಧದ ಹವೆಯು ನ್ಮಾಖ್ಯವೂ ದುಃಖವೂ ಚನ್ನಾಗಿಯೇ ಪ್ರತೀತಿಗೆ ಬರುವದುಂಟು. ಉತ್ತರದ ಸೀತವಾದ ಹವೆಯಲ್ಲಿ ಹುಟ್ಟಿ ಬೆಳೆಯುತ್ತಿರುವ ಜನರು ಗುಡ್ಡಗಾಡು ಜನರಿಗೆ ತಕ್ಕಂತೆ, ನಿಲುವಿಕೆಯಲ್ಲಿ ಎತ್ತರವುಳ್ಳವರೂ, ಗಟ್ಟಿಗರೂ, ತಾಳ್ಮೆಯುಳ್ಳವರೂ, ಶೂರರೂ ಆಗಿರುತ್ತಾರೆ; ಮತ್ತು ಅವರ ಆಹಾರವಾದರೂ ಗೋದಿಯೇ ಇರುವದನ್ನು ಜ್ಞಾಪಕದಲ್ಲಿಡತಕ್ಕ ಸಂಗತಿಯಾಗಿದೆ. ಈ ಮಾತಿಗೆ ಬಂಗಾಲಿಗಳೊಬ್ಬರು ಅಪವಾದವೆನ್ನಬಹುದು. ಏಕೆಂದರೆ ಅವರು ಅಕ್ಕಿಯನ್ನುಣ್ಣುವರು. ಅನೇಕರು ಮೀನುಗಳನ್ನು ತಿನ್ನುವ ವಾಡಿಕೆಯೂ ಉಂಟು. ಅಲ್ಲಿಂದ ಮುಂದೆ ಹಾಗೆಯೇ ಕೆಳಕ್ಕಿಳಿಯುತ್ತ ನಡೆದರೆ ಗುಜರಾಥ, ಮಹಾರಾಷ್ಟ್ರ, ಕರ್ನಾಟಕ ಜನರ ಆಹಾರಗಳು ಬಲುಮಟ್ಟಿಗೆ ಹೋಲುತ್ತವೆ. ಗುಜ್ಜರು ಗೋದಿಪ್ರಿಯರಾದಾಗ್ಯೂ ಅನ್ನಕ್ಕೆ ಅಲ್ಲಗಳೆಯುವದಿಲ್ಲ. ದಕ್ಷಿಣಹಿಂದೂದೇಶದ ಅತ್ಯಲ್ಪ ಭಾಗದ ಮರಾಠಿಗರಿಗೂ, ಕನ್ನಡಿಗರಿಗೂ ಸೆಜ್ಜೆ, ಜೋಳ, ರಾಗಿ ಮುಂತಾದ ಧಾನ್ಯಗಳು ದಿನದ ಗಂಜಿಯಾಗಿರುವವಾದರೂ ಕನ್ನಡನಾಡಿನ ಗಡಿಸೀಮೆಯನ್ನು ಬಿಟ್ಟೊಡನೆ ನಮಗೆ ಮತ್ತೆ ಕೆಳಕ್ಕೆ ಎಲ್ಲೆಲ್ಲಿಯೂ ಅಕ್ಕಿಯ ಸಾಮ್ರಾಜ್ಯವೇ ಸಾರೋದ್ಧಾರವಾಗಿ ನಡೆದಿರುವದಾಗಿ ಕಾಣುತ್ತದೆ. ಒಟ್ಟಾರೆ ಹವೆ, ನೀರು, ಆಹಾರಾದಿಗಳ ಸೈಸರ್ಗಿಕ ವ್ಯವಸ್ಥೆಯನ್ನು ನೋಡಿದರೆ ಗುಜರಾಥ, ಮಹಾರಾಷ್ಟ್ರ, ಕರ್ನಾಟಕ ಅವೆಲ್ಲವೂ ಹೆಚ್ಚುಕಡಿಮೆ ಒಂದೇ ಸರದೊಳಗಿನ ಮಣಿಯಂತಿದ್ದರೂ, ಅವುಗಳಲ್ಲಿ ಅಯಾ ದೇಶಚಾರಕ್ಕನುಗುಣವಾಗಿ ಒಂದೊಂದು ಬಗೆಯ ಸಾಂಸ್ಕೃತಿಕ ವೈಶಿಷ್ಟ್ಯಗಳು ತೋರುತ್ತವೆ. ದಕ್ಷಿಣ ಹಿಂದೂದೇಶವನ್ನು ದೇವರು ನದಿಗಳಿಂದ ಸಮೃದ್ಧಗೊಳಿಸಿದ್ದು, ಅಲ್ಲಿ ಮಿಕ್ಕ ನಾಡಿನಲ್ಲಿರುವಂತೆ ಕಾಲುವೆಗಳಿರದ್ದರಿಂದ ಜನರಿಗೆ ಹಸ್ಸೆರಡು ಕಾಲ ಮಳೆನೀರಿಗಾಗಿ ಮಳೆರಾಜನ ದಾರಿಯನ್ನು ಕಾಯುತ್ತಿರಬೇಕಾಗುತ್ತದೆ. ಈ ಸ್ಥಿತಿಯು ಕನ್ನಡ ನಾಡಿನ ಬೆಳವಲದವರಿಗೆ ಪ್ರತಿವರ್ಷ ಅನುಭವಗಂಡ ಮಾತಾಗಿದೆ. ಆದರೂ ದಕ್ಷಿಣದ ತೆಲಗು, ತಮಿಳ, ಮಲಿಯಾಳ ನಾಡುಗಳಿಗೆ ಸಮುದ್ರವು ಸವಿಾಪವಿರುವದರಿಂದ, ಆವ

ರಿಗೆ ಮಳೆಯಿಲ್ಲದೆ ತೊಂದರೆಯಾಗುವದಿಲ್ಲ; ಏಕೆಂದರೆ ಮಳೆಗಾಲದ ಗಾಳಿಗಳು ಸಾಮಾನ್ಯವಾಗಿ ದಕ್ಷಿಣದಿಂದಲೇ ಬೀಸುತ್ತಿರುವದರಿಂದ ದಕ್ಷಿಣದ ಬಾಗಿಲದಲ್ಲಿಯೇ ಮೇಲಿನ ಜನಾಂಗದವರಿರುವದರಿಂದ ಮಳೆಯಿಲ್ಲವೆಂದು ಆಗುವದಂತೂ ದೂರೇ ಇರಲಿ; ವರುಷ ವರ್ಷಕ್ಕೆ ನೆರೆ ಹಾವಳಿಗೆ ಸಿಲುಕದಿದ್ದರೆ ಅವರ ಪುಣ್ಯ! ದಕ್ಷಿಣದಲ್ಲಿರುವ ಕೆಲವು ಜನ ಕನ್ನಡಿಗರು, ತೆಲಗರು, ತಮಿಳರು, ಮಲಿಯಾಳರು ಅವರೆಲ್ಲರ ಮುಖ್ಯವಾದ ಆಹಾರವು ಅಕ್ಕಿಯೇ. ಅಲ್ಲಿಯ ಹವೆಯು ಬಹು ಉಷ್ಣವಿರುವದರಿಂದ ಆ ಜನರಿಗೆ ಹೆಚ್ಚು ಹುಳಿಯನ್ನು ಊಟದೊಳಗೆ ಬಳಸಬೇಕಾಗುತ್ತದೆ. ಆದರೂ ಇವರಲ್ಲಿ ಕೆಲವರಿಗೆ ಸಮುದ್ರ ದಂಡೆಯು ಹತ್ತರವಿರುವದರಿಂದ ಸಮುದ್ರದಿಂದ ಆಗುವ ಕೆಲವು ಅನುಕೂಲ್ಯಗಳೇನೋ ಅಪೂರ್ವವಾಗಿರುವದರಿಂದ ಸಮುದ್ರ ದಂಡೆಯಲ್ಲಿರುವವರು ಧನ್ಯರೆಂದೆನ್ನಬೇಕಾಗುತ್ತದೆ. ಸಮುದ್ರ ದಂಡೆಯಲ್ಲಿರುವ ನಾಡಿನಲ್ಲಿ ಅಕ್ಕಿ, ಅಡಿಕೆ, ತೆಂಗು ಮೊದಲಾದವುಗಳು ಬೆಳೆಯುತ್ತಿದ್ದುದರಿಂದ ಎತ್ತರವಾದ ತೆಂಗಿನ ಬನಗಳಿಂದ ಎದ್ದು ಕಾಣುವ ಪ್ರದೇಶಗಳು ಬಹು ರಮ್ಯವಾಗಿರುತ್ತವೆ. ದಕ್ಷಿಣದವರು ಉತ್ತರದವರಂತೆ ವಿಶೇಷವಾಗಿ ಯುದ್ಧಪ್ರಿಯರಲ್ಲ; ಸಾಧಾರಣವಾಗಿ ಅವರ ಆಹಾರವು ಅಕ್ಕಿಯಿಂಧ ಸಾತ್ವಿಕ ಪದಾರ್ಥವಿರುವದರಿಂದ ಮೇಧಾವಂತರು. ವ್ಯಾಪಾರ ಕೈಗಾರಿಕೆಗಳಲ್ಲಿ ಅವರ ಮನಸಿನ ಒಲವು ಹೆಚ್ಚು ಓಡುತ್ತದೆ.

ಧರ್ಮವೇ ಭಾರತದ ಜೀವವು:- ಈ ಮೇರೆಗೆ ಹಿಂದೂದೇಶದ ಹವೆಯು ಕೆಲವೆಡೆಯಲ್ಲಿ ಎಲ್ಲ ಅಂಶಗಳಿಂದ ರಮ್ಯವಾಗಿಯೂ, ಹಿತಕರವಾಗಿಯೂ, ಕೆಲವೆಡೆಯಲ್ಲಿ ಉಷ್ಣದಿಂದ ಪ್ರಖರವಾಗಿಯೂ, ಮತ್ತೆ ಕೆಲವೆಡೆಯಲ್ಲಿ ಇನ್ನೂ ಹೆಚ್ಚಾದ ತಾಪದಿಂದ ಬಳಲಿಸುವಂಥದೂ ಆಗಿದೆ. ಇದು ಹೊರಗಣ ಸ್ಥಿತಿಯಾಯಿತು. ಒಳಗಣ ಸ್ಥಿತಿಯನ್ನು ನಿರೀಕ್ಷಿಸಿದರೆ, ಭರತಖಂಡದ ಜೀವಾಳವು ಎಲ್ಲ ಖಂಡಗಳಿಂದ ಭಿನ್ನವೂ ವಿಲಕ್ಷಣವೂ ಆದುದಾಗಿ ತಿಳಿಯುವದು. ಹಿಂದೂದೇಶದ ಎಲ್ಲ ಪ್ರದೇಶ ಭಾಗಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತ ನಲಿಯುತ್ತ ಆಲೆದು ಕೊಂಡು ಬಂದರೆ, ಭರತಖಂಡದೊಳಗೆ ನಮಗೊಂದು ಬಗೆಯು

ಐಕ್ಯವೂ, ವೈಲಕ್ಷಣ್ಯವೂ ಕಣ್ಣಿಗೆ ಕಟ್ಟುವದು. ಅದಾವುದೆಂದರೆ ದೈವಿಕ ಭಾವನೆಯು. ಈ ದೈವಿಕಭಾವನೆಯು ಭಾರತೀಯರಲ್ಲಿ ಸಹಜವಾಗಿಯೇ ರೋಮ ರೋಮಗಳಲ್ಲಿ ತುಂಬಿ ದಡಗುಟ್ಟಿ ಹರಿಯುತ್ತದೆ. ಹವೆ, ಸೃಷ್ಟಿಸೌಂದರ್ಯ, ಆಹಾರ ಮೊದಲಾದವುಗಳ ಸಂಸರ್ಗವಿಶೇಷಗಳಿಂದ ಮನುಷ್ಯನ ಸ್ವಭಾವ ಗುಣಗಳಲ್ಲಿ ಕೆಲಮಟ್ಟಿಗೆ ಹೆಚ್ಚು ಕಡಿಮೆ ಕಂಡುಬಂದರೂ, ಒಟ್ಟಾರೆ ಭಾರತೀಯರು ಶಾಂತಿಪ್ರಿಯರೂ, ಅದರ ಶೀಲರೂ, ದೈವೀಸಂಪತ್ತಿಯುಳ್ಳವರೂ, ಧರ್ಮಜೀವನರೂ ಆಗಿದ್ದಾರೆ. ಆರ್ಯರಲ್ಲಿದೊಂದು ಸಾಮಾನ್ಯವಾದ ಗುಣವಿದ್ದರೂ, ಆಯಾ ದೇಶದ ಹವೆ, ನೀರು, ಆಹಾರಗಳು ಆಯಾ ದೇಶದವರ ಗುಣಸ್ವಭಾವಗಳನ್ನು ಮಿದುಗೆಡಿಸಲಿಕ್ಕೂ, ಕಠೋರಗೊಳಿಸಲಿಕ್ಕೂ ಕಾರಣವಾಗಿವೆ. ಕರಿಮಣಿ ಸರದೊಳಗೆ ಬಗೆ ಬಗೆ ಬಣ್ಣದ ಹವಳಗಳನ್ನು ಪೋಣಿಸಿರುವಂತೆ, ಭಾರತೀಯರ ಗುಣಸ್ವಭಾವಾದಿಗಳಲ್ಲಿಯೂ, ನಡೆನುಡಿಗಳಲ್ಲಿಯೂ, ಸಂಪ್ರದಾಯ ಪದ್ಧತಿಗಳಲ್ಲಿಯೂ, ಧರ್ಮಜೀವನದ ಒಂದೇ ಒಂದು ಸೂತ್ರವು ಅಲ್ಲಿಂದಿಲ್ಲಿಂದ ಎಲ್ಲೆಗೆ ಹಾಯ್ದಿರುವದಾಗಿ ಒಡೆದು ಕಾಣುತ್ತದೆ. ಇದುವೇ ಭಾರತೀಯರ ವೈಶಿಷ್ಟ್ಯ. ಇದುವೇ ಭಾರತೀಯರಿಗೆ ಮೂಲಾಧಾರ. ಇದರೊಳಗಿನ ಇನ್ನೂ ಒಂದು ವಿಚಾರಸ್ಯದ ಮಾತೆಂದರೆ, ಅಂತರ್ಜ್ಞಾನಿಗಳಾದ ಆರ್ಯಋಷಿಗಳು ಈ ಗುಪ್ತಗಾಮಿಯಾಗಿ ಹರಿಯುವ ಧರ್ಮಜೀವನವೆಂಬ ದೈವಿಕವಾದ ಭಾವನೆಯನ್ನು ಹೊರಕ್ಕೆಳೆದು, ಆ ಉದಾತ್ತವಾದ ಭಾವನೆಯನ್ನು ನಮ್ಮ ಕಣ್ಣಿಗೆ ಕಾಣಿಸುವಂತೆ, ನದಿ, ಪರ್ವತ, ವೃಕ್ಷ ಮೊದಲಾದವುಗಳಲ್ಲಿ ಊರಿ, ಅವಕ್ಕೆ ತೀರ್ಥಕ್ಷೇತ್ರಗಳೆಂಬ ಪವಿತ್ರವಾದ ಹೆಸರು ಕೊಟ್ಟು, ಹೊರಗಿನ ಪ್ರಪಂಚವನ್ನೇ ಬ್ರಹ್ಮಮಯವಾಗಿಸಲು ಹೆಣಗಿದ್ದುದು. ಇದರ ಸವಿಯಾದ ಫಲವೆಂದರೆ, ಈಗಿನಂತಹ ಕಲಿಕಾಲದ ಪಾಪ ಪ್ರಚುರವಾದ ಯುಗದಲ್ಲಿಯೂ, ಆರ್ಯರ ರಕ್ತನಾಳಗಳಲ್ಲಿ ಧರ್ಮ, ದೇವರು ಎಂಬುವ ಭಾವನೆಯು ಅಖಂಡವಾಗಿ ಹರಿಯುತ್ತಿದೆ. ಅವರ ನಾಡಿಯು ಧರ್ಮದಿಂದೊಡಗೂಡಿ ಹಾರುತ್ತಿದೆ. ಗಂಗೆ, ಯಮುನೆ, ಕೃಷ್ಣಾ, ಗೋದಾವರಿ, ಕಾವೇರಿ ಮುಂತಾದ ಪ್ರವಾಹ ವಿಶೇಷಗಳ ಹೆಸರೆತ್ತಿ

ದೊಡನೆ, ಆರ್ಯರ ಹೃದಯದೊಳಗೆ ಅವರ್ಣನೀಯವಾದ ಪೂಜ್ಯಬುದ್ಧಿಯು ಪುಟಿಯಲಾರಂಭಿಸುತ್ತದೆ. ಹಿಮಾಲಯ, ವಿಂಧ್ಯ, ಸಹ್ಯಾದ್ರಿ, ನೀಲಗಿರಿಗಳ ನೆನಪಾದೊಡನೆ, ಆರ್ಯರ ಎದೆಯು ಅಭೇದ್ಯವಾದ ಧೈರ್ಯೋತ್ಸಾಹಗಳಿಂದ ಭದ್ರವಾಗುತ್ತದೆ. ಪುಣ್ಯಕ್ಷೇತ್ರಗಳಾದ ಕಾಶಿ, ಕಂಚಿ, ಮಾಯಾ, ಅಯೋಧ್ಯಾ, ಪುರಿ, ದ್ವಾರಕಾ, ರಾಮೇಶ್ವರ, ವೆಂಕಟಗಿರಿ, ಶ್ರೀಶೈಲಗಳ ಹೆಸರು ಕಿವಿಗೆ ಬಿದ್ದೊಡನೆ, ಮನಸು ಆಯಾ ಪುಣ್ಯಸ್ಥಳಗಳಿಗೆ ದಿಂಕಿಟ್ಟು ಹಾರುತ್ತದೆ ವಿಶ್ವಾಮಿತ್ರ, ವಸಿಷ್ಠ, ರಾಮಕೃಷ್ಣ, ನಲ, ಹರಿಶ್ಚಂದ್ರಾದಿ ಮಹಾತ್ಮರ ಪುಣ್ಯನಾಮಗಳು ಮನಸಿಗೆ ತಟ್ಟಿದೊಡನೆ, ಭಾರತೀಯರ ಧೈರ್ಯಸ್ಥೈರ್ಯ, ಭಾರತೀಯರ ಜೀವನಕ್ರಮವನ್ನೇ ಅಮರಗೊಳಿಸುವಂಥ ಅಂತಃಸ್ಫೂರ್ತಿಯು ಮೊಳಕೆಗೊಳ್ಳುತ್ತದೆ. ಇದೀಗ ಭಾರತೀಯರ ಭಂಡಾರ, ಇದೀಗ ಭಾರತೀಯರ ವೈಭವ ಬೀಜ; ಇದೊಂದು ಮಾತ್ರ ನಮ್ಮ ಕೈ ಬಿಟ್ಟು ಹೋಗದಿರಲಿ; ಅಂದರಾಯಿತು! ಇದೇ ನಮ್ಮ ಚಾರಿತ್ರ್ಯದ ಜೀವನಗಳು. ಸತ್ಯನಾಶಿಲ್ಯಾದಿಗಳ ಸೆಲೆಗಳು!!

ಭರತಖಂಡವೆಂದು ಹೆಸರು ಬರಲಿಕ್ಕೆ ಕಾರಣ:- ಭರತಖಂಡದ ಮೇಲ್ಮೈಯನ್ನು ಹೇಳುವುದೆಂದರೆ ಅದೊಂದು ಹೆಚ್ಚಿನ ಕೆಲಸ. ಈಗ ಇದ್ದಕ್ಕಿದ್ದಂತಿರುವ ಹಿಂದೂದೇಶಕ್ಕೆ ಒಂದಾನೊಂದು ಕಾಲಕ್ಕೆ ಭರತವರ್ಷ, ಭರತಖಂಡಗಳೆಂಬ ಹೆಸರುಗಳಿದ್ದವು. ಆದರೂ ಭರತಖಂಡಕ್ಕೆ ಭರತನೆಂಬ ಹೆಸರು ಯಾವ ರಾಜನಿಂದ ಬಂದಿತೆಂಬುದನ್ನು ನಿರ್ಧರಿಸುವದು ಬಹು ಬಿಕ್ಕಟ್ಟಿನ ಕೆಲಸವಾಗಿದೆ. ಆರ್ಯರು ಬಹು ಯಜ್ಞಪ್ರಿಯರಾಗಿದ್ದರಷ್ಟೆ! ಯಜ್ಞಕ್ಕೆ ಭಾರತೀಯೆಂದು ಹೆಸರು. ಈ ಭಾರತೀ ಎಂಬ ಹೆಸರಿನಿಂದಲೇ ಈ ಜನಾಂಗಕ್ಕೆ ಭರತಖಂಡವೆಂತಲೂ ಜನರಿಗೆ ಭಾರತೀಯರೆಂತಲೂ ಹೆಸರು ಬಂದಿತೆಂದು ಕೆಲವರ ಊಹೆ; ಋಗ್ವೇದದೊಳಗೆ ಅನಾರ್ಯಕುಲದವರೊಡನೆಯೂ, ಮಿಕ್ಕ ಜನಾಂಗದವರೊಡನೆಯೂ ಹೋರಾಡುತ್ತಿರುವ ಭರತರಾಜನಿಂದ ಭರತಖಂಡವೆಂದೂ, ಭಾರತೀಯರೆಂದೂ ಹೆಸರಾಯಿತೆಂದು ಇನ್ನು ಕೆಲವರ ಅನುಮಾನ; ಮನುವಂಶದೊಳಗಾಗಿಹೋದ ಭರತನೆಂಬ ಅರಸನಿಂದ

ಭರತಖಂಡವೆಂಬ ಹೆಸರು ವ್ಯಾಪ್ತವಾಯಿತೆಂದು ಮತ್ತೆ ಕೆಲವರ ಹೇಳಿಕೆ; ದುಷ್ಯಂತರಾಜನ ಮಗನಾದ ವೀರನಾರ್ವಭೌಮ ಭರತ ರಾಜನಿಂದ ಭರತಖಂಡಕ್ಕೆ ಈ ಹೆಸರು ನಮ್ಮ ಪೂರ್ವಿಕರು ಕೊಟ್ಟ ರೆಂದು ಬೇರೆ ಕೆಲವರ ಎಣಿಕೆ. ಭರತಖಂಡಕ್ಕೆ ಯಾವ 'ಭರತ' ರಿಂದ ಈ ಭಾರಣೆಯು ಹೆಸರು ಬಂದಿದ್ದರೂ ಸರಿ; ಒಬ್ಬೊಬ್ಬ ಭರತರಾಜನ ಚರಿತ್ರೆಯನ್ನೋದಿದರೂ, ಅವರು ನೆರವೇರಿಸಿದ ಮಹಾ ಮಹಾ ಕಾರ್ಯಗಳಿಂದ ಹಿಂದೂದೇಶಕ್ಕೆ ಭರತಖಂಡವೆಂಬ ಹೆಸರು ಸಾರ್ಥಕ ವಾಗುವಂತೆಯೇ ಇದೆ. 'ಭರತ' ನೆಂಬುದು ಬೇರೆ ಬೇರೆ ಅರ್ಥವಿಶೇಷ ಗಳಿಂದ ಬಳಕೆಯಲ್ಲಿದ್ದರೂ, ಭರತಖಂಡದ ಬಗ್ಗೆ ಅವುಗಳಲ್ಲೆಲ್ಲ ತುಂಬಿ ಸೂಸಿ ಹರಿಯುತ್ತಿರುವ ಉಜ್ವಲ ಅಭಿಮಾನವೂ ಸ್ಫೂರ್ತಿಯೂ ಅವು ಗಳು ಮಹತ್ವವುಳ್ಳವಾಗಿವೆ. ಭರತಖಂಡದ ವಿಷಯವಾಗಿ ಅವರಲ್ಲೆಲ್ಲ ಒಂದೇ ಪೂಜ್ಯಭಾವನೆಗಳೇ ಸ್ಫುರಿಸುತ್ತಿರುವವು; ಆದುದರಿಂದ ಅವರೆ ಲ್ಲರೂ ಬೇರೆ ಬೇರೆಯಾಗಿದ್ದರೆಂದು ಒಂದು ವೇಳೆ ಎಣಿಸಿದರೂ ಅವ ರಲ್ಲಿ ಉಕ್ಕಿಬರುವ ದಿವ್ಯಭಾವನೆಗಳೇನೂ ಬೇರೆಯಲ್ಲವಷ್ಟೇ!

ವೇದ ಪುರಾಣಗಳಲ್ಲಿ ಭಾರತದ ಹೆಸರು:- ಭರತವರ್ಷ ಭಾರತ ಇತ್ಯಾದಿ ಹೆಸರು ಋಗ್ವೇದಾದಿಗಳಲ್ಲಿ ಅಲ್ಲಲ್ಲಿ ಕಂಗೊಳಿಸು ತ್ತವೆ; ಅಥರ್ವವೇದದೊಳಗಿನ ಪೃಥ್ವೀಸೂಕ್ತದೊಳಗಂತೂ "ಭರತ ಖಂಡದ ರಕ್ಷಣೆಗಾಗಿ ದೇವತೆಗಳು ಹಗಲಿರಳು ನಿದ್ದೆ ನೀರಡಿಕೆ ಲಕ್ಷಿ ಸದೆ, ಕಣ್ಣೊಳಗೆ ಕಣ್ಣಿಟ್ಟು ಭರತಖಂಡವನ್ನು ರಕ್ಷಿಸುತ್ತಿರುವರು; ಆದ್ದರಿಂದ ಯಾರೂ ಭಾರತೀಯರೊಡನೆ ದ್ವೇಷ ಕಟ್ಟಿಕೊಳ್ಳಬಾರ ದೆಂದು" ವಾಕ್ಯಗಳಿವೆ; ದೇವತೆಗಳು ಕಾವಲಾಗಿರುವಂಥ ದೇಶದ ಪುಣ್ಯವೆಷ್ಟೆಂತು ಹೇಳೋಣ! ಭಾಗವತ ಗ್ರಂಥದೊಳಗೂ ಭರತ ಖಂಡದ ಪುಣ್ಯವಿಶೇಷವನ್ನು ವರ್ಣಿಸುವಾಗ್ಗೆ ಮೊದಲಿನ ಭಾರತೀಯರು ಮೈಮರೆತಿರುವರು; "ಭರತಖಂಡದೊಳಗೆ ಮನುಷ್ಯನಾಗಿ ಹುಟ್ಟುವದು ದುರ್ಲಭವೆಂದೂ ಈ ಖಂಡದೊಳಗೆ ಹುಟ್ಟಿಬರಬೇಕೆಂದು ಇಂದ್ರಾದಿ ದೇವತೆಗಳು ಸಹ ಯಾವಾಗಲೂ ಅತುರಪಡುತ್ತಿರುವರೆಂದೂ, ಒಂದೆ ಡೆಯಲ್ಲಿ ಭಾಗವತಕಾರರು ಹೇಳಿದ್ದಾರೆ;" ಮತ್ತು ಭರತಖಂಡದೊಳಗೆ

ಜನ್ಮವೆತ್ತಿ ಬಾಳಿ ಬರಕುವ ಜನರು ಧನ್ಯರೆಂದೂ, ಸ್ವರ್ಗ, ಮುಕ್ತಿ ಮೊದ ಲಾದವುಗಳು ಅವರಿಗೆ ಅಂಗೈಯೊಳಗಣ ನೆಲ್ಲೀಕಾಯಿಯಂತೆ ಸುಲಭ ವೆಂದೂ ನಲಿನಲಿದು ಹಾಡಿದ್ದಾರೆ. ಯಾವ ಭರತಖಂಡದೊಳಗೆ ಅವ್ಯ ಕ್ತನೂ ಆದ ಭಗವಂತನೇ ಅಸಂಖ್ಯಾಕವಾದ ಅವತಾರಗಳನ್ನೆತ್ತಿ ಅವ ತರಿಸಿದನೋ ಯಾವಾತನಿಗೆ ಭಾರತವು ಪ್ರಾಣಕ್ಕಿಂತ ಪ್ರಿಯವಾಗಿರು ವದೋ, ಯಾವ ಜನಾಂಗದೊಳಗಿನ ಧರ್ಮಕ್ಕಾಗಿ ತಾನು ತಪ್ಪದೆ ಯುಗ ಯುಗಗಳಲ್ಲಿಯೂ ಮನುಷ್ಯ ರೂಪವನ್ನು ತಾಳಿ ಹುಟ್ಟಿಬರುವೆ ನೆಂದು ಮಾತು ಕೊಟ್ಟಿರುವನೋ, ಆ ಭರತಖಂಡಕ್ಕೆ ಭೂಲೋಕದ ಮೇಲಿನ 'ದೇವಲೋಕ' ವೆಂಬ ದಿವ್ಯವಾದ ಹೆಸರಿನಿಂದ ಕರೆಯಲಿಕ್ಕೆ ಅಡ್ಡಿಯೇನು? ಮತ್ತು ನಾವು ನಮ್ಮ ಪುರಾತನ ಇತಿಹಾಸ ಪುರಾಣ ಗಳನ್ನು ತೆರೆದರೂ, ಅದರೊಳಗೆ ಇಂಥ ಹಲವು ಗೌರವಯುಕ್ತವಾದ ಹೆಸರುಗಳಿಂದ ಭಾರತಕ್ಕೆ ಧನ್ಯವಾದಗಳನ್ನರ್ಪಿಸಿದ್ದಾರೆ. ಮನುಸ್ಮೃ ತ್ಯಾದಿಗಳಲ್ಲಿ ಭರತಖಂಡವು ಜಗತ್ತಿನ ಮೇಲಿರುವ ಮಿಕ್ಕ ಜನಾಂಗ ಗಳಿಗೆ 'ಗುರು' ವೆಂದೂ, ಎಲ್ಲರೂ ಈ ದೇಶದವರಿಂದಲೇ ತಮ್ಮ ತಮ್ಮ ಆಚಾರ ವಿಚಾರಗಳನ್ನು ಕಲಿಯತಕ್ಕದ್ದೆಂದೂ ಮನುಋಷಿಯ ಆಜ್ಞೆ. ಉಪನಿಷದಾದಿಗಳಲ್ಲಿ ಇಣಕಿ ಹಾಕಿದರಂತೂ, ಭಾರತೀಯರಿಗೆ ಹಲವೆ ಡೆಯಲ್ಲಿ 'ಅಮೃತಪುತ್ರ' ರೆಂದು ಸಂಬೋಧಿಸಿದ್ದನ್ನು ಕಂಡರಂತೂ ನಾತ್ವಿಕ ಆವೇಶ ವಿಶೇಷದಿಂದ ಮೈ ಪುಲಕಿತವಾಗುತ್ತದೆ. 'ಅಮೃತ ಪುತ್ರ' ರೆಂದರೆ 'ನಾವಿಲ್ಲದವರೆಂದರ್ಥ'. ಮನುಷ್ಯನ ದೇಹಕ್ಕೆ ನಾವು; ಆತ್ಮಕ್ಕಲ್ಲವೆಂಬ ಅಮೃತತತ್ವವನ್ನು ಕಂಡುಹಿಡಿದು, ಅದನ್ನು ಪ್ರಚುರ ಗೊಳಿಸಿದ ಭಾರತ ಜನಾಂಗಕ್ಕೆ ಈ ಹೆಸರು ಸಲ್ಲದೆ ಇನ್ನಾರಿಗೆ ಸಲ್ಲ ಬೇಕು? ಅರ್ಥಾತ್, ಭರತಖಂಡವೆಂದರೆ ದೇವಲೋಕವು; ಭರತ ಖಂಡವೆಂದರೆ ಮುಕ್ತಿಕಾಂತೆಕ್ಕೆಗೂಡುವ ಬೀಡು; ಭರತಖಂಡವೆಂದರೆ ಜಗತ್ತಿನ ಗುರುವು; ಅಮೃತಪುತ್ರರ ತವರ್ಮನೆಯು!

೨ನೇ ಪ್ರಕರಣ.

ಮಾನವನ ಜನ್ಮಭೂಮಿ ಯಾವುದು?

(ಕ್ರಿ. ಶ. ಪೂ. ೧೧,೦೦೦ ವರ್ಷಗಳಾಚೆಯ ಸ್ಥಿತಿ.)

ಸೃಷ್ಟಿಯ ಆದಿಯಲ್ಲಿ ಮನುಷ್ಯನು ಮೊದಲು ಯಾವ ಭೂಮಿಯಲ್ಲಿ ಹುಟ್ಟಿದನೆಂಬುದನ್ನು ಹೇಳುವದು ಇನ್ನೂ ಪರೆಗೆ ಯಾರಿಗೂ ಸಾಧ್ಯವಾಗಿಲ್ಲ; ಕೆಲವರು ಬ್ರಹ್ಮಾವರ್ತವೇ ಮಾನವನ ಆದಿಯಾದ ಹುಟ್ಟುಭೂಮಿಯೆಂದೂ, ಕೆಲವರು ದಂಡಕಾರಣ್ಯವೇ ಜನನಭೂಮಿಯೆಂದೂ ಆಯಾ ಶಾಸ್ತ್ರಜ್ಞರು ತಮ್ಮ ತಮ್ಮ ಅಭ್ಯಾಸ ಪಾಗೂ ಅನುಭವಗಳಿಗೆ ಅನುಗುಣವಾಗಿ ಚರ್ಚಿಸುತ್ತಿರುವರು; ಆದರೂ ಇದುವರೆಗೆ ಈ ಬಗ್ಗೆ ನಿಶ್ಚಿತವಾದ ಯಾವುದೊಂದು ಕೊನೆಯ ಸಿದ್ಧಾಂತವಾಗಿರುವದಿಲ್ಲ; ಇತ್ತೀಚೆಗೆ ಪೃಥ್ವಿಯ ಬೇರೆ ಬೇರೆ ಭಾಗಗಳಲ್ಲಿ ಇಟ್ಟಂಗಿಯ ಮೇಲೆ ಬರೆದ ಅಕ್ಷರಗಳೂ ಬೇರೆ ಅನೇಕ ಬಗೆಯ ಪುರಾಣ ಕಾಲದ ಪದಾರ್ಥಗಳೂ ದೊರೆಯಹತ್ತಿದಂದಿನಿಂದ ಒಂದು ಬಗೆಯಿಂದ ಹೊಸ ಚರ್ಚೆಗೆ ಪ್ರಾರಂಭವಾಗಿದೆ. ಇರಲಿ, ಋಗ್ವೇದ ಮೊದಲಾದ ಆರ್ಯರ ಅತ್ಯಂತ ಪುರಾಣ ಕಾಲದ ಗ್ರಂಥಗಳನ್ನು ನೋಡಿದರೆ ಎಂಟು ಹತ್ತು ಸಾವಿರ ವರ್ಷಗಳಾಚೆ, ಸಪ್ತಸಿಂಧುವಿನ ದೇಶದಲ್ಲಿ ಅಂದರೆ ಈಗಣ ಪಂಜಾಬ ಪ್ರಾಂತದೊಳಗೆ ಎಲ್ಲಕ್ಕೂ ಮೊದಲು ಮನುಷ್ಯನು ಕಾಣಿಸಿಕೊಂಡನೆಂದು ಇತಿಹಾಸಜ್ಞರು ನಿರ್ಣಯಿಸಿದ್ದಾರೆ. ಆರ್ಯರ ವಾಸಸ್ಥಾನದ ದೆಸೆಯಿಂದ ಈಗ ಎರಡು ಮೂರು ಅಭಿಪ್ರಾಯಗಳು ಪ್ರಚಲಿತವಿರುತ್ತವೆ. ಮಧ್ಯ ಏಸಿಯವೇ ಆರ್ಯರ ಮೂಲಸ್ಥಾನವೆಂದು ಕೆಲವರೂ, ಉತ್ತರಧ್ರುವವೇ ಆರ್ಯರ ತೌರಮನೆಯಂದು ಲೋಕಮಾನ್ಯ ತಿಲಕರವರೂ, ತಮ್ಮ ತಮ್ಮ ಗ್ರಂಥ

ಗಳಲ್ಲಿ ಬರೆದಿಟ್ಟಿದ್ದಾರೆ. ನಮಗೆಂತೂ ಬಂಗಾಲದ ಶ್ರೀ. ದಾಸರೆಂಬವರು ಹೊಸದಾಗಿ ಬರೆದಂತೆ, ಆರ್ಯಾವರ್ತವೇ ಜಗತ್ತಿನ ತೌರುಮನೆಯೆಂಬುವ ಕಲ್ಪನೆಯೇ ಹೆಚ್ಚು ಪ್ರಶಸ್ತವಾಗಿ ಕಾಣುತ್ತದೆ. ಶ್ರೀ. ದಾಸರು ತಮ್ಮ *'ವೈದಿಕ ಭಾರತ'ವೆಂಬ ಪುಸ್ತಕದೊಳಗೆ ಲೋಕಮಾನ್ಯರ ಸಿದ್ಧಾಂತಗಳನ್ನೆಲ್ಲ ಖಂಡಿಸಿ ಆರ್ಯರು ಮೊತ್ತಮೊದಲು ಇಲ್ಲಿಯ ನಿವಾಸಿಗಳೆಂದೂ, ಈಗಿನ ಪಂಜಾಬ ಪ್ರಾಂತವೇ ಪ್ರಾಚೀನ ಸುಧಾರಣೆಯ ಮಾತೃಸ್ಥಾನವಾಗಿತ್ತೆಂದೂ, ಆರ್ಯರಿಂದ ಬೇರೆಯಾದ ಬೇರೆ ಬೇರೆ ಬಂಧುಗಳು ಇಲ್ಲಿಂದಲೇ ಹೊರಗೆ ಹೋಗಿ ಅಯಾ ದೇಶಗಳಲ್ಲಿ ಒಕ್ಕಲಾದರೆಂದೂ ನಾಧಾರ ಸಿದ್ಧಪಡಿಸಿದ್ದಾರೆ. ಯಾವನ ಹೃದಯದೊಳಗೆ ಆರ್ಯರ ಪವಿತ್ರವಾದ ನೆತ್ತರವು ದಡದಡನೆ ಹರಿಯುತ್ತಿರುವದೋ, ಅವನಿಗೆ ಆರ್ಯರು ಇಲ್ಲಿಯವರೇ, ಜಗತ್ತಿಗೆಲ್ಲ ಹಿಂದು ಸ್ಥಾನವೇ ಮಾತೃಭೂಮಿಯೆಂಬೀ ಸೊಲ್ಲನ್ನು ಕೇಳಿ ಆರ್ಯಭೂಮಿಯ ವಿಷಯದಲ್ಲಿ ಅವನಿಗೆಷ್ಟು ಅಭಿಮಾನವೆನಿಸುವದೋ ಅಷ್ಟು ಮಧ್ಯ ಏಸಿಯ ಅಥವಾ ಉತ್ತರಧ್ರುವವೆಂದರೆ ಅನಿಸುವದೋ? ಇದುವರೆಗೆ ಬಹುಮಟ್ಟಿಗೆ ಪಾಶ್ಚಾತ್ಯ ವಿದ್ವಾಂಸರೇ ನಮ್ಮ ಇತಿಹಾಸವನ್ನು ಬರೆಯುವ ಹಾಗು ಶೋಭಿಸುವ ಗುತ್ತಿಗೆ ಹೊತ್ತಿದ್ದರಿಂದ ನಮಗೆ ಅವರ ಮೇಲೆಯೇ ಅವಲಂಬಿಸಬೇಕಾಗಿತ್ತು; ಆದರೆ ನಮ್ಮ ಅದೃಷ್ಟದಿಂದ ಆ ಮನ್ವಂತರವೀಗ ಪಲ್ಲಟವಾಗಿದೆ; ಹಿಂದೂದೇಶದ ಪೂರ್ವನಿವಾಸಿಗಳು ಕಪ್ಪುಬಣ್ಣದವರಿದ್ದರೆಂದೂ, ಆರ್ಯರು ಶೂರರೂ, ಕೆಂಬಣ್ಣದವರಾಗಿದ್ದರೆಂದೂ, ಅವರು ಅಲೆಯುತ್ತಲೆಯುತ್ತ ಮಧ್ಯಏಸಿಯ ಅಥವಾ ಉತ್ತರಧ್ರುವದಿಂದ ಪಂಜಾಬಕ್ಕೆ ಬಂದರೆಂದೂ, ತಾವು ಆರ್ಯಬುಡಕಟ್ಟಿಗೆ ಸೇರಿದವರೆಂದೂ ಪಾಶ್ಚಾತ್ಯ ಚರಿತ್ರಕಾರರು ಪ್ರತಿಷ್ಠೆ ಕೊಚ್ಚಿಕೊಂಡು ಮೂಲ ಹಿಂದೂಜನರನ್ನು ಕಾಡುಜನರ ಗುಂಪಿಗೆ ಸೇರಿಸಲು ಪ್ರಯತ್ನಿಸಿದ್ದಾರೆ; ಆದರೆ ಶುದ್ಧ ಆರ್ಯಸಂತತಿಯವರಾದ ನಮಗೆ ಈ ತರ್ಕದಿಂದ ಸಮಾಧಾನವಾಗುವದೆಂತು? ಆರ್ಯರು ಹೊರಗಿನ ಯಾವ

* ಬಂಗಾಲದ ಶ್ರೀ. ದಾಸರು ಬರೆದಿರುವ Rig-Vedic India ಎಂಬುದನ್ನು ಈ ಬಗ್ಗೆ ನೋಡಬಹುದು.

ನಾಡಿನಿಂದಲೂ ಬಂದವರಲ್ಲ; ಅವರು ಇಲ್ಲಿಯವರೇ! ಅವರು ಉಸಿರಾಡಿಸುವ ವಾಸಿಸುವ, ಹಾಗೂ ಓಡಾಡುವ ನಾಡು "ಏಳು ಹೊಳೆಗಳ ನಾಡೇ" ಆಗಿರುತ್ತದೆಂದು ಶ್ರೀ. ದಾಸರು ಹೇಳಿದ ಸಿದ್ಧಾಂತವನ್ನು ನಾವು ಒಪ್ಪಿಕೊಂಡರೆ ನಮ್ಮ ಪರಂಪರಾಗತವಾದ ಗೌರವಕ್ಕೆ ಕಳೆ ಕಟ್ಟುತ್ತದೆ; ಮತ್ತೆ ಇದಕ್ಕೆ ಋಗ್ವೇದಾದಿಗಳಲ್ಲಿ ಬಲವಾದ ಆಧಾರಗಳೂ ಉಂಟು. ಅರ್ವಾಚೀನ ಇತಿಹಾಸಗಾರರಾದ ಶ್ರೀ. ದಾಸರು, ದುರ್ಗಮವಾದ ವೇದಗ್ರಂಥಗಳಲ್ಲಿ ಒಳಹೊಕ್ಕು, ಪ್ರಾಚೀನ ಚರಿತ್ರೆಯನ್ನು ಪರಿಶೋಧಿಸಿ, ಋಗ್ವೇದಕಾಲಕ್ಕೆ ಸಪ್ತಸಿಂಧುವಿನ ದೇಶಕ್ಕೂ ದಕ್ಷಿಣದೇಶಕ್ಕೂ ನಡುವೆ ರಜಪೂತನ್ಥಾನದ ಸಮುದ್ರವಿದ್ದುದರಿಂದ ಯಾವ ಬಗೆಯ ಹೊಕ್ಕು ಬಳಿಕೆಯು ಸಂಬಂಧವಿರಲಿಲ್ಲೆಂದೂ, ಸಪ್ತಸಿಂಧು ಪ್ರದೇಶದ ಸೀಮೆಯು ಉತ್ತರಕ್ಕೆ ಈಗಣ ಕಂದಹಾರ, ಪೂರ್ವ ತುರ್ಕಸ್ಥಾನ, ಹಾಗೂ ಬ್ಯಾಕ್ಟ್ರಿಯದ ವರೆಗೆ ಹಬ್ಬಿತ್ತೆಂದೂ ಸಿದ್ಧಗೊಳಿಸಿದ್ದಾರೆ; ಆದರೆ ಮುಂದೆ ಕಾಲಾಂತರದಿಂದ ಸೃಷ್ಟಿಯೊಳಗೆ ಉತ್ಪಾತ ವಿಪ್ಲವಗಳು ನಡೆದುದರಿಂದ ರಜಪುತನ್ಥಾನದ ಸಮುದ್ರವು ಒಣಗಿ ಹೋಗಿ ಕೆಲವು ದಿವಸಗಳಾದ ನಂತರ, ಈ ಸಂಬಂಧವು ದಕ್ಷಿಣದವರೊಡನೆ ಬೆಳೆಯುತೆಂದೂ ಸಿದ್ಧಗೊಳಿಸಿದ್ದಾರೆ.

ಆರ್ಯರ ತಿರುಗುವ ಸ್ಥಿತಿ:- ಸೃಷ್ಟಿಯು ಆರಂಭಕ್ಕೆ ಮನುಷ್ಯನು ಒಂದೆಡೆಯಲ್ಲಿ ನೆಲೆಯಾಗಿ ನಿಲ್ಲದೆ, ಅಲ್ಲಲ್ಲಿ ಗಡ್ಡೆ-ಗೆಣಸುಗಳನ್ನು ತಿಂದುಕೊಂಡು ಮರಗಳ ಹೊದರಿನಲ್ಲಾಗಲಿ, ಗಿರಿಗಹ್ವರದಲ್ಲಾಗಲಿ ವಾಸಿಸುತ್ತಿದ್ದನು; ಆದರೆ, ಕ್ರಮವಾಗಿ ಅವನ ಮನೋವಿಕಾಸವಾದಂತೆಲ್ಲ ಅವನು ಬೇಟೆಯಾಡಿ ಬೇಟೆಯಿಂದ ದೊರೆತ ಪ್ರಾಣಿಯ ಮಾಂಸದಿಂದಲೇ ತನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದನು; ಮುಂದೆ ಈ ಸ್ಥಿತಿಯೂ ಮಾರ್ಪಟ್ಟು ಮನುಷ್ಯನು ಕುರುಬರ ವೃತ್ತಿಯಿಂದ ಕುರಿಗಳ ಸಹವಾಸದೊಳಗೇ ಅಲ್ಲಲ್ಲಿ ಗುಂಪುಗಟ್ಟಿಕೊಂಡು ತಿರುಗಲಾರಂಭಿಸಿದನು; ಈ ಕುರುಬ ವೃತ್ತಿಯಲ್ಲಿ ಮನುಷ್ಯನು ತನ್ನ ಕುರಿಯ ಹಿಂಡಿಗೆ ಮೇವು ಮಿಡಚಿಯೂ, ತನಗೆ ಆಹಾರ ಸಾಮಗ್ರಿಯೂ ವಿಪುಲವಾಗಿ ಸಿಗುತ್ತಿರುವಲ್ಲಿಯೇ ತಳವೂರುತ್ತಿದ್ದನು. ತನಗೂ ತನ್ನ ಕುರಿಗಳಿಗೂ

ಅನ್ನವಿಲ್ಲದಂತಾಯಿತೆಂದರೆ ಆ ಸ್ಥಳದಿಂದ ಬೇರೆ ಸ್ಥಳಕ್ಕೆ ಹೋಗುತ್ತಿದ್ದನು. ಈ ಮೆರೇಗೆ, ಈ ದಿನ ಈ ಊರು, ನಾಳೆ ಆ ಊರು ನಾಡಿದ್ದು ಒಂದು ಹಳ್ಳಿ, ಆಚೆಯ ನಾಡಿದ್ದು ಮತ್ತೊಂದು ಹಳ್ಳಿ ಹೀಗೆ ಅಡ್ಡಾಡುತ್ತಿರುವದೇ ಅವನ ಹೋರೆಯಾಗಿತ್ತು; ಒಂದೊಂದು ಸಲ ಅವನಿಗೆ ಶಾಕಾಹಾರವು ಸಿಗದಿದ್ದರೆ, ಮಾತ್ರ ಅವನು ಈತಿಬರ್ಚಿಗಳಿಂದ ಬೇಟೆಯಾಡಿ, ಮಾಂಸಾದಿಗಳನ್ನು ಸೇವಿಸುತ್ತಿದ್ದನು; ಮತ್ತು ಮನುಷ್ಯನ ವ್ಯಾವಹಾರವೆಯಲ್ಲಿ ಹೀಗಿರುವದರ ಹೊರ್ತು ನಡೆಯುವದಿಲ್ಲ. ಆಗ್ಗೆ ಕೈಗೆ ಶಿಕ್ಕುದ್ದನ್ನು ಮನಸು ಬಂದಲ್ಲಿಯೇ ಯಾವ ತರದ ವಿಧಿನಿಷೇಧಗಳ ಕಟ್ಟಿಲ್ಲದೆ ತಿನ್ನುತ್ತಿರುತ್ತಾನೆ. ಹೀಗಾಗಿ ಅವನ ನಾಲಿಗೆಯು ಅತನ ಪ್ರಕೃತಿ ಗುಣಗಳಿಗನುಸಾರವಾಗಿ ಯಾವುದೊಂದು ಆಹಾರಕ್ಕೆ ಮನ ಸೋತರಾಯಿತು ಆ ಪದಾರ್ಥವಿಲ್ಲದೆ ಅವನ ಕೆಲಸವೇ ನಾಗುವದಿಲ್ಲ; ಈಗಣ ಪ್ರಸಂಗದೊಳಗೆ ಮನುಷ್ಯನು ತನಗೆ ಇಷ್ಟವಿರುವ ವಸ್ತುಗಳನ್ನು "ಈ ಹೊತ್ತು ಬೇಕು, ನಾಳೆ ಬೇಕು" ಎಂದು ಮುಂದಾಲೋಚನೆಯಿಂದ ಶೇಖರಿಸಿಡಲಿಕ್ಕೆ ಮೊದಲುಮಾಡುತ್ತಾನೆ. ಈ ಪ್ರಕಾರವಾಗಿ ಮನುಷ್ಯನಲ್ಲಿ ಹೊಸ ಹೊಸ ಬಯಕೆಗಳು ಮೂಡಿದ ಹಾಗೆಲ್ಲ ಅವನು ನಾನಾಬಗೆಯ ಸುಲಭವಾದ ಹಾಗೂ ಇಷ್ಟಾಪೂರ್ತಿಯ ಉಪಾಯಗಳನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನಿಸುತ್ತಾನೆ. ಇದು ಮನುಷ್ಯನ ನೈಸರ್ಗಿಕ ಸ್ವಭಾವವು; ಮತ್ತು ಮನುಷ್ಯನ ಮನಃ ಪ್ರವೃತ್ತಿಯು ಮಾರ್ಪಡುವ ವಿಷಯದಲ್ಲಿ ನಮಗೆ ಆಡಿಗಡಿಗೆ ಇದರ ಅನುಭವವು ಬಹಿದು ಕಾಣುತ್ತಿದೆ.

ಆರ್ಯರು ಒಕ್ಕಲತನಕ್ಕೆ ಮೊದಲುಮಾಡಿದುದು:–

ಗೋಪಾಲವೃತ್ತಿಯಿಂದ ಅಲ್ಲಲ್ಲಿ ಅಲೆದಾಡಿಕೊಂಡಿರುವ ಸ್ಥಿತಿಯೂ ಬೇಟೆಯಾಡುವದೂ ಆರ್ಯರಿಗೆ ತಲೆ ಬೇಸರಾಗಿ ಅವರ ಮನಸ್ಸು ವಿಕಾಸವಾಗಲಿಕ್ಕೆ ಈಗ ಮತ್ತೆ ವ್ಯಾರಂಭವಾಯಿತು; ಆದುದರಿಂದ ಈ ವೃತ್ತಿಯನ್ನು ತೊರೆದರೆ ಮತ್ತಾವುದೊಂದು ಕಸಬಿನಿಂದ ತಮ್ಮ ಜೀವನಕ್ಕೆ ಅನುವಾಗುವದೇನೋ ಎಂದು ಯೋಚಿಸಿಕೊಂಡು ಕೆಲದಿನ ಕೆಲವರು ಆ ದೃಷ್ಟಿಯಿಂದ ಪ್ರಯತ್ನಿಸಿದರು; ಮುಂದೆ ಸರಿ ಕಂಡಂತೆಲ್ಲ

ಒಕ್ಕಲತನ ವೇ ನಾಯುವನ್ನೇ ತಮ್ಮ ಜೀವನದ ಮುಖ್ಯಾಧಾರವಾಗಿಟ್ಟು ಕೊಂಡರು; ಮತ್ತು ಆ ವೇ ನಾಯಕ್ಕಾಗಿಯೇ ಅವರು ದನಕರು ಆಕಳುಗಳನ್ನು ನಾಕಿಕೊಂಡಿರಬೇಕಾಯಿತು. ಈ ಶುದ್ಧವಾದ ವೃತ್ತಿಯಲ್ಲಿರುವಾಗ ಆರ್ಯರಿಗೆ ಆಕಳು, ಎತ್ತು ಇವೆರಡೂ ಅತಿಶಯ ಪ್ರಿಯತಮವಾದ ಪ್ರಾಣಿಗಳಾದವು. ಮನುಷ್ಯನ ದೇಹವನ್ನೂ, ಬುದ್ಧಿಯನ್ನೂ ಪೋಷಿಸುವಂಥ ಅಮೃತತುಲ್ಯವಾದ ರಸವನ್ನಿತ್ತು, ಮನುಷ್ಯಕೋಟಿಗೇನೇ ಜೀವನಪ್ರದವಾಗಿರುವದರಿಂದ ಆಕಳೆಂದರೆ ಭೂಲೋಕದೊಳಗೆ ಓಡಾಡುವ ದೇವತೆಯೆಂದು ಆರ್ಯರು ತಿಳಿದಿರುವಲ್ಲಿ ನೋಜಿಗವೇನು? ಅದರಂತೆಯೇ ತಮ್ಮ ಹೊಲಗದ್ದೆಗಳ ವೇ ನಾಯಕ್ಕೆ ಎತ್ತು ಎಸ್ಟೊಂದು ಅನುಪಮವಾದ ಸಹಕಾರಿಯಾಗಿರುವದೆಂಬದರ ಮರ್ಮವನ್ನು ಅರಿತುಕೊಂಡು ಅದನ್ನು ಅವರು ವೇವಕ್ಕಿಂತ ಮೇಲೆಂದೆಣಿಸಿದರು. ಹೀಗೆ ಆಕಳಲ್ಲಿ ಎದ್ದುಕಾಣುವಂಥ ಸಭ್ಯತೆಯನ್ನೂ ಶ್ರಮವಿಲ್ಲದೆ ಈಲಾಗುವ ಗುಣವನ್ನೂ, ವೇ ನಾಯಕ್ಕಾಗಿ ಎತ್ತಿನಿಂದಾಗುವ ಹೆಚ್ಚಿನ ಪ್ರಯೋಜನವನ್ನೂ ಅರಿತವರಾಗಿ, ಇವೆರಡರ ಬಗ್ಗೆ ಅವರಲ್ಲಿ ಬರಬರುತ್ತಾ ಅದರಾತಿಶಯವುಂಟಾಗಲಿಕ್ಕೆ ಕಾರಣವಾಯಿತು. ಆರ್ಯರ ಈ ಆದರವು ಬೆಳೆಯುತ್ತ ನಡೆದು ಕೊನೆಗೆ ಆಕಳನ್ನು ದೇವರೆಂದು ಪೂಜಿಸುವವರೆಗೆ ಮುಟ್ಟಿತು. ಈ ಕಾಲದಲ್ಲಿ ಆರ್ಯರಿಗೆ ಗೋವುಗಳ ಹಿಂಡು (ಗೋಧನ) ನೇ ದೊಡ್ಡದೊಂದು ಸಂಪತ್ತೆಂದೆನಿಸಿತು. ಯಾವಾತನ ಬಳಿ ನಾನಿರಾರು ಆಕಳ ಹಿಂಡು ಇರುವದೋ ಅವನೇ ಶ್ರೀಮಂತನೆಂದು ತತ್ಕಾಲಕ್ಕೆ ಎಲ್ಲರ ಭಾವನೆಯಾಯಿತು. ಒಕ್ಕಲತನದ ರುಚಿ ಹತ್ತಿದ್ದರಿಂದ ದಟ್ಟವಾದ ಅರಣ್ಯಗಳನ್ನು ಕಡಿದು ನದಿಗಳಗುಂಟ ಸಣ್ಣಪುಟ್ಟ ಹಳ್ಳಿಗಳನ್ನು ಕಟ್ಟಿಕೊಂಡು ಇರಲಾರಂಭಿಸಿದ್ದರಿಂದ ನೋಗವಾದ ಊರುಗಳಿಂದಲೂ, ಅವುಗಳ ನೆರೆಹೊರೆ, ಸುತ್ತುಮುತ್ತು ಹಚ್ಚನ್ನ ಬೆಳೆಗಳಿಂದ ತುಂಬಿದ ಹೊಲಗದ್ದೆಗಳಿಂದಲೂ ಭೂದೇವಿಯು ಹೊಳೆಯುತ್ತಿದಳು; ಕಾಡುವೃತ್ತಿಯಿಂದ ಕುರುಬರ ಕಸಬು ಮಾಡುತ್ತಿರುವಾಗಿನ ಅವರ ಮನಃಸ್ಥಿತಿಯು ಈಗ ಬದಲಾದ್ದರಿಂದ ತಮಗೆ ಹೊತ್ತುಹೊತ್ತಿಗೆ ಮಳೆ, ಬೆಳೆ, ಪೈರುಗಳನ್ನು ಕೊಡುವಂಥ ಪರ್ಜನ್ಯರಾಜನೂ ಭೂ

ದೇವಿಯೂ, ಬೆಳಕು ಕೊಡುವ ಸೂರ್ಯನೂ, ಅಗ್ನಿಯೂ ಆರ್ಯರಿಗೆ ಜೀವಂತ ದೇವತೆಗಳಂತೆ ಕಾಣಿಸಿದರು.

ಆರ್ಯರಲ್ಲಿ ಎರಡು ಪಂಗಡಗಳು:— ಇದುವರೆಗೆ ಬೇಟೆಯಾಡಿ ಕೇವಲ ಹಿಂಸೆಯಿಂದಲೇ ಉಪಜೀವನ ಮಾಡಿಕೊಂಡು ಇದ್ದಂಥ ಆರ್ಯರಲ್ಲಿ ಅವರವರ ಮನಃಪ್ರವೃತ್ತಿ, ವಾಸನೆಗಳಿಗೆ ಅನುಸಾರವಾಗಿ ಎರಡು ಬಣಗಳಾದವು. ಒಬ್ಬರು ಬೇಸಾಯದಿಂದ ಜೀವಿಸಿ ಆಕಳುಗಳನ್ನು ಕಟ್ಟಿಕೊಂಡು ಮನೆಮಾಡಿಕೊಂಡಿರುವವರು; ಮತ್ತೊಬ್ಬರು ಬೇಟೆಯ ವೃತ್ತಿಯಿಂದಲೇ ಅಲ್ಲಲ್ಲಿ ತಮ್ಮ ಜನರನ್ನು ಹಿಂಸಿಸುತ್ತಲೂ, ಸುಲಿಯುತ್ತಲೂ ಜೀವಿಸುವವರು. ಇವರಲ್ಲಿ ಮೊದಲನೆಯವರೇ ಆರ್ಯರು; ಎರಡನೆಯವರೇ ದಸ್ಯುಗಳು, ಅಥವಾ ದಾಸರು. ಇಲ್ಲಿಯ ತನಕ ಒಂದೇ ವೃತ್ತಿಯಿಂದಿದ್ದು ಒಕ್ಕಟ್ಟಾಗಿರುವ ಆರ್ಯರಲ್ಲಿ ಇಬ್ಭಾಗಗಳಾಗಿ, ವೈರಕ್ಕೂ ದ್ವೇಷಕ್ಕೂ ಮೊದಲಾಯಿತು. ತಮ್ಮ ಬಂಧುಗಳಾದ ಆರ್ಯರು ನಾಗರಿಕತೆಯ ದಾರಿಯನ್ನು ಹಿಡಿದು ನಡೆದಿರುವದು ದಾಸರಿಗೆ ಹೇಯವೆನಿಸಿ, ಅವರು ಸುಖಸಮಾಧಾನದಿಂದ ಒಕ್ಕಲತನ ನಡಿಸಿಕೊಂಡು ಬಾಳ್ವೆ ನಡಿಸಿರುವ ಆರ್ಯರ ಬಿಡಾರಕ್ಕೆ ಹೋಗಿ, ಅವರ ಗೋವುಗಳನ್ನೂ, ದನಕರುಗಳನ್ನೂ ಸುಲಿಯತೊಡಗಿದರು. ಹೀಗೆ ತಮ್ಮ ಮನೆಯಲ್ಲೆಯೇ, ತಮ್ಮವರೇ ತಮ್ಮ ಪಾಲಿಗೆ ದಾಳಿಗಾರರಾಗಿ ಪರಿಣಮಿಸಿದ್ದರಿಂದ ಕಂಟಕರಾದ ದಸ್ಯುಗಳನ್ನು ಹೊಡೆದಟ್ಟಲಿಕ್ಕೆಂದೇ ಹಲವು ದಿನಗಳ ವರೆಗೆ ಆರ್ಯರು ಚಿಂತೆ ಕಟ್ಟಿಕೊಂಡು ನಿಂತಿದ್ದರೆಂಬುದೂ ಅದಕ್ಕಾಗಿ ಅವರು ಇಂದ್ರನಿಗೆ ಶರಣು ಹೋಗಿರುವದೂ, ಋಗ್ವೇದದೊಳಗಿನ ಅನೇಕ ಋಕ್ಕುಗಳಿಂದ ಸ್ಫುಟವಾಗುತ್ತದೆ. ಅವರೊಳಗಿನ ಹಲವರು ಆರ್ಯರ ನಡೆನುಡಿಗಳಿಗೂ ಅವರ ಸುಧಾರಣೆಗೂ ಒಪ್ಪಿ, ತಮ್ಮ ದುಷ್ಟ ನಡತೆಯನ್ನು ಬಿಟ್ಟದ್ದರಿಂದ ಅವರನ್ನೂ ಆರ್ಯರು ತಮ್ಮೊಳಗೇ ಸೇರಿಸಿಕೊಂಡರು.

ಆರ್ಯರು ಸರಸ್ವತೀ ದಂಡೆಯಲ್ಲಿ ಮನೆಕಟ್ಟಿಕೊಂಡುದು– ಆರ್ಯರಿಗೆ ಒಕ್ಕಲತನದ ಕಸಬು ಮೇಲೆಂದೆನಿಸಿ, ಅದನ್ನೇ ಆಶ್ರಯಿಸಿಕೊಂಡು ಸ್ಥಿರವಾಗಿರಲಿಕ್ಕೆ ಒಂದು ಸ್ಥಳವು ಬೇಕಷ್ಟೇ? ಈ ಸಮ

ಯಕ್ಕೆ ಆರ್ಯರಿಗೆ ಬಂದೆಡೆ ನೆಲೆಯಾಗಿ ನಿಲ್ಲದೆ ಬೇರೆ ಗತಿಯಿಲ್ಲದ್ದರಿಂದ, ಅಲೆದಾಟವನ್ನು ಬಿಟ್ಟು, ಪ್ರಾರಂಭಕ್ಕೆ ಅವರು ದೇವನಿರ್ಮಿತ ದೇಶವೆಂದು ಖ್ಯಾತಿವಡೆದ ಸಪ್ತಸಿಂಧು ದೇಶವನ್ನೇ ತಮ್ಮ ತಾಯ್ನಾಡೆಂದು ಬಗೆದು ಆ ಪ್ರದೇಶದೊಳಗೆ ತಮಗೆ ಅನುಕೂಲವಾಗಿರುವ ನೀರುಳ್ಳ ಸ್ಥಳಗಳಲ್ಲೆಲ್ಲ ನೆಲೆಸಿದ್ದರು. ಆರ್ಯರ ಪ್ರಾಣವೇ ಆದ ಇಂದ್ರನು ಆರ್ಯರಿಗೆ ಈ ದೇಶವನ್ನು ಮನೆ ಕಟ್ಟಲಿಕ್ಕೆ ಕೊಟ್ಟು, ಅವರಿಗಾಗುವ ತೊಂದರೆಗಳನ್ನು ನಿವಾರಿಸಿದನಂತೆ! ಹೀಗೆ ವಾಸವಾಗಿರುವ ಸ್ಥಳಗಳಲ್ಲಿ ಸರಸ್ವತೀನದಿಯ ದಂಡೆಯು ಆರ್ಯರಿಗೆ ಅತ್ಯಂತ ಪ್ರೀತ್ಯಾಸ್ಪದವಾದ ಸೀಮೆಯಾಯಿತು. ಮಕ್ಕಳು ತಾಯಿಯನ್ನು ಅಪ್ಪಿಕೊಳ್ಳುವಂತೆ ಆರ್ಯರು ಸರಸ್ವತಿಯ ತೀರವನ್ನು ಬಿಟ್ಟು ಹೋಗಲಾರೆವೆಂದು ಬಹುಪರಿಯಾಗಿ ಮೊರೆಯಿಟ್ಟಿದ್ದಾರೆ. ಈವರೆಗೆ ಕಾರುಡರಂತೆ ಅಯುಷ್ಯವನ್ನು ಕಳೆಯುತ್ತಿದ್ದಂಥ ಆರ್ಯರು ಸರಸ್ವತಿಯ ತೀರಕ್ಕೆ ಬಂದು ಬಾಳ್ವೆಮಾಡಿಕೊಂಡಿದ್ದಿಡನೆ, ಸರಸ್ವತಿಯ ಪ್ರಭಾವದಿಂದ ವಿಲಕ್ಷಣವಾದುದೊಂದು ಚೈತನ್ಯದ ವಿದ್ಯುತ್ ಪ್ರವಾಹವು ಅವರ ಮೈಯಲ್ಲಿ ಪ್ರವೇಶಿಸಿತು. ತಾಯಾದ ಸರಸ್ವತಿಯ ಪವಿತ್ರವಾದ ಶುದ್ಧೋದಕವು ಆರ್ಯರ ಮೈಯನ್ನು ತೊಳೆದು ಶುದ್ಧಗೊಳಿಸಿದ್ದಲ್ಲದೆ, ಅವರ ಮನಸ್ಸು ಬುದ್ಧಿಗಳಲ್ಲಿಯೂ ಹೊಕ್ಕು ಅಲ್ಲಿ ಚೈತನ್ಯಕಿರಣಗಳನ್ನು ಮೂಡಿಸಿತು. ಕಗ್ಗತ್ತಲೆಯಲ್ಲಿ ತಬ್ಬಿಬ್ಬಾಗಿ ಅಲೆದಾಡುವ ಆರ್ಯರಿಗೆ ಈಗಾದ ಆನಂದಾತಿರೇಕವನ್ನು ನಾವು ಬಣ್ಣಕಟ್ಟಿಗೆಯು ಲೆಕ್ಕಣಿಕೆಯಿಂದ ಏನೆಂದು ಬಣ್ಣಿಸೋಣ? ಕಬ್ಬಿಣದ ಕೊಳತೆಯಂತಿರುವ' ಸರಸ್ವತಿಯ ದಂಡೆಗೆ ಆಸರಕ್ಕಾಗಿ ಎಂದಂದಿನಿಂದ ಮೊದಲಿನ ಆರ್ಯರು ಸಂಪೂರ್ಣವಾಗಿ ಪಲ್ಲಟತೊಂದಿರರು; ಮುಂದೆ ಸರಸ್ವತಿಯ ದಂಡೆಯ ಮೇಲೆಯೇ ಆರ್ಯರು ಮಹಾ ಮಹಾ ಯಾಗಗಳನ್ನು ಮಾಡಿದರು. ಸರಸ್ವತಿಯ ದಂಡೆಯಮೇಲೆ ಸ್ನಾನ ಮಾಡಿದೊಡನೆ, ಆರ್ಯರ ಬಾಯಿಯಿಂದ ಸರಸ್ವತಿಯ ಮಹಿಮಾವಿಶೇಷವಾದ ಋಕ್ಕುಗಳು ತಾವಾಗಿಯೇ ಒಡೆದು ಬಂದವು. ಸರಸ್ವತಿಯ ಮಹಿಮೆಯನ್ನು ಕೃತಜ್ಞತೆಯಿಂದ ಹೊಗಳಿ ಹಾಡುತ್ತಿರುವಾಗ್ಗೆ ಸರಸ್ವತಿಯ ಭಕ್ತರಾದ ಆರ್ಯರ ಗಂಟಲ ಶಿರಗಳು ಬಿಗಿದು, ಮೈಯೆಲ್ಲ

ಆನಂದರೋಮಾಂಚಗಳಿಂದ ಪುಳಕಾಂಕಿತವಾಗಿ, ಎನ್ನೋ ಒಂದು ಅನಿರ್ವಚನೀಯವಾದ ಆನಂದವೂ, ಅದರೊಡನೆ ಬುದ್ಧಿಪ್ರಭೆಯೂ, ಅವರಲ್ಲಿ ಮೂಡಲು ಪ್ರಾರಂಭವಾಯಿತು. ಈ ಆನಂದಸಮುದ್ರದೊಳಗೆ ಓಲ್ಯಾಡುತ್ತಿರುವಾಗ ಮೈಮರೆತು "ಅಹಹ! ಅಚೇತನದಲ್ಲಿ ಚೈತನ್ಯವನ್ನುಂಟು ಮಾಡಿ, ರೂಪವಿಲ್ಲದ್ದಕ್ಕೆ ರೂಪಗೊಟ್ಟು ನೀನು ಉಷೆಯೊಡನೆ ಜನಿಸಿದೆ" ಎಂದು ಸರಸ್ವತೀದೇವಿಯನ್ನು ಕಣ್ಮುಂದೆ ಇರಿಸಿಕೊಂಡು ಅವಳೊಡನೆ ಮಾತಾಡುತ್ತಿರುವರೇನೋ ಎಂಬುವಷ್ಟರ ಮಟ್ಟಿಗೆ ಸರಸ್ವತೀನದಿಯೊಡನೆ ಒಂದಾಗಿ ಹೋಗಿದ್ದಾರೆ. ಆರ್ಯರು ಸ್ತುತಿಸಿದ ಸರಸ್ವತೀನದಿಯ ಋಕ್ಕುಗಳು ಉಜ್ವಲವಾದ ಭಾವನೆಯಿಂದಲೂ, ನಿರ್ಮಲವಾದ ಭಕ್ತಿಯಿಂದಲೂ, ಮಕ್ಕಳು ತಾಯಿಯ ಉಪಕಾರವನ್ನು ನೆನೆನೆನೆದು ಹಂಬಲಿಸುವಂತಿವೆ! ಸರಸ್ವತೀ ನದಿಯನ್ನು ಕಂಡಾಗುವ ಆರ್ಯರ ಆನಂದವು ಮೇರೆದಪ್ಪಿದೆ. ಈ ಋಕ್ಕುಗಳು ಈಗಲೂ ಮುಂಜಾವಿನ ತಂಗಾಳಿಯಂತೆ ಜೀವನಪ್ರದವಾಗಿರುತ್ತವೆ. ಸರಸ್ವತೀ ನದಿಯಂತೆ, ಸಿಂಧು ನದಿಯ ದಂಡೆಯಲ್ಲಿಯೂ ಆರ್ಯರು ಮನೆ ಕಟ್ಟಿಕೊಂಡಿದ್ದರು. ಅವರಿಗೆ ಸಿಂಧುನದಿಯೂ, ತನ್ನ ಪ್ರವಾಹದ ಅಬ್ಬರದಿಂದಲೂ, ಮೈಹುರಿಗೆಳಿಸುವಂಥ ನೀರಾಟದಿಂದಲೂ, ಶರೀರಕ್ಕೂ ಮನಸಿಗೂ ಅತ್ಯಂತ ಸ್ಫೂರ್ತಿಯನ್ನುಂಟು ಮಾಡುವವಾಗಿತ್ತು. ಸರಸ್ವತಿಯ ಉಪಾಸನೆಯಿಂದಲೂ, ಪ್ರಾರ್ಥನೆಯಿಂದಲೂ, ಸರಸ್ವತಿಯ ದಂಡೆಯ ಆರ್ಯರು ಪ್ರಜ್ಞೆಯಲ್ಲಿಯೂ, ದಿವ್ಯಜ್ಞಾನದಲ್ಲಿಯೂ, ಮಿಗಿಲಾಗಿರುವಂತೆ, ಸಿಂಧು ದಂಡೆಯವರು ಮೈಕಟ್ಟಿನಲ್ಲಿಯೂ, ದೇಹದಾರ್ಢ್ಯದಲ್ಲಿಯೂ, ಜಟ್ಟಿಗಳಾಗಿ ಮೆರೆಯುತ್ತಿದ್ದರು. ಸಿಂಧುನದಿಯನ್ನು ಕುರಿತು ಆರ್ಯರು ಹಾಡಿದ ಋಕ್ಕುಗಳು ತೀರ ವೀರ್ಯಪ್ರದವಾಗಿವೆ. ಆರ್ಯರಲ್ಲಿ ಶುದ್ಧ ತೇಜವು ಉಕ್ಕುತ್ತಿದ್ದುದರಿಂದ ಅವರಿಗೆ ಏನು ಕಾಣಿಸಿದರೂ, ಅವರ ಮನಸಿಗೂ, ಬುದ್ಧಿಗೂ ದೇವರಂದೇ ತೋಚುತ್ತಿದ್ದಿತು. ಈ ರೀತಿಯಾಗಿ ಸಾವಿರಾರು ವರ್ಷಗಳಾಚೆ ಯಾವ ಸೂರ್ಯನು ಆರ್ಯರಿಗೆ ಬೆಳಕು ಕೊಡುತ್ತಿದ್ದನೋ, ಯಾವ ಸಿಂಧು ಸರಸ್ವತೀನದಿಗಳು ಅವರ ಮುಂದೆ ಹರಿಯುತ್ತಿದ್ದವೋ, ಯಾವ ಭೂದೇವಿಯಿಂದ ಧಾನ್ಯ ಫಲಗಳನ್ನು ಪಡೆ

ಯುತ್ತಿದ್ದರೋ, ಯಾವ ಮುಗಿಲಿನ ನೆರಳಿನಲ್ಲಿರುತ್ತಿದ್ದರೋ, ಅದೇ ಸೂರ್ಯ, ಅವೇ ನದಿಗಳು, ಅದೇ ಭೂದೇವಿ, ಅದೇ ಆಕಾಶ ಮೊದಲಾದವುಗಳನ್ನು ನಾವು ದಿನಾಲು ನೋಡುತ್ತೇವೆ, ಅವುಗಳಿಂದ ಬೇಕಾದ ಸುಖಾನುಭವಗಳನ್ನು ಪಡೆಯುತ್ತೇವೆ. ಆದರೆ ನಮ್ಮ ಬುದ್ಧಿಯು ಎಂದಾದರೂ ಸಂತೋಷದಿಂದ ಹಾರಾಡುವದೋ? ಇಲ್ಲ. ಅದೇಕೆ? ಸಾವಿರಾರು ವರ್ಷಗಳಿಂದ ದುಡಿದುಡಿದು ಸೂರ್ಯ, ಅಗ್ನಿ, ವಾಯು, ಆಕಾಶ ಮೊದಲಾದ ದೇವತೆಗಳಿಗೆ ಮುಪ್ಪು ಬಂದಿರುವದರಿಂದ ಹೀಗಾಗಿರುವದೇ? ಛೇ! ಛೇ!! ನಮ್ಮಲ್ಲಿಯೇ ಜೀವ, ತೇಜಸ್ಸುಗಳ ಬಲವು ಕುಂದಿ ಕುಂದಿದ ಮೇಲೆ ನಮಗೆ ಅವುಗಳಿಂದ ಆನಂದವಾಗುವ ಬಗೆಯೆಂತು? ಈಗಲೂ ಸೂರ್ಯ, ಅಗ್ನಿ ಮೊದಲಾದ ದೇವತೆಗಳು ನಮ್ಮನ್ನು ಉಜ್ಜೀವನಗೊಳಿಸಲಿಕ್ಕೆಂದೇ ಸಜ್ಜಾಗಿದ್ದಾರೆ; ಆದರೆ ನಾವು ಅವರನ್ನು ಲಕ್ಷಿಸಿದಾಗಲ್ಲವೇ ನಮ್ಮಲ್ಲಿ ಅವರ ಜ್ಞಾನ ಕಿರಣಗಳು ಮೂಡುವದು? ಅವು ಅಟ್ಟದ ಮೇಲೆ ಕರ ಬೆಟ್ಟದ ಮೇಲೆಂಬುವಂತೆ ನಮ್ಮ ಹಾಡಾದರೆ ಅದಕ್ಕ್ಯಾರೇನು ಮಾಡುವದು? ಸಿಂಧುನದಿಯು ಪ್ರಭಾವವೆಂತಹದೋ? ಆ ಕಾಲದಲ್ಲಿ ಸಿಂಧುನದಿಯ ದಂಡೆಯ ಕುದುರೆಗಳು ಸಹ ಮೈಕಟ್ಟಿನಲ್ಲಿ ಭವ್ಯವಾಗಿಯೂ, ಬಲದಲ್ಲಿ ಮಿಗಿಲಾಗಿಯೂ ಇದ್ದವಂತೆ! ಸಿಂಧುನದಿಯ ಫಲವತ್ತಾದ ನೀರನ್ನುಂಡು ಕಸುವಿನಿಂದ ಬೆಳೆಯುವ ಹತ್ತಿಯ ಗಿಡಗಳು ಆ ಕಾಲಕ್ಕೆ ಒಳ್ಳೇ ಹೆಸರಾಗಿದ್ದು, ಅದರಿಂದಾಗುವ ನಯವಾದ ಕೈಗಾರಿಕೆಯ ವಸ್ತ್ರಗಳಿಗೆ 'ಸಿಂಧು ಬಟ್ಟೆ' ಗಳೆಂದು, ಅವುಗಳನ್ನು ಕಂಡರೆ ಬೆಬಿಲೋನಿಯಾ, ಸೀರಿಯಾ ಮೊದಲಾದ ಪ್ರಾಚೀನ ಪೌರ್ವಾತ್ಯ ಜನಾಂಗದವರು ಎಂದೂ ಹಾಗೇ ಬಿಡುತ್ತಿರಲಿಲ್ಲ. ಭರತಖಂಡಕ್ಕೂ ಮೊದಲಿನ ಭರತವರ್ಷ ಮೊದಲಾದ ಹೆಸರುಗಳು ಅಡಗಿ, ಅವುಗಳಿಗೆ ಬದಲಾಗಿ ಹಿಂದೂದೇಶವೆಂಬ ಹೆಸರು ಬಂದಿರುವದೂ ಸಿಂಧುದೇಶದಿಂದಲೇ! ಈ ವಿಧವಾಗಿ ಮೇಲಿನ ಸರಸ್ವತೀ ಹಾಗೂ ಸಿಂಧುನದಿಗಳೂ ಬರಿಯ ಹರಿಯುವ ಜಲಪ್ರವಾಹಗಳಾಗಿರದೆ, ಓಜಸ್ಸು ಹಾಗೂ ಬಲಗಳಿಂದ ಕೂಡಿದ ಪ್ರಾಚೀನ ಆರ್ಯ ಸಂಸ್ಕೃತಿಯೆಂಬ ಪುಣ್ಯ ಪ್ರವಾಹದ ಉಗಮಸ್ಥಾನಗಳಾಗಿರುತ್ತವೆ. ಸರ

ಸ್ವತೀ ದಂಡೆಯು ಹೆಸರಿಗೆ ತಕ್ಕಂತೆ, ಮನುಷ್ಯನ ಜೀವಮಾನದ ಗುಟ್ಟನ್ನು ಬಿಚ್ಚಿಯುವಂಥ ಜ್ಞಾನದ ತೌರೂರಾಗಿತ್ತು. ಆ ತಾಯಿಯು ನಮ್ಮ ಮುತ್ತಾತರಿಂದಾದ ಆರ್ಯ ಋಷಿಗಳ ಮೆದುಳಿಗೆ ಸ್ಫುರಣ ಕೊಟ್ಟು, ಅವರನ್ನು ಊರ್ಜಸ್ವಲರನ್ನಾಗಿ ಮಾಡಿದಳು; ಮತ್ತು ಸಿಂಧುವು ಆರ್ಯರ ಒಕ್ಕಲತನ, ಕೈಗಾರಿಕೆಗಳನ್ನು ಬೆಳಿಸಿ ಅವರನ್ನು ಪ್ರಬಲ ಗೊಳಿಸಲಿಕ್ಕೆ ಬಲವೀರ್ಯಾದಿ ಸಂಪತ್ತನ್ನು ಒದಗಿಸಿ ಕೊಟ್ಟಿತು: ಹೀಗೆ ಆರ್ಯರಲ್ಲಿ ಕರ್ಮ ಹಾಗೂ ಜ್ಞಾನ ಇವೆರಡೂ ಒಂದಕ್ಕೊಂದು ಜೊತೆ ಗೊಂಡು ಸಾಗಿದ್ದರಿಂದ ಅವರು ವೈಭವಕ್ಕೆ ಏಡರಿದರು. ತನ್ನ ಕೈಯಿಂದ ತಾನೇ ಒಂದು ಮಣ್ಣಿನ ಮೂರ್ತಿಯನ್ನು ಮಾಡಿ, ಅದರೊಳಗೆ ಚೈತನ್ಯ ವನ್ನು ಪ್ರತಿಷ್ಠಾಪನೆಗೊಳಿಸುವಂತೆ, ಭಗವಂತನು ಜಗದಾದಿಯಲ್ಲಿ ಮನುಷ್ಯನನ್ನು ತನಗೆ ಬೇಕಾಗಿ ತಾನೇ ಹುಟ್ಟಿಸಿ, ತನ್ನ ದಿವ್ಯ ಅಂತಃಶಕ್ತಿಯಿಂದ ಸರಸ್ವತೀ ಹಾಗೂ ಸಿಂಧುಗಳ ರೂಪದಿಂದ ಚೈತನ್ಯವನ್ನೂ, ಬಲವನ್ನೂ ನೆಲೆಗೊಳಿಸಿ, ಆರ್ಯರ ಅಮರವಾದ ಸಂಸ್ಕೃತಿಯ ಹಾಗೂ ಧರ್ಮದ ಅಡಿಗಲ್ಲನ್ನು ಇಟ್ಟುದಕ್ಕಾಗಿ, ಅತಸಲ್ಲೆ ಆರ್ಯರ ವಿಷಯವಾಗಿ ಎಷ್ಟೆಂದು ಪ್ರೇಮವು ವ್ಯಕ್ತವಾಗುತ್ತದೆ!

ಆರ್ಯರ ಬಾಳುವೆ:- ಇದುವರೆಗೆ ತಿರಿತಿರಿಗಿ ಜೀವನ ಮಾಡುತ್ತಿರುವಂಥ ಆರ್ಯರಿಗೆ ಈಗ ಸಿಂಧು ಸರಸ್ವತಿಗಳಂಥ ಪವಿತ್ರವಾದ ಪ್ರದೇಶಗಳು ಒಕ್ಕಲಾಗಿರಲಿಕ್ಕೆ ದೊರೆತದ್ದರಿಂದ, ಇದೀಗ ಆರ್ಯರ ಧಾರ್ಮಿಕ ಏಳ್ಗೆಗೆ ಕಲ್ಪನಾತೀತವಾದ ಚಾಲನೆಯನ್ನುಂಟು ಮಾಡಿತು; ಆರ್ಯರು ಒಂದೇ ಬುಡಕಟ್ಟಿಗೆ ಸೇರಿದವರಾಗಿದ್ದರೂ, ಬರುಬರುತ್ತ ಕೆಲವರಲ್ಲಿ ಮತಭೇದಗಳಾಗುತ್ತ ನಡೆದವು; ಅಣ್ಣತಮ್ಮಂದಿರು ಪ್ರೌಢರಾದಂತೆಲ್ಲ ಅವರವರ ಭಿನ್ನ ಭಿನ್ನ ಸ್ವಭಾವಧರ್ಮಗಳಿಗೆ ತಕ್ಕಂತೆ, ಅವರಲ್ಲಿ ಮತ ವೈಚಿತ್ರ್ಯವು ದೃಗ್ಗೋಚರವಾಗುವಂತೆ ಇಲ್ಲಿಯ ತನಕ ಆರ್ಯ ಹಾಗೂ ದಸ್ಯುಗಳೆಂಬೆರಡೇ ಪ್ರಭೇದಗಳಿರುವ ಆರ್ಯರಲ್ಲಿ ಪಾನೀಸರು, ಇರಾಣಿಯರು ಎಂಬೆರಡು ಕೆಂಬೆಗಳಾದವು.

೩ನೇ ಪ್ರಕರಣ.

ವೈದಿಕ ಆರ್ಯರ ಸೃಷ್ಟಿಯ ಉಪಾಸನೆ.

ಇಂದ್ರ ದೇವರು:- ಆರ್ಯರ ಮನಸ್ಸು ವಿಕಾಸಗೊಂಡಂತೆಲ್ಲ ಆರ್ಯರ ಕಣ್ಣುಗಳಿಗೆ ಸೃಷ್ಟಿಯು ಭಗವದ್ರೂಪವಾಗಿ ಪರಿಣಮಿಸಿತು. ಇಂದ್ರ, ಚಂದ್ರ, ಸೂರ್ಯ, ವಾಯು, ಅರುಣ, ವರುಣ, ಆಕಾಶ, ಅಗ್ನಿ, ಇವುಗಳೆಲ್ಲ ಅವರಿಗಾಗಿಯೇ ಬೇಕಾದ ವರಗಳನ್ನು ನೀಡಲಿಕ್ಕೆ ಕೈ ಎತ್ತಿಕೊಂಡು ನಿಂತಿರುವ ಕಣ್ಮುಂದಾಡುವ ದೇವತೆಗಳಂತೆ ಕಾಣಿಸಿದವು. ಈ ದೇವತೆಗಳಲ್ಲಿ ಇಂದ್ರನೆಂದರೆ ಆರ್ಯರ ಪ್ರಾಣ. ಅದೇ ತಾನೇ ಮಾತೆಯುದರದಿಂದ ಹೊರಬಿದ್ದು ಕಣ್ತೆರೆದು ಜಗತ್ತನ್ನು ನೋಡುವ ಮಗುವಿಗೆ ಹೇಗೆ ಸೃಷ್ಟಿಯನ್ನು ಕಂಡರೆ, ಏನೋ ಒಂದು ವಿಧದ ಆಶ್ಚರ್ಯವೂ, ಆನಂದವೂ, ಸ್ವಾಭಾವಿಕವಾಗಿಯೇ ಉಕ್ಕಿ ಬಂದು, ಆನಂದದ ಅಲೆಗಳು ಹೊರಚಲ್ಲುವವೋ, ಹಾಗೆಯೇ ಭಗವಂತನಿಂದ ಕಟ್ಟಲ್ಪಟ್ಟ ಈ ಸೃಷ್ಟಿಯ ಬಗ್ಗೆ ಆರ್ಯರಿಗೆ ಆನಂದವಾಗಿ ಸೃಷ್ಟಿದೇವತೆಯನ್ನು ಕಂಡು, ಕುಣಿಕುಣಿದಾಡಿ, ಅವಳ ಮಹಾತ್ಮೆಯನ್ನು ತಮ್ಮ ಹೊರಸೂಸುವ ವೈದಿಕ ನುಡಿಗಳಿಂದ ಮನದಣಿಯುವಂತೆ ಹಾಡಿದ್ದಾರೆ. ಕಣ್ಮುಂದಿರುವ ತಂದೆತಾಯಿಗಳಿಗೆ ಚಿಕ್ಕ ಮಕ್ಕಳು 'ನನಗೆ ಅದು ಕೊಡು ಇದು ಕೊಡೆಂದು' ಅಚ್ಚೆಯಿಂದ ಕಾಡಿ ಬೇಡುವಂತೆ, ಆರ್ಯರು 'ನಮಗೆ ದುಡ್ಡು ಕೊಡು, ನಮಗೆ ವೈಭವ ಕೊಡು' ಎಂದು ಮುಂತಾಗಿ ಸ್ವೇಚ್ಛೆಯಾಗಿ ಸ್ತುತಿ ಮಾಡಿದ್ದಾರೆ. ಋಗ್ವೇದದೊಳಗಿನ ಬಹು ಭಾಗವು ಈ ತೆರದ ಸ್ತುತಿಗಳಿಂದಲೇ ತುಂಬಿದೆ. ತಮ್ಮ ಮೇಲೆ ದಾಳಿಯಿಡುವ ವೃತ್ರನಿಂದಲೂ ಶತ್ರುಗಳಿಂದಲೂ ಕಾಪಾಡಲಿಕ್ಕೂ ಆರ್ಯರು ಹಲವು ಸಾರೆ ಇಂದ್ರನಿಗೆ ದೀನರಾಗಿ ಮೊರೆ ಹೊಕ್ಕಿದ್ದು, ಉತ್ಸಾಹಿಯಾದ ಇಂದ್ರನು ತನ್ನ ವಜ್ರದಿಂದ ಧರ್ಮಲಂಡ

ರಾದ ದಸ್ಯುಗಳ ಕಪ್ಪು ತೊಗಲನ್ನು ಸುಲಿದು, ಸುಟ್ಟುಬಿಟ್ಟಿದ್ದಾನೆ. ಇಂದ್ರನು ತಮ್ಮನ್ನು ಎಂತೆಂತಹ ಕಷ್ಟಪ್ರಸಂಗದೊಳಗೆ ಅನಿಷ್ಟ ನಿವಾರಣೆಗೊಳಿಸಿ ತಮ್ಮನ್ನು ಪಾರುಮಾಡಿದನೆಂಬುದನ್ನು ಬಹು ಸ್ಪಾರಸ್ಯವಾಗಿ ಹೇಳಿದ್ದಾರೆ. ಇಂದ್ರನು ವೃತ್ರಾಸುರನನ್ನು ಕೊಂದಾಗ ಅತನನ್ನು ಹಾಡಿಹರಿಸಿದ ಋಕ್ಕುಗಳು ಕರುಣಾರಸದಿಂದ ತುಳುಕಾಡುತ್ತಿವೆ. ಏನೂ ಅರಿಯದ ಪುಗುವು ತನ್ನ ತಾಯಿತಂದೆಗಳೊಡನೆ ತೊದಲ್ನುಡಿಗಳಿಂದ ಮಾತನಾಡುವಂತೆ ಆರ್ಯರು ಇಂದ್ರನನ್ನು ಕುರಿತು ಮಾತಾಡಿದ, ಬೇಡಿದ, ಅತನ ಕೀರ್ತಿಯನ್ನು ಹೊಗಳಿದ ಋಕ್ಕುಗಳನ್ನು ಓದಿದರೆ, ಆರ್ಯರ ನಿಸರ್ಗಾಂತಃಕರಣವು ಎಷ್ಟು ಬಲವಾಗಿತ್ತೆಂಬುದನ್ನು ಕಂಡು ಮನಸ್ಸು ಹುಚ್ಚಾಗುತ್ತದೆ. ಹಗಲಿರಳು ಇಂದ್ರ, ಸೂರ್ಯರುಗಳ ತೇಜಸ್ಸಿನ ಉಪಾಸನೆಯಲ್ಲಿಯೇ ತಮ್ಮ ಆಯುರ್ದಾಯವನ್ನೆಲ್ಲ ಸೂರೆಗೊಂಡಿರುವ ಆರ್ಯರ ಉಜ್ವಲವಾದ ಭಾವನೆಯೂ, ಅವರ ಉದಾತ್ತವಾದ ಬಾಳುವೆಯೂ, ಹೇಗಿರಬಹುದೆಂದು ಒಂದೊಂದು ಸಾರೆ ಮನಸ್ಸು ಆ ಸ್ಥಿತಿಗಾಗಿ ಹಾರೈಸುತ್ತದೆ. ಆದರೆ ಆ ಬಾಲಭಾವವೂ, ಆ ಹುಚ್ಚು ಪ್ರೇಮವೂ ನಮ್ಮಲ್ಲಿ ಮೂಡದೆ ನಮಗೆ ಅದರ ಅನುಸಂಧಾನು ಭಸವಾಗುವದೆಂತು?

ಮತ್ತೆ ಕೆಲವು ಪಂಗಡಗಳು:–ಇಡೀ ಸೃಷ್ಟಿಗೆ ಸೃಷ್ಟಿಯನ್ನೇ ಭಗವಂತನ ರೂಪವೆಂದು ನೋಡುತ್ತಿರುವಂಥ ಆರ್ಯರಿಗೆ ಇಂದ್ರನಲ್ಲೆಷ್ಟು ಪ್ರೇಮಾತಿಶಯವೋ ಅಷ್ಟೇ ಅಗ್ನಿ, ಸೂರ್ಯ, ಉಷೆ, ವರುಣರಲ್ಲಾದರೂ ಇತ್ತೆಂಬುದು ಅವರ ಸ್ವಚ್ಛಂದವಾದ ನೆಲ್ಲುಗಳಿಂದ ಮನದಟ್ಟಾಗುವದು; ಇದು ಸಾಮಾನ್ಯವಾಗಿದ್ದರೂ, ವಾಡಿಕೆಯಾಗಿ, ಕೆಲವರಿಗೆ ಇಂದ್ರನಲ್ಲಿ ಭಕ್ತಿ, ಮತ್ತೆ ಕೆಲವರಿಗೆ ಅಗ್ನಿಯನ್ನೇ ಕಂಡರೆ ಮೈಮರವು, ಇನ್ನು ಕೆಲವರಿಗೆ ಸೂರ್ಯನನ್ನು ನೋಡಿದೊಡನೆ ಹುಚ್ಚು ಪ್ರೇಮ, ಹೀಗಿರುವದು ರುಚಿವೈಚಿತ್ರ್ಯವನ್ನೆ? ಅದರಂತೆ ಆರ್ಯರಲ್ಲೂ ಇದ್ದೇ ಇತ್ತು. ಈ ಜನರ ಭಾವನೆಗಳು ಆಯಾ ದೇವತೆಗಳಲ್ಲಿ ಸ್ಥಿರವಾದಂತೆಲ್ಲ ಅವರು ತಮ್ಮ ತಮ್ಮದೊಂದು ಬೇರೆಬೇರೆ ಪಂಗಡವನ್ನೇ ಮಾಡಿಕೊಳ್ಳಲಾರಂಭಿಸಿದರು. ಇಂದ್ರನು ಸೋಮರಸ ಪ್ರಿಯನಿರುವ

ದರಿಂದ, ಅವನೂ ಅವನ ಭಕ್ತರೂ, ಮನಬಂದಂತೆ ಸೋಮರಸವನ್ನು ತೀವಿ ಕುಡಿದು ಕುಣಿದಾಡುವದು ಅಗ್ನಿಯ ಉಪಾಸಕರಾದ ಕೆಲ ಆರ್ಯರಿಗೆ ಸರಿದೋರಲಿಲ್ಲ. ಹೀಗಾಗಿ ಅವರು ಇಂದ್ರ ದೇವರನ್ನು ಹೀಸೈಸತೊಡಗಿದರು. ಇದು ಇಂದ್ರಾಭಿಮಾನಿಗಳಾದ ಆರ್ಯರಿಗೆ ಒಗ್ಗದೆ, ಅವರವರಲ್ಲಿ ಯುದ್ಧವೆಸಗಿತು. ಕೊನೆಗೆ ಅಗ್ನಿ ಹಾಗೂ ಸೂರ್ಯೋಪಾಸಕರಾದ ಆರ್ಯರು ಸಪ್ತಸಿಂಧು ಪ್ರದೇಶವನ್ನು ತೊಲಗಿ ತಮ್ಮದೊಂದು ಬೇರೆ ಒಕ್ಕಲನಾಡನ್ನೇ ಕಟ್ಟಿಕೊಳ್ಳಬೇಕಾಯಿತು. ತಮಗೂ ತಮ್ಮ ಅಣ್ಣತಮ್ಮಂದಿರಿಗೂ ಧರ್ಮದ ವಿಷಯದಲ್ಲಿ ಕೂಡಿ ನಡೆಯದೆ, ಸಪ್ತಸಿಂಧುವಿನ ಪ್ರದೇಶವನ್ನೇ ಬಿಟ್ಟು ದೇಶಾಂತರವನ್ನಾ ಶ್ರಯಿಸಬೇಕಾದ ಕೆಟ್ಟ ಪ್ರಸಂಗವು ಬಂದುದಕ್ಕಾಗಿ ವ್ಯಥೆಪಟ್ಟು, ಈ ಸೂರ್ಯಾಗ್ನಿ ಉಪಾಸಕರಿಗೆ ಬಹು ದಿವಸಗಳ ವರೆಗೆ ಅಲ್ಲಲ್ಲಿ ಕಾಲೂರಿ ನಿಲ್ಲಲಿಕ್ಕೆ ನೆಲೆಯಿಲ್ಲದೆ ಕಾಲ ಕಳೆಯಬೇಕಾಯಿತು. ಅವರು ಪೂರ್ವದಲ್ಲೇ ಪಂಜಾಬ, ಅಫಗಾಣಿಸ್ಥಾನ ಈ ಮಾರ್ಗವಾಗಿ ಹೊರಟದ್ದರಿಂದ, ತಮಗೆ ಇರಾಣ ದೇಶವೇ ವಿಹಿತವೆಂದರಿತು ಅಲ್ಲಿ ಬಹು ಬೇಗನೇ ಒಕ್ಕಲಾದರು. ಇವರಿಗೇನೇ ಮುಂದೆ ಇರಾಣಿಯರೆಂದೂ, ಪಾರಸೀಕರೆಂದೂ ಹೆಸರು ಬಂದಿತು. ಈ ಜನರಿಗೆ ಸಾಮಾನ್ಯವಾಗಿ ಸುಧಾರಕರೆನ್ನಬಹುದು; ವೇದ ಭಾಷೆಯನ್ನು ಬಿಟ್ಟು, ಜನರಿಗೆ ತಿಳಿಯುವಂಥ ಮತಗಳನ್ನವರು ಇರಾಣ ದೇಶದೊಳಗಿನವರಿಗೆ ಬೋಧಿಸತೊಡಗಿದರು; ರಕ್ತದಿಂದ ಆರ್ಯರಾದರೂ, ಆರ್ಯರ ಇಂದ್ರಭಕ್ತಿಯೂ, ಯಜ್ಞ ಯಾಗಾದಿಗಳ ಗೊಂದಲವೂ, ಅವರಿಗೆ ಒಪ್ಪದೆ, ಕೆಲಮಟ್ಟಿಗೆ ಅವುಗಳನ್ನು ತಿರಸ್ಕಾರಕ್ಕೆ ಯತ್ನಿಸಿದರು. ವೈದಿಕ ಮಂತ್ರಗಳಲ್ಲಿ ಇವರಿಗೆ ನಂಬುಗೆ ಇರಲಿಲ್ಲ; ಹೀಗೆ ಬೇರೆ ತಮ್ಮದೊಂದು ಪಂಥವನ್ನೇ ಹೂಡಿಕೊಂಡಿರುವ ಇರಾಣಿಯರ ಹೊಸ ಮತದ ಪಂಗಡಕ್ಕೆ 'ಝುರ ಥುಸ್ರ' ನೆಂಬ ಪ್ರಚಂಡಶಕ್ತಿಯುಳ್ಳ ಮುಖಂಡನೇ ಕಾರಣನಾದನು. ತನ್ನ ಅನುಯಾಯಿಗಳನ್ನು ಬೆನ್ನಿಗೆ ಕಟ್ಟಿಕೊಂಡು ದೇಶದೇಶಾಂತರಗಳನ್ನು ತಿರುಗುತ್ತ ನಡೆದ ಝುರಥುಸ್ರನಿಗೆ ಇರಾಣದಂಥ ಯಾರ ಕಾಟವೂ ಇಲ್ಲದ ಸುಸ್ಥಾನವು ವಾಸವಾಗಿರಲಿಕ್ಕೆ ಸಿಕ್ಕಿದ್ದರಿಂದ

ಅದನ್ನೇ ಅವನು ಸ್ವರ್ಗವೆಂದು ಭಾವಿಸಿ, ಅಲ್ಲಿರತೊಡಗಿದನು; ಈ ಹೊಸ ಮತಸ್ಥಾಪನೆಯ ತನ್ನ ಅವ್ಯವಸ್ಥಿತವಾದ ಯತ್ನಕ್ಕೆ ಒಂದು ಬಗೆಯಿಂದ ಜೀವಂತ ಮೂರ್ತಸ್ವರೂಪವನ್ನು ಕೊಟ್ಟು, ಅದರಲ್ಲಿ ನವಚೈತನ್ಯವನ್ನು ಬೀರಿ ಬಿತ್ತಿದನು; ವೈದಿಕ ಆರ್ಯರೊಡನೆ ಬಹುಕಾಲ ಬಾಳಿಕೊಂಡಿದ್ದ ಇವರಿಗೂ ಸೋಮರಸದ ಸವಿಯು ಗೊತ್ತಿತ್ತಷ್ಟೆ? ಝರಥುಸ್ರನು ಎಷ್ಟು ಖಂಡಿಸಿದರೂ ಸೋಮರಸವನ್ನು ಕುಡಿದು ಸವಿಗಂಡ ಅವನ ಶಿಷ್ಯರ ಸೇವಕರಿಗೆ ಸೋಮರಸವನ್ನು ಬಿಟ್ಟಿರುವದು ಪ್ರಾಣಕ್ಕೆ ಬಂದಿದ್ದರಿಂದ, ಮೆಲ್ಲನೆ ಹಂಚಿಕೆ ಮಾಡಿ, ಝರಥುಸ್ರನು, ಡಾಳಿಂಬ ಗಿಡದಂಥ ಬೇರೊಂದು ಗಿಡದಿಂದ ಹುಟ್ಟುವಂಥ ಉತ್ತೇಜಕವಾದ ಪೇಯವನ್ನು ಕಲ್ಪಿಸಿ, ತನ್ನ ಜನರಿಗೆ ಅದನ್ನು ಕುಡಿಯಲಿಕ್ಕೆ ಕಲಿಸಿದನು; ಮತ್ತೆ ಅದಕ್ಕೇ 'ಹೋಮ' ವೆಂದು ಹೇಳಲಾರಂಭಿಸಿದನು. ಸೂರ್ಯ ಹಾಗೂ ಅಗ್ನಿ ಉಪಾಸಕರಾದ ಇರಾಣಿಯರು ತಮ್ಮ ದೇವರಿಗೆ 'ಅಹುರ ಮಝದ' ನೆಂದು ಕರೆದು, ಅವನನ್ನು ಕುರಿತು ತಮ್ಮ ನಾಡನುಡಿಯಲ್ಲಿ ಅನೇಕ ಋಕ್ಕುಗಳನ್ನು ಹಾಡಿರುವರು. ಇದಕ್ಕೇ 'ಝಂದ ಅವೆಸ್ತಾ' ಅಥವಾ ಪಾರಸೀಕರ ಪವಿತ್ರಗ್ರಂಥವೆಂದು ಹೆಸರು.

ಪಾನೀಸರು:- ಪಾನೀಸರೆಂದರೆ ಆರ್ಯರ ಬುಡಕಟ್ಟಿಗೆ ಸೇರಿದ ವೈಶ್ಯರು. ಪಾನೀಸ್ ಎಂದರೆ ವಾಣಿಜ್ಯವೃತ್ತಿಯವರೆಂದರ್ಥ. ಇವರು ಬರಿಯ ಭೂಮಾರ್ಗದಿಂದಲೇ ಬೇರೆ ಜನಾಂಗದವರೊಡನೆ ವ್ಯಾಪಾರ ನಡೆಸುತ್ತಿರದೆ, ಜಲಮಾರ್ಗದಿಂದಲೂ ನಡಿಸುತ್ತಿದ್ದರು. ಸಪ್ತಸಿಂಧುವಿನ ಪೂರ್ವದಂಡೆಯಾದ ಗಂಗೆಯ ಧಡದಲ್ಲಿಯವರು ಇರುತ್ತಿದ್ದರು. ತಮಗೆ ನೆರೆಯಲ್ಲಿರುವ ಹಿಮಾಲಯ ಪರ್ವತದಿಂದ ಕಪ್ಪೆಗೆಗಳನ್ನು ತಂದು, ದೊಡ್ಡ ದೊಡ್ಡ ಹಡಗು ಸೋಣಿಗಳನ್ನು ಕಟ್ಟಿಕೊಂಡು ತಮ್ಮಷ್ಟಕ್ಕೆ ತಾವು ಯಾರಿಗೂ ಮೆಚೆಗೆ ಹೋಗದೆ ಬಹು ವಿಪುಲ ಗಂಗೆಯ ಧಡದಲ್ಲಿಯೇ ವಾಸವಾಗಿದ್ದರು; ಸ್ವಾಭಾವಿಕವಾಗಿ ಇವರು ಸ್ವಾರ್ಥಪರರೂ, ಸಂಕುಚಿತ ಮನಸಿನವರೂ, ತಮ್ಮ ಕಸಬನ್ನೊಂದೇ ಜೀವನಾನದ ಧ್ಯೇಯವನ್ನಾಗಿ ಮಾಡಿಕೊಂಡವರೂ, ಲೋಭಿಗಳೂ, ದುಡ್ಡಿನ ಮೇಲೆಯೇ ಕಣ್ಣಿಟ್ಟಿರುವವರೂ ಆದುದರಿಂದ, ಆರ್ಯರಿಗೆ ಮೊದಲಿ

ನಿಂದಲೂ ಇವರನ್ನು ಕಂಡರೆ ತಿರಸ್ಕಾರವುಂಟಾಗುತ್ತಿತ್ತು. ಮೇಲಾಗಿ ಪಾನೀಸರಿಗೂ, ಇಂದ್ರದೇವತೆಯಲ್ಲಿಯೂ, ಯಜ್ಞಯಾಗಾದಿಗಳಲ್ಲಿಯೂ ಆದರಭಾವವಿರಲಿಲ್ಲ; ಹೀಗಾಗಿ, ಇಬ್ಬರೂ ನೆತ್ತರದಿಂದ ಒಂದೇ ಜಾತಿಯವರಾದಾಗ್ಯೂ, ಆರ್ಯರಿಗೂ ಪಾನೀಸರಿಗೂ ಒಂದು ಮನೆ ಆಗುತ್ತಿರಲಿಲ್ಲ; ಆದರೂ ಮಾಡುವದೇನು? ತಮಗೆ ತಮ್ಮ ವ್ಯಾಪಾರಕ್ಕಾಗಿ ಸ್ವತಂತ್ರವೂ ವಿಶಾಲವೂ ಆದ ಸ್ಥಳವು ದೊರಕದ್ದರಿಂದ ಪಾನೀಸರು ಒಂದು ರೀತಿಯಿಂದ ಅಸಂತುಷ್ಟರಾಗಿಯೇ ಇದ್ದರು; ಆದರೆ ಅವರ ಸುದೈವದಿಂದ ಭೂಗರ್ಭದೊಳಗೆ ಸ್ಥಿತ್ಯಂತರವಾಗಿ ನಡುವಿದ್ದ ರಜಪುತಸ್ಥಾನದ ಸಮುದ್ರವು ಒಮ್ಮಿಂದೊಮ್ಮೆ ಒಣಗಿ ಮುಳಲಿನ ಬೈಲು ಪ್ರದೇಶವಾಗಲು, ಪಾನೀಸರ ಮಾರ್ಗವು ಹೆಚ್ಚು ಸುಲಭವಾಯಿತು. ಯಾರಿಗೆ ಪರದೇಶಕ್ಕೆ ವ್ಯಾಪಾರ ಬೆಳೆಯಿಸುವ ಉದ್ದೇಶದಿಂದ ಹೋಗಬೇಕೆಂಬ ಹವ್ಯಾಸವಿದ್ದಿತೋ, ಅವರು ತತ್‌ಕ್ಷಣವೇ ಗಂಗೆಯ ದಂಡೆಯನ್ನು ಬಿಟ್ಟು ದಕ್ಷಿಣಕ್ಕಿಳಿದು ಗುಜರಾತದ ದಂಡೆಯನ್ನು ತಮ್ಮ ವ್ಯಾಪಾರದ ಸ್ಥಳವನ್ನಾಗಿ ಆರಿಸಿದರು. ಸ್ವದೇಶ ಬಿಟ್ಟು ಹೋಗಲಿಚ್ಛಿಸದವರು ಅಲ್ಲಿಯೇ ನಿಂತುಕೊಂಡು ಆರ್ಯರೊಡನೆ ಬೆರೆತು ವೈಶ್ಯರೆಂದು ಹೆಸರುಗೊಂಡರು. ಗುಜರಾತಕ್ಕೆ ಯಾವದೊಂದು ಪರ್ವತವು ಹತ್ತರವಿಲ್ಲದ್ದರಿಂದ, ಹಡಗು ಮೊದಲಾದಿಗಳನ್ನು ಕಟ್ಟುವ ಪಾನೀಸರಿಗೆ ತೊಂದರೆಯಾಗಹತ್ತಲು, ಅವರು ಮೆಲ್ಲಗೆ ಗುಜರಾತದ ದಂಡೆಯನ್ನು ಬಿಟ್ಟು, ತಮಗೆ ತಕ್ಕ ನಾಡನ್ನು ಹುಡುಕುತ್ತ ಹೊರಟರು. ಮುಂದೆ ಮುಂದೆ ಹೋದ ಹಾಗೆಲ್ಲ ಅವರಿಗೆ ಘಟ್ಟಿಮ ಘಟ್ಟಗಳು ಶಿಕ್ಕಿದವು. ಅವೂ ಅವರಿಗೆ ಹೊಂದಿಕೆಯಾಗದ್ದರಿಂದ, ಅವರು ಅಲ್ಲಿ ನಿಲ್ಲದೆ ಮುಲಿಯಾಳ ಸೀಮೆಯ ಹತ್ತರದ ಕಾರೋಮಾಂಡೇಲ ದಂಡೆಯನ್ನು ಕಂಡು ಇದೀಗ ತಮ್ಮ ವ್ಯಾಪಾರಕ್ಕೂ,ಹಡಗು ಕಟ್ಟಿಕೊಳ್ಳಲಿಕ್ಕೂ,ಹಾಗೆಯೇ ಕಟ್ಟಿಗೆಯು ಪೂರೈಕೆಗೂ ಯೋಗ್ಯವಾದ ಸ್ಥಳವೆಂದರಿತು, ಅಲ್ಲಿ ತಮ್ಮ ಹೊಸ ಪ್ರಪಂಚವನ್ನು ಹೂಡಿದರು. ಈ ಸಂಧಿಯನ್ನು ನಾಧಿಸಿ, ಪಾನೀಸರಂತೆಯೇ ಆರ್ಯರ ಋಷಿಗಳಾದ ಅಗಸ್ತ್ಯರು ತಮ್ಮ ಸಂಗಡವನವರನ್ನು ಕಟ್ಟಿಕೊಂಡು ದಕ್ಷಿಣಕ್ಕೆ ಬಂದು ನೆಲಸಿದರು.

ದ್ರಾವಿಡರೊಡನೆ ಆರ್ಯರು ಒಂದಾದುದು:- ಆ ಕಾಲಕ್ಕೆ ದಕ್ಷಿಣದಲ್ಲಿ ಪಾಂಡ್ಯ, ಚೋಳ, ಚೇರ, ಮೊದಲಾದ ದ್ರಾವಿಡ ಕುಲದ ಮೂಲನಿವಾಸಿಗಳಿರುತ್ತಿದ್ದರು. ಅವರು ಆಗ ಬಹು ಕಾಡುಸಿತಿಯಲ್ಲಿದ್ದುದರಿಂದ ಪಾಣೀನರು ಅವರೆಂದಿಗೆ ಮನಸು ಬಿಚ್ಚಿ ಕೂಡಿ ನಡೆದು ತಮ್ಮ ಸಂಸ್ಕೃತಿಯನ್ನು ಅವರಿಗೆ ಕಲಿಸಿದರು. ನಾಗರಿಕತೆಯ ಗುರು ತನ್ನು ಸಹ ಕಂಡರಿಯದ ದ್ರಾವಿಡರಿಗೆ ಪಾಣೀನರಿಂದ ಅತಿಶಯವಾಗಿ ಲಾಭವಾಯಿತು. ಕಾಡುಕಗ್ಗತ್ತಲೆಯಲ್ಲಿ ತೊಳಲಾಡುತ್ತಿದ್ದ ದ್ರಾವಿಡರಿಗೆ ಆರ್ಯರಾದ ಪಾಣೀನರ ಸಹವಾಸದಿಂದ ಕುರುಡನಿಗೆ ಕಣ್ಣು ಬಂದಂತಾಯಿತು. ಇದರಿಂದ ದ್ರಾವಿಡರಾದರೂ ಪಾಣೀನರಿಗೆ ಅನುಕೂಲರಾಗಿಯೇ ನಡೆಯಲನುವಾದರು. ಇಲ್ಲಿ ಆರ್ಯರಾದ ಪಾಣೀನರಿಗೂ ದ್ರಾವಿಡರಿಗೂ ಸ್ವಭಾವಭೇದವಿದ್ದರೂ, ಅದು ಹೇಗೆ ಅವರವರಲ್ಲಿ ಅನ್ಯೋನ್ಯ ಸೌಹಾರ್ದವುಂಟಾಯಿತೆಂಬುದೊಂದು ಅತ್ಯಂತ ಮನನೀಯವಾದ ಮಾತಾಗಿದೆ. ಅದುದರಿಂದ ವೈತ್ತವೊದಲು ಆರ್ಯರಾಗೂ ದ್ರಾವಿಡರ ರೂಪ ಗುಣಾದಿಗಳನ್ನು ವಿಮರ್ಶಿಸೋಣ.

ಆರ್ಯರ ಗುಣರೂಪಾದಿಗಳು:- ಒಂದೆರಡು ಅಂಶಗಳಲ್ಲಿ ಪಾಣೀನರಿಗೂ ಆರ್ಯರಿಗೂ ಕೂಡದೆ ಇದ್ದರೂ, ಒಟ್ಟಾರೆ ಪಾಣೀನರೆಂದರೆ ಆರ್ಯ ಸಂತತಿಯವರೇ ಇರುವುದರಿಂದ ಅವರಲ್ಲಿಯ ಗುಣರೂಪಾದಿಗಳು ಪಾಣೀನರಲ್ಲಿ ಇಳಿಯಬೇಕಷ್ಟೇ! ಅದರಂತೆ ಅವು ಇಳಿದಿದ್ದವು. "ಆರ್ಯ" ಎಂಬೆಸರಿನ ಅರ್ಥವನ್ನು ಒಬ್ಬ ಪುರಾತನ ಗ್ರಂಥಕಾರರು 'ಈಶ್ವರಪುತ್ರ' ರೆಂದು ಮಾಡಿರುವರು. ಇಷ್ಟರಿಂದಲೇ ಆರ್ಯರ ಯೋಗ್ಯತೆಯು ಸ್ವಭಾವದಿಂದಲೇ ಎಷ್ಟು ಉಜ್ಜ್ವಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಮತ್ತು 'ಈಶ್ವರ ಪುತ್ರ' ಎಂಬ ಹೆಸರನ್ನು ಅನ್ವರ್ಥಕಗೊಳಿಸುವಂತೆಯೇ, ಆರ್ಯರು ಸುಸಂಸ್ಕೃತರೂ, ಸ್ಫುರದ್ರೂಪಿಗಳೂ ಆಗಿದ್ದರು. ಬುದ್ಧಿ ವೈಭವದ ಭಂಡಾರವಾದ ಅವರ ದೊಡ್ಡದಾದ ಆ ತಲೆಯೂ, ಆಸ್ತಿಕ್ಯದಿಂದ ಹೊಳೆಯುವ ತೇಜಃಪುಂಜವಾದ ಆ ಕಣ್ಣುಗಳೂ, ಔದಾರ್ಯವನ್ನೂ ದೊಡ್ಡಮನಸ್ಸನ್ನೂ ತೋರಿಸುವ ಅವರ ನೀಟಾದ ಮೂಗೂ, ನಿಷ್ಕಾಪಟ್ಯವನ್ನು ವ್ಯಕ್ತಪಡಿಸುವ

ಅವರ ಕೂದಲುಬೆಳೆದ ಹರವಾದ ಎದೆಯೂ, ಐಶ್ವರ್ಯವನ್ನು ಸೂಚಿಸುವ ಅಗಲವೂ ಎತ್ತರವೂ ಆದ ಆಹಣೆಯೂ, ನಿಡುದಾದ ಕರಿಗೂದಲೂ, ವೀರಕೆಂದು ಹೇಳುವ ಅವರ ಆ ಉದ್ದವಾದ ಕೈಗಳೂ, ಬೀನಾಳುಗಳೂ, ಬಿಳುಪಿನಿಂದ ಬೆರೆತ ಕೆಂಬಣ್ಣವೂ, ಇವೇ ಆರ್ಯರ ಮುಖ್ಯ ಹೊರಗಿನ ರೂಪಲಕ್ಷಣಗಳಾಗಿದ್ದವು. ಮತ್ತು ಇದಕ್ಕೆ ಅನುಗುಣವಾಗುವಂತೆ, ಅವರಲ್ಲಿ ಬುದ್ಧಿಶಾಲಿಗಳೆಲ್ಲರಿರುವಂತೆ ಅನ್ಯಾದೃಶವಾದ ಭಾವನಾಶಕ್ತಿ, ಯೋಜನಾಶಕ್ತಿ, ವಿಭಜನಾಶಕ್ತಿ, ಮೊದಲಾದವೂ ಒಂದುಗೂಡಿದ್ದವು. ಹೊತ್ತುಬಂದಾಗ ಬಂಟರಂತೆ ಕಾದುವದು ಅವರಿಗೆ ಇಷ್ಟವಿದ್ದರೂ ಶಾಂತಸ್ವಭಾವಿಗಳು. ಏಕಾಗ್ರತೆಯೂ, ಪಟುತ್ವವೂ ಅವರಲ್ಲಿ ಮನೆಮಾಡಿದ್ದುವು. ಒಟ್ಟಿಗೆ, ಆರ್ಯರು ಪ್ರತಿಭಾಸಂಪನ್ನರು. ಪ್ರಕೃತಿಸೌಂದರ್ಯೋಪಾಸಕರೆಂಬ ಬಿರುದಿಗೆ ಯೋಗ್ಯರು. ನಾಹಸೋದ್ಯೋಗಿಗಳು. ದಿನ ದಿನವೂ ಹೊಸ ಹೊಸ ಪದಾರ್ಥಗಳಿಗೆ ಆಶೆಪಡತಕ್ಕವರು. ಲೋಕ ಸಂಚಾರಿಗಳು. ಇವರು ತಮ್ಮ ತರ್ಮ್ಮಳಿಗೆ ಜಗಳಾಡುತ್ತಿದ್ದರೂ, ದಸ್ಯುಗಳನ್ನೆದುರಿಸುವಾಗ ಒಂದಾಗುತ್ತಿದ್ದರು.

ದ್ರಾವಿಡರು:- ಇವರು ಬಲಿಷ್ಠರೂ ದುಡಿಮೆಗಾರರೂ ಆದಾಗ್ಯೂ ಆರ್ಯರಷ್ಟು ಸುಂದರ ಪುರುಷರಲ್ಲ. ಮೇಧಾವಿಗಳಾದರೂ ದೂರದರ್ಶಿಗಳಲ್ಲ. ಬುದ್ಧಿಯಲ್ಲಿ ಆರ್ಯರಿಗಿಂತಲೂ ಒಂದು ಕೈ ಮೇಲಾಗಿದ್ದರು. ಕಾರ್ಯಕ್ಕೆ ಕೈ ಹಾಕುವವರಾದರೂ, ಕೊನೆಮುಟ್ಟಿಸುವಂಥ ಹಟಗಾರಿಕೆ ಇವರಲ್ಲಿದ್ದಿಲ್ಲ ದ್ರಾವಿಡರು ನಾಮಾಜಿಕ, ಆರ್ಥಿಕ, ವ್ಯವಹಾರಿಕ ಮುಂತಾದ ವಿಷಯಗಳಲ್ಲಿ ಆರ್ಯರಿಗೆ ಹಿಂದಿರದಿದ್ದರೂ ಧರ್ಮವಿಸ್ತಾರದಲ್ಲಿ ಮಾತ್ರ ಆರ್ಯರಿಗಿಂತ ಹಿಂದುಳಿದವರೇ ಸರಿ. ಆರ್ಯ ಸಂಸ್ಕೃತಿಗೆ ದ್ರಾವಿಡರು ದೇಹವೆಂದು ತಿಳಿದರೆ ಆರ್ಯರು ಅದರ ಆತ್ಮ. ಬಟ್ಟಾರೆ, ಆರ್ಯರಿಗೂ ದ್ರಾವಿಡರಿಗೂ ಹೋಲಿಸಿ ನೋಡಿದರೆ, ಆರ್ಯರು ಅಧ್ಯಾತ್ಮಪ್ರವೃತ್ತಿಯವರಾದರೆ, ದ್ರಾವಿಡರು ಉತ್ಕೃಷ್ಟ ಶಿಲ್ಪಿಗರೂ, ಹಾಡುಗಾರರೂ, ಆಗಿದ್ದರು. ಹೀಗಿರುವದರಿಂದ, ದ್ರಾವಿಡರಿಗೂ ಆರ್ಯರಿಗೂ ಸಂಗಮವಾಗಲು, ದ್ರಾವಿಡರಲ್ಲಿರುವ ಉತ್ಪಾದಕ ಹಾಗೂ ಭಾವನಾಶಕ್ತಿಯೂ ಆರ್ಯರ ದೈವಿಕಭಾವನೆಯುಂದೊಡಗೂಡಿ, ಅದರಿಂದೊಂದು

ವಿಲಕ್ಷಣಶಕ್ತಿಯು ಆರ್ಯ ಸಂತತಿಯೇ ನಿರ್ಮಾಣವಾಯಿತು. ಆರ್ಯ, ಹಾಗೂ ದ್ರಾವಿಡರ ರಕ್ತ ಸಂಬಂಧ ಬೆಳೆದುದರಿಂದ, ದ್ರಾವಿಡರು ಕಟ್ಟಿದ ದೇವಾಲಯದಲ್ಲಿ ಆರ್ಯರ ದೇವತೆಯ ಪ್ರತಿಷ್ಠಾಪನೆಯಾದಂತಾಯಿತು.

ಪಾನೀಸರು:- ದ್ರಾವಿಡರು ಬಲಿಷ್ಠರಾದರೂ ಜಗಳಗಂಟರಲ್ಲ. ತಮಗಿಂತ ಹೆಚ್ಚಿನವರಾರಾದರೂ ಕೂಡಿದರೆ, ಅವರು ಅವರೊಡನೆ ತಟ್ಟನೆ ಬೆರೆತು ನಡೆಯುತ್ತಿದ್ದರು. ಇದೊಂದು ಅವರಲ್ಲಿಯ ಮುಖ್ಯ ಗುಣ ವಿಶೇಷವಾದುದರಿಂದ, ಅವರಿಗೆ ಎಲ್ಲಿ ಹೋದರೂ ಕಷ್ಟವಾಗುತ್ತಿರಲಿಲ್ಲ. ಈಗ ಪಾನೀಸರೂ ಚೋಳರೂ ಒಂದಾಗಿರುವದಲ್ಲದೆ, ಅವರಲ್ಲಿ ಅಗಲದಷ್ಟು ಅನ್ಯೋನ್ಯ ಸಂಬಂಧವು ಬೆಳೆದಿತ್ತು. ಆ ಸ್ಥಳದಿಂದ ಮತ್ತೆ ಉತ್ತರಕ್ಕೆ ತಿರಿಗಿ, ಚೋಳರೊಡನೆ ಹಾಗೆ ಸಮುದ್ರದಂಡೆಗುಂಟ ಹೋಗಿ ಇರಾಣ ಆಖಾತದೊಳಗೆ ತಮ್ಮದೇ ಒಂದು ಸ್ವತಂತ್ರವಾದ ಒಕ್ಕಲನಾಡನ್ನು ಮಾಡಿಕೊಂಡು ಅಲ್ಲಿದ್ದುಕೊಂಡು, ದಕ್ಷಿಣ ಹಿಂದೂ ದೇಶಗಳ ಜೊತೆಯಲ್ಲಿ ಶ್ರಿಗಂಧ, ತೇಗು ಮುಂತಾದವುಗಳ ವ್ಯಾಪಾರ ನಡೆಸಿದರು. ಹೊಟ್ಟೆಗಾಗಿ ಈ ವ್ಯವಹಾರ ನಡಿಸಿದ್ದರೂ, ತಮಗಿಂತ ಕಾಡು ಜನರನ್ನು ತಿದ್ದುವ ತಮ್ಮ ಪರಂಪರಾಗತವಾದ ನಿಸರ್ಗಸಿದ್ಧ ಗುಣವನ್ನೇನೂ ಮರೆಯದೆ ಅಲ್ಲಿಯ ಮೂಲ ನಿವಾಸಿಗಳನ್ನು ತಿದ್ದುತ್ತಲಿದ್ದರು. ಈ ಪ್ರಕಾರವಾಗಿ ಕಾಲ ಕಳೆಯುತ್ತಿರಲು, ಅವರ ಮೇಲೆ ಸೆಮಿಟಿಕ ಜನರು ದಾಳಿಯಿಟ್ಟಿದ್ದರಿಂದ ಸ್ಥಳಾಂತರ ಮಾಡಿ ಸಿರಿಯದ ದಂಡೆಗೆ ತಮ್ಮದೊಂದು ಬೇರೆ ಒಕ್ಕಲನಾಡನ್ನು ಕಟ್ಟಿಕೊಂಡು ಅದಕ್ಕೇ 'ಫಿನೀಶಿಯಾ' ಎಂದು ಹೆಸರಿಟ್ಟರು. ಕಾಲೂರಲಿಕ್ಕೆ ಒಂದು ನೆಲೆಯಾದ ನಂತರ, ಪಾನೀಸರು ತಮ್ಮ ವ್ಯವಹಾರ ಚಾತುರ್ಯದಿಂದಲೂ, ಸಾಹಸದಿಂದಲೂ, ನೆರೆಹೊರೆಯಲ್ಲಿ ಹೊಸ ಹೊಸ ಒಕ್ಕಲುನಾಡುಗಳನ್ನು ಹಬ್ಬಿಸಿ ಬೆಳೆಯಿಸಿ, ದಕ್ಷಿಣಯುರೋಪ, ಉತ್ತರಆಫ್ರಿಕಾ, ಗ್ರೀಸ, ದೇಶದವರೊಡನೆ ಘನವಾದ ವ್ಯಾಪಾರ ನಡೆಯಿಸಿ, ದಕ್ಷಿಣ ಹಾಗೂ ಪಶ್ಚಿಮ ಯುರೋಪಖಂಡಗಳೆಲ್ಲೆಲ್ಲ ಒಂದಾನೊಂದು ಕಾಲಕ್ಕೆ ಬಳ್ಳೀ ಮೊಗವೆತ್ತಿ ಮೆರೆದರು. ಆ ಕಾಲಕ್ಕೆ ಇಡೀ ಯುರೋಪಖಂಡವೇ ಕಾಡು ಸ್ಥಿತಿಯಲ್ಲಿ ಸಿಲುಕಿದ್ದರಿಂದ ಫಿನಿಶಿಯರು ಅಂದರೆ ಆರ್ಯರಾದ ಪಾನೀ

ಸರು ಅತ್ತ ಇಂಗ್ಲಂಡ ನ್ಯಾಟಲಂಡಗಳ ವರೆಗೂ, ಇತ್ತ ನ್ಯಾಯ್ಯಂಡಿನೇವಿಯದ ವರೆಗೂ ತಮ್ಮ ವ್ಯಾಪಾರದ ಜಾಲವನ್ನು ಹರಡಿಸಿ, ತಮ್ಮ ನಾಗರಿಕತೆಯ ಪ್ರಭೆಯಿಂದ ಅವರನ್ನು ಬೆರಗುಗೊಳಿಸಿದ್ದರು.

ಚೋಳರು:- ಇತ್ತ, ಆರ್ಯರ ಸಹವಾಸದಿಂದ ಸಮುದ್ರ ಪಯಣದೊಳಗೂ, ಒಕ್ಕಲತನದೊಳಗೂ, ಬೇರೆ ವಿಧದ ಕೈಗಾರಿಕೆಯಲ್ಲಿಯೂ, ಅಷ್ಟಿಷ್ಟು ಸುರಿತಂಧ ಕೆಲ ಚೋಳರಿಗೂ ತಮ್ಮ ದೇಶವು ಬೇಸರಾಗಿ ಫಲವತ್ತಾದ ಯಾವುದಾದರೊಂದು ಜನಾಂಗವನ್ನಾಶ್ರಯಿಸಬೇಕೆಂಬ ಕುತೂಹಲವುಂಟಾಯಿತು. ಅದರಂತೆ ಅವರೂ ತಮ್ಮ ಮುಂದಣ ಅಭ್ಯುದಯಕ್ಕಾಗಿ ಈಗಣ ತುರ್ಕಸ್ಥಾನದೊಳಗಿನ ಯುಫ್ರೆತೀಸ, ಟೈಗ್ರೀಸ, ನದಿಗಳ ಮುಖದ ಹತ್ತರ ತಮ್ಮ ಬಿಡಾರವನ್ನಾರಿದರು. ಅದೇ ಮುಂದೆ 'ಖಾಲ್ಡಿಯಾ' * ಅಥವಾ ಚೋಳರ ನಾಡೆಂದು ಹೆಸರಾಯಿತು. ಈಗಿನ ಚೋಳರಿಗೆ ಮೊದಲಿನ ಚೋಳರೆನ್ನುವಂತಿರಲಿಲ್ಲ. ಏಕೆಂದರೆ ಅವರು ಆರ್ಯವರ್ತಕರಾದ ಪಾಸೀಸರೊಡನೆ ಬಹುಕಾಲ ಇದ್ದುದರಿಂದಲೂ, ಅವರಿಂದಲೇ ಕೆಲಮಟ್ಟಿಗೆ ನಾಗರಿಕತೆಯ ತಿರುಳನ್ನು ಪಡೆದುದರಿಂದಲೂ, ಅವರ ನಡವಳಿಕೆಗಳೆಲ್ಲ ಆರ್ಯರನ್ನೇ ಹೋಲುತ್ತಿದ್ದವು; ಅಲ್ಲದೆ, ಒಕ್ಕಲತನ, ಕೈಗಾರಿಕೆ, ಉದ್ಯೋಗ, ಕಲಾಕೌಶಲ್ಯ, ಧರ್ಮ, ತತ್ವಜ್ಞಾನ ಮೊದಲಾದವುಗಳಲ್ಲೆಲ್ಲ ಆರ್ಯರ ಗುರುತೇ ವ್ಯಕ್ತವಾಗುತ್ತಿತ್ತು; ಈ ಖಾಲ್ಡಿಯಸ್ಥರ ರಾಜ್ಯವೂ ನಾಗರಿಕತೆಯ ಪರಮಾವಧಿಗೆ ಮುಟ್ಟಿತ್ತೆಂಬುದಕ್ಕೆ ಈಗಲೂ ಅನೇಕ ಪ್ರಾಚೀನ ವಸ್ತುಸಂಗ್ರಹಗಳು ಸಾಕ್ಷಿ ಕೊಡುತ್ತಿವೆ. ಮೇಲಾಗಿ ಖಾಲ್ಡಿಯಸ್ಥರು ಆರ್ಯಜನಾಂಗದವರೊಡನೆ ವ್ಯಾಪಾರ ಬೆಳೆಸುತ್ತಿದ್ದರೆಂಬುದಕ್ಕೆ ಖಾಲ್ಡಿಯನ್ ಭಾಷೆಯಲ್ಲಿ ಹಲವು ಸಂಸ್ಕೃತ ಶಬ್ದಗಳು ಸಿಕ್ಕುತ್ತಿರುವದೊಂದು ಬಲವಾದ ಸಾಧನೆಯಾಗಿದೆ.

ಟಿಪ್ಪಣಿ:- ೧೯೦೭ ರಲ್ಲಿ ಏಸಿಯಾ ಮೈನರದಲ್ಲಿನ ಭೂಮಿಯನ್ನು ಇತಿಹಾಸ ಸಂಶೋಧಕ ದೃಷ್ಟಿಯಿಂದ ಅಗಿಯುತ್ತಿರುವಾಗ ಕೆಲ ಶಾಸನಗಳು ದೊರೆತಿವೆ; ಇವು ಕ್ರಿ. ಶ. ಪೂ. ೧೪೦೦ ವರ್ಷಗಳಾಚೆಯ ಶಾಸನಗಳಿದ್ದು, ಇವುಗಳಲ್ಲಿ ವರುಣ, ಮಿತ್ರ, ಇಂದ್ರ, ಅಶ್ವಿನಿ, ಮೊದಲಾದ ದೇವತೆಗಳ ಹೆಸರುಗಳು ಬಂದಿವೆ.

ಈ ಮೇರೆಗೆ ಆರ್ಯರ ಬುಡಕಟ್ಟಿಗೆ ಸೇರಿದ್ದರೂ, ಫಿನೀಶಿಯಾ, ಖಾಲ್ಡಿಯಾ, ಮೊದಲಾದ ಜನಾಂಗದವರು ಎಷ್ಟು ಉನ್ನತ ಸ್ಥಿತಿಗೇರಿದ್ದರೂ, ಅನೇಕ ಬೇರೆ ಬೇರೆ ಜನಾಂಗದವರನ್ನು ಗೆದ್ದರೂ, ಆ ದೇಶವನ್ನು ಹಾಳುಗೆಡವಿ, ಅದರಿಂದ ತಮ್ಮ ಒಡಲನ್ನು ಹೊರೆಯಲಿಲ್ಲ. ಗೆದ್ದ ಜನರನ್ನು ಸುಲಿಯಲಿಕ್ಕೆ ಹೊಂಚುಹಾಕಲಿಲ್ಲ. ಅವರ ಗೆಲುವಿಕೆಯ ವೈಶಿಷ್ಟ್ಯವು ಬೇರೆಯಲ್ಲಿ ಅಡಕವಾಗಿದೆ. ಅದು ಯಾವುದೆಂದರೆ, ಗೆದ್ದ ಜನರನ್ನು ತಮ್ಮ ಸಂಸ್ಕೃತಿಗೆಳೆದು, ಅವರನ್ನು ತಮ್ಮಂತೆ ಮಾಡಿಬಿಡುವದು. ಇಂಥದೊಂದು ಜನಾಂಗದವರನ್ನು ಆರ್ಯರು ಗೆದ್ದು, ಅವರನ್ನು ಪಿದ್ದವರೆಂದು ಬಗೆದು, ತಮ್ಮ ಲಾಭಕ್ಕಾಗಿ, ತಮ್ಮ ಸುಖಕ್ಕಾಗಿ ಅವರನ್ನಾಳಿ, ಅವರನ್ನೂ, ಅವರ ರಾಷ್ಟ್ರವನ್ನೂ, ಅಳಿಗಾಲಕ್ಕೆ ತಂದರೆಂಬುದು ಇತಿಹಾಸಕ್ಕೇ ಅರಿಯದ ಮಾತು. ಆರ್ಯರ ಈ ವೈಶಿಷ್ಟ್ಯವು ಸಾಮಾನ್ಯವೇ? ಇದಕ್ಕೆ ಭೂಮಂಡಲ ಇತಿಹಾಸದೊಳಗ ಬೇರೆ ದೃಷ್ಟಾಂತ ದೊರಕದು. ತಾವು ಒಕ್ಕಲಾದ ದೇಶವೆಲ್ಲ ತಮ್ಮದೇ ಎಂದೂ, ಅಲ್ಲಿಯ ಜನರು ತಮ್ಮವರೆಂದೂ ಅವರ ತಿದ್ದುಪಡಿಗಾಗಿ ಪರಿಶ್ರಮ ಪಡುತ್ತಿರುವದೇ ಆರ್ಯರ ಇತಿಹಾಸದಿಂದ ಎದ್ದು ಕಾಣುತ್ತದೆ. ಯಾವುದೊಂದು ಜನಾಂಗದವರು ಆರ್ಯರಿಗೆ 'ನಾವು ತಮ್ಮವರೆಂದು' ಮೊರೆಹೊಕ್ಕರೆ ತೀರಿತು. ಅವರನ್ನು ಕಾಯುವ ಭಾರವು ಆರ್ಯರ ಮೇಲೆ ಬಿದ್ದದ್ದೇ! ಈ ಆತ್ಮೀಯ ಭಾವನೆಯೆಂಬುದು ಆರ್ಯರಲ್ಲಿಯ ವಿಶಿಷ್ಟಗುಣದ್ಯೋತಕವಾಗಿದೆ.

ವೇದಗಳು:- ಆರ್ಯರ ಮಹತ್ತಾದ ಜ್ಞಾನ ಭಾಂಡಾರವೆಂದರೆ ವೇದವೇ. ಈ ವೇದಗಳಿಗೇ ನಮ್ಮ ಪೂರ್ವಿಕರು 'ಶ್ರುತಿಗಳೆಂದನ್ನುವದುಂಟು'. ಈಶ್ವರನು ಮಂತ್ರದ್ರಷ್ಟಾರರಾದ ಋಷಿಗಳಲ್ಲಿ ವೇದಗಳನ್ನು ಸ್ಫುರಣೆಗೊಳಿಸಿದನು; ಈ ಮಂತ್ರದೃಷ್ಟಾರರಾದ ಋಷಿಗಳಲ್ಲಿ ವಶಿಷ್ಠ, ವಿಶ್ವಾಮಿತ್ರ, ವಾಮದೇವ, ಅತ್ರಿ, ಅಗಸ್ತ್ಯ, ಕಣ್ವ, ಜಮದಗ್ನಿ ಇವರೇ ಮುಖ್ಯರು. ಅವುಗಳನ್ನವರು ತಮ್ಮ ತಮ್ಮ ಸಾಮರ್ಥ್ಯದಿಂದುಂಟಾದ ತಾತ್ಕಾಲಿಕ ಸ್ಫೂರ್ತಿಯಿಂದಲೂ ಅಪೂರ್ವಪ್ರತಿಭೆಯಿಂದಲೂ ಬೇರೆ ಬೇರೆ ಕಾಲಕ್ಕೆ ತಮಗೆ ಸ್ಫುರಿಸಿದ ಆಧ್ಯಾತ್ಮಿಕ, ಮಾನಸಿಕ, ಪ್ರಾಕೃತಿಕ

ಆನಂದಾನುಭವದಿಂದಲೂ ಹಾಡಿದರು ವೇದಗಳು ಈಶ್ವರನ ಶ್ವಾಸೋ
ಚ್ಛ್ವಾಸನ ಮಾತ್ರದಿಂದ ಆವಿರ್ಭವಿಸಿದವೆಂದೂ, ಅವು ಸೃಷ್ಟಿಯ ಮೂಲ
ಕಾರಣಗಳೆಂದೂ ನಿತ್ಯ, ಮತ್ತು ಸನಾತನವೆಂದೂ, ವೇದಗಳ ಋಕ್ಕು
ಗಳ ಪ್ರತಿಯೊಂದು ಅಕ್ಷರಗಳಲ್ಲಿ ದೇವತೆಗಳು ನೆಲಸಿರುವರೆಂದೂ, ವೇದ
ಗಳಲ್ಲಿಯೇ ಹೇಳಿದೆ. ವೈದಿಕ ವಾಙ್ಮಯವನ್ನು ಮೊದಲೆಗೊಂಡು ಉಪ
ನಿಷತ್ತಿನವರೆಗೆ ಎಲ್ಲ ದೈವಿಕ ಗ್ರಂಥಗಳೊಳಗಿನ ಪ್ರತಿಯೊಂದು ಶಬ್ದದ
ಮಾತ್ರೆಯು ಸಹ ಈಶ್ವರನ ಉಸಿರಾಡಿಸುವಿಕೆಯಿಂದ ಉತ್ಪನ್ನವಾದ್ದ
ರಿಂದ, ವೇದಗಳು 'ಅಪೌರುಷೇಯ' ವಾದವುಗಳು; ಮತ್ತು ಹಾಗೆಂ
ತಲೇ ನಮ್ಮ ಹಿರಿಯರು ವೇದೋಪನಿಷತ್ತುಗಳನ್ನು ನಾನಿರಾರು ವರ್ಷ
ಗಳಿಂದ ಕಂತದಲ್ಲಿಟ್ಟುಕೊಂಡು ತಮ್ಮ ತಮ್ಮ ಶಿಷ್ಯರಿಗೂ ಮಕ್ಕಳಿಗೂ
ಗಟ್ಟಿಮಾಡಿಸಿ ಕಲಿಸುತ್ತ, ಪ್ರಾಣಕ್ಕಿಂತ ಪ್ರಿಯವೆಂದು ಕಾಯ್ದುಕೊಂ
ಡರು. ಈ ಹೊತ್ತಿಗೆ ಆ ವೇದೋಪನಿಷತ್ತುಗಳೆಂದರೆ, ನಮ್ಮ ಸಂಸ್ಕೃ
ತಿಯ, ನಮ್ಮ ವಾಙ್ಮಯದ, ನಮ್ಮ ಧರ್ಮದ, ನಮ್ಮ ಜೀವದ ಅಭೇದ್ಯ
ಆಧಾರ ಸ್ತಂಭಗಳಾಗಿ ವಿರಾಜಿಸುತ್ತಿವೆ. ಜಗತ್ತಿನ ಇತಿಹಾಸದೊಳಗೆ
ವೇದಗಳಷ್ಟು ಪ್ರಾಚೀನತಮವಾದ ಬೇರೆ ಗ್ರಂಥಗಳಾವೂ ಇರದ್ದರಿಂದ
ಅವುಗಳನ್ನು ನಮ್ಮ ಪೂರ್ವಜರು ಪುಸ್ತಕಗಳ ಸಹಾಯವಿಲ್ಲದೆ ಬರಿಯ
ಬಾಯಲ್ಲಿಟ್ಟುಕೊಂಡು ಕಾಪಾಡಿದ್ದೆಂದು ಅತ್ಯಂತ ಸೋಜಿಗವಾದ
ಸಂಗತಿಯಾಗಿದೆ. ಈ ಮೇರೆಗೆ, ತಮ್ಮ ಶಕ್ತಿಸರ್ವಸ್ವವನ್ನೆಲ್ಲ ಸೂರೆ
ಮಾಡಿ, ವೈದಿಕಕಾಲೀನವಾದ ಜ್ಞಾನಕಾಂಡದ ಭಾಂಡಾರವನ್ನು
ಆರ್ಯರು ಇದ್ದಕ್ಕಿದ್ದ ಹಾಗೆ ಕಾಯ್ದಿಟ್ಟುದಕ್ಕಾಗಿ ಅವರ ಬಂಟತನ
ವನ್ನೆಷ್ಟು ಹೊಗಳಿದರೂ ಸಾಲದು.


ವೇದಗಳಲ್ಲಿ ಋಗ್ವೇದವೇ ಅತ್ಯಂತ ಪುರಾತನವಾದಗ್ರಂಥವು. ನಾಮ
ವೇದವಾದರೂ ಅಷ್ಟೇ ಹಳೆಯದು. ಯಜುರ್ವೇದವು ಕೊಂಚ ಈಚೆ
ಯದು. ಅಥರ್ವವೇದವು ಮಾತ್ರ ಯಜುರ್ವೇದಕ್ಕಿಂತ ಹೆಚ್ಚುಕಡಿಮೆ
ಆದೇ ಕಾಲದ್ದಿರಬಹುದೆಂದು ಊಹಿಸಲಿಕ್ಕೇನೂ ಅಡ್ಡಿಯಿಲ್ಲ. ವೈದಿಕ
ವಾಙ್ಮಯವನ್ನು ಸಂಹಿತಾ, ಬ್ರಾಹ್ಮಣ, ಉಪನಿಷತ್, ಅಥವಾ ಆರಣ್ಯಕ
ಗಳೆಂದು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಆದಿಯಲ್ಲಿ ವೇದವು

ವಿಸ್ತಾರವಾದ ಗ್ರಂಥವಿತ್ತೆಂದೂ, ಅದನ್ನೇ ಮುಂದೆ ದ್ವಾಪರಯುಗದಲ್ಲಿ ಶ್ರೀವ್ಯಾಸಮಹರ್ಷಿಗಳು ಅಜ್ಞಾಜನರಿಗೆ ತಿಳಿಯಲೆಂದು, ಋಕ್, ಯಜುಸ್, ಸಾಮ, ಹಾಗೂ ಅಥರ್ವಗಳೆಂದು ವಿಂಗಡಿಸಿ, ತಮ್ಮ ಶಿಷ್ಯರಾದ ಪೈಲ, ವೈಶಂಪಾಯನ, ಜೈಮಿನಿ, ಸುಮಂತು ಮೊದಲಾದವರಿಗೆ ಪಠಿಸಿದರೆಂದೂ ಉಕ್ತವಾಗಿದೆ. ಸಂಹಿತೆಯೆಂದರೆ ಸಂಗ್ರಹ. ಅದರಲ್ಲಿ ಸೌತ್ರೀತ್ರಗಳೂ, ಪ್ರಾರ್ಥನೆಗಳೂ, ಮಂತ್ರಪ್ರಯೋಗಗಳೂ, ಆಶೀರ್ವಾದಯುಕ್ತವಾದ ಸೂಕ್ತಗಳೂ, ಯಜ್ಞವಿಷಯಕವಾದ ಮಂತ್ರಗಳೂ ಅಡಕವಾಗಿವೆ. ಬ್ರಾಹ್ಮಣಗಳೆಂದರೆ, ಯಜ್ಞಕರ್ಮದ ಬಗ್ಗೆ ಯಾಜ್ಞಿಕರ ಚರ್ಚೆಯ ಅಧಿಕಾ ವಿವರಣೆಯ ಸಂಗ್ರಹವೆಂದರ್ಥ. ಇವು ದೊಡ್ಡದೊಡ್ಡ ಗ್ರಂಥಗಳಿದ್ದು, ಇವುಗಳಲ್ಲಿ ದೇವಾದಿಕರ ಕಥೆಗಳೂ, ಯಜ್ಞ ವಿಚಾರವೂ, ಬೇರೆಬೇರೆ ಯಜ್ಞದೊಳಗೆ ಆಚರಿಸತಕ್ಕ ವ್ಯಾವಹಾರಿಕ ಹಾಗೂ ಆಧ್ಯಾತ್ಮಿಕ ಕ್ರಿಯೆಗಳ ಮಹತ್ವವೂ ಅನೇಕ ಪೌರಾಣಿಕ ವಿಚಾರಗಳೂ ಒಳಗೊಂಡಿವೆ. ಆರಣ್ಯಕ ಅಧಿಕಾ ಉಪನಿಷತ್ತುಗಳಲ್ಲಿ ಶುದ್ಧವಾದ ಆಧ್ಯಾತ್ಮಿಕ ಚರ್ಚೆಯು ಸಮಾವೇಶವಾಗಿದೆ. ಇವುಗಳಲ್ಲಿ ಅರಣ್ಯದೊಳಗೆ ವಾಸಿಸುತ್ತಿರುವ ಸನ್ಯಾಸಿಗಳು, ಈಶ್ವರ, ಜಗತ್ತು, ಮನುಷ್ಯ ಈ ಮೂರು ಪ್ರಶ್ನೆಗಳನ್ನು ಕುರಿತು, ಕೂಲಂಕಷವಾಗಿ ವಿಚಾರಿಸಿ ಹೊರಡಿಸಿದ ಪ್ರಮೇಯ ಹಾಗೂ ನಿತ್ಯಸಿದ್ಧವಾದ ಸಿದ್ಧಾಂತಗಳಿರುತ್ತವೆ. ಅತ್ಯಂತ ಬೆಲೆಯುಳ್ಳ ಮತ್ತು ಗೂಢವಾದ ಆರ್ಯರ ತತ್ವಜ್ಞಾನವೆಂಬುದೆಲ್ಲ ಉಪನಿಷತ್ತುಗಳಲ್ಲಿ ಶೇಖರಗೊಂಡಿದೆ. ಮನುಷ್ಯನ ಅತ್ಯಂತಿಕವಾದ ಧ್ಯೇಯ ಸಾಧನೆಯು ಕೊನೆಯ ಮೆಟ್ಟಿಲೆಂದೂ, ವೇದಕರ್ಮದಿಂದಾಗುವ ಕೊನೆಯ ನಿಜವಾದ ಜ್ಞಾನವೆಂದೂ ಇದಕ್ಕೆ ಗೌರವಸೂಚಕವಾದ ವೇದಾಂತವೆಂದು ಹೆಸರು.

ಆರ್ಯರ ರಾಷ್ಟ್ರೀಯ ದೇವರು:- ಪ್ರಾಚೀನ ಆರ್ಯರು ಮುಖ್ಯವಾಗಿ ಸೃಷ್ಟಿಯು ಉಪಾಸಕರಾಗಿದ್ದುದು ಋಗ್ವೇದದಿಂದ ತಿಳಿಯುತ್ತದೆ; ಮತ್ತು ಅದನ್ನೇದಿ ನಮಗೆ ಬಹು ಸೋಜಿಗವೆನಿಸುತ್ತದೆ. ಆರ್ಯರಿಗೆ ಸೂರ್ಯ, ನದಿ, ಗಾಳಿ, ಅಗ್ನಿ, ಮಳೆ, ಮಳೆಯ ದೇವರಾದ ಇಂದ್ರ, ಸಮುದ್ರ ಇವೆಲ್ಲ, ನಿಸರ್ಗರಮಣೀಯವಾದ ಶಕ್ತಿ

ವಿಶೇಷಗಳನ್ನು ಧರಿಸಿರುವ ಪ್ರಭಾವಶಾಲಿಯಾದ ಪಂಚಮಹಾಭೂತಗಳ ಸ್ವರೂಪಗಳು ಜೀವಂತ ದೇವತೆಗಳಂತೆ ಕಂಡವು; ಅವುಗಳಲ್ಲಿ ಇಂದ್ರನೊಬ್ಬನಂತೂ ಅವರ ಅತ್ಯಂತ ಜೀವದ ನೆಂಟನೇ ಸರಿ. ಇಂದ್ರನು ಆರ್ಯರ ಪುರಾತನ ದೇವತೆಯಾಗಿದ್ದುದರಿಂದ ಅವನು ಆರ್ಯರ ರಾಷ್ಟ್ರೀಯ ದೇವರೆಂದು ಹೇಳಬಹುದು; ಚಿಕ್ಕ ಮಕ್ಕಳು ಏನೂ ಅರಿಯದೆ ಪ್ರತಿಯೊಂದಕ್ಕೂ ತಮ್ಮ ತಾಯಿತಂದೆಗಳನ್ನು ಕಾಡಿಬೇಡುವಂತೆ, ಮೊರೆಯಿಡುವಂತೆ, ಆರ್ಯರು ಬಹು ಸಲಿಗೆಯಿಂದ ಇಂದ್ರನಿಗೆ ಅಡಿಗಡಿಗೆ ಶರಣು ಹೊಕ್ಕಿರುವರು; ಮತ್ತು ತನ್ನ ಭಕ್ತರಾದ ಆರ್ಯರ ಪ್ರಾರ್ಥನೆಗನುಗುಣವಾಗಿ ಇಂದ್ರನು ರಾಕ್ಷಸರೊಡನೆ ಕಡುಕದನವಾಡಿ, ತನ್ನ ವಜ್ರದಿಂದ ಅವರನ್ನು ಸೋಲಿಸಿದ್ದೂ, ವೃತ್ರಾಸುರನನ್ನು ದಿಕ್ಕುಪಾಲಾಗಿ ಓಡಿಸಿದ್ದೂ, ಅವೇ ಮುಂತಾದ ಇಂದ್ರನ ವೀರಕಾರ್ಯಗಳನ್ನು ಹಾಡತೊಡಗಿದರೆ, ಆರ್ಯರ ಮೈ ಎಚ್ಚರ ತಪ್ಪುತ್ತದೆ. ಅದರ ಮೇಲಿಂದ ಆರ್ಯರಿಗೆ ಇಂದ್ರನಲ್ಲಿ ಎಷ್ಟು ಅಲ್ಲಾಡದ ಭಕ್ತಿಯಿತ್ತೆಂಬುದರ ಅನುಮಾನವಾಗುತ್ತದೆ. ಇಂದ್ರನ ಅಮಿತ ಪರಾಕ್ರಮ, ಅತುಲವಾದ ಶಕ್ತಿ, ಸಾಮರ್ಥ್ಯಗಳನ್ನು ಮನಗಂಡವರಾಗಿಯೇ ವೈದಿಕ ಆರ್ಯರು ಅವನನ್ನು ತಮ್ಮ ಕುಲದೇವತೆಯನ್ನಾಗಿ ಮಾಡಿಕೊಂಡಿರಲಿಕ್ಕೆ ಸಾಕು; ಮೇಲಾಗಿ ಆರ್ಯರು ಯುದ್ಧಪ್ರಿಯರಿದ್ದರೆಂಬುದೂ ಇದರಿಂದ ಸಿದ್ಧವಾಗುತ್ತದೆ. ಇಂದ್ರನು ಸೋಮರಸಪ್ರಿಯನಾದ ದೇವತೆಯಾದ್ದರಿಂದ, ಆರ್ಯರು ಅವನಿಗೆ ಯಥೇಚ್ಛವಾಗಿ ಅಗ್ನಿಯ ದ್ವಾರದಿಂದ ಸೋಮರಸವನ್ನರ್ಪಿಸಿ, ಪ್ರಸಾದವೆಂದು ತಾವೂ ಸ್ವೀಕರಿಸುತ್ತಿದ್ದರು. ಸೋಮರಸವನ್ನು ಮಿತಿಮೀರಿ ಕುಡಿದು ಮೈಮರೆತಿರುವ ಇಂದ್ರನ ಸೊಗಸಾದ ವರ್ಣನೆಯು ಋಗ್ವೇದದಲ್ಲಿದೆ.

ಗೃಹದೇವತೆಯಾದ ಅಗ್ನಿ:- ಯಜ್ಞದ ಅಗ್ನಿಯು ಮನುಷ್ಯನಿಗೂ ದೇವರಿಗೂ ಮಧ್ಯಸ್ಥನಾಗಿರುವನೆಂದೂ, ಅವನು ಆಯಾ ದೇವತೆಗಳಿಗೆ ಹವಿರ್ಭಾಗವನ್ನು ಮುಟ್ಟಿಸುತ್ತಾನೆಂದೂ ಆರ್ಯರ ಭಾವನೆಯಿರುವದರಿಂದ, ಅಗ್ನಿಯನ್ನು ಪರಮಮಿತ್ರನೆಂದೂ, ತಂದೆಯೆಂದೂ ಸಂಭಾವಿಸಿದ್ದಲ್ಲದೆ, ಅವನಿಂದ ಹಲವು ಆಶೀರ್ವಾದಗಳನ್ನು ಬೇಡಿಕೊಂಡಿ



ವೃತ್ರಾಸುರ ವಧೆ. ವೃತ್ರಮಾತೆಯ ಅಳಲು.

ರುವರು. ಇಂದ್ರನು ಹೇಗೆ ರಣದೇವತೆಯೋ, ಹಾಗೆ ಅಗ್ನಿಯು ಗೃಹ ದೇವತೆ. ತಮ್ಮ ಮನೆಮಾರು ಮಕ್ಕಳುಮರಿಗಳನ್ನು ಅಗ್ನಿಯು ಕಾಪಾಡಿ ವಂಶವೃದ್ಧಿಗೊಳಿಸುವನೆಂದು ಅವರ ನಂಬುಗೆಯಿರುವದರಿಂದ ಅಗ್ನಿಗೆ ಆರ್ಯರು 'ಗೃಹಪತಿ' ಯೆಂದು ಪದೇಪದೇ ಸಂಬೋಧಿಸಿರುವರು. ಹೀಗೆ ಅವರ ದೃಢನಂಬುಗೆಯಿರುವದರಿಂದಲೇ, ಗರ್ಭಾಧಾನ ಮೊದಲೆಗ್ಗೊಂಡು ಹದಿನಾರು ಸಂಸ್ಕಾರಗಳು ಗೃಹಪತಿಯಾದ ಅಗ್ನಿಸಾಕ್ಷಿಯಾಗಿಯೇ ನಾಗುತ್ತಿದ್ದವು. ಈಹೊತ್ತಿಗೂ ಅವು ಆರ್ಯರಲ್ಲಿ ನಡೆಯುತ್ತಿವೆ; ಅಗ್ನಿಯಿಲ್ಲದೆ ಆರ್ಯರ ಯಾವ ಸಂಸ್ಕಾರಗಳೂ ನಡೆಯಲಾರವು; ವಿವಾಹ ಪ್ರಸಂಗದೊಳಗೆ ಅನ್ನುವ ಕೆಲವು ಮಂತ್ರಗಳಲ್ಲಿ ಅಗ್ನಿಯು ಕುಮಾರಿಕೆಯರ ಪತಿಯಿರುವನೆಂದೂ, ಸೊಸೆಯು ಮೊದಲಿಗೆ ಅತ್ತೆಯ ಮನೆಗೆ ಬಂದರೆ, ಅಗ್ನಿದೇವತೆಗೆ ಪ್ರದಕ್ಷಿಣೆ ಹಾಕಬೇಕೆಂದೂ ಹೇಳಿಯಿದೆ. ಅಗ್ನಿ ದೇವತೆಯನ್ನು ಕುರಿತು, ವೈದಿಕಆರ್ಯರ ಬಾಯಿಂದ ಭಕ್ತ್ಯುನ್ಮೇಷದಿಂದ ಬಹು ಕಾವ್ಯಮಯ, ಗೂಢ ಹಾಗೂ ಅಲಂಕಾರಿಕವಾದ ಸೂಕ್ತಗಳು ಹೊರಬಿಲ್ಲಿವೆ; ಅವುಗಳಲ್ಲಿ ಒಂದೆರಡನ್ನು ಮಾದರಿಗಾಗಿ ಇಲ್ಲಿ ಕೊಟ್ಟಿರೆ, ಪೀಠಿಕೆಯಾದೀತೆಂದೆಣಿಸಿ ಕೊಡುತ್ತೇವೆ.

ಒಬ್ಬ ವೈದಿಕಋಷಿಯು ಅಗ್ನಿದೇವತೆಯನ್ನು ಸ್ತುತಿಸುವಾಗ್ಗೆ "ಅಗ್ನಿಯ ಮುಖವು ಒಳ್ಳೇ ಪ್ರಫುಲ್ಲಿತವಾದ್ದು, ಮೈಯೆಲ್ಲವೂ ತೇಜಃಪುಂಜವಾಗಿದೆ; ಅಗ್ನಿಯು ಕೂದಲಿನೊಳಗಿಂದ ತುಪ್ಪವು ತೊಟ್ಟಿಕ್ಕಿದೆ; ಅವನ ಹಲ್ಲುಗಳು ಚಿನ್ನದಂತೆ, ಮಿರಿ ಮಿರಿ ಮಿಂಚುತ್ತಿವೆ" ಎಂದು ವರ್ಣಿಸಿದ್ದಾನೆ; ಇದರ ಮೇಲಿಂದ ಆರ್ಯಋಷಿಗಳಿಗೆ ಅಗ್ನಿಯು ಸಾಕ್ಷಾತ್ ನಾರಾಯಣನಂತೆಯೇ ಕಾಣುತ್ತಿದ್ದನೆಂಬುದು ಸ್ಪಷ್ಟವಾಗುತ್ತದೆ.

ಅನೇಕರು ಅಗ್ನಿನಾರಾಯಣನಿಗೆ ತ್ವರೆಯಿಂದ ಓಡುವ ದೂತನೆಂದೂ, ಹುರುಪಿನಿಂದ ಹೇಳಿಕಳುಹುವ ಕುದುರೆಯೆಂದೂ, ಡುರಕೇ ಹಾಕುವ ಹೋರಿಯೆಂದೂ ರೂಪಕ ಮಾಡಿದ್ದಾರೆ.

ವರುಣ ಮತ್ತು ಉಷಾಸೂಕ್ತಗಳು:- ಋಗ್ವೇದದೊಳಗಣ ವರುಣಸೂಕ್ತಗಳು ಸ್ತುತಿಯಿಂದಲೂ, ತಾಳಬದ್ಧತೆಯಿಂದಲೂ, ಹಿರಿದಾ

ಗಿವೆ; ವರುಣನೊಡನೆ ಆರ್ಯರು ತೀರ ಸಖ್ಯವಾಗಿ ನಡೆದುಕೊಂಡಿದ್ದಾರೆ. ವರುಣನ ದೆಸೆಯಿಂದ ಅವರೆಷ್ಟು ನಯಭಯಗಳನ್ನು ತೋರಿಸಿರುವರೋ, ಅಷ್ಟು ಯಾರ ಬಗ್ಗೆಯೂ ತೋರಿಸಿರುವದಿಲ್ಲ. ಬೆಳಗು ಮುಂಜಾವಿನ ಉಷಾದೇವಿಯನ್ನು ಸ್ತುತಿಸುವ ಭರದೊಳಗಂತೂ ಆರ್ಯಋಷಿಗಳ ಬಾಯಿಂದ ಧಳಧಳನೆ ಹೊಳೆಯುವ ಮುತ್ತುಗಳು ಉದುರಿದಂತಾಗಿವೆ. ಉಷಾದೇವಿಯನ್ನು ಸ್ತುತಿಸುವದರೊಳಗೆ ಋಷಿಗಳಲ್ಲಿ ಮೀರಿದ ಮೇಲಾಟನಡೆದಂತೆ ಭಾಸವಾಗುತ್ತದೆ; ಉಷಾದೇವಿಗೆ ಎಷ್ಟು ರೀತಿಯಿಂದ ಬೇರೆ ಬೇರೆ ಅಲಂಕಾರಿಕವಾದ ದೃಷ್ಟಾಂತ ಉಪಮೆಗಳನ್ನು ಕೊಟ್ಟರೂ ಆರ್ಯರ ಮನಸ್ಸು ದಣಿಯದು. ಬಂದು ಗಳಿಗ್ಗೆ 'ತಾಯಿಯು ಅಕ್ಕರತೆಯಿಂದ ಸಿಂಗರಿಸಿದ ಮುದ್ದಾದ ಮದುಮಗಳಂತೆ ಉಷಾದೇವಿಯು ತನ್ನ ದೀಪ್ತಿಯಿಂದ ಜನರ ಕಣ್ಣುಗಳನ್ನು ಮಂಜು ಮಂಜುಗೆರಿಸುತ್ತ ಅಡಿಯಿಡುತ್ತಾಳೆಂದು ವರ್ಣಿಸಿದ್ದಾರೆ; ಮತ್ತೆಂದು ವೇಳೆ 'ಉಷೆಯು ನರ್ತಕಿಯರಂತೆ, ಮೈಮೇಲೆ, ತೇಜೋಮಯವಾದ ಜರತಾರಿಯ ವಸ್ತ್ರಗಳನ್ನುಟ್ಟುಕೊಂಡು ತನ್ನ ಹೃದಯ ಪ್ರದೇಶವನ್ನು ಜನರಿಗೆ ತೆರೆದು ತೋರಿಸುತ್ತಾಳೆಂದು' ಬಣ್ಣಿಸಿದ್ದಾರೆ. ಇನ್ನೊಂದೆಡೆಯಲ್ಲಿ, 'ಝಗಝಗಿಸುವಂಥ ಬಟ್ಟೆಗಳನ್ನುಟ್ಟುಕೊಂಡು ಈ ಉಷೆಯು ಏರು ಯೌವನದ ಕನ್ನಿಕೆಯಂತೆ, ಮೂಡಣ ದಿಕ್ಕಿನಲ್ಲಿ ಮೂಡಿ ಮೆಲ್ಲಮೆಲ್ಲನೆ ತನ್ನ ಸೌಂದರ್ಯವನ್ನು ಅರಳಿಸುತ್ತಾಳೆ'ಂದು ಉಪಮಿಸಿಕೊಟ್ಟಿರುವರು. ಸೂರ್ಯನ ವಿಷಯವಾಗಿ ಬಣ್ಣಿಸುವಾಗ್ಗೆ "ಚಿನ್ನದ ಕೈಕಾಲು, ಕಣ್ಣು ಅಷ್ಟೇ ಅಲ್ಲದೆ ನಾಲಿಗೆಯನ್ನುಳ್ಳ ಚಿನ್ನಮೂರುತಿಯಾದ ಸೂರ್ಯನು ಚಿನ್ನದ ರಥದೊಳಗೆ ನಿಂತುಕೊಂಡು, ಜೀವನ ಪ್ರದವೂ ತೇಜಪ್ರದವೂ ಆದ ತನ್ನ ಕಿರಣಗಳಿಂದ ಜನರುಗಳಿಗೆ ತಮ್ಮ ತಮ್ಮ ಕಾರ್ಯಗಳನ್ನು, ಉದ್ದೇಶಗಳನ್ನು ಕಡೆಗಾಣಿಸಲು ಜೀವ ತುಂಬಿಸುವಂತಿರುವನು; ಈತನನ್ನು ಕಂಡರೆ, ನಕ್ಷತ್ರಗಳು ಕಳ್ಳರಂತೆ ಹೆದರಿ ಓಡುತ್ತವೆ; ಈತನೇ ಚರಾಚರ ಸೃಷ್ಟಿಯ ಚೈತನ್ಯವು." ಎಂದು ಭಾವೋದ್ರೇಕದಿಂದ ಪ್ರಾರ್ಥಿಸಿರುವರು. ಸೂರ್ಯನಿಗೆ ಸಾವಿತ್ರಿಯೆಂದು ಕರೆದು ಮೊರೆಹೊಕ್ಕಿದ್ದ ಈ ಸಾವಿತ್ರೀದೇವಿಯ ಉಪಾಸ

ನೆಯ ಮಂತ್ರಕ್ಕೆ ಗಾಯತ್ರೀಮಂತ್ರವೆಂದು ಹೆಸರು; ಈ ಗಾಯತ್ರೀ ಮಂತ್ರವನ್ನು ಈಗಲೂ ಬ್ರಾಹ್ಮಣರು ದಿನಾಲು ಜಪಿಸಿಯೇ ತೀರಬೇಕೆಂದು ನಿಯಮವಿದೆ; ಗಾಯತ್ರೀಮಂತ್ರದಲ್ಲಿ "ಆ ಶ್ರೇಷ್ಠವಾದ ತೇಜಸ್ಸುಳ್ಳ ಸೂರ್ಯನು ನಮ್ಮ ಬುದ್ಧಿಯನ್ನು ಪ್ರಕಾಶಗೊಳಿಸಲಿ" ಎಂಬ ತೇಜೋರೂಪಕ ಅರ್ಥವಿರುವದು ವ್ಯಕ್ತವಾಗುತ್ತದೆ. ಈ ಉದಾಹರಣೆಗಳು ಎಷ್ಟು ಕಾವ್ಯಮಯವಾಗಿರುವವು!

ದಾಶರಾಜ್ಞ ಯುದ್ಧವು:-ಋಗ್ವೇದದಲ್ಲಿ ಬರೆಯ ಸೂಕ್ತಗಳು ಇರದೆ, ಅನೇಕ ಮೈ ಹುರಿಗೊಳಿಸುವಂಥ ಪ್ರಸಂಗಗಳೂ ಇವೆ. ಅವುಗಳಲ್ಲಿ 'ದಾಶರಾಜ್ಞ' ಯುದ್ಧದಂಥ ಅತಿ ವ್ಯಾಪಕವೂ, ಮಹತ್ವಪೂರ್ಣವೂ ಅದ ಬೇರೆಯಾವುದು ಪ್ರಸಂಗವಿಲ್ಲ; ಈ ಮಹಾ ರಾಷ್ಟ್ರೀಯ ಪ್ರಸಂಗದೊಳಗೆ ತತ್ಕಾಲೀನರಾದ ಹಲವು ಋಷಿಗಳೂ, ವೀರಾಧಿವೀರರಾದ ಕ್ಷತ್ರಿಯ ಬಂಟರೂ ಸೇರಿದ್ದರು. ಹತ್ತು ಜನ ಅರಸರೊಳಗೆ ಈ ಯುದ್ಧವು ನಡೆದುದರಿಂದ ಇದಕ್ಕೆ ದಾಶರಾಜ್ಞಯುದ್ಧವೆಂದು ಹೆಸರು. ಈ ದಾಶರಾಜ್ಞ ಯುದ್ಧದೊಳಗೆ ಬಂದುಕಸಿ ಯದು, ತುರ್ವಶ, ದ್ರುಹ್ಯು, ಅನು, ಮತ್ತು ಪುರು ರಾಜರುಗಳೂ, ಮತ್ತೆತ್ತಿಂದುಕಡೆ, ಭರತರೂ, ಸುದಾಸರಾಜನೂ, ವಸಿಷ್ಠ ಹಾಗೂ ತ್ರಿತ್ಸುಗಳೂ ಯುದ್ಧ ಹೂಡಿದ್ದಾರೆ; ಮುಂದೆ ಈ ಯುದ್ಧದೊಳಗೆ ಪುರು,ಯದು,ತುರ್ವಶ ಮುಂತಾದ ಹತ್ತು ರಾಷ್ಟ್ರದವರಿಗೆ ಸೋಲಾಗಿ ಭರತರು ರಾಜ್ಯ ಸ್ಥಾಪಿಸಿದರು. ಈ ಯುದ್ಧವು ಪಂಜಾಬಿನಲ್ಲಿಯ ರವಿ ನದಿಯೆಂದರೆ ಪೂರ್ವದಲಿನ ಪರುಷ್ಣಿ ನದಿಯ ದಂಡೆಯಲ್ಲಾಯಿತು.

ದಿವೋದಾಸ:-ಭರತಕುಲದ ದಿಗ್ವಿಜಯಿರಾಜನಾದ ದಾನಶೂರ ದಿವೋದಾಸನು ಆಯು, ಹಾಗೂ ಕುತ್ಸ ಜನರೊಡನೆ ಮಿತ್ರ ಸಂಘವನ್ನು ಮಾಡಿಕೊಂಡು, ಅಫಗಾಣ ರಾಜನಾದ ತುರ್ವಯಾಣನನ್ನು ಸೋಲಿಸಿದನು. ಆರ್ಯರ ಗೋಧನವನ್ನು ತ್ರಿತ್ಸುಗಳು ಹರಣಮಾಡಿ, ಅವರನ್ನು ಯುದ್ಧದೊಳಗೆ ಕೊಂದರು. ಆ ಕಾಲದೊಳಗೆ ಭರತರು ಅತ್ಯಂತ ಶೂರರಿದ್ದರು; ಈ ಭರತ ಪಂಗಡದವರ ನಾಯಕರೆಂದರೆ ದಿವೋದಾಸ ಹಾಗೂ ಸುದಾಸರು. ತಂದೆಮಕ್ಕಳಾದ ಇವರೀರ್ವರೂ

ಅಫಗಾನಾ ದೇಶವಾದ ಗಾಂಧಾರದಿಂದ ಕುರುಕ್ಷೇತ್ರದ ವರೆಗೆ ತಮ್ಮ ಬಾಹುಬಲದಿಂದ ರಾಜ್ಯವನ್ನು ಗೆದ್ದಿದ್ದರು. ದಿವೋದಾಸನ ಮಗನಾದ ಸುದಾಸನಿಗೂ ತ್ರಿತ್ಸುಗಳಿಗೂ ಕೆಲವೆಡೆಯಲ್ಲಿ ಯುದ್ಧವಾಗಿದೆ; ಮತ್ತೆ ಹಲವೆಡೆಯಲ್ಲಿ ಸ್ನೇಹಸಂಬಂಧವು ಬೆಳೆದಿದೆ. ಭರತಕುಲದ ಈ ವೀರರಿಬ್ಬರಿಂದಲೇ ಹಿಂದೂ ದೇಶಕ್ಕೆ 'ಭರತಖಂಡ'ವೆಂಬ ಹೆಸರು ಬಂದಿತು; ಋಗ್ವೇದದೊಳಗೆ ರಾಷ್ಟ್ರಸಂಸ್ಥಾಪಕರಾದ ಭರತರ ವೈಭವವು ನಮಗೆ ಓದಲಿಕ್ಕೆ ದೊರೆಯುತ್ತದೆ. ಈ ಭರತಕುಲದವರಿಗೆ ಒಂದು ಕಾಲಕ್ಕೆ ವಸಿಷ್ಠರೂ, ಮತ್ತೊಂದು ಕಾಲಕ್ಕೆ ವಿಶ್ವಾಮಿತ್ರಋಷಿಗಳ ಮುಂದಾಳುಗಳಿದ್ದರು. ಇವರು ಇಂದ್ರನ ಕೇವಲ ಭಕ್ತರಾಗಿದ್ದುದರಿಂದ ಸತ್ಪಶೀಲನಾದ ದಿವೋದಾಸನ ದೆಸೆಯಿಂದ ಶತ್ರುಗಳ ನಗರಾರು 'ಕಲ್ಲಿನ ಭದ್ರವಾದ ಕೋಟೆಗಳನ್ನು' ಇಂದ್ರನು ಸೋಮರಸ ಕುಡಿದು ಆನಂದ ನಿರ್ಭರನಾಗಿ ಕೆದಕಿ ಮಣ್ಣುಪಾಲು ಮಾಡಿದ ಅತ್ಯಂತ ವೀರರಸದಿಂದುಕ್ಕುವ ಉದಾಹರಣೆಗಳು ಅಲ್ಲಲ್ಲಿ ಕಂಗೊಳಿಸುತ್ತಿವೆ. ಕೆಲವು ಕಡೆಯಲ್ಲಿ ಭರತರು ಸೋಲುವ ಹೊತ್ತು ಬಂದಾಗ್ಗೆ, ವಸಿಷ್ಠಋಷಿಗಳು ಇಂದ್ರನನ್ನು ಸ್ತುತಿಸಲು, ಇಂದ್ರನ ಕೃಪೆಯಿಂದ ನದಿಯು ದಾರಿಬಿಟ್ಟು, ತಿರುಗಿ ಶತ್ರುಗಳ ಸೈನ್ಯವನ್ನೇ ಸೆಳೆದುಕೊಂಡು ಹೋಗಲು, ಭರತರು ಶತ್ರುಗಳನ್ನು ಸುಲಿದುಕೊಂಡು ಹೋದರು. ಈ ಸಂಗ್ರಾಮದಲ್ಲಿ ವೀರದಿವೋದಾಸನು ಒಂದು ಲಕ್ಷ ಶತ್ರುಗಳನ್ನು ಕೊಂದನಂತೆ! ದಿವೋದಾಸನ ಮಗನಾದ ಸುದಾಸನಾದರೂ ತಂದೆಯಂತೆಯೇ ಬಹು ಶೂರನು; ಈತನ ಹೆಂಡತಿಯ ಹೆಸರು ಸುದೇವಿ. ಸುದಾಸನು ಅಶ್ವಮೇಧಯಾಗವನ್ನು ಮಾಡಬೇಕೆಂದೆಣಿಸಿ, ಅಶ್ವವನ್ನು ಬಿಟ್ಟಿದ್ದನು. ಮುಂದೆ ವಸಿಷ್ಠರ ನೆರವಿನಿಂದಲೇ, ಅಶ್ವಮೇಧ ಯಜ್ಞವನ್ನು ಮಾಡಿಸಿ, ಸಾಮ್ರಾಜ್ಯಾಭಿಷೇಕವನ್ನು ಮಾಡಿಸಿಕೊಂಡನು. ಭರತರು ತ್ರಿತ್ಸು ಹಾಗೂ ಬೇರೆ ಪಂಗಡದವರೊಡನೆ ಅನೇಕ ಕಾಲ ಯುದ್ಧ ನಡಿಸಿದ ಋಗ್ವೇದದೊಳಗಿನ ವರ್ಣನೆಯು ಬಹು ಉತ್ಸಾಹಕೊಡುವಂತಾಗಿದೆ. ಅದರೆ ಮುಂದೆ ತ್ರಿತ್ಸುಗಳೂ ಭರತರೂ ಒಂದಾದರು. ಇದರೊಳಗೆ ಭರತರು ಕ್ಷಣ ಕ್ಷಣಕ್ಕೆ ಹೇಗೆ ಇಂದ್ರನಿಗೆ ತಮ್ಮ ಸಹಾಯಾ

ರ್ಥವಾಗಿ ಕರೆದರೆಂಬುದೂ, ಇಂದ್ರನು ಧಾವಿಸಿ ಬಂದು ಅವರಿಗೆ ಸಹಾಯ ಮಾಡಿದ ಬಗ್ಗೆ ಭರತರು ಅವನನ್ನು ಅನನ್ಯಭಾವದಿಂದ ಸ್ತುತಿಸಿದ ವರ್ಣನೆಗಳೂ ಓದತಕ್ಕಂಥವುಗಳಾಗಿವೆ. ಈ ಭರತವಂಶದ ರಾಜರೇ ಭಾರತ ರಾಮಾಯಣ ಕಾಲದ ಸೂರ್ಯವಂಶ ಕ್ಷತ್ರಿಯರ ಮೂಲಪುರುಷರೆಂದು ಕೆಲವರು ತರ್ಕಿಸುತ್ತಾರೆ. ವೈದಿಕಕಾಲದ ಭರತಕುಲಲಲಾಮರಾದ ವೀರಾಗ್ರಣಿಗಳೂ, ರಾಷ್ಟ್ರಸಂಸ್ಥಾಪಕರೂ ಆದ ದಿವೋದಾಸ ಸುದಾಸರನ್ನು ಆರ್ಯರಾದ ನಾವೀಗ ಮರೆತಿದ್ದೇವೆ; ಆರ್ಯರು ವೀರ್ಯಯುಕ್ತವಾದ ತಾರುಣ್ಯದ ಭಕ್ತರೂ, ಅಪಾರಸಂಪತ್ತಿಯ ಭೋಕ್ತಾರರೂ, ರಾಷ್ಟ್ರೋದ್ಧಾರಕರೂ, ವೈರಿಗಳನ್ನು ತರಿದು ದುರ್ವ್ಯಾಪಿಸುವ ವೀರರೂ, ಸೃಷ್ಟಿದೇವತೆಯ ನಿಶ್ಚಿಂತ ಉಪಾಸಕರೂ ಭಾವಸಂಪನ್ನರಾದ ಕವಿಗಳೂ ಆಗಿರುವದಕ್ಕೆ ಬೇರೆ ದೃಷ್ಟಾಂತಗಳು ಬೇಕೇ?

ಆರ್ಯರ ಸಾಮಾಜಿಕಸ್ಥಿತಿಯು:– * ವಿರಾಟ್‌ಪುರುಷನಾದ ಭಗವಂತನ ನಾಲ್ಕು ಅವಯವಗಳಿಂದ ನಾಲ್ಕು ವರ್ಣಗಳು ಹುಟ್ಟಿದವೆಂದು ವೇದದಲ್ಲಿರುವ ಪುರುಷಸೂಕ್ತವು ಗರ್ಜಿಸುತ್ತಿದೆ; ಅಂದಮೇಲೆ ಅವರಲ್ಲಿಯ ವರ್ಣಗಳು ಇತ್ತಿತ್ತ ಹುಟ್ಟಿವೆಯೆಂದು ಯಾರು ಯಾವ ನಾಲಿಗೆಯಿಂದ ಎದೆತಟ್ಟಿ ಹೇಳುವದು? ಪ್ರತಿಯೊಂದು ಸಮಾಜದೇಹಗಳಿಗೆ ಈ ವರ್ಣವ್ಯವಸ್ಥೆಯು ಬಂದಿಲ್ಲಿಂದು ಬೀಜಸ್ವರೂಪದಿಂದ ಇದ್ದೇ ಇರುತ್ತದೆ. ಕೆಲಕಡೆಯಲ್ಲಿ ಅದು ವ್ಯಕ್ತಸ್ವರೂಪಕ್ಕೆ ಬಂದಿರುತ್ತದೆ. ಕೆಲವೆಡೆಯಲ್ಲಿ ಬಂದಿರುವದಿಲ್ಲ. ಈ ದೃಷ್ಟಿಯಿಂದ ನೋಡಿದರೆ, ಎಲ್ಲ ಜನಾಂಗಗಳಲ್ಲಿ ಎಲ್ಲ ಕಾಲಗಳಲ್ಲಿ ವರ್ಣಭೇದಗಳು ಇದ್ದೇ ಇದ್ದವು; ಮತ್ತು ಇವೆಯೆಂದೂ ಧಾರ್ಷ್ಟ್ಯದಿಂದ ಹೇಳಬಹುದು. ಆರ್ಯರ ಪ್ರಾಕ್ಕಾಲೀನ ಸ್ಥಿತಿಯನ್ನೇ ಸ್ವಲ್ಪ ತಿಳಿದು ನೋಡಿದರೆ, ಒಳ್ಳೇ ಶಾಂತಿಯ ಕಾಲದಲ್ಲಿ ಗೋಧನ, ದಾಸಕರುಗಳನ್ನು ಕಟ್ಟಿಕೊಂಡು ಭೂಮಿತಾಯಿಯ ಸೇವೆಯಲ್ಲಿ ನಿರತರಾದ ಒಕ್ಕಲಿಗರೇ, ಶತ್ರುಗಳೆರಗಿದಸೆಕಾದುವ ಹೊತ್ತು ಬಂದಾಗ ತಮ್ಮ ಬೇನಾಯದ ನಾಮಾನುಗಳನ್ನೂ, ಯುದ್ಧದ ಉಪಕರ

* ಈ ವಿರಾಟ್‌ಪುರುಷನ ಮುಖವೇ ಬ್ರಾಹ್ಮಣರು; ಬಾಹುಗಳೇ ಕ್ಷತ್ರಿಯರು; ತೊಡೆಗಳೇ ವೈಶ್ಯರು; ಪಾದಗಳೇ ಶೂದ್ರರು. ಇತ್ಯಾದಿ -

ಗಳನ್ನು ಬದಿಗಿರಿಸಿ, ಕಾಳಗಕ್ಕೆ ಸಜ್ಜಾಗುತ್ತಿದ್ದರು; ಸುಲಿಗೆಗಾರರಾದ ದಸ್ಯುಗಳ ಕಾಟವನ್ನು ಪರಿಹರಿಸಬೇಕೆಂದು ಆರ್ಯರು ನಡಿಸಿದ ಸಾಹಸವು ಹೇಳಲಸದಳವು; ದಾಶರಾಜ್ಞ ಯುದ್ಧಕ್ಕಿಂತ ಆರ್ಯರಿಗೆ ಈ ದಸ್ಯುಗಳ ಕಾಟವು ಅತ್ಯಂತ ಅಸಹ್ಯವಾಗಿತ್ತು. ಈ ದಸ್ಯುಗಳ ಕಾಟಕ್ಕಾಗಿ ಗಂಡಸರೂ, ಹೆಂಗಸರೂ ಕೂಡಿಯೇ ಅವರನ್ನು ನಿರ್ನಾಮಗೊಳಿಸಲಿಕ್ಕೆಂದು ಹಗಲು ಹನ್ನೆರಡು ತಾಸು ಸಿದ್ಧರಿರುತ್ತಿದ್ದರು. ರಾತ್ರೆಯಿಲ್ಲ; ಹಗಲಿಲ್ಲ; ಹಸಿವಿಲ್ಲ; ನೀರಡಕೆಯಿಲ್ಲ! ತೃತ್ಸು ಗೃತ್ಸಾಧನವನ್ನು ಕದ್ದೊಯ್ದು ದಸ್ಯುಗಳನ್ನು ಹೊಡೆದೋಡಿಸಲಿಕ್ಕೆಂದು ಮುದ್ಗಲ ಋಷಿಯು ಹೊರಟಾಗ ಅತನ ಹೆಂಡತಿಯಾದ ಮುದ್ಗಲಿನಿಯು ಅಬಲೆಯೆಂಬ ಕಲ್ಪನೆಯನ್ನು ಬದಿಗಿರಿಸಿ, ಪತಿಗೆ ಸಾರಥಿಯಾಗಿ ರಥವನ್ನು ಹೊಡೆದದ್ದನ್ನು, ಬಿಲ್ಲು ಬಾಣಗಳಿಂದ ದಸ್ಯುಗಳನ್ನು ಕೊಂದು ಕದ್ದೊಯ್ದ ಆಕಳ ಹಿಂಡನ್ನು ತಿರುಗಿ ತರುವದಕ್ಕಾಗಿ ಗಂಡನಿಗೆ ಸೆರವಾದ ಸಂಗತಿಯನ್ನು ಋಗ್ವೇದದೊಳಗೆ ಓದಿದರೆ, ಆ ವೀರಯುಗದ ಬಗ್ಗೆ ಕೌತುಕವೆನಿಸುತ್ತದೆ. ವಿಶ್ವಾಮಿತ್ರ, ವಸಿಷ್ಠಾದಿಋಷಿಯರ್ಯರು ತಮ್ಮ ತಮ್ಮ ಪಂಗಡದ ಅರಸರಿಗೆ ಸೆರವಾಗಿರುವದನ್ನು ನಾವು ಹಿಂದೆ ಕೊಟ್ಟಿದ್ದೇವೆ. ಇದರಮೇಲಿಂದ ವೈದಿಕಕಾಲಕ್ಕೆ ಜಾತಿಗಳ ಗೊಂದಲವಿರದೆ, ಬರಿಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳು ಮಾತ್ರ ಇದ್ದವೆಂದು ಸಿದ್ಧವಾಗುತ್ತದೆ. ಸಮಾಜವು ಬಾಲ್ಯಾವಸ್ಥೆಯಲ್ಲಿದ್ದುದರಿಂದ ಯಾರು ಒಂದು ಕಾಲಕ್ಕೆ ಬ್ರಾಹ್ಮಣರಾಗಿ, ಯಜ್ಞಯಾಗಾದಿಗಳನ್ನು ನಡಿಸಿ, ಅದರೊಳಗೆ ಪುರೋಹಿತರಾಗಿ ಮಂತ್ರಾದಿಗಳನ್ನು ಅನ್ನುತ್ತಿದ್ದರೋ, ಅವರೇ ಯುದ್ಧಾದಿಗಳಲ್ಲಿ ಕೂಡ ಆವೇಶದಿಂದ ಕಾದುತ್ತಿದ್ದರು; ಮೊದಲು ಇಂಥವನು ಇಂಥದೇ ಉದ್ಯೋಗವನ್ನು ಮಾಡತಕ್ಕುದೆಂಬ ಕಟ್ಟಳೆಯಿರಲಿಲ್ಲ. ಸಮಾಜವು ನೇರವಾಗಿ ನಾಗಬೇಕಾದರೆ ಒಬ್ಬೊಬ್ಬರು ಒಂದೊಂದು ಕಾರ್ಯವನ್ನು ತಲೆಯಮೇಲೆ ಹೊರಬೇಕಷ್ಟೆ! ಅದರಂತೆ ನೋಡಿದರೆ, ಸಾಧಾರಣವಾಗಿ ಬ್ರಾಹ್ಮಣರು ತಮ್ಮ ಬ್ರಹ್ಮತೇಜಸ್ಸಿನಿಂದ ಯಜ್ಞಯಾಗ, ಸ್ತುತಿಮಂತ್ರಗಳನ್ನು ಮಾಡಲು ಪ್ರಾರಂಭಿಸಿದರು; ಕ್ಷತ್ರಿಯರು ತಮ್ಮ ಕ್ಷಾತ್ರ

ತೇಜದಿಂದ ಸಮಾಜ ಕ್ಷೇಮಕ್ಕಾಗಿ ರಕ್ಷಕರಾಗಿ ನಿಂತರು; ವೈಶ್ಯತೇಜಸ್ಸಿನವರಾದ ವಾನೀಸರಂಧವರು ಎಲ್ಲವನ್ನು ಅಲಕ್ಷವಾಡಿ, ವ್ಯಾಪಾರ, ಹಡಗುಪಡೆ ಮೊದಲಾದ ಸಾಹಸಗಳಲ್ಲಿಯೇ ತಮ್ಮ ವೀರ್ಯವನ್ನು ಪ್ರಕಟಗೊಳಿಸಿದರು; ಶೂದ್ರರು ಅಂದರೆ ಎಲ್ಲಿಯೂ ಆಸರವಿಲ್ಲದೆ, ಆರ್ಯರ ತಿದ್ದುಪಡೆಯನ್ನು ನೋಡಿ, ಶುದ್ಧರಾಗಬೇಕೆಂದ ದಸ್ಯುಗಳು ಗತಿಗಾಣದೆ, ಆರ್ಯರ ಸೇವೆಯಲ್ಲಿಯೇ ತಮ್ಮ ಶರೀರವನ್ನು ಸವೆಯಿಸಲು ನಿಶ್ಚಯಿಸಿದರು; ನಾರಾಂಶವೇನೆಂದರೆ, ವೈದಿಕಕಾಲಕ್ಕೆ ಜನರನ್ನು ಅವರ ಕೆಲಸಗಳಿಗೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ವಿಂಗಡಿಸಿದರು. ಆದರೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿ ಯಾವುದೆಂದು ನಿರ್ಬಂಧವಿರಲಿಲ್ಲ. ಮದುವೆಯ ಸಂಬಂಧವಾಗಿಯೂ ಯಾವ ವಿಧದ ಕಟ್ಟಳೆಯಿರಲಿಲ್ಲ. ಬ್ರಾಹ್ಮಣನು ಕ್ಷತ್ರಿಯ ಹೆಂಗಸರನ್ನು, ಕ್ಷತ್ರಿಯರು ಬ್ರಾಹ್ಮಣ ಹೆಂಗಸರನ್ನು ಮದುವೆಯಾಗುವವಾಡಿಕೆಯಿತ್ತು; ಮುಂದೆ ಕ್ರಮವಾಗಿ, ಅವರವರ ಸಂಖ್ಯೆಯು ಬೆಳೆದಂತೆಯೂ, ಆಯಾ ಜನರಿಗೆ ಆಯಾ ಉದ್ಯೋಗಗಳ ವಿಷಯದಲ್ಲಿ ಒಂದು ವಿಧದ ಅಭಿಮಾನವು ಹೆಚ್ಚಾದಂತೆಯೂ ಹೆಚ್ಚುಕಡಿಮೆಯಾಗುತ್ತ ನಡೆಯಿತು; ಜಗತ್ತಿನ ಬಾಲ್ಯಾವಸ್ಥೆಯಲ್ಲಿ ಮನುಷ್ಯನ ಅಭಿಮಾನವು ಅಷ್ಟು ಜಾಗೃತವಾಗಿರುವದಿಲ್ಲ; ಅದು ಸಾವಕಾಶವಾಗಿ ವಿಕಾಸಗೊಂಡಂತೆ, ಮನುಷ್ಯನು ಅಭಿಮಾನಿಯಾಗುತ್ತ ನಡೆಯುತ್ತಾನೆ.

ಕುಟುಂಬ ಪದ್ಧತಿಯು:- ವೈದಿಕ ಕಾಲದ ಕೌಟುಂಬಿಕ ನಡೆಯು ಬಹು ಸ್ಪೃಹಣೀಯವಾಗಿತ್ತು; ಮನೆತನಕ್ಕೆ ತಂದೆಯೇ ಹಿರಿಯನು; ಎಲ್ಲರೂ ಅವನ ಆಜ್ಞೆಗೆ ಒಳಪಟ್ಟವರು. ಅವನ ತರುವಾಯ ಮನೆಗೆ ಹಿರಿಯರೆಂದರೆ ಮನೆಯ ಒಡತಿಯಾದ ತಾಯಿಯೇ! ಸೊಸೆಯು ಅತ್ತೆ ಮನೆಯ ಹೊಸ್ತಲಲ್ಲಿ ಅಡಿಯಿಟ್ಟಾಕ್ಷಣವೇ, ಪತಿಗೃಹದಲ್ಲಿ ಹೇಗಿರಬೇಕೆಂಬ ಬಗ್ಗೆ ಮೊದಲು ಆಕೆಗೆ ನೀತಿಯ ಬಾಲಗುಟ್ಟುಯನ್ನು ಹಾಕುತ್ತಿದ್ದರು; ಪತ್ನಿಯು ಪತಿಯ ಸುಖವನ್ನೇ ಲಕ್ಷ್ಯವಾಗಿಟ್ಟುಕೊಂಡು ಬಾಳ್ವೆ ಮಾಡತಕ್ಕದ್ದು. ಪತಿರಾಜನೊಡನೆ ಗೃಹದೇವತೆಗಳನ್ನು ಅತಿಶಯ ಭಯಭಕ್ತಿಯಿಂದ ಭಜಿಸತಕ್ಕದ್ದು. ಅತ್ತೆ ಮಾವಂದಿರ

ರನ್ನು ಪಚರಿಸುತ್ತ ತನ್ನ ಸೌಮ್ಯಸ್ವಭಾವದಿಂದ ಅವರನ್ನು ಆನಂದ ಪಡಿಸತಕ್ಕದ್ದು; ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೇ ಮನೆಯ ಅಳು ಮಕ್ಕಳನ್ನು ನಡಿಸಿಕೊಳ್ಳತಕ್ಕದ್ದು; ಕರುಣಾದೃಷ್ಟಿಯಿಂದಲೂ, ಕರ್ತವ್ಯ ದೃಷ್ಟಿಯಿಂದಲೂ, ಮರ್ಯಾದೆಯಿಂದಲೂ, ಎಲ್ಲರನ್ನು ಸುಖಪಡಿಸುತ್ತ ಮನೆತನದ ರಾಣಿಯಂತೆ, ಅಂತ್ಯಕಾಲದ ವರೆಗೂ ಪತಿವಿರಹವನ್ನರಿಯದೆ, ಸಂಸಾರಯಾತ್ರೆಯನ್ನು ನಾಗಿಸುತ್ತಿದ್ದ ವೈದಿಕಕಾಲದ ಹೆಂಗಸರೆಂದರೆ, ಕರುಣೆಯಲ್ಲಿಯೂ, ಆದರಣೆಯಲ್ಲಿಯೂ, ಆಚರಣೆಯಲ್ಲಿಯೂ, ಮಾತನಾಡುವ ಅಕ್ಷರಗಳೇ ಆಗಿದ್ದರೆನ್ನುವ ಹೊರ್ತು ಮತ್ತೊಂದು ದೃಷ್ಟಾಂತವನ್ನು ಕೊಡಲಿಕ್ಕೆ ಶಬ್ದಸಂಗ್ರಹವೇ ಸಾಲದು. ಅಂಥ ಆರ್ಯಮಾತೆಯರಿದ್ದರೆಂತಲೇ, ಅವರ ಪ್ರಭಾವದಿಂದ, ಅವರ ಹೊಟ್ಟೆಯಿಂದ ಈ ಭಾರತಾಂಬೆಯ ಭೂಮಿಯಲ್ಲಿ ಓಜಸ್ಸಿನ ಮೂರ್ತಿಗಳಾದ ವೀರಪುತ್ರರು ಬೆಳಕಿಗೆ ಬಂದರು; ಅವರ ಪಾತಿವ್ರತ್ಯವು ಅಷ್ಟೆಂದು ಉಜ್ವಲವಾಗಿತ್ತೆಂತಲೇ ಅವರು ಮುದಿತನದಲ್ಲಿಯೂ, ಸೌಭಾಗ್ಯಸುಖದ ಸುಗ್ಗಿಯನ್ನು ಸೂರೆಗೊಂಡರು; ಅಗ್ನಿಯು ದೇವತೆಯೆಂಬ ದೈವಿಕ ಭಾವನೆಯಿರುವದರಿಂದ, ಪ್ರತಿಯೊಂದು ಮನೆಯಲ್ಲಿ ಪವಿತ್ರವಾದ ಅಗ್ನಿದೇವತೆಯನ್ನು ಪರಂಪರಾಗತವಾಗಿ ಅಖಂಡವಾಗಿ ಕಾಯ್ದಿಡುವ ವಾಡಿಕೆಯಿದ್ದಿತು; ಮತ್ತು ಮನೆಯ ಯಜಮಾನನು ತನ್ನ ಹೆಂಡತಿಯನ್ನೆಡಗೂಡಿ, ಅಗ್ನಿನಾರಾಯಣನನ್ನು ಹೋಮಹವನಾದಿಗಳಿಂದ ಅರ್ಚಿಸುತ್ತಿದ್ದನು; ಮನೆಯೊಡೆಯನೂ ಮನೆಯೊಡತಿಯೂ, ಬೆಳಿಗ್ಗೆ ಎಲ್ಲರಿಗಿಂತ ಮೊದಲು ಎದ್ದು, ಗಂಡನು ತನ್ನ ಪ್ರಾತಃಕಾಲ್ಯನ, ಸಂಧ್ಯಾವಂದನೆ, ಸೂರ್ಯೋಪಾಸನೆಯಲ್ಲಿ ನಿರತನಾಗಿರುತ್ತಿದ್ದನು; ಇತ್ತ ಒಡತಿಯು ಮನೆಯ ಕಸಮುಸುರೆ, ನಾರಿಸುವದು, ರಂಗವಲ್ಲ್ಯಾದಿಗಳಿಂದ ಮನೆಯನ್ನು ಅಂದಗೊಳಿಸುವದು ಇವನ್ನೆಲ್ಲ ಮುಗಿಸಿಕೊಂಡು ಪತಿಗೆ ಅಗ್ನಿಕಾರ್ಯದಲ್ಲಿ ನೆರವಾಗುತ್ತಿದ್ದಳು. ಆರ್ಯರ ಪೀಳಿಗೆಯವರಾದ ನಮಗೀಗ ಅಂಥ ಪವಿತ್ರ, ಹಾಗೂ ಉದ್ಬೋಧಕವಾದ ನೋಟವೇ ಅಪರೂಪವಾಗಿದೆಯಲ್ಲ! ಅಗ್ನಿಯು ಗೃಹರಕ್ಷಕವೂ, ಗೃಹಪೋಷಕವೂ, ಎಂಬ ಭಾವನೆಯಿರುವ ಮೂಲಕ ಅದನ್ನು ಕಾಯ್ದು.

ಕೊಂಡಿರುವದೇ ಒಂದು ಗೃಹಸ್ಥನ, ಮುಖ್ಯವಾಗಿ ಗೃಹಿಣಿಯ, ಕರ್ತವ್ಯವಾಗಿತ್ತು. ಹಲವು ಹೆಂಗಸರು ಮದುವೆಯಾಗದೆ, ತಂದೆಯ ಮನೆಯಲ್ಲಿಯೇ ಆಜನ್ಮಕುಮಾರಿಕೆಯರಾಗಿಯೇ ಪೇದಾಧ್ಯಯನಾದಿಗಳಲ್ಲಿ ಮನಸ್ಸು ಹಾಕಿಕೊಂಡು ಕಾಲಕಳೆಯುತ್ತಿದ್ದರು; ಪ್ರೌಢವಿವಾಹವೇ ಆಗಿನ ವಾಡಿಕೆಯ ಪದ್ಧತಿಯು. ಋಗ್ವೇದಕಾಲದ ವಿಶ್ವವಾರಾ, ಲೋಪಾಮುದ್ರಾ, ಅಪಾಲಾತ್ರೇಯಿ ಮೊದಲಾದ ಸ್ತ್ರೀಯರು ಸಹ ಅನೇಕ ಋಕ್ಕುಗಳನ್ನು ಪಾಡಿರುವರೆಂಬ ಮಾತು ಅವರು ಎಷ್ಟು ಉಚ್ಚಶಿಕ್ಷಿತರೂ, ಸುಸಂಸ್ಕೃತರೂ ಇರುತ್ತಿದ್ದರೆನ್ನಲಿಕ್ಕೆ ಪ್ರಮಾಣವಾಗಿದೆ. ಹೆಂಗಸರು ತಮ್ಮ ತಮ್ಮ ಮರ್ಯಾದೆಯನ್ನು ಮೀರದೆ, ಸಮಾಜದೊಳಗೆ ಕೆಲವೆಷ್ಟೆ ಗಂಡಸರೊಡನೆ ಬೆರೆತು ನಡೆಯುತ್ತಿದ್ದರು.

ಆಹಾರಾದಿ ಪದಾರ್ಥಗಳು:- ಅರ್ವಾಚೀನ ಕಾಲದಲ್ಲಿ ಆರ್ಯರ ಮುಖ್ಯ ಊಟದ ಪದಾರ್ಥವಾದ ಅಕ್ಕಿಯು ವೈದಿಕ ಕಾಲದಲ್ಲಿರುವಂತೆ ಕಾಣುವದಿಲ್ಲ. ಅಡಿಗಡಿಗೆ, ಗೋದಿ ಜನೆಗೋದಿಗಳ ಹೆಸರುಗಳೇ ಬರುತ್ತವೆ. ದನಕರು ಆಕಳುಗಳೆಂದರೆ ಆರ್ಯರಿಗೆ ಬಲು ಹಿಗ್ಗು; ಅಘ್ನಾತ್, ಆಕಳ ಹಾಲು ಅವರ ಪ್ರೀತಿಯ ಪದಾರ್ಥವಾಗಿತ್ತು; ಈ ಆಕಳುಗಳ ಹಿಂಡಿನ ರಕ್ಷಣೆಗಾಗಿ ಆರ್ಯರು ದಸ್ಯುಗಳೊಡನೆ ಎಷ್ಟು ಕಾದಾಡಿದರೆಂಬುದೂ ಆರ್ಯರಿಗೆ ಆಕಳು ಜೀವಕ್ಕಿಂತ ಹೆಚ್ಚಿನದಾಗಿತ್ತೆಂಬುದೂ ಸ್ಪಷ್ಟವಾಗಿ ಕಾಣುತ್ತದೆ. ಆಕಳೆಂದರೆ ಆರ್ಯರ ಸಂಸಾರದ ಮೂಲಧನವು. ಅದೊಂದಿದ್ದರೆ ಮತ್ತೇನೂ ಬೇಡ; ಏಕೆಂದರೆ, ಅದರಿಂದಲೇ ಒಕ್ಕಲತನದ ಬೇಸಾಯ. ಅದರಿಂದಲೇ ಊಟದ ಮುಖ್ಯ ಪೋಷ್ಯಪದಾರ್ಥವಾದ ಹಾಲೂ ಅಲ್ಲದೆ ಅಗ್ನಿಕಾರ್ಯಕ್ಕೆ ಬೇಕಾಗುವ ತುಪ್ಪವೂ ಸಿಗುತ್ತಿತ್ತು; ಹೀಗೆ ಅತ್ಯುಪಯುಕ್ತವಾಗಿರುವ ಆಕಳನ್ನು ಆರ್ಯರು ದೇವರೆಂದು ಭಾವಿಸಿರುವಲ್ಲಿ ಸಂದೇಹವೇನು? ಹೀಗೆ ಆರ್ಯರು ವಾಡಿಕೆಯಲ್ಲಿ ಶಾಕಾಹಾರಿಗಳಾಗಿದ್ದರೂ, ಯಜ್ಞ-ಪ್ರಸಾದವೆಂದು ಮಾಂಸವನ್ನೂ ಪ್ರಸಂಗದೊಳಗೆ ಸೇವಿಸುತ್ತಿದ್ದರು.

ಕಸಬು, ಕೈಗಾರಿಕೆ, ವ್ಯವಹಾರ:- ನೂಲುವದು, ನೇಯುವದು, ಬಣ್ಣ ಎದ್ದುವದು, ಶಿಲ್ಪಕಲೆಯು, ಬಡಿಗತನವು, ಕುಂಬಾರಿಕೆ,

ಕರ್ಮಾರಿಕೆ, ಅಕ್ಕನಾಲಿಗತನ, ಚರ್ಮ ಹದಮಾಡುವಿಕೆ ಅವೇ ಮುಂತಾದ ವ್ಯವಸಾಯಗಳು ಋಗ್ವೇದಕಾಲಕ್ಕೆ ಬಳಕೆಯಲ್ಲಿದ್ದವು. ಆರ್ಯರು ತೆಂಗಿನಿಂದ ಬಾಣಗಳಿಗೆ ಕಟ್ಟುವ ದಾರಗಳನ್ನು ಮಾಡುತ್ತಿದ್ದರು; ನಾಣ್ಯಗಳಿಲ್ಲದ್ದರಿಂದ, ಚಿನ್ನದ ಒಡವೆಗಳನ್ನೂ, ಎತ್ತು ಆಕಳುಗಳನ್ನೂ, ನಾಣ್ಯದಂತೆ ಬಳಸುತ್ತಿದ್ದರು. ಕೆಲಕಾಲದ ತರುವಾಯ 'ನಿಷ್ಕ' ವೆಂಬ ಚಿನ್ನದ ನಾಣ್ಯವನ್ನು ಉಪಯೋಗಿಸುತ್ತ ಬಂದರು; ಕಬ್ಬಿಣದ ಅಂಗಿ, ಕಬ್ಬಿಣದ ಕುಲಾವಿ, ಕೈಕತ್ತಿ, ಬತ್ತಳಿಕೆ, ಕುದುರೆಯ ರಥಗಳು ಮುಂತಾದ ರಣಸಾಮಗ್ರಿಗಳೂ, ಕಿರೀಟ, ಕೈಕಡಗ, ಕಾಲ್ಕಡಗ ಮೊದಲಾದ ಆಭರಣಗಳೂ ರೂಢಿಯಲ್ಲಿದ್ದ ಬಗ್ಗೆ ಋಗ್ವೇದದಲ್ಲಿಯೇ ಆಧಾರಗಳು ಸಿಗುತ್ತವೆ. ಹಡಗುಪಡೆ ನೌಕಾಸಯನದೊಳಗೆ ಆರ್ಯರು ಬಲ್ಲೇ ಪ್ರವೀಣರಾಗಿದ್ದರೆಂದು ಸಾಧಿಸಲಿಕ್ಕೆ ಬಾರದಿದ್ದರೂ, ಅವರಿಗೆ ಅದು ಚೆನ್ನಾಗಿಯೇ ಗೊತ್ತಿತ್ತೆಂದೂ, ನದಿ, ಸಮುದ್ರಗಳನ್ನು ದಾಟಲಿಕ್ಕೆಂದು ಅವರು ದೊಡ್ಡ ದೊಡ್ಡ ಮರಗಳ ಬೊಡ್ಡೆಗಳನ್ನು ಕೆರೆದು ಅವುಗಳಿಂದ ಹಡಗು ಪೋಣಿಗಳನ್ನು ಕಟ್ಟುತ್ತಿದ್ದ ರೆಂಬ ಬಗ್ಗೆಯೂ ಉಲ್ಲೇಖಗಳು ದೊರೆಯುತ್ತವೆ. ಇವುಗಳನ್ನು ಕುರಿತು ಪ್ರಾರ್ಥನೆಗಳೂ, ಸಮುದ್ರಸೂಕ್ತಗಳೂ ಇವೆ.

ರಾಜ್ಯಭಾರ ಕ್ರಮ:- ಋಗ್ವೇದ ಮೊದಲಾದ ಪ್ರಾಚೀನ ಗ್ರಂಥ ಭಂಡಾರದೊಳಗೆ ಹುಡುಕಿದರೆ, ನಮಗೆ ಎರಡೇ ರಾಜ್ಯಪದ್ಧತಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಒಂದು ಸರಾಜಕ; ಮತ್ತೊಂದು ಅರಾಜಕ; ಇದಕ್ಕೇ ವೈರಾಜವೆಂದೂ ಹೆಸರು. ವೈದಿಕಕಾಲಕ್ಕೆ ಆರ್ಯಾವರ್ತದಲ್ಲಿ ಚಿಕ್ಕ ಚಿಕ್ಕ ಸ್ವತಂತ್ರವಾದ ರಾಜರುಗಳಿದ್ದರೂ, ಅವರೆಲ್ಲರೂ ಪುಂಡರಾಗಿರದೆ, ಪ್ರಜೆಗಳಿಂದ ಆರಿಸಲ್ಪಟ್ಟವರೇ ಇರುತ್ತಿದ್ದರು; ಮತ್ತು ಕೆಲವೆಡೆಯಲ್ಲಂತೂ ರಾಜರಿರದೆ, ಬರಿಯ ಪ್ರಜಾಧಿಪತ್ಯವೇ ನೆಲೆಗೊಂಡಿತ್ತೆಂದೂ ತೋರುತ್ತದೆ. ಅರಸನೆಂದರೆ ಇಂದ್ರನ ಅಂಶನೆಂದೂ, ದೇವರೆಂದೂ ಆ ಕಾಲದ ಜನರ ಭಾವನೆಯಿದ್ದರೂ, ಅರಸನಿಗೆ ಸಹನಾ ಮನಬಂದಂತೆನಡೆಯಗೊಡಬಾರದೆಂದೂ, ರಾಜ್ಯರಾಡಳಿತವು ಚೆನ್ನಾಗಿ ನಾಗಲೆಂದೂ, 'ಸಭಾ, ಸಮಿತಿ' ಗಳೆಂಬೆರಡು ವಿಧದ ಗಾಲಿಗಳ

ಮೇಲೆಯೇ ರಾಜ್ಯವೆಂಬ ಬಂಡಿಯು ನಾಗತಕ್ಕದ್ದೆಂದು ವ್ಯವಸ್ಥೆಗೊಳಿಸಿದ್ದರು. ಸಭೆ, ಸಮಿತಿಗಳೆಂದರೆ, 'ಪ್ರಜಾಪತಿಯ' (ಅರಸನ) ಮಕ್ಕಳೆಂದೂ, ಅಥರ್ವವೇದದೊಳಗೆ ರೂಪಕಾಲಂಕಾರ ಮಾಡಿದ್ದಾರೆ. ಅರಸನು ಎಷ್ಟು ನಿರಂಕುಶನಾಗಿದ್ದರೂ, ಈ ಸಮಿತಿಗೆ ಅಧೀನನೇ ಹೊರ್ತು ಸ್ವತಂತ್ರನಾಗಿರಲಿಲ್ಲ. ಅನ್ಯಾಯ ಪ್ರವರ್ತಕನೂ, ಅಧರ್ಮ ಪ್ರವೃತ್ತಿಯುಳ್ಳವನೂ ಆದ ಅರಸನನ್ನು ಪಟ್ಟದಿಂದ ತಳ್ಳಲಿಕ್ಕೆ ಸಮಿತಿಯವರಿಗೆ ಅಧಿಕಾರವಿತ್ತು. ಸಮಿತಿಯೆಂದರೆ ಶ್ರೇಷ್ಠರ ಸಭೆ; ಈ ಸಮಿತಿಗೆ ಅರಸನೇ ಅಧ್ಯಕ್ಷನು. ಬರಿಯ ಸಭೆಯೆಂದರೆ, ಹಳ್ಳಿಯ ಪಂಚಸಭೆ; ಈ ಹಳ್ಳಿಯ ಸಭೆಯ ಮುಖಂಡನಿಗೆ, 'ಗ್ರಾಮಣಿ' ಅಥವಾ (ಗ್ರಾಮಿಕ) ಎನುತ್ತಿದ್ದ ಬಗ್ಗೆ ಋಗ್ವೇದದಲ್ಲಿ ಉಲ್ಲೇಖವಿದೆ. ಅರಸನನ್ನು ಆರಿಸುವ ವಿಚಾರ ನಡೆದಿರುವಾಗ, ಈ ಹಳ್ಳಿಯ ಗ್ರಾಮಣಿಯು ಅಂದರೆ ಗೌಡನ ಸಲಹೆಯನ್ನು ಕೇಳುತ್ತಿದ್ದರೆಂದೂ, ಈ ಸಭೆಯಲ್ಲಿ ಬಡವರೂ, ಭಾಗ್ಯವಂತರೂ, ಅದ ನಾಗರಿಕರು ಬೈಗೆಯಿಂದು ಅನೇಕ ತೊಡಕಿನ ರಾಜಕೀಯ ಹಾಗೂ ಸಾಮಾಜಿಕ ಪ್ರಶ್ನೆಗಳನ್ನು, ನ್ಯಾಯಾನ್ಯಾಯಗಳನ್ನು, ಒಗೆಹರಿಸುತ್ತಿದ್ದರು; ಆ ಕಾಲಕ್ಕೆ ಹಳ್ಳಿಯೇ ರಾಜ್ಯಾಡಳಿತಕ್ಕೆ ತಳಹದಿಯಾಗಿತ್ತು. ಪಂಚರ ಸಭೆಯಿಲ್ಲದ ಹಳ್ಳಿಗಳಿಗೂ, ಸಮಿತಿಯು ಬೆಂಬಲವಿಲ್ಲದ ಅರಸನಿಗೂ ಎಷ್ಟೆಷ್ಟೂ ಬೆಲೆಯಿರಲಿಲ್ಲ. ರಾಜನು ಪಟ್ಟವನ್ನೇರಿ, ಹೆಸರಿಗೆ ರಾಜ್ಯಸೂತ್ರವನ್ನು ನಡಿಸುತ್ತಿದ್ದರೂ, ಮಿಕ್ಕ ಕಾರ್ಯಕಲಾಪಗಳೆಲ್ಲ ಸಮಿತಿಯ ಮುಖಾಂತರವಾಗಿಯೇ ನಾಗುತ್ತಿದ್ದವು. ಸಮಿತಿಯೆಂದರೆನೇ ಬಂದು ರಾಜ್ಯವನ್ನಾಳುವ ಕೇಂದ್ರಮಂಡಲವು; ಈ ಮಂಡಲವನ್ನು ಆರ್ಯವೈದಿಕರು ಬಹು ಮನ್ನಿಸುತ್ತಿದ್ದರು. ಹೇಗೆಂದರೆ, ಸಮಿತಿಯು ಕಾರ್ಯವಾರಂಭವಾಗುವ ದಿವಸ ಎಲ್ಲರೂ ಬಗ್ಗಟ್ಟಾಗಿ, ನೇರಿ, ವೇದಲು ವೈದಿಕಋಕ್ಕುಗಳಿಂದ ಪ್ರಾರ್ಥನೆ ಹೇಳುತ್ತಿದ್ದರು. ಜಗತ್ತಿನ ಪ್ರಾರಂಭ ಕಾಲದಲ್ಲಿಯೇ ಆರ್ಯರು ರಾಜಕಾರ್ಯದೊಳಗೆ ಎಷ್ಟು ಮುಂದುವರೆದು ಕಾರ್ಯ ನಡಿಸುತ್ತಿದ್ದರೆನ್ನಲಿಕ್ಕೆ ಇಷ್ಟು ಸಂಗತಿಯು ನಾಕು.

ಧಾರ್ಮಿಕ ಮತಗಳು:– ವೈದಿಕಕಾಲದ ಧರ್ಮವಿಚಾರಗಳೊ

ಳಗೆ ನಿಸರ್ಗಸೃಷ್ಟಿಯಲ್ಲಿ ಹಿಡಿಸಲಾರದ ಪ್ರೇಮವೂ, ಮೀರಿದ ಉತ್ಸಾಹವೂ, ನಾದಾತನವೂ, ಸೂರ್ಯ, ಅಗ್ನಿ, ಮುಂತಾದ ವಿಭೂತಿಗಳಲ್ಲಿ ದೇವರ ಅಂಶವಿರುತ್ತದೆಂಬ ನೆಚ್ಚಿನ ನಂಬಿಗೆಯೂ, ಇವೆಲ್ಲ ಒಂದೇ ಸಲಕ್ಕೆ ಕಣ್ಣಿಗೆ ಕಟ್ಟುತ್ತವೆ; ಇದೇ ನಮ್ಮ ಧರ್ಮದ ನೆಲೆಯು. ಇಡೀ ವೈದಿಕ ವಾಙ್ಮಯವನ್ನು ತಿರುವಿಹಾಕಿದರೆ, ಅದರೊಳಗೆ ಪ್ರಪಂಚವು ದುಃಖದಿಂದ ತುಂಬಿದ್ದೆಂಬ ಕಲ್ಪನೆಗಳಾಗಲಿ, ಅಳುಬುರುಕ ಅಂಜುಕುಳಿತನದ ನಿರಾಶೆಯ ಉದ್ಗಾರಗಳಾಗಲಿ, ಇಲ್ಲೇ ಇಲ್ಲವೆಂದು ಹೇಳಬಹುದು; ಇದ್ದರೂ ಅವು ಬೀಜದಂತೆ ಅಲ್ಲಲ್ಲಿ ಚದರಿಕೊಂಡಿವೆ. ಪ್ರತಿಯೊಂದು ಋಕ್ಕುಗಳನ್ನು ವೃಧಕ್ಕರಿಸಿ ನೋಡಿದರೆ, ಯಾವುದಾದರೊಂದು ನೆವದಿಂದ ದೇವತೆಗಳಿಗೆ ಐಹಿಕ ಭೋಗ್ಯವಸ್ತುಗಳನ್ನೇ ಬೇಡಿರುವದು ಅಡಿಗಡಿಗೆ ಪ್ರತೀತವಾಗದೆ ಹೋಗುವದಿಲ್ಲ. ಆರ್ಯರಿಗೆ ಯಜ್ಞವೆಂದರೆ ದೇವತೆಗಳನ್ನು ತೃಪ್ತಪಡಿಸಿ, ಅವರಿಂದ ತಮಗೆ ಇಷ್ಟವಿರುವ ಪದಾರ್ಥಗಳನ್ನು ಪಡೆಯುವದೆಂದು ನಾಧನವಾಗಿ ಪರಿಣಮಿಸಿತ್ತು. ಆರ್ಯರು ಸೃಷ್ಟಿಯಾರಂಭಕ್ಕೆ ಮಳೆಬೆಳೆ, ಕಾಳುಕಡಿ, ಮಕ್ಕಳು ಮರಿ ಮುಂತಾದ ಪ್ರಾಪಂಚಿಕ ಬಯಕೆಗಳನ್ನು ದೇವತೆಗಳಿಂದ ಪೆಗ್ಗಳವಾಗಿ ಪಡೆದು, ತರುವಾಯ ಪಾರಮಾರ್ಥಿಕ ವಿಚಾರಕ್ಕೆ ಗಮನಕೊಟ್ಟಂತೆ ಕಾಣುತ್ತದೆ. ಐಹಿಕಸುಖದ ಶಿಖರಕ್ಕೇರುವದೇ ಪಾರಮಾರ್ಥಿಕ ಸುಖದ ಮೆಟ್ಟಿಲೆಂದವರ ದೃಢನಂಬಿಕೆಯಿತ್ತು. ಅದರಿಂದಲೇ ಅವರು ಅಗಾಗ್ಗೆ ತಾರುಣ್ಯ, ವೀರ್ಯಗಳನ್ನು ಬೇಡಿರುವರು. ಅಗಾಗ್ಗೆ 'ನಮಗೆ ಅದು ಕೊಡು; ಇದು ಕೊಡು' ಎಂದು ಇಂದ್ರದೇವತೆಗೆ ನಿರ್ವಂಚನೆಯಿಂದ ಕೈ ಹಿಡಿದು ಕೇಳುವ ಮಕ್ಕಳ ಹಕ್ಕಿನ ಹಟದ ಆಟವೂ, ಆ ಹಟದೊಳಗೆ ವ್ಯಕ್ತವಾಗುವಂಥ ಒಂದು ವಿಧದ ಗಾಢವಾದ ಓಜಸ್ಸು, ಬಾಲಭಾವವೂ, ಅನಿಮಿತ್ತವಾದ ಆನಂದಾತಿರೇಕವೂ, ಸಹೃದಯತೆಯೂ, ಅವೆಲ್ಲವನ್ನು ಲಕ್ಷಿಸಿದರೆ, ವೈದಿಕ ಋಕ್ಕುಗಳೆಂದರೆ, ಮಾನವಜಾತಿಯ ಮೂಲತಂದೆಗಳ, ವೈದಿಕತ್ವಾತಂದಿರ ಬಾಲ್ಯಾವಸ್ಥೆಯ ಲೀಲೆಗಳೆಂದೇ ಭಾವವಾಗುತ್ತದೆ; ಹಾಗಿಲ್ಲದಿದ್ದರೆ, ಆರ್ಯ ವೈದಿಕಋಷಿಗಳಿಗೆ ಇಂದ್ರದೇವರೊಡನೆ ಅಷ್ಟೊಂದು

ಸಲಿಗೆಯಿಂದ ನಡೆಯುವ ಎದೆಯಾಗುತ್ತಿತ್ತೇ? ಅಹಹ! ಏನದು ಹೃದಯವನ್ನು ಒಸೆದು ಬರುವ ನಿಶ್ಚಟದ ಪ್ರಾರ್ಥನೆಯು! ಏನದು ಮನಸಿನ ನೈರ್ಮಲ್ಯ!! ಎಂಥದಾ ದಿವ್ಯ ತೇಜಸ್ಸು!!! ವೈದಿಕಕಾಲದಲ್ಲಿ ಪ್ರಾಮುಖ್ಯವಾಗಿ ಪ್ರಕೃತಿಪೂಜೆಯೇ ಪ್ರಬಲಗೊಂಡಿತ್ತು; ಗುಡಿಗೋಪುರ, ಮೂರ್ತಿ ಮೊದಲಾದವುಗಳಿರಲಿಲ್ಲ; ಕಣ್ಣುತೆರೆದರೆ ಪ್ರತ್ಯಕ್ಷವಾಗಿ ದೇವರನ್ನು ಕಂಡು ಆನಂದಪಡುವವರಿಗೇಕೆಂತು ಗುಡಿಗಳು! ಮನೆಮನೆಗಳಲ್ಲು ಪ್ರಜ್ವಲಿಸುತ್ತಿರುವ ಆ ಅಗ್ನಿದೇವತೆ! ಹೊರಬಿದ್ದೊಡನೆ, ಕಣ್ಣಿನೆ ಕಟ್ಟುವ ತೇಜಃಪುಂಜನಾದ ಸೂರ್ಯ, ಸುಳಿಯುವ ಗಾಳಿ, ಅಪಾರವಾದ ಆಕಾಶ, ಮುಂತಾದ ದೇವಾಂಶಭೂತವಾದ ಪಂಚಭೂತಗಳು ತಮಗಾಗಿ ಸಜೀವವಾಗಿ ನಡಿಸಿರುವ ಕಾರ್ಯಗಳನ್ನು ಕಂಡು, ಅವರ ಮನಸು ಕ್ಷಣಕ್ಷಣಕ್ಕೆ ಕೃತಜ್ಞತೆಯಿಂದ ತುಂಬಿ ತುಳುಕುತ್ತಿತ್ತು; ಅಂದ ಮೇಲೆ ಅಂಧವರಿಗೇಕೆ ಕಲ್ಲು ಮಣ್ಣಿನದೇವರ ಪೂಜೆಯು?

ದೇವರ ಸರ್ವವ್ಯಾಪ್ತಿತ್ವ:- ದೇವರು ಸರ್ವವ್ಯಾಪಿಯಾಗಿರುವನೆಂಬ ಕಲ್ಪನೆಯು ಐನ್ನೂರಿದ್ದೊಳಗೆ ಒಡಮೂಡಿದೆ. ವೈದಿಕ ಆರ್ಯರು ಅನೇಕ ದೇವತೆಗಳನ್ನು ಉಪಾಸಿಸುವಂತೆ ಒಬ್ಬನೇಒಬ್ಬನಾದ ಸರ್ವಜ್ಞನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ ಆದ ಪರಬ್ರಹ್ಮನನ್ನು ಆರಾಧಿಸುತ್ತಿದ್ದರು. ವೈದಿಕಋಷ್ಯಾಗಳಿಂದ ವೈದಿಕಋಷಿಗಳು "ಆ ಪರಬ್ರಹ್ಮನಿಗಿಂತ ಯಾವ ವಸ್ತುವೂ ಉತ್ತಮವಿಲ್ಲ; ಯಾವಾತನಿಂದ ಇಡೀ ಪ್ರಪಂಚವೇ ತುಂಬಿಹೋಗಿದೆ, ಯಾವಾತನು ಈ ಜಗತ್ತಿನ ಪಾಲಕನೂ ಅಧ್ಯಕ್ಷನೂ ಇರುವನು, ಯಾವಾತನು ತಾನುಂಟು ಮಾಡಿದ ಜೀವಿಗಳಿಗೋಸ್ಕರ ಸೂರ್ಯ, ಚಂದ್ರ, ಅಗ್ನಿ ಅವೇ ಮುಂತಾದ ಜ್ಯೋತಿಗಳನ್ನು ಹುಟ್ಟಿಸಿದನು, ಅವನೇ ಹದಿನಾರು ಲಕ್ಷಣಗಳಿಂದೊಡಗೂಡಿರುವ ಜಗತ್ತಿನ ಮಹಾನ್ವಾಮಿಯು. ಮನುಷ್ಯರಿಗೆ ಬುದ್ಧಿ ಆನಂದಾದಿಗಳನ್ನು ಕೊಟ್ಟು ತೃಪ್ತಿಪಡಿಸುವವನು, ನಮಗೆ ಹಿತವಾಗೂ ಸುಖವಾಗುವಂತೆ ಎಲ್ಲ ಬಗೆಯಿಂದಲೂ ಸುಖಕೊಟ್ಟು, ಪುಷ್ಟಿಗೊಳಿಸಲಿ." ಎಂದು ಮುಂತಾಗಿ ಹಾಡಿದ್ದಾರೆ. ಮುಂದೆ ಮುಂದೆ "ಆತನು ನಮ್ಮ ಬಂಧುಬಳಗ, ತಂದೆ, ನಮ್ಮ ಕರ್ಮಕ್ಕೆ ತಕ್ಕಂತೆ ಫಲ

ಕೊಡುವವಿಧಾತನಿರುವನು" ಎಂದೂ "ಚರಾಚರ ಜೀವಕೋಟಿಯನ್ನು ಸುತ್ತಿ ಸೂರ್ಯಚಂದ್ರಾದಿ ಲೋಕಗಳನ್ನು ಎಡೆಬಿಡದೆ ಮುತ್ತಿ, ದಶ ದಿಕ್ಕುಗಳಲ್ಲಿ ನಿರಂತರವಾಗಿ ಅಡಗಿಹನು; ಸ್ವಯಂಪ್ರಕಾಶನಾದ ಆ ಮಹಾನ್ ಪುರುಷನನ್ನು ನಾನು ಕಂಡೆ. ಅವನನ್ನು ತಿಳಿದವನು ಮರಣವನ್ನು ದಾಟುವನು. ಅಂಥ ಪರಮಾತ್ಮನು ಎಲ್ಲರೊಡನೆ ಚಲಿಸಿಯೂ, ಚಲಿಸದಂತಿಹನು. ದೂರವೂ ಹತ್ತಿರವೂ ಇರುವನು ಜಗತ್ತಿನ ಒಳಗೂ ಹೊರಗೂ ಹುದುಗಿಕೊಂಡಿಹನೆಂ"ದಿರುವರು. ಆರ್ಯರಿಗೆ ಪ್ರಭುವೇ ತಂದೆತಾಯಿ, ಅಣ್ಣತಮ್ಮ, ಒಡೆಯ, ಮಿತ್ರ ಇವೆಲ್ಲವಿಧವಾಗಿ ಕಾಣಿಸುತ್ತಿರುವನು. ಅಚಿಂತ್ಯನಾದ ಪರಮಾತ್ಮನೊಡನೆ ಆರ್ಯಋಷಿಗಳು ಒಡನಾಡಿ ಆನಂದದಿಂದ ತೇಗಿರುವದಕ್ಕೆ ಇಷ್ಟು ನಾಕ್ಷಿಗಳು ಸಾಕು.

ವೈದಿಕಕಾಲದ ಪುಣ್ಯಶ್ಲೋಕರಾದ ಮಹನೀಯರು:-

ಯಾವುದೇ ಒಂದು ಕಾಲದ ಮಹಿಮೆಯು ಬೆಳೆಯಲಿಕ್ಕೆ ಕಾರಣವೆಂದರೆ, ಆ ಕಾಲದ ಮಹನೀಯರ ಪುಣ್ಯಚರಿತ್ರೆಗಳೇ! ಮಹನೀಯರು ಕಾಲವನ್ನು ತಮ್ಮಿಷ್ಟದಂತೆ ಮಾರ್ಪಡಿಸಬಲ್ಲರು. ಅವರಿಂದಲೇ ಕಾಲಕ್ಕೆ ಮಹತ್ವವು; ಅವರು ಕಾಲನನ್ನು ಸಹ ಆಳುವವರು; ಇಂಥ ತೇಜೋವಿಶಿಷ್ಟರಾದವರ ಚರಿತ್ರೆಯನ್ನು ತಿಳಿದು ಬಿಟ್ಟರೆ, ಆಯಿತು; ಇತಿಹಾಸದ ಮರ್ಮವೇ ಕೈಗೆ ಬಂದಂತೆ! ಏಕೆಂದರೆ, ಮಹನೀಯರ ಚರಿತ್ರೆಯೆಂದರೆ ಇತಿಹಾಸದ ಹೃದಯವಾಗಿದೆ. ಅವರಿಲ್ಲದಿದ್ದರೆ ಇತಿಹಾಸಕ್ಕೆ ಜೀವವೇ ಇಲ್ಲ; ಹೀಗೆ ತಿಳಿದು ನೋಡಿದರೆ, ವೈದಿಕಕಾಲದಲ್ಲಿ ವಿಲಕ್ಷಣವಾದ ನವಚೈತನ್ಯವನ್ನುಂಟು ಮಾಡಿ, ವೈದಿಕಕಾಲವೆಂದರೆ, ಕಣ್ಣಿಗೆ ಕಾಣಿಸದ, ಕಿವಿಗೆ ಕೇಳಿಸದಂಥ ಅಗೋಚರನಾದ ಭಗವಂತನನ್ನು ಕಣ್ತುಂಬ ನೋಡಿ, ಪಾಡಿ, ಆಡುವ ಕಾಲವೆಂದೇ ಹೇಳದೆ ಗತ್ಯಂತರವಿಲ್ಲ. ಈ ಮೇರೆಗೆ ದೇವರೊಡನೆ ಆಡಿದ ವೈದಿಕವಿಭೂತಿಗಳಲ್ಲಿ ಭರದ್ವಾಜ, ವಿಶ್ವಾಮಿತ್ರ, ವಸಿಷ್ಠ, ಅತ್ರಿ, ಕಣ್ವನೊದಲಾದ ಬ್ರಹ್ಮತೇಜೋವಿಶಿಷ್ಟರಾದ ಆರ್ಯಸಂತತಿಯ ಮೂಲ ಉತ್ಪಾದಕರೇ ಅಗ್ರಗಣ್ಯರು. ಈ ಋಷಿಗಳು ತಮ್ಮ ತಮ್ಮ ಪಂಗಡದ ನಾಯಕರಿಗಾಗಿ ಎಂತೆಂತಹ ಬೆರಳು ಕಚ್ಚುವಂಥ ಮಹತ್ಕಾರ್ಯಗಳನ್ನು ಜರುಗಿಸಿರುವರೆಂಬದನ್ನು ನಾವು

ಹಿಂದೆಯೇ ಉಲ್ಲೇಖಿಸಿದ್ದೇವೆ. ಆರ್ಯಜನಾಂಗದೊಳಗೆ ಈ ದೈವಿಕ ಸಂಪತ್ತಿಯ ವಿಭೂತಿಗಳಾದ ಮಹರ್ಷಿಗಳ ನೆತ್ತರವು ಹರಿಯದಿದ್ದರೆ ನಿಃಸಂಶಯವಾಗಿಯೂ ಆರ್ಯರು ಇಷ್ಟರೊಳಗಾಗಿ ಹೇಳಹೆಸರಿಲ್ಲದೆ ಮಿಕ್ಕ ಜನಾಂಗದವರಂತೆ, ಮಣ್ಣುಪಾಲಾಗಿ ನಾಮಶೇಷರಾಗುತ್ತಿದ್ದರು. ವಿಶ್ವಾಮಿತ್ರಋಷಿಯು ಯಾವ ಶ್ರೇಷ್ಠವಾದ ಗಾಯತ್ರೀ ಮಂತ್ರದಿಂದ ಬ್ರಾಹ್ಮಣತ್ವವನ್ನು ಪಡೆದನೋ, ಅದು ಈಗ್ಯೂ ಆರ್ಯರ ಹೃದಯದಲ್ಲಿ ಅಡುತ್ತಿದೆ; ಭರತಕುಲದ ರಾಜರ ಮುಂದಾಳಾಗಿ ಅವರ ದೆಸೆಯಿಂದ ಮೈಗೆ ಬಂದು ಮುತ್ತಿದ ಎಡರುಗಳನ್ನೆಲ್ಲ ತುಂಡರಿಸಿ, ಧರ್ಮರಾಜ್ಯವನ್ನು ನಿಲ್ಲಿಸಲಿಕ್ಕೆ ದೀಕ್ಷಾಬದ್ಧರಾಗಿ ನಿಂತಂಧ ತಪೋನಿಧಿಗಳಾದ ವಸಿಷ್ಠಮಹರ್ಷಿಗಳ ಸ್ಫೂರ್ತಿಯು ನಮ್ಮ ಸುತ್ತುಮುತ್ತು ತಿರಗುತ್ತಿದೆ. ಭರದ್ವಾಜ, ಕಣ್ವ ಮೊದಲಾದ ಮಂತ್ರದ್ರಷ್ಟಾರರಾದ ಋಷಿಗಳ ನೆನಪು ಮೆದುಳಿನಲ್ಲಿ ಮಿಂಚುತ್ತದೆ. ದಿವೋದಾಸ, ಸುದಾಸ ರಂಥ ಕ್ಷತ್ರಿಯ ವೀರರು ಭರತಖಂಡದ ನೆಮ್ಮದಿಗಾಗಿ ಹಗಲಿರಳು ಎಷ್ಟು ಹೆಣಗಾಡಿದರೆಂಬುದರ ವೃತ್ತಾಂತವು ವೇದದೊಳಗೆ ಡಂಗುರ ಸಾರುತ್ತಿದೆ.

ಸಾಮವೇದ:- ಹಿಂದೆ ನಾವು ಋಗ್ವೇದ, ಹಾಗೂ ಋಗ್ವೇದ ಕಾಲದ ಸ್ಥಿತಿಗತಿಗಳನ್ನು ಕುರಿತು ವಿಸ್ತಾರವಾಗಿ ವಿವರಿಸಿದ್ದಾಯಿತು. ಋಗ್ವೇದಕ್ಕೂ ಸಾಮವೇದಕ್ಕೂ ವಿಶೇಷವೇನೂ ಭೇದವಿಲ್ಲದ್ದರಿಂದ ಋಗ್ವೇದದ ಸಂಗತಿಯನ್ನು ಹೇಳುವಾಗಲೇ ಸಾಮವೇದ, ಯಜುರ್ವೇದ, ಅಥರ್ವವೇದಗಳ ವಿಷಯವಾಗಿ ಬರೆಯಬೇಕಾಗಿತ್ತು; ಆದರೆ ಸಾಮವೇದ, ಯಜುರ್ವೇದ, ಅಥರ್ವವೇದ ಮೊದಲಾದವುಗಳದೊಂದು ಬೇರೆ ಗುಂಪನ್ನೇ ಮಾಡಲೆಳಿಸಿ, ಮೊದಲು ಸಾಮಾನ್ಯವಾಗಿ ಋಗ್ವೇದ ಕಾಲದ ಸ್ಥಿತಿಯನ್ನು ಹೇಳಿಬಿಟ್ಟೆವು. ಅದ್ದರಿಂದ ಆ ವಿಷಯವನ್ನೇ ಇಲ್ಲಿ ಎತ್ತುವೆವು. ಸಾಮವೆಂದರೆ, ಸ್ವರ ಅಥವಾ ಛಂದವೆಂದರ್ಥ. ಈ ಸಂಹಿತೆಯೊಳಗೆ ಮೊದಲು ಎಷ್ಟು ಸೂಕ್ತಗಳು ಇದ್ದವೆಂಬುದು ಗೊತ್ತಿಲ್ಲ. ಪ್ರಕೃತಕ್ಕೆ ಬಂದು ನಾವಿರ ಮಾತ್ರ ಸಿಕ್ಕಿವೆ; ಇದರೊಳಗೆ ಎರಡು ಭಾಗಗಳು; ಒಂದನೇದು ಆರ್ಚಿಕ; ಎರಡನೇದು ಉತ್ತರಾರ್ಚಿಕ; ಇವೆರಡೂ

ಭಾಗದೊಳಗೆ ಕಂಡುಬರುವ ಋಕ್ಕುಗಳು ವಾಡಿಕೆಯಾಗಿ ಋಗ್ವೇದ ದೊಳಗೆ ಬಂದಿವೆ. ಇವೆಲ್ಲವೂ ಗಾಯತ್ರೀಛಂದಸ್ಸಿನಲ್ಲಿಯೇ ಕಟ್ಟಲ್ಪ ಟ್ಟವೆ. ಇವುಗಳನ್ನು ಹಾಡಿನ ಪದ್ಧತಿಯಿಂದನ್ನುವದೇ ಮೊದಲಿಗರ ಉದ್ದಿಶ್ಯವು. ಯಜ್ಞದೊಳಗೆ ಯಾರಿಗೆ 'ಉದ್ಗಾತಾ' ಆಗಬೇಕಾಗಿ ದೆಯೋ, ಅವರು ನಾಮವೇದ ಶಿಕ್ಷಣವನ್ನು ಪಡೆಯತಕ್ಕದ್ದು; ಮತ್ತು ಅದರ ಶಿಕ್ಷಣವನ್ನು ಪಡೆಯುವ ಮೊದಲು ಅವರು ರಾಗಮಟ್ಟುಗಳನ್ನು ಕಲಿಯಲೇಬೇಕಾಗುತ್ತಿತ್ತು. ಅವುಗಳನ್ನಾದರೂ ಅರ್ಚಕಗಳ ನಿರವಿ ನಿಂದಲೇ ಕಲಿಯದೆ ಬೇರೆ ದಾರಿಯಿರಲಿಲ್ಲ. ಅರ್ಚಕಗಳನ್ನು ಬೇರೆ ಬೇರೆ ಸ್ವರಗಳಲ್ಲಿ ಅನ್ನಬಹುದು. ಉತ್ತರಾರ್ಚಕದೊಳಗೆ ಮೂರು ಮೂರು ಋಕ್ಕುಗಳು ಕೂಡಿದ ಒಂದೊಂದು ಕವನಗಳಿರುವವು. ಅವೆ ಲ್ಲವೂ ಯಜ್ಞಕಾಲದಲ್ಲಿಯೇ ಅನ್ನತಕ್ಕವುಗಳು. ಅರ್ಚಕಗಳಿಗೆ ಛಂದ ಸ್ಸಿನ ಅಥವಾ ವೃತ್ತದ ಪುಸ್ತಕವೆಂದರೆ, ಉತ್ತರಾರ್ಚಕ್ಕೆ ಸಂಗೀತದ ಭಾಗವೆನ್ನಬಹುದು. ನಾಮವೇದದೊಳಗೊಂದು ಅದ್ಭುತವಾದ ನಾಮ ರ್ಥ್ಯವಿದೆ. ಅದನ್ನು ನಮ್ಮ ಪೂರ್ವಿಕರು ಬಲ್ಲವರಾಗಿದ್ದರು; ಅಲ್ಲದೆ ಸಾಮವೇದದ ಸ್ವರವು ಕಿವಿಗೆ ಬಿದ್ದೊಡನೆ, ಋಗ್ವೇದ ಯಜುರ್ವೇದ ಗಳ ಪಾಠವನ್ನು ಕೂಡಲೇ ನಿಲ್ಲಿಸಬೇಕೆಂದು ಬ್ರಾಹ್ಮಣಧರ್ಮದಲ್ಲಿ ಹೇಳಿದ್ದರಮೇಲಿಂದ ನಾಮವೇದದ ಮಹತ್ವವೆನ್ನಿಂಬುದು ಮನದಟ್ಟಾ ಗುತ್ತದೆ. ಭಾರತೀಯ ಗಾಯನಶಾಸ್ತ್ರಕ್ಕೆ ನಾಮವೇದವೇ ಅಸ್ತಿವಾ ರವು. ನಾಮವೇದಕ್ಕೆ ಉಪಾಸನಾಕಾಂಡವೆನ್ನುವದುಂಟು. ವಾಙ್ಮಯ ದೃಷ್ಟಿಯಿಂದ ನಾಮವೇದಸಂಹಿತೆಗೆ ವಿಶೇಷ ಪ್ರಾಶಸ್ತ್ಯವಿಲ್ಲದಿದ್ದರೂ, ಋಗ್ವೇದಕಾಲದ ಲಲಿತಕಲೆಯೆಂಬೀ ದೃಷ್ಟಿಯಿಂದ ನೋಡಿದರೆ, ಜಗ ತ್ತಿನ ಬಾಲ್ಯಾವಸ್ಥೆಯಲ್ಲಿಯ ಗಾಯನದ ಮೂಲಾಕ್ಷರಗಳೆನ್ನಬಹುದು.

ಯಜುರ್ವೇದ:– ಯಜುರ್ವೇದವು ಋಗ್ವೇದಕ್ಕಿಂತ ಬೇರೆ ಯಾಗಿದೆ. ಈ ಸಂಹಿತೆಯೊಳಗಿನ ಋಕ್ಕುಗಳು ಯಜ್ಞಕರ್ಮಾದಿಗಳ ಉಪಯೋಗಕ್ಕಾಗಿ ಸಂಗ್ರಹಿಸಲ್ಪಟ್ಟಿರುವವೆಂದು ಇದಕ್ಕೆ 'ಯಜ್ಞಶಾಸ್ತ್ರ' ವೆಂದೂ ಕರ್ಮಕಾಂಡವೆಂದೂ ಹೆಸರು. ಯಜ್ಞಕರ್ಮಗಳನ್ನು, ನಡಿಸು ವಂಥ ಪುರೋಹಿತರ ಮತ್ತು ಗುರುಗಳ ಬಾಯಲ್ಲಿಯೇ ಯಜ್ಞಶಾಸ್ತ್ರವು

ಇರಬೇಕಾದ್ದು ಅವಶ್ಯವಾದುದರಿಂದ ಈ ಮಂತ್ರಗಳ ಪುಸ್ತಕಕ್ಕೆ ಪುರೋಹಿತರ ಸಂಗ್ರಾಹಕವಾದ ವೆದುಳು, ಎಂದೆನ್ನಬಹುದು. ಪುರೋಹಿತರು ಇವುಗಳನ್ನು ತಮ್ಮ ಶಿಷ್ಯರಿಗೆ ಉರುಹಾಕಿಸಿ ಕಲಿಸಿ ಕಾಯ್ದಿಡುತ್ತಿದ್ದರು. ಸಂಸಾರದೊಳಗಿನ ಜಾತಕ ವಿವಾಹಾದಿ ಮಂಗಲಕಾರ್ಯಗಳಲ್ಲಿ ಪ್ರಾರ್ಥನೆ ಮಾಡುವಾಗಲೂ, ಆಶೀರ್ವಾದ ಕೊಡುವಾಗಲೂ ಉತ್ತರಕ್ರಿಯಾ ಶ್ರಾದ್ಧಾದಿಕರ್ಮಗಳನ್ನು ಮಾಡುವಾಗಲೂ, ಋಗ್ವೇದದೊಳಗಿನ ಸೂಕ್ತಗಳನ್ನೂ ಅಥರ್ವೋದದಲ್ಲಿಯ ಮಂತ್ರಗಳನ್ನೂ ಅನ್ನುವರು. ಜಾತಕ, ವಿವಾಹ, ಗರ್ಭಾಧಾನ, ಮೊದಲಾದ ಸಮಾರಂಭಗಳಲ್ಲಿ ಆಚರಿಸತಕ್ಕ ಹೋಮಹವನಾದಿಗಳಿಗೆ ಗೃಹ್ಯಕರ್ಮಗಳೆಂದು ಹೆಸರು. ಈ ಗೃಹ್ಯಕರ್ಮಗಳಲ್ಲಿ ನಡಿಸತಕ್ಕ ಯಜ್ಞದಲ್ಲಿ ಮನೆಯ ಯಜಮಾನನೇ ಯಜ್ಞಪುರೋಹಿತನಾಗಿರುತ್ತಿದ್ದನು. ಮನೆಯಲ್ಲಿ ಅಖಂಡವಾಗಿ ಸ್ರಜ್ವಲಿಸುತ್ತಿರುವ ಯಜ್ಞಕುಂಡದಲ್ಲಿಂಯೇ ಈ ಯಜ್ಞದ ಆಹುತಿಗಳನ್ನಿಡುತ್ತಿದ್ದರು. ಇಂಥ ಚಿಕ್ಕವುಟ್ಟ ಯಜ್ಞಗಳನ್ನು ಒಡವನೇ ಇರಲಿ, ಶ್ರೀಮಂತನೇ ಇರಲಿ. ಸ್ರತಿಯೊಬ್ಬನು ಆಚರಿಸಿಯೇ ತೀರಬೇಕೆಂದು ಮೊದಲಿನ ಕಾಲಕ್ಕೆ ಕಟ್ಟುನಿಟ್ಟಿನ ನಿರ್ಬಂಧವಿತ್ತು. ಮಹಾಯಜ್ಞಗಳನ್ನು ಮಾತ್ರ ಅರಸರೂ, ಶ್ರೀಮಂತರೂ ನೆರವೇರಿಸುತ್ತಿದ್ದರು. ಅವು ಅಂತಿಂಥವರಿಗೆ ಸಾಧ್ಯವಿರಲಿಲ್ಲ. ಏಕೆಂದರೆ, ಈ ಯಜ್ಞಗಳಲ್ಲಿ ಯಜಮಾನನಿಗೆ ಕೊಡಬೇಯಿಂದಲೂ, ಇತರರಿಯಿಂದಲೂ ದಾನ ಮಾಡಬೇಕಾಗುತ್ತಿತ್ತು. ಇದರೊಳಗೆ ಹೋತಾ, ಅಧ್ವರ್ಯು, ಉದ್ಗಾತಾ, ಬ್ರಹ್ಮಾ ಹೀಗೆ ನಾಲ್ಕು ಮಂದಿಯಜ್ಞ ನಡಿಸುವವರು; ಹೋತಾ ಅಂದರೆ ದೇವತೆಗಳನ್ನು ಪ್ರಾರ್ಥಿಸಿ, ಯಜ್ಞದೊಳಗೆ ಬರಲಿಕ್ಕೆ ಅವರನ್ನು ಕುರಿತು ಆವ್ವಾನಪೂರ್ವಕವಾಗಿ ಋಕ್ಕುಗಳನ್ನು ಅನ್ನುವವನು; ಬಾಯಿಂದ ಮಂತ್ರಗಳನ್ನುತ್ತ ವಿಧಿನಡಿಸುವವನೇ ಅಧ್ವರ್ಯು; ಸೋಮರಸವನ್ನು ಬಲಿಕೊಡುವಾಗ್ಗೆ ನಾಮ ಹೇಳುವವನು ಉದ್ಗಾತಾ; ಬಹ್ಮಾ ಅಂದರೆ, ಮುಖ್ಯ ಪುರೋಹಿತನು; ಅಧ್ವರ್ಯು ಯಜ್ಞಕ್ಕೆ ಯಾವ ವಿಘದಿಂದಲೂ ಪೀಡೆಯುಂಟಾಗದಂತೆ, ನೋಡಿಕೊಳ್ಳುವವನು.

ಅಥರ್ವವೇದ:– ಅಥರ್ವವೇದಕ್ಕೆ ಅಥರ್ವಾಂಗಿರಸ ಎಂದೂ ಹೆಸ

ರುಂಟು; ಇದರೊಳಗೆ ಅಥರ್ವನ್, ಆಂಗಿರಸ ಎಂಬೆರಡು ಬೇರೆಬೇರೆ ಮಂತ್ರವರ್ಗಗಳಿರುವವು. ಅಥರ್ವನ್ ಮಂತ್ರಗಳು ಪವಿತ್ರ, ರೋಗ ನಿವಾರಕ ಹಾಗೂ ಸುಖಕರವಿದ್ದು, ಅಂಗಿರಸ ಮಂತ್ರಗಳು ಪೀಡೆಯನ್ನುಂಟುಮಾಡುವಂಥ ಪೋಡಿಕಾರರ ಮಾಟಗಾರಿಕೆಯಿಂದ ತುಂಬಿರುವವು; ಇದರಲ್ಲಿ ಶಿಲ್ಪಶಾಸ್ತ್ರದ ವಿಷಯವೂ ಬಂದಿದೆ. ಅಥರ್ವಸಂಹಿತೆಯು ಋಗ್ವೇದಸಂಹಿತೆಯ ತರುವಾಯ ಆದುದೆಂಬುದರಲ್ಲಿ ಸಂದೇಹವಿಲ್ಲ. ಅಥರ್ವಕಾಲದಲ್ಲಿ ಬ್ರಾಹ್ಮಣರಿಗೆ ಚಾತುರ್ವರ್ಣ್ಯದೊಳಗೆ ಉಚ್ಚಸ್ಥಾನವು ದೊರೆತು ಭೂದೇವರೆಂಬುವ ಮಟ್ಟಿಗೆ ಅವರ ವಿಷಯದಲ್ಲಿ ಪೂಜ್ಯಭಾವ ಬೆಳೆದು ಬ್ರಾಹ್ಮಣರದೊಂದು ಜಾತಿರೂಪವಾದ ಪಂಗಡವೇ ಆಗಿತ್ತು. ಅರ್ಥಾತ್ ಬ್ರಾಹ್ಮಣರ ಕರ್ಮವೆಂದರೆ ಯಜ್ಞಯಾಗಗಳನ್ನು ಮಾಡಿಸುವದು, ವೇದಾಧ್ಯಯನ ಮಾಡುವದು ಇವಿಷ್ಟೇಯೆಂದು ನಿಶ್ಚಯವಾಗಿತ್ತು. ಋಗ್ವೇದಕಾಲದಲ್ಲಿ ಸ್ಪುಟವಾಗುವಂಥ ನಿಸರ್ಗದೇವತೆಯು ಬಗ್ಗೆ ನಿರ್ಮಲಭಾವೋತ್ಕರ್ಷವೂ, ಸ್ವಚ್ಛಂದವಾಗಿ ಹರಿಯುವ ಭಕ್ತಿಯೂ, ಈ ವೇದದಲ್ಲಿ ತೋರುವದಿಲ್ಲ. ಬರೆಯ ರಾಕ್ಷಸರ ನಾಶಕ್ಕಾಗಿಯೆಂದು ಈ ಕಾಲದವರು ದೇವರನ್ನು ಬೊಬ್ಬೆಹೊಕ್ಕಿದ್ದಾರೆ. ಅಥರ್ವವೇದದಲ್ಲಿ ಕೆಲವು ಕಡೆ ದೇವತಾ ಮತ್ತು ಜಗದುತ್ಪತ್ತಿ ಸಂಬಂಧವಾದ ಕಲ್ಪನೆಗಳು ಕಂಗೊಳಿಸುವವು. ತತ್ವಜ್ಞಾನದ ಛಾಯೆಯು ಕೆಲಮಟ್ಟಿಗೆ ಮುಂದುಬಿದ್ದಿದೆ. ಈ ಸಂಧಿಯಲ್ಲಿ ಆರ್ಯರು ಸಿಂಧುನದಿಯಿಂದ ಕೆಳಗಿಳಿದು ಅಲೆಯುತ್ತಲೆಯುತ್ತ ಬಂದು ಗಂಗಾ, ಯಮುನೆಗಳ ದಂಡೆಗಳಲ್ಲಿ ಒಕ್ಕಲಾಗಿದ್ದರೆಂದು ತೋರುತ್ತದೆ. ಏಕೆಂದರೆ, ಎಲ್ಲೆಯೂ ಕಂಡುಬರದ ಗಂಗಾ ಯಮುನೆಗಳ ಉಲ್ಲೇಖವು ಇಲ್ಲಿ ಬಂದಿದೆ.

೪ನೇ ಪ್ರಕರಣ.

ಬ್ರಾಹ್ಮಣಗಳೂ, ಉಪನಿಷತ್ತುಗಳೂ.

(ಕ್ರಿ. ಶ. ಪೂರ್ವ ೧೦೦೦–೭೦೦)

ಬ್ರಾಹ್ಮಣಗಳು:- ಸಂಹಿತೆಯ ಅರ್ಥವು ತಿಳಿಯಲು ಅನಾಘ್ರ್ಯವಾದ್ದರಿಂದ ಆರ್ಯರು ಬ್ರಾಹ್ಮಣಗಳನ್ನು ಕಲ್ಪಿಸಿದರು. ಬ್ರಾಹ್ಮಣಗಳಿಗೆ ಯಜ್ಞಕರ್ಮದ ಬಗ್ಗೆ ಯಾಜ್ಞಿಕರ ಚರ್ಚೆ ಅಥವಾ ವಿವರಣೆ ಎಂದರ್ಥ. ಬ್ರಾಹ್ಮಣಗಳೆಂದರೆ ವೈದಿಕಕಾಲೀನ ಇತಿಹಾಸಗಳು. ಈ ಗ್ರಂಥದೊಳಗೆ ಅಲ್ಲಲ್ಲಿ ಜಗದುತ್ಪತ್ತಿ ಸಂಬಂಧವಾಗಿ ನುಡಿದ ಮಾತು ಕಥೆಗಳೂ, ದೇವಾಸುರರ ಸಂಗ್ರಾಮಗಳೂ ಹಳೆಯ ಕಾಲದ ಚಿಕ್ಕ ಚಿಕ್ಕ ಮನೋರಂಜಕವಾದ ಕಥೆಗಳೂ ಕಂದುಬಂದಾಗ್ಯೂ, ಇದರೊಳಗೆ ಯಜ್ಞಯಾಗದ ವಿನಾ ಬೇರೆ ಚರ್ಚೆಯ ವಿಷಯವೇ ಇಲ್ಲ. ಯಜ್ಞಗಳೂ, ಇವುಗಳ ವಿಧಿನಿಷೇಧಸಂಸ್ಕಾರಗಳೂ, ಅವುಗಳಿಗೆ ಪೋಷಕವಾದ ಅರ್ಥವಾದಗಳೂ, ಆಯಾ ಯಜ್ಞಗಳಲ್ಲಿರುವ ಪರಸ್ಪರ ಸಂಬಂಧಗಳೂ ಅವುಗಳಲ್ಲಿಯ ಸೌತ್ರೀತ್ರಗಳ ಭಾವಾರ್ಥವೂ ಇಷ್ಟೆಲ್ಲ ವಿಷಯಗಳು ನಾಕಲ್ಯವಾಗಿ ವಿವರಿಸಲ್ಪಟ್ಟಿರುವ ಕಾರಣ, ಇವುಗಳಿಗೂ 'ಯಜ್ಞಶಾಸ್ತ್ರ-ಗ್ರಂಥ'ಗಳೆನ್ನಲು ಅಡ್ಡಿಯಿಲ್ಲ. ಪ್ರತಿಯೊಂದು ವೇದದಿಂದಲೂ, ಶಾಖೆಯಿಂದಲೂ, ಬ್ರಾಹ್ಮಣ ಗ್ರಂಥಗಳಾದವೆಂದು ಕಂದುಬರುತ್ತದೆ. ಬ್ರಾಹ್ಮಣದೊಳಗೆ ಋಗ್ವೇದದಲ್ಲಿರುವಂತೆ ಸೂರ್ಯ, ಅಗ್ನಿ, ಮೊದಲಾದವರಿಗೆ ಮಹತ್ವವಿಲ್ಲದೆ ಅದು ಪ್ರಜಾಪತಿಯನ್ನು ಸೇರಿದೆ. ಇವುಗಳಲ್ಲಿ ಪ್ರಜಾಪತಿಗೆ 'ದೇವಾಸುರ ಪಿತ' ಎಂದು ಹೇಳಿಸಿದೆ. ಕಾರ್ಯಸಿದ್ಧಿಗಾಗಿ ದೇವತೆಗಳು ಸಹ ಯಜ್ಞವನ್ನಾಶ್ರಯಿಸಬೇಕಾಯಿತೆಂದು ಬ್ರಾಹ್ಮಣಗಳಿಂದ ತಿಳಿಯುತ್ತೆ. ಆದುದರಿಂದ ಬ್ರಾಹ್ಮಣಕಾಲದಲ್ಲಿ ಯಜ್ಞವೆಂಬುದೊಂದು ಹಿರಿದಾದ ಶಕ್ತಿವಿಶೇಷವೆಂದು ಜನರ ಭಾವನೆಯಾಗಿರಲಿಕ್ಕೆ ಸಾಕು.

ಅಂದಮೇಲೆ ಯಜ್ಞವು ಸೃಷ್ಟಿಯುತ್ಪತ್ತಿಗೆ ಮೂಲಭೂತವಾದ ಶಕ್ತಿಯೆಂದೂ, ಸೃಷ್ಟಿಯ ಉತ್ಪತ್ತಿಗೆ ಕಾರಣನಾದ ಪ್ರಜಾಪತಿಯು ಯಜ್ಞಸಮನೆಂದೂ, ಯಜ್ಞವೇ ಸರ್ವ ಪ್ರಾಣಿಗಳ ಪಾಲನ ದೇವತೆಗಳ ಆತ್ಮವೆಂದೂ ಯಜ್ಞವನ್ನು ಬಹು ಗೌರವವಾಗಿ ಕಾಣುತ್ತಿರುವಲ್ಲೇನು ನೋಬೆಗ! ಯಜ್ಞವೆಂದರೆ ಅಗ್ನಿಯಲ್ಲಿ ಯಾವುದೋಂದು ಪದಾರ್ಥವನ್ನು ಹವನ ಮಾಡುವದಷ್ಟೇ ಅಲ್ಲದೆ, ಸಾಮಾನ್ಯವಾಗಿ ಜನಾಂಗದ ನೆಮ್ಮದಿಯ ಉದ್ದೇಶದಿಂದ ಜರಗಿಸುವ ಕಾರ್ಯಗಳೆಲ್ಲವೂ ಯಜ್ಞವೆಂದೇ ಎಣಿಸುವಮಟ್ಟಿಗೆ ಯಜ್ಞದ ವಿಚಾರವು ಸ್ವಗಲ್ಭಸ್ಥಿತಿಗೆ ಮುಟ್ಟಿತ್ತು. (ವಿವಾಹ, ದಾನ, ಪರೋಪಕಾರ, ಜ್ಞಾನಸಂಪಾದನೆ ಇವೆಲ್ಲವೂ, ಸಾಲದುದಕ್ಕೆ ಮನುಷ್ಯನ ಜೀವಮಾನವೇ ಒಂದು ಮೇಲಾದ ಯಜ್ಞವೆಂದು ಆರ್ಯರು ತಿಳಿದುಕೊಂಡಿದ್ದರು. ಯಜ್ಞದೊಳಗೆ ತ್ಯಾಗ ಪರೋಪಕಾರಗಳ ಉಚ್ಚತತ್ವವು ಅಡಕವಾಗಿದೆ; ಯಾವುದೋಂದು ಕಾರ್ಯವನ್ನು ಆಧ್ಯಾತ್ಮಿಕ ಭಾವನೆಯಿಂದ ಪರೋಪಕಾರಕ್ಕಾಗಿ ನಡೆಯಿಸಿದರೆ, ಅದೊಂದು ಯಜ್ಞವೇ; ಈ ಬಗೆಯಾಗಿ ಆರ್ಯರ ಪ್ರತಿಯೊಂದು ನಡೆನುಡಿಗಳಲ್ಲಿ ಯಜ್ಞವು ಬೇರುಬಿಟ್ಟುಕೊಂಡು ಕ್ರಮೇಣ ಅವರ ಬೆಳವಣಿಗೆಗೆ ಸಾಧಕವಾಗಿ ಪರಿಣಮಿಸುವದೊಂದು ಭಾವನಾವಿಶೇಷವಾಗಿತ್ತು.)

ಜಗದುತ್ಪತ್ತಿಯ ಕಥೆ:– ಬ್ರಾಹ್ಮಣಗಳಲ್ಲಿ ಅನೇಕ ಚಿಕ್ಕ ದೊಡ್ಡ ಕಾವ್ಯಮಯವಾದ ಕಥೆಗಳಿರುವವು. ಅವುಗಳಲ್ಲಿ ಜಗದುತ್ಪತ್ತಿಯ ಕಥೆಯು ಬಹು ಸರನಾಗಿರುವದರಿಂದ ಮಾದರಿಗಾಗಿ ಅದನ್ನು ಇದರಡಿ ಕೊಡುತ್ತೇವೆ. ಮೊದಲು ಈ ಪ್ರಪಂಚದೊಳಗೆ ನೀರಿನ ಹೊರತಾಗಿ ಮತ್ತೇನೂ ಇರಲಿಲ್ಲ. ಈ ನೀರಿಗೆ ತನ್ನಂಥ ಯಾವುದೊಂದು ಬೇರೆ ಪದಾರ್ಥವನ್ನುಂಟು ಮಾಡಬೇಕೆಂಬ ಹಂಬಲವುಂಟಾಯಿತು. ಆಗ ನೀರು ದೇಹದಂಡನೆಪೂರ್ವಕವಾಗಿ ತಪಸ್ಸಿಗೆ ಮೊದಲು ಮಾಡಿತು. ನೀರಿನ ತಪೋಬಲದಿಂದ ಅದರಲ್ಲಿ ಒಂದು ಭಂಗಾರದ ತತ್ತಿಯು ಹುಟ್ಟಿತು. ಆ ಕಾಲಕ್ಕೆ ಸಂವತ್ಸರದ ಕಾಲಕ್ರಮವಿರಲಿಲ್ಲ; ಈ ಭಂಗಾರದ ತತ್ತಿಯು ಒಂದು ವರ್ಷದ ತನಕ ಹಾಗೇ ನೀರ

ಮೇಲೆಯೇ ತೇಲುತ್ತಿದ್ದಿತು. ವರ್ಷವಾದನಂತರ, ಆ ತತ್ತಿಯೊಳಗಿಂದ ಒಬ್ಬ ಪುರುಷನು ಮೈದೋರಿದನು; ಅವನೇ ಪ್ರಜಾಪತಿಯು. ಅಂದುಮೊದಲು, ಹೆಂಗಸು, ಕುದುರೆ, ಆಕಳುಗಳು, ವರ್ಷಕ್ಕೆ ಒಂದು ನಲ ಬಸಿರಾಗುವ ಕ್ರಮಗೊಂಡಿತು. ಪ್ರಜಾಪತಿಯು ಹೊರಗೆ ಬಂದೊಡನೆ, ಅತನಿಗೆ ನಿಲ್ಲಲಿಕ್ಕೆ ರಾಪಿಲ್ಲದ್ದರಿಂದ, ಅತನು ಹುಟ್ಟಿದ ತತ್ತಿಯ ಚಪ್ಪೆಯಲ್ಲಿಯೇ ಇದ್ದುಕೊಂಡು ವರ್ಷದ ವರೆಗೆ, ನೀರಿನಲ್ಲಿ ತೇಲುತ್ತಿದ್ದನು. ವರ್ಷವು ಕಳೆದ ತರುವಾಯ ಅವನಿಗೆ ಬಾಯಿ ಬಂದಿತು. ಅವನು 'ಭೂಃ' ಎಂದು ಅಂದೊಡನೆ, ಭೂಮಿಯು ಆವಿರ್ಭವಿಸಿತು; 'ಭುವಃ' ಎಂದಕ್ಷಣವೇ ಸುತ್ತಮುತ್ತಲಿನ ವಾತಾವರಣವುಂಟಾಯಿತು; 'ಸ್ವಃ' ಎಂದು ಉಚ್ಚರಿಸಿದಾಕ್ಷಣವೇ ಆಕಾಶವು ಕಾಣಿಸಿಕೊಂಡಿತು; ಮುಂದೆ ಈ ಪುರುಷನಿಗೇನೇ ಪ್ರಜೋತ್ಪತ್ತಿಯ ಅಭಿಲಾಷೆಯುಂಟಾಗಿ, ಅದಕ್ಕಾಗಿ ಅವನು ತಪಾಚರಣೆಗೈದನು; ಅನಂತರ, ಅವನು ಬ್ರಹ್ಮನನ್ನು ಹುಟ್ಟಿಸಿ, ಆ ಬ್ರಹ್ಮಪ್ರತಿಷ್ಠೆಯ ಮೇಲೆಯೇ ನಿಂತುಕೊಂಡು ಪ್ರಜಾಪತಿಯು ತಪಸ್ಸು ಮಾಡಿಹೊದಲು ನೀರು ನಿರ್ಮಿಸಿದನು. ತರುವಾಯ ವೇದ ಸಹಾಯದಿಂದ ಅವನೊಂದು ತತ್ತಿಯನ್ನು ಹುಟ್ಟಿಸಿದನು; ಅದರಿಂದ ಮುಂದೆ ಅಗ್ನಿಯಾಯಿತು; ವಾಯು ಹುಟ್ಟಿತು; ಹೀಗೆ ಒಂದೊಂದಾಗಿ ಪಂಚಭೂತಗಳನ್ನು ಹುಟ್ಟಿಸಿ, ಆಯಾ ಭೂತಗಳ ವಾಸಕ್ಕೆಂದು ಅಗ್ನಿಗೆ ಪೃಥ್ವಿಯನ್ನೂ ವಾಯುವಿಗೆ ಅಂತರಿಕ್ಷವನ್ನು ಸೂರ್ಯನಿಗೆ ಸ್ವರ್ಗವನ್ನು ಗೊತ್ತು ಮಾಡಿಕೊಟ್ಟನು. ಈ ಬಗೆಯಾದ ಕಲ್ಪನೆಗಳು ಬ್ರಾಹ್ಮಣಕಾಲಕ್ಕೆ ಮೊಳಕೆಹಾಕಿದವು; ಅವೇ ಮುಂದೆ ಉಪನಿಷತ್ಕಾಲಕ್ಕೆ ವಿಕಾಸಗೊಂಡವೆಂದು ಹೇಳಲಿಕ್ಕೇನೂ ಅಭ್ಯಂತರವಿಲ್ಲ.

ಜಲಪ್ರಳಯದ ಕಥೆ:– ಬ್ರಾಹ್ಮಣದೊಳಗಿನ ಇನ್ನೊಂದು ಮನೋರಂಜಕವಾದ ಕಥೆಯೆಂದರೆ ಮನುವಿನದು. ಒಂದಾನೊಂದು ದಿನ ಬೆಳಿಗ್ಗೆ ಮನುವಿಗೆ ಕೈ ತೊಳೆಯಲಿಕ್ಕೆಂದು ಯಾರೋ ನೀರು ತಂದು ಕೊಟ್ಟರಂತೆ! ಕೈ ತೊಳೆಯುವ ಆ ನೀರಿನಲ್ಲಿ ಮೀನಿನ ಮರಿಯಿದ್ದಿತು. ಈ ನೀರಿನೊಳಗಿಂದ ಮೀನಿನ ಮರಿಯು ಮನುವಿನ

ಕೈಯಲ್ಲಿ ಬಿದ್ದೊಡನೆ, ಅದು ಮನುವನ್ನು ಕುರಿತು "ನನಗೆ ನೀವು ಜೀವದಾನ ಕೊಟ್ಟಿರಿ, ನಾನು ನಿಮ್ಮನ್ನು ಎಂದಾದರೂ ಕಾಪಾಡದೆ ಇರೆನು" ಅಂದಿತು. ಮೀನು ಆಡಿದ ಮಾತಿಗೆ ಅಚ್ಚರಿಗೊಂಡು ಮನುವು ಕೂಡಲೇ "ನೀನು ನನ್ನನ್ನು ಏತರಿಂದ ಕಾಪಾಡುವೆ" ಎಂದು ಕೇಳಲಾಗಿ, ಆ ಮೀನು "ಬೇಗನೇ ದೊಡ್ಡದೊಂದು ಪ್ರಳಯವಾಗತಕ್ಕದ್ದಿದೆ; ಆ ಸಮಯಕ್ಕೆ ಎಲ್ಲ ಪ್ರಾಣಿಗಳ ಸಂಹಾರವಾಗುವದು; ಆಗ ನಿಮ್ಮನ್ನು ನಾನು ಉಳಿಸುವೆನು" ಎಂದು ನುಡಿಯಿತು. "ನಿನಗೆ ನಾನು ಜೀವದಾನ ಕೊಡುವ ಬಗೆಯೆಂತು" ಎಂದು ಮನುಋಷಿಯು ವಿಚಾರಿಸಿದನು. ಅದಕ್ಕೆ ಆ ಮೀನು "ಮೀನಿನಜಾತಿಯಲ್ಲ ದೊಡ್ಡ ಮೀನುಗಳು ಚಿಕ್ಕಮೀನುಗಳನ್ನು ತಿಂದುಬಿಡುವದೊಂದು ಗಂಡಾಂತರವಿದೆ; ಆದುದರಿಂದ, ಪ್ರಾರಂಭಕ್ಕೆ ನೀನು ನನ್ನನ್ನೆನ್ನಿಂದು ಚಿಕ್ಕದಾದ ನೀರಿನ ಪಾತ್ರೆಯಲ್ಲಿ ಹಾಕಿದು, ಅದರಲ್ಲಿ ಹಿಡಿಸದಷ್ಟು ನಾನು ದೊಡ್ಡವನಾದರೆ, ನನ್ನನ್ನು ಬಂದು ನೀರಿನ ಕೊಳಗದೊಳಗೆ ಇರಿಸು! ಅದರಲ್ಲಿಯೂ ಹಿಡಿಸದೆಹೋದರೆ, ನನ್ನನ್ನು ಸಮುದ್ರದಲ್ಲಿ ಬಿಟ್ಟು ಹಾಕು! ಅಷ್ಟರಲ್ಲಿ ನಾನು ದೊಡ್ಡವನಾಗಿದ್ದರಿಂದ ನನಗೆ ಯಾರಿಂದಲೂ ಹೆದರಿಕೆಯಾಗದೆಂದು ನುಡಿಯಿತು. ಅಚ್ಚರಿಯನ್ನುಂಟು ಮಾಡುವಂಥ ಮೀನು ಆಡಿದ ಮಾತು ಕೇಳಿ ಮನುವು ಅದು ಹೇಳಿದಂತೆ ಜೋಪಾನ ಮಾಡಿದನು. ದಿನದಿನಕ್ಕೆ ಮೀನು ಬೆಳೆಯುತ್ತ ನಡೆಯಿತು. ಆಗ ಅದು ಮತ್ತೊಮ್ಮೆ ಮನುವನ್ನು ಪ್ರೇರಿಸಿ, "ಇಂತಿಂತಹ ವರ್ಷದಲ್ಲಿ ಜಲಪ್ರಳಯವಾಗುತ್ತದೆ; ಆದ್ದರಿಂದ ನೀನು ಮಾತ್ರ ಮುಂದಾಗಿಯೇ ಒಂದು ನಾವನ್ನು ಸಿದ್ಧಪಡಿಸಿಕೊಂಡು ನನ್ನ ಮಾರ್ಗ ನಿರೀಕ್ಷಿಸುತ್ತಿರು. ಜಲಪ್ರಳಯಕ್ಕೆ ಆರಂಭವಾದಕ್ಷಣವೇ ನೀನು ಆ ನಾವನ್ನೇರಿ ಕುಳ್ಳಿರು; ಅಂದರೆ ನಾನು ನಿನ್ನನ್ನು ಮುಂದೆ ಕಾಪಾಡುವೆನೆಂದು ಹೇಳಿಹೋಯಿತು. ಮೀನು ಹೇಳಿರುವಂತೆ, ಮನುವು ಜಲಪ್ರಳಯದ ಭಯದಿಂದ ಮೊದಲೇ ಒಂದು ದೋಣಿಯನ್ನು ಸಜ್ಜುಮಾಡಿಸಿಕೊಂಡು ಕುಳಿತನು. ಜಲಪ್ರಳಯದ ಕಾಲ ಸಮೀಪಿಸಿದ ಕೂಡಲೇ, ಅವನು ತನ್ನ ದೋಣಿಯನ್ನೇರಿ ಕುಳಿತನು; ಅಷ್ಟರಲ್ಲಿ ಆ ಮೀನು ಹೊದಲು ಮಾತು

ಕೊಟ್ಟಂತೆ ಧಾವಿಸಿಕೊಂಡು ಈಜುತ್ತ ಮನುವಿನ ಹತ್ತರ ಬಂದಿತು. ಮನುವು ಆ ನಾವಿನ ಹಗ್ಗವನ್ನು ಮೀನಿನ ಕೋಡುಗಳಿಗೆ ಬಿಗಿಯಾಗಿ ಕಟ್ಟಿ, ಅದರ ಸಹಾಯದಿಂದ ಹಿಮಾಲಯದ ಮೇಲಿರುವ ಉತ್ತರ ದಿಸ್ಸೆಯನ್ನು ಸುರಕ್ಷಿತವಾಗಿ ತಲ್ಪಿದನು. ಆಗ ಮೀನು ಮನುವನ್ನು ಕುರಿತು ''ನನ್ನ ಕಾರ್ಯವು ಇದೀಗ ನಿರವೇರಿತು; ನಾವನ್ನು ಬಂದು ಗಿಡಕ್ಕೆ ಕಟ್ಟು; ಈ ದಿಗ್ಶೈಲಯಮೇಲಿರುವ ತನಕ ನಿನಗೆ ಯಾವ ತರದ ಭಯವಿಲ್ಲ; ನೀರು ಇಳಿಯಲಾರಂಭಿಸಿತೆಂದರೆ, ಮೆಲ್ಲಮೆಲ್ಲನೆ ಕೆಳಗೆ ಇಳಿ' ಎಂದು ಹೇಳಿ ಹೊರಟಿತು. ಈ ಚಲಸ್ರಳಯದೊಳಗೆ ಮನುವಿನ ಹೊರತಾಗಿ ಎಲ್ಲರೂ ಸತ್ತುಹೋದರು. ಉತ್ತರಪರ್ವತದ ಈ ಭಾಗಕ್ಕೆ ಈಗ್ಯೂ 'ಮನುವಿನ ಇಳಿಭೂಮಿ' ಎಂಬ (ಮನುವಿನ ಅವತರಣ) ಹೆಸರು ರೂಢಿಯಲ್ಲಿದೆ. ಮುಂದೆ, ಈ ಮನುನೇ ವಂಶದ ಬೆಳವಣಿಗೆಗಾಗಿ ದೊಡ್ಡದೊಂದು ಯಜ್ಞ ಮಾಡಿದನೆಂದೂ, ಆ ಯಜ್ಞದೊಳಗಿಂದ ಒಬ್ಬ ಸ್ತ್ರೀಯಳು ಆವಿರ್ಭವಿಸಿದಳೆಂದೂ, ಅವಳಿಂದ ಮುಂದೆ ಮನುವಂಶವು ಅಭಿವೃದ್ಧಿಯಾಯಿತೆಂದೂ, ಅವರೀರ್ವರ ಹೊತ್ತೈಯಿಂದ 'ಇಡಾ' ಎಂಬ ಕನ್ಯೆಯು ಹುಟ್ಟಿ ಪ್ರಪಂಚವು ವಿಸ್ತಾರಗೊಂಡಿತೆಂದೂ ಮನ್ವಂತರವಾದುದೊಂದು ಕಥೆಯು ಶತಕ್ರತು ಬ್ರಾಹ್ಮಣದಲ್ಲಿದೆ.

ಯಜ್ಞ ವಿಚಾರ:- ವೈದಿಕಸಂಸ್ಕೃತಿಯೊಳಗೆ ಯಜ್ಞವೆಂಬುದೊಂದು ಅತ್ಯಂತ ಮೇಲ್ಮೆಗೊಂಡ ಸಂಸ್ಥೆಯಾಗಿದೆ. ವೈದಿಕಕಾಲದಲ್ಲಿ ಆರ್ಯರ ಮನೆಮನೆಗಳಲ್ಲಿ ಅಗ್ನಿಯು ಉಪಾಸನೆಯು ನಡೆಯುತ್ತಿತ್ತಷ್ಟೆ? ಅದು ಬ್ರಾಹ್ಮಣಕಾಲದಲ್ಲಿ ಕಡಿಮೆ ಆಗಿದ್ದರಿಂದ, ಯಜ್ಞದ ಪ್ರಚಾರವು ಬೆಳೆಯಿತು. ವೈಯಕ್ತಿಕ ಕರ್ಮಗಳು ಕುಂದುತ್ತ ಹೋದಂತೆಲ್ಲ ನಾಮಾಂಕಿತ ಕರ್ಮಗಳು ಹೆಚ್ಚುತ್ತಾವೆಂಬುದಕ್ಕೆ ಯಜ್ಞ ಸಂಸ್ಥೆಯ ಇತಿಹಾಸವೇ ಸಾಕ್ಷಿ. ಆರ್ಯರಿಗೆ ಗೃಹದೇವತೆಯಾದ ಅಗ್ನಿಯನ್ನು ಮನೆ ಮನೆಗಳಲ್ಲಿಯೂ ಪ್ರತ್ಯೇಕವಾಗಿ ಆರಾಧಿಸಲಿಕ್ಕೆ ಶೀತಪ್ರದೇಶವಾದ ಆರ್ಯಾವರ್ತದೊಳಗಿರುತ್ತಿದ್ದುದೊಂದು ಒಳ್ಳೇ ಅನುಕೂಲವೂ ಸೌಕರ್ಯವೂ ಆಗಿತ್ತು. ಆದರೆ ಗಂಗಾ ಯಮುನೆಗಳ ದಂಡೆಯ ಉಷ್ಣಕಟಿಬಂಧದ ನಾಡಿಗೆ ಬಂದಕೂಡಲೇ ಮನೆ ಮನೆಗಳ

ಲ್ಲಿಯೂ ಅಗ್ನಿಯನ್ನಿಡುವದು ಅನಾಧ್ಯವಾಗಿ ತೋರಿ, ಆರ್ಯರು ಮೊದಲಿನ ವೈಯುಕ್ತಿಕ ಅಗ್ನಿ ಉಪಾಸನೆಗಿಂತೆ ವ್ಯಾಪಕವೂ, ವಿಶಾಲವೂ, ಸಾಂಘಿಕವೂ ಆದ ಯಜ್ಞದ ಸ್ವರೂಪ ಕೊಟ್ಟರು. ಅದೇ ಮುಂದೆ ರಾಷ್ಟ್ರೀಯ ಮಹೋತ್ಸವವಾಗಿ ಪರಿಣಮಿಸಿತು.

೪ ಯಜ್ಞದ ಮಹತ್ವ:- ಅಲ್ಲಲ್ಲಿ ಬೇರೆ ಬೇರೆಯಾಗಿ ಗುಂಪು ಗುಂಪಾಗಿದ್ದ ಆರ್ಯರ ಆಯುಷ್ಯದೊಳಗೆ ಯಜ್ಞದ ಮಹತ್ವವು ಅತಿಶಯವಾಗಿದ್ದಿತು. ಹೆಚ್ಚೇನು? ಅವರನ್ನೆಲ್ಲ ಕಲೆಹಾಕಲಿಕ್ಕೆ ಯಜ್ಞದಂಥ ಸಾಮಾನ್ಯ ಸಂಸ್ಥೆಯೊಂದು ಬೇಕಾಗಿತ್ತು. ಸ್ವಾಭಾವಿಕವಾಗಿಯೇ ಯಜ್ಞವು ಆರ್ಯರಿಗೆ ಅತ್ಯಂತ ಪೂಜ್ಯವಾದುದರಿಂದ ಆರ್ಯರಲ್ಲಿ ಬಂದು ಬಗೆಯ ಸಾಂಘಿಕ ಶಕ್ತಿಯನ್ನು, ಪ್ರೇಮವನ್ನು ಬೆಳೆಯಿಸಲು ಅದೇ ಕಾರಣವಾಯಿತು; ಹೀಗಾದ್ದರಿಂದ ಯಜ್ಞಕ್ಕೆ ಈಗಣ ಕಾಲದ ದೊಡ್ಡ ಪರಸಿಯ ಅಥವಾ ಜಾತ್ರೆಯ ಸ್ವರೂಪವು ಬಂದಿತು. ಅಲ್ಲಲ್ಲಿ ಯಜ್ಞಗಳಾಗಹತ್ತಿದ್ದರಿಂದಲೂ ಯಜ್ಞಕ್ಕಾಗಿ ಬಂದೇಕಡೆಯಲ್ಲಿ ಲಕ್ಷಾವಧಿ ಜನಗಳು ಭಕ್ತಿಯಿಂದ ಬಂದು ನೆರೆಯುತ್ತಿದ್ದುದರಿಂದಲೂ ಆಯಾ ಜನರಿಗೆ ತಮ್ಮ ಕೈಗಾರಿಕೆ, ಲಲಿತಕಲೆ, ವಾಙ್ಮಯ, ಶಿಲ್ಪಕಲೆ ಮೊದಲಾದವುಗಳಲ್ಲಿಯು ಜಾಣತನವನ್ನು ಜಗರ ಕಣ್ಣಿಗೆ ಹಾಕುವ ಸಂಧಿಯು ದೊರೆಯಲನುವಾಗಿ ಕುಶಲವಿದ್ಯೆಗಳೆಲ್ಲ ಅಭ್ಯುದಯಕ್ಕೆ ಬಂದವು; ಮೇಲಾಗಿ, ಪರದೇಶದ ಹಾಗೂ ದೂರಿನ ನಾಡಿನವರಲ್ಲಿ ಒಡನಾಟ, ಹೊಕ್ಕುಬಳಿಕೆ, ಬೆಳೆದು, ಜನತೆಯಲ್ಲಿ ಧಾರ್ಮಿಕ ಉಚ್ಚಭಾವನೆಯುಂಟಾಯಿತು. ದೊಡ್ಡ ದೊಡ್ಡ ಯಜ್ಞಗಳಾಗುವದರಿಂದಾದ ಇನ್ನೊಂದು ಲಾಭವೇನಂದರೆ, ಅಲ್ಲಲ್ಲಿಯ ಕಾಡದವಿಗಳು ಇಲ್ಲದಂತಾಗಿ ಹೊಸ ಹೊಸ ಒಕ್ಕಲನಾಡುಗಳಾದವು. ಯಜ್ಞವಾಗುವ ಸ್ಥಳದಲ್ಲಿ ದೂರ ದೂರ ದೇಶದ ಮಹಾ ಮಹಾ ಪಂಡಿತರೂ, ಅರಸರೂ, ತತ್ವಜ್ಞರೂ, ಶ್ರೀಮಂತರಾದ ವರ್ತಕರೂ, ಗಾಯಕರೂ, ಕೈಗಾರಿಕೆಯ ಕಸಬುಗಾರರೂ ಬಂದು ನೆರೆಯುವದರಿಂದ ಸಮಾಜದ ಬಗ್ಗಿಟ್ಟಿಗೂ, ಹೊಕ್ಕುಬಳಿಕೆಗೂ, ಅದೊಂದು ಬಲವಾದ ಸಾಧನವಾಯಿತು.

ಯಜ್ಞದ ಧ್ಯೇಯ:- ಇಷ್ಟದೇವತೆಯಾದ ತಮ್ಮ ಮೆಚ್ಚಿನ

ಇಂದ್ರನನ್ನೇ ಸಂತುಷ್ಟಗೊಳಿಸುವದೊಂದು ಯಜ್ಞದ ಉದ್ದಿಶ್ಯವಿ ದ್ದಾಗ್ಯೂ ಆರ್ಯರು ಒಗೆ ಒಗೆಯ ಕಾಮನೆಗಳಿಂದ ಯಜ್ಞ ನಡಿಸುತ್ತಿ ದ್ದರು. ಕೆಲವರು ವಂಶವೃದ್ಧಿಗಾಗಿ; ಹಲವರು ಸ್ವರ್ಗ ಪಡೆಯ ಬೇಕೆಂದು; ಮತ್ತೆ ಕೆಲವರು ಯುದ್ಧದಲ್ಲಿ ಗೆಲಸಾಗಬೇಕೆಂದು; ಇನ್ನು ಕೆಲವರು ರಾಜ್ಯ ದೊರೆಯಬೇಕೆಂದು; ಇನ್ನೂ ಕೆಲವರು ತೇಜೋವೃದ್ಧಿ ಗಾಗಿ; ಹೀಗೆ ಅನೇಕರು ಅನೇಕ ಬಗೆಯ ಕಾಮನೆಗಳ ಪೂರೈಕೆಗಾಗಿ ಯಜ್ಞ ನಡಿಸುತ್ತಿದ್ದರು. ಮೂರು ವರ್ಣದವರಿಗೂ ಯಜ್ಞ ಮಾಡುವ ಅಧಿಕಾರವಿತ್ತು; ಯಾವುದೊಂದು ಕಾಮನೆಯಿಂದಲೇ ಯಜ್ಞವನ್ನು ಮಾಡುತ್ತಿದ್ದರೂ, ಯಜ್ಞದೊಳಗೆ ಬಂದ ವಸ್ತುಹಣವನ್ನೆಲ್ಲ ಯಜಮಾ ನನು ತನಗಾಗಿ ಇಟ್ಟುಕೊಳ್ಳದೆ, ಯಜ್ಞದೊಳಗೆ ಸರ್ವರಿಗೂ ಹಂಚಿ ಬಿಡುತ್ತಿದ್ದನು; ಆದರೆ, ಮುಂದೆ ಇದು ಒಡಲಾವನೆಯಾಗಿ, ತನ್ನ ಜೀವ ನಕ್ಕೆ ಬೇಕಾದಷ್ಟು ಪದಾರ್ಥಗಳನ್ನೇ ಮಾತ್ರ ಇಟ್ಟುಕೊಂಡು ಮಿಕ್ಕ ವುಗಳನ್ನು ದಾನ ಮಾಡಬೇಕೆಂಬ ಕಲ್ಪನೆಯುಂಟಾಯಿತು. ವೈದಿಕ ಕಾಲಕ್ಕೆ ಕ್ಷತ್ರಿಯರಂತೆ, ಬ್ರಾಹ್ಮಣರು ಹಣಪುಳ್ಳವರಾದ್ದರಿಂದ, ಅವರೂ ತಮ್ಮ ಕೈಯಿಂದ ಹಣ ಪೆಚ್ಚಿ ಮಾಡಿ ಯಜ್ಞ ಸಮಾರಂಭಮಾಡು ತ್ತಿದ್ದರು.

ಆರಣ್ಯಕಗಳೂ, ಉಪನಿಷತ್ತುಗಳೂ:- ವಾನಪ್ರಸ್ಥಾಶ್ರಮಿ ಗಳು ಅಧ್ಯಯನ ಮಾಡುವ ಗ್ರಂಥಗಳೇ ಆರಣ್ಯಕಗಳು. ಸ್ವಸಂತೋ ಷದಿಂದ ಸಂಸಾರವನ್ನು ಬಿಟ್ಟು ಅರಣ್ಯಕ್ಕೆ ಹೋದಬಳಿಕ ಮನನ ಶೀಲರಾದವರು ಈ ಗ್ರಂಥಗಳನ್ನೂ, ಉಪನಿಷತ್ತುಗಳನ್ನೂ ಅಭ್ಯಾಸ ಕ್ಕಾಗಿ ಇಟ್ಟುಕೊಂಡು ಕಾಲಕಳೆಯುತ್ತಿದ್ದರು. ಬಂದು ಬಗೆಯಿಂದ ಇವನ್ನು ಬ್ರಾಹ್ಮಣದೊಳಗಿನ ಅಂಶಭೂತವಾದ ಭಾಗಗಳೆನ್ನಬಹುದು. ಈ ಭಾಗದಲ್ಲಿ ಮುಖ್ಯವಾಗಿ ವೇದಾಂತ ತತ್ವಗಳೂ ಚಿತ್ತಸ್ಥಿರಗೊಳಿ ಸುವ ಕೆಲವು ಉಪಾಸನೆಗಳೂ ಕಥೆರೂಪವಾಗಿ ಹೇಳಲ್ಪಟ್ಟಿವೆ. ಇನ್ನು ಉಪನಿಷತ್ ಶಬ್ದಾರ್ಥವನ್ನು ನೋಡಿದರೆ, ಯಾರೊಬ್ಬರ ಹತ್ತಿರ ಕುಳ್ಳಿ ರುವದೆಂಬರ್ಥ; ಅಂದರೆ ಗುಹ್ಯವಾದ ಜ್ಞಾನಕ್ಕಾಗಿ ಗುರುಗಳ ಅಡಿದಾ ವರೆಗಳಲ್ಲಿ ಶಿಷ್ಯನು ಕುಳಿತು ಕಲಿಯುವದು. ಉಪನಿಷತ್ತೆಂದರೆ ಗೂಢ

ಜ್ಞಾನವೆಂಬುದೊಂದು ಅರ್ಥವಿದ್ದು, ಅದರ ರಹಸ್ಯವನ್ನು ಕಂಡಕಂಡವರಿಗೆ ತಿಳಿಯಗೊಡಬಾರದೆಂದು ಭಾರತೀಯರ ನಿಯಮವು. ಅಮೂಲ್ಯವಾದ ಈ ಉಪನಿಷತ್ತಿನ ಜ್ಞಾನವನ್ನು ಗುರುವು ತನ್ನ ಮಾತು ಕೇಳುವ ಮಗನಿಗಾಗಲಿ, ಶಿಷ್ಯನಿಗಾಗಲಿ ಕಲಿಸಬೇಕೇ ಹೊರತು ಯಾರು ಎಷ್ಟು ದ್ರವ್ಯವನ್ನಾಗಲಿ, ಕೊನೆಗ ಇಡೀ ಪಸುಂಧರೆಯನ್ನೇ ಆಗಲಿ, ಕಾಣಿಕೆಯಾಗಿ ಕೊಟ್ಟರೂ ಕಲಿಸಕೂಡದೆಂದು ಋಷಿಗಳು ಎಚ್ಚರಿಕೆ ಕೊಟ್ಟಿದ್ದಾರೆ. ಉಪನಿಷತ್ತಿನಂಥ ಕೇವಲ ತತ್ವಜ್ಞಾನ ಪ್ರಚುರವಾದ ಗ್ರಂಥಗಳು ಬೆಳಕಿಗೆ ಬರಬೇಕಾದರೆ, ಇಂದು ವಿಶಿಷ್ಟತರದ ಸ್ಥಿತಿಯು ಉಂಟಾಗಬೇಕಾಗುತ್ತದೆ. ಅಂಥದು ಬ್ರಾಹ್ಮಣಕಾಲವಾದನಂತರ ಭರತವರ್ಷಕ್ಕೆ ಬಂದೊದಗಿತ್ತು; ಅದು ಕಾರಣವೇ ಉಪನಿಷತ್ತುಗಳು ಹುಟ್ಟಿದವೆಂದು ಹೇಳಬಹುದು. ಅಜ್ಞಾನದ ಎಲ್ಲೆಯನ್ನು ದಾಟಿ ನವಚೈತನ್ಯದ ಜ್ಞಾನಸೃಷ್ಟಿಯಲ್ಲಿ ಮನುಷ್ಯನು ಅಡಿಯಿಕ್ಕಿದೊಡನೆ, ಆ ಚೈತನ್ಯದ ಸುಳಿಗಾಳಿಯಿಂದ ಅವನ ಮೈಮನಲ್ಲೆಲ್ಲ ಅಖಂಡವಾದ ಜ್ಞಾನ ಪ್ರವಾಹವು ಹರಿಯತೊಡಗಿ, ಕಾವ್ಯಮಯವಾದ ಪ್ರಸಂಡದಲ್ಲಿ ಹೊಕ್ಕು ಮನೋಹರವೂ ಅಪಾರವೂ ಆದ ನೋಟಗಳನ್ನು ನೋಡುವ ಭಾಗ್ಯವು ಮನುಷ್ಯನಿಗೊದಗುತ್ತದೆ. ಇಂಥ ಕಾವ್ಯಮಯವೂ ಅಧ್ಯಾತ್ಮಪ್ರಧಾನವೂ ಆದ ಪ್ರಸಂಗಗಳೇ ಉಪನಿಷತ್ತುಗಳು. ಅಂತೂ ಸಾಮಾನ್ಯವಾಗಿ, ಯಜ್ಞಕರ್ಮಗಳ ಹೆಚ್ಚಳವೂ, ಎಲ್ಲೆಯಿರದ ಜನರೊಳಗೆ ಸ್ವಾಭಾವಿಕವಾಗಿ ಬೆಳೆಯುತ್ತಿರುವ ಇಂದು ಪ್ರಕಾರದ ದೈವಿಕ ಜ್ಞಾನಲಾಲಸೆಯೂ, ಇವೆರಡೇ ಮುಖ್ಯತಃ ಬ್ರಾಹ್ಮಣಕಾಲಕ್ಕೆ ಅಂಕುರಿಸಿ, ಉಪನಿಷತ್ತಿನಕಾಲಕ್ಕೆ ಹೊಳೆತು, ಬಲಿತು, ಯಜ್ಞದ ಬೆಳಕನ್ನು ಮಸಕು ಮಾಡಿದವು. ವೇದಕಾಲದ ನಂತರ ಬಹು ದಿವಸಗಳ ವರೆಗೆ ಭರತಖಂಡಕ್ಕೆ ಉಪನಿಷತ್ತಾಲದಂತಹ ಮಂಗಲಕರ ಪ್ರಸಂಗವು ಪ್ರಾಪ್ತವಾಗಿರಲಿಲ್ಲ; ಅದೀಗ ಬದಗಿತು. ಯಜ್ಞಕರ್ಮದಿಂದ ಇಂದು ವಿಧವಾದ ಬುದ್ಧಿಮಾಂದ್ಯವು ಜನಸಾಮಾನ್ಯರನ್ನು ಆವರಿಸಿಕೊಂಡಿತ್ತು; ಅದೀಗ ಉಪನಿಷತ್ತಿನಂಥ ರಸವತ್ತಾದ ಸೊಬಗಿನ ಸುಗ್ಗಿಯಿಂದ ಬಯಲಾಯಿತು. ಇವರು ಮೇಲು, ಅವರು ಕೀಳೆಂಬ ರೂಢಿಯ ಕಟ್ಟು,

ತಾನಾಗಿಯೇ ನಡೆಯಿತೋಗಿ ಗಂಡಸರೂ, ಹೆಂಗಸರೂ, ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಅವರೆಲ್ಲರಲ್ಲಿ ಜ್ಞಾನ ಪಡೆಯುವ ನೀರಡಿಕೆಯುಂಟಾಯಿತು. ಯಾವುದಾದರೊಂದು ಪದ್ಧತಿಯಾಗಲಿ, ನಡೆಯಾಗಲಿ ಬಹು ದಿನಗಳ ಪರಿಗೆ ಬಂದೇ ಸಮನಾಗಿ ನಾಗುತ್ತಿರುವದು ನಿಸರ್ಗಕ್ಕೇ ಒಪ್ಪುವದಿಲ್ಲವಾಗಿ ಕಾಣುತ್ತದೆ; ಹೀಗಿದ್ದರೂ ಸಾಮಾನ್ಯ ಸ್ವಪಂಚವು ಗತಾನುಗತಿಕವೂ, ಹಾಡಿದ್ದೇ ಹಾಡುವದರಲ್ಲಿ ಆನಂದವನ್ನು ಹುಡುಕುವದೂ ಆಗಿರುತ್ತದೆ. ಆದರೆ ಜಗತ್ತಿನಲ್ಲಿ ಕ್ಷಣಕ್ಷಣಕ್ಕೇನಾದರೊಂದು ಹೊಸದು ಬೇಕೆಂದು ಹಂಬಲಿಸುವ ನಿಸರ್ಗದೇವತೆಯ ಮಕ್ಕಳಾದ ಜ್ಞಾನಿಗಳಿಗೆಂತು ಇದು ಸರಿಹೋಗುವದು? ಆದುದರಿಂದಲೇ, ಜ್ಞಾನಿಗಳು ಇಹದಲ್ಲಿ ಅಗಾಗ್ಗೆ ಮೈದೋರಿ, ಬಂದೇ ದಾರಿಯಿಂದ ನಡೆದು ನಡೆದು ಜೀವಸತ್ತು ತಪ್ಪೊಡನೆ ಆ ದಾರಿಯನ್ನು ಸಹ ನಿರ್ಜೀವಗೊಳಿಸಿದ ಜನರಿಗೆ ಹೊಸ ದಾರಿಯನ್ನು ತೋರಿಸಲಿಕ್ಕೆ ನಿಸರ್ಗದೇವತೆಯು ಬಯಕೆಯಂತೆ, ಮೈಗೊಂಡು ಬರುತ್ತಾರೆ. ನಾವು ಕೊಂಚ ಆಳವಾಗಿ ನಿರೀಕ್ಷಿಸಿದರೆ, ಉಪನಿಷತ್ಕಾಲದಲ್ಲಿ ಕೆಲ ಬ್ರಾಹ್ಮಣ ಕ್ಷತ್ರಿಯಾದಿಗಳಿಗೆ ಯಜ್ಞಕರ್ಮದೊಳಗೆ ಸಂಪೂರ್ಣ ಅನಾದರವುಂಟಾಗಿತ್ತೆಂದು ವ್ಯಕ್ತವಾಗುತ್ತದೆ. ಆದುದರಿಂದ ಪವಿತ್ರ ಯಜ್ಞದ ಕರ್ಮಕ್ಕೆ ಹತ್ತಿದ ಕೆಟ್ಟಪ್ಪನ್ನು ಕೆತ್ತಿಹಾಕಿದು ಅದರ ಶುದ್ಧ ತಾತ್ವಿಕ ಸ್ವರೂಪವನ್ನು ನೋಡುವಂಥದೊಂದು ಹೊಸ ಕಣ್ಣನ್ನು ಕೊಡುವಂಥ ಕೇವಲ ತತ್ವಜ್ಞಾನಿಗಳದೇ ಬಂದು ಸ್ವತಂತ್ರಸಂಘವು ನಿರ್ಮಾಣವಾಗಿ, ಅದು ಇಡೀ ಭರತಖಂಡದ ದೃಷ್ಟಿಯನ್ನೇ ತಿರಿಗಿಸಿ ಬಿಟ್ಟಿತೆನ್ನಬಹುದು. ಈ ಸ್ವತಂತ್ರಜ್ಞಾನಿಸಂಘದ ತತ್ವಜ್ಞಾನಿಗಳು ಯಜ್ಞಕರ್ಮವನ್ನು ಹಳಿಯುದೆ, ಜರಿಯುದೆ ತಮ್ಮ ಹೊಸ ದಾರಿಯನ್ನು ತಾವು ಹಿಡಿದುದಲ್ಲದೆ ಯಜ್ಞಪ್ರಿಯರಿಗೆ ಯಜ್ಞದ ಗುಟ್ಟನ್ನು ಹೇಳಿ, ಅದನ್ನೇ ಕಳೆತುಂಬಿದ ಕಲೆಗಳಿಂದ ದೃಢಗೊಳಿಸಿದ್ದೆಂದು ವಿಶೇಷ ಸಂಗತಿಯು. ವೈದಿಕಕಾಲದ ಇತಿಹಾಸದೊಳಗೆ ಉಪನಿಷತ್ತಿನ ಈ ಕಾಲ ಬದಲಾವಣೆಗೆ 'ಧರ್ಮಕ್ರಾಂತಿಯ' ದೊಡ್ಡ ತೆರೆಯೆಂದೂ ಹೇಳಬಹುದು.

ಉಪನಿಷತ್ಕಾಲದ ಮಹಿಮೆ:- ಹಿಂದೂಜನಾಂಗಕ್ಕೇ ಏಕೆ?

ಇಡೀ ಭೂಮಂಡಲಕ್ಕೇ ಎಂದೂ ಕಣ್ಣಿಗೆ ಕಾಣದ ಈ ಉಪನಿಷತ್ತಿನ ಬೆಳಕಿನ ಜ್ಞಾನದ ಸುಗ್ಗಿಯ ಕಾಲವನ್ನು ಕುರಿತು ನಾವು ಎಷ್ಟು ಪ್ರಶಂಸಾಪೂರ್ವಕವಾಗಿ ಹೊಗಳಿದರೂ ಕಡಿಮೆಯೇ ಸರಿ! ಉಪನಿಷತ್ತಿನ ಬೆಳಕೆಂದರೆ, ಆರ್ಯಧರ್ಮ ವೃಕ್ಷದ ಫಲ ಸುಗ್ಗಿಯ ಕಾಲವು. ಈ ಕಾಲದಲ್ಲಿ ಆರ್ಯಧರ್ಮಕ್ಕೆ ಅತ್ಯಂತ ಸವಿಯಾದ ಫಲಗಳು ಬಿಟ್ಟವು; ಮತ್ತು ಆ ಫಲಗಳು ಆರ್ಯತತ್ವಜ್ಞಾನವನ್ನೇ ಅಮರಗೊಳಿಸಿದವು. ಆರ್ಯತತ್ವಜ್ಞಾನಕ್ಕೆ ಉಪನಿಷತ್ತುಗಳ ಬೆಂಬಲವಿಲ್ಲದಿದ್ದರೆ ಅದು ಪೂರ್ಣಸ್ಥಿತಿಯನ್ನಡರುತ್ತಿರಲಿಲ್ಲ; ಅಥವಾ ಅದು ಈಗಿನಷ್ಟು ನಿರ್ಭಯದಿಂದ ಜಗತ್ತಿನಲ್ಲಿ ಓಡಾಡಿ, ಪಾಶ್ಚಾತ್ಯರಂಥ ಭೌತಿಕವಾದದ ಭಕುತರಿಗೆ ಕೂಡ ಆನಂದವನ್ನೀಯುತ್ತಿರಲಿಲ್ಲ. ಪಾಶ್ಚಾತ್ಯ ತತ್ವಜ್ಞಾನಿಗಳೆಂದರೆ ಸಂಶಯವಾದಿಗಳು, ನಾಸ್ತಿಕವಾದಿಗಳು; ಅಂಥವರು ಸಹ ಉಪನಿಷತ್ತುಗಳ ಅಧ್ಯಯನದಿಂದ ಹುಚ್ಚು ಹಿಡಿದಂತಾಗಿ ಈ ಹೊತ್ತು ಅವುಗಳ ಮಹಿಮೆಯನ್ನು ಬಾಯಿತುಂಬ ಹೊಗಳಿಹಾಡುತ್ತಿದ್ದಾರೆ. ಈ ಪೇರೆಗೆ ಉಪನಿಷತ್ತುಗಳು ಅಮರವಾಗಿರುವವಲ್ಲದೆ, ಕೇಳುವವರನ್ನೂ, ಓದುವವರನ್ನೂ ಸಹ ಮೃತ್ಯುವೆಂಬ ಕಡಲಿಂದ ಕಸಿಪಾಯಿಸಲಿಕ್ಕೆ ಸಮರ್ಥವಿರುವ ಸಂಗತಿಯು ಅದರಲ್ಲಿಯೇ ಬೆಳಗುವ ಚಮತ್ಕಾರಭರಿತವಾದ ಕಥೆಗಳಿಂದ ಅನುಭವಕ್ಕೆ ಬರುತ್ತಿದೆ.

ಸತ್ಯಕಾಮ ಜಾಬಾಲೀ ಕಥೆ:– ಉಪನಿಷತ್ತಿನಲ್ಲಿ ಸತ್ಯಕಾಮ ಜಾಬಾಲಿಯ ಕಥೆಯೊಂದು ಬಹು ಬೋಧಪ್ರದವೂ ಧಿರೋದಾತ್ತವೂ ಆಗಿದೆ. ಅದರ ತಾತ್ಪರ್ಯವು ಕೆಳಗೆ ಕಾಣಿಸಿದಂತಿದೆ. ಸತ್ಯಕಾಮನೆಂಬ ಒಬ್ಬ ಕುಮಾರನು ತನ್ನ ತಾಯಿಯಾದ ಜಾಬಾಲಿಯನ್ನು ಕುರಿತು, "ಅಮ್ಮಾ ಗುರುವಿನ ಬಳಿ ಹೋಗಿನಿಂತು ಜ್ಞಾನಸಂಪಾದನೆಯಬೇಕೆಂಬ ತವಕವು ನನಗುಂಟಾಗಿದೆ; ಅದುದರಿಂದ ನನ್ನ ಗೋತ್ರ ಯಾವುದು? ತಂದೆ ಯಾರು? ಎಂಬುದನ್ನು ದಯವಿಟ್ಟು ಹೇಳು" ಎಂದನು. ಅದಕ್ಕೆ ತಾಯಿಯಾದ ಜಾಬಾಲಿಯು "ಮಗು! ನನಗೆ ನಿನ್ನ ತಂದೆಯ ಕುಲಗೋತ್ರಗಳು ಗೊತ್ತಿಲ್ಲ; ಪ್ರಾಯದೊಳಗೆ ಮನೆ ಮನೆಗಳಲ್ಲಿ ತೊತ್ತಾಗಿ ದುಡಿಯುತ್ತಿರುವಾಗ ನಾನು ನಿನ್ನನ್ನು ಹೆತ್ತೆನು; ನಿನ್ನ ಹೆಸರು ಸತ್ಯ

ಕಾಮ; ನನ್ನ ಹೆಸರು ಜಾಬಲಾ; ನೀನು ನನ್ನ ಮಗನಾದ್ದರಿಂದ ನಿನಗೆ ಸತ್ಯಕಾಮಜಾಬಲಿಯೆಂದು ಕರೆಯುವದುಂಟು" ಹೀಗೆಂದಳು. ತಾಯಿಯಿಂದ ತನ್ನ ಜನ್ಮವೃತ್ತವನ್ನು ಕೇಳಿಕೊಂಡವನಾದ ಸತ್ಯಕಾಮನು ಗೌತಮಋಷಿ ಶಿಷ್ಯನಾದ ಹಾರಿದ್ರುಮತಋಷಿಯ ಬಳಿ ಹೋಗಿ, "ತಪೋನಿಧಿಗಳೇ! ನನಗೆ ಬ್ರಹ್ಮಚರ್ಯದೀಕ್ಷೆಯನ್ನಿತ್ತು, ಕೃತಾರ್ಥನನ್ನಾಗಿ ಮಾಡುವಿರಾ? ಎಂದು ವಿನ್ನವಿಸಿಕೊಳ್ಳಲು, ಅವರು ವಾಡಿಕೆಯಂತೆ "ತಮ್ಮಾ, ನಿನ್ನ ಕುಲಗೋತ್ರವಾವುದು? ಎಂದು ತಿರುಗಿ ವಿಚಾರಿಸಿದರು. ಆಗ ಸತ್ಯಕಾಮನು "ನನ್ನ ಕುಲಗೋತ್ರ ನಾನರಿಯೆ. ನನ್ನ ತಾಯಿಯನ್ನು ಈ ಬಗ್ಗೆ ನಾನು ವಿಚಾರಿಸಿದರೆ, ಅವಳೂ ನನಗೆ ಹೀಗೇ ಉತ್ತರ ಕೊಟ್ಟಳು; ಅದು ಕಾರಣ "ನಾನು ತಾಯಿಯ ಹೆಸರಿಟ್ಟುಕೊಂಡು ವ್ಯವಹರಿಸುತ್ತಿದ್ದೇನೆ" ಎಂದನು. ದಿವ್ಯತೇಜದಿಂದೊಡಗೂಡಿದ ಆ ಚಿಕ್ಕ ಬಾಲಕನ ಬಾಯಿಂದ ಸುರಿಯುವ ಅಮೃತೋಪಮವಾದ ಸತ್ಯವಾಣಿಯನ್ನು ಕೇಳಿಕೊಂಡವನಾದ ಆ ಋಷಿಯು "ಅಹಹ! ಬ್ರಾಹ್ಮಣನಿಗಲ್ಲದೆ ಮತ್ತ್ಯಾರಿಗೆ ಸತ್ಯವನ್ನಾಡುವ ಈ ನಾಲಿಗೆಯು ಇರಲಿಕ್ಕೆ ಸಾಧ್ಯವು? ಈತನು ಬ್ರಾಹ್ಮಣನೇ ಎಂದು ಮನಸಿನಲ್ಲಿ ಅಂದುಕೊಂಡು "ಮಗು, ಸ್ವಲ್ಪು ಇಂಧನವನ್ನು ತೆಗೆದುಕೊಂಡು ಬಾ, ನೀನು ನಿಜವಾಡಿದ್ದರಿಂದ ನಾನು ನಿನಗೆ ಆಶ್ರಯ ಕೊಟ್ಟೇತೀರುವೆನು." ಹೀಗೆಂದು ಅಭಯವಿತ್ತನು. ಉಪನಿಷತ್ಕಾಲದ ಜನರ ದೃಷ್ಟಿಕೋನವು ಬದಲಾಗಿ ಅವರಲ್ಲಿ ಸತ್ಯದ ಹಸಿವು ಎಷ್ಟು ಬೆಳೆದಿತ್ತೆಂಬುದಕ್ಕೆ ಮೇಲಿನ ಕಥೆಯೊಂದು ಸಾಕು. ಹೊರಗಿನ ಹುರುಳಿಲ್ಲದ ಹೊದಿಕೆಯ ಹೊಟ್ಟು ಹಾರಿಸಿ, ಒಳಗಿನ ತಿಳಿಯಾದ ತಿಳಿವಿನ ಪೊಳಿಕೆಯನ್ನೇ ತಿಳಿನೀರಿನಿಂದ ಬೆಳಸಲಿಕ್ಕೆ ಕೈಕೊಂಡು ನಿಂತಿರುವ ಋಷಿಗಳ ಸಮಾನುಭೂತಿಯ ದೃಷ್ಟಿಯನ್ನು ಕುರಿತು ಎಷ್ಟು ಕೊಂಡಾಡಿದರೂ ಕಡಿಮೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ವಚಕ್ನುವಿನ ಮಗಳಾದ ಗಾರ್ಗಿಯು ಯಾಜ್ಞವಲ್ಕ್ಯ ಮುನಿಗಳಿಗೆ ದೃಶ್ಯಜಗತ್ತನ್ನು ಕುರಿತು ಭಾರವಣೆಯ ಪ್ರಶ್ನೆಗಳನ್ನು ಕೇಳಿರುವಳು. ಯಾಜ್ಞವಲ್ಕ್ಯಮುನಿಯು ತನ್ನ ಪ್ರಿಯಪತ್ನಿಯಾದ ಮೈತ್ರೇಯಿಗೆ ಆತ್ಮಜ್ಞಾನದ ಕುರುಹನ್ನು ತಿಳಿಸಿಕೊಟ್ಟ ಸಂಗತಿಯು ಪ್ರಸಿದ್ಧ

ವಿದೆ. ದಾನಶೂರನೂ, ಸಂಪದ್ವೈಭವಗಳಿಂದ ಮೆರೆಯುವವನೂ ಆದ ಜನಶ್ರುತಿಯೆಂಬ ಅರಸನು ಬಂಡಿಯ ಕೊಳೆ ತೊಳೆಯುತ್ತಿರುವ ಸಯುಗ್ವಾಭೈಕ್ಷನ ಬಳಿಗೆ ನಾರಿ, ತನಗೆ ಆತ್ಮಜ್ಞಾನೋಪದೇಶವನ್ನು ದಯಪಾಲಿಸಬೇಕಾಗಿ ಕೈಮುಗಿದುಕೊಂಡು ಕೇಳಿದ ಸಂಗತಿಯು ಇದಕ್ಕೆ ಪುಷ್ಟಿಯಾಗಿದೆ; ಇವಲ್ಲದೆ, ಕ್ಷತ್ರಿಯ ರಾಜರು ಸಹ ಅನೇಕ ಸಂದರ್ಭಗಳಲ್ಲಿ ಬ್ರಾಹ್ಮಣರಿಗೆ ಬ್ರಹ್ಮೋಪದೇಶ ಮಾಡಿದ ಉದಾಹರಣೆಗಳು ಸಿಕ್ಕುತ್ತವೆ; ಪ್ರವಹಣರಾಜನು ಬ್ರಾಹ್ಮಣನಾದ ಗೌತಮನಿಗೆ ಆತ್ಮಜ್ಞಾನದ ದಿಕ್ಕನ್ನು ತೋರಿಸಿದನು. ವಿದೇಹದ ವಿದೇಹಿ ಅರಸನಾದ ಜನಕನು ಯಾಜ್ಞವಲ್ಕ್ಯರಂಥ ಮಹರ್ಷಿಗಳಿಗೆ ತತ್ವಜ್ಞಾನದ ಗುಟ್ಟನ್ನು ಬಿಚ್ಚಿತೋರಿದನು. ಇವೆಲ್ಲವುಗಳ ಮೇಲಿಂದ ಉಪನಿಷತ್ತಿನ ಕಾಲದ ಜನರ ಮನಸ್ಸಿನ ಸ್ಥಿತಿಯು ಯಾವ ಕಡೆಗೆ ಒಲಿದಿತ್ತೆಂಬುದು ಪ್ರತ್ಯಯಕ್ಕೆ ಬರುತ್ತಿದೆ.

ತತ್ವಜ್ಞಾನದ ಪ್ರತಿಷ್ಠಾಪನೆಗಾಗಿಯೇ ಉಪನಿಷತ್ತುಗಳು ಹೊರಟದ್ದರಿಂದ ಅವುಗಳಲ್ಲಿ ಆತ್ಮಜ್ಞಾನದ ಚರ್ಚೆಯೇ ತುಂಬಿತುಳಕಾಡುತ್ತಿದೆ. ಬ್ರಹ್ಮ, ಜಗತ್ತು, ಮನುಷ್ಯನ ಹೆಚ್ಚಿನ ಕರ್ತವ್ಯ ಇವುಗಳ ಸಂಬಂಧವಾದ ಗಹನ ಚರ್ಚೆಗಳೇ ಉಪನಿಷತ್ತುಗಳಲ್ಲಿಯ ಮುಖ್ಯವಾರ. ಮಾದರಿಗಾಗಿ ಕಠೋಪನಿಷತ್ತಿನೊಳಗಣ ಬ್ರಹ್ಮತೇಜಸ್ಸಿನಿಂದ ಥಳಥಳಿಸುವ ಕುಮಾರ ನಚಿಕೇತನ ಅತ್ಯಂತ ಸ್ಫೂರ್ತಿಗೊಳಿಸುವ ದೊಂದು ಕೆಳಗಣ ಕಥೆಯನ್ನು ನೋಡಿರಿ!

ನಚಿಕೇತನ ಕಥೆ:- ಅನ್ನದಾನ ಮಾಡುವದರಲ್ಲಿ ಹೆಸರುವಾಸಿಯಾದ ಉದ್ದಾಲಕನೆಂಬೊಬ್ಬ ಋಷಿಗೆ ನಚಿಕೇತನೆಂಬ ಕುಮಾರನಿದ್ದನು; ಉದ್ದಾಲಕಋಷಿಯು ಒಮ್ಮೆ ವಿಶ್ವಜಿತ್ ಎಂಬ ಯಜ್ಞ ನಡಿಸಿ, ತನ್ನ ಸರ್ವಸ್ವವನ್ನೆಲ್ಲ ಋತ್ವಿಜರಿಗೆ ದಕ್ಷಿಣಾರ್ಥವಾಗಿ ದಾನ ಕೊಟ್ಟನು. ಆ ಸಮಯದಲ್ಲಿ ನಚಿಕೇತನು ಚಿಕ್ಕವನಿದ್ದರೂ, ಸ್ವಭಾವತಃ ಚುರುಕು ಬುದ್ಧಿಯವನೂ, ದೂರದೃಷ್ಟಿಯುಳ್ಳವನೂ ಇದ್ದುದರಿಂದ ತಂದೆಯ ದಾನ ಕಾರ್ಯವು ಯಥಾವಿಧಿಯಾಗಿ ನಡೆದು ಅತನಿಗೆ ಯಶಸ್ಸು ದೊರೆಯುವಂತೆ ಮಾಡುವದು ತನ್ನ ಕರ್ತವ್ಯವಾದ್ದರಿಂದ, ತನ್ನನ್ನು ಸಹ ತಂದೆಯು



ಯಮನು:—"ಮಗೂ, ನಿನ್ನ ಮಾತಿಗೆ ನಾನು ಮೆಚ್ಚಿದೆನು. ಇಷ್ಟವಾದ ವರವನ್ನು ಬೇಡಿಕೊ."

ನಚಿಕೇತಸ:—"ನನ್ನ ತಂದೆಯು ಪುನಃ ನನ್ನನ್ನು ಭೇಟಿಯಾಗಬೇಕು. ನಾನು ಆಚರಿಸುವ ಶ್ರೌತಸ್ಮಾರ್ತ ಕರ್ಮಗಳೆಲ್ಲ ಅಕ್ಷಯನಾಗಬೇಕು. ನಾನು ಮೃತ್ಯುವನ್ನು ಜಯಿಸಬೇಕು." [ಪುಟ ೬೪–೬೬]

ಯಾರಿಗಾದರೂ ದಾನಮಾಡಬೇಕೆಂದೂ, ಅದನ್ನು ಮಾಡದೆ, ತಂದೆಗೆ ಯಜ್ಞ-ನಾಶಲ್ಯದ ಪುಣ್ಯವು ಬಾರದೆಂದೂ ಯೋಚಿಸಿಕೊಂಡು, ತಂದೆಯ ಬಳಿಗೆ ಹೋಗಿ "ಅಪ್ಪ, ನನ್ನನ್ನು ಯಾವ ಋತ್ವಿಜರಿಗೆ ಅರ್ಪಿಸಬೇಕೆಂದು ಸಂಕಲ್ಪಿಸಿರುವಿ?" ಎಂದು ಕೇಳಿದನು. ಮಗುವಿನ ಮಾತನ್ನು ಕೇಳಿ, ಋಷಿಯು ಬಾಲನಾದ ಈತನಿಗೆ ಏನೂ ತಿಳಿಯದ್ದರಿಂದ ಸುಮ್ಮನೆ ಹೇಳಿ ಪ್ರಯೋಜನವೇನೆಂದು ಮೌನವನ್ನು ತಾಳಿದನು. ಆದರೆ ನಚಿಕೇತನು ಅಷ್ಟಕ್ಕೆ ಸುಮ್ಮನಿರದೆ, ತಂದೆಗೆ ಮತ್ತೆ ಮತ್ತೆ ವಿಜ್ಞಾಪಿಸಿಕೊಂಡನು. ಆಗ, ಮಗನನ್ನು ಏನಾದರೊಂದು ಅಡ್ಡತಿಡ್ಡವಾದ ಉತ್ತರದಿಂದ ಹೆದರಿಸಿಬಿಡಬೇಕೆಂದೆಣಿಸಿ, ತಂದೆಯು "ನಿನ್ನನ್ನು ಮೃತ್ಯುವಿಗೆ ಅರ್ಪಿಸಿಬಿಡುತ್ತೇನೆ" ಎಂದು ಗದರಿಸಿದನು. ಈ ಸಮಯಕ್ಕೆ ನಚಿಕೇತನನ್ನು ದಿವ್ಯ ಆಕಾಶವಾಣಿಯಾದುದೇನೆಂದರೆ, "ಮಗುವೇ? ನೀನು ಮೃತ್ಯುವಿನ ಹತ್ತರ ಹೋಗಬೇಕೆಂದು ನಿಮ್ಮ ತಂದೆಯ ಮನೀಷೆಯಿದೆ; ಆದರೆ ಯಮರಾಜನು ಹೊರಗೆ ಪ್ರಯಾಣಕ್ಕಾಗಿ ಹೋದ ಸಮಯವರಿತುಕೊಂಡು, ನೀನು ಆತನ ಮನೆಗೆ ಹೋಗು; ಮತ್ತು ಯಮಧರ್ಮರಾಜನ ಹೆಂಡರು ಮಕ್ಕಳು ನಿನಗೆ ಊಟ ಮಾಡಲಿಕ್ಕೆ ಎಷ್ಟು ಕೇಳಿಕೊಂಡರೂ, ಮೂರು ದಿವಸಗಳ ವರೆಗೆ ಅನ್ನ ನೀರು ಮುಟ್ಟದೆ, ಯಮನ ಬಾಗಿಲವನ್ನೇ ಕಾಯ್ದುಕೊಂಡಿರು. ಅಷ್ಟರಲ್ಲಿ ಯಮನು ಮನೆಗೆ ಬಂದು, "ತಮ್ಮಾ, ನೀನಿಲ್ಲಿ ಬಂದು ಎಷ್ಟು ದಿನಗಳಾದ"ವೆಂದು ಕೇಳಿದರೆ, ಅದಕ್ಕೆ "ಮೂರು ರಾತ್ರಿಗಳು ಸಂದವೆಂದು ಉತ್ತರಕೊಡು." ಅನಂತರ ಯಮನು "ಮೊದಲನೇ ರಾತ್ರಿ ಏನು ಊಟಮಾಡಿದೆ" ಎಂದು ವಿಚಾರಿಸಿದರೆ, "ನಿನ್ನ ಪ್ರಜೆಗಳನ್ನು ತಿಂದೆನೆ"ಂದು ಉತ್ತರ ಕೊಡು; ಏಕೆಂದರೆ, ಅತಿಥಿಯು ಬಂದು ದಿನ ಮನೆಯಲ್ಲಿ ಉಪವಾಸ ಕುಳಿತರೆ, ಪ್ರಜಾಕ್ಷಯವಾಗುತ್ತದೆಂಬ ಮಾತು ಯಮನ ಲಕ್ಷ್ಯಕ್ಕೆ ಬರುತ್ತದೆ. ಎರಡು ಮತ್ತು ಮೂರನೇದಿನ ರಾತ್ರಿ ಏನು ಊಟ ಮಾಡಿದೆಂದು ಯಮರಾಜನು ಕೇಳಿದರೆ, "ನಿನ್ನ ಮನೆಯಲ್ಲಿಯ ದನಕರು ಹಾಗೂ ಪುಣ್ಯವನ್ನೆಲ್ಲ ತಿಂದೆನೆ"ಂದು ಹೇಳೆಂದರೆ, ಅವನಿಗೆ "ತನ್ನ ಪುಣ್ಯ ಹಾಗೂ ದನಕರುಗಳ ಕ್ಷಯವಾಯಿತೆಂದು ತಿಳಿಯುವದು." ಅದರಂತೆ, ನಚಿಕೇತನು

ಯಮರಾಜನಿಲ್ಲದಿರುವ ಸಮಯ ನೋಡಿಕೊಂಡು, ಮನೆಗೆ ಹೋದನು ಮತ್ತು ಅನ್ನನೀರಿಲ್ಲದೆ ಬಿದ್ದುಕೊಂಡನು; ಹೀಗೆ ಮೂರು ದಿವಸಗಳಾದ ನಂತರ, ಯಮನು ಬಂದು ನಚಿಕೇತನಿಗೆ ಎಲ್ಲ ಪ್ರಶ್ನೆಗಳನ್ನು ಕೇಳಿದನು; ನಚಿಕೇತನಾದರೂ, ಅವನಿಗೆ ತಕ್ಕ ಉತ್ತರಗಳನ್ನು ಕೊಟ್ಟನು. ಕುಮಾರ ನಚಿಕೇತನ ಬಾಯಿಂದ ಹೊರಟ ದಿವ್ಯ ಪಾಗೂ ದಿಟ್ಟತನದ ನುಡಿಗಳನ್ನು ಆಲಿಸಿ, ಈ ಕುಮಾರನು ಸಾಮಾನ್ಯನಲ್ಲದೆ, ಅಧಿಕಾರಿಯೂ, ಜ್ಞಾನಿಯೂ ಆಗಿರುವದರಿಂದ ಈತನನ್ನು ಕೊಲ್ಲುವದು ವಿಹಿತವಲ್ಲೆಂದು ಆತನ ವಿಷಯದಲ್ಲಿ ಯಮನು ಆದರಭಾವವನ್ನು ತಾಳಿ, "ತಮ್ಮಾ? ನಾನು ನಿನ್ನ ಮಾತಿಗೆ ಬಲಿದಿದ್ದೇನೆ; ಇಷ್ಟ ವರವನ್ನು ಬೇಡಿಕೋ" ಎಂದನು; ಆಗ ನಚಿಕೇತನು "ನನಗೂ ನನ್ನ ತಂದೆಗೂ ತಿರುಗಿ ಭೆಟ್ಟಿಯಾಗಬೇಕು; ನಾನು ಆಚರಿಸುವ ಶ್ರೌತ, ಸ್ಮಾರ್ತಕರ್ಮಗಳೆಲ್ಲ ಅಕ್ಷಯವಾಗಬೇಕು; ನಾನು ಮರಣವನ್ನು ಗೆಲ್ಲಬೇಕು" ಹೀಗೆ ಮೂರು ವರಗಳನ್ನು ದಯಪಾಲಿಸಬೇಕಾಗಿ ಬೇಡಿಕೊಂಡು ಕೃತಕೃತ್ಯನಾಗಿ ತಂದೆಯ ಬಳಿಗೆ ಬಂದನು. ಗಜಾಂತಲಕ್ಷ್ಮಿಯನ್ನೂ, ಸ್ವರ್ಗೀಯವಾದ ಸೌಖ್ಯವನ್ನೂ ಇಕೆಸ್ಕೀ ಎಂದು ಮುಂದೆ ಬಾಯ್ದೆರೆದು ನಿಂತಿರುವ ಯಮನ ಮಾತಿಗೆ ನಚಿಕೇತನು ಮರುಳಾಗದೆ, ಐಹಿಕ ಪಾಗೂ ಕ್ಷಣಭಂಗುರವಾದ ಸುಖಸಾಮ್ರಾಜ್ಯವನ್ನು ಎಡಗಾಲಿನಿಂದೊದ್ದು, ಕೊಡುವದಿದ್ದರೆ ಶಾಶ್ವತವಾದ ಜ್ಞಾನವನ್ನೇ ಕೊಡೆಂದು ಕೇಳಿಕೊಂಡುದಕ್ಕಾಗಿ ಯಮನು ಬಾಯಾರೆ, ಅವನನ್ನು ಹೊಗಳಿದನು; ಮತ್ತು ಆತ್ಮನು ಅಮರನಿರುವನೆಂಬ ಅಪರಾವಿದ್ಯೆಯನ್ನು ಅನುಭವಕ್ಕೆ ತಂದುಕೊಟ್ಟನು."

ಯಾವ ಮಂಗಲನಿಧಿಯಾದ ಉಪನಿಷತ್ತಿನಕಾಲಕ್ಕೆ ಸತ್ಯಕಾಮ ಜಾಬಾಲಿ, ಕುಮಾರ ನಚಿಕೇತಸಂಧ ತರುಳರು ಸಹ ನಾವಿರಾರು ವರ್ಷ ತಪಪಗೈದು ಜ್ಞಾನವಾಗದಂಥ ಜ್ಞಾನವನ್ನು ಪಡೆದು ಯಥೇಷ್ಟವಾಗಿ ಧಿಕ್ಕರಿಸಿ ತೇಗಿದರೋ, ಗಾರ್ಗಿ, ಮೈತ್ರೇಯಿಯಂಥ ಪೂಜ್ಯ ಪಾಗೂ ಪವಿತ್ರ ಮಹಿಳೆಯರು ಯಾವ ಕಾಲಕ್ಕೆ ತಮ್ಮ ಮೂಲಕವಾಗಿ ಮುಂದಿನ ಮಹಿಳೆಯರಿಗಾಗಿ ದಿವ್ಯಜ್ಞಾನದ ಕಕ್ಕುಡಾರತಿಯನ್ನು ಹಚ್ಚಿ ಬೆಳಗಿದರೋ, ಆ ಕಾಲಮಹಿಮೆಯನ್ನು ನಾವಿರ ನಾಲಿಗೆಯಿಂದ

ಹೊಗಳಿ ಹಾಡಿದರೂ ನಾಲದು. ಉಪನಿಷತ್ತಿನಲ್ಲಿ ನೈತಿಕ ತತ್ವಗಳು ಬಹು ಕೃಚಿತವಾಗಿ ಕಂಗೊಳಿಸುತ್ತಿವೆ; ಇದಕ್ಕೊಂದು ಬಲವಾದ ಕಾರಣವಿದೆ. ಅದೇನೆಂದರೆ, ಭಾರತೀಯರಲ್ಲಿ ಯಾವ ಕಾಲದಲ್ಲಿಯೂ, ನೈತಿಕ ತತ್ವಗಳಿಗೇನೂ ದಾರಿದ್ರ್ಯವಿಲ್ಲ; ನೈತಿಕ ಆಚರಣೆಯು ಬೇರೆ ಜನಾಂಗದವರ ಅತ್ಯುಚ್ಚ ಧ್ಯೇಯವಾಗಿರಬಹುದು; ಆದರೆ ಅದು ಭಾರತೀಯರಿಗೆ ತೀರ ಸಾಧಾರಣವಾದ ಮಾತು; ಅವರ ಆದರ್ಶವೆಂದರೆ, ಜ್ಞಾನಾನಂದಾದಿ ಸಮುದ್ರಗಳಲ್ಲಿ ಓಲಾಡಿ ಈಸಾಡುವದೇ.

ಬ್ರಾಹ್ಮಣ ಹಾಗೂ ಉಪನಿಷತ್ತುಗಳ ನಿರೀಕ್ಷಣೆ:- ಋಗ್ವೇದ ಕಾಲದಿಂದ ಉಪನಿಷತ್ಕಾಲದ ವರೆಗಿನ ಸ್ಥಿತ್ಯಂತರಗಳನ್ನು ಒಂದೇ ದೃಷ್ಟಿಯಿಂದ ಸಿಂಹಾವಲೋಕನ ಮಾಡಿದರೆ, ಒಂದೊಂದು ಕಾಲದ ಒಂದೊಂದು ಬೇರೆ ಚಿತ್ರವೇ ಕಣ್ಣಿಗೆ ಕಟ್ಟುತ್ತದೆ. ಪಂಚಮಹಾಭೂತಗಳಲ್ಲಿ ಋಗ್ವೇದ ಕಾಲಕ್ಕೆ ಕಂಡುಬರುವ ಆ ಹುರ್ಯ್ಯ ಅಥವಾ ಪರವಶವಾದ ಪ್ರೇಮವು ನಮಗೆ ಬ್ರಾಹ್ಮಣಕಾಲದಲ್ಲಿ ಕಂಡುಬರುವದಿಲ್ಲ. ಬ್ರಾಹ್ಮಣಕಾಲಕ್ಕೆ ಬ್ರಾಹ್ಮಣರದೊಂದು ಬೇರೆ ವರ್ಣವಾಗಿದ್ದು, ಅವರಲ್ಲಿಯ ಮೊದಲಿನ ಬಾಲಭಾವವೂ ತೊಲಗಿ, ಅವರು ತಮ್ಮ ಧರ್ಮದ ವಿಷಯದಲ್ಲಿ ಅಸಕ್ತರೂ, ಯಜ್ಞದ ವಿಧಿವಿಧಾನಗಳಲ್ಲಿ ಮಗ್ನರಾದವರಂತೆಯೂ ಕಾಣುತ್ತದೆ; ಇಲ್ಲಿ ನಾವು ಸ್ವಲ್ಪ ಮನುಷ್ಯ ಸ್ವಭಾವವನ್ನು ಅರಿತುಕೊಂಡಿರಲಿಕ್ಕೆಬೇಕು. ಮನುಷ್ಯನ ಸ್ಥಿತಿಯನ್ನೇ ನೋಡಿದರೆ, ಬಾಲ್ಯದಿಂದ ಮುದಿತನದ ವರೆಗೆ ಎಷ್ಟೊಂದು ಬದಲಾವಣೆ ಹೊಂದುತ್ತದೆ! ಬಾಲ್ಯಾವಸ್ಥೆಯಲ್ಲಿ ಕಂಡುಬರುವ ದೈವಿಕವಾದ ಆಸರಲತನ, ಅನನ್ಯವಾದ ಆವೃತ್ತಿ, ಕನ್ನಡಿಯಂಥ ಆ ನಿರ್ಮಲವಾದ ಮನಸ್ಸು ಇವೆಲ್ಲವುಗಳು ದೊಡ್ಡವರಾದರೆ ಉಳಿಯುವವೇ? ಅದೇ ಪ್ರಕಾರ, ವೇದಕಾಲವೆಂದರೆ, ಭರತಖಂಡದ ಜೀವಮಾನದೊಳಗೇ ಕಂಬಹುನಾ ಜಗತ್ತಿನ ಜೀವಮಾನದೊಳಗೇ ಬಾಲ್ಯಾವಸ್ಥೆಯ ನಿದರ್ಶಕವೆಂದಿಟ್ಟುಕೊಂಡರೆ, ಬ್ರಾಹ್ಮಣಕಾಲಕ್ಕೆ ಬ್ರಾಹ್ಮಣರ ಭಾವನೆಯು ಹೀಗೇಕಾಯಿತು! ಮುಂದೆ ಆ ಮನಸ್ಸೇ ಉಪನಿಷತ್ಕಾಲಕ್ಕೆ ಜ್ಞಾನಪ್ರಧಾನವಾಗಿ ಏಕೆ ಪಲ್ಲಟವಾಯಿತೆಂಬುದರ ಮಟ್ಟು ತಿಳಿಯದ ಇರದು.

ಪ್ರಪಂಚವೆಂದರೆ ಇದೊಂದು ಭಗವಂತನ ಲೀಲೆಯ ರಂಗಸ್ಥಳವು. ಇದರೊಳಗೆ, ಒಳ್ಳೆಯದಕ್ಕೆ ಎಷ್ಟು ಮಹತ್ವವೋ, ಅಷ್ಟೇ ಕೆಟ್ಟದಕ್ಕೆ; ತತ್ವತಃ ತಿಳಿದವರ ದೃಷ್ಟಿಯಿಂದ ಅವೆರಡಕ್ಕೂ ಬೆಲೆಯಿಲ್ಲ; ಆದರೆ ಪ್ರಪಂಚದ ಮಾನವರು ಹೀಗೆ ತಿಳಿದರೆ ನಾಗುವದೆಂತು? ಆದರೆ, ಇತಿಹಾಸಕಾರರು ನಿಜವಾದ ದೃಷ್ಟಿಯನ್ನೇ ಜನರ ಮುಂದೆ ಮಂಡಿಸಲಿಕ್ಕೆ ಹಿಂದುಮುಂದು ನೋಡಲು ಕಾರಣವಿಲ್ಲ. ಇರಲಿ, ಬ್ರಾಹ್ಮಣಕಾಲಕ್ಕೆ ಬ್ರಾಹ್ಮಣರ ದೃಷ್ಟಿಯೊಳಗಿನ ನಿಜವಾದ ಭಕ್ತಿಯ ತಿರಳು ಕಾಣದಂತಾಗಿ, ಅವರು ಬರಿಯ ಹೊರಗಣ ಆಚ್ಛಾಹಾಸದೊಳಗೇ ಆನಂದ ಪಡೆಯಲಾರಂಭಿಸಿದ್ದೇ ಉಪನಿಷತ್ಕಾಲಕ್ಕೆ ಬೀಜವಾಯಿತು.

ಸಾಮಾಜಿಕ ನಡೆನುಡಿಗಳು:- ಈ ಕಾಲದ ಸಾಮಾಜಿಕ ದೆಶೆಯು ಹೇಗಿತ್ತೆಂಬುದು ಬ್ರಾಹ್ಮಣ ಹಾಗೂ ಉಪನಿಷತ್ತುಗಳಲ್ಲಿ ಹಲವೆಡೆ ನಮಗೆ ದೃಗ್ಗೋಚರವಾಗುತ್ತಿದೆ. ಸಮಾಜವೆಂಬ ರಥದ ನಾಲ್ಕು ಗಾಲಿಗಳು ಸರಿಯಾಗಿ ನಡೆದು, ತಮ್ಮ ತಮ್ಮ ಬಗ್ಗೆ ಯೋಚಿಸಿಕೊಂಡು ತಮ್ಮ ತಮ್ಮ ಅಭ್ಯುದಯಕ್ಕಾಗಿ ಹಗಲಿರಳು ಅಲಸ್ಯವನ್ನು ಕೊಡವಿ, ಬಾಳುತ್ತಿದ್ದುದರಿಂದ ಒಟ್ಟಾರೆ ಈ ಕಾಲದ ಸಮಾಜಸ್ಥಿತಿಯೇ ನಾಗರಿಕತೆಯ ಉಚ್ಚತರಗತಿಗೇರಿತ್ತೆಂದು ನಾವಿಲ್ಲಿ ಹೇಳಬಹುದು. ಸಮಾಜ ಮುಖಂಡರಾದ ಬ್ರಾಹ್ಮಣರು ಧರ್ಮಾತ್ಮರೂ, ಶೀಲಸಂಪನ್ನರೂ ಇದ್ದು ಹಣ ಕೂಡಿಡುವದೆಂದರೆ ಪಾಪವೆಂದು ಬಗೆದು, ಕೇವಲ ತಮ್ಮ ಆತ್ಮಿಕ ಉನ್ನತಿಯನ್ನು ಸಾಧಿಸಿಕೊಳ್ಳುವದಲ್ಲದೆ, ಸಮಾಜದ ಉನ್ನತಿಗಾಗಿಯೂ ಸಮಾಜವು ಪಾಪರಹಿತವಾಗಲಿಕ್ಕೂ ಅಖಂಡವಾಗಿ ದುಡಿಯುತ್ತಿದ್ದರು; ಅಂದರೆ, ಬ್ರಾಹ್ಮಣರು ತಪೋಧನರೂ, ಶೀಲಧನರೂ, ಜ್ಞಾನಧನರೂ ಆಗುವದೇ ತಮ್ಮ ಹೆಗ್ಗುರಿಯನ್ನಾಗಿಟ್ಟುಕೊಂಡಿದ್ದರು; ಕ್ಷತ್ರಿಯರು ಶೂರರೂ, ಧೀರರೂ, ಇದ್ದು ಪ್ರಜಾಪಾಲನೆಯೇ ತಮ್ಮ ಆಯುಷ್ಯದ ಮುಖ್ಯ ಗುರಿಯೆಂದು ಅದನ್ನೇ ಸಾಧಿಸಲಿಕ್ಕೆ ಶಾರೀರಿಕ ಸುಖಕ್ಕೆಳಸದೆ ಪಾಟುಪಡುತ್ತಿದ್ದರು. ಕುರು, ಪಾಂಚಾಲ, ಕೋಸಲ, ಮದ್ರ, ಕಾಶಿ ಮುಂತಾದ ರಾಜರುಗಳು ಬಹು ಪ್ರತಾಪಶಾಲಿಗಳಾಗಿದ್ದ ಬಗ್ಗೆ ಅಲ್ಲಲ್ಲಿ ದೃಷ್ಟಾಂತಗಳು ಕಂಗೊಳಿಸುತ್ತಿವೆ. ಜನಜೀವನವು ಅತ್ಯಂತ ಸ್ನೃಹ

ಣೀಯವಾಗಿ ನಡೆದಿದ್ದು ಜನರಿಗೆ ಕ್ಷಾಮಕಾಲದ ಕಲ್ಪನೆಯಿರಲಿಲ್ಲ. ರಾಜ್ಯದೊಳಗೆ ಚುನ್ನರಿಲ್ಲ; ಕಳ್ಳರಿಲ್ಲ; ವ್ಯಭಿಚಾರಿಗಳಿಲ್ಲ; ಅಂದಮೇಲೆ ವ್ಯಭಿಚಾರಿಣಿಯರ ಹೆಸರೆತ್ತಲೇಕೆಂದು ಕೇಕಯರಾಜನು ಉದ್ದಾಲಕ ಋಷಿಗಳನ್ನು ಕುರಿತು ಮಾತನಾಡಿರುವದನ್ನು ಓದಿದರೆ, ಅದೆಂಥ ಧರ್ಮದ ಯುಗವೋ ಎಂದು ಮನಸು ಬೆರಗಾಗುತ್ತದೆ. ವೈಶ್ಯರು ಉದ್ಯೋಗಶೀಲರೂ, ಸಾಹಸಪ್ರಿಯರೂ ಇದ್ದುದರಿಂದ ವ್ಯಾಪಾರಕ್ಕಾಗಿ ದೂರ ದೂರ ದೇಶಗಳಿಗೆ ಜಲಪರ್ಯಟಣ ಬೆಳೆಸಿ, ಇಡೀ ಭೂಮಂಡಲದ ಪರಿಚಯ ಮಾಡಿಕೊಂಡು ಹೇರಳವಾಗಿ ಹಣಗಳಿಸಿಕೊಂಡು ಘನತೆಯಲ್ಲಿಯೂ, ವೈಭವದಲ್ಲಿಯೂ, ಸಂಪತ್ತಿಯಲ್ಲಿಯೂ, ರಾಜರನ್ನೇ ನೇಕೆ? ಕುಬೇರನನ್ನು ಕೂಡ ನಾಚಿಸುವ ಮಟ್ಟಿಗಿದ್ದರು. ಸಾಹಸವೇ ಸಿರಿಯ ತವರ್ಮನೆಯೆಂಬುದನ್ನು ಆರ್ಯವೈಶ್ಯರು ಕೃತಿಯಿಂದ ಸಿದ್ಧ ಪಡಿಸಿದ್ದರು; ಅಂದಬಳಿಕ ಆಲಸ್ಯಕ್ಕೂ ಮೈಗಳ್ಳತನಕ್ಕೂ ಅವಕಾಶವೆಲ್ಲಿ! ಮೈಗಳ್ಳತನದ ವಿಷಯದಲ್ಲಿ ಮೈಗಳ್ಳರಾಗಿದ್ದು ಸಾಹಸಕಾರ್ಯಕ್ಕಾಗಿ ಅವ್ಯಾಹತವಾಗಿ ಪಾತರಿಯುತ್ತಿದ್ದರು. ಶೂದ್ರರು ಧರ್ಮ ಬುದ್ಧಿಯಿಂದ ತಮ್ಮ ಕರ್ತವ್ಯವನ್ನು ತೃಪ್ತರಾಗಿ ನಡಿಸುತ್ತಿದ್ದುದರಿಂದ ಧರ್ಮಕ್ಕೆ ಅಡಿಗಲ್ಲನಂತಿದ್ದರು; ಅಲ್ಲದೆ, ಸಮಯ ಪ್ರಸಂಗಗಳಲ್ಲಿ ಸಭೆಯನ್ನು ನೆರೆಯಿಸಿದಾಗ ತಮ್ಮ ಮಾತಿನ ಬಲದಿಂದ ಸಭೆಯ ಜನರಲ್ಲಿ ಕರ್ತವ್ಯ ಜಾಗೃತಿಗೆರಿಸುವಂಥ ಉದ್ಬೋಧನಸಮರ್ಥರಾದ ವಾಗ್ಮಿಗಳೂ ಆಗ್ಗೆ ಇದ್ದರು. ಪುರುಷವರ್ಗದಲ್ಲಷ್ಟೇ ಮಾತುಗಾರರಲ್ಲದೆ ಸ್ತ್ರೀಜಾತಿಯಲ್ಲೂ ಸುಲಭಾ, ಮೈತ್ರೇಯಿ, ಗಾರ್ಗಿ, ವಾಚಕ್ನವೀ, ಅವರಂಥ ವಿದುಷಿಯರು ಸ್ತ್ರೀಜಾತಿಗೆ ಅಲಂಕಾರಪ್ರಾಯರಾಗಿ ವೇದಾಂತದೊಳಗೆ ಗುಡುಗಾಡುವಷ್ಟು ಮೇಧಾಶಾಲಿಗಳಿದ್ದರು. ದಿವ್ಯ ಬ್ರಹ್ಮತೇಜಸ್ಸಿನಿಂದ ಹೊಳೆಯುತ್ತಿರುವ ಸುಲಭೆಯೆಂಬ ಸ್ತ್ರೀಯಳು ಅಮರಣ ಪರ್ಯಂತ ಸನ್ಯಾಸಿನಿಯಾಗಿದ್ದು, ವೇದಾಂತ ವಿಚಾರಗಳ ಬಗ್ಗೆ ಅನೇಕ ರಾಜ ಸಭೆಗಳಲ್ಲಿ ಧೈರ್ಯವಾಗಿ ಚರ್ಚೆ ನಡಿಸಿದ ಬಗ್ಗೆ ಕಥೆಗಳಿವೆ. ಮೇಲ್ಕಾಣಿಸಿದ ಸ್ತ್ರೀರತ್ನಗಳನ್ನು ನಮ್ಮ ಹಿರಿಯರು ಋಷಿಗಳ ಪದವಿಗೆ ಕುಳ್ಳಿರಿಸಿ, ದಿನಾಲು ಆಚರಿಸುವಂಥ ಬ್ರಹ್ಮಯಜ್ಞದೊಳಗೆ

ಅವರ ಹೆಸರನ್ನು ಸೇರಿಸಿ, ಅವರ ಹೆಸರಿನಿಂದ ತರ್ಪಣಕೊಡುವ ವಾಡಿಕೆಯುಂಟು. ಈ ತೆರನಾಗಿ ಬ್ರಾಹ್ಮಣ ಹಾಗೂ ಉಪನಿಷತ್ಕಾಲೀನ ಸ್ತ್ರೀಯರು ತಮ್ಮ ಜೀವನವನ್ನು ಇರುವ ವರೆಗೆ ಆದರ್ಶಪ್ರಾಯವಾಗಿಟ್ಟುಕೊಂಡು ಇಂದಿಗೂ ಅದೇ ರೀತಿಯಾಗಿ ಅಚ್ಚಳಿಯದೆ, ಸೂರ್ಯನಂತೆ ಪ್ರಕಾಶಿಸುತ್ತಿರುವರು. ಮೇಲಿನ ಸ್ತ್ರೀಯರು ಅನಾಮಾನ್ಯರೆಂದೆಣಿಸಿದರೂ, ಸರ್ವಸಾಮಾನ್ಯವಾಗಿ, ಪ್ರೌಢವಯಸ್ಸಿಗೆ ಬರುವ ವರೆಗೆ ಪುರುಷರಂತೆ ಬ್ರಹ್ಮಚರ್ಯ ನಿಯಮದಿಂದಿದ್ದು ಆಮೇಲೆ ಯೋಗ್ಯ ವರನೊಡನೆ ಲಗ್ನವಾಗುತ್ತಿದ್ದರು; ವಿವಾಹವಾದ ನಂತರ, ಪತಿಯೇ ದೇವರೆಂದು ಬಗೆದು ಆತನ ಸೇವೆಯಲ್ಲಿ ತಮ್ಮ ಜನ್ಮವನ್ನೇ ಇಳಿದೆಗೆದು ಮಹಾ ಪತಿವ್ರತೆಯರಾಗಿಯೂ, ಜ್ಞಾನಿಗಳಾಗಿಯೂ ಸಂಸಾರಸಾಗಿಸುತ್ತ ರೂಪಗೊಂಡ ಭೂಮಿತಾಯಿಯಂತೆ ಬಾಳಿರುತ್ತಿದ್ದರು. ಮದಾಲಸೆ ಎಂಬ ಸತಿಯು ತನ್ನ ಮಗುವಿಗೆ ಬಾಲ್ಯದಲ್ಲಿಯೇ ವೇದಾಂತೋಪದೇಶದ ಬಾಲಗುಟ್ಟಿಯನ್ನು ಹಾಕಿ ಅದೇ ಜಾಜ್ವಲ್ಯವಾದ ಜೋಗುಳದಿಂದ ಮಗುವಿನಲ್ಲಿ ವೇದಾಂತದಂಥ ಮಹಾ ಮಂತ್ರವನ್ನು ಕವಿಯಲ್ಲಾದಿದ ಸಂಗತಿಗಳನ್ನೋದಿದರೆ, ಆರ್ಯಮಹಿಳೆಯರ ಅಗಾಧವಾದ ಯೋಗ್ಯತೆಯ ಬಗ್ಗೆ ಮಹಾ ಮಹಾ ಜ್ಞಾನಿಗಳಿಗೂ ಆಶ್ಚರಿಯಾಗುತ್ತದೆ.

ಬ್ರಾಹ್ಮಣ ಹಾಗೂ ಉಪನಿಷತ್ತಿನ ಕಾಲದ ಧರ್ಮ ಹಾಗು ಮತ- ಋಗ್ವೇದ, ಬ್ರಾಹ್ಮಣ ಮತ್ತು ಉಪನಿಷತ್ತಿನ ಕಾಲಗಳಿಗೆ ಹೋಲಿಸಿನೋಡಿದರೆ, ಪ್ರತಿಯೊಂದು ಅಂಶದಲ್ಲಿ ವ್ಯತ್ಯಾಸ ಕಾಣುತ್ತದೆ. ಸಾಮಾಜಿಕ ದೃಷ್ಟಿಯಿಂದ ಬ್ರಾಹ್ಮಣಕಾಲಕ್ಕೆ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ತಮ್ಮ ತಮ್ಮ ಮಟ್ಟಿಗೆ ದೊಡ್ಡವರೆಂದು ತಿಳಿದುಕೊಂಡು ಪೂರ್ವದಂತೆ ಒಬ್ಬರಿಗೊಬ್ಬರು ಹೆಣ್ಣುಗಂಡಿನ ಬಳಿಕೆ ಮಾಡುವದನ್ನು ಬಿಟ್ಟುಬಿಟ್ಟರು. ಬ್ರಾಹ್ಮಣರೇ ಶ್ರೇಷ್ಠರೆಂಬ ಕಲ್ಪನೆಯು ರೂಢವಾಯಿತು. ಕ್ಷತ್ರಿಯರು ತಮ್ಮ ನಾಮಧ್ಯೇವು ಹೆಚ್ಚಿದಂತೆ, ಸಾಮಾನ್ಯ ಜನರನ್ನು ಬೆರಗುಗೊಳಿಸುವ ರಾಜಚಿನ್ಹಗಳನ್ನು ಹಾಕಿಕೊಂಡು ಅವರ ಮೇಲೆ ದರ್ಪ ನಡಿಸಲೆತ್ನಿಸಿದರು; ಹೀಗೆ ರಾಜನು ನಿರಂಕುಶನಾಗಿ

ವರ್ತಿಸಲಿಕ್ಕೆ ಆರಂಭಿಸಿದ್ದರಿಂದ, ಜನರು ಹೆದರಿ ನಿರ್ವೀರ್ಯರೂ, ಭಯ ಭಕ್ತಿಯುಳ್ಳವರೂ ಆದರು. ಇದೀಗ ಮಾನವನ ಸ್ವಾತಂತ್ರ್ಯ ಕಲ್ಪನೆಯನ್ನು ಕೊರಗಿಸಿ, ಸೊರಗಿಸಲು ನೆಲೆ. ಋಗ್ವೇದಕಾಲದಲ್ಲಿ ಕಂಡು ಬರುವ ಆ ಪ್ರಜಾಸ್ವಭುತ್ವದ ಕಲ್ಪನೆಯು ಕ್ಷಯವಾಗತೊಡಗಿತು. ಉಪನಿಷತ್ಕಾಲಕ್ಕೆ, ಈ ವಿಚಾರಗಳು ಮತೆತ್ತಿಂದು ಸ್ವತಂತ್ರವಾದ ದಾರಿಯನ್ನೇ ಕಂಡುಕೊಂಡವು; ಈ ಕಾಲಕ್ಕೆ ಬಟ್ಟಾರೆ, ಎಲ್ಲರೂ ಸರಾಗವಾಗಿ ನಡೆದಿದ್ದರೂ ಕೆಲವರಲ್ಲಿ ಮಾತ್ರ ಆತ್ಮಜ್ಞಾನದ ಬಗ್ಗೆ ಸ್ವತಂತ್ರವಾದ ವಿಚಾರಗಳೂ ಮೂಡಿ, ಅವು ಆ ಕಾಲದ ಮಟ್ಟಿಗೆ ವರ್ಣಾಶ್ರಮ ಧರ್ಮದ ಕಟ್ಟನ್ನು ಸಡಿಲಿಸಿದಂತೆ ಕಂಡರೂ ಆರ್ಯ ತತ್ವಜ್ಞಾನದ ಬಿಗಿಯಾದ ಕಟ್ಟನ್ನೇ ದೃಢಪಡಿಸಿದವು. ಪರಮಾತ್ಮನು ವಿಶ್ವವ್ಯಾಪಕನೂ, ಮಣಿಗಳಲ್ಲಿ ಸೂತ್ರದಂತೆ ಅಲ್ಲಿಂದಿಲ್ಲಿಯ ವರೆಗೆ ಸಾಕ್ಷಿಯಾಗಿರುವವನೂ ಎಂಬ ಗೂಢವಾದ ವಿಚಾರವು ಪರಿಪಕ್ವವಾಯಿತು. ತಿಳಿಯಲಿಕ್ಕಾಗದ ಪರಮಾತ್ಮನನ್ನು ತಿಳಿಯಲಿಕ್ಕೆ ಈ ಕಾಲಕ್ಕೆ ತತ್ವಜ್ಞಾನಿಗಳಾದ ಆರ್ಯ ಋಷಿಗಳು ಮಾಡಿದ ಸಾಹಸವು ಪ್ರಪಂಚದ ಇತಿಹಾಸದೊಳಗೆ 'ಜ್ಞಾನ' ಮಂದಿರಕ್ಕೆ ಶಿಖರವಿಟ್ಟಂತಾಗಿದೆ. ಉಪನಿಷತ್ತಿನಲ್ಲಿ ಆರ್ಯಋಷಿಗಳು ದೇವರ ಅಳವನ್ನು ಕಂಡು ಅಳೆದಿಟ್ಟಿದ್ದಾರೆ; ಇದೇ ಯುಗದೊಳಗೆ ಆರ್ಯರಿಗೆ ಆತ್ಮನು ನಿತ್ಯನೆಂಬ ಮತೊಂದು ಕಲ್ಪನೆಯು ಹೊಳೆಯಿತು. ಸ್ವಕರ್ಮಾನುಗುಣವಾಗಿ, ಆತ್ಮನು ಬೇರೆ ಬೇರೆ ದೇಹಗಳನ್ನು ತೊಟ್ಟು, ಕರ್ಮದಿಂದ ಬಿಡುಗಡೆಯಾದ ನಂತರ, ಪರಮಾತ್ಮನನ್ನು ಪಡೆಯುವನೆಂಬೀ ಜನ್ಮಾಂತರದ ಕಲ್ಪನೆಯು ಋಗ್ವೇದದೊಳಗೆ ಸೂಕ್ಷ್ಮರೂಪದಿಂದಿದ್ದರೂ, ಉಪನಿಷದುಗಳಲ್ಲಿ ಅವು ಬಿಡಿದು ಕಾಣುವಂತೆ ವಿಕಾಸಗೊಂಡಿವೆ.

ಉಪನಿಷತ್ಕಾಲದ ವಿಭೂತಿಗಳು:-- ಉಪನಿಷತ್ಕಾಲಕ್ಕೆ ದಿವ್ಯ ತೇಜಸ್ಸಿನಿಂದ ಬೆಳಗುವ ಅನೇಕ ನರರತ್ನಗಳು ಈ ಆರ್ಯಾವಾರ್ತದೊಳಗೆ ಅವಿರ್ಭವಿಸಿ ಅದೃಶ್ಯರಾದರು. ಅವರ ಮೂರ್ತಿರೂಪಾದಿಗಳು ಈಗ ನಮ್ಮ ಕಣ್ಣೆದುರಿಗೆ ಇರದಿದ್ದರೂ, ಅವರ ತತ್ವಜ್ಞಾನದ ಪ್ರಭೆಯು ನಮಗೆ ಮಾರ್ಗದರ್ಶಕವಾಗಿದೆ. ಹೀಗೆ ಅತ್ಯುದಾತ್ತವಾದ ಜ್ಞಾನಕ್ಕಾ,

ಜ್ಞಾನಚರ್ಚೆಗೂ ಸ್ವೇಚ್ಛೆಯಾಗಿ ಉತ್ತೇಜನಕೊಟ್ಟು, ಯಾವಾಗಲೂ ತತ್ವಜ್ಞಾನದ ನಾಗರದೊಳಗೇ ಮುಳುಗೆದ್ದು, ರಾಜ್ಯ ಮಾಡುತ್ತಿದ್ದರೂ ರಾಜ್ಯಲೋಭವು ಲವಲೇಶವಾದರೂ ಅಂಟಿಕೊಳ್ಳದಂತೆ ಇದ್ದ, ಚಕ್ರವರ್ತಿಗಳಲ್ಲಿ ವಿದೇಹದ ಜನಕಮಹಾರಾಯನು ಒಬ್ಬನು; ಈತನು ಬರಿಯ ಅರಸರಿಗೆ ಚಕ್ರವರ್ತಿಯಾಗಿದ್ದುದಲ್ಲದೆ, ಜ್ಞಾನಿ-ಚಕ್ರವರ್ತಿಯೂ ಆಗಿದ್ದನು; ಸ್ವತಃ ಜೀವನ್ಮುಕ್ತನಿದ್ದು, ರಾಜ್ಯಭಾರವನ್ನು ಕರ್ತವ್ಯದಕ್ಷನಾಗಿಯೂ, ನಿರ್ಲೋಭವೃತ್ತಿಯಿಂದಲೂ, ನಿರ್ವಹಿಸುತ್ತಿದ್ದನು; ಈತನ ಓಲಗವು ವಿದ್ವಾಂಸರೂ, ಬ್ರಹ್ಮಜ್ಞಾನಿಗಳೂ ಆದ ಮಹರ್ಷಿಗಳಿಂದ ವಿರಾಜಿಸುತ್ತಿತ್ತು; ಮಹಾ ಮಹಾ ಮುಮುಕ್ಷುಗಳು ತಮ್ಮ ಜ್ಞಾನ-ತೃಷೆಯನ್ನು ನೀಗಿಸಲೋಸುಗ ಜನಕಮಹಾರಾಯನ ಕಡೆಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದರು.

ಯೋಗೀಶ್ವರ ಯಾಜ್ಞವಲ್ಕ್ಯರು:–ಉಪನಿಷತ್ಕಾಲೀನ ಸಭೋ ಮಂಡಲದೊಳಗೆ ಸ್ವಪ್ರಕಾಶದಿಂದ ಬೆಳಗುವ ಶುಕ್ರನಂತೆ, ಯೋಗೀಶ್ವರ ಯಾಜ್ಞವಲ್ಕ್ಯಋಷಿಗಳು ಧಳಧಳಿಸುತ್ತಿರುವರು. ಯಾರ ಹಂಗಿಗೂ ಈಲಾಗದಷ್ಟು ಅವರ ನೈತಂತ್ರ್ಯ ತೇಜವು ಜಾಜ್ವಲ್ಯವಿತ್ತು; ಮಿಥಿಲಾನಗರಿಯಲ್ಲಿದ್ದ ದೇವರಾತನೆಂಬ ಧರ್ಮನಿಷ್ಠ ಬ್ರಾಹ್ಮಣನ ಮಕ್ಕಳು. ದಾನಧರ್ಮಕ್ಕಾಗಿ ದೇವರಾತನು ಹೆಸರುವಾಸಿಯಾಗಿದ್ದರಿಂದ ಆತನಿಗೆ ಆ ಕಾಲದಲ್ಲಿ 'ವಾಜಸೇನಿ' ಅಥವಾ 'ಅನ್ನದಾತಾ' ಎಂದು ಗೌರವದ ಹೆಸರಿನಿಂದ ಕರೆಯುತ್ತಿದ್ದರು. ಬಹು ದಿನಗಳವರೆಗೆ ಆತನಿಗೆ ಮಕ್ಕಳೇ ಇಲ್ಲದ್ದರಿಂದ, ಸಂತತಿಯ ಆಶೆಯಿಂದ ದೇವರಾತನು ಅನೇಕ ಯಜ್ಞಗಳನ್ನು ಮಾಡಿದನು; ಯಜ್ಞದೇವತೆಯ ಪ್ರಸಾದದಿಂದ ದೇವರಾತನಿಗೆ ಒಬ್ಬ ಮಗನು ಹುಟ್ಟಿದನು; ಅವನೇ ಯಾಜ್ಞವಲ್ಕ್ಯನು; ಯಾಜ್ಞವಲ್ಕ್ಯನು ಉಪನಯನಾವಸ್ಥೆಗೆ ಬಂದೊಡನೆ ತಂದೆಯು ಆತನಿಗೆ ಮುಂಜಿವೆಗಟ್ಟಿ, ವೇದಾಭ್ಯಾಸಕ್ಕೆ ಹಚ್ಚಿದನು; ಬಾಷ್ಕಲಋಷಿಗಳಲ್ಲಿದ್ದುಕೊಂಡು ಯಾಜ್ಞವಲ್ಕ್ಯನು ಋಗ್ವೇದಾಧ್ಯಯನ ನಡಿಸಿದನು. ಜೈಮಿನಿ ಹಾಗೂ ಅರುಣಋಷಿಗಳಲ್ಲಿ ಸಾಮ, ಅಥರ್ವವೇದಗಳನ್ನೋದಿದನು. ಮತ್ತು ತನ್ನ ಕಕ್ಕನಾದ ವೈಶಂಪಾ

ಯನರ ಬಳಿಯಲ್ಲಿ ಯಜುರ್ವೇದವನ್ನು ಅಭ್ಯಾಸ ಮಾಡಿದನು; ವೈಶಂಪಾ ಯನರ ಬಳಿ ಓದುತ್ತಿರುವಾಗ ಕಕ್ಷ-ಮಗನಿಗೂ ಯಾವುದೋ ಂದು ವಿಷ ಯದಲ್ಲಿ ಮತಪ್ರಭೇದವುಂಟಾದ್ದರಿಂದ ಕಕ್ಷನನ್ನು ಬಿಟ್ಟು, ಸ್ವಂತ ತೇಜಸ್ಸಿನಿಂದ ಯಾಜ್ಞವಲ್ಕ್ಯರು ತಪಾಚರಣೆಗಾಗಿ ಹಿಮಾಲಯಕ್ಕೆ ತೆರ ಳಿದರು. ತಮ್ಮ ತಪೋಬಲದಿಂದ ಯಾಜ್ಞವಲ್ಕ್ಯರು ಸೂರ್ಯನಾರಾ ಯಣನಿಂದ ವರ ಪಡೆದುಕೊಂಡು, ದಿವ್ಯಜ್ಞಾನದಿಂದೊಡಗೂಡಿ ಸ್ವತಂತ್ರ ವಾಗಿ "ಶುಕ್ಲಯಜುರ್ವೇದವನ್ನು, ಶತಪಥ ಬ್ರಾಹ್ಮಣ, ಅಲ್ಲದೆ ಬೇರೆ ಸ್ಮೃತಿ, ತತ್ವಶಾಸ್ತ್ರಗಳನ್ನೂ ರಚಿಸಿದರು. ಬ್ರಹ್ಮಜ್ಞಾನದ ಮೂಲ ಉತ್ಪಾ ದಕರಲ್ಲಿ ಯಾಜ್ಞವಲ್ಕ್ಯರು ಒಬ್ಬರು; ಆದ್ದರಿಂದ, ತತ್ಕಾಲೀನ ಬ್ರಹ್ಮ ಜ್ಞಾನಿಗಳಲ್ಲಿ ಯಾಜ್ಞವಲ್ಕ್ಯರು ಶಿರೋಮಣಿಗಳೆಂದು ಪೆಸರು ಪಡೆದವ ರಾಗಿದ್ದರು. ಯಾಜ್ಞವಲ್ಕ್ಯಮಹರ್ಷಿಗಳ ಮನಸ್ಸೇ ದೊಡ್ಡದೆಂದು ವಿದ್ಯಾ ಲಯವಿದ್ದುದರಿಂದ ನೂರಾರು ವಿದ್ಯಾರ್ಥಿಗಳು ಅವರಲ್ಲಿರುತ್ತಿದ್ದರು; ಶುಕ್ಲಯಜುರ್ವೇದಾಧ್ಯಯನದಲ್ಲಿಯಂತೂ ಯಾಜ್ಞವಲ್ಕ್ಯರು ನುರಿತವ ರಿದ್ದರಿಂದ, ಶುಕ್ಲಯಜುರ್ವೇದದ ಶಿಕ್ಷಣಕ್ಕಾಗಿ ಎಲ್ಲರೂ ಹಂಬಲಿಸಿ ಧಾವಿಸಿ ಬರುತ್ತಿದ್ದರು. ಯಾಜ್ಞವಲ್ಕ್ಯರಿಗೆ ಮೈತ್ರೇಯಿ, ಕಾತ್ಯಾ ಯನೀ ಎಂಬಿಬ್ಬರು ಪತ್ನಿಯರಿದ್ದರು; ಕಾತ್ಯಾಯನಿದೇವಿಯು ಹೊಟ್ಟೆ ಯಿಂದ ಇವರಿಗೆ ಚಂದ್ರಕಾಂತ, ಮಹಾಮೇಘ, ವಿಜಯ ಎಂಬ ಮಕ್ಕಳಿದ್ದರು; ಮೈತ್ರೇಯಿಯು ವಿದ್ಯಾವತಿಯೂ ತತ್ವಜ್ಞಳೂ ಆದ ಸತಿ ಯಾಗಿದ್ದಳು. ಯಾಜ್ಞವಲ್ಕ್ಯರು ಜನಕಮಹಾರಾಯನ ಆಶ್ರಯದಲ್ಲಿ ದ್ದಾಗ್ಗೆ, ಒಂದುಸಲ ಜನಕಮಹಾರಾಯನು ಮಹಾ ಯಜ್ಞವನ್ನು ನೆರ ವೇರಿಸುವ ಅಪ್ಪಣೆಹಾವಸವನ್ನು ಹೂಡಿದನು; ದಿಗ್ದೇಶಗಳಿಂದ ತತ್ವಜ್ಞಾನಿ ಗಳಾದ ಬ್ರಾಹ್ಮಣರನ್ನು ಬರಮಾಡಿಕೊಂಡಿದ್ದನು. ಜನಕಮಹಾರಾ ಯನು ಬ್ರಹ್ಮವಿದ್ಯೆಯ ಭಕ್ತನೂ, ಸವಿಗಾರನೂ ಇದ್ದುದರಿಂದ ಬ್ರಹ್ಮ ವಿದ್ಯೆಯ ಸಂಬಂಧವಾದ ಬಿಕ್ಕಟ್ಟಿನ ಪ್ರಶ್ನೆಗಳನ್ನು ಕೇಳಿದವರಿಗೆ ಚಿನ್ನ ದಿಂದ ಮಡಾಯಿಸಿದ ಕೊಂಬುಳ್ಳ ಒಂದು ನಾವಿರ ಗೋವುಗಳನ್ನು ಬಹುಮಾನವಾಗಿಟ್ಟಿದ್ದನು. ಈ ಸಮಾರಂಭಕ್ಕೆ ನಾನಾ ಎಂಬುವಂಥೆ ತತ್ವಜ್ಞಾನಿಗಳು ಬಂದು ಸೇರಿದ್ದರು; ಒಬ್ಬರಿಗೂ ಆ ಗೋವುಗಳನ್ನು

ಮುಟ್ಟುವ ಧೈರ್ಯವಾಗಲಿಲ್ಲ; ಆಗ ಬ್ರಹ್ಮತೇಜದಿಂದ ಬೆಳಗುವ ಯಾಜ್ಞವಲ್ಕ್ಯರು ಎದ್ದು ತಮ್ಮ ಶಿಷ್ಯರಿಗೆಲ್ಲ ಗೋವುಗಳ ಗುಂಪನ್ನು ಹೊಡೆದುಕೊಂಡು ನಡೆಯಲು ಅಪ್ಪಣೆ ಮಾಡಿದರು; ಮತ್ತು ತಾವು ಜನಕಮಹಾರಾಯನ ಸಭೆಯಲ್ಲಿ ನಡೆಯುವ ಬ್ರಹ್ಮವಿದ್ಯೆಯ ಗೂಢ ಪ್ರಶ್ನೆಗಳಿಗೆ ಉತ್ತರ ಕೊಡಲು ಸಜ್ಜಾಗಿ ನಿಂತುಕೊಂಡರು. ಆಗ ಬ್ರಹ್ಮವಾದಿನಿಯಾದ ಗಾರ್ಗಿಗೂ, ಅವರಿಗೂ ವೇದಾಂತತತ್ವಗಳ ಬಗ್ಗೆ ಪ್ರಶ್ನೋತ್ತರಗಳು ನಡೆದವು. ಇವರ ಉತ್ತರಗಳಿಂದ ಸಭೆಯು ಬಾಯಿ ಕಟ್ಟಿಹೋಯಿತು; ಸೃಷ್ಟಿಯ ಕರ್ತನು ಒಬ್ಬನೇ ಇದ್ದು, ಆ ಒಬ್ಬನಿಂದಲೇ ಮೂರು, ಮೂರರಿಂದ ಮುನ್ನೂರು, ಮುನ್ನೂರಿಂದ ಮೂರು ಲಕ್ಷ, ಮೂರುಲಕ್ಷದಿಂದ ಮುವತ್ತುಕೋಟಿ ದೇವತೆಗಳಾದರೆಂದು ಬಿಡಿ ಬಿಡಿಯಾಗಿ ಆಗ ಹೇಳಿರುವ ವೇದಾಂತದ ಗುಟ್ಟು ಬಹು ಮನನೀಯವಾಗಿದೆ. ಆ ಕಾಲದ ಜ್ಞಾನಿಗಳಲ್ಲಿ ಯಾಜ್ಞವಲ್ಕ್ಯರು ಸಮಾಜಸುಧಾರಕರೂ, ಧರ್ಮಸುಧಾರಕರೂ, ಸ್ವತಂತ್ರ ವಿಚಾರಶೀಲರೂ, ತೇಜೋರಾಶಿಗಳೂ ಆಗಿ ಮೆರೆಯುತ್ತಿದ್ದರು. ಯಾಜ್ಞವಲ್ಕ್ಯರು ತಮ್ಮ ಮೋಹದ ಮಡದಿಯಾದ ಮೈತ್ರೇಯಿಯನ್ನು ಬಿಟ್ಟು, ವಾನಪ್ರಸ್ಥಾಶ್ರಮಕ್ಕೆ ತೆರಳುವಾಗ "ಪ್ರಿಯೇ? ಇಗೋ ಈ ನನ್ನ ಆಸ್ತಿಯನ್ನೆಲ್ಲ-ನಾನಿನ್ನು ವನಕ್ಕೆ ಹೊರಡುವೆನು" ಎಂದಾಕ್ಷಣವೇ ಮೈತ್ರೇಯಿಯು ಯಾಜ್ಞವಲ್ಕ್ಯರನ್ನು ಕುರಿತು, "ಪ್ರಿಯವಲ್ಲಭ? ಈ ಆಸ್ತಿಯೆಲ್ಲವೂ ಕೊನೆಗೆ ಇಡೀ ಪ್ರಪಂಚದೊಳಗಿರುವ ಸಂಪತ್ತೆಲ್ಲವೂ ನನ್ನ ಕೈಸೇರಿದರೂ ಅದರಿಂದ ನನಗೆ ನಾವು ತಪ್ಪುವದೇ? ಎಂದು ಹಲುಬಿದಳು; ಅದಕ್ಕೆ ಯಾಜ್ಞವಲ್ಕ್ಯರು "ಆಗದು; ಹಾಗೆಂದೂ ಆಗದು; ದುಡ್ಡಿನಿಂದ ನೀನು ಶ್ರೀಮಂತಳಾಗುವಿ ಮಾತ್ರ. ಐಶ್ವರ್ಯವೆಂದೂ ಅಮರತ್ವವನ್ನು ಕೊಡ" ದೆಂಬ ಋಷಿಗಳ ಮಾತು ಕೇಳಿ, ಮೈತ್ರೇಯಿಯು "ಹಾಗಾದರೆ ಅಮರವಾಗುವ ಬಗೆ ಯಾವುದು? ಎಂಬುದನ್ನು ದಯವಿಟ್ಟು ಹೇಳೋಣವಾಗಲೆಂದು ವಿನ್ನವಿಸಿಕೊಂಡಳು; ಆಗ ಯಾಜ್ಞವಲ್ಕ್ಯರು "ಪ್ರಿಯೆ! ನೀನೆನ್ನ ಜೀವದ ಮಡದಿ; ಆದರೂ, ಅಮರವಾಗುವಂಥ ಈ ಮಹತ್ವದ ಪ್ರಶ್ನವನ್ನು ಕೇಳಿ, ನೀನೆನಗೆ ಹೆಚ್ಚಿನ ಮೆಚ್ಚಿನ ಮುದ್ದಾಗಿ

ರುವಿ! ಚಿತ್ತವಿಟ್ಟು ಕೇಳು; ಹೇಳುವೆನು. ಚೆನ್ನಾಗಿ ಕೇಳಿಕೊಂಡ ಬಳಿಕ ಅದನ್ನೇ ಚಿಂತಿಸೆಂದು ಪ್ರಸ್ತಾಪ ಮಾಡಿ ತನ್ನ ಬೋಧನೆಗೆ ಮೊದಲುಮಾಡಿದರು. ಗಂಡನು ಹೆಂಡತಿಗಾಗಿ ಹೆಂಡತಿಯನ್ನು ಪ್ರೀತಿಸುವದಿಲ್ಲ; ಆದರೆ ಆತ್ಮನಿಗಾಗಿ; ಹೆಂಡತಿಯು ಗಂಡನಿಗಾಗಿ ಗಂಡನನ್ನು ಪ್ರೀತಿಸುವದಿಲ್ಲ; ಆದರೆ ಆ ಗಂಡನಲ್ಲಿರುವ ಆತ್ಮನಿಗಾಗಿ; ಹೀಗೆ, ಹೆಂಡತಿಯಲ್ಲಿಯೂ, ಗಂಡನಲ್ಲಿಯೂ, ದುಡ್ಡಿನಲ್ಲಿಯೂ ನಮ್ಮ ಕಣ್ಣಿಗೆ ಕಾಣಿಸುವ ಪ್ರತಿಯೊಂದು ದೃಶ್ಯವಸ್ತುಗಳಲ್ಲಿಯೂ ಕುಳಿತಿರುವ ಆ ಪರಮಾತ್ಮನಿಗಾಗಿ ನಾವು ಎಲ್ಲವನ್ನು ಪ್ರೀತಿಸುತ್ತೇವೆ. ಆ ಪರಮಾತ್ಮನು ಒಬ್ಬನೇ ಇದ್ದರೂ, ತನ್ನ ಲೀಲೆಗಾಗಿ ನಾನಾಬಗೆಯ ರೂಪಗಳನ್ನು ತೊಟ್ಟು ಆಡುತ್ತಿರುವನು. ಆದುದರಿಂದ ಎಲ್ಲ ವಸ್ತುಜಾತಗಳಲ್ಲಿ ಅವನನ್ನೇ ನೋಡು; ಅವನನ್ನೇ ಚಿಂತಿಸು; ಅವನ ನಿದಿಧ್ಯಾಸದಲ್ಲಿಯೇ ಇರು." ಎಂದು ನುಡಿದರು.

---

೫ ನೇ ಪ್ರಕರಣ.

ರಾಮಾಯಣ ಕಾಲವು.

(ಕ್ರಿ. ಶ. ಪೂರ್ವ ೨೦೦೦–೧೫೦೦)

ಸೂರ್ಯವಂಶದ ಮೂಲ:- ಸೂರ್ಯವಂಶದ ಉಲ್ಲೇಖವು ಋಗ್ವೇದದೊಳಗೆ ಸ್ಪಷ್ಟವಿಲ್ಲವಾದರೂ ಋಗ್ವೇದದೊಳಗಿನ ಸಂಗತಿಗಳನ್ನು ತೂಗಿ ನೋಡಿದರೆ, ಭರತರೆಂಬುವವರಿಗೆನೇ ಸೂರ್ಯವಂಶದ ಮೂಲಪುರುಷರೆಂದೆನ್ನಬೇಕಾಗುತ್ತದೆ. ಇಕ್ಷ್ವಾಕುರಾಜನೇ ಈ ವಂಶದ ಮೂಲಪುರುಷನು. ಅಯೋಧ್ಯಾನಗರವು ಈತನ ರಾಜಧಾನಿಯು. ಅಯೋಧ್ಯೆಯು ಸೂರ್ಯವಂಶದಲ್ಲಿ ಮಾಂಧಾತನೆಂಬುವನೊಬ್ಬನು ಸತ್ಪಾತಿಶಯದಿಂದ ಬೆಳಗಿ ಸಮ್ರಾಟ್‌ನೆನಿಸಿಕೊಂಡು ಹೋದನು. ಮಾಂಧಾತನು ಹುಟ್ಟಿದೊಡನೆ ಸ್ವತಃ ಇಂದ್ರನೇ ಬಂದು "ಈತನು ನನ್ನಿಂದಲೇ ದೊಡ್ಡವನಾಗತಕ್ಕವನೆಂದು ಹೇಳಿ," ಈತನ ಬಾಯಲ್ಲಿ ಬೊಟ್ಟು ಇಟ್ಟನು. ಆಗ ಇಂದ್ರನ ಬೊಟ್ಟಿನಿಂದ ಹಾಲಿನ ತೊರೆಯೊಡೆದು, ಮಾಂಧಾತನಿಗೆ ವಿಪುಲವಾಗಿ ಹಾಲು ಕುಡಿಯಲಿಕ್ಕೆ ಸಿಕ್ಕವು. ಮುಂದೆ ಒಂದೇ ನೂರು ದಿನಗಳೊಳಗಾಗಿ ಮಾಂಧಾತನು ಬೆಳೆದು ದೊಡ್ಡವನಾದನು. ಇಡೀ ಪೃಥ್ವಿಯನ್ನು ಅವನು ಒಂದೇ ದಿನದಲ್ಲಿ ಗೆದ್ದನಂತೆ! ಈತನು ಸೂರ್ಯವಂಶದ ೨೦ನೇ ಅರಸನು. ಮೊದಲನೇ ಚಕ್ರವರ್ತಿಯು. ತನ್ನ ಬಾಹುಬಲದಿಂದ ಈತನು ಕಾನ್ಯಕುಬ್ಜ, ಪೌರವ ಮೊದಲಾದವರನ್ನು ಮಾಂಡಲಿಕರನ್ನಾಗಿ ಮಾಡಿಕೊಂಡು ದ್ರುಹ್ಯುಗಳನ್ನು ಪಂಜಾಬಿನಿಂದ ಹೊಡೆದಟ್ಟಿದನು. ಅನೇಕ ಮಹಾಯಜ್ಞಗಳನ್ನು ನೆರವೇರಿಸಿದ ಅರಸರಲ್ಲಿ ಈತನ ಹೆಸರು ಮೊದಲಿನದಾಗಿದೆ. ಈ ಚಕ್ರವರ್ತಿಯು ಹಲವು ವೈದಿಕಋಕ್ಕುಗಳನ್ನೂ ಕಟ್ಟಿದ್ದಾನೆ. ಮಾಂಧಾತನಿಂದ ಸೋತು ಓಡಿಹೋದವನಾದ ದ್ರುಹ್ಯುಅರಸನು ಅಸುರಕ್ಕೆ

ಎಲ್ಲಿಯೂ ದಿಕ್ಕು ತೋಚದೆ, ಸಿಂಧುನದಿಯ ಆಚೆಗಿರುವ ಗಾಂಧಾರ ದೇಶದಲ್ಲಿ ತನ್ನದೊಂದು ಬೇರೆ ರಾಜ್ಯವನ್ನೇ ಕಟ್ಟಿಕೊಂಡನು. ಆದರೆ ಮುಂದೆ ನಾವಕಾಶವಾಗಿ ತಿರಿಗಿ ಆರ್ಯಕೊಡನೆ ಸ್ನೇಹ ಬೆಳಿಸಿಕೊಂಡನು. ಇರಲಿ. ಮಾಂಧಾತನಿಂದ ಮುಂದೆ ೧೦ನೇ ತಲೆಯವನಾದ ಹೆಸರುಗೊಂಡ ಅರಸನೆಂದರೆ ಸತ್ಯವ್ರತ ಅಥವಾ ತ್ರಿಶಂಕು ರಾಜನೇ! ಈತನು ಚಿಕ್ಕವನಿರುವಾಗಲೇ ತಂದೆಯು ಮಡಿದುದರಿಂದ ವಸಿಷ್ಠಋಷಿಗಳು ರಾಜ್ಯಸೂತ್ರವನ್ನು ತಮ್ಮ ಕೈಯಲ್ಲಿರಿಸಿಕೊಂಡು ಸಾಗಿಸಿದರು. ಈ ಕಾಲಕ್ಕೆ ಕಾನ್ಯಕುಬ್ಜಪ್ರಾಂತ್ಯಕ್ಕೆ ಗಾಧಿಸುತನಾದ ವಿಶ್ವರಥನೆಂಬುವನು ದೊರೆಯಾಗಿದ್ದನು. ವಿಶ್ವರಥನು ತನ್ನ ವಾಲಿಗೆ ಬಂದಿದ್ದ ರಾಜ್ಯವನ್ನು ಬಿಟ್ಟು, ವನಕ್ಕೆ ಹೋಗಿ ತಪಸ್ಸಿಗೆ ಕುಳಿತನು; ಈ ಸಂಧಿಯಲ್ಲಿ ಹನ್ನೆರಡು ವರ್ಷ ಬಂದೇಸಮನಾಗಿ ಎಡೆಬಿಡದೆ ಕ್ಷಾಮ ಬೀಳಲು. ತ್ರಿಶಂಕುರಾಜನು ವಿಶ್ವರಥನ ಕುಟುಂಬವನ್ನು ನಾಕಿಸಲುಹಿದನು. ಇತ್ತ, ವಿಶ್ವರಥನು ಉಗ್ರತಪಶ್ಚರ್ಯೆಯಿಂದ ಬ್ರಾಹ್ಮಣ ಪದವನ್ನು ಪಡೆದು ಮರಳಿ ತನ್ನ ರಾಜ್ಯಕ್ಕೆ ಬಂದನು; ಆಗ, ತನ್ನ ರಾಜ್ಯವನ್ನೆಲ್ಲ ತ್ರಿಶಂಕುವಿಗೇ ಕೊಟ್ಟು, ತಾನು ವಿಶ್ವಾಮಿತ್ರನೆಂಬ ಹೆಸರಿನಿಂದ ತ್ರಿಶಂಕುವಿನ ಪುರೋಹಿತನಾದನು; ಇದಕ್ಕಾಗಿ ವಸಿಷ್ಠನಿಗೂ ವಿಶ್ವಾಮಿತ್ರನಿಗೂ ಅನೇಕ ಜಗಳ ನಡೆದವು; ಸತ್ಯವ್ರತನ ತರುವಾಯ, ಅವನ ಮಗನಾದ ಹರಿಶ್ಚಂದ್ರನು ಪಟ್ಟಕ್ಕೇರಿದನು. ವಿಶ್ವಾಮಿತ್ರನು ಇವನ ಆಳಿಕೆಯಲ್ಲಿಯೇ ದೊಡ್ಡದೊಂದು ರಾಜಸೂಯಯಜ್ಞವನ್ನು ಮಾಡಿದನು. ಈ ಯಜ್ಞದಕ್ಷಿಣೆಗಾಗಿಯೇ, ವಿಶ್ವಾಮಿತ್ರನು ಹರಿಶ್ಚಂದ್ರನ ಸತ್ವಪರೀಕ್ಷೆ ಮಾಡಬೇಕೆಂದು ಬಹುಪರಿಯಾಗಿ ಕಾಡಿದನು. ಸತ್ಯಸಂಧನಾದ ಹರಿಶ್ಚಂದ್ರನ ಆಳಿಕೆಯಲ್ಲಿ ವಸಿಷ್ಠರು ಸೂರ್ಯವಂಶದ ಕುಲಪುರೋಹಿತರಾದರು. ಹರಿಶ್ಚಂದ್ರಮಹಾರಾಯನು ನಾನಾ ಯಾತನಗಳಿಗೀಡಾಗಿ, ತನ್ನ ರಾಜ್ಯ, ಹೆಂಡಿರು, ಮಕ್ಕಳು ಕೊನೆಗೆ ತನ್ನನ್ನು ಸಹ ಶೀಲರಕ್ಷಣೆಗಾಗಿ ಮಾರಿಕೊಂಡು ಹೊಲಿಯುಗಾಳಾಗಿ ದುಡಿದರೂ, ತನ್ನ ಸತ್ಯವ್ರತವನ್ನೊಂದು ಬಿಡದೆ ಇದ್ದುದರಿಂದ ಮುಂದೆ ಅತನ ವಿಷಯದಲ್ಲಿ ದೇವರಿಗೆ ಕರುಣೆ ಹುಟ್ಟಿ, ಅವನನ್ನು ಕಾಯ್ದು ಸಂಗತಿಯು ಪ್ರಾಜ್ಞೇನ ಇತಿ

ಹಾಸದೊಳಗೆ ಇಂದಿಗೂ ಕೆಂಪಿನಾರ ವಜ್ರದಂತೆ ಮಿಂಚುತ್ತಿದೆ. ಇದೇ ವಂಶದೊಳಗೆ ಆಳಿದ ಸಗರ, ಭಗೀರಥ, ದಿಲೀಪ, ರಘು ಮೊದ ಲಾದವರು ಯಾರೂ ಮಾಡದಂಥ ಒಂದೊಂದು ಅಘಟಿತವಾದ ಕಾರ್ಯ ಗಳನ್ನು ಮಾಡಿ, ಕೀರ್ತಿಶೇಷರಾಗಿದ್ದಾರೆ. ಸೂರ್ಯವಂಶ ವೃಕ್ಷವನ್ನು ತುದಿಯಿಂದ ಕೊನೆಯ ವರೆಗೆ ನಿರೀಕ್ಷಿಸಿದರೆ, ಅದೊಂದು ಝಗಝಗಿ ಸುವ ನಕ್ಷತ್ರಮಾಲೆಯಾಗಿದೆ. ಈ ವಂಶದೊಳಗೆಷ್ಟು ಮಹಾಮಹಿಮರು ತಲೆಯೆತ್ತಿದರೋ, ಅಷ್ಟು ಮಂದಿ ಬೇರೆ ಯಾವ ವಂಶದಲ್ಲಿಯೂ ಹುಟ್ಟಿ ಲಿಲ್ಲ. ದಶರಥಮಹಾರಾಜನ ಹೊಟ್ಟೆಯಿಂದ ನಾಕ್ಷಾತ್ ಭಗವಂತನು ರಾಮಚಂದ್ರನ ರೂಪತೊಟ್ಟು, ಹುಟ್ಟಿಬಂದಾಗಂತೂ ಈ ವಂಶವು ಉನ್ನ ತಿಯ ಅತ್ಯುಚ್ಚವಾದ ಪದವನ್ನೈದಿತು. ಯಾವ ವಂಶದಲ್ಲಿ ಜಗನ್ನಿಯಾ ಮಕನಾದ ನಾರಾಯಣನೇ ಅವತಾರಗೊಂಡು ಬಂದನೋ ಅಂಥ ವಂಶದ ಪುಣ್ಯವು ಎಷ್ಟು ಹಣ್ಣಿಗೆ ಬಂದಿರಬಹುದೆಂಬದು ಯಾರಿಗೆ ತಾನೇ ಲೆಕ್ಕಕ್ಕೆ ನಾಧ್ಯವು?

ಅವತಾರ ಕಲ್ಪನೆ:- ಆರ್ಯಸಂಸ್ಕೃತಿಯ ಚರಿತ್ರೆಯಲ್ಲಿ ಅವ ತಾರ ಕಲ್ಪನೆಯೊಂದು ವಿಶೇಷ ಬೆಲೆಯುಳ್ಳದ್ದಾಗಿದೆ. ಆರ್ಯರಿಗೂ ಅವತಾರ ಕಲ್ಪನೆಗೂ ಸಮೀಪ ಸಂಬಂಧವಿರುವಷ್ಟು. ಬೇರೆ ಯಾವ ಸಂಸ್ಕೃತಿಯವರಿಗೂ ಇರಲಾರದು. ಅಷ್ಟೇಕೆ? ಅವತಾರ ಕಲ್ಪನೆಯ ಲ್ಲಿಯೇ ಆರ್ಯಸಂಸ್ಕೃತಿಯ ತಿರುಳೂ, ಹುರುಳೂ ಬೆಳಗೂಡಿವೆ. ಆರ್ಯಸಂಸ್ಕೃತಿಯ ಸೆಲೆಯು ಅವತಾರವೇ. ಆದುದರಿಂದ ಅವತಾರ ಕಲ್ಪನೆಯ ವಿವೇಚನೆಯನ್ನು ಬಿಟ್ಟರೆ, ಆರ್ಯಸಂಸ್ಕೃಯ ಇತಿಹಾಸ ವೆಂದರೆ ಕಣ್ಣಿಲ್ಲದ ಮುಖದಂತಾಗುವದು. ಆರ್ಯರ ಅವತಾರ ಕಲ್ಪ ನೆಯನ್ನು ಮನುಷ್ಯರು ಹುಟ್ಟಿಸಿದ್ದಲ್ಲ; ಕವಿ ಕಲ್ಪನೆಯಲ್ಲ; ಪುರಾಣದ ಬಣಾರಗಳೆಯಲ್ಲ; ಅದರಂತೆಯೇ ಈ ಜಗತ್ತಾದರೂ ಏನೋ ಒಂದು ಮಾಯಾಜಾಲವು; ಹುಟ್ಟಿಸಿದವರು ಯಾರೋ ಏನೋ! ಇದರ ಮುಂದಣ ಗತಿಯು ಹೇಗೋ ಏನೋ! ಎಂಬ ಸಂಶಯವಾದಗಳು ಆರ್ಯರ ಬಾಯಿಗರಿಯದ ಮಾತುಗಳು. ಸ್ರಪಂಚವನ್ನು ಪರಮಾ ತ್ಮನೇ ತನ್ನ ಲೀಲೆಗಾಗಿ ನಿರ್ಮಿಸಿದನು. ಅದರ ಘಾರವೆಲ್ಲವೂ ಅವ

ನನ್ನೇ ಕೂಡಿರುವದರಿಂದ, ಅದರ ಕ್ಷೇಮನೆಮ್ಮದಿಗಳಿಗಾಗಿ ಅವನು ಪ್ರತಿಕ್ಷಣವೂ ಕಣ್ಣಿಗೆ ಕಾಣಿಸದಂತೆ ಕೆಲಸ ಮಾಡುತ್ತಿರುತ್ತಾನೆ. ಅವನೇ ತ್ರಿಮೂರ್ತಿಗಳ ಸ್ವರೂಪದಿಂದ ಸೃಷ್ಟಿ, ಸ್ಥಿತಿ, ಲಯ ಅಂದರೆ, ಹುಟ್ಟಿಸುವದು, ರಕ್ಷಿಸುವದು, ಮತ್ತು ನಾಶ ಮಾಡುವದು ಈ ಕರ್ಮಗಳನ್ನು ನಡಿಸಿರುತ್ತಾನೆ. ಲೀಲಾಮಾತ್ರವಾಗಿ ನಡೆಯಿಸಿದ ಜಗತ್ತನ್ನು ತನ್ನ ಮನಸಿಗೆ ಬಂದಾಗಲೇ ಅವನು ಇಲ್ಲದಂತೆ ಮಾಡುವನು. ಜಗತ್ತಿನ ಸ್ಥಿತಿಯ ಕಾರ್ಯದೊಳಗೆ ಯಾರಾದರೂ ಉನ್ಮತ್ತರಾಗಿ, ಅಡ್ಡಿ ಬಂದು ಪ್ರಪಂಚದ ಬೀಮಾಳವಾದ ಧರ್ಮವನ್ನು ಕಾಲ್ಕೆಳಗೆ ಹಾಕಿ ದಬ್ಬಿ, ಅಧರ್ಮದಿಂದ ನಡೆಯುಲೆಸಿದರೆ, ಧರ್ಮದ ಏಳ್ಗೆಗಾಗಿಯೇ, ಇದಕ್ಕೆ ಹೊಣೆಗಾರನಾದ ಸಾಕ್ಷಾತ್ ಭಗವಂತನೇ ಮಾನವರೂಪವನ್ನು ತಾಳಿ, ತನ್ನ ಅಲೌಕಿಕವಾದ ಶಾರೀರಕ, ಬೌದ್ಧಿಕ ತೇಜವಿಶೇಷದಿಂದ ಅಧರ್ಮದಿಂದ ನಡೆಯುವವರ ಹೊಟ್ಟೆಹಾರಿಸಿ, ಮತ್ತೆ ಜಗತ್ತಿನಲ್ಲಿ ಪ್ರಜಾಕ್ಷೇಮವನ್ನು ನೆಲೆಗೊಳಿಸುತ್ತಾನೆ. ಆರ್ಯಸಂಸ್ಕೃತಿಯೊಳಗೆ ಇಂಥ ಪ್ರಸಂಗಗಳು ನಾವಿರಾರು ಇವೆ; ಆದರೂ, ಅವುಗಳಲ್ಲಿ ಮುಖ್ಯವಾದವುಗಳೆಂದು ಮತ್ಸ್ಯ, ಕೂರ್ಮ, ವರಾಹ ಮೊದಲಾದ ಹತ್ತು ಅವತಾರಗಳನ್ನಾಗಿ ವಿಂಗಡಿಸಿದ್ದಾರೆ; ಮೇಲಾಗಿ ಅದರಂತೆ, ಎಷ್ಟೋ ಕಡೆಯಲ್ಲಿ ಅರಸನು ತನ್ನ ಪ್ರಜೆಗಳಿಗೆ ಅಭಯಕೊಡುವಂತೆ, ಭಗವಂತನೇ ಮಾತು ಕೊಟ್ಟು ನಂಬಿಸಿದ್ದಾನೆ. ಬೇರೆ ಜನಾಂಗದವರಂತೆ, ಆರ್ಯರಿಗೆ ಸ್ವಪಂಚದ ಚಿಂತೆಯನ್ನು ಪಡಿಸುವ ಕಾರಣವಿಲ್ಲ. ತಮ್ಮ ತಮ್ಮ ಧರ್ಮದಂತೆ ಅವರು ನಡೆದರಾಯಿತು. ಜಗತ್ತಿನ ಯೋಚನೆ ಅವರಿಗಿಲ್ಲ. ಇದಕ್ಕೆಲ್ಲ ಸೃಷ್ಟಿಕಾರಣನಾದ ಭಗವಂತನೇ ಸ್ವತಃ ಮನುಷ್ಯರಂತೆ ಮನುಷ್ಯನಾಗಿ ಬಂದು ತನ್ನ ದೈವಿಕವಾದ ತೇಜಸ್ಸಿನಿಂದ ಭೂಮಂಡಲದ ಮೇಲಿನ ಧಾರ್ಮಿಕ, ರಾಜಕೀಯ, ನಾಮಾಜಿಕ, ರಂಗಭೂಮಿಯನ್ನು ಹೊಕ್ಕು ಆಟವಾಡಿ, ಹೋಗಿರುವದೇ ಬಲವಾದ ಸಾಕ್ಷಿ. ಸಾರಾಂಶ, ಸೃಷ್ಟಿಯ ಕರ್ತನೂ, ಅದನ್ನು ರಕ್ಷಿಸುವವನೂ, ಧರ್ಮದ ಪ್ರಭುವೂ, ಅಘಟಿತ ಘಟನಾಪಟುವೂ ಆದ ಪರಮಾತ್ಮನು ಆರ್ಯರಿಗೆ ಜೀವದ ಗೆಳೆಯನಂತೆ ಕರೆದಾಗ ಕೂಗಿದಾಗ ಬಂದು ನಿಲ್ಲುತ್ತಿರುವದ

ರಿಂದ ಅವರಿಗೆ ಯಾವುದರ ಭಯವಿರಲಿಲ್ಲ. ಭಗವಂತನ ಅವತಾರದಲ್ಲಿ ಈ ಮೇರೆಗೆ ಅಲ್ಲಾಡದಂಥ ನಂಬಿಗೆಯನ್ನಿಟ್ಟುಕೊಂಡು ಆರ್ಯರು ಯಾವಾಗಲೂ ನಿಶ್ಚಿಂತೆಯಿಂದಿದ್ದರು. ನಂಬುಗೆಯ ಬಲವೇ ಬಲವು; ಅದನ್ನು ಬೆಳಿಸುವದೇ ಅವರ ಸಾಧನವಾಗಿತ್ತು. ಭಗವಂತನು ಪ್ರಪಂಚ ಕ್ಷೇಮಕ್ಕಾಗಿ ತೊಟ್ಟಿರುವ ಮತ್ಸ್ಯ ಕೂರ್ಮಾದಿ ಅವತಾರಗಳಲ್ಲಿ ರಾಮ ಕೃಷ್ಣ ಇವೆರಡೇ ಅವತಾರಗಳು ಅತ್ಯಂತ ಶ್ರೇಷ್ಠವಾದವುಗಳು. ಇವೆರಡೂ ಅವತಾರಗಳಲ್ಲಿ ದೇವರು ಎಲ್ಲ ಅವತಾರಗಳಿಗಿಂತ ವಿಶೇಷಾಂಶದಿಂದ ಮೈಗೊಂಡು ಬಂದನು. ಆದುದರಿಂದಲೇ ರಾಮಾವತಾರಕ್ಕೆ ಇಷ್ಟೊಂದು ಮೇಲ್ಮೆ.

ರಾಮಾಯಣ ಮಹಾ ಕಾವ್ಯವು:– ಭಾರತೀಯರ ಜನಜೀವನಕ್ಕೆ ವೇದೋಪನಿಷತ್ತುಗಳು ಮೂಲಭೂತವಾದವುಗಳು. ಇವು ಜನ ಸಾಮಾನ್ಯಕ್ಕೆ ತಿಳಿಯುವಂಥವುಗಳಲ್ಲ. ರಾಮಾಯಣ ಮಹಾಕಾವ್ಯವಾದರೋ, ಉಪನಿಷತ್ತುಗಳಲ್ಲಿ ಹೇಳಿರುವ ಸತ್ಯಂವದ, ಧರ್ಮಂಚರ, ಮಾತೃದೇವೋಭವ, ಪಿತೃದೇವೋಭವ ಅಬೇ ಮುಂತಾದ ಮಹಾತತ್ವಗಳನ್ನು ಸೂರ್ಯವಂಶದ ಕುಟುಂಬದವರು ನಡೆದು ತೋರಿಸಿರುವದೊಂದು ರೂಪವೆತ್ತಿರುವ ಉಪನಿಷತ್ತು. ಈ ಕಾವ್ಯದ ಕಥೆಯು ಕಲ್ಪನೆಯಿಂದ ಹೊರಡಿಸಿದ ಕಟ್ಟಲ್ಲ. ಒಂದಾನೊಂದು ಕಾಲಕ್ಕೆ ಆ ಕಥೆಯ ಜೀವಂತ ಮಹಾ ಚಿತ್ರವು ಜನರ ಕಣ್ಮುಂದೆ ಹಾಯ್ದು, ಹಲವು ವರ್ಷಗಳ ವರೆಗೆ ಭಾರತೀಯ ಜನಾಂಗವನ್ನೇ ಬೆರಗುಗೊಳಿಸಿ ಬೆಪ್ಪು ಹಿಡಿಸಿದ್ದಿತು. ಅಷ್ಟೇಕೆ, ರಾಮಾಯಣ ಮಹಾಕಾವ್ಯದೊಳಗಿನ ಅಲೌಕಿಕರಾದ ಚರಿತ್ರನಾಯಕನೂ, ನಾಯಿಕೆಯೂ ಅವರ ನಡೆಯಲ್ಲಿರುವ ಲಕ್ಷ್ಮಣ, ಭರತ, ಹನುಮಂತ ಮೊದಲಾದವರೂ ತಮ್ಮ ದಿವ್ಯವಾದ ಚಾರಿತ್ರ್ಯದಿಂದ ಆರ್ಯಕುಟುಂಬದೊಳಗೂ, ಆರ್ಯಹೃದಯದೊಳಗೂ ಅಧಿದೇವತೆಗಳಾಗಿ ಮೆರೆಯುತ್ತಿದ್ದುದಲ್ಲದೆ ಮಾನವಜಾತಿಗೇನೇ ಆದರ್ಶಭೂತರಾಗಿದ್ದಾರೆ. ರಾಮಾಯಣವಾಗಿ ಯುಗ ಯುಗಾಂತರಗಳು ಉರುಳಿಹೋದರೂ, ರಾಮಾಯಣಕ್ಕಿದ್ದ ಮೇಲ್ಮೆಯು ತಪ್ಪಿಲ್ಲ. ಜನ ರಾಗವು ಕುಂದಿಲ್ಲ. ರಾಮಾಯಣದ ರಮ್ಯತೆಯೇ ಭಾರತೀಯರ ಜೀವ

ನದ ಜೀವವು. ಹೀಗಾಗಿ ಒಳಗೂ ಹೊರಗೂ ರಾಮಾಯಣದ ರಹಸ್ಯವು ಪ್ರಸಂಗದ ಸರ್ವಸ್ವವಾಗಿದೆ. ಭರತಖಂಡದಲ್ಲಿ ನಡೆದ ರಾಮಾಯಣವು ಶಾಶ್ವತವೂ, ನಿತ್ಯನೂತನವೂ ಆದ ಕಥೆ. ಇದರಲ್ಲಿ ನಮ್ಮ ಸನಾತನ ಸಂಸ್ಕೃತಿಯೂ, ಪ್ರಪಂಚಕ್ಕೇ ಮೇಲುಪಂಕ್ತಿಯಾಗಿರುವ ನಮ್ಮ ನಡೆನುಡಿಗಳೂ, ನಮ್ಮ ಬೆಳಗುವ ಭಾವನೆಗಳೂ, ಎಂದೂ ಅಳಿಯದ ನಮ್ಮ ಧರ್ಮಬುದ್ಧಿಯೂ, ಎಂದೂ ಮರೆಯದ ನಮ್ಮ ಜೀವಿತದ ಧ್ಯೇಯವೂ ಅಡಕವಾಗಿವೆ. ರಾಮಾಯಣವು ಆಯಾ ದೇಶೀಯ ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟು, ಆಯಾ ಜನರಿಂದ ದಿನಾಲು ಪ್ರೇಮಭರದಿಂದ ಹಾಡಲ್ಪಡುತ್ತಿದೆ. ನಿತ್ಯವೂ ಹಳ್ಳಿಪಳ್ಳಿಗಳಲ್ಲಿ ಸುಶಿಕ್ಷಿತರೂ, ಅಶಿಕ್ಷಿತರೂ, ಹೆಂಗಸರೂ, ಗಂಡಸರೂ, ಹುಡುಗರೂ ತಮ್ಮ ಮನೆಗೆಲಸಗಳನ್ನೆಲ್ಲ ತೀರಿಸಿಕೊಂಡು ದಿವಸವೆಲ್ಲ ದುಡಿದು ಶ್ರಮವನ್ನು ಕಳೆದುಕೊಳ್ಳಬೇಕೆಂದು ರಾಮಾಯಣಶ್ರವಣವು ನಡೆದ ಪುರಾಣಕೀರ್ತನಕಟ್ಟೆಗಳಲ್ಲಿ ಗುಂಪುಗುಂಪಾಗಿ ನೆರೆದು ಸಮಾಧಾನವನ್ನು ಪಡೆಯುತ್ತಾರೆ. ರಾಮಾಯಣವು ಭಾರತೀಯರಿಗೆ ಶಾಂತಿ ಶಕ್ತಿಗಳನ್ನು ಮೈಗೂಡಿಸುವಂಥ ಅಮೃತಪ್ರವಾಹವಾಗಿದೆ. ಸತ್ಯಕ್ಕೆ ಸಾವಿಲ್ಲವೆಂಬುದನ್ನು ಕಲ್ಪನೆಯನ್ನು ಹೆಪ್ಪುಗಟ್ಟಿಸುವ ಕಾವ್ಯವಿದು. ಈ ಮಹಾ ಕಾವ್ಯದಲ್ಲಿಯೇ ತಮ್ಮ ದೃಷ್ಟಿಯನ್ನಿಟ್ಟು, ಈ ಮಹಾ ಕಾವ್ಯವು ತಮ್ಮ ಜೀವಿತಕ್ಕೊಂದು ನಿತಾಂತ ಸಮಾಧಾನವನ್ನು ಕೊಡುವ ಸಾಧನವೆಂದು ಅದನ್ನು ಹಾಡಿ ಹಾಡಿ ನಲಿದಾಡಿ, ತಮ್ಮ ಕಷ್ಟಮಯವಾದ ಜೀವಿತಯಾತ್ರೆಯನ್ನು ಸುಖಮಯಗೊಳಿಸುವಂಥ ಸಾವಿರಾರು ಕುಟುಂಬಗಳು ಈಗ್ಯ ಭಾರತದೇಶದೊಳಗೆ ಕಾಣಬಹುದು. ಸೀತಾರಾಮರ ಪವಿತ್ರ ನಾಮದಿಂದ ಪಾವನವಾಗದ ಭೂಮಿಯು ಭರತಖಂಡದಲ್ಲಿಯಂತೂ ಕಾಣದು.* ಆದಿಕವಿಯಾದ ವಾಲ್ಮೀಕಿಮುನಿಗಳ

---

*ಪಾತಾಳದೇಶವೆಂದೆನಿಸುವ ದಕ್ಷಿಣಅಮೇರಿಕೆಯಲ್ಲಿಯ ಮೆಕ್ಸಿಕೋದೇಶದಲ್ಲಿ ಈಗ್ಯೂ 'ರಾಮ ಸಿತವ' ಹೆಸರಿನಿಂದ ಉತ್ಸವ ನಡಿಸುತ್ತಾರೆಂಬುದರ ಮೇಲಿಂದ ರಾಮ ಕೀರ್ತಿಯು ಕಲ್ಪನೆಯಾಗದಿಪುದು.

ಬಾಯಿಂದ ಕರುಣರಸವುಕ್ಕಿ ಸ್ಪಷ್ಟವಾಗಿ ಹರಿದ ಕಾವ್ಯಗಂಗೆಯಿದು. ರಾಮಾಯಣ ಕಾವ್ಯವನ್ನು ಶ್ರೀರಾಮಾವತಾರವಾಗುವ ಪೂರ್ವದಲ್ಲಿಯೇ ವಾಲ್ಮೀಕಿಋಷಿಗಳು ಬರೆದರೆಂದೂ, ಮುಂದೆ, ಅವರನುಡಿಯನ್ನೇ ನಿಜ ಮಾಡಿ ತೋರಿಸಲಿಕ್ಕೆಂದು ಭಗವಂತನಿಗೆ ರಾಮಾವತಾರವನ್ನು ತೊಡ ಬೇಕಾಯಿತೆಂದೂ, ಆ ಕಾವ್ಯವನ್ನೇ ವಾಲ್ಮೀಕಿಋಷಿಗಳು ಶ್ರೀರಾಮ ಚಂದ್ರನ ಮಕ್ಕಳಾದ ಲವಕುಶರಿಗೆ ಕಲಿಸಿ, ಅವರ ಬಾಯಿಂದಶ್ರೀರಾಮ ಚಂದ್ರನ ಮುಂದೆ ಹಾಡಿಸಿದರೆಂದೂ ಹಿಂದೂಜನರ ಪರಂಪರೆಯಿಂದ ನಡೆದು ಬಂದ ಭಾವನಾತ್ಮಕವಾದ ನಂಬುಗೆ; ಹೀಗೆ ಎಲ್ಲ ಬಗೆಯಿಂದಲೂ, ರಾಮಾಯಣವೆಂದರೆ ಪ್ರಪಂಚದಲ್ಲಿರುವ ಕಾವ್ಯಗಳಿಗೆ ಕಳಸವೂ ಕಾವ್ಯಲಕ್ಷಣಕ್ಕೆ ಮೇಲುಪಂಕ್ತಿಯೂ ಆಗಿದೆ. ಸಂಸಾರದ ಜೀವ ನಕ್ಕೆ ಅತ್ಯಂತ ಪ್ರಾಧಾನ್ಯವನ್ನು ಕೊಟ್ಟು, ಮನುಷ್ಯನು ಗೃಹಸ್ಥಾಶ್ರಮ ದಲ್ಲಿ ಹೇಗೆ ಇರಬೇಕೆಂಬದನ್ನು ರಾಮಾಯಣವು ಸ್ಪುಟಗೊಳಿಸುತ್ತದೆ; ಆದ್ದರಿಂದ ರಾಮಾಯಣವೆಂದರೆ, ಅತ್ಯುದಾತ್ತವಾದೊಂದು ಸಂಸಾರ ಚಿತ್ರ. ತಂದೆಮಕ್ಕಳು, ಅಣ್ಣತಮ್ಮಂದಿರು, ಗಂಡಹೆಂಡಿರು ಇವರ ಲ್ಲಿಯ ಅನ್ಯೋನ್ಯಪ್ರೇಮ, ಕಷ್ಟನಷ್ಟಗಳು ಬಂದಿದಾಗ ಮನುಷ್ಯನು ಹೇಗೆ ನಡೆದುಕೊಳ್ಳಬೇಕು, ಸಂಸಾರದೊಳಗೆ ಪ್ರತಿಯೊಬ್ಬ ಮನುಷ್ಯ ನಿಗೆ ಸತ್ಯ, ಅಹಿಂಸೆ, ಏಕಪತ್ನೀವ್ರತ, ಸೋದರಪ್ರೇಮ ಇವೆಲ್ಲವೂ ಎಷ್ಟು ಅವಶ್ಯವಾಗಿವೆ, ಮನುಷ್ಯನು ಅವುಗಳನ್ನು ಎಷ್ಟು ಕರ್ತವ್ಯಬುದ್ಧಿ ಯಿಂದ ಹೆದರದೆ ಬೆದರದೆ ನಾಗಿಸಲಿಕ್ಕೆಬೇಕೆಂಬುವ ಮಾತುಗಳಿಗೆ ರಾಮಾಯಣವು ನಿತ್ಯದಲ್ಲಿಯೂ ಬೆಳಗುತ್ತಿರುವ ಸೂರ್ಯನಂತಿದೆ. ಶ್ರೀರಾಮಚಂದ್ರನಿಗೆ ತಂದೆಯಾದ ದಶರಥಮಹಾರಾಯನಲ್ಲಿರುವ ವಿಧೇ ಯತೆ, ಕೌಸಲ್ಯಾ, ಸುಮಿತ್ರಾ, ಕೈಕೇಯಿ ಮೊದಲಾದ ತಾಯಂದಿರಲ್ಲಿ ರುವ ಮಾತೃವಾತ್ಸಲ್ಯ, ಲಕ್ಷ್ಮಣ ಭರತ ಶತ್ರುಘ್ನಾದಿಗಳಿಗೆ ಶ್ರೀರಾಮನ ವಿಷಯದಲ್ಲಿ ತೋರ್ಪಡುವ ನಾವಿರ್ಧತ್ಯಾಗ, ವಿಶ್ವಾಮಿತ್ರ ವಸಿಷ್ಠರ ಬಗ್ಗೆ ಗುರುಭಕ್ತಿ, ಸೀತಾದೇವಿಗೆ ಶ್ರೀರಾಮಚಂದ್ರನಲ್ಲಿರುವ ಲೋಕೋ ತ್ತರವಾದ ಪತಿನಿಷ್ಠೆ, ಹನುಮಂತನಿಗೆ ಶ್ರೀರಾಮಪ್ರಭುವಿನಲ್ಲಿರುವ ಅಸಾಧಾರಣವಾದ ಪ್ರಭುಪ್ರೇಮ, ಶ್ರೀರಾಮನ ಬಗ್ಗೆ ಪ್ರಜೆಗಳ ಅತ್ಯಂ

ತಿಕ ರಾಜಭಕ್ತಿ ಇವೆಲ್ಲವೂ ರಾಮಾಯಣದೊಳಗಿನ ಅತ್ಯಂತ ರಮಣೀಯ ಹಾಗೂ ವರ್ಣನೀಯ ಸ್ಥಾನಗಳು. ಮನುಷ್ಯನ ಭಕ್ತಿ, ವಿಶ್ವಾಸ, ಕರ್ತವ್ಯಗಳು ಎಷ್ಟು ದೂರ ಹೋಗಬಲ್ಲವೆಂಬುದಕ್ಕೆ ರಾಮಾಯಣವೇ ಸಾಕ್ಷಿಯಾಗಿದೆ.

ರಾಮಾಯಣ ಕಥೆ:- ಅನೇಕ ಇತಿಹಾಸಕಾರರು ಶ್ರೀರಾಮಚಂದ್ರನು ಅಯೋಧ್ಯಾಧಿಪನಾದ ಶ್ರೀದಶರಥಮಹಾರಾಜನೆಂಬ ಅರಸನ ಮಗನು; ರಾಮನೆಂದರೆ, ಒಬ್ಬ ರಾಜಪುತ್ರನು; ಸದ್ಗುಣ ಸಂಪನ್ನನು ಎಂದು ಮುಂತಾಗಿ ಬಣ್ಣಿಸುತ್ತಾರೆ. ಆದರೆ ಆರ್ಯರಿಗೆ ಶ್ರೀರಾಮಚಂದ್ರನೆಂದರೆ ಸಾಕ್ಷಾತ್ ಭಗವಂತನ ಅವತಾರವೇ. ಭಗವಂತನು ಆಯಾ ಯುಗಗಳಲ್ಲಿ ಜಗತ್ತಿನ ಕ್ಷೇಮಕ್ಕಾಗಿಯೂ, ಜನರಿಗೆ ಅತ್ಯುಚ್ಚಧ್ಯೇಯದ ಮೇಲುಸಂಕ್ತಿಯನ್ನು ಹಾಕಿಕೊಡಲಿಕ್ಕಾಗಿಯೂ, ಅವತಾರವೆತ್ತಿ ಬರುತ್ತಿರುವನೆಂಬುದಕ್ಕೆ ರಾಮಾಯಣವೊಂದು ಪ್ರತ್ಯಕ್ಷ ಉದಾಹರಣೆಯಾಗಿದೆ. ರಾಮಾಯಣದೊಳಗೆ ಶ್ರೀರಾಮಚಂದ್ರನ ಪ್ರತಿಯೊಂದು ಪ್ರಸಂಗದೊಳಗಿನ ನಡೆನುಡಿಗಳನ್ನು ಸೂಕ್ಷ್ಮವಾಗಿ ಒರೆಗೆ ಹಚ್ಚಿ ನೋಡಿದರೆ, ಅವನು ನಾಲ್ಕು ಮಂದಿಯಂತೆ ಸಾಮಾನ್ಯ ರಾಜಪುತ್ರನಲ್ಲದೆ, ಭಗವಂತನ ಅವತಾರವೆಂದೇ ನಮಗೆ ಮನದಟ್ಟಾಗುತ್ತದೆ. ಶ್ರೀರಾಮಚಂದ್ರನು ಶಾಂತಿ ಸೌಶೀಲ್ಯಾದಿ ಸದ್ಗುಣಗಳಿಗೆ ತವರ್ಮನೆ. ಸತ್ಯದ ಮೂರ್ತಿ. ಮೀರಿದ ಮಲತಾಯಿಯಾದ ಕೈಕೇಯಿಯು ಬಲ್ಲೀ ರಾಜ್ಯಾರೋಹಣದಂಧ ಸಡಗರದ ಸಮಾರಂಭದೊಳಗೆ ದಶರಥಮಹಾರಾಯನಿಂದ ರಾಮಚಂದ್ರನನ್ನು ೧೪ ವರ್ಷ ವನವಾಸಕ್ಕೆ ಕಳಿಸಬೇಕೆಂದು ವರವನ್ನು ತೆಗೆದುಕೊಂಡದಕ್ಕಾಗಿ ರವೆಯಷ್ಟು ಮನಸ್ಸಿನಲ್ಲಿ ಕಳವಳಗೊಳ್ಳದೆ, ಕುಂದದೆ, ತಾಯಿ ತಂದೆಗಳ ಆಜ್ಞೆ ಪಾಲಿಸುವದೇ ತನಗೆ ಸುಖವೆಂದು ತಿಳಿದು ನಡೆಯಲನುವಾದನು. ಮುಂದೆ ಕೈಕೇಯಿಯು 'ರಾಮಾ, ನಿನ್ನಿಂದ ತಪ್ಪಾಯಿತು; ನಾನು ಎಚ್ಚರ ತಪ್ಪಿ ನಿನ್ನನ್ನು ವನವಾಸಕ್ಕಟ್ಟುವ ದುರ್ಬುದ್ಧಿಗೆ ಮೋಸ ಹೋದೆನು; ದಯಮಾಡಿ ವನವಾಸಕ್ಕೆ ಹೋಗಬೇಡೆ'ಂದು ಅಂಗಲಾಚಿ ಬೇಡಿಕೊಂಡಾಗ್ಯೂ, ಶ್ರೀರಾಮಚಂದ್ರನು "ತಾಯೇ, ಇದು ನಿನ್ನ ಕೈಯೊಳ

ಗಿನ ಮಾತಲ್ಲ; ನಾನು ವನವಾಸಕ್ಕೆ ಹೋಗಬೇಕೆಂದೇ ಈ ಸಂಕಲ್ಪ ವಿದೆ; ನೀನೇಕೆ ಇಷ್ಟೆಂದು ಮನಸಿಗೆ ತಾಪ ಮಾಡಿಕೊಳ್ಳುವಿ; ನನಗಿನ್ನೂ ವನಕ್ಕೆ ನಾಗಿ ಜಗತ್ತಿಗೆ ಕ್ಷೇಮವಾಗುವಂಥ ಅನೇಕ ಕಾರ್ಯಗಳನ್ನು ಜರುಗಿಸಬೇಕಾಗಿದೆ; ಅದುದರಿಂದ ನೀನು ವ್ಯರ್ಥ ದುಃಖಿಸಬೇಡೆ" ಂದು ಹೇಳಿದ್ದನ್ನು ನೋಡಿದರೆ, ಶ್ರೀರಾಮಚಂದ್ರನಿಗೆ ತಾನು ಅವತಾರ ತೊಟ್ಟು ಬಂದಿರುವ ಅರಿವು ಇತ್ತೆಂದು ವ್ಯಕ್ತವಾಗುತ್ತದೆ. ಅಂಥಿಂಥ ವರಿಗಾದರೆ, ಇಂತಹ ಕೆಚ್ಚೆದೆಯೂ ಇಂತಹ ಅಚಲವಾದ ಶಾಂತಿಸಮಾ ಧಾನಗಳೂ ಬರಲಿಕ್ಕೆ ಸಾಧ್ಯವಿಲ್ಲ. ಶಾಂತಿಸಾಗರರಾದ ಶ್ರೀಸೀತಾರಾಮ ಚಂದ್ರರು ಲಕ್ಷ್ಮಣನನ್ನೆಚ್ಚಿಡಗೂಡಿ ವಲ್ಕಲವಸ್ತ್ರಗಳನ್ನುಟ್ಟುಕೊಂಡು ವನವಾಸಕ್ಕೆ ಹೋಗುವದೂ, ಅಲ್ಲಿ ಕೋತಿ ಮಂಗಗಳೊಡನೆ ಸಖ್ಯ ಬೆಳಿಸುವದೂ, ಅವು ಶ್ರೀರಾಮಚಂದ್ರನ ಕಾರ್ಯಕ್ಕೆ ನೆರವಾಗುವದೂ, ಲಂಕಾಧಿಪನಾದ ರಾವಣನು ಸೀತಾದೇವಿಯನ್ನು ಲಂಕೆಗೆ ಕದ್ದೊಯ್ಯುವದೂ, ಶ್ರೀರಾಮಚಂದ್ರನು ಕೋತಿಗಳ ದಂಡನ್ನು ಕಟ್ಟಿಕೊಂಡು ರಾಕ್ಷಸರಾದ ರಾವಣಾದಿಗಳನ್ನು ಸಂಹರಿಸುವದೂ, ಈ ಶತ್ರು ಸಂಹಾರ ಕಾರ್ಯದೊಳಗೆ ಶ್ರೀರಾಮಚಂದ್ರನಿಗೆ ಸೃಷ್ಟಿಯ ಜಡ, ಮೂಕಪ್ರಾಣಿ ಗಳು ಸಹ ಎದ್ದು ಚಟುವಟಿಕೆಯಿಂದ ನೆರವಾಗುವದೂ, ಸೀತಾದೇವಿಯ ಅಗ್ನಿ ಪರೀಕ್ಷೆಯೂ, ರಾಮನಿಗಾದ ಸೀತಾ ವಿರಹ ಅವೆಲ್ಲ ಆಶ್ಚರ್ಯ ಕರವಾದ ಸಂಗತಿಗಳನ್ನು ಕುರಿತು ಸೂಕ್ಷ್ಮವಾಗಿ ಆಲೋಚಿಸ ತೊಡಗಿ ದರೆ, ಶ್ರೀರಾಮನು ಸಾಕ್ಷಾತ್ ಭಗವಂತನೇ ಎಂದೂ, ಅವನು ಜಗದು ದ್ಧಾರಕ್ಕಾಗಿ ಅಯೋಧ್ಯೆಯ ಅರಸನಾದ ದಶರಥರಾಯನ ಹೊಟ್ಟೆ ಯಲ್ಲಿ ಹುಟ್ಟಿದ್ದನೆಂದೂ ಅನೇಕ ಋಷಿಗಳ ವಾಕ್ಯಗಳಿಂದ ಖಂಡಿತ ವಾಗಿ ಮನದಟ್ಟಾಗುತ್ತದೆ. ಇದು ದೈವಿಕ ಮಾತಾದರೂ, ವ್ಯಾವಹಾರಿಕ ಜನರಿಗೆ "ಗೃಹಸ್ಥಾಶ್ರಮವು ಸ್ವಂತ ಸುಖಕ್ಕಲ್ಲದೆ, ಸಮಾಜ ಕ್ಷೇಮಕ್ಕಾಗಿರುವದೆಂದೂ, ಕುಟುಂಬಕ್ಕಾಗಿಯೂ, ಸಮಾಜಕ್ಕಾಗಿ ಯೂ, ನ್ಯಾಧಾರ್ಪಣೆ ಮಾಡುವದರಲ್ಲಿಯೇ ಮನುಷ್ಯನ ಮನು ಷ್ಯತ್ವವಿರುವದೆಂದೂ, ಲೋಕಾರಾಧನೆಯೇ ಮನುಷ್ಯನ ಜೀವಿತದ ಮುಖ್ಯ ಗುಟ್ಟೆಂದೂ, ಅದನ್ನು ಸಾಧಿಸಲಿಕ್ಕೆ ಕೈಹಿಡಿದ ಹೆಂಡತಿಯನ್ನಿ,

ಬೇಕಾದುದನ್ನೂ, ಬಿಟ್ಟು ಬಿಡಬಹುದೆಂ"ದೂ ಶ್ರೀರಾಮನ ಚಾರಿತ್ರ್ಯದಿಂದ ತಿಳಿದುಕೊಂಡು, ಹೆಜ್ಜೆ ಹೆಜ್ಜೆಗೆ ಮರೆಯುದೆ ಅರಿತು ನಡೆಯುವ ವಿಷಯ ವಾಗಿದೆ. ತಾತ್ಪರ್ಯವೇನೆಂದರೆ, ರಾಮಾಯಣದಲ್ಲಿ ಕಣ್ಣಿಗೆಳ್ಳುವ ಶ್ರೀರಾಮಚಂದ್ರನ ಭಗವದ್ವಿಭೂತಿವಿಶೇಷವಾದ ಮಹಾ ಮಹಾ ಕಾರ್ಯಗಳು ಎಲ್ಲರಿಗೂ ಅಸಾಧ್ಯವೆಂದಿಟ್ಟುಕೊಂಡರೂ, ತಾಯಿತಂದೆ ಗಳ ಬಾಯಿಂದ ಬಿದ್ದ ನುಡಿಯನ್ನೆತ್ತಿ ಹಿಡಿಯುವದು, ಅದರಂತೆ ನಡೆ ಯುವದು, ಸೋದರರಲ್ಲಿ ತನಗಿಂತ ಹೆಚ್ಚು ಪ್ರೀತಿ, ಹೆಂಡತಿಯಲ್ಲಿ ನಿರ್ವಿಷಯ ಪ್ರೇಮ, ಸೇವಕರನ್ನೂ ಪ್ರಜೆಗಳನ್ನೂ ಹೆತ್ತಬ್ಬೆಯ ಮಕ್ಕ ಳಂತೆ ಕಾಣುವ ವಾತ್ಸಲ್ಯ, ರಣದೊಳಗೆ ಧೈರ್ಯ, ಶತ್ರುಗಳು ಶರಣು ಬಂದರೆ ಅವರಿಗೆ ಅಭಯ ಕೊಟ್ಟು ರಕ್ಷಿಸುವದು, ಪರನಾರಿಯರಿಗೆ ಸೋದರಿಯರೆಂದು ತಿಳಿಯುವದು ಇವೆಲ್ಲ ಸದ್ಗುಣರಾಶಿಗಳು ಒಂದು ಗೂಡಿ ಝಗಝಗಿಸುತ್ತವೆ; ಸರ್ವಾಂಗಸುಂದರನೂ, ನವಿಲಿನಲ್ಲಿನಂತೆ ಚಿತ್ತಾಕರ್ಷಕನೂ ನರಚಂದ್ರಮನೂ ಆದ ಶ್ರೀರಾಮಚಂದ್ರಪ್ರಭುವಿನ ಸುತ್ತುಮುತ್ತು ಪತಿಸರಾಯಣಳೂ, ಪತಿವ್ರತಾಶಿರೋಮಣಿಯೂ ಆದ ಶ್ರೀಸೀತಾದೇವಿಯೂ, ಭ್ರಾತೃವತ್ಸಲರಾದ ಭರತ ಲಕ್ಷ್ಮಣ ಶತ್ರು ಘ್ನಾದಿಗಳೂ, ಸೇವಾಧುರೀಣನೂ, ರಾಮನೇ ಪ್ರಾಣನೂ ಆದ ಶ್ರೀಹನು ಮಂತನೂ ಇವರಿಲ್ಲದೆ ಇನ್ನೆಲ್ಲಿ ಸ್ಥಳವು? ಮತ್ತು ನಮಗೆ ಅವೇ ಯಾವಾಗಲೂ ಕಣ್ಮುಂದಿರಿಸಲಿಕ್ಕೆ ತಕ್ಕುಂಥವುಗಳು; ಅಂದಮೇಲೆ ಶ್ರೀರಾಮಚಂದ್ರನ ಈ ಪುಣ್ಯಚರಿತ್ರೆಯಿಂದಲೇ ಈ ಜಗತ್ತು ಪಾವನ ವಾಗುವದೆಂದು ನಮ್ಮ ಕವಿಗಳು ವರ್ಣಿಸಿದ್ದರಲ್ಲಿ ಅತ್ಯುಕ್ತಿಯೇನು? ರಾಮಾಯಣವು ನಮ್ಮ ಸೊತ್ತಾಗಿದೆ; ಶ್ರೀರಾಮಚಂದ್ರನು ನಮಗೆ ಆದರ್ಶವಾದ ದೇವರು; ಅವನು ಬರಿಯ ಇತಿಹಾಸದೊಳಗೆ ಓದತಕ್ಕ ಪುರುಷನಲ್ಲದೆ, ಹಗಲಿರಳು ಸ್ಮರಿಸಿ ಹಾಡಲೂ, ಅನುಕರಿಸಲೂ ತಕ್ಕವ ನಾದ ಭಗವಂತನಾಗಿದ್ದಾನೆ. ಅವನು ತನ್ನ ಶರಣರ ಜೀವನವಾಗಿ ದ್ದಾನೆ. ಅವನ ಭಜನೆಯಿಂದ ಹಿಂದೂದೇಶದೊಳಗಣ ಕೋಟ್ಯಾವಧಿ ಜೀವಿಗಳು ಉದ್ಧಾರ ಹೊಂದಿದ್ದಾರೆ; ಇಂಥ ದಿವ್ಯ ಮಾನವ ದೇಹ ಧಾರಿಯಾದ ಭಗವಂತನನ್ನು ನಾವು ಕ್ಷಣವಾದರೂ ಕಣ್ಮರೆ ಮಾಡ

ಬಹುದೇ? ಶ್ರೀರಾಮಚಂದ್ರನು ನಮ್ಮ ರಾಷ್ಟ್ರೀಯ ವಿಭೂತಿಯೂ, ನಮ್ಮ ಜನಾಂಗದ ಜೀವನವೂ, ನಮ್ಮ ಜೀವದ ಜೀವನೂ ಆಗಿದ್ದಾನೆ.

ರಾಮಾಯಣಕಾಲದ ನಡೆನುಡಿಗಳು:— ರಾಮಾಯಣ ಕಾಲಕ್ಕೆ ನಮ್ಮ ಹಳೇ ಪದ್ಧತಿಯು ಲೆಕ್ಕದಿಂದ ನೋಡಿದರೆ ತ್ರೇತಾಯುಗವೆಂದು ಹೆಸರು; ಮತ್ತು ಅದೇ ಲೆಕ್ಕದಿಂದ ಎಣಿಸಿ ನೋಡಲಾಗಿ, ಕೃತಯುಗವಾದ ವೇದಕಾಲಕ್ಕೂ ಇದಕ್ಕೂ ಒಹಳ ಅಂತರ ಬೀಳುತ್ತದೆ; ಆದರೆ ಈಗಣ ಕಾಲದ ಹಲವು ಪಂಡಿತರು ತರ್ಕಿಸಿದಂತೆ, ಅಷ್ಟೇನೂ ಅಭ್ಯಂತರವು ಕಂಡುಬರುವದಿಲ್ಲ. ನಾವು ಕಾಲಗಣನೆಯ ಲೆಕ್ಕದ ಗೋಜಿಗೆ ಹೋಗದೆ, ನಡೆನುಡಿಗಳ ಮೇಲಿಂದ ತೂಗಿ ನೋಡಲಾಗಿ, ನಮಗೆ ಋಗ್ವೇದಕಾಲಕ್ಕೂ ರಾಮಾಯಣಕಾಲಕ್ಕೂ ನಡೆನುಡಿಗಳಲ್ಲಿ ವಿಶೇಷನೇನಾ ಏರುಪೇರು ತೋರಿಬರುವದಿಲ್ಲ; ಆದ್ದರಿಂದ ಆ ವಿಷಯವಾಗಿ ಸವಿಸ್ತರವಾಗಿ ಬರೆಯುವ ನೆಳತಕ್ಕೆ ಬೀಳದೆ ಸ್ವಲ್ಪದರಲ್ಲಿಯೇ ಹೇಳಿಬಿಡುವೆವು.

ಸಮಾಜ ಸ್ಥಿತಿ:—ವೈದಿಕಕಾಲಕ್ಕೂ ಈ ಕಾಲಕ್ಕೂ ನಾಮಾಜಿಕ ದೃಷ್ಟಿಯಿಂದ ಎದ್ದುಕಾಣಿಸುವಂಥ ವ್ಯತ್ಯಾಸಗಳೇನೂ ಇರಲಿಲ್ಲ; ಆದರೂ ಕೆಲಮಟ್ಟಿಗೆ ನಾಮಾಜಿಕ ನಿಯಮ ನಿರ್ಬಂಧಗಳು ಹೆಚ್ಚು ನಾಗರಿಕತೆಯನ್ನು ತೋರಿದ್ದವು; ಕೃತಯುಗದಂತೆ ತ್ರೇತಾಯುಗವೆಂದೆನಿಸಿದ ರಾಮಾಯಣಕಾಲದಲ್ಲಿಯೂ ಬೇರೆ ದೇವತಾ ಪೂಜೆ ಇರದೆ ಅಗ್ನಿ ಸೂರ್ಯಾದಿಗಳ ಪೂಜೆಯೇ ಪ್ರಬಲವೆನಿಸಿತ್ತು; ಮತ್ತು ಅವುಗಳ ಪೂಜೆಯು ಬೇರೆ ಮಂಟಪಗಳಿದ್ದವು. ಬ್ರಾಹ್ಮಣರೂ ಕ್ಷತ್ರಿಯರೂ ಒಬ್ಬರಿಗೊಬ್ಬರು ಸ್ವತಂತ್ರವಾಗಿ ಕಲೆತು ನಡೆಯುತ್ತಿದ್ದರು; ಬ್ರಾಹ್ಮಣ ಕ್ಷತ್ರಿಯರು ಬ್ರಹ್ಮವಿದ್ಯೆಯಲ್ಲಿಯೂ, ಕ್ಷಾತ್ರವಿದ್ಯೆಯಲ್ಲಿಯೂ ಪರಸ್ಪರ ಮೇಲಾಟ ನಡಿಸಿದ್ದಂತೆ ಕಾಣುತ್ತದೆ; ಅನುವರ್ಗರೂ ಶಾಪದಲ್ಲಿಯೂ, ಶರದಲ್ಲಿಯೂ ಒಂದೇಸಮನಾಗಿ ಮೇಲುಗೈಯಾಗಿರುತ್ತಿದ್ದರು; ಸ್ವತಃ ಶ್ರೀರಾಮಚಂದ್ರನು ಕ್ಷಾತ್ರವಿದ್ಯೆಯಲ್ಲಿ ಹೇಗೋ ಹಾಗೆ ಬ್ರಹ್ಮವಿದ್ಯೆಯಲ್ಲಿ ನಿಷ್ಣಾತನಿದ್ದನು. ಇಂಥದೊಂದು ಸಮಯದೊಳಗೆ ಅವಸರವಿಕ್ಕಿಂದಾಗಲಿ, ಏನಾದರೊಂದು ಅಡಚಣೆಯು ಆಕ್ಷೇಪಿಸಿತೆಂದಾಗಲಿ,

ಶ್ರೀರಾಮ ಲಕ್ಷ್ಮಣರು ಸಂಧ್ಯಾವಂದನೆಯನ್ನು ಬಿಟ್ಟರೆಂಬ ಸಂಗತಿಯು ಇಡೀ ರಾಮಾಯಣದೊಳಗೇ ಕಂಡುಬಾರದು. ವನಕ್ಕೆ ಹೋಗಿ ಒರುತ್ತೇನೆಂದು ಶ್ರೀರಾಮಚಂದ್ರನು ಕೌಸಲ್ಯಾದೇವಿಗೆ ಹೇಳಹೋದಾಗ ಮಂಗಳಾಂಗಿಯಾದ ಆ ದೇವಿಯು ರೇಶ್ಮೆಯ ಬಟ್ಟೆಯನ್ನುಟ್ಟವಳಾಗಿಯೂ, ವ್ರತಸ್ಥಳಾಗಿಯೂ, ಏಕಾಂತದಲ್ಲಿ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮ ನಡಿಸಿದ್ದಳಂತೆ! ಶ್ರೀಹನುಮಂತನು ಶ್ರೀಸೀತಾದೇವಿಯನ್ನು ಹುಡುಕಿ ಹುಡುಕಿ ಬೇಸತ್ತು ಕೊನೆಗೆ ಅಶೋಕವನದ ಬದಿಗಿರುವ ನದಿಗೆ ಸೀತಾದೇವಿಯು ಸಾಯಂಕಾಲಕ್ಕೆ ಸಂಧ್ಯೆಗೋಸ್ಕರವಾಗಿಯಾದರೂ ಬಂದೇತೀರುವಳೆಂದು ಹನುಮಂತನು ಮನಸು ಮಾಡಿಕೊಂಡು ದಾರೀ ಕಾಯುತ್ತ ಕುಳಿತನಂತೆ! ಇವೆರಡೂ ಸಂಗತಿಗಳು ನಮಗೆ ನೋಬಿಗವಾಗಿ ತೋರಬಹುದು. ಅದರೆ ಆ ಕಾಲಕ್ಕೆ ಆರ್ಯರು ಹೆಂಗಸರಿಗೂ ಧರ್ಮದೊಳಗೂ ಸಮಾಜದೊಳಗೂ ಸ್ವಾತಂತ್ರ್ಯವನ್ನೂ, ಅಧಿಕಾರವನ್ನೂ ಕೊಟ್ಟಿದ್ದಕ್ಕಾಗಿ ಅವರ ಔದಾರ್ಯಗುಣವು ವ್ಯಕ್ತವಾಗುತ್ತದೆ. ಪ್ರಾಚೀನಕಾಲದಲ್ಲಿ ಗಂಡಸರಂತೆ, ಸ್ತ್ರೀಯರಿಗೂ ಉಪನಯನಸಂಸ್ಕಾರವೂ, ಯಜ್ಞೋಪವೀತಧಾರಣವೂ, ಬ್ರಹ್ಮಚರ್ಯವ್ರತಾಚರಣೆಯೂ, ಅವಶ್ಯವಿತ್ತೆಂಬುದು ಅಶ್ವಲಾಯನಸೂತ್ರ, ಗೋಭಿಲಸೂತ್ರಗಳಲ್ಲಿ ಹೇಳಿಯಿದೆ. ಋಷಿಗಳು ಜನಸಂದಣಿಯಿಂದ ದೂರವಾಗಿಯೂ, ನಿಬಿಡವೂ, ಸೃಷ್ಟಿಸೌಂದರ್ಯದ ತವರ್ಮನೆಯೂ ಆಗಿರುವ ಅರಣ್ಯಗಳಲ್ಲಿ ತಮ್ಮ ಆಶ್ರಮಗಳನ್ನು ಕಟ್ಟಿಕೊಂಡು ಸರ್ವಕಾಲ ತಮ್ಮ ಅಧ್ಯಯನಅಧ್ಯಾಪನೆಗಳಲ್ಲಿಯೂ, ಯಜ್ಞ-ಹೋಮ ಹವನಾದಿಗಳಲ್ಲಿಯೂ, ಧ್ಯಾನದಲ್ಲಿಯೂ ಕಾಲಕಳೆಯುತ್ತಿದ್ದರು; ತಮ್ಮ ಸುತ್ತು ಮುತ್ತು ಏನು ನಡೆದಿರುವದೆಂಬುದರ ಎಚ್ಚರ ಸಹ ಅವರಿಗೆ ಇರುತ್ತಿರಲಿಲ್ಲ; ಇಷ್ಟರಮಟ್ಟಿಗೆ ಅವರು ತಮ್ಮ ಕಾರ್ಯದೊಳಗೆ ಮೈಮರೆತಿರುತ್ತಿದ್ದರು; ತಮಗೆ ಬೇಕಾಗುವ ಆಹಾರವನ್ನು ಅವರು ತಮ್ಮ ಕೈಯಿಂದಲೇ ಬಿತ್ತಿ ಬೆಳೆಯುತ್ತಿದ್ದರು; ಸ್ವಸಂರಕ್ಷಣೆಯ ವೇಳೆ ಬಂದಾಗ, ಅವರು ಕೈಯಲ್ಲಿ ಶಸ್ತ್ರವನ್ನು ಧರಿಸಲಿಕ್ಕೆಂದೂ ಹಿಂದುಮುಂದು ನೋಡುತ್ತಿರಲಿಲ್ಲ.

ರಾಜ ಧರ್ಮ:— ಹೀಗೆ ಋಷಿಗಳು ಸ್ವಯಂ ಶೂರರಿದ್ದರೂ

ಅವರ ಕ್ಷೇಮ ನೆಮ್ಮದಿಗಳನ್ನು ಆಗಾಗ್ಗೆ ನೋಡಿಕೊಂಡು ಅವರ ತಪ್ಪಾಚರಣೆಗೆ ಲೋಪವುಂಟಾಗದಂತೆ ರಾಜನು ಕಾಯ್ದಿರಬೇಕಾಗುತ್ತಿತ್ತು; ಲೋಕಾರಾಧನೆಯೇ ಅರಸನ ಮೂಲಕರ್ತವ್ಯವಾದ್ದರಿಂದ ಅದರೆಳಗೆ ರಾಜನಿಂದ ರಪೆಯಷ್ಟು ತಪ್ಪಾದರೆ, ಅರಸನ ಕೈಹಿಡಿದು ಕೇಳುವ ಅಧಿಕಾರವು ಪ್ರಜೆಗಳಿಗಿತ್ತು; ಆ ಕಾಲದ ಅರಸನೆಂದರೆ ಪ್ರಜೆಗಳ ನಾಕುತಂದೆ. ಈ ಮಾತನ್ನು ನಾವು ಮನಗಾಣಬೇಕೆಂದರೆ, ನಮಗೆ ರಾಮಾಯಣದೊಳಗೆ ಹಲವು ದೃಷ್ಟಾಂತಗಳು ಮುಂಬರುತ್ತವೆ; ದಶರಥಮಹಾರಾಯನು ಬೇಟೆಯಾಡಲಕ್ಕೆ ಹೋದಾಗ ಕಾಡುಮೃಗವೊಂದು ನೀರು ಕುಡಿಯಲಕ್ಕೆ ಬಂದಿರುವದೆಂಬ ಎಣಿಕೆಯಿಂದ, ನೀರಡಿಸಿದ ಮುನಿತಾಯಿತಂದೆಗಳಿಗಾಗಿ ನೀರು ತರಲಿಕ್ಕೆ ಬಂದ ಬಬ್ಬನನ್ನು ಕೊಂದ ಕಥೆಯು ರಾಮಾಯಣದಲ್ಲಿ ಬರುತ್ತದಷ್ಟೇ! ಆತನನ್ನು ಕೊಂದ ನಂತರ ದಶರಥಮಹಾರಾಯನು ಹೋಗಿ ನೋಡುತ್ತಾನೆ. ಅವನಿಗೆ ಮನುಷ್ಯನು ಸತ್ತುಬಿದ್ದುದು ಕಾಣಿಸಿತು. ತತ್ಕ್ಷಣವೇ ಅವನು ಆ ಹೆಣವಲ್ಲ ನೀರು ತುಂಬಿಕೊಂಡು ಸತ್ತ ಮನುಷ್ಯನ ಮುದಿತಾಯಿ ತಂದೆಗಳೆಲ್ಲಿರುವರೆಂದು ಹುಡುಕುತ್ತ ಹೋಗಿ, ಕಾಣದೆ ತನ್ನಿಂದಾದ ಅಪರಾಧಕ್ಕಾಗಿ ಕ್ಷಮೆಯಿರಬೇಕೆಂದು ಕೈಕಾಲು ಕಟ್ಟಿಕೊಳ್ಳುತ್ತಿರುವದನ್ನು ಕಂಡರೆ ಯಾರಿಗಾದರೂ ತತ್ಕಾಲೀನ ರಾಜಧರ್ಮ, ಕರ್ತವ್ಯಪರಾಯಣತೆ, ವಿನಯಾದಿ ಗುಣಗಳ ಬಗ್ಗೆ ಸೋಜಿಗವೆನಿಸುತ್ತದೆ. ಎಲ್ಲರನ್ನು ಕಾಪಾಡುವವನಾದ ದಶರಥಸಂಧ ಪ್ರತಾಪಶಾಲಿಯಾದ ಅರಸನಿಗೆ ತನ್ನ ಕೈಯಿಂದಾದ ತಪ್ಪನ್ನು ಮುಚ್ಚಿಕೊಳ್ಳುವದಾಗಲಿ, ಅದರ ಬಗ್ಗೆ ಯಾರೂ ಬಾಯಿಬಿಡದಂತೆ ಮಾಡುವದಾಗಲಿ ಅನಾಧ್ಯವಿರಲಿಲ್ಲ; ಅದರೂ ಅರಸನ ತಪ್ಪಾದರೂ, ತಪ್ಪೆಂಬುದು ಅರಸನಲ್ಲ; ಅದು ತಪ್ಪೇ; ಹೆಚ್ಚಿಗೇನು! ಪ್ರಜೆಗಳಲ್ಲಿಯು ಪ್ರತಿಯೊಬ್ಬರ ಜೀವಕ್ಕೂ, ಜೀವರಕ್ಷಣೆಗೂ ಹೊಣೆಯಾದ ನರಪತಿಯಾ ಅಜ್ಞಾನದಿಂದ ಕೇವಲ ಬೇಟೆಯ ಮೋಹಕ್ಕೊಳಗಾಗಿ ಮನುಷ್ಯನನ್ನು ಕೊಲ್ಲುವದೆಂದರೆ ನಾಮಾನ್ಯವಾದ ತಪ್ಪಲ್ಲ; ದಶರಥಮಹಾರಾಯನು ಕ್ಷಾತ್ರಧರ್ಮ ರಹಸ್ಯವನ್ನು ಬಲ್ಲವನಾಗಿದ್ದನು; ತನ್ನ ತಪ್ಪನ್ನು ತಾನು ಅರಿತು ಕ್ಷಮೆ ಬೇಡಿಕೊಳ್ಳುವದೇ

ಭೂಷಣವೆಂದು ಮನಗಂಡವನಾದ್ದರಿಂದ ಆ ಮುದಿ ಅನಾಥರ ಮುಂದೆ ಆಡ್ಡಬಿದ್ದು ನೆರಗೊಡ್ಡಿ ಕ್ಷಮಾಪಣೆಗಾಗಿ ಕೇಳಿಕೊಂಡನು! ಈತನಿಗೆನ್ನ ಬೇಕು ಅರಸನೆಂದು! ಯಾವಾತನ ಮುಂದೆ ಕಿರೀಟಮುಕುಟಗಳನ್ನು ಧರಿಸಿದ ಮಾಂಡಲಿಕರಾಜರು ನೆಲಕ್ಕೆರಗಿ ಉರುಳಾಡುತ್ತಿದ್ದರೋ, ಅಂಧವನು ದಿಕ್ಕಿಲ್ಲದ ವೃದ್ಧಜನರ ಮುಂದೆ ನಿಂತು ಚಿಕ್ಕ ಬಾಲಕನಂತೆ ಬೇಡಿಕೊಳ್ಳುವದೆಂದರೆ, ವಿನಯದ ಪರಾಕಾಷ್ಠೆಯೇ ಸರಿ! ಇದೇ ರಾಜರ ನಿಜವಾದ ಸಂಪತ್ತು, ನಿಜವಾದ ಶಕ್ತಿಯೆಂಬುದನ್ನು ಪೂರ್ವ ಕಾಲದ ರಾಜರು ತಿಳಿದಿದ್ದರು. ಅದರಂತೆಯೇ, ರಾಮನು ರಾಜ್ಯವಾಳುತ್ತಿರಲು, ಒಬ್ಬ ಬ್ರಾಹ್ಮಣನ ಮಗನು ಅಕಾಲದಲ್ಲಿಯೇ ನಾಯಲು, ಆ ಮಡಿವಾಳನು ಅರಸನ ಬಳಿ ಹೋಗಿ "ರಾಜನೇ, ನಿನ್ನ ರಾಜ್ಯದೊಳಗೇನಾದರೂ ಅನ್ಯಾಯ, ದುರಾಚರಣೆ ನಡೆದುದರಿಂದ ನನ್ನ ಮಗನು ಮಡಿದನು; ಈ ತಪ್ಪಿಗೆ ನೀನು ಕಾರಣ;" ಎಂದು ರಾಜನಿಗೆ ತೊಣೆಗಾರನನ್ನಾಗಿ ಹಿಡಿದನಂತೆ! ಒಡನೆಯೇ, ರಾಮನು ಹೊರಹೊರಟು, ಶಂಬೂಕನೆಂಬ ಶೂದ್ರನು ತನ್ನ ವರ್ಣೋಚಿತಕಾರ್ಯವನ್ನು ಬಿಟ್ಟು, ತಪಸ್ಸು ಮಾಡುತ್ತಿದ್ದುದನ್ನು ಕಂಡು, ರಾಮನು ಅವನನ್ನು ದಂಡಿಸಿದನಂತೆ! ಸ್ವಧರ್ಮದಿಂದ ನಡೆದುಕೊಂಡರೇನೇ ಮನುಷ್ಯನಿಗೆ ಬೇಕಾದ್ದು ಶಿಗುತ್ತಿರಲು, ಪರಧರ್ಮದ ಕಡೆಗೆ ನೋಡುವದೇಕೆ? ಏನದು ಕರ್ತವ್ಯ ಜಾಗ್ರತೆ! ಪ್ರಜೆಗಳ ವಿಷಯದಲ್ಲಿ ಕಂಡುಬರುವ ಪುತ್ರವಾತ್ಸಲ್ಯವೆಷ್ಟದು? ಪ್ರಜೆಗಳ ಸುಖಕ್ಕಾಗಿ ಮಡದಿಮಕ್ಕಳನ್ನೂ, ಸ್ನೇಹವಾತ್ಸಲ್ಯಗಳನ್ನೂ, ಕೊನೆಗೆ ಸ್ವಸುಖವನ್ನೂ ತೊರೆಯುವ ಆ ಸತ್ಪುರುಷಶಾಲಿಗಳಾದ ರಾಜರನ್ನು ಎಷ್ಟು ನಾಲಿಗೆಯಿಂದ ಹೊಗಳಲು ಸಾಧ್ಯವು!

ರಾಕ್ಷಸರು:—ರಾಮಾಯಣದೊಳಗೆ ರಾಕ್ಷಸರೆಂಬ ಶಬ್ದವು ಸರ್ವ ಸಾಮಾನ್ಯವಾಗಿದೆ; ರಾಕ್ಷಸರೆಂಬುದೊಂದು ಭೀಕರವಾದ ಬೇರೆ ಜಾತಿಯೇ ಇತ್ತೆಂಬುದು ಹಿಂದೂಗಳಿಗೆ ಆ ಹೆಸರಿನಿಂದಲೇ ಸ್ಪಷ್ಟವಾಗುತ್ತದೆ; ರಾಕ್ಷಸರ ಕಲ್ಪನೆಯೆಂದರೆ, ಕಪ್ಪು ಮೈಬಣ್ಣದವರೂ, ನಾಲಿಗೆ ಚಾಚಿದವರೂ, ಕೂದಲು ಬಿಟ್ಟವರೂ, ಕೆಂಡದಂಥ ಕಣ್ಣಿನವರೂ, ಹುಲಿಯಂಥ ದಾಡೆಯವರೂ, ಇದ್ದಿರಬಹುದೆಂದು ಸಾಮಾನ್ಯ ತಿಳುವಳಿಕೆ.

ರಾಕ್ಷಸರು ಸಾಧಾರಣವಾಗಿ ಕಪ್ಪುಬಣ್ಣದವರೂ, ನಿಲುವಿಕೆಯಿಂದಲೂ, ದೇಹದಾರ್ಢ್ಯದಿಂದಲೂ ಬಲು ಎತ್ತರರೂ, ಗಟ್ಟಿಗರೂ ಇರುವದರಿಂದ ಅವರ ವರ್ಣನೆಗಳೆಲ್ಲ ಅಂಬಿಕೆಯನ್ನುಂಟು ಮಾಡುವಂಥವುಗಳಾಗಿವೆ; ಆದರೂ, ರಾಕ್ಷಸರಲ್ಲಿ ರೂಪಸಂಪನ್ನರು ಇರಲೇ ಇಲ್ಲವೆಂತಲ್ಲ; ರಾವಣನ ಅನೇಕ ಹೆಂಗಸರು ಬಹು ಸಂಪನ್ನರಿದ್ದರೆಂಬ ಬಗ್ಗೆ ವರ್ಣನೆ ಇದೆ. ರಾಕ್ಷಸರು ಮಾಂಸ ಭಕ್ಷಕರೂ, ಪರಪೀಡಕರೂ ಆಗಿದ್ದರು. ರಾವಣನಿಗೆ ಹತ್ತು ತಲೆಗಳಿರುವ ಸಂಗತಿಯು ಅನೇಕರಿಗೆ ವಿಲಕ್ಷಣವಾಗಿ ಕಾಣುತ್ತದೆ. ಮತ್ತು ಅದು ವಿಲಕ್ಷಣ ಕಾಣುವಷ್ಟು ಅಲಂಕಾರಿಕವೂ ಸುಳ್ಳೂ ಇದೆ; ದಶಮುಖ ಅಂದರೆ, ಹತ್ತು ಜನರಷ್ಟು ಬಲವುಳ್ಳವನೆಂದರ್ಥ. ರಾವಣನು ಪುಲಸ್ತ್ಯಋಷಿಯ ಮಗನು; ಒಂದು ಮುಖದ ತಂದೆಯಿಂದ ಹತ್ತು ಮುಖದ ಮಗನು ಹುಟ್ಟುವದೆಂತು?

ರಾಮಾಯಣದೊಳಗಿನ ವಾನರರು ಮಂಗಗಳೋ?

ರಾಮಾಯಣವನ್ನು ಕೇಳಿದವರಿಗೆ ವಾನರರುಮಂಗಗಳಲ್ಲವೇ ಎಂದು ಕೇಳಿದರೆ, ಯಾರಾದರೂ 'ಹೌದು;ಮಂಗಗಳೇ!' ಎಂದು ಹಿಂದುಮುಂದೆ ನೋಡದೆ ಉತ್ತರ ಕೊಡಬಹುದು. ಆದರೆ ವಾನರರು ಮಂಗಗಳಲ್ಲ; ಕಾಡುಜಾತಿಯ ಜನರು; ವಾಲ್ಮೀಕಿಋಷಿಗಳು ಕಪಿಗಳೆಂದು ಅಲಂಕಾರಿಕವಾಗಿ ಹೇಳಿರುವರೆಂದು ಇತ್ತೀಚೆಯ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವಾನರಾಧಿಪನಾದ ಸುಗ್ರೀವನು ತನ್ನ ಮಂತ್ರಿಯಾದ ಹನುಮಂತನನ್ನು ತಾಪಸವೇಷಧಾರಿಗಳಾದ ಶ್ರೀರಾಮಲಕ್ಷ್ಮಣರ ವೃತ್ತಾಂತವನ್ನು ವಿಚಾರಿಸಲಿಕ್ಕೆಂದು ಕಳಿಸಿದನಷ್ಟೇ! ಆಗ ಹನುಮಂತನು ಶ್ರೀರಾಮಲಕ್ಷ್ಮಣರನ್ನು ಸಮೀಪಿಸಿ, ಸಂಸ್ಕೃತ ಭಾಷೆಯಿಂದ ಮಾತನಾಡತೊಡಗಿದನು. ಹನುಮಂತನ ಮಾತುಗಾರಿಕೆಯನ್ನು ಕೇಳಿ, ಶ್ರೀರಾಮಚಂದ್ರನು ಲಕ್ಷ್ಮಣನನ್ನು ಕುರಿತು "ಋಗ್ವೇದ, ಯಜುರ್ವೇದ, ಸಾಮವೇದಾದಿಗಳನ್ನು ಅಧ್ಯಯನ ಮಾಡಿ ವಿನೀತನಾಗದವನು ಈ ಬಗೆಯಾಗಿ ಮಾತನಾಡಲು ಸಾಧ್ಯವಿಲ್ಲ; ಈತನು ಇಡೀ ವ್ಯಾಕರಣಶಾಸ್ತ್ರವನ್ನೇ ನುಂಗಿ ನೀರು ಕುಡಿದಿರುವಂತೆ ಕಾಣು

ತ್ತದೆ" ಎಂದು ಅಡಿರುವನು. ವೇದಾಂತಜ್ಞಾನವನ್ನು ಪಡೆದು ಶ್ರೀರಾಮ ಚಂದ್ರ ಲಕ್ಷ್ಮಣರಂಥ ದೇವಾಂಶಸಂಭೂತರಾದವರು ಬೆರಗುಗೊಳ್ಳುವಂತೆ ಅಸ್ಖಲಿತವಾಗಿ ಮಾತನಾಡುವ ಹನುಮಂತನು ಸುಗ್ರೀವಾದಿಗಳು ಬಾಲುಳ್ಳ ವಾನರರಿರಬಹುದೋ ಹೇಗೆಂಬುದು ಚೆನ್ನಾಗಿ ಊಹಿಸತಕ್ಕ ಸಂಗತಿಯಾಗಿದೆಯಲ್ಲವೇ?

ರಾಮಾಯಣಕಾಲದ ಸೀಮಾ ಪುರುಷರು:- ಆಯಾ ಕಾಲದ ಸೀಮಾಪುರುಷರು ಆಯಾ ಕಾಲಕ್ಕೆ ಜೀವಾಳರಾಗಿರುತ್ತಾರೆ. ಇವರು ಹುಟ್ಟಿದ ಕಾಲವೆಂದರೆ,ಜೀವನಿಲ್ಲದ ಕಾಲವೇ. ಇತಿಹಾಸದೊಳಗೆ ಇಂಥ ಪುರುಷರು ಅಲ್ಲಲ್ಲಿ ಹುಟ್ಟಿ ತಮ್ಮ ತೇಜಃಪುಂಜವಾದ ಜೀವಮಾನದಿಂದ ಜನಾಂಗದ ಜೀವವಾಗಿಯೇ ಉಸಿರಾಡಿಸುತ್ತಾರೆ; ರಾಮಾಯಣಕಾಲದೊಳಗೆ ಆಗಿ ಹೋದ ಪುರುಷಶ್ರೇಷ್ಠರಲ್ಲಿ ವಾಲ್ಮೀಕಿಋಷಿಗಳು, ವಿಶ್ವಾಮಿತ್ರ, ಶ್ರೀರಾಮಚಂದ್ರಭಗವಾನ್, ಶ್ರೀಹನುಮಂತ, ಅವರುಗಳೇ ಸೀಮಾಪುರುಷರೆಂದು ಎಣಿಸಬಹುದು.

ವಾಲ್ಮೀಕಿಋಷಿಯು ಬೇಡನೋ, ಬ್ರಾಹ್ಮಣನೋ?

ವಾಲ್ಮೀಕಿಋಷಿಗಳು ಜಾತಿಯಿಂದ ನೂದಲು ಬೇಡರವರು, ಮುಂದೆ ನಾರದರ ಉಪದೇಶದಿಂದ ರಾಮನಾಮ ಮಂತ್ರವನ್ನು ಜಪಿಸಿ, ಬ್ರಾಹ್ಮಣತ್ವವನ್ನೂ, ಮುಂದೆ ಋಷಿತ್ವವನ್ನೂ ಹೊಂದಿದರೆಂದು ಹೇಳುವ ವಾಡಿಕೆಯುಂಟು; ಆದರೆ, ವಾಲ್ಮೀಕಿರು ಹೊದಲೇ ಜಾತಿಯಿಂದ ಬ್ರಾಹ್ಮಣರಾಗಿದ್ದರೂ, ದೈವವಶಾತ್ ಬೇಡರ ಹೋರೆಯಿಂದ ತಮ್ಮ ಜೀವನವನ್ನು ನಾಗಿಸುವಂಥ ದುಷ್ಕರ್ಮವಿಶೇಷವು ಅವರ ಪಾಲಿಗೆ ಬಂದಿತ್ತು; ಬ್ರಾಹ್ಮಣನೂ, ಗಟ್ಟಿಗನೂ, ದೇಹದಾರ್ಢ್ಯವುಳ್ಳವನೂ ಇದ್ದು, ಹೀಗೆ ದಾರಿಕಾರರನ್ನು ಸುಲಿಯುವ ದುರಾಚಾರಕ್ಕೆ ಬಿದ್ದು ಪಾಟುಪಡುತ್ತಿರುವದನ್ನು ಕಂಡು ಲೋಕಾನುಗ್ರಹಾರ್ಥವಾಗಿ ಸಂಚರಿಸುತ್ತಿರುವ ಶ್ರೀಮನ್ನಾರದರಿಗೆ ಏನೋ, ಆ ಬ್ರಾಹ್ಮಣಬೇಡನ ಬಗ್ಗೆ ಕನಿಕರವುಂಟಾಯಿತು. ಆಗ ನಾರದರನ್ನೂ ಸುಲಿಯಲಿಕ್ಕೆಂದು ತವಕಪಡುತ್ತಿರುವ ಆ ಬೇಡನನ್ನು ನಾರದರು ಕೆಣಕಿ "ಏನಯ್ಯಾ? ನನ್ನನ್ನು ನೀನೇಕೆ ಸುಲಿದುಕೊಳ್ಳುವಿ! ಮನುಷ್ಯರನ್ನು ಹಿಂಸೆಪಡಿಸಿ, ಅವರಲ್ಲಿ

ದ್ದುದನ್ನು ದೋಚಿಕೊಳ್ಳುವದು ಪಾಪಕರ್ಮವಲ್ಲವೇ? ನೀನು ಮಾಡುವ ಈ ಪಾಪಕಾರ್ಯಕ್ಕೆ ನೀನೊಬ್ಬನಲ್ಲದೆ ಇನ್ನಾರು ಪಾಲುಗಾರರು! ಹೆಂಡಿರು ಮಕ್ಕಳ ಪೋಷಣೆಗಾಗಿ ನೀನೇನೋ ಈ ಪಾಪಕರ್ಮವನ್ನಾಚರಿಸುತ್ತಿರುವೆ; ಆದರೆ ಈ ನಿನ್ನ ಪಾಪಾಚರಣೆಯ ಫಲವನ್ನುಣ್ಣಲು ಮುಂದೆ ನಿನ್ನ ಹೆಂಡಿರು ಮಕ್ಕಳು ಹೊಣೆಗಾರರಾಗುವರೇ? ಎಂಬುದನ್ನು ನಿನ್ನ ಹೆಂಡಿರು ಮಕ್ಕಳನ್ನೇ ಕೇಳಿಕೊಂಡು ನನಗೆ ಅವರು ಕೊಟ್ಟ ಉತ್ತರವನ್ನು ಹೇಳೆಂ"ದರು. ಆ ಮರುಳ ಬೇಡನು ನಾರದರ ಮಾತಿಗೆ ಮೆಚ್ಚಿ ನಾರದಮಹರ್ಷಿಗಳು ಹೇಳಿದ ಮಾತುಗಳನ್ನು ಕೇಳಿಕೊಳ್ಳಲಾಗಿ ಅವರೆಲ್ಲರೂ "ನಿನ್ನ ಪಾಪಕರ್ಮಕ್ಕೆ ನಾವೇಕೆ ಹೊಣೆಗಾರರಾಗುವದು? ನಮ್ಮ ಹೊಟ್ಟೆಗೆ ಹಾಕುವದು ನಿನ್ನ ಕರ್ತವ್ಯವಿರುವದರಿಂದ ನೀನು ಕಷ್ಟಪಡುತ್ತಿರುವೆ." ಎಂದು ನುಡಿದ ಬಿರುನುಡಿಯು ಕಿವಿಗೆ ಬೀಳಲು, ಬೇಡನಲ್ಲಿ ಅಡಗಿಕೊಂಡಿರುವ ಜ್ಞಾನದ ಕದವು ತೆರೆಯಿತು. ಆತನ ಅಂತಃಕರಣದೊಳಗೆ ಇದು ವರೆಗೆ ಮುಸುಕಿಕೊಂಡಿದ್ದ ಕತ್ತಲೆಯಡಗಿ, ಬೆಳಕಿನ ಕಿರಣಗಳು ಮೂಡಿದವು. ಆಗ ನಾರದರ ಪಾದಕ್ಕೆರಗಿ ನನ್ನ ಉದ್ಧಾರದ ದಾರಿ ಯಾವುದೆಂಬದನ್ನು ತೋರಿಸಿ ಅನುಗ್ರಹ ಮಾಡಬೇಕೆಂದು ಬೇಡಿಕೊಳ್ಳಲು ನಾರದರು ಅವನಿಗೆ ರಾಮನಾಮವೆಂಬ ಮಾಟದ ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು. ಬೇಡನಿಗೆ ಮೊದಲು ರಾಮ ಶಬ್ದವನ್ನು ಸಹ ಚನ್ನಾಗಿ ಉಚ್ಚರಿಸಲಿಕ್ಕೆ ಬಾರದ್ದರಿಂದ ಅವನು 'ಮರಾ, ಮರಾ' ಎಂದು ಹೇಳಲಿಕ್ಕೆ ಪ್ರಾರಂಭಿಸಿ ಕ್ರಮೇಣ, ಆ ರಾಮನಾಮದ ಪೆಟ್ಟುಬಿದ್ದು ತಲೆಗೇರಿ, ತನ್ಮಯನಾಗಿ ಹೋದನು; ಈ ಸ್ಥಿತಿಯಲ್ಲಿ ಅಡವಿಯೊಳಗೆ ಧ್ಯಾನಕ್ಕಾಗಿ ಕುಳಿತ ಬೇಡನ ಮೇಲೆ, ಇರುವೆಗಳು ತಮ್ಮ ಹುತ್ತನ್ನು ಕಟ್ಟಿಕೊಂಡು ಇರಲಾರಂಭಿಸಿದವು; ಇಷ್ಟಾದರೂ, ಆ ಬೇಡನಿಗೆ ತನ್ನ ದೇಹದ ಅರಿವು ಇರಲಿಲ್ಲ; ಹಲವು ವರ್ಷಗಳಾದನಂತರ, ನಾರದಋಷಿಗಳು ಮತ್ತೊಂದು ಸಲ ಅದೇ ದಾರಿಯಿಂದ ಹೋಗುತ್ತಿರುವಾಗ ಕಿವಿಗೆ ರಾಮ ಶಬ್ದದ ಗರ್ಜನೆಯು ಬಿದ್ದೊಡನೆ, ಹಿಂದಣ ವೃತ್ತವೆಲ್ಲ ನೆನಪಾಗಿ, ನಾರದರು ಅವನನ್ನು ಕುರಿತು "ಎದ್ದೇಳು, ತಪೋಧನನೇ! ನೀನೀಗ ಋಷಿಯಾಗಿ

ರುವಿ; ನಿನ್ನೊಳಗಿನ ಪಾಪಕಲೆಯೆಲ್ಲವೂ ತೊಳೆದು ಹೋಗಿದೆ;" ಎಂದು ಹರಿಸಿದರು. ತಪಸ್ಸಿನ ಭರದಲ್ಲಿ ಇರುವೆಹುತ್ತವು ಮೈಮೇಲೆ ಬೆಳೆದು ಕೊಂಡಿದ್ದರಿಂದ, ಆತನಿಗೆ ವಾಲ್ಮೀಕಿ ಎಂದು ಹೆಸರಾಯಿತು.

ರಾಮಾಯಣ ರಚನೆ:– ಒಂದಾನೊಂದು ದಿನ ವಾಲ್ಮೀಕಿಮಹರ್ಷಿಗಳು ಶಿಷ್ಯರನ್ನೊಡಗೊಂಡು ಗಂಗಾತೀರಕ್ಕೆ ಸ್ನಾನಾರ್ಥವಾಗಿ ಹೊರಟರು; ದಾರಿಯಲ್ಲಿ, ಒಂದು ಮರದ ಮೇಲೆ ಗಂಡು ಹೆಣ್ಣು ವಾರಿವಾಳಗಳು ಒಂದಕ್ಕೊಂದು ಮುದ್ದು ಕೊಡುತ್ತ ರಮಿಸುತ್ತಿದ್ದವು; ಇವುಗಳನ್ನು ಕೊಲ್ಲಬೇಕೆಂದು ಹೊಂಚುಹಾಕಿಕೊಂಡು ಕುಳಿತಂಧ ಒಬ್ಬ ಬೇಡನು ಗಂಡು ಪಾರಿವಾಳವನ್ನು ಗುರಿಯಿಟ್ಟು ಹೊಡೆದದ್ದರಿಂದ, ಆ ಗಂಡು ಹಕ್ಕಿಯು ವಿಲಿವಿಲಿ ಒದ್ದಾಡುತ್ತ ನೆಲಕ್ಕುರುಳಿದ್ದನ್ನೂ, ಹೆಣ್ಣು ಹಕ್ಕಿಯು ಅದರ ಜೊತೆಯಲ್ಲಿನೇ ಕೆಳಗೆ ಬಿದ್ದು, ಬಳಲಿ ಬಾಯ್ಬಿಡುತ್ತಿರುವ ದುಃಖದ ನೋಟವನ್ನೂ ಕಂಡು ತಾಳಲಾರದೆ, ಹಿಂತಿರುಗಿ ಆ ಬೇಡನನ್ನು ನೋಡಿದೊಡನೆ ಋಷಿಯ ಬಾಯಿಂದ—

"ಮಾನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ॥"

ಈ ಶ್ಲೋಕವು ಸ್ವಚ್ಛಂದವಾಗಿಯೇ ಹೊರಹೊಮ್ಮಿತು. ಕೂಡಲೆ, "ಬ್ರಹ್ಮರ್ಷಿಯೇ! ನಿನ್ನ ಮುಖದಿಂದ ಸರಸ್ವತಿಯು ಛಂದೋಬದ್ಧವಾಗಿ ತನ್ನಾರೆ ಹರಿಯುತ್ತಿದ್ದಾಳೆ! ಪ್ರಪಂಚದ ಕ್ಷೇಮಕ್ಕಾಗಿ ನಿನ್ನ ಅಮೋಘವಾದ ವಾಣಿಯಿಂದಲೇ ಶ್ರೀರಾಮಚಂದ್ರನ ಚರಿತ್ರೆಯನ್ನು ಹಾಡು." ಎಂದು ಆಕಾಶವಾಣಿಯಾಯಿತು; ಆ ಮೇಲೆ ಮುಂದಾಗುವ ರಾಮಾವತಾರಮಾಹಾತ್ಮೆಯನ್ನು ಕುರಿತು ಶ್ರೀವಾಲ್ಮೀಕಿ ಋಷಿಗಳು ರಾಮಾಯಣ ಪುರಾಣವನ್ನು ಹಾಡಿದರು. ಸಂಸ್ಕೃತ ಭಾಷೆಯಲ್ಲಿ ಛಂದೋಬದ್ಧವಾಗಿ ಹೊರಟ ವಾಣಿಯು ವಾಲ್ಮೀಕಿಋಷಿಗಳಿಂದಲೇ ಮೊದಲು; ಆದ್ದರಿಂದ ವಾಲ್ಮೀಕಿಗೆ 'ಆದ್ಯಕವಿ' ಯೆಂದು ಮೊದಲು ಮರ್ಯಾದೆಯಿದೆ; ರಾಮಾಯಣವು ಆರ್ಯಸಂಸ್ಕೃತಿಯ ಚರಿತ್ರೆಯಲ್ಲೊಂದು ಶಾಶ್ವತವೂ, ಅಮರವೂ ಆದ ಶ್ರೇಷ್ಠ ಕಾವ್ಯವಾಗಿ ಮೆರೆಯುತ್ತಿದೆ.

ವಸಿಷ್ಠ–ವಿಶ್ವಾಮಿತ್ರ:–ರಾಮಾಯಣದೊಳಗೆ ಅಡಿಗಡಿಗೆ ಎದುರುಬಂದು, ಶ್ರೀರಾಮಚಂದ್ರನ ಕಾರ್ಯಕ್ಕೆ ನೆರವಾಗುವ ಎಂದೆರಡು ವಿಭೂತಿಗಳಲ್ಲಿ ವಸಿಷ್ಠ, ವಿಶ್ವಾಮಿತ್ರ ಅವರಿಬ್ಬರು ಮಹರ್ಷಿಗಳ ಹೆಸರನ್ನು ಮರೆತರೆ, ರಾಮಾಯಣ ಕಾಲದಲ್ಲಿ ಭಾರತೀಯಜನಾಂಗದ ಕಟ್ಟುವಿಕೆಗೆ ಮೂಲವಾದ ಎರಡು ಶಕ್ತಿಗಳನ್ನೇ ನಾವು ಕಣ್ಮರೆ ಮಾಡಿದಂತಾಗುವದು; ವಿಶ್ವಾಮಿತ್ರರು ತೇಜೋವಿಶಿಷ್ಟರಾದ ಕ್ಷತ್ರಿಯ ರಾಜರು; ವಸಿಷ್ಠರು ಋಷಿಗಳು; ವಿಶ್ವಾಮಿತ್ರರು ಕ್ಷಾತ್ರತೇಜಸ್ಸಿನಿಂದುಕ್ಕುವ ಮೂರ್ತಿ; ವಸಿಷ್ಠರು ಬ್ರಹ್ಮತೇಜಸ್ಸಿನ ಪುತ್ಥಳಿ; ವಿಶ್ವಾಮಿತ್ರರಾಜರಿಗೆ ವಸಿಷ್ಠಮಹರ್ಷಿಗಳಲ್ಲಿರುವ ಕಾಮಧೇನುವಿನ ಬಗ್ಗೆ ಆಸೆ ಹುಟ್ಟಿತು. ವಸಿಷ್ಠರು ತಮ್ಮ ಸಾರಸರ್ವಸ್ವವಾದ ಕಾಮಧೇನುವನ್ನು ಕೊಡಲು ಒಪ್ಪದಿರಲು ಅವರಿಬ್ಬರಿಗೂ ಹೋರಾಟ ನಡೆದು ವಸಿಷ್ಠರ ಮುಂದೆ ವಿಶ್ವಾಮಿತ್ರರಾಜರ ಸೈನ್ಯಬಲ, ಕ್ಷಾತ್ರತೇಜದ ಆಟ ನಡೆಯದೆ ಹೋಯಿತು. ವಿಶ್ವಾಮಿತ್ರರಾಜರು ಸ್ವಾಭಾವಿಕವಾಗಿಯೇ ಬಹು ಮಹತ್ವಾಕಾಂಕ್ಷಿಯಾದವರು. ತಮಗಾದ ಸೋಲನ್ನು ಸಹಿಸದೆ, ವಸಿಷ್ಠರಂತಹ ಅಜೇಯವಾದ ಪದವಿಯನ್ನು ಪಡೆಯಲೆಳಸಿ, ರಾಜ್ಯವನ್ನು ಬಿಟ್ಟು, ಘೋರವಾದ ತಪಾಚರಣೆಗೆ ಮನಸು ಮಾಡಿ ವಸಿಷ್ಠ ಋಷಿಗಳಿಂದಲೇ ಬ್ರಹ್ಮರ್ಷಿಗಳೆಂದೆನಿಸಿಕೊಂಡು, ಕ್ಷಾತ್ರತೇಜಸ್ಸಿಗಿಂತ ಬ್ರಹ್ಮತೇಜವೇ ಮೇಲೆಂದು ಒಪ್ಪಿಕೊಂಡರು. ಈ ಬ್ರಹ್ಮರ್ಷಿಪದವಿಗಾಗಿ ವಿಶ್ವಾಮಿತ್ರರು ಪಟ್ಟಿರುವ ಶ್ರಮವೆಂದರೆ ಅದೊಂದು 'ವಿಶ್ವಾಮಿತ್ರರ ತಪಾಚರಣೆ' ಯೆಂಬ ಹೆಸರಿನಿಂದ ನಾಣ್ಣುಡಿಯಾಗಿದೆ. ಶ್ರೀರಾಮಚಂದ್ರನಿಗೆ ವಿಶ್ವಾಮಿತ್ರರೇ ಕ್ಷಾತ್ರವಿದ್ಯೆಯನ್ನು ಕಲಸಿದರೆಂದೂ, ವಸಿಷ್ಠರು ಬ್ರಹ್ಮೋಪದೇಶ ಮಾಡಿದರೆಂದೂ ನಮ್ಮ ಪುರಾಣಗಳಿಂದ ತಿಳಿಯುತ್ತದೆ. ರಾಮಾಯಣದೊಳಗೆ ವಿಶ್ವಾಮಿತ್ರರ ಲೋಕವಿಲಕ್ಷಣವಾದ ಅನೇಕ ಕಾರ್ಯಗಳ ಉಲ್ಲೇಖವಿದೆ.

ಮಹಾಭಾರತಕಾಲ:–ವೈದಿಕಕಾಲದ ಸಾಯಂಕಾಲವೂ ಕಲಿಕಾಲದ ಆರಂಭಕಾಲವೂ ಆದ್ದರಿಂದ ಭಾರತಕಾಲಕ್ಕೆ ಸಂಧಿಕಾಲವೆಂದು ಹೇಳಬಹುದು; ಹಿಂದೂಜನರು ಇದಕ್ಕೆ ದ್ವಾಪರಯುಗವೆನ್ನುವರು.

(ಕಲಿಯುಗಾರಂಭವು ಕ್ರಿ. ಶ. ಪೂರ್ವ ೩೧೦೧ ಎಂದು ಜ್ಯೋತಿಷ್ಯ ಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ;) ಈ ಕಾಲಕ್ಕೆ ಭಾರತಜನಾಂಗವು ವೈಭವ, ಸಂಪತ್ತು, ಸಂಸ್ಕೃತಿ, ಧರ್ಮ, ತತ್ವಜ್ಞಾನ, ಕಲಾಕೌಶಲ್ಯ, ಶಿಕ್ಷಣ, ರಾಜನೀತಿ, ಯುದ್ಧಶಾಸ್ತ್ರ, ಸಮಾಜಶಾಸ್ತ್ರ ಮುಂತಾದವುಗಳಲ್ಲಿ ಪರಿಪಾಕ ಹೊಂದಿ ಅತ್ಯಂತ ಘನತೆಗೇರಿತ್ತೆಂಬದಕ್ಕೆ ಮಹಾಭಾರತ ಪುರಾಣವೇ ಕೈಗನ್ನಡಿಯಾಗಿದೆ. ಮಹಾಭಾರತಕಾಲವೆಂದರೆ ಅತಿ ಪುರಾತನವಾದ ವೇದಕಾಲದ ಕೊನೆಯ 'ತಿಳಿಗಾಲವು.' ವೈದಿಕಕಾಲದಲ್ಲಿ ಕಂಡುಬರುವಂಥ ನಮ್ಮೆನುಡಿ, ಜ್ಞಾನ, ವಿಜ್ಞಾನೋತ್ಸಾಹಗಳೆಲ್ಲವೂ ಭಾರತಕಾಲಕ್ಕೆ ತಿಳಿಗಟ್ಟಿ ಬಂದು ನೆಲೆಗೆ ಬಂದು ನಿಂತುಕೊಂಡು ಜಗತ್ತೀತಲದಮೇಲೆ ಹೊಳಗಿ,ಪುರೆಯುತ್ತಿದ್ದವೆನ್ನಬಹುದು. ಅಲ್ಲಿಂದೀಚೆಯ ಕಾಲವೆಂದರೆ ಭಾರತೀಯರ 'ಇಳಿಗಾಲವು.' ಹಿಂದೂಜನಾಂಗಕ್ಕೆ ತಿರಿಗಿ ಭಾರತದಂಥ ಮಂಗಳಕರವಾದ ಕಾಲವು ಎಂದು ಒದಗುವದೋ ಒದಗಲಿ! ಆ ಕಾಲದ ಹುಳುಕಾದರೂ ಬೇರೆ ಬಗೆಯಿಂದ ಹಿಂದೂಜನರಿಗೆ ದೊರಕಬೇಕೆಂದು ಹಿಂದೂಜನರ ಹಂಬಲವಿದ್ದು, ಅದಕ್ಕಾಗಿಯೇ ಇಡೀ ಹಿಂದೂಜನಾಂಗವು ಈಗ ನೀರೊಳಗಿಂದ ಹೊರಗೆಳೆದ ಮೊಸಳೆಯಂತೆ ಒದ್ದಾಡುತ್ತಿದೆ. ದೇವರು ಈ ಪುರಾಣವಾದ ಜನಾಂಗದ ಮೊರೆಯನ್ನು ಎಂದು ಕೇಳುವನೋ ಕೇಳಲಿ!

ಭಾರತವನ್ನು ಬರೆದವರು:— ಮಹಾಭಾರತದೊಳಗೆ ಬಂದು ಲಕ್ಷ ಶ್ಲೋಕಗಳಿದ್ದು, ಅದನ್ನು ಕೃಷ್ಣದ್ವೈಪಾಯನವೇದವ್ಯಾಸರು ಬರೆದರೆಂಬುದು ಆರ್ಯರಿಗೆ ತಿಳಿದ ಸಂಗತಿಯು. ಇಡೀ ಭಾರತವು ವೇದವ್ಯಾಸರೊಬ್ಬರಿಂದಲೇ ಬರೆಯಲ್ಪಟ್ಟಿತೆಂದು ಹಳೆಯ ಜನರ ತಿಳುವಳಿಕೆಯಿದೆ; ಆದರೂ, ಇತ್ತೀಚೆ ಪಾಶ್ಚಾತ್ಯವಿದ್ಯೆಯಿಂದ ಸುಸಂಸ್ಕೃತರಾದ ನಮ್ಮ ಜನರಲ್ಲಿ ಕೆಲವು ಪಂಡಿತರು ಈ ಬಗ್ಗೆ ಆಳವಾಗಿ ಶೋಧಿಸಿ, ವ್ಯಾಸ, ವೈಶಂಪಾಯನ, ಸೌತಿ ಹೀಗೆ ಮೂವರಿಂದ ಭಾರತವು ಬರೆಯಲಾಯಿತೆಂದು ಭಾರತಾಧಾರಗಳಿಂದಲೇ ಸಿದ್ಧಾಂತಗೊಳಿಸಿದ್ದಾರೆ.*

---

* ಶ್ರೀ. ವೈದ್ಯ ಅವರ ಭಾರತದ ಉಪಸಂಹಾರವೆಂಬ ಗ್ರಂಥವನ್ನು ನೋಡಿರಿ.

ಭಾರತೀಯ ಯುದ್ಧವಾದ ನಂತರ ಬರೆದ ಭಾರತಕ್ಕೆ ಶ್ರೀವೇದವ್ಯಾಸರು 'ಜಯ' ಎಂದು ಹೆಸರು ಕೊಟ್ಟರು. ಅದನ್ನೇ ಮುಂದೆ ಜನಮೇಜಯರಾಯನಿಗೆ ಸರ್ಪಸತ್ರದ ಕಾಲಕ್ಕೆ ವ್ಯಾಸಶಿಷ್ಯರಾದ ವೈಶಂಪಾಯನರು ಬೆಳಿಸಿ ಹೇಳಿದ್ದರಿಂದ ಅದಕ್ಕೆ 'ಭಾರತ' ಎಂಬ ಹೆಸರುಂಟಾಯಿತು. ಅದನ್ನು ಕೇಳಿಕೊಂಡೇ ಸೂತನಾದ ಲೋಮಹರ್ಷಣನ ಮಗನಾದ ಸೌತಿಯು ನೈಮಿಷಾರಣ್ಯದೊಳಗೆ ಸತ್ರನಡೆಯಿಸಿದ ಋಷಿಗಳನ್ನು ಕುರಿತು ವಿಸ್ತಾರವಾಗಿ ಹೇಳಿದರು; ಆಗ 'ಮಹಾಭಾರತ' ಎಂದು ಹೆಸರು ಬಂದಿತೆಂದು ಮಹಾಭಾರತದಿಂದಲೇ ತಿಳಿಯುತ್ತದೆ.

---

೬ ನೇ ಪ್ರಕರಣ.

ಶ್ರೀಮಹಾಭಾರತ.

(ಕ್ರಿ. ಶ. ಪೂರ್ವ ೧೫೦೦—೧೦೦೦)

ಮಹಾಭಾರತದ ಮಹಿಮೆ:— ಹಿಂದೂದೇಶದ ಪ್ರಾಚೀನ ಗ್ರಂಥಗಳಲ್ಲಿ ಮುಖ್ಯವಾಗಿ ವೇದ, ಬ್ರಾಮ್ಮಣಗಳು, ರಾಮಾಯಣ, ಮಹಾಭಾರತ ಇವಿಷ್ಟೇ ಮೇಲಾದ ಹಾಗೂ ಮನ್ನಣೆ ಪಡೆದ ರಾಷ್ಟ್ರೀಯ ಗ್ರಂಥಗಳು. ಪ್ರಾಚೀನಆರ್ಯರ ಇತಿಹಾಸವನ್ನೂ, ನಡೆನುಡಿಗಳನ್ನೂ ತಿಳಿಸುವದರಲ್ಲಿ ಅರ್ಷಭಾಷೆಯಲ್ಲಿದ್ದ ವೇದಗಳು ನಮಗೆ ಎಷ್ಟರಮಟ್ಟಿಗೆ ದೀಪಸ್ತಂಭದಂತೆ ಸಹಾಯಕವಾಗಿರುವವೋ ಅಷ್ಟರಮಟ್ಟಿಗೇನೇ ಆರ್ವಾಚೀನ ಇತಿಹಾಸವನ್ನು ತಿಳಿಯಲಿಕ್ಕೆ ಎಲ್ಲರಾಡುವ ಸುಲಭ ಸಂಸ್ಕೃತಭಾಷೆಯಲ್ಲಿದ್ದ ಮಹಾಭಾರತ ಗ್ರಂಥವು ನಮಗೆ ಮಾರ್ಗದರ್ಶಕವಾಗಿದೆ. ಅಷ್ಟೇಕೆ! ಕೆಲವಂಶದಿಂದ ತತ್ವಜ್ಞಾನವನ್ನೂ, ಧರ್ಮರಹಸ್ಯವನ್ನೂ, ವೇದಕ್ಕಿಂತ ಮಹಾಭಾರತವೇ ಹೆಚ್ಚು ವಿಸ್ತಾರವಾಗಿಯೂ, ವಿಶದವಾಗಿಯೂ ಮನಸಿಗೆ ಹಿಡಿಯುವಂತೆಯೂ ಬೋಧಿಸುತ್ತದೆಂತಲೇ ಆರ್ಯರು ಮಹಾಭಾರತವನ್ನು 'ಐದನೇವೇದ'ವೆಂದು ಗೌರವಿಸಿರುವರು. ಮೇಲಾಗಿ ಭಾರತವು ತೀರಪುರಾತನವಾದ ವೈದಿಕಕಾಲವನ್ನೂ, ಈಗಣ ಕಾಲವನ್ನೂ ಕೂಡಿಸಿ ಬೆಸೆಯುವಂಥದೊಂದು ವಿಶೇಷ ಗ್ರಂಥವಾಗಿರುವದು. ಯಾರಿಗೆ ವೈದಿಕ ಗ್ರಂಥಗಳಲ್ಲಿ ಅವಗಾಹನೆಮಾಡುವಷ್ಟು ಜ್ಞಾನವಿಲ್ಲವೋ, ಅವರು ಮಹಾಭಾರತಾಮೃತವೆಂಬ ಮಹಾಸಾಗರದೊಳಗೆ ಸ್ವಚ್ಛಂದವಾಗಿ ಈಜಾಡಿದರೆ, ಅದರಿಂದ ಅವರಿಗೆ ಒಂದೇ ಕಾಲಕ್ಕೆ ವ್ಯವಹಾರಜ್ಞಾನ, ರಾಜನೀತಿ, ಧರ್ಮನೀತಿಗಳನ್ನು ಒಂದನ್ನೊಂದು ಹೇಗೆ ಬೆಸೆಯಪಡಿಸಬೇಕೆಂಬುದರ ಸೂಕ್ಷ್ಮಜ್ಞಾನವಾಗುವದು. ಧಾರ್ಮಿಕ ನೈತಿಕ ಭಾವನೆಗಳನ್ನು ಉಜ್ವಲಗೊಳಿಸುವಂಥ ಕಥೆಗಳೂ,

ವೇದಾಂತದ ಪಶ್ನೋತ್ತರಗಳೂ, ಸಂವಾದಗಳೂ, ಧರ್ಮರಹಸ್ಯಗಳೂ ಭಾರತದೊಳಗೆ ರಾಶಿರಾಶಿಯಾಗಿ ಇಡಗಿವೆ.

ಭಾರತವು ರಾಷ್ಟ್ರೀಯ ಗ್ರಂಥವು:— ಜನಾಂಗವೆಂದಮೇಲೆ ನಾನಾತರದ ಏರು-ಇಳುಕಲು, ಕೊರಕಲುಗಳೊಳಗಿಂದ ಹಾಯುಬೇಕಾದದ್ದೇ; ಇಂಥ ಸಮಯಸಂದರ್ಭಗಳಲ್ಲಿ ಯಾವುದೊಂದು ಜನಾಂಗಕ್ಕೆ ದಾರಿತೋರಿಸುವದಕ್ಕಾಗಿ ಶ್ರೇಷ್ಠಪುರುಷರು ಇದ್ದೇಇರುತ್ತಾರೆಂಬುದು ಸೊತ್ತಿನಮಾತಲ್ಲ; ಒಂದುವೇಳೆ, ಇದ್ದರೂ ಅವರಿಗಾದರೂ ಭಾರತದಂಥ ಆಪ್ತ-ಗ್ರಂಥಗಳ ಆಧಾರವಿಲ್ಲದೆ ಯಾವುದೊಂದು ಮಾತನ್ನು ಬಾಯಿಬಿಚ್ಚಿ ಆಡುವದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ರಾಮಾಯಣ ಮಹಾಭಾರತ ಗ್ರಂಥಗಳೆಂದರೆ, ಯುಗಯುಗಾಂತರಗಳಿಂದ ಜನಾಂಗದ ಕ್ಷೇಮಕ್ಕಾಗಿ ಹಗಲಿರಳೂ ಬೋಧಿಸುತ್ತ ನಿಂತಿರುವ ಮೂರ್ತಿಮಂತ ಮಹಿಮಾಪುರುಷರೇ ಸರಿ. ಇಂಥ ಪುರಾಣಕಾಲದ ಮಹಾ ಗ್ರಂಥಗಳು ಜನಾಂಗದ ಮುಂದಣ ಏಳಿಗೆಗೆ, ಸರ್ವಕಾಲದಲ್ಲಿಯೂ, ಅಕ್ಷಯವಾದ ಉತ್ಸಾಹವನ್ನೂ, ದಿವ್ಯಸ್ಫೂರ್ತಿಯನ್ನೂ, ಹೆಜ್ಜೆಹೆಜ್ಜೆಗೆ ಮನಃಶಾಂತಿಯನ್ನೂ ನೆಲೆಗೊಳಿಸಿ ಸೋತು ಸುಣ್ಣಾದ ದಾರಿಕಾರನಿಗೆ ಅಷ್ಟಷ್ಟಕ್ಕೆ ಅಮೃತದ ಗುಟಕನ್ನು ಕೊಟ್ಟು, ಜೀವತುಂಬಿಸುತ್ತವೆ. ರಸವತ್ತಾಗಿರುವ ಗ್ರಂಥಗಳೇ ಕಾವ್ಯಗಳು. ಕಾವ್ಯಗಳ ಪ್ರಾಣವೆಂದರೆ ರಸ—ಸೂಸುತ್ತಿರುವದೆಂಬುದನ್ನೇ ಕಾವ್ಯಗಳ ಮುಖ್ಯ ಲಕ್ಷಣವನ್ನಾಗಿಟ್ಟುಕೊಂಡರೆ, ಅವುಗಳಲ್ಲಿ ಮಾನವನ—ಚರಿತ್ರವೃತ್ತಗಳನ್ನೇ ಎರಕಹೊಯ್ದು ಮಾರ್ಪಡಿಸಿ, ತನ್ನಂತೆ ಮಾಡಿಬಿಡುವದೊಂದು ಹೆಚ್ಚಿನ ಗುಣವಿರುವದರಿಂದ, ಹತಾಶವಾಗಿ ನೆಲಕ್ಕೆಬಿದ್ದ ಜನಾಂಗಕ್ಕೆ ಈ ಇತಿಹಾಸಕಾವ್ಯವು ರಸಾಯನವಾಗಿ ಪರಿಣಮಿಸುವದು. ಇದನ್ನೊಡೆದು ಹೇಳಬೇಕೆಂದರೆ, ಹಿಂದೂಜನರಿಗೆ ಭಾರತ ಪುರಾಣವೆಂದರೆ, ಒಂದು ಮೇಲುಪಂಕ್ತಿಯಾದ ರಾಷ್ಟ್ರೀಯ ಗ್ರಂಥವಾಗಿರುವದಲ್ಲದೆ, ವೀರರಸಾತ್ಮಕವಾದ ಕಾವ್ಯವೂ, ಹಿಂದುಸ್ಥಾನದಲ್ಲಿರುವ ಹೆಣ್ಣುಗಂಡು, ಚಿಕ್ಕವರು ದೊಡ್ಡವರು, ವಿದ್ಯಾರ್ಥಿಗಳು, ವಿದ್ವಾಂಸರು, ಗೃಹಸ್ಥರು, ಸನ್ಯಾಸಿಗಳು ಅವರೆಲ್ಲರ ಮನೋಬುದ್ಧಿವಾಸನೆಗಳನ್ನು

ಸರಿಪಡಿಸುವದೊಂದು ಎರಕದ ಪಡಿಯಚ್ಚಾ ಆಗದೆ. ರಾಮಾಯಣ ಭಾರತಗಳು ಸೂರ್ಯಚಂದ್ರರಂತೆ ಹಿಂದುಗಳ ಮನೆಯಲ್ಲಿಯ ನಿತ್ಯ ನೂತನ ರಮಣೀಯ ಗ್ರಂಥಗಳಾಗಿವೆ. ಅವುಗಳನ್ನು ಎಷ್ಟು ಕೇಳಿದರೂ, ಹಾಡಿದರೂ, ಹೊಗಳಿದರೂ ಅವರಿಗೆ ಸಾಲದು. ಹಿಂದುಗಳು ವೇದಗಳನ್ನು ಬಿಡಬಹುದು; ಶಾಸ್ತ್ರಗಳನ್ನು ದೂರೀಕರಿಸಬಹುದು; ವೇದಾಂತದ ತತ್ವಗಳನ್ನು ಕ್ಷಣಹೊತ್ತು ಮೂಲೆಗಿರಿಸಬಹುದು; ಆದರೆ ಕ್ಷಣಹೊತ್ತು ರಾಮಾಯಣ ಭಾರತಾದಿ ಗ್ರಂಥಗಳು ಅವರ ಕಣ್ಣಿಗೆ ಬೀಳದಂತಾದರೆ, ಮನಸ್ಸು ಬೆಚ್ಚಿಬಿದ್ದು ಅರಳುಮರುಳಾಗುವದು. ರಾಷ್ಟ್ರೀಯ ಜೀವನಕ್ರಮದೆಳಗೆ ಮಹಾಭಾರತಾದಿಗಳು ಪ್ರಾಣಕ್ಕಿಂತ ಮೇಲಾಗಿರುವದರಿಂದ ಎಲ್ಲವನ್ನು ಬಿಟ್ಟರೂ ಅವನ್ನು ಬಿಡಲಾಗದು. ಹಿಂದುಸ್ಥಾನದೊಳಗಿನ ಹಣವು ತುಟ್ಟಿಸಲಿ; ಬುದ್ಧಿ ಕುದುರಲಿ; ಮನಸ್ಸು ಮಸಣಿಸಲಿ; ವೀರ್ಯವು ಹಾರಿಹೋಗಲಿ; ಬಲವು ಅಳಿಯಲಿ; ಇಷ್ಟೆಲ್ಲವನ್ನು ತಾಳಿಕೊಳ್ಳಬಹುದು. ಭಾರತೀಯರ ಜೀವನವೇ ಆಗಿ ಕ್ಷಣಕ್ಷಣಕ್ಕೆ ಭಾರತೀಯರಿಗೆ ಜೀವನಪ್ರದವಾಗಿರುವ ಮಹಾರಾಷ್ಟ್ರೀಯ ಗ್ರಂಥವಾದ ಭಾರತವು ಕರ್ನಾಟಕದಾದರೆ ಮಾತ್ರ ಭಾರತೀಯರ ಪ್ರಾಣವು ಏನು ಕೊಟ್ಟರೂ ನಿಲ್ಲದೆಂಬುದು ಖಂಡಿತವು.

ಜಗತ್ತಿನಲ್ಲಿರುವ ಎಲ್ಲ ಮಹಾಕಾವ್ಯಗಳಲ್ಲಿ ಮಹಾಭಾರತವು ಪ್ರತಿಯೊಂದು ವಿಧದಿಂದ ಬೆಳಗುತ್ತಿದೆ. ಅದರಲ್ಲಿರುವ, ಉದಾತ್ತವಾದ ನೀತಿಯುಪದೇಶವನ್ನೂ, ವ್ಯಾವಹಾರಿಕವಾದ ಜಾಣತನವನ್ನೂ, ಧರ್ಮಾಧರ್ಮಗಳ ಸೂಕ್ಷ್ಮಭೇದವನ್ನೂ, ಸೃಷ್ಟಿಸೌಂದರ್ಯದ ವರ್ಣನೆಯನ್ನೂ, ಹಿಡಿದರೆ, ಮನಸು ಪರಿಪಕ್ವವಾಗುತ್ತದೆ; ಪುಷ್ಟವಾಗುತ್ತದೆ. ಹಲವು ರಸಗಳನ್ನು ಹಲವು ತೆರವಾಗಿ, ಹಲವು ವ್ಯಕ್ತಿಗಳ ಬಾಯಲ್ಲಿ ನುಡಿಸಿ ಶ್ರೀವೇದವ್ಯಾಸರು ತುಳುಕಾಡಿಸಿದ್ದರೂ, ಇಡೀ ಭಾರತವನ್ನೇ ವ್ಯಾಸ ಮಹರ್ಷಿಗಳು ಹೇಳಿದ ಧರ್ಮವೆಂಬ ಸರ್ವಾತಿಶಾಯಿಯಾದ, ಸರ್ವವ್ಯಾಪಕವಾದ ಸೂತ್ರದೊಳಗೆ ಪೋಣಿಸಿರುವರೆಂಬುದು ಬಿಡದು ಕಾಣುತ್ತದೆ. ಮಹಾಕವಿಗಳಾದ ವ್ಯಾಸರ ವಾಣಿಯು ಯಾರ ಚರಿತ್ರೆಯನ್ನೇ ಬಣ್ಣಿಸಲಿ, ಯಾವ ತರದ ಮನರಂಜನೆಯ ಕಥೆಯನ್ನೇ ಹೇಳಲಿ,

ಯಾವ ವಿಷಯದ ಕಡೆಗೆ ಹರಿಯಲಿ, ಕೊನೆಗೆ ಧರ್ಮವೇ ಗತಿಯೆಂಬ ಪಲ್ಲವಿಗೆ ಬಂದಿಳಿಯದೇ ಅವರಿಗೆ ಸಮಾಧಾನವೇ ಇಲ್ಲ; ಜೀವಮಾನದ ಪ್ರವಾಸದೊಳಗೆ ಸುಖದುಃಖಗಳೆಂಬ ತೆಗ್ಗುದಿನ್ನೆಗಳೂ, ಹೊಳೆಹಳ್ಳ ಗಳೂ, ಮನುಷ್ಯನಿಗೆ ಬಿಟ್ಟವುಗಳಲ್ಲ; ಹೊತ್ತು ಬಂದಂತೆ, ಮನುಷ್ಯನು ಪ್ರಸಂಗಕ್ಕೆ ಬೆನ್ನು ಕೊಡಲೇಬೇಕು; ಆದರೆ ಹೀಗೆ ಬೆನ್ನು ಗೊಟ್ಟು ದಾರಿ ನಡೆಯುತ್ತಿರುವಾಗ್ಗೆ, ಧರ್ಮದ ಮೇಲಿನ ಅವನ ಗುರಿಯು ಎಂದೂ ನಡಲಿ ಜಾರಲಿಕ್ಕಾಗದು; ಅದನ್ನೊಂದು ಕೈಬಿಟ್ಟರೆ, ಮನುಷ್ಯನ ವೃತ್ತವೇ ಹಾಳಾಗುವದು; ಹೊಳೆಯಲ್ಲಿ ಹುಣಸೀಹಣ್ಣು ತೊಳೆದಂತಾ ಗುವದು; ಆದುದರಿಂದ, ಶ್ರೀವ್ಯಾಸರು "ಇದೋ? ಎರಡೂ ಕೈಗಳ ನ್ನೆತ್ತಿ ಕೂಗುತ್ತಿರುವೆನು; ಆದರೂ ನನ್ನನ್ನಾರೂ ಲಕ್ಷಿಸುವದಿಲ್ಲವಲ್ಲ! ಧರ್ಮದಿಂದ ಅರ್ಥ, ಕಾಮಗಳು ಕೈಸೇರುತ್ತವೆಂದಮೇಲೆ, ಇಂಥ ಧರ್ಮವನ್ನೇಕೆ ಆಶ್ರಯಿಸುವದಿಲ್ಲ?" ಎಂದು ತಿರಿತಿರಿಗಿ ಸಂಕಟಪಟ್ಟು ತಮ್ಮ ಮುಮ್ಮಕ್ಕಳಾದ ಭಾರತೀಯರಿಗೆ ಪ್ರಶ್ನೆ ಕೇಳಿರುವರು!

ಚಂದ್ರವಂಶದ ಚರಿತ್ರೆ:— ಋಗ್ವೇದದಲ್ಲಿ ಚಂದ್ರವಂಶದ ಹೆಸರು ಇದ್ದಂತೆ ತೋರುವದಿಲ್ಲವಾದರೂ, ಚಂದ್ರವಂಶದ ಮೊದಲಿಗರ ಹೆಸರು ಗಳು ಅಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಕಾಣುವ ಹೆಸ ರುಗಳೆಂದರೆ, ನಹುಷ, ಯಯಾತಿ, ಪುರೂರುವಾ, ಆಯು ಇವಿಷ್ಟು. ಈ ಚಂದ್ರವಂಶೀಯು ಆರ್ಯರು ಹಿಮಾಲಯದಲ್ಲುತ್ತರಕ್ಕಿರುವ ಇಲಾವರ್ಷದ ಕ್ಷತ್ರಿಯರಿದ್ದು, ಅಗ್ನಿ-ಉಪಾಸಕರಿದ್ದುದು ಸ್ಪಷ್ಟವಾಗುತ್ತದೆ. ಆದಿಯಲ್ಲಿ ಇವರು ಗಂಗಾನದಿಯ ದರಿಕಂದರದೊಳಗಿಂದ ಹಾಯ್ದು, ಸರಸ್ವತೀ ತೀರಕ್ಕೆ ಬಂದು ತಲ್ಪಿದರೆಂಬುದಕ್ಕೆ ಋಕ್ಕುಗಳೇ ಸಾಕ್ಷಿಯಾಗಿವೆ; ಮಹಾಭಾರತವನ್ನು ಆಧಾರವಾಗಿಟ್ಟುಕೊಂಡರೆ, ಅದರ ಮೇಲಿಂದ ಪುರೂರವನೇ ಚಂದ್ರವಂಶೀಯರ ಆದಿಪುರುಷನೆಂದು ಸಿದ್ಧವಾಗುತ್ತದೆ. ಚಂದ್ರವಂಶದೊಳಗೆ ಮುಖ್ಯವಾಗಿ ಕೌರವ, ಪಾಂಚಾಳ, ಯದು, ಚೇದಿ, ಮಗಧ, ಭೋಜ, ನೈರಾವತ್ಯ ಇಷ್ಟು ಪಂಗಡಗಳಿದ್ದವು; ಇವ ರೆಲ್ಲರೂ ಚಂದ್ರವಂಶೀಯ ಕ್ಷತ್ರಿಯ ಆರ್ಯರೇ ಆದ್ದು, ಕೌರವರು ಕುರು ಕ್ಷೇತ್ರದಲ್ಲಿದ್ದರು. ಪಾಂಚಾಳರು ಗಂಗೆಯ ದಕ್ಷಿಣದಂಚೆಯಲ್ಲಿ ವಾಸ

ವಾಗಿದ್ದರು. ಯದುಗಳು ಮಧುರೆಯ ಹತ್ತರ ಯಮುನೆಯ ಧಡದಲ್ಲಿ ತಳವೂರಿದ್ದರು. ಚೇದಿಗಳು ಯಮುನೆಯ ಧಡದಲ್ಲಿಯೇ ಪ್ರಯಾಗದ ವರೆಗೂ ಒಕ್ಕಲಾಗಿದ್ದರು. ಮಗಧರು ಗಂಗೆಯ ದಕ್ಷಿಣಕ್ಕೆ ಮನೆಕಟ್ಟಿ ಕೊಂಡಿದ್ದರು. ಭೋಜರು ಅವಂತಿ, ವಿದರ್ಭಗಳಲ್ಲಿ ಬಾಳ್ವೆ ಮಾಡುತ್ತಿದ್ದರು. ಸೌರಾಷ್ಟ್ರರು ಕಾಠೇವಾಡದ ಹತ್ತರ ದ್ವಾರಕೆಯಲ್ಲಿ ನೆಲೆಯಾದರು. ಇವರೆಲ್ಲರೂ ಆರ್ಯರೇ ಆದಾಗ್ಯೂ ಪೂರ್ವದ ಆರ್ಯರಲ್ಲಿಯೂ ಇವರಲ್ಲಿಯೂ ಕೆಲವಂಶದಿಂದ ಹೆಚ್ಚುಕಡಿಮೆಯಿತ್ತು. ಈ ಕ್ಷತ್ರಿಯರು ಒಗ್ಗಾದಿಂದ ತಿಳಿಗಪ್ಪು, ಮಲ್ಲವಿದ್ಯೆಯ ಅಭಿಮಾನಿಗಳೂ, ಸ್ವತಃ ಜಟ್ಟಿಗಳೂ ಆಗಿದ್ದರೆಂಬುವಕ್ಕೆ ಶ್ರೀಕೃಷ್ಣ, ಜರಾಸಂಧ, ಭೀಮ, ದುರ್ಯೋಧನಾದಿಗಳ ಉದಾಹರಣೆಗಳೇ ನಾಕು.

ಕುರು-ಪಾಂಡವರು ಯಾರು? ಯಯಾತಿಯ ಮಗನಾದ 'ಪೂರು'ನೇ ಚಂದ್ರವಂಶದ ಮೂಲಪುರುಷನು. ಈತನ ವಂಶದಲ್ಲಿಯೇ ಮುಂದೆ ದುಷ್ಯಂತ, ಭರತಾದಿಗಳು ಹುಟ್ಟಿದರು. ದುಷ್ಯಂತನ ಸತ್ಪುತ್ರನಾದ 'ಭರತನು' ಅಶ್ವಮೇಧಯಾಗವನ್ನು ಮಾಡಿ ದಿಗ್ವಿಜಯಿಯಾಗಿದ್ದನು; ಈತನ ವಿಷಯವು ಬ್ರಾಹ್ಮಣಗಳಲ್ಲಿ ನಾಕಷ್ಟು ಸಿಗುತ್ತದೆ. ಈತನ ವಂಶದೊಳಗೇ 'ಕುರು' ರಾಜನು ಜನಿಸಿದನು; ಈ ಕುರುವಂಶದಲ್ಲಿ ಪ್ರತೀಪನೆಂಬ ರಾಜನಾದನು; ಅವನ ಮಗನು ಶಂತನುರಾಜನು. ಈ ಶಂತನುವಿಗೆ ಭೀಷ್ಮ, ಹಾಗೂ ವಿಚಿತ್ರವೀರ್ಯನೆಂಬ ಇಬ್ಬರು ಮಕ್ಕಳು. ಶಂತನುವಿನ ತರುವಾಯ ನಿಜವಾಗಿಯೂ ಪಟ್ಟಕ್ಕೆ ಭೀಷ್ಮರೇ ಹಕ್ಕುದಾರರಾಗಿದ್ದರೂ, ಪಿತೃಭಕ್ತಿಯಿಂದ ಪಿತೃ-ಸುಖಕ್ಕಾಗಿ ಆತ್ಮಾರ್ಪಣೆಗೈದು, ಆಜನ್ಮನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸಿ, ಪಿತೃಭಕ್ತಿಯ ಅತ್ಯುಚ್ಚ ಆದರ್ಶವನ್ನು ಭಾರತೀಯರಿಗೆ ಆಚರಣೆಯಿಂದ ತಿಳಿಸಿದರು. ಪಿತಾಮಹರಾದ ಶ್ರೀಭೀಷ್ಮಾಚಾರ್ಯರ ಈ ಅದ್ವಿತೀಯವಾದ ತ್ಯಾಗಾರ್ಪಣೆಗಾಗಿ ಇಡೀ ಭರತಖಂಡವೇ ಅವರಿಗೆ ಋಣಿಯಾಗಿದೆ; ತಂದೆಯ ಮಾತುನಡೆಸಿ, ತಾವು ಜೀವಮಿರುವವರೆಗೆ ಬ್ರಹ್ಮಚರ್ಯವ್ರತವನ್ನು ಕೈಕೊಂಡು, ಆಚಾರ್ಯರು ಭಾರತೀಯರನ್ನೆಲ್ಲ ತಮ್ಮ ಮಕ್ಕಳನ್ನಾಗಿ ಮಾಡಿಕೊಂಡರು. ಅದುದರಿಂದ ವಿಚಿತ್ರವೀರ್ಯನಿಗೆ

ಪಟ್ಟವಾಯಿತು. ವಿಚಿತ್ರವೀರ್ಯನ ಮಕ್ಕಳೇ ಧೃತರಾಷ್ಟ್ರ, ಹಾಗೂ ಪಾಂಡು. ವಿಚಿತ್ರವೀರ್ಯನ ತರುವಾಯ ಧೃತರಾಷ್ಟ್ರನು ಪಟ್ಟವೇರ ತಕ್ಕವನು; ಆದರೆ ಅವನು ಹುಟ್ಟುಗುರುಡನಿದ್ದುದರಿಂದ ಪಾಂಡುರಾಜನ ಕೈಗೆ ರಾಜ್ಯದಾಡಳಿತವು ಸೇರಿತು; ಆದರೆ ಮುಂದೆ ಪಂಡುರಾಜನ ಮೈಯಲ್ಲಿ ಸ್ವಸ್ಥವಿಲ್ಲದ್ದರಿಂದ ಅವನು ಧೃತರಾಷ್ಟ್ರನ ವಶಕ್ಕೆ ರಾಜ್ಯ ಬಿಟ್ಟು, ವನಕ್ಕೆ ತೆರಳಿದನು. ಧೃತರಾಷ್ಟ್ರನಿಗೆ ನೂರುಮಂದಿ ಮಕ್ಕಳು; ಅವರಲ್ಲಿ ದುರ್ಯೋಧನನೇ ಹಿರಿಯ. ಪಂಡುರಾಜನಿಗೆ ಪುತ್ರಸಂತತಿಯಿರಲಿಲ್ಲ; ಆದರೆ ವೀರ ಪತ್ನಿಯರಾದ ಮಾದ್ರಿ ಮತ್ತು ಕುಂತಿದೇವಿಯರು ದೇವರನ್ನು ಪ್ರಸನ್ನಪಡಿಸಿಕೊಂಡು ಅವರ ಪ್ರಸಾದದಿಂದ ಕುಂತೀದೇವಿಯು ಧರ್ಮ, ಭೀಮ, ಅರ್ಜುನ ಹೀಗೆ ಮೂವರನ್ನೂ, ಮಾದ್ರಿದೇವಿಯು ನಕುಲ, ಸಹದೇವರಿಬ್ಬರನ್ನೂ ಹೆತ್ತರು. ವೀರ ಮಾತೆಯರ ಹೊಟ್ಟೆಯಿಂದ ಹುಟ್ಟಿದ ಈ ಜ್ಯೋತಿಗಳು ವೀರರ ಮರಿಗಳೇ ಆಗಿದ್ದರು; ಸಿಂಹದ ಹೊಟ್ಟೆಯಲ್ಲಿ ಸಿಂಹಗಳೇ ಹುಟ್ಟುವವಷ್ಟೇ! ಪಾಂಡವರು ಚಿಕ್ಕಂದಿನಲ್ಲಿ ಹಿಮಾಲಯದ ಅದ್ಭುತವೂ, ರಮ್ಯವೂ, ಆದ ಸ್ವರ್ಗೀಯ ವಾತಾವರಣದೊಳಗೆ ಕಾಲಕಳೆದರು. ಪಂಡುರಾಜನು ಮಡಿಯಲು, ಮಾದ್ರಿದೇವಿಯೂ ಪಂಡುರಾಜನೊಡನೆ ಸತೀಹೋದಳು; ಮಕ್ಕಳೆಲ್ಲರೂ ಚಿಕ್ಕವರಿದ್ದುದರಿಂದ ಕುಂತೀದೇವಿಯೊಡನೆ ಅವರನ್ನೆಲ್ಲ ಹಿಮಾಲಯದೊಳಗಿನ ಬ್ರಾಹ್ಮಣರು ಹಸ್ತಿನಾಪುರಕ್ಕೆ ಧೃತರಾಷ್ಟ್ರನ ಬಳಿಗೆ ತಂದುಬಿಟ್ಟರು. ಪಾಂಡವರು ಪಂಡುರಾಜನ ಹೊಟ್ಟೆಯ ಮಕ್ಕಳಲ್ಲವೆಂದು ಆಗ್ಗೆ ಕೌರವರು ತಿಳಿದುದರಿಂದ, ಕೌರವರಿಗೂ ಆವರಿಗೂ ಆಗಿನಿಂದಲೇ ಜಗಳಕ್ಕೆ ಮೊಳಕೆಹಾಕಿತು; ಹಿಮಾಲಯದ ಶುದ್ಧವೂ, ಅಮೃತಪ್ರಾಯವೂ ಆದ ಹವೆಯೊಳಗೆ ಹುಟ್ಟಿಬೆಳೆದವರಾದ ಪಾಂಡವರು ದೇಹದಿಂದಲೂ, ಬುದ್ಧಿಯಿಂದಲೂ ಬಹು ತೇಜಃಪುಂಜರಾಗಿದ್ದರಿಂದ, ಕೌರವರಾದ ದುರ್ಯೋಧನಾದಿಗಳಿಗೆ ಪಾಂಡವರನ್ನು ಕಂಡರೆ ಕೆಂಡವನ್ನು ಕಂಡಂತಾಗುತ್ತಿದ್ದಿತು. ಈ ಮೇರೆಗೆ ತಂದೆಯಿಲ್ಲದ ತಬ್ಬಲಿಗಳಾಗಿ ಪಾಂಡವರು ಕಕ್ಕನ ಮನೆಯಲ್ಲಿ ಕಾಲಕಳೆಯುತ್ತಿರಲು, ಅವರು ಅನೇಕ ಕಷ್ಟಪರಂಪರೆಗಳಿಗೀಡಾಗ

ಬೇಕಾಯಿತು; ಈ ಕಷ್ಟಪರಂಪರೆಗಳು ಕೊನೆಯ ವರೆಗೂ ಪಾಂಡವರ ಬೆಂಬಿಡದ್ದರಿಂದ ಯುದ್ಧಕ್ಕೆ ಮೊಳಿಕೆ ಹಾಕಿತು.

ಪಾಂಡವರ ಬಾಲ್ಯ ಶಿಕ್ಷಣ:– ಈ ದ್ವೇಷವು ಮೊಳಿಕೆಯಲ್ಲಿ ಬೆಳೆಯುತ್ತಿದ್ದು ಕಣ್ಣಿಗೆ ಬೀಳದೆ, ಪಾಂಡವರ ಮತ್ತು ಕೌರವರ ವೇದಾಧ್ಯಯನವೂ, ಅಸ್ತ್ರವಿದ್ಯೆಯೂ ಒಂದೆಡೆಯಲ್ಲಲ್ಲೆಯೇ ಕೃಪಾಚಾರ್ಯರ ಮುಖಾಂತರವಾದವು. ಆದರೆ, ಭರದ್ವಾಜಪುತ್ರರಾದ ದ್ರೋಣಾಚಾರ್ಯರು ದ್ರುಪದರಾಜನ ಸಂಗಡ ಜಗಳಾಡಿ ತಮ್ಮ ಅಸ್ತ್ರರಾದ ಕೃಪಾಚಾರ್ಯರ ಬಳಿಗೆ ಬಂದು ನಿಂತರು. ದ್ರೋಣಾಚಾರ್ಯರು ಧನುರ್ವಿದ್ಯೆಯಲ್ಲಿ ಪರಶುರಾಮನ ಶಿಷ್ಯರು; ಇಂಥ ಶ್ರೇಷ್ಠರಾದ ಅಸ್ತ್ರವಿದ್ಯಾಕುಶಲರು ಕರೆಕಳಿಸದೆ ಮನೆಯವರೆಗೆ ನಡೆಯುತ್ತ ಬಂದ ಒಳ್ಳೇ ಸಂಧಿಯನ್ನು ನಾಧಿಸಿ, ಪಿತಾಮಹರಾದ ಭೀಷ್ಮಾಚಾರ್ಯರು ಅವರನ್ನು ತಮ್ಮ ಮೊಮ್ಮಕ್ಕಳಾದ ಪಾಂಡವ–ಕೌರವರಿಗೆ ಶಸ್ತ್ರವಿದ್ಯೆ ಕಲಿಸಲಿಕ್ಕೆ ತಮ್ಮಲ್ಲಿಯೇ ಇರಿಸಿಕೊಂಡು ಎಲ್ಲ ರಾಜಪುತ್ರರನ್ನು ದ್ರೋಣಾಚಾರ್ಯರ ನ್ನಾಧೀನಪಡಿಸಿದರು. ಎಲ್ಲರ ಶಿಕ್ಷಣವು ಮುಗಿದ ನಂತರ ಹಿಂದಕ್ಕೆ ಬಂದಾನೊಂದು ಕಾಲಕ್ಕೆ ತಮ್ಮ ಗುರುಗಳ ಮಾನ ಭಂಗಪಡಿಸಿದ ದ್ರುಪದರಾಜನನ್ನು ಕೌರವ ಪಾಂಡವರು ಗುರುವಿನ ಆಜ್ಞೆಯ ಮೇರೆಗೆ ಸೋಲಿಸಿ, ಗುರುಗಳ ಮುಂದೆ ತಂದು ನಿಲ್ಲಿಸಿದರು. ಆಗ ದ್ರೋಣರು ದ್ರುಪದರಾಜ್ಯದೊಳಗಿನ ಕೆಲ ಭಾಗವನ್ನು ತೆಗೆದುಕೊಂಡು ಅವನನ್ನು ಬಿಟ್ಟರು.

ಮೊದಲನೇ ವನವಾಸ:– ಧೃತರಾಷ್ಟ್ರನು ಹಿರಿಯವನಾದ ಧರ್ಮರಾಜನಿಗೆ ಪಟ್ಟಗಟ್ಟಿದನು; ಧರ್ಮರಾಜನಲ್ಲಿ ಬೆಳಗುತ್ತಿದ್ದ ಪ್ರಭಾವಶಾಲಿಯಾದ ಧರ್ಮಬುದ್ಧಿಯೂ, ತಾಳ್ಮೆಯೂ, ನಿಃಕ್ಕ ಬಂಧುಗಳಲ್ಲಿ ಎದ್ದು ಕಾಣಿಸಿ ಪರರ ಕಣ್ಣುಗಳನ್ನು ಮಂಜುಮಂಜುಗೊಳಿಸುತ್ತಿರುವ ಪರಾಕ್ರಮ ನೈಶಿಲ್ಯಾದಿಗುಣಗಳೂ ಕೌರವರ ಮನಸಿನಲ್ಲಿ ನೆಡಲಾರಂಭಿಸಿ, ಅವರ ಬಗ್ಗೆ ಮತ್ಸರವನ್ನುಂಟುಮಾಡಲು ಕಾರಣವಾದವು; ಈ ಮತ್ಸರವನ್ನು ರೇಗಿಸುವ ಕಾರ್ಯದೊಳಗೆ ದುರ್ಯೋಧನ ದುಃಶಾಸನಾದಿಗಳು ಮುಂದಾಳಾಗಿನಿಂತು ಒಂದಿಲ್ಲೊಂದು ಹಂಚಿಕೆ ಮಾಡಿ, ಪಾಂಡವ

ರನ್ನು ಹೆಸರಿಲ್ಲದಂತೆ ಮಾಡಬೇಕೆಂದು ದುರಾಲೋಚನೆ ನಡೆಸಿದರು. ಪಾಂಡವರ ಹಿರಿಯಣ್ಣನಾದ ಧರ್ಮರಾಯನು ಸಾಧುಸ್ವಭಾವದವನಿದ್ದರೂ ದ್ಯೂತಪ್ರಿಯನಾದುದರಿಂದ ಅವನೊಡನೆ ದ್ಯೂತವಾಡಿ, ಕಾಪಟ್ಯದಿಂದ ಪಾಂಡವರನ್ನು ಸೋಲಿಸಿ, ಅವರ ಸರ್ವಸ್ವವನ್ನೆಲ್ಲ ಅಪಹರಿಸಿಕೊಂಡು ವನಕ್ಕೆ ಅಟ್ಟಬೇಕೆಂದು ಕೌರವರು ಹೊಂಚುಹಾಕಿದರು. ಕೌರವರ ಪಕ್ಷಕ್ಕೆ ಶಕುನಿಯುಂಥ ಮಹಾತಂತ್ರಗಾರನು ಇದ್ದುದರಿಂದ ಧರ್ಮರಾಯನು ಲೆತ್ತದ ಜೂಜಿನಾಟದೊಳಗೆ ಎಲ್ಲವನ್ನು ಕಳೆದುಕೊಂಡು ಹನ್ನೆರಡುವರ್ಷ ವನವಾಸವನ್ನೂ ಒಂದುವರ್ಷ ಅಜ್ಞಾತವಾಸವನ್ನೂ ಆಶ್ರಯಿಸಬೇಕಾಯಿತು. ಹದಿಮೂರು ವರ್ಷ ವನವಾಸದ ಸುದ್ದಿಯನ್ನು ಕೇಳಿ ದೊಡನೆಯೇ ಎಲ್ಲರ ಎದೆಯೊಡೆದು ನೀರಾಗುವದುಂಟು. ಆದರೆ ಪಾಂಡವರು ತಮ್ಮ ಪಾಲಿಗೆ ಬಂದ ವನವಾಸದಂತಹ ವಿಷದ ಬಟ್ಟಲವನ್ನು ಬಾಯಿಗೆ ಹಚ್ಚಿ ಕುಡಿದು ಕಡೆಗಾದರು. ಈ ಪಾಂಡವರಿಗೆ ಭಗವಂತನಾದ ಶ್ರೀಕೃಷ್ಣನ ನೆರವಿತ್ತೆಂತಲೇ ಅವರಿಗೀ ದೀರ್ಘವಾದ ವನವಾಸವು ಒಂದೆರಡು ಗಳಿಗೆಯಂತೆ ಹಾಯುವಾಗಿ ಕಳೆದುಹೋಯಿತು. ವನವಾಸದಿಂದ ಪಾಂಡವರು ಮರಳಿ ಬಂದಮೇಲೆಯೂ ಕೌರವರು ಪಾಂಡವರಿಗೆ ಅವರ ಪಾಲಿನ ರಾಜ್ಯವನ್ನು, ಕೊನೆಗೆ ಐದು ಊರುಗಳನ್ನು ಸಹ ಕೊಡಲೊಪ್ಪದಾದರು; ಆದುದರಿಂದ ಶ್ರೀಕೃಷ್ಣನು ಸ್ವತಃ ಕೌರವರ ಕಡೆಗೆ ಸಂಧಾನ ಬೆಳೆಯಿಸಲಿಕ್ಕೆ ಹೋದರೂ, ಶ್ರೀಕೃಷ್ಣನ ಮಾತನ್ನೂ ಲಕ್ಷಿಸದಿದ್ದುದರಿಂದ ಪಾಂಡವರಿಗೂ ಕೌರವರಿಗೂ ಯುದ್ಧವೆಸಗಿತು. ಈ ಮಹಾಯುದ್ಧದೊಳಗೆ ಇಡೀ ಹಿಂದೂರಾಷ್ಟ್ರವೇ ತೊಡಗಿತ್ತು; ತನ್ನ ಸೈನ್ಯಬಲವನ್ನೆಲ್ಲ ಶ್ರೀಕೃಷ್ಣನು ಕೌರವರಿಗೆ ಕೊಟ್ಟು, ತಾನು ಯುದ್ಧದೊಳಗೆ ಪ್ರತ್ಯಕ್ಷವಾಗಿ ಮೈಗೊಳ್ಳದೆ, ಪಾರ್ಥನ ಸಾರಥಿಯಾದನು. ಈ ಮಹಾಯುದ್ಧವು ಹದಿನೆಂಟು ದಿನಗಳ ವರೆಗೆ ನಡೆದು, ಹದಿನೆಂಟು ಅಕ್ಷೌಹಿಣೀ ಸೈನ್ಯವೆಲ್ಲ ಕ್ಷಯವಾಗಿ, ಪಾಂಡವರೂ ಇನ್ನು ಕೆಲವರೂ ಬದುಕಿಕೊಂಡರು.

ಈ ಪ್ರಕಾರ ಭಾರತೀಯ ಯುದ್ಧದೊಳಗೆ ಆರ್ಯಾವರ್ತದ, ಧನಬಲವೂ, ಜನಬಲವೂ ವಿಪರೀತವಾಗಿ ಕ್ಷಯವಾಯಿತು. ಈ ಹೊಡತ

ದಿಂದ ನೆಲಹಿಡಿದ ಹಿಂದುಸ್ಥಾನವು ತಿರುಗಿ ಮುಖವೆತ್ತಲಿಕ್ಕೆ ಅನೇಕ ಶತಮಾನಗಳು ಬೇಕಾದವು; ಈ ಯುದ್ಧದೊಳಗೆ ಪಾಂಡವರಿಗೆ ಗೆಲವಾಗಿದ್ದರೂ, ಆಪ್ತೇಷ್ಟರ ನಾಶವಾಗಿದ್ದರಿಂದ ಅವರಿಗೆ ಬಲು ವ್ಯಸನವಾಗಿತ್ತು; ಲಕ್ಷಾವಧಿ ವಿಧವೆಯರು ತಮ್ಮ ತಮ್ಮ ಪತಿರಾಜರನ್ನು ಕಳೆದುಕೊಂಡದ್ದಕ್ಕಾಗಿ ಭೋರ್ಗರೆದು ಅಳುತ್ತಿರುವ ಶೋಕಧ್ವನಿಯನ್ನು ಕವಿಯಾರೆ ಕೇಳುವದು ಯುಧಿಷ್ಠಿರನಿಗೆ ಮೀರಿದ ಕಾರ್ಯವಾಗಿತ್ತು. ಮಹಾಯುದ್ಧದೊಳಗೆ ತಮ್ಮಿಂದೊದಗಿದ ಪಾಪದ ರಾಶಿಯನ್ನು ಎಬ್ಬಿಟ್ಟು ಪ್ರಾಯಶ್ಚಿತ್ತಗೊಳ್ಳಲು ಪಾಂಡವರು ಅಶ್ವಮೇಧಯಾಗವನ್ನು ಮಾಡಿದರು; ಮುಂದೆ ಧರ್ಮರಾಜನಿಗೆ ಪಟ್ಟಾಭಿಷೇಕವಾಯಿತು. ಕೆಲದಿನ ರಾಜ್ಯವಾಳಿದ ಬಳಿಕ, ಸಂಜಯ, ವಿದುರ, ಧೃತರಾಷ್ಟ್ರ, ಗಾಂಧಾರಿ, ಕುಂತಿ ಮೊದಲಾದವರು ತಪೋವನಕ್ಕೆ ತೆರಳಿದರು. ಈ ಕಾಲಕ್ಕೆ ಪಾಂಡವರು ತಾಯಿಯನ್ನು ಕುರಿತು "ತಾಯೇ, ನಮ್ಮನ್ನು ಯುದ್ಧಕ್ಕೆ ನೀನೇ ತೊಡಗಿಸಿದಿ; ಮತ್ತು ಈಗ ರಾಜ್ಯೈಶ್ವರ್ಯವನ್ನು ಅನುಭವಿಸದೆ ನೀನೇ ವನಕ್ಕೆ ಹೋಗುತ್ತಿಯಲ್ಲ!" ಎಂದು ಭೀಮನು ಕೇಳಲು, ಅದಕ್ಕೆ ವೀರಮಾತೆಯಾದ ಕುಂತೀದೇವಿಯು "ನನ್ನ ಪತಿಯಿರುವಾಗ್ಗೆ ರಾಜ್ಯಭೋಗವನ್ನು ಬೇಕಾದಷ್ಟು ಅನುಭವಿಸಿರುವೆನು; ನೀವು ಭಿಕ್ಷೆಬೇಡಿ ಜೀವಿಸಬಾರದೆಂದೆಣಿಸಿ ನಾನು ನಿಮಗೆ ಯುದ್ಧವಾಡಲು ಹೇಳಿದೆ"ನೆಂದು ತಿಳಿಸಿ ಕೊನೆಯ ಉಪದೇಶದ ವಾಕ್ಯವೆಂದು "ಧರ್ಮಾಚರಣೆಯಲ್ಲಿ ನಿಮ್ಮ ಬುದ್ಧಿಯು ನೆಲಿಸಲಿ, ನಿಮ್ಮ ಮನಸು ದೊಡ್ಡದಾಗಿರಲಿ" ಎಂದು ಹರಸಿ ಹೋದಳು. ವೀರಮಾತೆಯಾದ ಕುಂತೀದೇವಿಯ ಈ ವಾಕ್ಯವೆಂದರೆ ಇಡೀ ಮಹಾಭಾರತದ ಸಾರವೇ ಆಗಿದೆಯಲ್ಲವೇ?

ಭಾರತಕಾಲದವರ ಬಾಳು-ಬದುಕು.

ಭಾರತಕಾಲದ ಜನರ ನೈಕಟ್ಟು:— ಭಾರತಕಾಲದ ಆರ್ಯರು ಎತ್ತರಾದ ಬೀಸಾಳುಗಳೂ, ಗಟ್ಟಿಗರೂ, ಉದ್ದನ್ನ ಮೂಗಿನವರೂ, ಬೊಗಸೆಗಣ್ಣಿನವರೂ, ಕೆಂಬಣ್ಣದವರೂ, ತೇಜಸ್ವಿಗಳೂ ಇದ್ದರೆಂದು ಮಹಾಭಾರತದ ಅನೇಕ ದೃಷ್ಟಾಂತಗಳ ಮೇಲಿಂದ ಕಾಣುತ್ತದೆ. ಇದಕ್ಕೆ ಸುಮಾರು ಮೂರು ಕಾರಣಗಳಿದ್ದವೆನ್ನಬಹುದು. ಬಂದನೇದು, ಕಾಲಕಾಲಕ್ಕೆ ಮಳೆಬೆಳೆ ಆಗುತ್ತಿದ್ದು, ಪರದೇಶಕ್ಕೆ ನಮ್ಮ ದೇಶದಿಂದ ಕಾಳುಕಡಿಗಳು ಹೋಗುತ್ತಿರಲಿಲ್ಲ. ಧಾನ್ಯದಿಂದ ತುಂಬಿರುವ ಹೊಲಗದ್ದೆಗಳೂ, ಫಲಗಳಿಂದ ಭಾರವಾದ ವೃಕ್ಷಗಳೂ ಹಾಲುತೈನು ಕರೆಯುವ ಆಕಳುಗಳೂ ವಿಪುಲವಾಗಿದ್ದುದರಿಂದ ಜನರಿಗೆ ತಿನ್ನುಣ್ಣಲಿಕ್ಕೆ ಎಂದೂ ಕೊರತೆಯಾಗುತ್ತಿರಲಿಲ್ಲ. ಎರಡನೇದು, ಮದುವೆಯ ಕಾಲಕ್ಕೆ ಮದುಮಗ ಮದುಮಗಳು ಪ್ರೌಢವಯಸ್ಸಿನವರಿದ್ದು, ಮದುವೆಯಾಗುವ ಮೊದಲು ಅವರೀರ್ವರು ಬ್ರಹ್ಮಚರ್ಯವ್ರತವನ್ನು ಅತ್ಯಂತ ಎಚ್ಚರಿಕೆಯಿಂದ ಪಾಲಿಸುತ್ತಿದ್ದರು. ಹೀಗಾದ್ದರಿಂದ ಅವರಿಂದ ಹುಟ್ಟಿದ ಪೀಳಿಗೆಯು ಒಳ್ಳೇ ಗಟ್ಟಿಮುಟ್ಟು, ಹಾಗೂ ತೇಜಃಪುಂಜವಾಗಿರುತ್ತಿತ್ತು. ಮೂರನೇದು, ಬ್ರಾಹ್ಮಣರಿಗೆ ಬ್ರಾಹ್ಮತೇಜವನ್ನೂ, ಕ್ಷತ್ರಿಯರಿಗೆ ಕ್ಷಾತ್ರತೇಜವನ್ನೂ ಪಡೆಯಬೇಕೆಂಬ ಹವ್ಯಾಸವು ಆಗಿನವರಲ್ಲಿ ಮಿಗಿಲಾಗಿತ್ತು; ಕ್ಷತ್ರಿಯರಿಗೆ ಆಗಾಗ್ಗೆ ಯುದ್ಧಪ್ರಸಂಗ ಬರುತ್ತಿದ್ದುದರಿಂದ ಅವರು ವಾಡಿಕೆಯಾಗಿ ಗರಡೀಸಾಧನೆಗೆ ಹೆಚ್ಚು ಮನಗೊಡುತ್ತಿದ್ದರು. ಗಜಯುದ್ಧ, ಗದಾಯುದ್ಧ, ಮಲ್ಲಯುದ್ಧಗಳಂಥ ಶಾರೀರಿಕ ಸಾಮರ್ಥ್ಯದ ಹೆಚ್ಚುಗಾರಿಕೆಯನ್ನು ತೋರಿಸುವಂಥ ಆಟಗಳು ಮೇಲಿಂದಮೇಲೆ ನಡೆಯುತ್ತಿದ್ದುದರಿಂದ ಶಾರೀರಕ ಬಲವನ್ನು ಗಳಿಸದ ಮನುಷ್ಯನು ಮನುಷ್ಯನಲ್ಲವೆಂದೂ, ಜನರ ತಿಳುವಳಿಕೆಯಿತ್ತು; ಮದ್ದಾನೆಯೊಡನೆ ಕುಸ್ತೀ ಹಿಡಿಯುವಂಥ ಶ್ರೀಕೃಷ್ಣ, ಭೀಮಸೇನ, ದುರ್ಯೋಧನರಂಥ ಜಗಜಟ್ಟಿಗಳು ಯಾವ ಕಾಲಕ್ಕಿದ್ದರೋ ಆ ಕಾಲದ ಸೌಭಾಗ್ಯವನ್ನು ಎಷ್ಟೆಂತು ಹೊಗಳಬೇಕು?

ಭಾರತೀಯರ ಬಣ್ಣ:— ಆರ್ಯರಲ್ಲಿ ಶ್ಯಾಮ, ಗೌರ, ಹಾಗೂ ಪೀತ (ಹಳದೀ) ಹೀಗೆ ಮೂರು ಬಣ್ಣದ ಜನರು ಇರುವರೆಂದು ವಿಂಗಡಿಸಿದ್ದಾರೆ; ಅರ್ಜುನ, ದ್ರೌಪದಿ, ಕೃಷ್ಣ ಇವರೆಲ್ಲರ ಮೈಬಣ್ಣವು ನಾದ ಗಪ್ಪು. ಈ ಬಗ್ಗೆ ಮಹಾಭಾರತದೊಳಗೆ ಆಶ್ರಮವಾಸಿ ಪರ್ವದೊಳಗೆ ಪಾಂಡವರ ವರ್ಣನೆಯಿದೆ; ಅದರ ಮೇಲಿಂದ ಯುಧಿಷ್ಠಿರನು ಚೊಕ್ಕ ಚಿನ್ನದಂತೆ ಕಂಪಗೆ, ಎತ್ತರ ನಿಲುವಿಕೆಯ ಬಲಕಟ್ಟಿನವನೂ, ದೊಡ್ಡ ಕಣ್ಣುಳ್ಳವನೂ, ನಿಡುದಾದ ಮೂಗಿನವನೂ ಆಗಿದ್ದನು; ತಪ್ತಸುವರ್ಣದಂತೆ ಮೈಬಣ್ಣ, ಹರವಾದ ಎದೆ, ಪುಷ್ಟವಾದ ಹೆಗಲು, ಮೊಳಕಾಲಿನವರೆಗೆ ಉದ್ದ ಹಾಗೂ ಗಡುತರ ತೋಳುಗಳುಳ್ಳ ಭೀಮಸೇನನು; ತಿಳಿಗಪ್ಪಿನವನೂ, ಸಿಂಹದಂತೆ ಎತ್ತರವಾಗಿರುವ ಎದೆಯವನೂ, ತಾವರೆಗಣ್ಣಿನವನೂ ಆದ ವೀರ ಅರ್ಜುನನು. ರೂಪದಿಂದಲೂ ಬಲದಿಂದಲೂ ಅಸಮರೆನಿಸಿಕೊಂಡಂಥ ನಕುಲಸಹದೇವರು. ನೀಲೋತ್ಪಲದಂಥ ಮೈಬಣ್ಣದ ಕಮಲಪತ್ರಾಕ್ಷಿಯಾದ ದ್ರೌಪದಿಯು; ಶುದ್ಧ ಸುವರ್ಣದಂತೆ ಮಿಂಚುವ ಸುಭದ್ರೆ. ಈಗಲೂ ನಮ್ಮ ಭಾರತದೊಳಗೆ ಮೇಲ್ಕಾಣಿಸಿದಂತೆ ಎಲ್ಲ ಬಣ್ಣದ ಜನರು ಕಾಣಿಸುತ್ತಾರೆ.

ಜೀವಮಾನವು:— ಭಾರತಕಾಲಕ್ಕೆ ಆರ್ಯರಾಷ್ಟ್ರವು ಧನಧಾನ್ಯ ಸಂಪನ್ನವಾಗಿತ್ತೆಂದು ಹಿಂದೆ ಹೇಳಿದ್ದೇವೆ. ಬರಗಾಲ, ಅನಾವೃಷ್ಟಿ ಎಂಬೀತೆರದ ವಿಪತ್ತುಗಳು ಈಗಿನವರಂತೆ ಅವರಿಗೆ ಪ್ರತಿಯೊಂದು ವರ್ಷ ಬಂದು ಬೆನ್ನುಹತ್ತುತ್ತಿರಲಿಲ್ಲ; ಪ್ರಾಯಶಃ ಸುಕಾಲವೇ ಹೆಚ್ಚು. ಹೊರ್ತಾಗಿ ಭಾರತೀಯ ಆರ್ಯರು ಇರುವ ಗಂಗಾಯಮುನೆಗಳ ಕೊಳ್ಳವು ಮನುಷ್ಯನ ಶರೀರನಿರ್ವಹಣೆಗೆ ಪುಷ್ಟಿಕರವಾಗಿದ್ದುದರಿಂದ ಸಾಧಾರಣವಾಗಿ ಭಾರತೀಯ ಆರ್ಯರು ದೀರ್ಘಾಯುಷಿಗಳಿದ್ದರು; ತಪಶ್ಚರ್ಯೆಯ ಬಲದಿಂದ ಸಾವಿರಾರು ವರ್ಷ ಬಾಳುತ್ತಿರುವಂಥ ಹಲವು ಜನರನ್ನು ಬಿಟ್ಟರೂ ಸಾಮಾನ್ಯ ಜನರು ೧೦೦-೧೨೫ ವರ್ಷ ಬಾಳಿಯೇ ಬಾಳುತ್ತಿದ್ದರು. ಭಗವಾನ್ ಶ್ರೀಕೃಷ್ಣನ ವಯಸ್ಸು ಯುದ್ಧಕಾಲದಲ್ಲಿ ೬೩ ವರ್ಷವಿದ್ದಿತು; ಅರ್ಜುನನ ವಯಸ್ಸು ೬೩; ೬೩ನೇ ವರ್ಷವೆಂದರೆ,ನಮ್ಮಲ್ಲೀಗ ಮನುಷ್ಯನು ರಣಾಂಗಣದ ಹೆಸರೆತ್ತುವದಂತೂ

ದೂರಕ್ಕಿರಲಿ; ಕಾಡಿನಮೇಲೆ ಕಣ್ಣಿಟ್ಟು, ದೇವರು ಯಾವಾಗ ಕಣ್ಣು ಮುಚ್ಚುವನೋ ಎಂದು ಕಾಯ್ದುಕೊಂಡಿರುತ್ತಾನೆ. ಭಾರತದ ಕಾಲದ ಮಾತು ಹಾಗಿರಲಿ; ೧೦೦–೫೦ ವರ್ಷಗಳಾಚೆಯ ಪರಿಸ್ಥಿತಿಯನ್ನು ನೆನೆಸಿಕೊಂಡರೆ ಮನಸ್ಸು ದಂಗುಬಡಿಯುತ್ತದೆ; ಆಗ್ಗೆ ನಮ್ಮ ಸಮಾಜ ದೊಳಗೆ ೧೦೦–೧೧೦ ವರ್ಷದ ಮುಪ್ಪಿನ ಮುದುಕರು ಸಹ ನಾಕಷ್ಟು ಗಟ್ಟಿಗರೂ, ಹೆಚ್ಚು ಹುರುಪಿನಿಂದ ದುಡಿಯುವವರೂ ಇದ್ದರು; ಈ ನೋಟವು ಇತ್ತೀಚೆ ೫೦ ವರ್ಷಗಳಲ್ಲಿ ಒಮ್ಮೆಲೆ ನಡೆಯಾಡುವ ಚಿತ್ರಪಟದೊಳಗಿನ ನೋಟದಂತೆ ಅದೃಶ್ಯವಾಗಿ, ಮನುಷ್ಯನು ೫೦ ವರ್ಷ ಬಾಳಿರುವದು ದೊಡ್ಡದೊಂದು ಪುಣ್ಯದ ಸಂಗತಿಯಾಗಿದೆ. ಇದಕ್ಕೆಲ್ಲ ಕಾರಣವೇನಿರಬಹುದು? ನಮ್ಮನ್ನು ಬೆನ್ನಟ್ಟಿರುವ ಕ್ಷಾಮ-ಪರಂಪರೆಗಳೇ ಅಲ್ಲವೇ? ಇರಲಿ. ಭಗವಾನ್ ಶ್ರೀಕೃಷ್ಣನು ಪರಂಧಾಮಕ್ಕೆ ತೆರಳುವ ಕಾಲಕ್ಕೆ ಅವನ ವಯಸ್ಸು ೧೨೦ ಆಗಿತ್ತು; ದ್ರೋಣಾಚಾರ್ಯನ ವಯಸ್ಸು ಯುದ್ಧದಕಾಲಕ್ಕೆ ೬೫ ವರ್ಷವಿತ್ತು; ಪಿತಾಮಹರಾದ ಭೀಷ್ಮಾಚಾರ್ಯರು ೧೦೦–೧೧೦ ವರ್ಷದವರಿದ್ದರು. ಹಿಂದೂಜನರು ೧೦೦–೫೦ ವರ್ಷಗಳ ವರೆಗೆ ಬಾಳಿರುತ್ತಾರೆಂದು ಗ್ರೀಕ ಇತಿಹಾಸಗಾರರು ಬರೆದಿಟ್ಟಿರುವದರಿಂದ ತತ್ಕಾಲೀನ ಜನರ ಆಯುರ್ಮರ್ಯಾದೆಯು ತಿಳಿಯುತ್ತದೆ. ಈಗಿನ ನಮ್ಮ ಅಕಾಲ ಮರಣಕ್ಕೆ ನಮ್ಮ ಅಧರ್ಮ ಪ್ರವೃತ್ತಿ, ದಾರಿದ್ರ್ಯ, ಮರುಳತನ, ನ್ಹಾನ ಸಂಧ್ಯೆಯ ಅಭಾವ, ಗೋವಧೆ ಇವೇ ಕಾರಣವಲ್ಲವೇ?

ಆರ್ಯರ ವರ್ಣವ್ಯವಸ್ಥೆ:– ಆರ್ಯಸಂಸ್ಕೃತಿಯ ದೃಷ್ಟಿಯಿಂದ ಮಹಾಭಾರತವು ನಮಗೆ ಅತ್ಯಂತ ಅಮೂಲ್ಯವಾದ ನಿಧಿಯಾಗಿದೆ. ಪ್ರಾಚೀನ ಬ್ರಾಹ್ಮಣಕಾಲ ಮೊದಲ್ಗೊಂಡು, ಮಹಾಭಾರತಕಾಲದ ವರೆಗೆ, ಹೆಚ್ಚಿಗೇನು, ಗ್ರೀಕರ ಅಭಿಯೋಗದ ವರೆಗಿನ ಭಾರತೀಯರ ಚರಿತ್ರೆ ಎಂಬುದು ನಮಗೆ ಮಹಾಭಾರತದಲ್ಲಿಯೇ ಸಿಗುವದು. ಹೀಗೆ ನೋಡಿದರೆ, ಒಂದು ಬಗೆಯಿಂದ ಮಹಾಭಾರತವೆಂದರೆ, ಭಾರತೀಯರಿಗೊಂದು 'ಜ್ಞಾನಕೋಶ'. ಪ್ರಾಚೀನ ಆರ್ಯರು ತಮ್ಮ ಸಂತತಿಯವರಿಗಾಗಿ ಶೇಖರಿಸಿಟ್ಟ ಆಸ್ತಿಯಲ್ಲಿ, ವೇದ, ಬ್ರಾಹ್ಮಣ, ಉಪನಿಷತ್ತುಗಳೂ,

ರಾಮಾಯಣ ಮಹಾಭಾರತದಂಥ ಮಹಾಕಾವ್ಯಗಳೂ ಇವೆಲ್ಲವು ಅಮೂಲ್ಯವಾದ 'ಕೋಹಿನೂರ' ವಜ್ರಗಳಾಗಿವೆ; ಈ ಪಿತ್ರಾರ್ಜಿತವಾದ ಆಸ್ತಿಯನ್ನು ಹಲವು ನಾವಿರ ವರ್ಷಗಳಿಂದ ಕಂಠಸ್ಥವಾಗಿಟ್ಟುಕೊಂಡು, ಅದನ್ನು ನಮಗೀಗ ಕೊಟ್ಟಿದ್ದಕ್ಕಾಗಿ ಬುನಾದಿಯು ಆರ್ಯ ಬ್ರಾಹ್ಮಣರಿಗೆ ಪ್ರತಿಯೊಬ್ಬ ಆರ್ಯನು ಋಣಿಯಾಗಿರಲಿಕ್ಕೆ ಬೇಕು; ಇರಲಿ. ಪ್ರತಿಯೊಂದು ಸಮಾಜದೊಳಗೆ ಬಂದಿಲ್ಲೊಂದು ವಿಧವಾಗಿ ವರ್ಣವ್ಯವಸ್ಥೆಯ ಬೀಜವು ಇದ್ದೇ ಇರುವದು. ಆದರೆ ಕೆಲವೆಡೆಯಲ್ಲಿ ಅದು ಕಟ್ಟುನಿಟ್ಟಾಗಿ ನಿರ್ಬಂಧವಾಗಿರುತ್ತದೆ; ಕೆಲವೆಡೆಯಲ್ಲಿ ಅಷ್ಟು ಕಟ್ಟಾಗಿರುವದಿಲ್ಲ; ಮನುಷ್ಯನು ರೂಢಿಪ್ರಿಯನು; ವ್ಯಾಯಿಕವಾಗಿ ತಂದೆ ಮಾಡುತ್ತಿರುವ ಕಸಬನ್ನೇ ಮನುಷ್ಯನು ಕೈಕೊಳ್ಳುವನು; ಒಂದು ದೃಷ್ಟಿಯಿಂದ ಅಜ್ಜಮುತ್ತಾತಂದಿರು ಮಾಡುತ್ತಿರುವ ಉದ್ಯೋಗವನ್ನೇ ಮಕ್ಕಳು ಮುಮ್ಮಕ್ಕಳು ಮಾಡುತ್ತಿದ್ದರೆ, ಅವರ ರಕ್ತದಲ್ಲಿ ಪಿತ್ರಾರ್ಜಿತವಾಗಿ ನೆಲೆಸಿರುವ ಆನುವಂಶಿಕವಾದ ಸಂಸ್ಕಾರಗಳು ಅವರ ಬುದ್ಧಿವಿಕಾಸಕ್ಕೆ ಅಸ್ಪದವಾಗುತ್ತವೆ. ಋಗ್ವೇದಕಾಲಕ್ಕೆ ಎರಡೇ ಜಾತಿಗಳಿದ್ದವು; ಹೀಗಿದ್ದರೂ ಆಗ ಆ ಬಗ್ಗೆ ಕಟ್ಟಾದ ನಿರ್ಬಂಧಗಳಾಗಿರಲಿಲ್ಲ; ಮುಂದೆ ಜನಸಂಖ್ಯೆಯು ಬೆಳೆದು ಹಲವು ಜನರದೊಂದು ವ್ಯವಸಾಯವೆಂಬ ನಿಯಮವಾಗುವವರೆಗೆ ಹೀಗೇ ನಡೆದಿತ್ತು. ಮುಂದೆ ವೈಶ್ಯವರ್ಣವೊಂದು ಉತ್ಪನ್ನವಾಯಿತು. ಆ ಕಾಲದಲ್ಲಿ ಬ್ರಾಹ್ಮಣರು ಎರಡೂ ವರ್ಗದವರ ಹೆಂಗಸರನ್ನು ಮದುವೆಯಾಗಬಹುದಾಗಿತ್ತು; ಕ್ಷತ್ರಿಯರು ಬ್ರಾಹ್ಮಣ ಹಾಗೂ ವೈಶ್ಯ ಹೆಂಗಸರನ್ನು ಮದುವೆಯಾಗುತ್ತಿದ್ದರು. ವೈಶ್ಯರು ಮಾತ್ರ ವೈಶ್ಯರನ್ನೇ ಲಗ್ನಮಾಡಿಕೊಳ್ಳಬೇಕೆಂದು ನಿರ್ಬಂಧವಿತ್ತು; ಶೂದ್ರವೆಂಬುದೊಂದು ವರ್ಣವು ಆರ್ಯಸಮಾಜದೊಳಗೆ ತಲೆಯೆತ್ತಿದ ಕೂಡಲೇ, ಶೂದ್ರ ಸ್ತ್ರೀಯರನ್ನು ಆರ್ಯರು ವಿವಾಹ ಮಾಡಿಕೊಳ್ಳಬಹುದೋ, ಕೂಡದೋ ಎಂಬ ಬಗ್ಗೆ ಘನವಾದ ಚರ್ಚೆ ನಡೆಯಿತು. ಬಹುತರವಾಗಿ ಆರ್ಯರೆಲ್ಲರೂ ಇದಕ್ಕೆ ವಿರೋಧಿಗಳಾಗಿಯೇ ಇದ್ದರು; ವೈಶ್ಯರು ಬಹುತರವಾಗಿ ಒಕ್ಕಲತನದ ಬೇಸಾಯವನ್ನೇ ಕೈಕೊಂಡು ತಮ್ಮ ಬದುಕನ್ನೆಲ್ಲ ಹೊಲಗದ್ದೆಗಳಲ್ಲಿಯೇ ನಾಗಿಸಿ

ದ್ದರಿಂದ, ಅವರಿಗೆ ಪದೇಪದೇ ಶೂದ್ರರೊಡನೆ ಬಳಿಕೆ ಹೆಚ್ಚಾಗಲು ಕಾರಣವಾಯಿತು; ಆದುದರಿಂದ, ಸ್ತ್ರೀಯು ಯಾವ ಜಾತಿಯವಳೇ ಇರಲಿ, ಪುರುಷನು ಯಾವ ವರ್ಣದವನೋ, ಅವನಿಂದಾದ ಸಂತತಿಯಾದರೂ ಅವನ ವರ್ಣಕ್ಕೇ ಹೊಂದಲಿಕ್ಕೆಬೇಕೆಂದು ಮೊದಲಿನ ಕಾಲಕ್ಕೆ ನಿಯಮವಿತ್ತು; ಬ್ರಾಹ್ಮಣನು ಮೂರೂ ವರ್ಣದ ಹೆಂಗಸರನ್ನು ಮದುವೆಯಾಗಬಹುದು; ಮತ್ತು ಅವನಿಂದ ಹುಟ್ಟಿದ ಪೀಳಿಗೆಯನ್ನು ಬ್ರಾಹ್ಮಣ ಪೀಳಿಗೆಯೆಂದೇ ಎಣಿಸಲಿಕ್ಕೆಬೇಕೆಂದು ಮಹಾಭಾರತದೊಳಗೆ ಎಷ್ಟೋ ಕಡೆಯಲ್ಲಿ ಉಕ್ತವಾಗಿದೆ; ಆದರೆ ಈ ನಿಯಮವು ಮುಂದೆ ಮಾರ್ಪಟ್ಟು ಬ್ರಾಹ್ಮಣನಿಗೆ ಬ್ರಾಹ್ಮಣ ಸ್ತ್ರೀಯಳಿಂದಾದ ಸಂತತಿಯು ಬ್ರಾಹ್ಮಣ, ಕ್ಷತ್ರಿಯನಿಗೆ ಕ್ಷತ್ರಿಯಳಿಂದಾದ ಸಂತಾನವು ಕ್ಷತ್ರಿಯವೆಂಬ ಕಲ್ಪನೆಯು ರೂಢವಾಯಿತು. ಪರಾಶರಮುನಿಗಳಂಥ ಮಹಾತಪಸ್ವಿಗಳು ಮತ್ಸ್ಯಗಂಧೆಯಂಥ ಕೀಳಜಾತಿಯ ಕನ್ಯೆಯೊಡನೆ ವಿವಾಹ ಬೆಳೆಸಿದರು; ಮತ್ತು ಅವಳ ಹೊಟ್ಟೆಯಲ್ಲಿ ಶ್ರೀವ್ಯಾಸಮಹರ್ಷಿಗಳಂಥ ಅತ್ಯಂತ ಶ್ರೇಷ್ಠ ಜ್ಞಾನಿಗಳು ಹುಟ್ಟಿದ್ದರು; ಪರಾಶರಮುನಿಗಳ ಈ ವರ್ಣಸಂಕರ ಮಾಡುವಂಥ ಕೃತಿಯಿಂದ ತತ್ಕಾಲೀನ ಸಮಾಜದೊಳಗೆ ದೊಡ್ಡ ಗಲಭೆಯೆದ್ದಿರಲಿಕ್ಕೆ ಸಾಕು; ಮತ್ತು ಕಟ್ಟಳತೆಗೆ, ಬ್ರಾಹ್ಮಣ ಶೂದ್ರರಂಥ ತೀರ ಭಿನ್ನವರ್ಣದವರಿಂದಾದ ಸಂತತಿಯು ತೇಜಸ್ವಿಯಾಗದೆಂದು ಬಗೆದು ಬ್ರಾಹ್ಮಣರು ಶೂದ್ರಸ್ತ್ರೀಯರೊಡನೆ ಲಗ್ನ ಬೆಳಿಸಕೂಡದೆಂದೇ ಕೊನೆಯ ನಿರ್ಣಯವಾಯಿತು. ಆರ್ಯರು ಪುರುಷರಿಗಿಂತ ಸ್ತ್ರೀಯರ ಕ್ಷೇತ್ರಕ್ಕೆ ಹೆಚ್ಚು ಗಮನ ಕೊಟ್ಟರು; ಉಚ್ಚವರ್ಣದ ಹೆಂಗಸರು ನೀಚವರ್ಣದ ಪುರುಷನನ್ನು ವರಿಸಿದರೆ, ಅದರಿಂದ ಸಮಾಜಕ್ಕೆ ಭಯಂಕರವಾದ ಹಾನಿ ತಟ್ಟುವದೆಂದರಿತುಕೊಂಡು, ಇಂಥವರಿಂದಾದ ಸಂತತಿಯು ತೀರ ನಿಂದ್ಯವಾದುದೆಂದು ನಿರ್ಧರಿಸಿದರು.

ವರ್ಣಸಂಕರದ ಗಂಡಾಂತರ:— ಆರ್ಯರಿಗೆ ವರ್ಣಸಂಕರದಷ್ಟು ಭೀತಿಪ್ರದವಾದ ಬೇರೊಂದು ಹೆದರಿಕೆ ಇರಲಿಲ್ಲ. ಪ್ರತಿಯೊಬ್ಬ ರಾಜನು ವರ್ಣಸಂಕರವಾಗಗೊಡದಂತೆ, ಎಚ್ಚರವಾಗಿರಬೇಕೆಂದು ಅಲ್ಲಲ್ಲಿ ಬಹುಪರಿಯಾಗಿ ಸೂಚಿಸಿದ್ದಾರೆ; ವರ್ಣ ಅಥವಾ ವಂಶವು

ಮನುಷ್ಯಸ್ವಭಾವದ ಮುಖ್ಯ ಅಡಿಗಲ್ಲಾಗಿರುವದರಿಂದ, ಅದು ಸಾಧ್ಯವಾದಷ್ಟು ಶುದ್ಧವಾಗಿರುವಂತೆ ಪ್ರಯತ್ನಿಸಬೇಕೆಂದು ಆರ್ಯರ ಎಣಿಕೆಯಾಗಿತ್ತು; ವರ್ಣ ಹಾಗೂ ಸ್ವಭಾವ ಇವೆರಡೂ ಸಾಮಾನ್ಯವಾಗಿ ಕೂಡಿಯೇ ಇರುತ್ತವೆನ್ನಲಕ್ಕೇನೂ ಅಡ್ಡಿಯಿಲ್ಲ. ಆದರೆ ಉಚ್ಚ, ನೀಚ ವರ್ಣಗಳ ಬೆರಿಕೆಯಾಯಿತೆಂದರೆ, ಅವರವರಲ್ಲಿಯ ಗುಣಸ್ವಭಾವಗಳು ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ಮೂಡಿ, ಇಂತಿಂತಹ ವರ್ಣ, ಜಾತಿಯವರ ಸ್ವಭಾವಗಳು ಹೀಗಿಗೇ ಇರುತ್ತವೆಂಬುವ ಸಿದ್ಧಾಂತವು ಲೋಪವಾಗುತ್ತದೆ; ಬ್ರಾಹ್ಮಣರ ಮೇಲ್ಮೆಯನ್ನು ಸಹಿಸದ ನಹುಷ ರಾಜನು ಬ್ರಾಹ್ಮಣರ ಛಲನೆಗೈದು, ಅವರ ಶಾಪದಿಂದ ಸರ್ಪನಾಗಿ ಬಿದ್ದಿರಲು, ಬಂದಾನೊಂದು ಕಾಲಕ್ಕೆ ಆ ಸರ್ಪನಾದ ನಹುಷನಿಗೂ, ಯುಧಿಷ್ಠಿರನಿಗೂ ಈ ಬಗ್ಗೆ ಮಾತುಕಥೆ ನಡೆಯಿತು; ಈ ಸಂದರ್ಭದೊಳಗೆ 'ಸರ್ಪನಾದ ನಹುಷ'ನು, ನಿಜವಾದ ಬ್ರಾಹ್ಮಣನು ಯಾರೆಂದು ಪ್ರಶ್ನಮಾಡಿದ್ದಕ್ಕೆ ಯುಧಿಷ್ಠಿರನು, ಯಾವನು ಶಾಂತಿ, ದಯಾ, ಸತ್ಯ, ಧರ್ಮ ಮೊದಲಾದ ದೈವಿಕಗುಣಗಳಿಂದ ಬೆಳಗುತ್ತಿರುವನೋ ಅತನೇ ಬ್ರಾಹ್ಮಣನೆಂದು ಉತ್ತರಿಸಿರುವನು; ಮತ್ತು ಈ ಪ್ರಶ್ನಕ್ಕೆ ಆಧಾರವೆಂದು ಬೆಳಿಸಿ ಮಾತಾಡುತ್ತಿರುವಾಗ ಧರ್ಮರಾಜನು "ಈಗ ಮುಖ್ಯ ಜಾತಿಯೆಂದರೆ, ಮನುಷ್ಯಜಾತಿಯೊಂದೇ; ಏಕೆಂದರೆ ಎಲ್ಲೆಲ್ಲಿಯೂ, ವರ್ಣಸಂಕರವಾಗಿದೆ; ಆದುದರಿಂದ ವರ್ಣನಿರ್ಣಯ ಮಾಡಲಿಕ್ಕೆ ಬರುವಂತಿಲ್ಲ; ಪೂರ್ವದಲ್ಲಿ ಯಾವನೊಬ್ಬನನ್ನು ವರ್ಣದಿಂದಲೇ ಗುರುತಿಸುತ್ತಿದ್ದರು. ಆದರೆ ಈಗ ಅದು ಅಳಿದು ಹೋಗಿ, ಅವನವನ ನಡೆಯಿಂದಲೂ, ಶೀಲದಿಂದಲೂ ಯಾರೆಂಬುದನ್ನು ನಿರ್ಧರಿಸಬೇಕಾಗಿದೆ"ಯೆಂದು ಹೇಳಿದ್ದಾನೆ. ಮೇಲಣ ಧರ್ಮ ಹಾಗೂ ಸರ್ಪರೂಪಿಯಾದ ನಹುಷ ರಾಜನ ವಾದವಿವಾದದಿಂದ ಭಾರತಕಾಲೀನ ಸ್ಥಿತಿಯ ಚಿತ್ರವು ಕಣ್ಮುಂದೆ ನಿಲ್ಲುವಂತಿದೆ.

ಉದ್ಯೋಗ ಭೇದಗಳು:--ಆರ್ಯರು ವರ್ಣಬೀಜಗಳಿಗೆ ಎಷ್ಟು ಪ್ರಾಶಸ್ತ್ಯವನ್ನು ಕೊಡುತ್ತಿದ್ದರೋ, ಅಷ್ಟೇ ಉದ್ಯೋಗವ್ಯವಸಾಯಕ್ಕೂ ಕೊಡುತ್ತಿದ್ದದರಿಂದ, ಇಂತಿಂಥವರಿಗೆ ಇಂತಿಂತಹ ಉದ್ಯೋಗ

ಗಳೆಂದೂ ಅವರು ಕಟ್ಟುಪಡಿಸಿದರು; ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಇವಿಷ್ಟು ಬ್ರಾಹ್ಮಣರ ಕರ್ಮಗಳು; ಕ್ಷತ್ರಿಯರಿಗೆ ಯಜನ, ಅಧ್ಯಯನ, ದಾನ ಇವಿಷ್ಟು ಕರ್ತವ್ಯಗಳಾಗಿದ್ದರೂ, ಅವರ ಮುಖ್ಯ ಕರ್ಮವೆಂದರೆ ಪ್ರಜಾಪಾಲನೆ ಮತ್ತು ಯುದ್ಧವಾಗಿದ್ದವು; ವೈಶ್ಯರಿಗೆ ಕ್ಷತ್ರಿಯರಂತೆ, ಮೂರೂ ಕರ್ಮಗಳನ್ನು ಆಚರಿಸಲಿಕ್ಕೆ ಸ್ವಾತಂತ್ರ್ಯವಿದ್ದರೂ, ಒಕ್ಕಲತನ, ಗೋರಕ್ಷಣ, ವ್ಯಾಪಾರ ಇವುಗಳು ಅವರ ಜನ್ಮಸಿದ್ಧ ಕಸಬುಗಳು. ಮೇಲಣ ಮೂರು ವರ್ಣದವರ ಸೇವೆಯೇ ಶೂದ್ರರ ವೃತ್ತಿಯು. ಆರ್ಯರು ಶೂದ್ರರನ್ನು ಈ ಮೇರೆಗೆ ಜಾತಿಯು ಹೊರಗೆ ಇಟ್ಟಂತೆ ಮಾಡಿದ್ದರೂ ಅವರನ್ನು ತಮ್ಮವರೆಂದು ತಿಳಿದು ಸಮಾಜದೊಳಗೆ ಅವರಿಗೆ ಯೋಗ್ಯಮಾನದ ಸ್ಥಳವನ್ನು ಕೊಟ್ಟಿದ್ದರು; ಪರಮಾತ್ಮನು ಹುಟ್ಟಿಸಿದ ಪ್ರಾಣಿಗಳಲ್ಲಿ ಹೇಗೆ ಮೇಲು ಕೀಳು ಜಾತಿಗಳಿರುವವೋ, ಅದರಂತೆಯೇ ಮನುಷ್ಯರಲ್ಲಿ ಜನ್ಮಸ್ವಭಾವಗಳಿಗನುಗುಣವಾಗಿ ಬೇರೆ ಬೇರೆ ಜಾತಿಗಳೂ, ಸ್ವಭಾವಗಳೂ, ಅವರಿಗೆ ತಕ್ಕಂತೆ ಕೆಲಸಗಳೂ ಹೊರ್ತಾಗಿ ಅವರೆಲ್ಲರಲ್ಲಿ ವಾಸಿಸುತ್ತಿರುವ ಪರಮಾತ್ಮನಿಗೇನೂ ಅಲ್ಲವೆಂಬ ವೇದಾಂತದ ಸಿದ್ಧಾಂತವನ್ನು ಮನದಟ್ಟು ಮಾಡಿಕೊಂಡಿದ್ದರಿಂದ ವಿವೇಕಸಂಪನ್ನರಾದ ಆರ್ಯರಿಗೆ ಬಹುಶಃ ಯಾವ ಜಾತಿಯ ವಿಷಯದಲ್ಲಿಯೂ ತಿರಸ್ಕಾರಭಾವವುಂಟಾಗುತ್ತಿರಲಿಲ್ಲ. ಆದುದರಿಂದ ಎಲ್ಲ ವರ್ಣದವರೂ ತಮ್ಮ ತಮ್ಮ ವರ್ಣಗಳಿಗೆ ಸಾಮಾನ್ಯವಾದಂಥ ಸತ್ಯ, ಅಹಿಂಸೆ, ಶಾಂತಿಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ತಮ್ಮ ವರ್ಣದ ಉದ್ಯೋಗ ವ್ಯವಸಾಯವನ್ನು ಅತ್ಯಂತ ಆಸ್ಥೆಯಿಂದಲೂ, ಕೀಳು ಮೇಲೆಂಬ ಭಾವನೆಯನ್ನಿಟ್ಟುಕೊಳ್ಳದೆಯೂ ಜರಿಗಿಸುತ್ತಿದ್ದರು. ಇದೇ ಆರ್ಯರ ಆರ್ಯತ್ವದ ಮುಖ್ಯ ಲಕ್ಷಣವಾಗಿತ್ತು.

ಬ್ರಾಹ್ಮಣರ ಉದ್ಯೋಗ:— ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವೆಲ್ಲ ವರ್ಣದವರು ಸಮಾಜಪುರುಷನ ಒಂದೊಂದು ಅಂಗಗಳಾಗಿದ್ದುದರಿಂದ ಅವರೆಲ್ಲರ ಮೇಲೆ ಒಂದೊಂದು ವಿಧವಾದ ಕರ್ತವ್ಯಭಾರವು ಇದ್ದೇ ಇತ್ತು; ಅದರೊಳಗೆ ಬ್ರಾಹ್ಮಣರು ವೇದಾಧ್ಯಯನ ಮಾಡಿಕೊಂಡು, ವೇದಗಳನ್ನು ಕಾಯುವ ಗುತ್ತಿಗೆಯನ್ನು ಹೊತ್ತಿದ್ದರು

ಲ್ಲದೆ, ಲೋಕಶಿಕ್ಷಣದ ಭಾರವನ್ನೂ ಅವರೇ ಹೊತ್ತುಕೊಂಡಿದ್ದರು; ಇಂಥ ಪವಿತ್ರವಾದ ಉದ್ಯೋಗವನ್ನು ಬ್ರಾಹ್ಮಣರು ಕೈಕೊಂಡದ್ದೇ ಅವರ ಪಾವಿತ್ರ್ಯಕ್ಕೂ, ದೊಡ್ಡಸ್ತಿಕೆಗೂ ಕಾರಣವಾಯಿತು; ವೇದಾಧ್ಯಯನವು ಮೂರೂವರ್ಣದವರಿಗೆ ಸಾಮಾನ್ಯವಿದ್ದರೂ, ಬ್ರಾಹ್ಮಣರು ಅದಕ್ಕೇ ತಮ್ಮ ಆಯುರ್ದಾಯವನ್ನು ಅಡವಿಟ್ಟು ಬ್ರಹ್ಮಚರ್ಯ, ಅಹಿಂಸಾ, ಸತ್ಯ ಮೊದಲಾದವುಗಳ ಬಲದಿಂದ ಈ ಪ್ರಚಂಡಕಾರ್ಯವನ್ನು ವಂಶಪರಂಪರೆಯಿಂದ ಅತ್ಯಂತ ನಿರಪೇಕ್ಷಬುದ್ಧಿಯಿಂದ ಸಾಗಿಸಿಕೊಂಡು ಬಂದರು; ಅದಕಾರಣ, ಆಗಿನಕಾಲದ ಬ್ರಾಹ್ಮಣರ ಹೊಟ್ಟೆಯ ಚಿಂತೆಯನ್ನು ಸಮಾಜದ ಜನರೂ ರಾಜನೂ ವಹಿಸಿ ನಡೆಯಿಸುತ್ತಿದ್ದರು; ಈ ರೀತಿಯಾಗಿ ಪ್ರಾಚೀನಕಾಲದ ಶಿಕ್ಷಣ ವ್ಯವಸ್ಥೆಯು ಮೇಲ್ತರದ್ದಾಗಿದ್ದು, ಲೋಕಶಿಕ್ಷಣದ ಮಹತ್ವವನ್ನರಿತುಕೊಂಡು, ಅದಕ್ಕಾಗಿ ನ್ಯಾಧ್ಯತ್ಯಾಗ ಮಾಡದೆ ಬೇರೆ ಗತಿಯಿಲ್ಲವೆಂದು ಅದಕ್ಕೇ ಟೊಂಕಕಟ್ಟಿಕೊಂಡು ನಿಂತ ಬ್ರಾಹ್ಮಣಶಿಕ್ಷಕರದೊಂದು ಸ್ವತಂತ್ರವಾದ ಪಂಗಡವೇ ಮೆರೆಯುತ್ತಿತ್ತು; ಬುದ್ಧಿಯಲ್ಲಿಯೂ, ನೀತಿಯಲ್ಲಿಯೂ ಬ್ರಾಹ್ಮಣರ ಕೈಹಿಡಿಯುವವರಾರೂ ಇರಲಿಲ್ಲ. ಈಗಿನಂತೆ ಆಗ ಸರಕಾರದವರು ನಡೆಯಿಸಿದ ಸಾರ್ವಜನಿಕ ಶಾಲೆಗಳಿರದಿದ್ದರೂ, ಪ್ರತಿಯೊಂದು ಬ್ರಾಹ್ಮಣರ ಮನೆಯೇ ಒಂದೊಂದು ಶಾಲೆಯಾಗಿದ್ದಿತು. ಮತ್ತು ಅವುಗಳಿಗೆ ರಾಜನ ಆಶ್ರಯವಿರುತ್ತಿತ್ತು; ಪ್ರಕೃತಕಾಲದಲ್ಲಿ ಊರಿಗೆ ಒಂದೊಂದು ಎರಡೆರಡು ಹೀಗೆ ಪಾಠಶಾಲೆಗಳಿದ್ದರೆ, ಆಗ ಮನೆಮನೆಗೊಂದೊಂದು ಪಾಠಶಾಲೆಯು. ವಿದ್ಯಾರ್ಥಿಯಾಗಿ ಬಂದವನಿಗೆ ಗುರುವು ಪ್ರತಿಫಲದ ಆಶೆಯಿಲ್ಲದೆ, ಮನೆಯಲ್ಲಿಟ್ಟುಕೊಂಡು ಕಲಿಸಬೇಕೆಂದು ನಿಯಮವಿದ್ದಿತು; ಬ್ರಾಹ್ಮಣರು ವಿದ್ಯಾರ್ಥಿಗಳಿಗೆ ಬರಿಯ ಧಾರ್ಮಿಕಜ್ಞಾನವನ್ನಷ್ಟೇ ಕೊಡದೆ, ಅವರವರಿಗೆ ಇಷ್ಟವಿರುವ ಭಿನ್ನಭಿನ್ನ ಉದ್ಯೋಗಗಳನ್ನೂ ಕಲಿಸುತ್ತಿದ್ದರು. ಸಮಾಜದ ಅಂಗಭೂತರಾದವರಿಗೆ ಅವರವರ ತೆರವಾಗಿ ಶಿಕ್ಷಣ ಕೊಡುವದು ಬ್ರಾಹ್ಮಣರ ನಾಮಾಜಿಕ ಉದ್ಯೋಗವಿತ್ತು; ಆದರೂ, ಅವರಿಗೆ ವೈಯಕ್ತಿಕ ಕರ್ತವ್ಯವೆಂಬುದೊಂದು ಇದ್ದೇ ಇತ್ತು; ಅದೇ ಯಜನ, ಅಥವಾ ಯಾಜನ; ಯಜನವೆಂದರೆ ಯಜ್ಞ

ಮಾಡುವದು; ಗೃಹಸ್ಥಾಶ್ರಮಿಯಾದ ಬ್ರಾಹ್ಮಣನು ಮನೆಯಲ್ಲಿ ಅಗ್ನಿಯನ್ನಿಟ್ಟುಕೊಂಡು ದಿನಾಲು ಅಗ್ನಿಪೂಜೆ, ಹೋಮಹವನಾದಿಗಳನ್ನು ನಡೆಯಿಸಲೇಬೇಕೆಂದು ಧರ್ಮಾಜ್ಞೆಯಿತ್ತು; ಇದನ್ನು ಅವರು ಅತ್ಯಂತ ನಿಷ್ಠೆಯಿಂದ ನಡೆಯಿಸುತ್ತಿದ್ದರು. ವಿದ್ವಾಂಸರಾದ ಬ್ರಾಹ್ಮಣರ ಜೀವನ ನಡೆಯುಲಿಕ್ಕೆ ಇದೊಂದು ಉದ್ಯೋಗವಿದ್ದು, ಅದರಲ್ಲಿಯೇ ಒಂದು ಬಗೆಯಿಂದ ಸಮಾಜಕಲ್ಯಾಣದ ಪವಿತ್ರವಾದ ಉದ್ದೇಶವು ಹೇಗೆ ಹಂಚಿಕೆಯಿಂದ ಅಡಕವಾಗಿತ್ತೆಂಬುದು ಸ್ಪುಟವಾಗುತ್ತದೆ. ಬ್ರಾಹ್ಮಣರ ಲೋಕಶಿಕ್ಷಣ, ಲೋಕಹಿತಚಿಂತನೆಯ ಈ ಕಾರ್ಯಗಳ ಮೇಲ್ಕೈಯನ್ನು ಕಂಡುಹಿಡಿದು, ಅವರು ಜನರಿಂದ ದಾನ ಸ್ವೀಕಾರಮಾಡಬಹುದೆಂದು ಅಧಿಕಾರ ಕೊಟ್ಟಿದ್ದರು. ಭಾರತಕಾಲದ ಸ್ಥಿತಿಯನ್ನು ಅವಲೋಕಿಸಿದರೆ, ಎಲ್ಲ ಬ್ರಾಹ್ಮಣರು ಬರಿಯ ಅಧ್ಯಯನ, ಅಧ್ಯಾಪನ, ಅಥವಾ ಯಜನ ಯಾಜನಗಳಲ್ಲಿಯೇ ಸಂಪೂರ್ಣವಾಗಿ ತೊಡಗಿದ್ದರೆಂದು ಹೇಳಲಿಕ್ಕೆ ಬರುವಂತಿಲ್ಲ; ಏಕೆಂದರೆ, ವೇದಾಧ್ಯಯನ ಹಾಗೂ ಅನ್ನದಾನ ಮಾಡದ ಬ್ರಾಹ್ಮಣರು ಶೂದ್ರಸಮರೆಂದೂ, ಧರ್ಮನಿಷ್ಠ ರಾಜನು ಅಂಧವರಿಂದ ತೆರಿಗೆ ತೆಗೆದುಕೊಳ್ಳಬೇಕೆಂದೂ, ಸಮಯ ಬಂದರೆ, ಅವರಿಗೆ ಬಿಟ್ಟಿಯ ಕೆಲಸಗಳನ್ನು ಹಚ್ಚಬಹುದೆಂದೂ ಹೇಳಿದೆ. ಜನಾಂಗದೊಳಗೆ ಬ್ರಾಹ್ಮಣನು ಕಳ್ಳತನದಿಂದ ಜೀವಿಸತೊಡಗಲು, ರಾಜನು ಅತನ ಚರಿತಾರ್ಥವನ್ನು ಸ್ವತಃ ನಡೆಯಿಸಬೇಕೆಂದೂ, ಇಷ್ಟಕ್ಕೂ ನಿಲ್ಲದೆ, ಅತನು ಕಳ್ಳತನವನ್ನು ಬಿಡದಿದ್ದರೆ, ಅವನನ್ನು ತನ್ನ ರಾಜ್ಯದಿಂದ ಹೊರದೂಡಬೇಕೆಂದೂ ಹೇಳಿದ್ದಾರೆ.

ಬ್ರಾಹ್ಮಣರು ಬರಿಯ ಶುದ್ಧ ಬ್ರಾಹ್ಮಣವೃತ್ತಿಯಿಂದಲೇ ಇರುವದು ಸ್ತುತ್ಯವೂ, ಪವಿತ್ರವೂ ಇದ್ದಾಗ್ಯೂ ಕೆಲವರಿಗೆ ಸ್ವಭಾವಗುಣ ಭೇದದಿಂದ ಸಾಧ್ಯವಿರದ್ದರಿಂದ ತಮತಮಗೆ ಸರಿಕಂಡಂತೆ, ಸೈನ್ಯದೊಳಗೆ ಸೈನಿಕರಾಗಿಯೂ, ಪುರೋಹಿತರಾಗಿಯೂ, ಕಾಲಾಳುಗಳಾಗಿಯೂ, ದೂತರಾಗಿಯೂ, ಕುದುರೆ ಸವಾರರಾಗಿಯೂ, ಅನೆಯ ಮಾವುತರಾಗಿಯೂ, ಹಡಗ ನಡೆಯಿಸುವವರಾಗಿಯೂ, ಜೀವಿಸುತ್ತಿದ್ದರು. ಬ್ರಾಹ್ಮಣರಲ್ಲಿ ಸ್ಫುಟಿಯುತ್ತಿದ್ದ ವೈರಾಗ್ಯಶಾಂತಿಗಳ ಕಳೆಯು ಭಾರತ

ಕಾಲದೊಳಗೆ ಕಂದಿಕುಂದಿ ಅವರಿಗೆ ಲೌಕಿಕವ್ಯಾಪಹಾರಿಕ ಪ್ರೌಢಿಮೆಯ ಕಡೆಗೆ ಮನಸು ಎಳೆಯಲಾರಂಭಿಸಿತ್ತು; ಇದನ್ನೆಲ್ಲ ತಿಳಿದುಕೊಂಡು ಅವದ್ಧರ್ಮವೆಂದು ಬ್ರಾಹ್ಮಣರು ಕೃಷಿ, ವಾಣಿಜ್ಯ, ವ್ಯವಸಾಯಗಳನ್ನು ಅವಲಂಬಿಸಿ ಜೀವಸನಡೆಯಿಸಬೇಕೆಂದು ಹೇಳಿದೆ.

ಕ್ಷತ್ರಿಯರು:- ಕ್ಷತ್ರಿಯರಿಗೂ ಬ್ರಾಹ್ಮಣರಂತೆ, ವೇದಾಧ್ಯಯನ ಮಾಡಿಕೊಂಡು ತಮ್ಮ ಮನೆಯಲ್ಲಿ ಅಗ್ನಿಪೂಜೆಯನ್ನು ನಡೆಯಿಸುವ ಪದ್ಧತಿಯು ಇತ್ತಷ್ಟೇ! ಆದರೂ, ಕೇವಲ ಉಪಜೀವನಕ್ಕಾಗಿ ಈ ಕಾರ್ಯಗಳನ್ನು ಎಂದೂ ಮಾಡುತ್ತಿರಲಿಲ್ಲ; ಪ್ರಾಚೀನ ಕ್ಷತ್ರಿಯರು ವೇದಾಧ್ಯಯನಾದಿಗಳಲ್ಲಿ ಬ್ರಾಹ್ಮಣರನ್ನು ಸರಿಗಟ್ಟುತ್ತಿದ್ದರು. ಭಾರತೀಯುದ್ಧದ ಕಾಲಕ್ಕೆ ಎಲ್ಲ ಕ್ಷತ್ರಿಯರು ನಿತ್ಯಗೃಹ್ಯಾಗ್ನಿಕರ್ಮವನ್ನಾಚರಿಸುತ್ತಿದ್ದ ಬಗ್ಗೆ ಪ್ರಮಾಣಗಳಿವೆ. ಶ್ರೀಕೃಷ್ಣನು ಶಿಷ್ಟಾಯಿಗೆಂದು ಹೋದಾಗ ಬೆಳಗಿನಲ್ಲೆದ್ದು ವಿದುರನ ಮನೆಯಲ್ಲಿ ನಿತ್ಯಸಂಧ್ಯಾವಂದನೆ ತೀರಿಸಿಕೊಂಡು ಅಗ್ನಿಗೆ ಆಹುತಿ ಕೊಟ್ಟನಂತೆ! ಬರಬರುತ್ತ ವೇದವನ್ನೋದುವವರ ಸಂಖ್ಯೆಯು ಕಡಿಮೆಯಾಯಿತು; ಸ್ವತಃ ಯುಧಿಷ್ಠಿರನು ಯಜ್ಞಕಾರ್ಯದೊಳಗೆ ಒಳ್ಳೇ ಕುಶಲನಿದ್ದನಂತೆ! ಕ್ಷತ್ರಿಯರ ಪ್ರಮುಖವಾದ ಉದ್ಯೋಗವು ಪ್ರಜೆಗಳ ರಕ್ಷಣೆ, ಯುದ್ಧ ಇವಿದ್ದಾಗ್ಯೂ, ಬ್ರಾಹ್ಮಣರು ಹೇಗೆ ಆಪತ್ಕಾಲದಲ್ಲಿ ಕೀಳು ವ್ಯವಸಾಯವನ್ನು ಆಶ್ರಯಿಸಿಕೊಂಡಿರುತ್ತಿದ್ದರೋ ಹಾಗೆ ಕ್ಷತ್ರಿಯರಾದರೂ ವೈಶ್ಯವೃತ್ತಿಯಿಂದ ಜೀವಿಸುತ್ತಿದ್ದರು. ಆ ಕಾಲದಲ್ಲಿ ಚಿಕ್ಕಚಿಕ್ಕ ರಾಜ್ಯಗಳಿದ್ದು, ಬಹಳವಾಡಿ ಕ್ಷತ್ರಿಯ ರಾಜರೇ ಇರುತ್ತಿದ್ದರು; ಕ್ಷತ್ರಿಯರ ಹೊರ್ತು ರಾಜ್ಯವಾಳಲಿಕ್ಕೆ ಬೇರೆಯವರಿಗೆ ಅಧಿಕಾರವೇ ಇರಲಿಲ್ಲ; ಮಹಾಭಾರತಕಾಲವಾದ ನಂತರ ಈ ನಿಯಮವು ಮುರಿದುಹೋಯಿತು.

ವೈಶ್ಯ ಮತ್ತು ಶೂದ್ರರು:- ವೈಶ್ಯರು ಮೂರು ವರ್ಣಗಳಲ್ಲಿ ಕಡೆಯವರಾದರೂ ಅವರು ಬಹು ದಿನಗಳವರೆಗೆ ಒಂದೇಸಮವಾಗಿ ಹೇಗೆತೀ ತಮ್ಮ ವರ್ಣದ ವೃತ್ತಿಯಾದ ಗೋರಕ್ಷಣ, ವ್ಯಾಪಾರಗಳನ್ನು ನಡೆಯಿಸುತ್ತಲೇ ಯಜನ-ಯಾಜನಗಳನ್ನು ನಡೆಯಿಸುತ್ತಿದ್ದರು. ಆದರೆ ಮುಂದೆ ಅವರ ಕೈಯಿಂದ ಈ ಕಾರ್ಯಗಳು ನೀಗದೆ ನಿಂತುಹೋದವು;

ಅವರುಕೈಕೊಂಡ ಒಕ್ಕಲತನ,ವ್ಯಾಪಾರಗಳಿಂದ ಕನಬುಗಳು ನಿಃಸಂಶಯವಾಗಿ ಅವರ ಧಾರ್ಮಿಕ ಕಾರ್ಯಗಳಿಗೆ ಅಡ್ಡಿವಾಗಿ ಅವರನ್ನು ಬಿಡಿಸಿರಬಹುದೆಂದು ತೋರುತ್ತದೆ. ಆದುದರಿಂದ ಮುಂದೆ ಮುಂದೆ ವೈಶ್ಯರು, ಇದೇ ಕಾರ್ಯವನ್ನು ಹೊತ್ತುನಾಗಿಸುತ್ತಿರುವ ಬ್ರಾಹ್ಮಣರಿಗೆ ಬೇಕಾದ ಹಣಸಹಾಯ ಕೊಟ್ಟು ಕೃತಾರ್ಥರಾದೆವೆಂದು ಬಗೆಯುತ್ತಿದ್ದರೆಂದು ಕಾಣುತ್ತದೆ. ಗೋಕುಲದೊಳಗಿನ ವ್ರಜಗೋಪರು ವೈಶ್ಯಜಾತಿಯವರಿದ್ದು, ಅವರು ಯಜ್ಞಮಾಡಿದ ಬಗ್ಗೆ ಭಾಗವತದಲ್ಲಿ ಉಲ್ಲೇಖವಿದೆ.

ಶೂದ್ರರು:- ಪುರಾತನಕಾಲದಲ್ಲಿ ಶೂದ್ರರೆಂದರೆ ಕೇವಲ ದಾಸವೃತ್ತಿಯವರು. ಮೂರು ವರ್ಣದವರನ್ನು ಸೇವಿಸಿ, ಅವರು ಹಾಕಿದ್ದನ್ನು ಉಂಡು, ಕೊಟ್ಟದ್ದನ್ನು ಉಟ್ಟು ಜೀವಿಸುತ್ತಿದ್ದರು. ಅವರಿಗೆ ಹಣವನ್ನು ಕೂಡಿಡಲಿಕ್ಕೂ ಅಧಿಕಾರವಿರಲಿಲ್ಲ. ಆದರೆ ಶೂದ್ರರ ಸಂಖ್ಯೆಯು ಹೆಚ್ಚಿದ ಹಾಗೆಲ್ಲವೂ, ಆರ್ಯರು ದಕ್ಷಿಣಕ್ಕೆ ಒಕ್ಕಲಾಗಿರಲಿಕ್ಕೆ ಹೋದಂತೆಯೂ, ದಕ್ಷಿಣದಲ್ಲಿ ವೈಶ್ಯರು ಇಲ್ಲದ್ದರಿಂದ ಮೆಲ್ಲಮೆಲ್ಲಗೆ ಭೂಮಿಯನ್ನು ಉಳುವ ವ್ಯವಸಾಯವು ಶೂದ್ರರ ಕೈಸೇರಿತು. ಅಮೇಲೆ ಇಷ್ಟು ದಿವಸಗಳ ತನಕ ಶೂದ್ರರು ಧನಸಂಚಯ ಮಾಡಬಾರದೆಂದಿದ್ದ ನಿರ್ಬಂಧವು ಸಡಿಲಾಗಿ ಅರಸನ ಅಪ್ಪಣೆ ಪಡೆದು ಶೂದ್ರನು ಧನಸಂಚಯ ಮಾಡಬಹುದೆಂಬ ಅಧಿಕಾರವು ಸಿಕ್ಕಿತು. ಬರಬರುತ್ತ ಯಜ್ಞಯಾಗಾದಿಗಳನ್ನು ಶೂದ್ರರು ನೆರವೇರಿಸಬಹುದಾಗಿ ಅಧಿಕಾರವು ದೊರೆಯಿತು. ಶೂದ್ರರು ಅಮಂತ್ರಕ ಯಜ್ಞ ಮಾಡಬಹುದು. ತ್ರಿವರ್ಣದವರು ತಮ್ಮನ್ನು ಇಷ್ಟಾದರೂ ಮುಂದಕ್ಕೆ ಕರೆದು, ಕೆಲಕೆಲವು ಅಧಿಕಾರಗಳನ್ನು ಕೊಟ್ಟ ಬಗ್ಗೆ ಶೂದ್ರರಿಗೆ ಬಂದು ರೀತಿಯಿಂದ ಆನಂದವೇ ಆಯಿತು.

ಆಶ್ರಮ ವ್ಯವಸ್ಥೆ:- ಆರ್ಯರ ಚಾತುರ್ವರ್ಣ್ಯವ್ಯವಸ್ಥೆಯೆಂದರೆ, ಆರ್ಯಜನಸಮಾಜಕ್ಕೆ ಅಭೇದ್ಯವಾದುದೆಂದು ಕೋಟೆಯೇ ಸರಿ. ಈ ಭದ್ರವಾದ ಕೋಟೆಯು ಬಹು ಪುರಾತನಕಾಲದ್ದಿದ್ದು, ಅದಿದ್ದುದರಿಂದಲೇ, ಆರ್ಯಸಮಾಜಕ್ಕೂ, ಅದರ ಜೀವಾಳವಾದ ಧರ್ಮಕ್ಕೂ ಯಾರೂ ಕೈಹಚ್ಚಲಿಕ್ಕಾಗದೆ, ಪರಧರ್ಮದ ಹೊಡತಗಳೆಂಬ ಚಳಿ, ಮಳೆ, ಬಿಸಿಲು, ಬಿರುಗಾಳಿಗಳಿಗೆ ಮೈಗೊಟ್ಟು, ಅದು ಪೊದಲಿನಂತೆ ತಲೆ

ಯೆತ್ತಿಕೊಂಡೇ ನಾವಿರಾರು ವರ್ಷಗಳಿಂದ ಅಚ್ಚಳಿಯದೆ ಹಾಗೇ ನಿಂತುಕೊಂಡಿರುತ್ತದೆ. ಆರ್ಯರ ಆರ್ಯತ್ವವನ್ನು ಕಾಯಲಿಕ್ಕೆ ವರ್ಣ ವ್ಯವಸ್ಥೆಯು ವಿಲಕ್ಷಣವಾದುದೊಂದು ಸಾಧನೆಯಾಗಿರುವಂತೆ, ಆಶ್ರಮ ವ್ಯವಸ್ಥೆಯೂ ಒಂದಾಗಿದೆ; ವರ್ಣವ್ಯವಸ್ಥೆಯು ಹೊರಗಿನ ಶತ್ರುಗಳಿಂದ ಬರುವ ಏಟುಗಳಿಗೆ ಭದ್ರವಾದ ಕೋಟೆಕೊತ್ತಳದಂತಿದ್ದರೆ, ಆಶ್ರಮವ್ಯವಸ್ಥೆಯು ಒಳಗಿನ ಶತ್ರುಗಳಿಂದ ಯಾವ ಬಗೆಯು ಕಾಟವಾಗಬಾರದಂತೆ, ಆಯಾ ಆಶ್ರಮಗಳಲ್ಲಿ ಮನುಷ್ಯನನ್ನು, ಕಾಯುತ್ತಿರುತ್ತದೆ. ವರ್ಣವ್ಯವಸ್ಥೆಯು ಹೊರಗಣ ಅವಯವಗಳಿಗೆ ಬಲಗೊಡುತ್ತದೆ. ಆಶ್ರಮವ್ಯವಸ್ಥೆಯು ಒಳಗಣ ನರಗಳಿಗೆ ಬೆಂಬಲವಾಗುತ್ತದೆ. ಹೀಗೆ ಒಂದೊಂದು ದೃಷ್ಟಿಯಿಂದ ಒಂದೊಂದರ ಭಾರವಣೆಯನ್ನರಿತುಕೊಂಡರೆ, ಆರ್ಯರು ಕಟ್ಟುವ ಕಾರ್ಯದೊಳಗೆ ಎಷ್ಟು ದೂರದರ್ಶಿಗಳೂ, ಜ್ಞಾನಿಗಳೂ ಇದ್ದರೆಂಬುದು ತಿಳಿಯುತ್ತದೆ. ಮತ್ತು ಇವೆಲ್ಲವುಗಳನ್ನು ಧರ್ಮವೆಂಬ ಜೀವಾಳವನ್ನು ಅನುಲಕ್ಷಿಸಿಯೇ ನಾಗಿಸಬೇಕೆಂದರು. ಆದುದರಿಂದ ಮನುಷ್ಯನು ಬಾಲ್ಯಾವಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ನಡೆಯಿಸಿ, ತಾರುಣ್ಯದೊಳಗೆ ಸಂಸಾರದ ಭಾರಹೊರತಕ್ಕದ್ದು; ನಾಲ್ಕು ಮಕ್ಕಳುಮರಿಗಳಾದ ನಂತರ, ಸಂಸಾರದಿಂದ ದೂರಾಗಿ ಈಶ ಚಿಂತನೆಯಲ್ಲಿ ಮಿಕ್ಕ ಆಯುಷ್ಯವನ್ನು ಕಳೆಯಬೇಕೆಂದು ನಿರ್ಧರಿಸಿದರು. ಅಂದರೆ, ಮೊದಲು, ಬಾಲ್ಯದೊಳಗೆ ನಾಕಷ್ಟು ಬಲವನ್ನು ಶೇಮುರಿಸಿಕೊಂಡು, ಆಮೇಲೆ ದಾರೀನಡೆಯಲಿಕ್ಕೆ ಸಜ್ಜಾಗುವ ಆರ್ಯರ ಕಲ್ಪನೆಯು ಎಷ್ಟೊಂದು ಸುಂದರವೂ, ಸಮಾಜ-ಹಿತಕರವೂ ಆಗಿದೆ! ಈ ಆಶ್ರಮ ವ್ಯವಸ್ಥೆಯು ಮೊಟ್ಟಮೊದಲು ಬಹು ಬಿಕ್ಕಟ್ಟಾಗಿಯೇ ಇತ್ತು; ಮತ್ತು ಅದು ಎಲ್ಲಿಯ ತನಕ ಬಿಗಿಯಾಗಿತ್ತೋ, ಅಲ್ಲಿಯ ಪರ್ಯಂತ ಸಮಾಜಸ್ಥಿತಿಯೂ ಬಿಕ್ಕಟ್ಟಾಗಿದ್ದು, ಸಮಾಜದ ಪ್ರತಿಯೊಂದು ಅಂಗಗಳೂ, ಅವಯವಗಳೂ, ಹೊಸ ಚೈತನ್ಯದಿಂದ ತುಂಬಿಕೊಂಡು ತೇಜವಡೆಯುತ್ತಿದ್ದವು; ಇತ್ತಿತ್ತ ಅವು ಸರಿಯಾಗಿ ನಡೆಯದ್ದರಿಂದ ಈ ಹೊತ್ತು ನಮ್ಮ ಹಿಂದೂಸಮಾಜವೆಂಬ ಕಟ್ಟು ಬಿಚ್ಚಿಹೋದ ಕಟ್ಟಿಗೆಯ ಹೊರೆಯಂತಾಗಿದೆ.

ಮೂರೂ ವರ್ಣದವರು ತಮ್ಮ ಜೀವಮಾನದೊಳಗೆ ಅವಶ್ಯವಾಗಿ ಹಾಯ್ದುಹೋಗಲೇಬೇಕೆಂದು ಆರ್ಯರು ನಿರ್ಧರಿಸಿದ ಕ್ರಮಗಳೆಂದರೆ ಬ್ರಹ್ಮಚರ್ಯ, ಗೃಹಸ್ಥಾಶ್ರಮ, ವಾನಪ್ರಸ್ಥ, ಹಾಗೂ ಸನ್ಯಾಸ. ಇವುಗಳಲ್ಲಿ ಮೊದಲನೇಯದಾದ ಬ್ರಹ್ಮಚರ್ಯ ಅವಸ್ಥೆಯಲ್ಲಿ ಮನುಷ್ಯನು ತನ್ನ ಆಯುಷ್ಯದ ಒಂದು ನಾಲ್ಕಾಂಶ ಭಾಗವನ್ನು ಕಳೆಯತಕ್ಕದ್ದು. ಅಂದರೆ ಏನಿಲ್ಲೆಂದರೂ ೨೫ ವರ್ಷ; ಈ ಇಪ್ಪತ್ತೈದು ವರ್ಷಗಳನ್ನು ಗುರುಕುಲದೊಳಗೆ ಕಳೆಯುವದೆಂದರೆ, ಅದೊಂದು ಯಜ್ಞವೇ ಆಗಿತ್ತು. ಧರ್ಮತತ್ವದ ಜ್ಞಾನಪಡೆಯಬೇಕೆಂದು ಗುರುವಿನ ಬಳಿಯಲ್ಲಿ ವಾಸವಾಗಿರತಕ್ಕದ್ದು; ಗುರುವು ಮಲಗಿಕೊಂಡ ತರುವಾಯ ತಾನು ಮಲಗತಕ್ಕದ್ದು; ಗುರುವಿನ ಮನೆಯಲ್ಲಿ ಬಿದ್ದ ಉಚ್ಚನೀಚ ಕೆಲಸಗಳನ್ನೆಲ್ಲ ಅವರು ಹಿಂದುಮುಂದು ನೋಡದೆ ಮಾಡತಕ್ಕದ್ದು; ಕೆಲಸ ತೀರಿಸಿಕೊಂಡು ಗುರುವಿನ ಹತ್ತರ ಅಧ್ಯಯನಕ್ಕಾಗಿ ಹೋಗತಕ್ಕದ್ದು; ಯಾವಾಗಲೂ ಶುಚಿಯಾಗಿಯೂ, ಕಾರ್ಯದಕ್ಷನಾಗಿಯೂ ಇರಲಿಕ್ಕೆ ಬೇಕು. ಹೂ, ಗಂಧ, ಸುವಾಸನೆಯ ಎಣ್ಣೆ ಮೊದಲಾದವುಗಳನ್ನೂ, ಸವಿಸವಿ ಪದಾರ್ಥಗಳನ್ನೂ, ಸೇವಿಸಕೂಡದು; ಮನಸಿನಿಂದಲೂ, ದೇಹದಿಂದಲೂ, ಪ್ರತಿಜ್ಞನಾಗಿರಬೇಕು. ಮಧ್ಯಾಹ್ನ, ಹಾಗೂ ಸಾಯಂಕಾಲ ಊಟದ ಸಲುವಾಗಿ ಯೋಗ್ಯರಾದವರ ಮನೆಗೆ ಭಿಕ್ಷೆಗಾಗಿ ಹೋಗಿ ಬರತಕ್ಕದ್ದು; ಮತ್ತು ಅದನ್ನು ಗುರುವಿಗೆ ಅರ್ಪಿಸಿ, ತಾನುಣ್ಣತಕ್ಕದ್ದು; ವೀರ್ಯ ರಕ್ಷಣವೇ ಬ್ರಹ್ಮಚರ್ಯದ ಮುಖ್ಯ ಕಾರ್ಯ. ಈ ಮೇರೆಗೆ ಬ್ರಹ್ಮಚರ್ಯದ ನಿಯಮಗಳು ಬಹು ಕಠಿಣವಿದ್ದುದರಿಂದ ಬ್ರಹ್ಮಚರ್ಯವೆಂದರೆ, ಅದೊಂದು ಶಾರೀರಿಕ, ಮಾನಸಿಕ, ಯಜ್ಞವೇ ಆಗಿತ್ತು; ಬ್ರಹ್ಮಚರ್ಯಾವಸ್ಥೆಯಲ್ಲಿ ಬ್ರಹ್ಮಚಾರಿಯು ಗ್ರಹಸ್ಥಾಶ್ರಮಿಗಳಾದವರ ಮಗನೇ ಆಗಿರುತ್ತಿದ್ದನು. ಅವನು ಮನೆ ಮನೆಗೆ ಹೋಗಿ 'ಭವತಿ ಭಿಕ್ಷಾಂದೇಹಿ' ಹೀಗೆನ್ನುವದರಿಂದ, ಬಂದೇಸಲಕ್ಕೆ ಅವನಲ್ಲಿ ನಮ್ರಭಾವ, ಅಭಿಮಾನ ನಾಶ, ಸ್ತ್ರೀಜಾತಿಯ ವಿಷಯದಲ್ಲಿ ತಾಯಿಯ ಭಾವನೆಗಳು ಉಂಟಾಗುತ್ತಿದ್ದವು; ಮನೆಮನೆಯಲ್ಲಿಯ ಗೃಹಿಣಿಯರು ಬ್ರಹ್ಮಚಾರಿಯು ಭಿಕ್ಷೆಗೆ ಬರುವ ದಾರೀಕಾಯ್ದು, ಅವನಿಗೆ ಶುದ್ಧಾನ್ನ

ವನ್ನು ನೀಡುತ್ತಿದ್ದು ತಮ್ಮ ಪುಣ್ಯಾವಿತ್ರ್ಯಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಬಿಸಿಲಲ್ಲಿ ಬಳಲಿ ಬೆಂಡಾಗಿ ಭಿಕ್ಷೆಗಾಗಿ ಬರುವ ಬಡ, ಹಾಗೂ ಬಾಲಬ್ರಹ್ಮಚಾರಿಗಳು ತಮ್ಮ ಕಂದಮ್ಮಗಳೆಂದು ಕನಿಕರದಿಂದ, ಅವರು ಭಿಕ್ಷೆಗೆ ಬರುವ ದಾರಿಯನ್ನು ಕಾಯುತ್ತ ಕುಳಿತಿರುವ ಆ ದಿವ್ಯಮಾತೆಯರೂ, ಮನೆ ಮನೆಗಳಲ್ಲಿ ತಮ್ಮ ತಾಯಂದಿರಿರುವರೆಂಬ ಭಾವನೆಯಿಂದ ನಿಃಸಂದೇಹವಾಗಿ ತಿರುಗುವ ಸೂರ್ಯನಂಥ ತೇಜಸ್ಸಿನ ಬ್ರಹ್ಮಚಾರಿಗಳೂ ಧನ್ಯರು! ಭಾರತಕ್ಕೆ ಇನ್ನೆಂದು ಅಂಥ ದಿವ್ಯ ಮುಹೂರ್ತ ಬರುವದು? ಈ ಬಗೆಯಿಂದ ತೀರ ಕಠಿಣ ವ್ರತದಿಂದಿದ್ದುಕೊಂಡು ಗುರುವಿಗೆ ದಕ್ಷಿಣೆ ಸಲ್ಲಿಸಿ, ಆ ಬಳಿಕ ಯಥಾವಿಧಿ ಸಮಾವರ್ತನೆಪೂರ್ವಕವಾಗಿ ಮದುವೆಯಾಗತಕ್ಕದ್ದು. ಎಂದು ಮುಂತಾಗಿ ನಿಯಮಗಳಿದ್ದವು. ಮತ್ತು ಈ ನಿಯಮಗಳನ್ನು ಬಾಲ್ಯದೊಳಗೆ ರಾಮ ಕೃಷ್ಣಾದಿ ಅವತಾರಿಕರು ಸಹ ಮೀರದಂತೆ ಅನುಸರಿಸಿದ ಬಗ್ಗೆ ಅವರ ಉದಾತ್ತವಾದ ಚರಿತ್ರಗಳೇ ಸಾಕ್ಷಿಯಾಗಿವೆ.

ಗೃಹಸ್ಥಾಶ್ರಮ ಧರ್ಮ:—ಆರ್ಯರು ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮದ ಬೆಲೆ ಹೆಚ್ಚಿಸದೆಂದು ಅತಿಶಯವಾಗಿ ಬಣ್ಣಿಸಿದ್ದಾರೆ; ಗೃಹಸ್ಥನು ವಿವಾಹ ಮಾಡಿಕೊಂಡು ಅಗ್ನಿಯನ್ನಿಟ್ಟುಕೊಂಡು, ಯಜನ, ಯಾಜನ, ಅಧ್ಯಯನಾದಿಕರ್ಮಗಳನ್ನು ನಾಗಿಸುತ್ತ ಇರಬೇಕು. ಅವನು ತನ್ನ ನಾವ್ಹರ್ಧಕ್ಯಾಗಿಯೇ ಅನ್ನ ಬೇಯಿಸಕೂಡದು; ಪಶು ಹಿಂಸೆಯನ್ನು ಮಾಡಬಾರದು; ಹಗಲು, ಪೂರ್ವರಾತ್ರೆಯಲ್ಲಿ ಹಾಗೂ ಉತ್ತರರಾತ್ರೆಯಲ್ಲಿ ಮಲಗಿರಬಾರದು. ಗೃಹಸ್ಥನಾಗಿದ್ದರೂ ಬ್ರಹ್ಮಚರ್ಯವನ್ನು ಬಳ್ಳೀ ಶ್ರದ್ಧೆಯಿಂದ ಕಾಯಲಿಕ್ಕೆಬೇಕು. ಬ್ರಹ್ಮಚಾರಿಣಾಗೂ ಸನ್ಯಾಸಿಗಳಿಗೆ ಅನ್ನ ಕೊಟ್ಟು ಉಳಿದನ್ನವನ್ನು ತಾನು ಸೇವಿಸಬೇಕು. ಇಂಥ ಅನ್ನವು ಅಮೃತವೆಂದು ಹೇಳಿದೆ. ಅಂದರೆ, ಗೃಹಸ್ಥನಾದವನು, ಪಂಚಮಹಾಯಜ್ಞಗಳನ್ನು ಮುಗಿಸಿಕೊಂಡು ಚಿಕ್ಕ ಮಕ್ಕಳು, ಬ್ರಹ್ಮಚಾರಿಗಳು, ಸನ್ಯಾಸಿಗಳು, ಪರಿಚಾರಕರು ಉಂಡಮೇಲೆ ಉಣ್ಣಬೇಕು. ಗೃಹಸ್ಥಾಶ್ರಮಿಯು ತನಗೆ ಇಷ್ಟವಿರುವ ಯಾವುದೊಂದು ಉದ್ಯೋಗವನ್ನು ಕೈಕೊಳ್ಳಬೇಕು. ಅಥವಾ ರಾಜನಿಂದ

ತನಗೆ ಬೇಕಾದುದನ್ನು ಬೇಡಿಕೊಳ್ಳಬೇಕು. ಅದರಿಂದ ತನ್ನ ಕುಟುಂಬ ಪೋಷಣೆಯ ಕಾರ್ಯವನ್ನು ನಡೆಯಿಸಬೇಕು. ಸಾಮಾಜಿಕದೃಷ್ಟಿಯಿಂದ ನೋಡಿದರೆ, ಗೃಹಸ್ಥಾಶ್ರಮವು ಎಲ್ಲ ಆಶ್ರಮಗಳಿಗೆ ಪೋಷಕವಾದುದರಿಂದ ಅದರ ಮಹತ್ವವು ಹೆಚ್ಚಿದೆ. ಈ ಬಗೆಯಾಗಿ ಸರ್ವ ಆಶ್ರಮಗಳಿಗೆ ಆಧಾರವಾಗಿರುವ ಗೃಹಸ್ಥಾಶ್ರಮದೊಳಗೆ ಯಾವಾತನು ಧರ್ಮವನ್ನು ಬಿಡದೆ, ಅತ್ಯಂತ ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ ನಡೆಯುವನೋ ಅವನಿಗೆ ಧರ್ಮಾರ್ಥಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು ಕೈಸೇರುತ್ತವೆ. ಆದುದರಿಂದ ಗೃಹಸ್ಥಾಶ್ರಮಿಯಾಗಿ ಭಗವಂತನ ಸೇವೆಯೆಂದು ಧರ್ಮಾಚರಣೆಯಿಂದಿರುವವನು ಧನ್ಯನೆಂದು ನಮ್ಮ ಪೂರ್ವಿಕರು ಎಷ್ಟೋ ಕಡೆಯಲ್ಲಿ ಅನೇಕ ಉದಾಹರಣೆ ಕೊಟ್ಟು ಹೊಗಳಿದ್ದಾರೆ. ಗೃಹಸ್ಥಾಶ್ರಮಿಯಾದ ಮನುಷ್ಯನು ತನ್ನ ನಿತ್ಯನೈಮಿತ್ತಿಕ ಕರ್ಮಗಳನ್ನಾಚರಿಸುತ್ತಿದ್ದು, ಅತಿಥಿಪೂಜನ, ತಾಯಿತಂದೆಗಳ ಸೇವೆ, ಮೊದಲಾದವುಗಳನ್ನು ಮನಃಪೂರ್ವಕವಾಗಿ ನಡೆಯಿಸಿದರೆ, ಅತನಿಗೆ ಸಮನಾದ ಪುಣ್ಯವಂತನು ಬೇರೆ ಯಾವನೂ ಇರುವದಿಲ್ಲೆಂಬ ದಿವ್ಯ ಹಾಗೂ ಆದರ್ಶಭೂತವಾದ ಉದಾಹರಣೆಗಳನ್ನು ಓದಿದರೆ ಮೈಯ್ಯುಬ್ಬಿ ಹೋಗಿ, ಮನಸ್ಸು ಶುದ್ಧವಾಗುತ್ತದೆ.

ವಾನಪ್ರಸ್ಥ ಮತ್ತು ಸನ್ಯಾಸ:- ಇನ್ನೆರಡು ಆಶ್ರಮಗಳಲ್ಲಿ ಭಾರತೀಯರ ನಿಜವಾದ ಧ್ಯೇಯವು ಯಾವುದು? ಯಾವುದಕ್ಕಾಗಿ ಮನುಷ್ಯನು ದೇಹ ತೊಟ್ಟುಕೊಂಡು ಪ್ರಪಂಚದೊಳಗೆ ಮುಂದಡಿಯಿಡತಕ್ಕ ದೆಂಬುದು ಈ ಆಶ್ರಮಧರ್ಮದಲ್ಲಿ ಪ್ರತಿಬಿಂಬಿತವಾಗಿದೆ. ಆರ್ಯರ ಮನಸ್ಸಿನ ಒಲವು ಸ್ವಾಭಾವಿಕವಾಗಿಯೇ ಸಂಸಾರ ತ್ಯಾಗ ಅಥವಾ ಸನ್ಯಾಸದ ಕಡೆಗೆ. (ಕಣ್ಣಿಗೆ ಕಾಣಿಸುವ ಈ ಜಗತ್ತು ಕ್ಷಣಿಕವಾದುದೆಂದೂ, ಇದರಲ್ಲಿ ರವೆಯಷ್ಟಾದರೂ ಸುಖವಿಲ್ಲೆಂದೂ, ಈ ಸುಳ್ಳು ಹಾಗೂ ನೀರಮೇಲಣ ಗುಳ್ಳೆಯಂಥ ಪ್ರಪಂಚದ ಮೋಹಕ್ಕೆ ಶಿಲುಕದೆ, ಈ ಜಗತ್ತೆಂಬ ಭ್ರಮೆಗೊಳಿಸುವ ಪೇಟೆಯ ಹಿಂದುಗಡೆಯಲ್ಲಿ ಮುಂದುಗಡೆಯಲ್ಲಿ- ಎಲ್ಲೆಲ್ಲಿಯೂ ಇದ್ದರೂ ಇಲ್ಲದವನಂತೆ ಇರುವ ಭಗವಂತನನ್ನು ಏಂದಿಗೂ ಮರೆಯಲಾಗದೆಂದೂ ಆರ್ಯರ ಮುಖ್ಯ

ಧರ್ಮದ ಪಲ್ಲವಿಯು. ಮತ್ತು ಮನಸು ಯಾವಾಗಲೂ ವಿಷಯಗಳ ಕಡೆಗೇ ಧಾವಿಸುತ್ತಿರುವದರಿಂದ ಅದರ ಮಬ್ಬಿಗೆ ಬೀಳದೆ, ನಮ್ಮೊಡನೆ ಕಣ್ಣಾಮುಚ್ಚಾಲೆಯಾಡುತ್ತಿರುವ ಭಗವಂತನನ್ನು ಎಡೆಬಿಡದೆ ಹೃದಯದೊಳಗಿಟ್ಟುಕೊಂಡು ಭಜಿಸುತ್ತಿರುವದೇ ಜೀವಮಾನದ ಅತ್ಯಂತ ಶ್ರೇಷ್ಠವಾದ ಗುಟ್ಟೆಂದು ಆರ್ಯಋಷಿಗಳು ನಾರಿ ನಾರಿ ಡಂಗುರ ಹೊಯ್ದಿರುವರು. ಆರ್ಯ ಹಾಗೂ ಬೇರೆ ಜನಾಂಗಗಳಲ್ಲಿ ಬಿಡದು ಕಾಣಿಸುವ ತೆಳ್ಳಕಡಿಮೆ ಇದೊಂದೇ. ಇದೇ ಆರ್ಯಸಂಸ್ಕೃತಿಯ ವೈಶಿಷ್ಟ್ಯವು. ಇವೆರಡೂ ಆಶ್ರಮಗಳು ಆರ್ಯಧರ್ಮವೆಂಬ ಪೃಕ್ಷದ ಸವಿ ಸವಿಯಾದ ಹಣ್ಣುಹಂಪಲಗಳನ್ನು ಸವಿದು ತೇಗುವ ಸುಗ್ಗಿಯ ಕಾಲಗಳಾಗಿವೆ. ಈ ಮೇರೆಗೆ ಆರ್ಯರ ವರ್ಣಾಶ್ರಮದ ಪಡಿಯಚ್ಚು ಮನುಷ್ಯಜಾತಿಯ ತಿದ್ದುಪಡಿಗೆ ಅತ್ಯಂತ ಸಾಧಕವೂ, ಸಹಕಾರಿಯೂ ಆಗಿದೆ. ಭಾರತಕಾಲಕ್ಕೆ ಈ ಸ್ಥಿತಿಯು ಸಾರೋದ್ಧಾರವಾಗಿಯೂ, ಎಡೆಬಿಡದೆಯೂ, ನಡೆದಿತ್ತು. ಆದರೆ ಅದು ಕಲಿಕಾಲದ ಉಗ್ರಪ್ರಭಾವಕ್ಕೆ ಬೆದರಿ ಬೆಚ್ಚಿಬಿದ್ದಿದೆ. ಈಗಣ ಆರ್ಯಸಮಾಜದೊಳಗೆ ಈತೆರದ ಪೂರ್ವದ ಆಶ್ರಮ ಪದ್ಧತಿಯು ಬಿದ್ದು ನೆಲಸಮವಾಗಿದ್ದರೂ, ಇದ್ದು ಬಿದ್ದ ಚೂರುಚಾರು ಧರ್ಮಬಂಧನಗಳಿಂದಲೇ ಜೀವ ಹಿಡಿದುಕೊಂಡಿದೆ ಹೊರ್ತು ಬೇರೆ ಆಧಾರವಿಲ್ಲ.

ಸಾಮಾಜಿಕ ಪರಿಸ್ಥಿತಿ:—ಆರ್ಯರ ಸಮಾಜದ ಸ್ಥಿತಿಯು ಪೂರ್ವಕಾಲದಿಂದಲೂ ಬದಲಾಗುತ್ತ ಬಂದಿದೆ. ಋಗ್ವೇದಕಾಲವಿಂದಲೂ ಆರ್ಯಸಮಾಜದ ಸ್ಥಿತಿಯು ಹೀಗೆ ಮಾರ್ಪಡುತ್ತ ಬಂದಿದ್ದರೂ, ಬಹುಕಾಲದ ವರೆಗೆ ಸಮಾಜವು ಬಾಳುವದಿದ್ದರೆ, ಅದು ಯಾವ ಸ್ಥಿತಿಯಲ್ಲಿರ ತಕ್ಕದ್ದು, ಎಂಥ ನಿಯಮ ನಿರ್ಬಂಧಗಳಿಂದ ಕಟ್ಟಲ್ಪಟ್ಟಿರಲಿಕ್ಕೆಬೇಕೆಂಬುದು ಆರ್ಯರ ಮೇಲುಪಂಕ್ತಿಯಿಂದ ಸ್ಪಷ್ಟವಾಗಿದೆ. ಆರ್ಯಸಮಾಜದೊಳಗೆ ಆದರ್ಶಭೂತವಾದ ಸಾಮಾಜಿಕ ಪದ್ಧತಿಯೂ ಉಂಟು. ಅದುದರಿಂದ ಪ್ರತಿಯೊಬ್ಬರೂ ಪ್ರತಿಯೊಂದು ಕಾಲದಲ್ಲಿ ಆರ್ಯರು ನಡೆದ ನಡೆಯಲ್ಲಿಯೇ ಹೆಜ್ಜೆಯಿಟ್ಟು ನಡೆಯುತ್ತಾರೆ. ಪರಸಂಸ್ಕೃತಿಯವರ ಸಂಸರ್ಗದಿಂದ ಒಂದುವೇಳೆ ನಮ್ಮ ಜನರು ತಮ್ಮ ಸಾಮಾಜಿಕ ಸ್ಥಿತಿಯ

ವಿಷಯದಲ್ಲಿ ಕೆಲಮಟ್ಟಿಗೆ ಕಲುಷಿತದೃಷ್ಟಿಯವರಾಗಿದ್ದರೂ, ಆರ್ಯರ ಸಮಾಜ ಪದ್ಧತಿಯಿಂದ ಹಿಂದೂದೇಶದೊಳಗೆ ಎಷ್ಟು ಪತಿವ್ರತೆಯರು ಮೈದೋರಿರುವರೋ, ಅಂಧವರು, ಅಥವಾ ಅವರಿಗೆ ಸರಿಗಟ್ಟುವಂಥ ವರು ಯಾವ ಜನಾಂಗದ ಇತಿಹಾಸದೊಳಗೆ ನೋಡಿದರೂ ದುರ್ಲಭರೇ ಸರಿ! ಅಂದಮೇಲೆ ಅಂಥ ಸಮಾಜಸ್ಥಿತಿಯು ಮಿಕ್ಕ ಜನಾಂಗದವರಿಗಾಗಲಿ, ಆರ್ಯರಿಗಾಗಲಿ ಮೇಲುಸಂಕ್ರಮಣವಾಗಲಿಕ್ಕೆ ತಕ್ಕದುದಲ್ಲವೆಂದು ಯಾವ ನಾಲಿಗೆಯಿಂದಾಡುವದು? ಅರ್ಥಾತ್, ಆರ್ಯಸಮಾಜದ ನಡೆಗಳು ಸಮಾಜದ ಬೆಳುವಿಗೆ ಪೋಷಕವೂ, ಬೇರೆ ಜನಾಂಗದವರಿಗೆ ಅನುಕರಣೀಯವೂ ಆಗಿದ್ದವೆನ್ನಲಿಕ್ಕೇನೂ ಅಡ್ಡಿಯಿಲ್ಲ.

ವಿವಾಹ ಪದ್ಧತಿ:—ವಿವಾಹ ಪದ್ಧತಿಯು ಸಮಾಜ ಸಂಸ್ಕರಣೆಯ ಮೊದಲನೇ ಅಂಗವಾಗಿದೆ. ಭಾರತಕಾಲದಲ್ಲಿ ಆರ್ಯರ ವಿವಾಹ ಪದ್ಧತಿಯು ಹೇಗಿತ್ತು; ಮುಂದೆ ಅದು ಹೇಗೆ ಬದಲಾಗುತ್ತ ಹೋಯಿತೆಂಬುದರ ವಿವರಣೆಯನ್ನು ಮಾಡಿ, ಅದರಿಂದೇನು ಫಲನಿಷ್ಪತ್ತಿಯಾಯಿತೆಂಬುದನ್ನು ನಮಗೀಗ ನೋಡಬೇಕಾಗಿದೆ. ಔದ್ದಾಲಕಋಷಿಯ ಮಗನಾದ ಶ್ವೇತುಕೇತುವೇ ಎಲ್ಲಕ್ಕೂ ಪ್ರಾರಂಭದಲ್ಲಿ ವಿವಾಹದ ಮರ್ಯಾದೆಯನ್ನು ಕಲ್ಪಿಸಿದನು. ಅಂದಿನಿಂದ ಮದುವೆಯ ನಡತೆಯು ಬಳಿಕೆಯಲ್ಲಿ ಬಂದಿತು. ಭಾರತೀಯಕಾಲದ ಮದುವೆಯ ಆಚಾರವನ್ನು ಮಹಾಭಾರತಾದಿಗಳ ಮೇಲಿಂದ ಓದಿ ತಿಳಿದುಕೊಳ್ಳಲು, ಅಗ್ಗಿ ಪ್ರಾಯಿಕವಾಗಿ ಹೆಣ್ಣುಮಕ್ಕಳು ದೊಡ್ಡವರಾಗುವ ತನಕ ತಂದೆ ಅಥವಾ ಸೋದರರು ಅವರನ್ನು ಜೋಕೆಮಾಡಿ, ಅವರಿಗೆ ಓದಲಿಕ್ಕೂ ಬರೆಯಲಿಕ್ಕೂ ಕಲಿಸುವದಲ್ಲದೆ, ರಾಜರ ಮಕ್ಕಳಿಗೆ ಲಲಿತಕಲೆಯ ಅಂದರೆ ಸಂಗೀತ, ನೃತ್ಯ, ವಾದ್ಯ ಮೊದಲಾದವುಗಳನ್ನು ಕಲಿಸುತ್ತಿದ್ದರು. ಸ್ತ್ರೀಯರಿಗೆ ವೈದಿಕವಿದ್ಯೆಯನ್ನು ಅಭ್ಯಾಸಿಸುವ ಅಧಿಕಾರವಿಲ್ಲದಿದ್ದರೂ, ಸ್ತ್ರೀಯಿಲ್ಲದೆ ಪುರುಷನಿಗೆ ಯಜ್ಞಯಾಗಾದಿಗಳನ್ನು ನಡೆಯಿಸಲಿಕ್ಕೆ ಅಧಿಕಾರವಿರಲಿಲ್ಲ. ಮಹಾಭಾರತದೊಳಗೆ ಕಂಡುಬರುವ ವಿವಾಹಗಳೆಲ್ಲ ಪ್ರೌಢವಿವಾಹಗಳೇ ಆಗಿವೆ. ಸ್ವಯಂವರದ ನಡಿವಳಿಕೆಯೂ ಒಳ್ಳೇ ಭರದಲ್ಲಿತ್ತು. ಆರ್ಯಸ್ತ್ರೀಯರಿಗೆ ಪತಿಯೇ ಹೆಚ್ಚಿನ ದೇವತೆಯೆಂಬು

ಉದಾತ್ತ ಹಾಗೂ ಪಾವಿತ್ರ್ಯಪೂರ್ಣವಾದ ಕಲ್ಪನೆಯನ್ನು ಹುಟ್ಟಿದಾಗಿ ನಿಂದಲೇ ನಾನಾಬಗೆಯಿಂದ ಮನಸಿನೊಳಗೆ ಮೂಡಿಸುತ್ತಿದ್ದುದರಿಂದ ಭಾರತಕಾಲದೊಳಗೆ ನಾವಿತ್ರಿ, ದ್ರೌಪದಿಯಿಂಥ ಜಗತ್ತಿಗೆ ಆದರ್ಶ ಭೂತರಾದ ಸ್ತ್ರೀರತ್ನಗಳು ಮೈದೋರಿದವು; ಜೀವದಿಂದಿರುವ ನಾರಿಯು ಒಬ್ಬನೇ ಗಂಡನ ಸೇವೆ ಮಾಡಿಕೊಂಡು, ಅವನೇ ಪರದೈವವೆಂದು ತಿಳಿದುಕೊಂಡು ಪತಿಪರಾಯಣಳಾಗಿ ಕಾಲಕಳೆಯಬೇಕೆಂದೂ, ಅವನು ಸತ್ತಮೇಲೆ ಕೂಡ ಅವಳು ಬೇರೆ ಗಂಡನನ್ನು ಮದುವೆಯಾಗಕೂಡದೆಂದೂ, ಹಾಗೆ ಲಗ್ನವಾದರೆ, ಅವಳು 'ಪತಿತ' ಅಂದರೆ ಕುಲಗೆಟ್ಟವಳೆಂದೂ ಹೇಳಿದೆ. ಏಕಪತಿವ್ರತದ ಈ ಕಲ್ಪನೆಯು ಜರ್ಮನರಲ್ಲಿಯೂ ಇತ್ತೆಂದು ಒಬ್ಬ ಇತಿಹಾಸಗಾರನು ಬರೆದಿದ್ದಾನೆ. ಏಕಪತಿತ್ವ ಹಾಗೂ ಏಕಪತ್ನೀತ್ವ ಇವೆರಡು ಸಮಾಜದ ಅತ್ಯಂತಿಕ ಸಮಾಜ ಸಂಸ್ಕರಣೆಯ ಮೆಟ್ಟಿಲನ್ನು ತೋರಿಸುತ್ತವೆ. ಭಾರತಕಾಲದಲ್ಲಿ ಏಕಪತಿತ್ವದ ಕಲ್ಪನೆಯು ಇಷ್ಟು ದೃಢಮೂಲವಾಗಿದ್ದರೂ ಏಕಪತ್ನೀತ್ವದ ಕಲ್ಪನೆಯು ಅಸ್ಪೊಂದು ಪುರುಷರಲ್ಲಿ ಬೇರೂರಿರಲಿಲ್ಲ. ಮತ್ತು ಅಂದಿನಿಂದ ಇಂದಿನವರೆಗೂ ಪುರುಷನು ಎಷ್ಟು ಸ್ತ್ರೀಯರನ್ನು ಮದುವೆ ಮಾಡಿಕೊಂಡರೂ ಅವನು ಶುದ್ಧನೇ ಎಂದು ಆಚಾರದಲ್ಲಿ ಬಂದಿರುವ ವಿಚಾರವನ್ನು ನೋಡಿ ಆಶ್ಚರ್ಯವೆನಿಸುತ್ತದೆ. ಹೆಂಗಸು ಮತ್ತೊಬ್ಬ ಗಂಡನನ್ನು ಮಾಡಿಕೊಂಡರೆ ಅವಳೆಷ್ಟು ಪಾಪಕ್ಕೆ ಗುರಿಯಾಗುವಳೋ, ಗಂಡನು ಮತ್ತೊಬ್ಬ ಹೆಂಗಸನ್ನು ಲಗ್ನವಾದರೆ ಅಷ್ಟೇ ಪಾಪಕ್ಕೆ ಪಾತ್ರನಾಗುವನೆಂದು ಉದ್ದಾಲಕಋಷಿಯ ಮಗನಾದ ಶ್ವೇತಕೇತುವು ಖಂಡತುಂಡಾಗಿ ಹೇಳಿದ್ದಾರೆ.)

ವಿವಾಹ ಭೇದ:– ವಿವಾಹದೊಳಗೆ ಬ್ರಾಹ್ಮ, ಕ್ಷಾತ್ರ, ಗಂಧರ್ವ, ಆಸುರ ಹಾಗೂ ರಾಕ್ಷಸ ಹೀಗೆ ಐದು ಪ್ರಕಾರಗಳುಂಟು. ಬ್ರಾಹ್ಮ ವಿವಾಹದೊಳಗೆ ಕನ್ಯೆಯ ತಂದೆಯು ವರನನ್ನು ಮನೆಗೆ ಕರೆದುತಂದು, ಅವನಿಗೆ ಆದರದಿಂದ ಸಾಲಂಕೃತ ಕನ್ಯಾದಾನ ಮಾಡಿಕೊಡುವ ಪದ್ಧತಿಯಿತ್ತು. ಗಾಂಧರ್ವವಿವಾಹವು ಗಂಧರ್ವಜನರಲ್ಲಿ ರೂಢವಾಗಿದ್ದುದರಿಂದ ಅದಕ್ಕೆ ಈ ಹೆಸರು. ಕ್ಷತ್ರಿಯ ಕನ್ಯೆಯರು ಬಹುತರವಾಗಿ ಕ್ಷಾತ್ರ,

ಅಥವಾ ಗಂಧರ್ವಪದ್ಧತಿಯಿಂದಲೋ, ಸ್ವಯಂವರಪದ್ಧತಿಯಿಂದಲೋ ಮದುವೆ ಮಾಡಿಕೊಳ್ಳುತ್ತಿದ್ದರು. ಇವುಗಳಿಗೆ ಶಕುಂತಲೆದುಷ್ಯಂತ, ಸಾವಿತ್ರಿಸತ್ಯವಾನ, ದ್ರೌಪದಿಪಾಂಡವ, ನಲದಮಯಂತಿ ಮೊದಲಿಗರ ಉದಾಹರಣೆಗಳೇ ಸಾಕು. ಆಸುರವಿವಾಹವೆಂದರೆ, ಕನ್ಯೆಯನ್ನು ಕೊಂಡುಕೊಳ್ಳುವದು. ಈ ಪದ್ಧತಿಯು ನಿಜವಾಗಿಯೂ ಮೊದಲು ಅಸುರರೆಂದು ಹೆಸರು ಪಡೆದ ಇರಾಣೀಜನರಿಂದ ನಮ್ಮಲ್ಲಿ ಸೇರಿಕೊಂಡಿತು. ಈ ಆಸುರಕನ್ಯೆಯರು ಅತಿಶಯ ರೂಪಲಾವಣ್ಯಸಂಪನ್ನರಿರುವ ಮೂಲಕ ಅನೇಕ ಅರಸರು ಅವರನ್ನು ಮದವೆಯಾಗುತ್ತಿದ್ದರು. ಮಾದ್ರೀ, ಹಾಗೂ ಕೇಕಯರಾಜರು ಅಸುರವಂಶಕ್ಕೆ ಸಂಬಂಧಪಟ್ಟವರಾದರೂ ರೂಪಸಂಪನ್ನರಾದ್ದರಿಂದ ಆರ್ಯಕುಲ ಕ್ಷತ್ರಿಯರು ಅವರನ್ನು ಮದುವೆ ಮಾಡಿಕೊಂಡಿದ್ದರು. ದಶರಥನು ತನ್ನ ರಾಜ್ಯದೊಳಗಿನ ಎಷ್ಟೋ ಭಾಗವನ್ನು ಕೈಕೇಯಿಯ ತಂದೆಗೆ ಕೊಟ್ಟು ಮದುವೆಯಾಗಿದ್ದನೆಂದು ತಿಳಿಯುತ್ತದೆ. ಭೀಷ್ಮನು ಶಲ್ಯದೇಶದ ಮಾದ್ರಿಯನ್ನು ಪಂಡುರಾಜನಿಗೆ ಮದುವೆ ಮಾಡಿ, ಶಲ್ಯನಿಗೆ ಹೇರಳವಾಗಿ ದುಡ್ಡು, ಆಭರಣ, ಆನೆ, ಒಂಟಿ, ಮುತ್ತುರತ್ನಾದಿಗಳನ್ನು ಅರ್ಪಿಸಿದ ಸಂಗತಿಯು ಭಾರತದಲ್ಲಿದೆ; ಹೀಗಿದ್ದರೂ, ಈ ವಿವಾಹ ರೂಢಿಯು ನಿಂದ್ಯವಾಗಿ ಪರಿಣಮಿಸಲ್ಪಟ್ಟಿತ್ತೆಂದು ಹಲವರ ಉದ್ಗಾರಗಳಿಂದ ತಿಳಿಯುತ್ತದೆ. ಇನ್ನುಳಿದದ್ದು ರಾಕ್ಷಸವಿವಾಹ; ಈ ನಡೆಯು ವಿಶೇಷವಾಗಿ ರಾಕ್ಷಸಕುಲದವರಲ್ಲಿಯೇ ಇದ್ದುದರಿಂದ ಅದಕ್ಕೇ ಹೆಸರು ಬಂದಿದೆ; ಕನ್ಯೆಯ ಮನೆಯವರೊಡನೆಯಾ, ನೆಂಟರೊಡನೆಯೂ ಒಡಿದಾಡಿ ಕಡಿದಾಡಿ, ಅವರು ಅಳುತ್ತಿರುವಾಗ ಕನ್ಯೆಯನ್ನು ಎಳೆದುಕೊಂಡೊಯ್ಯುವ ಈ ವಿವಾಹಕ್ಕೆ ರಾಕ್ಷಸವೆಂದು ಹೆಸರು ಬಂದಿರುವಲ್ಲೇನೂ ಆಶ್ಚರ್ಯವಿಲ್ಲ. ನರಮಾಂಸ ಭಕ್ಷಿಸುತ್ತಿರುವ ಮೂಲನಿವಾಸಿಗಳಾದವರೇ ರಾಕ್ಷಸರು; ಅವರಲ್ಲಿಯೇ ವಿಶೇಷವಾಗಿ ಇದು ಹರಡಿಕೊಂಡಿತ್ತೆಂಬುದಕ್ಕೆ ರಾವಣನ ಉದಾಹರಣೆಯೇ ಸಾಕಿದೆ. ಪ್ರಾಚೀನ ಕಾಲದಲ್ಲಿ ಅರ್ಜುನ ಮೊದಲಾದವರು ರಾಕ್ಷಸೀರೀತಿಯಿಂದ ಕನ್ಯೆಯನ್ನು ತಮ್ಮ ಮನೆಗೆ ಎಳೆದುಕೊಂಡು ಬಂದರೂ, ವಿವಾಹವು ಬ್ರಾಹ್ಮಪದ್ಧತಿ

ಯಿಂದಲೇ ಆಯಿತೆಂಬುದನ್ನು ಮರೆಯಲಾಗದು. ಆರ್ಯವಿವಾಹದೊಳಗೆ 'ಸಪ್ತಪದಿ'ಯೇ ಮುಖ್ಯವಿದ್ದು, ಅದಾಗದಿದ್ದರೆ, ಕನ್ಯೆಗೆ ಮತ್ತೊಬ್ಬ ವರನನ್ನು ಆರಿಸಲಿಕ್ಕೆ ಬರುತ್ತದೆ.

ಪತಿಪತ್ನಿಯ ಸಂಬಂಧ:– ಭಾರತಕಾಲದೊಳಗೆ ಸ್ತ್ರೀಯರು ದೊಡ್ಡವರೂ ತಿಳಿದವರೂ ಇರುತ್ತಿದ್ದುದರಿಂದಲೇ ಅವರಿಗೆ ಸ್ವಯಂವರದ ಅಧಿಕಾರವನ್ನು ಕೊಟ್ಟಿದ್ದರು; ಮತ್ತು ಅದರಂತೆ ಮದುವೆಯಾಗಿ, ಅವರು ಗಂಡನ ಮನೆಗೆ ಬಂದೊಡನೆ, ಅವರಿಗೆ ನ್ಯಾಯತಂತ್ರ್ಯವಿರುತ್ತಿತ್ತು. ಅವರನ್ನು ಎಲ್ಲರೂ ಆದರದಿಂದ ಕಾಣುತ್ತಿದ್ದರು. ದ್ರೌಪದಿಯ ಮಾತನ್ನೇ ದೃಷ್ಟಾಂತಕ್ಕೆಂದು ಇಟ್ಟುಕೊಂಡರೆ, ಮದುವೆಯ ಕಾಲಕ್ಕೆ ಅವಳು ದೊಡ್ಡವಳಿದ್ದು ಎಷ್ಟೋಮಟ್ಟಿಗೆ ಅಂಜದೆ ಅಳುಕದೆ ರಾಜಸಭೆಯಲ್ಲಿ ಬಂದಳೆಂದು ಭಾರತದಲ್ಲಿದೆ. ಭಾರತದೊಳಗೆ ವ್ಯಾಸರು ದ್ರೌಪದಿಗೆ 'ಬ್ರಹ್ಮವಾದಿನೀ ಪಂಡಿತಾ' ಎಂಬ ಬಿರುದು ಕೊಟ್ಟಿದ್ದೇನೂ ಚಂದಕ್ಕಲ್ಲ; ಅವಳಲ್ಲಿ ಅಂಥ ಯೋಗ್ಯತೆ ಇದ್ದಿತು; ರಾಜಕೀಯ ವಿಷಯ, ಧಾರ್ಮಿಕ ವಿಷಯಗಳನ್ನು ಕುರಿತು ದ್ರೌಪದಿಯು ಹಲವು ಸಾರೆ ಧಾರಾಳವಾಗಿ ಪತಿಗಳೊಡನೆ ಚರ್ಚೆಮಾಡಿದ್ದಾಳೆ; ಹೊತ್ತುಬಂದಾಗ್ಗೆ ಹಕ್ಕಿನಿಂದ ಅತ್ಯಂತ ಸ್ಫೂರ್ತಿಬರುವಂಥ ಬೋಧನೆಯನ್ನು ಮಾಡಲಿಕ್ಕೆ ಹಿಂದುಮುಂದೆ ನೋಡಲಿಲ್ಲ. (ಆರ್ಯಸ್ತ್ರೀಯರು ಪತಿಗಳೊಡನೆ ಕೆಲಕೊತ್ತು ಹೆಂಡತಿಯಂತೆಯೂ, ಕೆಲಕಾಲ ಯೋಚನೆ ಹೇಳುವ ಮಂತ್ರಿಯಂತೆಯೂ, ಗೆಳೆಯನಂತೆಯೂ, ಶಿಷ್ಯನಂತೆಯೂ ಇರಬೇಕೆಂದು ಹೇಳಿದ ಮಾತಿಗೆ ದ್ರೌಪದಿಯು ಮೇಲುಪಂಕ್ತಿಯಾಗಿದ್ದಳು.) ಪತಿಪತ್ನಿಯ ಸಂಬಂಧವು ದೃಢವಾಗಿರಲಿಕ್ಕೆ ಬಹುಅಂಶದಿಂದ ಸ್ತ್ರೀಯರ ಪತಿವ್ರತಾಧರ್ಮವೇ ಕಾರಣವು. ಅದು ಪತಿಪತ್ನಿಯರ ಸೌಹಾರ್ದ್ರವು ಬೆಳೆಯಲಿಕ್ಕೆ ನೀರೆರೆದಂತಾಗುತ್ತದೆ. ಅದುದರಿಂದ ಪತಿಗಳು ಒಂದು ವೇಳೆ ಕೆಟ್ಟರೂ, ಪತ್ನಿಯರ ಪತಿವ್ರತಾಧರ್ಮವು ಕೆಡಕೂಡದೆಂದು ಆರ್ಯರ ನಿರ್ಬಂಧ; ಪತಿಯೇ ಆರ್ಯಮಹಿಳೆಯರ ಜೀವನ ಸರ್ವಸ್ವ. ಆರ್ಯಮಹಿಳೆಯು ತನ್ನ ಪತಿಯ ರೂಪಲಾವಣ್ಯಾದಿ ಹೊರಗಣ ಸೌಂದರ್ಯಕ್ಕೆ ಬೆಲೆಕೊಡುವದಿಲ್ಲ. ಅವಳು ಒಳಗಿನ ಆತ್ಮಕ್ಕೆ ಬೆಲೆ

ಕೊಟ್ಟು, ಅವನನ್ನು ವರಿಸುತ್ತಾಳೆ. ಇದೇ ಆರ್ಯಮಹಿಳೆಯರ ಹೆಚ್ಚುಗಾರಿಕೆ. ಆರ್ಯರಲ್ಲಿಯ ಹೆಣ್ಣುಗಂಡಿನ ಮದುವೆಯೆಂದರೆ ಒಂದು ಶರೀರಕ್ಕೂ ಮತ್ತೊಂದು ಶರೀರಕ್ಕೂ ಮದುವೆಯಲ್ಲ. ಒಂದು ಆತ್ಮಕ್ಕೂ ಮತ್ತೊಂದು ಆತ್ಮಕ್ಕೂ ಮದುವೆ; ಹೀಗೆ ಪತಿಪತ್ನಿ ಸಂಬಂಧವು ತೀರ ಅಭೇದ್ಯವಿರುವದರಿಂದ ಪತಿಯು ಎಂಥ ಸ್ಥಿತಿಯಲ್ಲಿಯೇ ಇರಲಿ, ಪತ್ನಿಯು ಅವನೊಡನೆ ಸಮಭಾಗಿಯಾಗಿರಲೇಬೇಕೆಂದು ವಿಧಿಸಿದರು. ಧರ್ಮರಾಜನು ದ್ರೌಪದಿಯನ್ನು ಪಣಕ್ಕೆ ಹಚ್ಚಿದಾಗ ದ್ರೌಪದಿಯು ಹೆಂಡತಿಯನ್ನು ಪಣಕ್ಕೆ ಹಚ್ಚಲಿಕ್ಕೆ ಬರುವದಿಲ್ಲವೆಂದಾ, ಗಂಡ ಹೆಂಡಿರನ್ನು ಅಗಲಿಸುವದು ನಾಧ್ಯವಿಲ್ಲೆಂಬೂ, ಖಡಾಖಡಿಯಾಗಿ ಹೇಳಿರುವಳು.

ಸತಿಯ ಪದ್ಧತಿಯು:—ಆರ್ಯಸ್ತ್ರೀಯರು ಜಗತ್ತಿನೊಳಗೆಲ್ಲ ಸೈತಿಕದೃಷ್ಟಿಯಿಂದ ಅತ್ಯಂತ ಉಚ್ಚತರಗತಿಯವರಿದ್ದರೆಂಬುದಕ್ಕೆ ಒಂದೇ ಒಂದು ಧಗಧಗಿಸುವ ಉದಾಹರಣೆ ನಾಕೆಂದು ಅದನ್ನಿಲ್ಲಿ ಕೊಡುತ್ತೇವೆ; ಅದಾವುದೆಂದರೆ, ಸತಿಹೋಗುವ ಪದ್ಧತಿಯು. ಈ ನಡವಳಿಕೆಯು ಆರ್ಯಜನಾಂಗದ ಹೊರ್ತು ಮಿಕ್ಕ ಯಾವ ಜನಾಂಗದಲ್ಲಿಯೂ ಇರಲಿಲ್ಲ. ಮತ್ತು ಇರುವದೂ ನಾಧ್ಯವಿಲ್ಲ. ಪತಿಯೆಂದರೆ ಹೆಂಡತಿಯ ಜೀವ, ಪ್ರಾಣವೆಂಬ ಕಲ್ಪನೆಯಿಂದ ಹೊರ್ತು ಸತಿಹೋಗುವದು ಯಾರಿಂದಲೂ ಆಗದು. ಸತ್ತ ಗಂಡನೊಡನೆ ಜೀವಂತ ಹೆಂಡತಿಯು ಉರಿಯುವ ಹಾಸಿಗೆಯ ಮೇಲೆ ಮಲಗಲಿಕ್ಕೆ ವಿಲಕ್ಷಣವಾದ ಧೈರ್ಯ ಬೇಕಾಗುತ್ತದೆ. ಎಲ್ಲಿಯೂ ಕಾಣದಂಥ ಆ ಅಪೂರ್ವಶವಾದ ಆಧ್ಯಾತ್ಮಿಕತೇಜವನ್ನು ಆರ್ಯಸ್ತ್ರೀಯರು ಪಡೆದುದರಿಂದಲೇ ಅವರು ಮುಗುಳು ನಗೆಯಿಂದ ನಿಗಿನಿಗಿ ಕೆಂಡದ ಹಾಸಿಗೆಯ ಮೇಲೆ ಪತಿಯೊಡನೆ ತಮ್ಮನ್ನು ಸುಟ್ಟುಕೊಳ್ಳುತ್ತಿದ್ದರು. ಈ ನ್ಯಾಧರ್ತ್ಯಾಗಕ್ಕೆ ಇಡೀ ಜಗತ್ತಿನ ಇತಿಹಾಸದೊಳಗೆ ಬೇರೆ ದೃಷ್ಟಾಂತಗಳಿಲ್ಲ. ಸತಿಯ ಪದ್ಧತಿಗೆ, ಸತಿಪತಿಯ ಪ್ರೇಮವನ್ನು ಅವರ ಜೀವದ ಜೀವಾಳವನ್ನೂ ಆರ್ಯದ ಪಾಶ್ಚಾತ್ಯರು ಕಾಡಪದ್ಧತಿಯೆಂದೆನ್ನಬಹುದು. ಆದರೆ ಬರಿಯ ದೇಹವಾದಿಗಳಿಗೆ ಅದರ ನಿಚ್ಚಟದ ಗುಟ್ಟು ತಿಳಿಯುವ ಬಗೆಯೆಂತು!

ಆರ್ಯರಲ್ಲಿ ಸತಿಯ ಪದ್ಧತಿಯು ಪ್ರಾಚೀನಕಾಲದಿಂದ ನಡೆದುಬಂದು ದಾಗಿತ್ತು. ಮಹಾಭಾರತದೊಳಗೆ ಪಂಡುರಾಜನ ಸಂಗಡ ಮಾದ್ರೀ ದೇವಿಯು ಸತಿಹೋದಬಗ್ಗೆ ಉಲ್ಲೇಖವಿದೆ. ಪತಿಪತ್ನಿಯರ ದೇಹವ್ರ– ಅಲ್ಲ– ಪ್ರಾಣವು ಸಹ ಬಂದೇ ಇರುವದಾಗಿ ಆರ್ಯಸ್ತ್ರೀಯರು ಕೃತಿಯಿಂದ ಹೇಗೆ ತೋರಿಸಿರುವರೋ, ಹಾಗೆ ಇದು ವರೆಗೆ ಯಾರೂ ತೋರಿಸಿದ್ದು ಇತಿಹಾಸಕ್ಕೆ ಗೊತ್ತಿಲ್ಲ. ಸ್ತ್ರೀಯರ ಮೇಲ್ಮೈಯನ್ನು ತೋರಿಸುವಂಥ ಇದಕ್ಕಿಂತ ಮೇಲಾದ ಉದಾಹರಣೆಯು ಇನ್ನಾವದು ಬೇಕು? ಮನುಷ್ಯಪ್ರಾಣಿಗೆ ಜೀವಕ್ಕಿಂತ ಪ್ರಿಯವಾದ ವಸ್ತು ಯಾವುದಾದರೂ ಉಂಟೇ?

ಊಟ-ಉಡಿಗೆಗಳು:– ವೈದಿಕಋಷಿಗಳು ಯಜ್ಞದ ಪುರಸ್ಕರ್ತರಿದ್ದುದರಿಂದ ಯಜ್ಞದೊಳಗೆ ಮಾಂಸವನ್ನು ಬೇರೆ ಬೇರೆ ದೇವತೆಗಳಿಗೆ ಹವನಮಾಡಿ, ಮಿಕ್ಕ ಹವಿರ್ಭಾಗವನ್ನು ತಾವು ಅಗ್ನಿನಾರಾಯಣ ಪ್ರಸಾದವೆಂದು ಸ್ವೀಕರಿಸುತ್ತಿದ್ದರೆಂಬುದು ಪ್ರಸಿದ್ಧವೇ ಇದೆ. ಹಾಗೆಯೇ ಭಾರತಕಾಲದಲ್ಲಿಯೂ, ಹಲವು ಯಜ್ಞಗಳು ನಡೆಯುತ್ತಿದ್ದವು. ಮತ್ತು ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಮಾಂಸ ತಿನ್ನುತ್ತಿದ್ದರು. ಹೀಗಿದ್ದರೂ, ಸಂಪೂರ್ಣವಾಗಿ ಪಾರಮಾರ್ಥಿಕ ಮಾರ್ಗಕ್ಕೇ ತಮ್ಮ ದೇಹವನ್ನರ್ಪಿಸಿದಂಥ ಯೋಗಿಗಳೂ ಭಕ್ತರೂ ಮಾಂಸವನ್ನು ಎಂದೂ ಮುಟ್ಟುತ್ತಿರಲಿಲ್ಲ. ಭಾರತಕಾಲಕ್ಕೆ ಅಶ್ವಮೇಧ, ರಾಜಸೂಯಗಳಂಥ ಘನವಾದ ಯಜ್ಞಗಳು ಜರುಗುತ್ತಿದ್ದರೂ, ಸಾಮಾನ್ಯಜನರ ಸ್ರವೃತ್ತಿಯು ಮಾಂಸವನ್ನು ತಿನ್ನಬಾರದೆಂಬುದರ ಕಡೆಗೇ ಒಲಿಯುತ್ತಿದ್ದಿತು. ಮತ್ತು ಈ ಕಾಲಕ್ಕೆ ದೊಡ್ಡ ದೊಡ್ಡ ಆಡಂಬರದ ಯಜ್ಞಗಳೂ, ಬ್ರಾಹ್ಮಣಸಂತರ್ಪಣೆಗಳೂ ಇವುಗಳ ವಿಷಯದಲ್ಲಿ ಜನರೊಳಗೆ ಕೆಲಮಟ್ಟಿಗೆ ಜುಗುಪ್ಸೆಯುಂಟಾಗಿತ್ತೆಂಬುದು ಮುಂಗಲಿಯ ಕಥೆಯ ಮೇಲಿಂದ ಸ್ಪಷ್ಟವಾಗುತ್ತದೆ. ಮಹಾಮಹಾ ಯಜ್ಞಗಳ ಆಡಂಬರವನ್ನು ಹೂಡಿಕೊಂಡು ಗೊಂದಲ ನಡೆಯಿಸುವದಕ್ಕಿಂತ ಹಸಿದುಬಂದ ಒಬ್ಬ ಅತಿಥಿಗೆ ಮುಷ್ಟಿ ಹಿಟ್ಟು ಕೊಟ್ಟರೆ ಏನು ಪುಣ್ಯ ದೊರಕುವದೋ; ಅದು ಯಾತರಿಂದಲೂ ದೊರಕದೆಂದು ಮುಂಗಲಿಯ ಕಥೆಯಲ್ಲಿ ಹೇಳಿದೆ.

ಈ ತರದ ಚರ್ಚೆಯು ನಡೆದು ಯಜ್ಞದ ವಿಷಯದಲ್ಲಿ ಬಂದು ವಿಧವಾಗಿ ತಿರಸ್ಕಾರಭಾವವುಂಟಾಗಹತ್ತಿದೊಡನೆ, ಅದಕ್ಕೆ ಅನುಕೂಲವಾಗುವಂಥ ಅನೇಕ ಸಂಗತಿಗಳು ಬದಗಲಾರಂಭಿಸಿದವು. ಬಂದಾನೊಂದು ಕಾಲಕ್ಕೆ ಇಂದ್ರನು ಯಜ್ಞ ಹೂಡಿದ ಸಮಯದಲ್ಲಿ, ಪಶುವನ್ನು ಕೊಲ್ಲುವ ವೇಳೆ ಬಂದಿತು; ಆಗ್ಗೆ ಆ ವಧ್ಯಪಶುವು ಬಹು ಕಳವಳಗೊಂಡು ತನ್ನನ್ನು ಕೊಲ್ಲುವ ಋಷಿಗಳ ಕಡೆಗೆ ನೋಡಹತ್ತಿತು. ಆಗ ಋಷಿಗಳಿಗೆ ಕನಿಕರ ಒಡೆದು, ಈ ಯಜ್ಞವು ಧಾರ್ಮಿಕವಲ್ಲೆಂದು ಇಂದ್ರನಿಗೆ ಹೇಳಿ, ಯಜ್ಞಮಾಡಬೇಕಾದರೆ ಮೂರು ವರ್ಷದ ಹಳೇಧಾನ್ಯದಿಂದ ಯಜ್ಞಮಾಡೆಂದು ಹೇಳಿದರು. ಅದು ಇಂದ್ರನಿಗೆ ಸರಿ ತೋರದೆ, ಅದೊಂದು ವಾದಕ್ಕೆ ಕಾರಣವಾಯಿತು; ಮುಂದೆ ಈ ಪ್ರಶ್ನವು ವಸು ರಾಜನ ಕಡೆಗೆ ತೀರ್ಮಾನಕ್ಕಾಗಿ ಹೋಗಲು, ಅವನು ಸಿದ್ಧವಿರುವ ಅನ್ನದಿಂದ ಯಜ್ಞಕಾರ್ಯ ನೆರವೇರಿಸಬೇಕೆಂದು ಹೇಳಿರುವನು. ಆದರೂ ಯಜ್ಞದೊಳಗೆ ಮಾಡಿದ ಹಿಂಸೆಯು ಹಿಂಸೆಯಲ್ಲವೆಂದು ಋಷಿಗಳ ತಿಳಿವಳಿಕೆಯಿದ್ದುದರಿಂದ ಅವು ಪೂರ್ಣವಾಗಿ ನಿಲ್ಲಲಿಲ್ಲ. ಅಂತೂ ಭಾರತದ ಕಾಲಕ್ಕೆ ಇನ್ನೂ ಸಾಮಾನ್ಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿ ಮಾಂಸ ತಿನ್ನುವದರ ಕಡೆಗೆ ಮನಸ್ಸು ಹರಿಯುತ್ತಿದ್ದರೂ ತಿನ್ನಬಾರದೆಂಬುವದೊಂದು ಪಕ್ಷವು ಆಗ ಮೆಲ್ಲಗೆ ಬೆಳೆಯುತ್ತಿತ್ತು; ಇದು ಆಧ್ಯಾತ್ಮಿಕವಾದಿಗಳ ಪಕ್ಷವಿತ್ತು; ಭಾರತೀಯ ಆರ್ಯರು ಮಾಂಸಕ್ಕೆ ಎಂದು ಬಹಿಷ್ಕಾರಹಾಕಿದರೋ, ಅಂದಿನಿಂದ, ಅವರ ಅವನತಿಗೆ ಮೊಳಕೆಹಾಕಿತೆಂದು ಒಬ್ಬ ಪಾಶ್ಚಾತ್ಯ ಇತಿಹಾಸಗಾರನು ನುಡಿದಿರುವನು. ಕ್ಷಾತ್ರವೃತ್ತಿಯ ಜನರು ಮಾಂಸಾಹಾರವನ್ನು ಮಾಡಲಿಕ್ಕೇನೂ ಆಡ್ಡಿಯಿಲ್ಲವೆಂದು ಸ್ವಾಮೀವಿವೇಕಾನಂದಾದಿಗಳು ಸಹ ಹೇಳಿರುವರು: ಕ್ಷತ್ರಿಯರಲ್ಲಿ ಮದ್ಯವನ್ನು ಕುಡಿಯುವವರು ಕೆಲವರಿದ್ದರೂ, ಬ್ರಾಹ್ಮಣರು ಮದ್ಯ ಕುಡಿಯುವದೆಂದರೆ ಪಂಚಮಹಾಪಾಪಗಳಲ್ಲೊಂದು ಎಂದು ಜರಿಯುತ್ತಿದ್ದರು.

ಮೇಲಿನ ವಿಷಯವನ್ನು ಬಿಟ್ಟು, ಇನ್ನು ಸಾಧಾರಣವಾಗಿ ಎಲ್ಲ ಜನರು ತಿನ್ನುಣ್ಣುವ ಆಹಾರವೇನೆಂಬುದನ್ನು ನೋಡುವಾ– ಅಕ್ಕಿ,

ಗೋಧಿ, ಜವೆಗೋಧಿ, ಶೆಜ್ಜೆ ಇವುಗಳೇ ಆವರು ತಿನ್ನುಣ್ಣುವ ಕಾಳು ಕಡಿಗಳು. ಆರ್ಯರು ಉತ್ತರದಿಂದ ದಕ್ಷಿಣಕ್ಕೆ ಇಳಿದು ಬಂದಂತೆ, ಅವರಿಗೆ ಅಕ್ಕಿಯು ವಿಪುಲವಾಗಿ ಶಿಗಲಾರಂಭಿಸಿತು. ಪಂಜಾಬದೇಶದಲ್ಲಿರುವ ತನಕ ಗೋಧಿ, ಮಾಂಸ ಮೊದಲಾದವುಗಳೇ ಅವರ ಮುಖ್ಯ ಆಹಾರಗಳಾಗಿದ್ದವು. ಅದರೂ ಯಾವುದರಲ್ಲಿ ಹೆಚ್ಚು ಮಾಂಸವಿರುವದೋ, ಅಂಥದನ್ನು ತಿನ್ನಲಿಕ್ಕೇ ಆರ್ಯರಿಗೆ ಬಲುಪ್ರೀತಿ. ಆರ್ಯರು ಗೋಭಕ್ತರಿದ್ದುದರಿಂದ ಅಕಳಹಾಲು, ಅಕಳತುಪ್ಪ ಇವು ಅವರ ಅತ್ಯಂತ ಇಷ್ಟಪದಾರ್ಥಗಳಿದ್ದವು. ಎಮ್ಮೆಯ ಹಾಲು, ತುಪ್ಪವನ್ನು ಅವರು ಉಪಯೋಗಿಸುತ್ತಿದ್ದ ಬಗ್ಗೆ ಎಲ್ಲಿಯೂ ಆಧಾರವಿಲ್ಲ; ಮೇಲಾಗಿ ದೇಶದೊಳಗೆ ಆಗ ಈಗಿನಂತೆ ಗೋಹತ್ಯಾದಿಗಳು ನಡೆಯುತ್ತಿದ್ದಿಲ್ಲವಾದ್ದರಿಂದ ಅಕಳ-ಹೈನು ನದಿಗಳಂತೆ ದೇಶದೊಳಗೆ ಸಮೃದ್ಧವಾಗಿ ಹರಿಯುತ್ತಿದ್ದಿತು; ಆಂದಮೇಲೆ ಎಮ್ಮೆಯ ಹಾಲು ಅದೇಕೆಂತು ಉಂಡಾರು? ಕಲಿಯುಗದಲ್ಲಿ ಅಕಳಹೈನು ಕಡಿಮೆಯಾಗಿ ಜನರು ಎಮ್ಮೆ-ಆಡುಗಳ ಹೈನುಣ್ಣುವರೆಂದು ಹೇಳಿಯಿದೆ. ಈಗಿನ ಕಾಲದಂತೆ, ಆಗ್ಗೆ ಹಾಲು ಅಟ್ಟಿಸಿದ ಪಾಯಸ, ಉಂಡಿ ಮೋದಕಾದಿಗಳನ್ನೆ ಮಾಡುತ್ತಿದ್ದರು. ತಿನ್ನುಣ್ಣುವದರಲ್ಲಿ ಆರ್ಯರು ಬಹು ಕಟ್ಟಾದ ಜನರು; ಕಂಡ ಕಂಡವರಲ್ಲಿ, ಕಂಡಕಂಡ ವ್ಯವಹಾರಮಾಡುವವರಲ್ಲಿ, ಹೀನಕುಲದವರಲ್ಲಿ ಎಂದೂ ಊಟಮಾಡಕೂಡದು; ಅದರಿಂದ ಮನುಷ್ಯನ ತೇಜವು ಕುಂದುತ್ತದೆಂದು ಆರ್ಯರು ಊಟದ ಬಗ್ಗೆ ಅನೇಕ ನಿರ್ಬಂಧಗಳನ್ನು ಹಾಕಿಟ್ಟಿರುವರು; 'ಅನ್ನಕ್ಕೂ, ಮನುಷ್ಯನ ರಕ್ತಕ್ಕೂ, ಸ್ವಭಾವಕ್ಕೂ ಬಹು ಹತ್ತಿರಿನ ಸಂಬಂಧವಿರುವದರಿಂದ, ಸಾಧ್ಯವಾದಮಟ್ಟಿಗೆ ಮನುಷ್ಯನು ಅನ್ನದ ಬಗ್ಗೆ ಬಹು ಜಾಗರೂಕನಾಗಿರಬೇಕೆಂದು ಎಚ್ಚರಿಕೆ ಕೊಟ್ಟಿದ್ದಾರೆ.)

ಇಲ್ಲಿಯ ತನಕ ಸಾಧಾರಣವಾಗಿ ಊಟ ತಿಂಡಿಯ ಸಂಗತಿಯನ್ನು ತಿಳಿಸಿದ್ದಾಯಿತು. ಇನ್ನು ಉಡಿಗೆಯ ವಿಷಯವನ್ನು ಭಾರತದೊಳಗೆ ಹುಡುಕತೊಡಗಿದರೆ, ಭಾರತೀಯ ಆರ್ಯರ ಉಡಿಗೆಯೆಂದರೆ ಒಂದು ಉಟ್ಟುಕೊಳ್ಳುವ ಧೋತರವು; ಮತ್ತೊಂದು ಹೊದ್ದುಕೊಳ್ಳುವ

ಧೋತರವು. ಎರಡೇ ನಾದಾಧೋತರಗಳಿಂದ ಇಡೀ ಮೈಯನ್ನೆಲ್ಲ ಮುಚ್ಚುವ ಈ ನಡವಳಿಕೆಯು ಗ್ರೀಕ, ರೋಮನ್ನ ಜನರಲ್ಲಿಯೂ ಇದ್ದಿತು. ಆದರೂ, ಇದು ಬಹು ಕಾಲದಿಂದಲೂ ನಡೆದುಬಂದ ಆರ್ಯರ ಉಡಿಗೆಯು; ಮತ್ತು ನಮ್ಮಲ್ಲಿ ಈಗಲೂ ಹಳ್ಳಿಪಳ್ಳಿಗಳಲ್ಲಿಯೂ, ಕೇವಲ ಧರ್ಮಪರ ಜನರಲ್ಲಿಯೂ, ಇದೇ ನಡೆವಳಿಯು ದೃಗ್ಗೋಚರವಾಗುತ್ತದೆ. ಈ ಧೋತರವನ್ನು, ಆರ್ಯಬ್ರಹ್ಮಚಾರಿಗಳು ಬಲಗೈಯನ್ನೊಂದು ಹೊರಗೆ ಬೆಗೆದು ಕಂಕುಳೊಳಗಿಂದ ಹಾಯಿಸಿ ಅದಕ್ಕೆ ಗಂಟು ಹಾಕಿ ಹೊದೆಯುತ್ತಿದ್ದರೆಂಬುದು ಅನೇಕ ಉದಾಹರಣೆಗಳ ಮೇಲಿಂದ ಕಂಡುಬರುತ್ತದೆ. ಆದರೂ ಇದೇ ಧೋತರವಿಂದಲೇ ಯುದ್ಧ ಮೊದಲಾದವುಗಳನ್ನು ಹೇಗೆ ಮಾಡುತ್ತಿದ್ದರೆಂಬುದೊಂದು ಪ್ರಶ್ನೆವು ಹಾಗೇ ಉಳಿದುಕೊಳ್ಳುತ್ತದೆ. ಆಗಿನ ಕಾಲಕ್ಕೆ ಬಟ್ಟೆ ಹೊಲಿಯುವ ಕೈಗಾರಿಕೆಯೇ ಇರಲಿಲ್ಲ. ಬಟ್ಟೆ ಹೊಲಿಯುವ ಕೈಗಾರಿಕೆಯು ಪಾಶ್ಚಾತ್ಯ ಜನರಿಂದ ಬಂದಿದೆ. ಗಂಡಸರ ತಲೆಯ ಮೇಲೆ ಕೂದಲುಗಳಿದ್ದು, ನಾಲ್ಕುಜನರೊಳಗೆ ಹೋಗಬೇಕಾದರೆ ತಲೆಯ ಮೇಲೆ ಮುಂಡಾಸಿನಂತಹದೊಂದನ್ನು ಹಾಕಿಕೊಳ್ಳುತ್ತಿದ್ದರು. ಇದಕ್ಕೆ ಭಾರತದೊಳಗೆ 'ಉಷ್ಣೀಷ' ವೆಂದು ಅಂದಿದ್ದಾರೆ. ಈ 'ಉಷ್ಣೀಷ' ವಂದರೆ, ಈಗಣ ಕಾಲದ ಮರಾಟಿಗರ ಮುಂಡಾಸಿನಂತಿರದೆ, ತಲೆಗೆ ಬರಿಯು ದೊಂದು ವಾವ್ರದವನ್ನಾಗಲಿ, ಕೈವಸ್ತ್ರವನ್ನಾಗಲಿ ಸುತ್ತಿಕೊಂಡಂತೆ ಇರುತ್ತಿತ್ತು. ಭೀಷ್ಮ, ದ್ರೋಣರು ಯುದ್ಧಕ್ಕೆನಿಂತಾಗ ತಲೆಗೆ ಇಂಥ ವಸ್ತ್ರಗಳನ್ನು ಸುತ್ತಿಕೊಂಡಿರುವರಾಗಿ ವರ್ಣನೆಯಿದೆ. ಉದಾಹರಣೆಗಾಗಿ "ದ್ರೋಣಾಚಾರ್ಯರು ಬಿಳೇಬಣ್ಣದ ಕವಚ, ವಸ್ತ್ರ ಹಾಗೂ 'ಉಷ್ಣೀಷ'ಗಳನ್ನು ಧರಿಸಿ ಧನುಷ್ಯದ ಟಣತ್ಕಾರವನ್ನು ನಡಿಸಿದ್ದರಂತೆ! ಆದರೆ, ದುರ್ಯೋಧನಾದಿರಾಜರು ಕಿರೀಟಗಳನ್ನು ಧರಿಸುತ್ತಿದ್ದರು. ಆಗ, ಭರತಖಂಡದಲ್ಲಿ ಹತ್ತಿ, ರೇಶ್ಮೆಯು ಹುಟ್ಟುತ್ತಿದ್ದುದರಿಂದ ಈ ವಸ್ತ್ರಗಳೆಲ್ಲವೂ ಹತ್ತಿ, ರೇಶ್ಮೆಗಳಿಂದಲೇ ಮಾಡಲ್ಪಟ್ಟಿರುತ್ತಿದ್ದವು. ಕಾಲೊಳಗೆ ಈಗಿನ ಕಾಲದ ಕೆರವಿನಂತಹ ಒಂದು ವಿಧದ ಮೂಚ್ಚೆಯನ್ನು ಹಾಕಿಕೊಳ್ಳುತ್ತಿದ್ದರು. ಕ್ಷತ್ರಿಯರು ವಾಡಿಕೆಯಾಗಿ, ತಲೆಯ ಮೇಲೆ

ಕೂದಲ ಹಾಗೂ ಗಡ್ಡವನ್ನು ಕಾಯುತ್ತಿದ್ದರು. ಗೃಹನ್ಯಾಶ್ರಮಿಗಳಾದ ಅಗ್ನಿಹೋತ್ರಿ ಜನರು ಮೀನೆ, ಹಾಗೂ ಗಡ್ಡಗಳನ್ನು ಬೋಳಿಸುತ್ತಿರ ಬಹುದು; ಅಲ್ಲದೆ, ಬೇರೆಬೇರೆ ವ್ಯವಸಾಯನ ಜನರ ಬೇರೆಬೇರೆ ಉಡಿಗೆ ಗಳಿದ್ದವೆಂದೂ ತೋರುತ್ತದೆ. ಗಂಡಸರಂತೆ ಹೆಂಗಸರೂ ಎರಡೇ ಉದ್ದ ವಾದ ವಸ್ತ್ರಗಳಿಂದ ಮೈಮುಚ್ಚಿಕೊಳ್ಳುತ್ತಿದ್ದರು; ಮೊದಲೊಂದು ಉದ್ದ ವಾದ ಸೀರೆಯನ್ನುಟ್ಟುಕೊಳ್ಳುವದು, ಮೈಸುತ್ತ ತಲೆಯ ಮೇಲೆ ಹಾಯಿಸಿಕೊಂಡು ಮತ್ತೊಂದು ವಸ್ತ್ರವನ್ನು ಹೊದ್ದುಕೊಳ್ಳುವದು. ಈ ಉತ್ತರೀಯವು ಈಗಿನ ಶಾಲಿನಂತೆ, ಚಿತ್ರವಿಚಿತ್ರವಾದ ಕಸೂತಿ ತೆಗೆದುದಾಗಿರುತ್ತಿತ್ತು.

ತತ್ಕಾಲೀನ ಸ್ತ್ರೀಯರ ಉಡಿಗೆ:—ಈ ತರದ ನಿವೇಶವು ಪ್ರಕೃತ ಬಂಗಾಲ, ಗುಜರಾತ, ಮದ್ರಾಸದ ಕಡೆಯ ಹೆಂಗಸರಲ್ಲಿ ಕಾಣುಬರುತ್ತದೆ; ಆದರೂ ಪೂರ್ವಕಾಲಕ್ಕೆ ಮೈಸುತ್ತ ಸುತ್ತಿಕೊಂಡು ತಲೆಯ ಮೇಲೆ ಹಾಯಿಸಿ ತಂದಿರುವಂಥ ಉತ್ತರೀಯ ವಸ್ತ್ರದ ಪದ್ಧತಿಯು ಈಗ ಕಾಣುವದಿಲ್ಲ. ಅದಕ್ಕೆ ಬದಲಾಗಿ ಉದ್ದುವ ಸೀರೆಯನ್ನೇ ಹೆಚ್ಚಾಗಿ ನಾಲ್ಕುಮೊಳ ಉದ್ದವಾಗಿಟ್ಟಿರುತ್ತಾರೆ. ದ್ರೌಪದಿಯನ್ನು ದುಃಶಾಸನನು ಅಂತಃಪುರದೊಳಗಿಂದ ದ್ಯೂತಸಭೆಗೆ ಎಳೆದು ತರುವಾಗ್ಗೆ "ನಾನು ಒಂದೇ ವಸ್ತ್ರದಿಂದಿರುವೆನು. ನನ್ನನ್ನು ಹೊರಗೆ ಎಳೆದೊಯ್ಯಬೇಡಿರೆಂದು ಕಕ್ಕುಲತೆಯಿಂದ ಕೂಗಿ ಹೊರಬಿಟ್ಟಿರುವದರ ಮೇಲಿಂದ ಆಗಿನ ಸ್ತ್ರೀಯರು ಉತ್ತರೀಯವನ್ನು ಈಗಿನ ಕಾಲದ ಶಾಲಿನಂತೆ ಬಳಸುತ್ತಿದ್ದಂತೆ ಕಾಣುತ್ತದೆ; ಅರ್ಥಾತ್, ಪೂರ್ವಕಾಲಕ್ಕೆ ಕುಪ್ಪಸವನ್ನು ತೊಡುವ ಪದ್ಧತಿಯಿಲ್ಲ; ಮತ್ತು ಈಗಿನವರಂತೆ, ಕಚ್ಚೆಯನ್ನು ಹಾಕಿ ಸೀರೆ ಉಡುತ್ತಿರಲಿಲ್ಲ. ಸಾಮಾನ್ಯವಾಗಿ ಕೂಲಿಕೆಲಸ ಮಾಡುವ ಹೆಂಗಸರು ಬರಿಯ ಒಂದೇ ವಸ್ತ್ರದಿಂದಿರುತ್ತಿದ್ದರು. ವಿಧವೆಯರು ಶುಭ್ರವಾದ ಬಟ್ಟೆಯನ್ನುಡುತ್ತಿದ್ದರು. ಮುತ್ತೈದೆಯರು ಈಗಿನಂತೆ ಹೆರಳು ಕಟ್ಟದಿದ್ದರೂ ಮೈಸೂರ ಸೀಮೆಯ ಮಹಿಳೆಯರಂತೆ, ಅವನ್ನು ಹಾಗೇ ಜೋತು ಬಿಡುತ್ತಿರಬಹುದು. ಬೈತಲ ತೆಗೆದು ಅದರ ಮುಂದುಗಡೆಯಲ್ಲಿ ಕುಂಕುಮವನ್ನಾಗಲಿ, ಕೇಶರವನ್ನಾಗಲಿ ಹಚ್ಚುತ್ತಿದ್ದರು. ಈ

ಪದ್ಧತಿಯು ಈಗ್ಯೂ ಉತ್ತರಹಿಂದುಸ್ಥಾನ, ಬಂಗಾಲ, ಗುಜರಾಥಗಳಲ್ಲಿ ದೃಷ್ಟಿಗೆಬೀಳುತ್ತಿದೆ. ನಮ್ಮ ಕಡೆಯಲ್ಲಿದ್ದರೂ ಕಡಿಮೆ. ಆ ಕುಂಕುಮ ಪದ್ಧತಿಯು ಈಗ ಹಣೆಯ ಮೇಲೆ ಬಂದಿದೆ. ಬೈತಲ ತೆಗೆಯದೆ ಕೂದಲನ್ನು ಸನ್ಯಾಸಿಗಳಂತೆ ಹಿಕ್ಕಿಕೊಳ್ಳದಿರುವದೇ ವಿಧವೆಯರ ಲಕ್ಷಣವಾಗಿತ್ತು. ಬಡಹೆಂಗಸರು ತಲೆಗೊಂದು ಬಟ್ಟೆಯನ್ನು ಕಟ್ಟಿಕೊಂಡಿರುತ್ತಿದ್ದರು. ದ್ರೌಪದಿಯು ಸೈರೇಂಧ್ರಿಯ ವೇಷದಿಂದ ವಿರಾಟ್ ರಾಜನ ಕಡೆಗೆ ಕೆಲಸಕ್ಕಾಗಿ ಹೋದಾಗ, ಕೂದಲವನ್ನು ಬಂದೆಡೆಯಲ್ಲಿ ಬಟ್ಟೆಯಿಂದ ಕಟ್ಟಿಕೊಂಡಿದ್ದಳಂತೆ!

ಆಭರಣಾದಿಗಳು:- ಭಾರತೀಯರು ಉಡಿಗೆಯು ವಿಷಯದಲ್ಲಿ ಹೀಗೆ ಅಡಂಬರವಿಲ್ಲದವರಾಗಿದ್ದರೂ, ಅಲಂಕಾರ, ಒಡವೆ, ಆಭರಣಾದಿಗಳನ್ನು ಹಾಕಿಕೊಳ್ಳುವದರಲ್ಲಿ ಬಹಳ ಮುಂದುವರಿದಿದ್ದರು; ಮಧ್ಯಮ ತರಗತಿಯ ಜನರೆಲ್ಲರೂ ಬೆಳ್ಳಿ ಭಂಗಾರದ ಒಡವೆಗಳನ್ನು ಹಾಕಿಕೊಳ್ಳುತ್ತಿದ್ದರಷ್ಟೇ ಅಲ್ಲದೆ, ತಮ್ಮಂತೆಯೇ ಕುದುರೆ ಆಕಳುಗಳನ್ನು ಬೆಳ್ಳಿ ಭಂಗಾರದ ಒಡವೆಗಳಿಂದ ಶಿಂಗರಿಸುತ್ತಿದ್ದರು. ಅವರಿಗೆ ಅದೊಂದು ಪ್ರೀತಿಯ ವಿಷಯ. ರಾಜರು ಮುತ್ತು ರತ್ನ ವೈಡೂರ್ಯಾದಿಗಳಿಂದ ತಮ್ಮ ಶರೀರವೆಲ್ಲ ಝಗರುಝಗಿಸುವಂತೆ, ಮಾಡುತ್ತಿದ್ದರು; ರಾಜರು ತಲೆಯಮೇಲೆ ಕಿರೀಟಗಳನ್ನು ಹಾಕಿಕೊಳ್ಳುತ್ತಿದ್ದರಷ್ಟೇ! ಈ ಕಿರೀಟಗಳು ರತ್ನಖಚಿತವಿರುತ್ತಿದ್ದವು; ಅಲ್ಲದೆ, ರಾಜರು ಕಿವಿಯೊಳಗೆ ಕುಂಡಲ, ಕೊರಳಲ್ಲಿ ಮುತ್ತಿನಹಾರ, ಭುಜಕಿರೀಟಗಳನ್ನು ತೊಡುತ್ತಿದ್ದರು. ಪಟ್ಟರಾಣಿಯರು ರತ್ನ ವೈಡೂರ್ಯಗಳಿಂದ ಕೆತ್ತಿದಂಥದೊಂದು ಚಿನ್ನದ ಪಟ್ಟಿಯನ್ನು ಹಣೆಗೆ ಕಟ್ಟಿಕೊಳ್ಳುತ್ತಿದ್ದರು; ಮೇಲಾಗಿ ಟೊಂಕದಲ್ಲಿ ಭಂಗಾರದ ಪಟ್ಟಿ, ಕಾಲಲ್ಲಿ ಗೆಜ್ಜೆಗಳನ್ನಿಡುವ ಸಂಪ್ರದಾಯವಿತ್ತು.

ವಿಚಿತ್ರ ನಡವಳಿಕೆಗಳು:—ಭಾರತೀಯ ಅರಸರು ಅನೇಕ ಹೆಂಡಿರನ್ನು ಮದುವೆ ಮಾಡಿಕೊಳ್ಳುವದಲ್ಲದೆ, ವೇಶ್ಯಾಸ್ತ್ರೀಯರನ್ನು ಇಟ್ಟುಕೊಂಡಿರುತ್ತಿದ್ದರೂ, ಮರ್ಯಾದೆಯಲ್ಲಿ ಮನೆತನದ ಹೆಂಗಸರ ತರುವಾಯ ಈ ವೇಶ್ಯಾಸ್ತ್ರೀಯರಿಗೆ ಮಾನವಿತ್ತು; ಇವರು ವೇಶ್ಯಾಸ್ತ್ರೀಯರಾದಾಗ್ಯೂ, ಒಬ್ಬರನ್ನೇ ನಂಬಿಕೊಂಡಿರುವದರಿಂದ, ಮದುವೆಯಾದ

ಹೇಂಗಸರಂತೆಯೇ ಇವರನ್ನಾದರೂ ತಿಳಿಯುತ್ತಿದ್ದರು. ಭಾರತೀಯ ಆರ್ಯರು ಜೂಜಿನಲ್ಲಿ ಮುಂದಾಳುಗಳಿದ್ದರು. ಜೂಜಿನಿಂದ ಮನುಷ್ಯನ ದ್ರವ್ಯಹಾನಿ, ಜಗಳಗಳು ಉಂಟಾಗುತ್ತವಾದ್ದರಿಂದ ಅದಕ್ಕೆ ಮನಸೋಲಲಾ ಬಾರದಾಗಿ ಹಲವೆಡೆಯಲ್ಲಿ ಹೇಳಿದ್ದರೂ, ಅದೊಂದು ಭಾರತೀಯ ರಾಜರ ಚಟವೇ ಆಗಿದ್ದಿತು; ಮತ್ತು ಅದರಿಂದ ಪಾಂಡವರು ಎಂಥ ಸಂಕಟಪರಂಪರೆಗಳಿಗೆ ತುತ್ತಾಗಬೇಕಾಯಿತೆಂಬುದಕ್ಕೆ ಇಡೀ ಮಹಾ ಭಾರತವೇ ಧ್ವಜದಂತೆ ಯುಗಯುಗಾಂತರಗಳಲ್ಲಿ ನಾಕ್ಷಿಯಾಗಿ ನೆರೆ ಯುತ್ತಿದೆ. ನಾಮಾಜಿಕವಾದ ಇವೇ ಒಂದೆರಡು ವೈಗುಣ್ಯಗಳನ್ನುಳಿದು ಮಿಕ್ಕ ನಡೆನುಡಿಯಲ್ಲಿ ಭಾರತೀಯ ಆರ್ಯರು ಬಹು ಪ್ರಾಮಾಣಿಕರೂ, ಸಭ್ಯಾಚಾರಶೀಲರೂ, ಸತ್ಯನುಡಿಯುವದರಲ್ಲಿ ಜಗತ್ತಿನ ಲ್ಲೆಲ್ಲ ಹೆಸರುವಾಸಿಗಳೂ ಆಗಿದ್ದರು. ಮಂದಿಯ ಮುಖಸ್ತುತಿ, ಅಥವಾ ಮುಖನೋಡಿ ಮಣಿಹಾಕುವಂಥ ಹಿಂದೊಂದು ಮುಂದೊಂದು ಸ್ವಭಾವವನ್ನು ಅವರು ಅರಿಯರು. ಬೆಳಿಗ್ಗೆ ಎದ್ದೊಡನೆ, ಮುಖ ತೊಳೆ ದುಕೊಂಡು ಮೊದಲು ದೇವರು, ಆಮೇಲೆ ಗುರುಹಿರಿಯರಿಗೆ ನಮಸ್ಕರಿಸುವ ಪದ್ಧತಿಯೆಂದರೆ, ಆರ್ಯರ ಮೊದಲನೇ ಕರ್ತವ್ಯವೇ ಆಗಿತ್ತು; ಹಿರಿಯರ ಮಾತಿಗೆ ಕಿರಿಯರು ಇದಿರಾಡದೆ, ಸುಮ್ಮನೆ ಮೂಕರಂತೆ ಆಜ್ಞೆ ವಾಲಿಸುತ್ತಿದ್ದರೆಂಬುದಕ್ಕೆ ಭೀಮಾರ್ಜುನ ನಕುಲರು ಹಿರಿಯಣ್ಣನಾದ ಧರ್ಮರಾಜನೊಡನೆ ನಡೆದುಕೊಂಡದ್ದೇ ನಾಕು. ಪಿತಾಮಹರಾದ ಭೀಷ್ಮಾಚಾರ್ಯರು ತಮ್ಮ ತಂದೆಯ ಸುಖಕ್ಕಾಗಿ ತಮ್ಮ ಸುಖಕ್ಕೆ ನೀರುಬಿಟ್ಟು, ಆಜನ್ಮ ಬ್ರಹ್ಮಚಾರಿಯಾಗಿರುವ ಪ್ರತಿಜ್ಞೆ ಮಾಡಿ, ಅದನ್ನು ಕೊನೆಯವರೆಗೂ ನಡೆಸಿದ್ದೆಂದು ಭಾರತೀಯರ ಇತಿಹಾಸದೊಳಗೆ ಕಾಲಾಂತರದಲ್ಲಿಯೂ ಥಳಥಳಿಸುತ್ತಿರುವ ಪಿತೃವಾತ್ಸಲ್ಯದ ಅತ್ಯುದಾತ್ತವಾದ ಮಾದರಿಯಾಗಿದೆ. ಹಿಂದೂದೇಶವನ್ನುಳಿದು ಬೇರೆ ಜನಾಂಗದೊಳಗೆ ಇದಕ್ಕೆ ಸಮವಾದ ಮತ್ತೊಂದು ದೃಷ್ಟಾಂತವೇ ಸಿಗದು. ಆರ್ಯರಿಗೆ ತಂದೆತಾಯಿಗಳೆಂದರೆ, ಬರಿಯ ಕೆತ್ತವರಷ್ಟೇ ಅಲ್ಲದೆ, ದೇವರೆಂದು ಭಾವನೆ; ಆದುದರಿಂದ ಮಕ್ಕಳು ದೊಡ್ಡವರಾದರೂ, ತಂದೆ, ಗುರುಹಿರಿಯರ ಮುಂದೆ ಅತ್ಯಂತ ನಮ್ರವಾಗಿಯೇ ಮಾತಾಡಲಿಕ್ಕೆ

ಬೇಕೆಂದು ಕಟ್ಟಳೆ, ಅದೀಗ ವ್ಯಕ್ತಿಸ್ವಾತಂತ್ರ್ಯದ ಬಿರುಗಾಳಿ ಬೀಸ್ಟ್ಟಿರುವ ಕಾಲದಲ್ಲಿ ಕುಂದಿಹೋಗಿದ್ದರೂ, ವಾಶ್ಯಾತ್ಯಶಿಕ್ಷಣವಿಲ್ಲದೆಯೆಲ್ಲಿ ಈಗ್ಯೂ ಮೊದಲಿನಂತೆಯೇ ನೋಡಲಿಕ್ಕೆ ಸಿಗುತ್ತದೆ.

ಉದ್ಯಮವಾದವು:– ಭಾರತೀಯ ಕಾಲದ ಜನರಲ್ಲಿ ಎಳ್ಳಷ್ಟಾ ದರೂ ನಿರಾಶಾವಾದವು ಕಾಣಿಸುವದಿಲ್ಲ. ಮನುಷ್ಯಪ್ರಯತ್ನ ಹಾಗೂ ಮನುಷ್ಯನ ಕರ್ತೃತ್ವವನ್ನು ಪುಟಗೊಳಿಸುವಂಥ ಕಥೆಗಳು ಮಹಾಭಾರ ತದಲ್ಲಿ ಹಲವು ಕಡೆ ಮುಖವೆತ್ತಿ ಮೆರೆಯುತ್ತಿವೆ. ದೈವವಾದವು ಬಂದು ಮೇಳೆ ನಿಜವಿದ್ದರೂ, ಮನುಷ್ಯನು ದೈವವೇ ಮೇಲೆಂದು ಕುಳಿತರೆ, ಅಥವಾ ಬರಿಯ ನಿರಾಶೆಯ ಕಗ್ಗತ್ತಲೆಯಲ್ಲಿಯೇ ತೊಳಲಾಡುತ್ತಿದ್ದರೆ, ಅವನು ಹೆಚ್ಚೆಚ್ಚು ಅಧೋಗತಿಗಿಳಿಯುವನೇ ಹೊರ್ತು ಅವನಿಂದೇನೂ ಪುರುಷಾರ್ಥವು ಸಾಧಿಸದೆಂದು ಹೆಚ್ಚಿಚ್ಚಿಗೆ ಎದ್ದುಮೂಡುವ ದೃಷ್ಟಾಂತ ಗಳಿಂದ ಎಚ್ಚರಿಕೆ ಕೊಟ್ಟಿದ್ದಾರೆ; ಮತ್ತು ಕೊನೆಗೆ ಮನುಷ್ಯನು ಯಾವಾ ಗಲೂ ಧರ್ಮ ಮತ್ತು ಸತತೋದ್ಯೋಗವನ್ನಾಶ್ರಯಿಸಿಯೇ ಕೆಲಸ ಮಾಡುತ್ತಿರಲೇಬೇಕೆಂದು ಗರ್ಜಿಸಿದ್ದಾರೆ; ಉದ್ಯೋಗದ ಪ್ರಭಾವವು ಹೆಚ್ಚಿನದೋ, ದೈವ-ಪ್ರಭಾವವು ಹೆಚ್ಚಿನದೋ ಎಂಬ ಚರ್ಚೆನಡೆದಾಗ ಭೀಷ್ಮಾಚಾರ್ಯರು ಉದ್ಯೋಗದ ಮಹಿಮಾವಿಶೇಷವನ್ನೇ ಎತ್ತಿ ಹಿಡಿದು, "ದೇವತೆಗಳು ಸಹ ತಮ್ಮ ಕರ್ಮಗಳಿಂದಲೇ ಉಚ್ಚಸ್ಥಿತಿಗೇರಿ ದ್ದಾರೆ; ಯಾವ ಮನುಷ್ಯನು ಉದ್ಯೋಗ, ಪ್ರಯತ್ನಗಳನ್ನು ಅವಲಂಬಿಸಿ ಕೆಲಸ ಮಾಡುವದಿಲ್ಲವೋ ಅವನಿಗೆ ಹಣವೆಲ್ಲಿಯದು? ಸಂಪತ್ತಿಯೆಲ್ಲಿ ಯದು? ಯಾವಾತನು ಕೆಲಸಮಾಡದೆ ಬರಿಯ ದೈವವನ್ನೇ ಬಿಗಿಯಾಗಿ ಅಪ್ಪಿಕೊಂಡು ಕಾಲಕಳೆಯುವನೋ, ಆತನು ನಪುಂಸಕನ ಹೆಂಡತಿ ಯಂತೆ, ದುಃಖಿಯಾಗುವನೆಂದು ಹೇಳಿದ್ದಾರೆ. ಇವೆಲ್ಲ ದೃಷ್ಟಾಂತ ಗಳಮೇಲಿಂದ ಭಾರತಕಾಲೀನ ಜನರು ಎಷ್ಟು ಉದ್ಯಮಪ್ರಿಯರೂ, ಸ್ವತಂತ್ರವೃತ್ತಿಯವರೂ, ಪ್ರಯತ್ನವಾದಿಗಳೂ, ತೇಜಸ್ವಿಗಳೂ, ಹರಿ ಯುವ ನೀರಿನಂತೆ ನಿರ್ಮಲರೂ, ಚಟುವಟಿಕೆಯುಳ್ಳವರೂ ಆಗಿದ್ದರೆಂಬುದು ಅನುಭವಕ್ಕೆ ಬರುತ್ತದೆ. ಹೀಗೆ ಪ್ರತಿಯೊಬ್ಬರಲ್ಲಿ ಪ್ರಯತ್ನವಾದವು, ಉದ್ಯೋಗಶೀಲತೆಯೂ ಮೈಗೂಡಿಹೋಗಿದ್ದರಿಂದ ಕಳ್ಳತನ

ವೆಂಬುದು ಕವಿಗಳು ವರ್ಣಿಸಿದಂತೆ ಶಬ್ದದಲ್ಲಿಯೇ ಉಳಿದುಹೋಗಿತ್ತೆಂದರೆ ಅತ್ಯುಕ್ತಿಯಾಗದು; ಶೀಲದಲ್ಲಿ ನೋಡಿದರೆ ಭಾರತೀಯ ಆರ್ಯರು ಶಿಖರಕ್ಕೆ ಏಡರಿದ್ದರು; ಶೀಲಕ್ಕಾಗಿ ತಮ್ಮ ಪ್ರಾಣವನ್ನು ಸಂತೋಷದಿಂದ ತೊರೆಯಲಿಕ್ಕೆ ಅವರೆಂದೂ ಹಿಂಜರಿಯುತ್ತಿರಲಿಲ್ಲ. ಅಂದಮೇಲೆ ಸಂಪತ್ತು, ಹೆಂಡಿರುಮಕ್ಕಳ ಕಥೆಯೇನು? ಬ್ರಾಹ್ಮಣನು ಸಚ್ಛೀಲನಿಲ್ಲದಿದ್ದರೆ, ಅವನನ್ನು ಶೂದ್ರನಂತೆ ತಿಳಿಯಬೇಕಾಗಿ ಆ ಕಾಲದ ಜನರ ಮತ ವಿದ್ದಿತು. ಶೀಲವಿರುವಲ್ಲಿ ಸಂಪತ್ತು, ಧೈರ್ಯ, ನಾಹಸೋದ್ಯೋಗಗಳು ಮನೆಮಾಡಿಕೊಂಡಿರುತ್ತವೆಂದೂ ಅವರ ನೆಚ್ಚಿನ ನಂಬಿಗೆ; ಹಾಗಿದ್ದಮೇಲೆ ಅವರೇಕೆ ಶೀಲದ ಮಹಿಮೆಯನ್ನು ಎಲ್ಲಕ್ಕೂ ಮೇಲೆಂದು ತಿಳಿಯಲಾಗದು!

ಸತ್ತರೆ, ರಣದಲ್ಲಿ ಅಥವಾ ವನದಲ್ಲಿ:— ಮೊದಲಿನಿಂದ ಕಡೆಯವರೆಗೆ ಭಾರತೀಯ ಆರ್ಯರ ಸಮಗ್ರ ಚರಿತ್ರೆಯನ್ನು ಸ್ವಲ್ಪ ಆಳವಾಗಿ ನಿರೀಕ್ಷಿಸಿದರೆ, ಪ್ರತಿಯೊಂದು ಆಶ್ರಮದೊಳಗೆ, ಪ್ರತಿಯೊಂದು ಸ್ಥಿತಿಯಲ್ಲಿ ನಾಧ್ಯನಿರುವಷ್ಟಿಗೆ ಉದಾತ್ತಭಾವನೆಯನ್ನು ತುಂಬಲಿಕ್ಕೆ ಅವರು ಪ್ರಯತ್ನಿಸಿರುವರು. ಭಾರತೀಯ ಆರ್ಯರಿಗೆ ಈ ಸಂಸಾರಯಾತ್ರೆಯಲ್ಲಿ ಅತ್ಯಂತ ರಮಣೀಯವಾದ ಸ್ಥಾನಗಳೆಂದರೆ,ಒಂದನೇದು ಸೃಷ್ಟಿಸೌಂದರ್ಯದ ಬೀಡಾದ ವನವು; ಮತ್ತೊಂದು ವೀರಾವೇಶದ ನೆಲೆಯಾದ ರಣಾಂಗಣವು; ಇದುದರಿಂದ ಮನುಷ್ಯನು ಸತ್ತರೆ ರಣಾಂಗಣದಲ್ಲೆ ನಾಯಬೇಕು; ಇಲ್ಲವಾದರೆ, ಅವನು ವನದೊಳಗೆ ಬಿದ್ದು ಪ್ರಾಣಬಿಡಬೇಕು; ಹೊರ್ತು ಮನೆಯಲ್ಲ ನರಳುತ್ತ ಬೇನೆಯ ಹಾಸಿಗೆಯ ಮೇಲೆ ಸರ್ವಥಾ ಬೀಳಬಿಡಕೂಡದೆಂದು ಅವರ ಮಾತಿನ ಪಲ್ಲವಿಯಾಗಿತ್ತು. ಅದುದರಿಂದ, ಬ್ರಾಹ್ಮಣರು ಮನಮಾರು ಹೆಂಡಿರುಮಕ್ಕಳ ಮೋಹದ ಹಗ್ಗವನ್ನು ಹರಿದೊಗೆದು ವನದಲ್ಲಿಯೂ, ಕ್ಷತ್ರಿಯರು ರಣಕ್ಷೇತ್ರದಲ್ಲಿಯೂ ತಮಗೆ ಮೃತ್ಯುಬಂದರೆ ಧನ್ಯರೆಂದು ತಿಳಿಯುತ್ತಿದ್ದರು. ಅನೇಕ ಬ್ರಾಹ್ಮಣರು ಅಗ್ನಿಕಾಷ್ಟವನ್ನು ತಿಂದೂ, ಅಥವಾ ಬೆಂಕಿಯಲ್ಲಿ ಹಾರಿಕೊಂಡೂ ಮತ್ತೆ ಕೆಲವರು ಮುಪ್ಪಿನಿಂದ ಹಣ್ಣಾದ ದೇಹವನ್ನು ಜಲಸಮಾಧಿಯಿಂದಲೂ ನೀಗುತ್ತಿದ್ದರು. ಭಾರತೀಯ ಯುದ್ಧದೊಳಗೆ ರಣಭೂಮಿಯ

ಮೇಲೆ ಮಡಿದ ಲಕ್ಷಾವಧಿ ವೀರರ ಶವಗಳನ್ನು ಪಶುಪಕ್ಷಿಗಳಿಗೆ ಆಹಾರವಾಗಲೆಂದು ಹಾಗೇ ಬಿಟ್ಟಿರುತ್ತಿದ್ದರೆಂದು ತಿಳಿಯುತ್ತದೆ. ದೊಡ್ಡ ದೊಡ್ಡ ರಾಜರುಗಳ ಶವಗಳನ್ನು ಸಹ ರಣಹದ್ದು, ತೋಳ, ನರಿ, ಕಾಗೆ ಮೊದಲಾದವುಗಳು ಹರಿದು ತಿನ್ನುತ್ತಿರುವ ಸಂಗತಿಯನ್ನು ಗಾಂಧಾರಿಯು ಯುದ್ಧ ಮುಗಿದನಂತರ ವರ್ಣಿಸಿರುವಳು. ರಣಭೂಮಿಯಲ್ಲಿ ದೇಹವಿಟ್ಟವನ ದೆಸೆಯಿಂದ ಕಣ್ಣೀರಿಡಕೂಡದು; ಅವನಿಗೆ ಅನ್ನನೀರು ಕೊಡಕೂಡದು; ಅವನು ಸತ್ತನೆಂದು ಆಶೌಚಹಿಡಿದು ಸ್ನಾನ ಕೂಡ ಮಾಡಕೂಡದೆಂದು ಹೇಳಿದ್ದರ ಮೇಲಿಂದ ಅದು ಎಂಥ ಪುಣ್ಯದ ಫಲವೆಂಬ ಅವರ ಭಾವನೆ ಇತ್ತೆಂಬುದು ಮೇಲೆಯೇ ಆದೆ.

ಹೀಗೆ ವರ್ಣನೆಯಿದ್ದರೂ, ವಾಡಿಕೆಯಾಗಿ ಸತ್ತರೆ ದಹನ ಮಾಡುವ ವಿಧಿಯೇ ಇದ್ದಿತು. ಭೀಷ್ಮಾಚಾರ್ಯರು ಮಡಿದಾಗ ಅವರ ಪ್ರೇತಸಂಸ್ಕಾರವು ದಹನ ವಿಧಿಯಿಂದಲೇ ಆಯಿತಂತೆ! ಮೊದಲು ಧರ್ಮ ಹಾಗೂ ಮಿಕ್ಕ ಇಪ್ಪರಿವರೂ ಸೇರಿ ಪಿತಾಮಹನ ಪ್ರೇತವನ್ನು ಚಿತೆಯ ಮೇಲಿಟ್ಟು, ಅದನ್ನು ರೇಶ್ಮೆವಸ್ತ್ರ ಹಾಗೂ ಹೂಗಳಿಂದ ಮುಚ್ಚಿದರು; ತರುವಾಯ ಭೀಮಾರ್ಜುನರು ಮೇಲೆ ಚೌರಿಗಳನ್ನು ಬೀಸಿದರು; ಕೌರವಸ್ತ್ರೀಯರು ತಾಡವಾಲಿಯ ಬೀಸಣಿಕೆಗಳಿಂದ ಗಾಳಿ ಹಾಕಲಿಕ್ಕೆ ಹತ್ತಿದರು; ಸಾಮಗಾಯಕರು ಸಾಮಗಾನ ಹೇಳಿದರು. ನಂತರ ಚಂಪಕಕಟ್ಟಿಗೆಗಳಿಂದ ದೇಹವನ್ನು ಮುಚ್ಚಿ ಅಗ್ನಿಯನ್ನು ಹಚ್ಚಿದರು. ಸರ್ವರೂ ಪ್ರದಕ್ಷಿಣೆ ಹಾಕಿದ ನಂತರ ಗಂಗಾನದಿಗೆ ಹೋಗಿ ತಿಲತರ್ಪಣ ಕೊಟ್ಟರು. ಈಗಿನ ಪದ್ಧತಿಗೆ ಇದು ಹೋಲುತ್ತದೆ.

ರಾಜಕೀಯ ಸ್ಥಿತಿ:- ಭಾರತಕಾಲೀನ ಸಾಮಾಜಿಕ ಪರಿಸ್ಥಿತಿಯನ್ನರಿತುಕೊಳ್ಳಬೇಕೆಂದೆನಿಸುವದು ಎಷ್ಟು ಸ್ವಾಭಾವಿಕವಿರುವದೋ, ತತ್ಕಾಲೀನ ರಾಜಕೀಯ ಸ್ಥಿತಿಯನ್ನಾದರೂ ತಿಳಿದಿರುವದು ಅಷ್ಟೇ ಸ್ವಾಭಾವಿಕವೂ, ಬೋಧಪ್ರದವೂ ಆಗಿದೆ; ಅದುರಿಂದ ಇನ್ನು, ರಾಜಕೀಯ ಸ್ಥಿತಿಯ ಕಡೆಗೆ ಹೊರಳುವಾ. ವೈದಿಕಕಾಲದಿಂದ ಭಾರತಕಾಲದ ವರೆಗೂ ಭರತಖಂಡದೊಳಗೆ ಏಕಛತ್ರ ಸಾಮ್ರಾಜ್ಯವಿರದೆ,

ಅಲ್ಲಲ್ಲಿ ಚಿಕ್ಕಚಿಕ್ಕ ಸ್ವಾತಂತ್ರ್ಯಪ್ರಿಯ ನೂರಾರು ರಾಜ್ಯಗಳು ನೆಲೆ ಗೊಂಡಿದ್ದವು. ಹೀಗೆ ಮೇಲ್ಮೈಲೆ ಕಾಣಿಸಲಿಕ್ಕೆ ಇವು ಬೇರೆಯಾಗಿ ದ್ದರೂ ಸಂಸ್ಕೃತಿಯಲ್ಲಿಯೂ, ಭಾಷೆಯಲ್ಲಿಯೂ, ಧರ್ಮದಲ್ಲಿಯೂ ಅವೆಲ್ಲ ಒಂದೇ ಬುಡಕಟ್ಟಿಗೆ ಸೇರಿದ್ದವು; ಮತ್ತು ಅಲ್ಲಿ ವಾಸಿಸುವಂಥ ಜನರಿಂದಲೂ, ಅಥವಾ ಯಾವನೋ ಒಬ್ಬ ಶ್ರೇಷ್ಠನಾದ ಅರಸನಿಂದಲೂ, ಅಯಾ ದೇಶಗಳು ಒಂದೊಂದು ಹೆಸರುಗೊಳ್ಳುತ್ತಿದ್ದವು; ಅವರಲ್ಲಿ ಪರ ಸ್ಪರ ವಿವಾಹಸಂಬಂಧಗಳು ಬಳೆಯುತ್ತಿದ್ದರೂ, ರಾಜ್ಯಗಳು ಮಟ್ಟಿಗೆ ವಿಂಗಡವಾಗಿಯೇ ಇದ್ದವು; ಈ ಆರ್ಯರಲ್ಲಿ ಯಾವಾಗಲೂ ಒಂದಿ ಲ್ಲೊಂದು ನಿಮಿತ್ತದಿಂದ ಅಂತಃಕಲಹಗಳು ನಡೆದೇ ಇರುತ್ತಿದ್ದವಾ ದರೂ, ಒಬ್ಬರನ್ನೊಬ್ಬರು ಸಮೂಲವಾಗಿ ನಾಮಶೇಷಗೊಳಿಸಲಿಕ್ಕೂ, ಬೇರೆ ನಾಡಿನವರನ್ನು ಗೆದ್ದರೆ, ಅವರನ್ನು ಸ್ವಾತಂತ್ರ್ಯದಿಂದ ಚ್ಯುತಗೊ ಳಿಸಲಿಕ್ಕೂ ಭಾರತೀಯ ಆರ್ಯರು ಎಂದೂ ಪ್ರಯತ್ನಿಸಲಿಲ್ಲ; ಗೆದ್ದ ವರು ಬಿದ್ದ ರಾಜರನ್ನೆಂದೂ ಪದಚ್ಯುತ ಮಾಡಕೂಡದೆಂದು ಭಾರತದಲ್ಲಿ ಹೇಳಿದೆ. ಮಹರ್ಷಿವ್ಯಾಸರು ಯುಧಿಷ್ಠಿರನಿಗೆ ರಾಜನೀತಿಯನ್ನು ಉಪ ದೇಶ ಮಾಡುವಾಗ್ಗೆ, ತಿರುತಿರುಗಿ ಎಚ್ಚರಿಕೆಕೊಟ್ಟು ಹೇಳಿದ್ದೇನಂದರೆ, "ಗೆದ್ದಜನಾಂಗದ ಧೊರೆಯು ಅಣ್ಣತಮ್ಮಂದಿರು, ಮಕ್ಕಳು, ಮುಮ್ಮ ಕ್ಕಳು ಯಾರಾದರೂ ಇದ್ದರೆ, ಅವರನ್ನು ಪಟ್ಟಗಟ್ಟು; ಗಂಡುಸಂತತಿ ಯಿಲ್ಲದಿದ್ದರೆ ಕನ್ಯೆಯರಿಗೆ ಅಭಿಷೇಕ ಮಾಡು; ಅವರು ಚಿಕ್ಕವರೇ ಇರಲಿ, ದೊಡ್ಡವರೇ ಇರಲಿ;" ಭಾರತೀಯರು ಸ್ವಾತಂತ್ರ್ಯಪ್ರಿಯ ರಿದ್ದಂತೆ, ಪರಸ್ವಾತಂತ್ರ್ಯಪ್ರಿಯರೂ ಆಗಿದ್ದರು; ಅವರಿಗೆ ಸ್ವಾತಂತ್ರ್ಯ ಪ್ರಿಯರಾದವರನ್ನು ಪಾರತಂತ್ರ್ಯದೊಳಗೆ ಇರಿಸುವದೆಂದರೆ ಮಹತ್ಪಾಪ ವೆಂದೆನಿಸುತ್ತಿತ್ತು; ಅದುದರಿಂದ, ಬ್ರಾಹ್ಮಣಕಾಲದಿಂದ ಮೊದಲೆತ್ತಿಂಡು ಮಹಾಭಾರತಕಾಲದವರೆವಿಗೂ ಕಾಶಿ, ಕೋಸಲ, ವಿದೇಹ, ಶೂರ ಸೇನ, ಕುರು, ಪಾಂಚಾಳ, ಮತ್ಸ್ಯ, ಮದ್ರ, ಗಾಂಧಾರ, ವೃಷ್ಣಿ, ಭೋಜ, ಮಾಲವ, ಕ್ಷುದ್ರಕ, ಸಿಂಧು, ಸೌವೀರ, ಕಾಂಭೋಜ, ತ್ರಿಗರ್ತ ಮೊದಲಾದ ರಾಜ್ಯಗಳು ನಾವಿರಾರು ವರ್ಷಗಳಿಂದ ಹಲವು ರಾಜ್ಯಕ್ರಾಂತಿಯೊಳಗಿಂದ ಬದುಕಿ ಬಾಳಿಕೊಂಡಿದ್ದವು. ರಾಜ್ಯಭಾರ

ಕ್ರಮವೆಲ್ಲವೂ ಪ್ರಜಾಧಿಪತ್ಯಕ್ಕೆ ಮಾನಕೊಟ್ಟೇ ನಡೆಯುತ್ತಿತ್ತು. ಧೊರೆಯನ್ನಾರಿಸುವ ಅಧಿಕಾರವು ಪ್ರಜೆಗಳದಾಗಿತ್ತು; ಭಾರತೀಯ ಯುದ್ಧದ ಮೇಳೆಯಲ್ಲಿ ಧರ್ಮರಾಜನು ಹಸ್ತಿನಾಪುರಕ್ಕೆ ಮಾಂಡಲೀಕ ರಾಜರನ್ನೂ ಬ್ರಾಹ್ಮಣರನ್ನೂ ಕರೆಯಿಸಿ, ಅವರ ಅನುಮತಿ ಪಡೆದನಂತೆ! ಯಾವ ರಾಜನು ಎಲ್ಲ ಕ್ಷತ್ರಿಯ ರಾಜರನ್ನು ಗೆಲಿಯುತ್ತಿದ್ದನೋ ಅವನಿಗೆ ಸಮ್ರಾಟ್‌ನೆಂದು ಹೆಸರು ಪ್ರಾಪ್ತವಾಗುತ್ತಿತ್ತು. ಸಮ್ರಾಟ್‌ನಾದ ಧೊರೆಗೆ ರಾಜಸೂಯ ಯಜ್ಞವನ್ನು ನೆರವೇರಿಸಬೇಕಾಗುತ್ತಿತ್ತು. ರಾಜನು ಒರಿಯ ಸುಲಿಗೆಗಾರನಾಗಿರದೆ, ಪ್ರಜಾರಂಜನ ತತ್ಪರನಾಗಿರಬೇಕು; ಅದರಿಂದಲೇ 'ರಾಜ' ಎಂಬ ಶಬ್ದವು ಅರಸನಿಗೆ ಬಂದಿತು. ವಿಷ್ಣುವು ತನ್ನ ಶಕ್ತಿಯಿಂದ ರಾಜನಲ್ಲಿ ಸೇರಿಕೊಂಡು ಭೂಮಿಯ ಮೇಲೆ ಮೈಗೊಂಡು ಬರುತ್ತಾನೆ; ಅಂತೆಯೇ ದಂಡನೀತಿಯ ಜ್ಞಾನವು ಅವನಲ್ಲಿ ಜನ್ಮಸಿದ್ಧವಾಗಿರುತ್ತದೆ; ಆದುದರಿಂದ ರಾಜನನ್ನು ಮನುಷ್ಯನೆಂದು ತಿಳಿಯಕೂಡದೆಂದು ಭಾರತೀಯ ತತ್ವಜ್ಞಾನಿಗಳು ನಿಷ್ಕರ್ಷಿಸಿದ್ದಾರೆ. ಸೃಷ್ಟಿಯೊಳಗಿನ ಪ್ರತಿಯೊಂದು ವಸ್ತು ಬ್ರಹ್ಮನಿಂದಲೇ ಹುಟ್ಟಿಸಿದ್ದಾಗಿದೆಂದು ಆರ್ಯತತ್ವಜ್ಞಾನಿಗಳು ಭಾವಿಸಿದರು; ಮತ್ತು ಅದಕ್ಕೆ ಅಷ್ಟು ಪ್ರಾಶಸ್ತ್ಯಕೊಟ್ಟರು. ಅದರಂತೆ ದಂಡನೀತಿ, ರಾಜನೀತಿಶಾಸ್ತ್ರಗಳನ್ನಾದರೂ ಬ್ರಹ್ಮದೇವರು ಪ್ರಜಾಕ್ಷೇಮಕ್ಕಾಗಿ ಹುಟ್ಟಿಸಿರುವನೆಂದೂ ಅದರಲ್ಲಿ ಯಾರೂ ವ್ಯತ್ಯಾಸಗೊಳಿಸಬಾರದೆಂದೂ ಅವರು ಹೇಳಿ ಒಂದು ಬಗೆಯಿಂದ ಪ್ರಜೆಗಳಿಗೂ ರಾಜನಿಗೂ ಕೂಡಿಯೇ ಒಂದೇ ಹರಿಯದ ಹಗ್ಗದಿಂದ ಕಟ್ಟಿಹಾಕಿದರು; ಹೀಗಾದ್ದರಿಂದ, ರಾಜರು ನಿರಂಕುಶರಾಗಿರಲಿಕ್ಕೆ ಆಸ್ಪದವಿರಲಿಲ್ಲ; ಅರ್ಥಾತ್ ಆರ್ಯರ ರಾಜನ ಕಲ್ಪನೆಯು ಹೇಗೆ ನಿತ್ಯಸಿದ್ಧವೋ, ಹಾಗೆ ಅವರ ಶಾಸನಗಳೂ, ಕಟ್ಟಳೆಕಾನೂನುಗಳೂ ನಿತ್ಯಸಿದ್ಧವಾಗಿದ್ದವು. ಅವು ಈಹೊತ್ತು ಹುಟ್ಟಿ, ನಾಳೆ ವಾಯುವಂಥವುಗಳಲ್ಲ; ಕ್ಷಣಕ್ಷಣಕ್ಕೆ ಬದಲಾಗುವ ಮಾತಂತೂ ಒತ್ತಟ್ಟಿಗಿರಲಿ. ರಾಜನು ಒರಿಯ ರಾಜನೀತಿಶಾಸ್ತ್ರಜ್ಞನಾಗಿರದೆ, ಅವನು ಧರ್ಮಶಾಸ್ತ್ರಜ್ಞನೂ ಆಗಿರಲಿಕ್ಕೆಬೇಕೆಂದು ಅವರ ನಿರ್ಬಂಧನವಿತ್ತು. ಧರ್ಮಶಾಸ್ತ್ರದ ವಿಷಯದಲ್ಲಿ ತನಗೆಲ್ಲಾದರೂ ಸಂದೇಹ ಕಂಡರೆ, ರಾಜನು ತನ್ನ ಒಲಗ

ದಲ್ಲಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಸಭಿಕರ ಮುಂದೆ ತನ್ನ ಸಂದೇಹವನ್ನು ಮಂಡಿಸಿ, ಅವರ ಸಮ್ಮತಿಯಂತೆ ನಡೆಯುತ್ತಿದ್ದನು. ಧರ್ಮಶಾಸ್ತ್ರದಂತೆ ರಾಜ್ಯವನ್ನು ನಾಗಿಸದೆ ಇದ್ದ ಧೊರೆಯನ್ನು ಪಟ್ಟದಿಂದ ತಳ್ಳುವ ಅಧಿಕಾರವು ಋಷಿಗಳಿಗೆ ಇದ್ದಿತು. ಇದಕ್ಕೆ ವೇನರಾಜನ ದೃಷ್ಟಾಂತವೇ ನಾಕು. ಋಷಿಗಳು ಉನ್ಮತ್ತನಾದ ವೇನರಾಜನನ್ನು ಕೊಂದು ತಮ್ಮ ತಪೋಬಲದಿಂದ ವೇನರಾಜನ ತೊಡೆಯಿಂದಲೇ ಮಗನನ್ನು ಹುಟ್ಟಿಸಿ, ಅತನಿಗೆ ಪಟ್ಟಗಟ್ಟಿದರು. ಧೊರೆಯಾಗಲಿಕ್ಕೆ ಕ್ಷತ್ರಿಯನ ಹೊರತು ಬೇರೆಯವನಿಗೆ ಅಧಿಕಾರವಿಲ್ಲೆಂಬ ಕಲ್ಪನೆಯು ಪ್ರಾಚೀನ ಋಷಿಗಳಲ್ಲಿ ಎಷ್ಟು ಬೇರೂರಿಕೊಂಡಿತ್ತೆಂಬುದೂ, ಬ್ರಾಹ್ಮಣ ಋಷಿಗಳು ರಾಜ್ಯಭಾರದ ವಿಷಯದಲ್ಲಿ ಎಷ್ಟು ಅನಾಸಕ್ತರಾಗಿದ್ದರೆಂಬುದೂ, ಹೊತ್ತು ಬಂದಾಗ, ತೇಜಸ್ಸು ಖರ್ಚುಮಾಡಿ ನ್ಯಾಯ ಸ್ಥಾಪನೆಗಾಗಿ ದುಷ್ಟರನ್ನು ದಂಡಿಸಲಿಕ್ಕೆ ಹೇಸುತ್ತಿರಲಿಲ್ಲವೆಂಬುದೂ ಈ ಕಥೆಯ ಮೇಲಿಂದ ನಿಷ್ಪನ್ನವಾಗುತ್ತದಲ್ಲವೇ! ಅರಸನು ಧರ್ಮದಿಂದ ರಾಜ್ಯ ನಡಿಸಿ, ಅಧರ್ಮ ಪ್ರವೃತ್ತರಾದವರನ್ನು ಶಾಸನಕ್ಕೆ ಗುರಿಮಾಡ ತಕ್ಕದ್ದು; ಮತ್ತು ರಾಜನು ಪಾಡುವ ಈ ಕರ್ತವ್ಯಕ್ಕಾಗಿ ಪ್ರಜೆಗಳು ತಮ್ಮ ಭೂಮಿಯ ಹುಟ್ಟುವಳಿಯೊಳಗಿನ ಒಂದುಹತ್ತಾಂಶ ಭಾಗವನ್ನೂ, ವ್ಯಾಪಾರದ ಹುಟ್ಟುವಳಿಯೊಳಗಿನ ಒಂದುಐವತ್ತಾಂಶ ಭಾಗವನ್ನೂ ಕೊಡಬೇಕೆಂದು ನಿಯಮಮಾಡಿದ್ದರು. ರಾಜನು ಹೀಗೀಗೆ ಇರಲಿಕ್ಕೆಬೇಕು; ಪ್ರಜೆಗಳು ಹೀಗೀಗೆ ಇರಲಿಕ್ಕೆಬೇಕೆಂದು ಧರ್ಮಶಾಸ್ತ್ರದ ನಿರ್ಬಂಧವೇ ಇದ್ದುದರಿಂದ ಪ್ರಾಯಶಃ ಈ ಅನಾದಿಸಿದ್ಧವಾದ ನಿಯಮವನ್ನು ಯಾರೂ ಮೀರಿ ನಡೆಯುತ್ತಿರಲಿಲ್ಲ; ಈ ಮೇರೆಗೆ ಪ್ರಜೆಗಳಿಗೂ ರಾಜರಿಗೂ ದೇವರೇ ಒಂದು ವಿಧದ ಕರ್ತವ್ಯದ ಕಗ್ಗಂಟನ್ನು ಹಾಕಿಟ್ಟನು; ಮತ್ತು ಅದನ್ನು ಅವರು ಕೊನೆಯ ತನಕ ನಡಿಸಿದರೆಂತಲೇ ಉಭಯತರು ಸುಖವಾಗಿರುತ್ತಿದ್ದರು.

ರಾಜ್ಯದ ಅಂಗಗಳು:–ಪೂರ್ವಕಾಲದಲ್ಲಿ ನೆರೆಹೊರೆಯ ರಾಜರುಗಳಲ್ಲಿ ಬಹಳ ದ್ವೇಷವಿರುತ್ತಿದ್ದುದರಿಂದ ಯಾವಹೊತ್ತಿಗೆ ಪರರಾಯರ ದಾಳಿಯು ಬಂದೀತೆಂಬುದು ಗೊತ್ತಿರಲಿಲ್ಲ; ಇಂಥ ಪ್ರಸಂಗದೊಳಗೆ

ಕೋಟೆಗಳು ಸ್ವರಕ್ಷಣೆಯ ಉಪಾಯಗಳಾಗಿದ್ದವು. ಆದುದರಿಂದ ರಾಜಧಾನಿಯ ಸುತ್ತುಮುತ್ತು ಒಂದು ಕೊಟೆಯಿರುವದಲ್ಲದೆ, ಮತ್ತೊಂದು ಕೋಟೆಯೆಂಬುದು ಇದ್ದೇ ಇರುತ್ತಿತ್ತು; ಹಿಂದೂದೇಶದಲ್ಲಿ ನೋಡತಕ್ಕಂಥ ಒಂದು ಅಂಶವೇನಂದರೆ, ಪ್ರತಿಯೊಂದು ಚಿಕ್ಕ ಹಳ್ಳಿಗೂ ಒಂದು ಕೋಟೆಯು ಸೋಜೆ, ನಾಲ್ಕು ಹುಬೆಗಳು, ನಾಲ್ಕು ದಿಕ್ಕಿಗೆ ನಾಲ್ಕು ಭದ್ರವಾದ ಅಗಸೇ ಬಾಗಿಲುಗಳು: ಅಮೇಲೆ ದೊಡ್ಡದೊಂದು ಸುತ್ತು ಕಂದಕ, ಅದರೊಳಗೆ ನೀರು. ಹೀಗಿರುವದರಿಂದ ಪರಶತ್ರುಗಳಿಗೆ ಕೋಟೆ ಕೊತ್ತಳಗಳನ್ನು ವಶಮಾಡಿಕೊಳ್ಳುವದೆಂದರೆ ಬಹು ತೊಂದರೆಯ ಕೆಲಸವಾಗಿತ್ತು. ರಾಜಧಾನಿ, ಕೋಟೆ, ಮಂತ್ರಿ ಅಥವಾ ಪ್ರಧಾನರು ಇವೇ ಮೂರು ರಾಜನಿಗೆ ಮುಖ್ಯ ರಾಜ್ಯದ ಅಂಗಗಳು; ಒಬ್ಬ ರಾಜನಿಗೆ ಎಂಟುಮಂದಿ ಮಂತ್ರಿಗಳು ಸಹಾಯಕ್ಕಾಗಿಯೂ, ಸಲಹೆಗಾಗಿಯೂ ಇರಬೇಕೆಂದು ಆರ್ಯರ ಪುರಾತನಕಾಲದ ಪದ್ಧತಿಯಾಗಿದೆ. ಮುಖ್ಯಮಂತ್ರಿ, ದಳವಾಯಿ, ಪುರೋಹಿತ, ಗುಪ್ತಚಾರ, ದುರ್ಗಾಧ್ಯಕ್ಷ, ಜ್ಯೋತಿಷಿ, ಹಾಗೂ ವೈದ್ಯ ಹೀಗೆ ಎಂಟು ಮಂದಿಯಾವಾಗಲೂ ರಾಜನ ಹತ್ತಿರ ಇರಲೇಬೇಕೆಂದು ನಿಯಮವಿತ್ತು. ಇಷ್ಟು ಮಂದಿ ಅಲ್ಲದೆ ಮತ್ತೆ ೧೮ ಮಂದಿ ಅಧಿಕಾರಿಗಳು ರಾಜನಲ್ಲಿ ಇರತಕ್ಕದೆಂದು ಹೇಳಿಯಿದೆ. ರಾಜನ ಆಚರಣೆಯನ್ನು ಕುರಿತು ಶಾಂತಿಪರ್ವದಲ್ಲಿಯೂ, ಸಭಾಪರ್ವದಲ್ಲಿಯೂ ಅತ್ಯಂತ ಮಾರ್ಮಿಕವಾದ ಬೋಧವಿದೆ. ರಾಜನು ಸುಖೋಪಭೋಗವನ್ನು ಅನುಭವಿಸಬೇಕು; ಆದರೆ ಅದರೊಳಗೆಯೇ ಮೈಮರೆತು ಕುಳ್ಳಿರಬಾರದು; ಧರ್ಮದಲ್ಲಿ ತತ್ಪರನಾಗಿರಬೇಕು; ಅರ್ಥದ ಬಗ್ಗೆ ಅಲಕ್ಷ ಮಾಡಬಾರದು; ಧರ್ಮ, ಅರ್ಥ, ಕಾಮ ಈ ಮೂರೂ ಪುರುಷಾರ್ಥಗಳನ್ನು ಮೀರಿ ನಡೆಯಬಾರದು. ಪ್ರಜೆಗಳ ಕ್ಷೇಮಚಿಂತನೆಯ ಬಗ್ಗೆ ಯೋಚಿಸುತ್ತಿರಬೇಕು; ವಿದ್ವಾಂಸರನ್ನು ಕಾಯ್ದಿಡಬೇಕು; ಸತ್ಯವನ್ನೇ ತನ್ನ ರಾಜ್ಯದ ಆಧಾರಸ್ತಂಭವಾಗಿಟ್ಟುಕೊಂಡು ನಡೆಯಲಿಕ್ಕೆಬೇಕೆಂದರೆ, ಅವನಿಗೆ ಸುಖವಾಗುವದು. ಗರ್ಭವತಿಯಾಗಿರುವ ಹೆಂಗಸು, ತನ್ನ ಸುಖದ ಆಶೆ ತೊರೆದು ತನ್ನ ಹೊಟ್ಟೆಯಲ್ಲಿರುವ ಕೂಸಿಗಾಗಿ ಹೇಗೆ ಹಗಲಿರಳು ಹೆಣಗುತ್ತಿರುವಳೋ

ಹಾಗೆಯೇ ರಾಜನು ಪ್ರಜೆಗಳಿಗಾಗಿ ಪರಿಶ್ರಮ ಪಡುತ್ತಿರಬೇಕೆಂದಿದ್ದಾರೆ. ನಿಜವಾಗಿಯೂ,ಹಲವು ರಾಜರು ನಮ್ಮ ದೇಶದಲ್ಲಿ ಪೂರ್ವಕಾಲದಲ್ಲಿ ತಂದೆಯು ಮಕ್ಕಳನ್ನು ಸಲಹುವಂತೆ ಪ್ರಜೆಗಳನ್ನು ಕಾಪಾಡುತ್ತಿದ್ದ. ಬಗ್ಗೆ ಅನೇಕ ದೃಷ್ಟಾಂತಗಳೂ, ಕಥೆಗಳೂ ನಾಕ್ಷಿಯಾಗಿವೆ.

ಅರಸುಮನೆತನ:– ಅರಸರ ಅರಮನೆಯು ಮುಖ್ಯವಾಗಿ ಕೋಟೆಯ ಒಳಭಾಗಕ್ಕೆ ಇರುತ್ತಿತ್ತು; ಹೊರಬದಿಗೆ ಅಂದರೆ ಅಂಗಳ ಅಥವಾ ಮುಂದಣ ತೊಟ್ಟಿಯಲ್ಲಿ(ಚೌಕ) ಎಲ್ಲರಿಗೂ ಬರುವ ಅಪ್ಪಣೆಯಿತ್ತು; ಆದರೆ ಅದರ ಒಳಭಾಗದಲ್ಲಿ ಮಾತ್ರ ಅಧಿಕಾರಿಗಳಿಗಷ್ಟೇ ಅಪ್ಪಣೆ; ಮೂರನೇ ತೊಟ್ಟಿಯಲ್ಲಿ ಯಜ್ಞಶಾಲೆಯೂ, ಅರಸರ ಸ್ನಾನ, ಭೋಜನಗೃಹಗಳೂ ಇರುತ್ತಿದ್ದುದರಿಂದ ಅಲ್ಲಿ ಅಧಿಕಾರಿಗಳು ಅಥವಾ ಅರಮನೆಯ ಆಳುತೊತ್ತುಗಳನ್ನು ಬಿಟ್ಟು ಮತ್ತ್ಯಾರಿಗೂ ಒಳಕ್ಕೆ ಹೋಗಗೊಡುತ್ತಿರಲಿಲ್ಲ. ನಾಲ್ಕನೇ ತೊಟ್ಟಿಯೇ ಅರಮನೆಯ ಹೆಣ್ಣುಮಕ್ಕಳಿರುವ ಸ್ಥಳವು; ಈ ತೊಟ್ಟಿಯೊಳಗಣ ಸ್ಥಳವು ಬಹು ವಿಶಾಲವಾಗಿದ್ದು, ಇಲ್ಲಿ ದೊಡ್ಡ ದೊಡ್ಡ ಉದ್ಯಾನಗಳೂ, ಜಲಕ್ರೀಡೆಯ ವಿಹಾರಗಳೂ ಇದ್ದು ಅರಸಿಯರು ಸ್ವೇಚ್ಛೆಯಾಗಿ ವಿಹರಿಸುತ್ತಿದ್ದರು; ರಾಜನ ಅಂತಃಪುರದೊಳಗೆ ಅನೇಕ ರಾಜಸ್ತ್ರೀಯರೂ, ರಾಣಿಯರೂ ಇರುತ್ತಿದ್ದರೆಂದು ಮೇಲೆ ರಾಜರು ಅನೇಕ ಹೆಂಗಸರನ್ನು ಮದುವೆಯಾಗುತ್ತಿದ್ದರೆಂಬುದು ಸ್ಪಷ್ಟವಾಯಿತಷ್ಟೇ! ಈ ಹೆಂಗಸರು ಯಾರು, ಎಲ್ಲಿಂದ ತರಲ್ಪಡುತ್ತಿದ್ದರೆಂಬುದೊಂದು ಸಂದೇಹಾಸ್ಪದ ಮಾತು; ಆದರೆ ವಿಚಾರಿಸಲಾಗಿ, ವಿವಾಹ ವೇಳೆಯಲ್ಲಿ ಪ್ರತಿವರ್ಷ ಅರಸನಿಗೆ ಸುಂದರವಾದ ಕನ್ಯೆಯರನ್ನು ಅರ್ಪಿಸುವದೊಂದು ಪದ್ಧತಿಯಿತ್ತೆಂದು ಗೊತ್ತಾಗುತ್ತದೆ. ಆದರೂ ರಾಜಕೀಯದೃಷ್ಟಿಯಿಂದ ಅರಸನು ಹೆಂಗಸರಲ್ಲಿ ಸಹಸಾ ವಿಶ್ವಾಸವಿಟ್ಟು, ಯಾವ ನಂಬಿಗೆಯ ಅಥವಾ ಗುಪ್ತವಾದ ಮಾತನ್ನೂ ಹೇಳಿಯಿಕೂಡದು. ಅವರನ್ನು ಸಂತುಷ್ಟವಾಗಿಡಬೇಕೆಂದು ಹೇಳಿಯಿದೆ.

ರಾಜನ ದಿನಚರ್ಯೆ:– ಭಾರತಕಾಲದಲ್ಲಿಯ ರಾಜರ ದಿನಚರಿಯು ಹೇಗಿರುತ್ತಿತ್ತೆಂಬದನ್ನರಿಯುವದು ಹೆಚ್ಚು ಮನೋರಂಜಕವಾಗಿದೆ. ಅದುದರಿಂದ ಉದಾಹರಣೆಗಾಗಿ ಧರ್ಮರಾಜನ ದಿನದ ಕಾರ್ಯ

ಕ್ರಮವನ್ನೇ ಇಲ್ಲಿ ಕೊಡುತ್ತೇವೆ; ಬೆಳಗು ಮುಂಜಾವಿನಲ್ಲಿ ಗಾಯಕರಾದ ಮಾಗಧರು ತಾಳವಿಡಿದು ಹಾಡಹತ್ತಿದ್ದರು; ಭಟ್ಟಂಗಿಗಳೂ, ಸೂತರೂ ರಾಜರನ್ನು ಹೊಗಳಲಾರಂಭಿಸಿದರು; ನರ್ತಕರೂ, ಸುಸ್ವರವುಳ್ಳ ಗಾಯಕರೂ ಹಾಡಿ ಕುಣಿಯತೊಡಗಿದರು; ಮದ್ದಳೆ, ಕಹಳೆ, ಶಂಖ, ಮೊದಲಾದ ವಾದ್ಯಗಳು ಮೊಳಗಿದವು. ಹೀಗೆ ರಮ್ಯ ಹಾಗೂ ಗಂಭೀರ ವಾದ್ಯಘೋಷವು ನಸೆದಿರಲು ಯುಧಿಷ್ಠಿರನು ಎದ್ದೆತ್ತು ನ್ನಾನಾನ್ನಿಕ ಮುಂತಾದ ಪ್ರಾತರ್ವಿಧಿಗಳಿಗಾಗಿ ನ್ನಾನಗೃಹವನ್ನು ಹೊಕ್ಕನು; ನ್ನಾನಗೃಹದೊಳಗೆ ಬಿಳೇ ರುಳ ರುಳ ಬಟ್ಟೆಗಳನ್ನುಟ್ಟು ೧೦೮ ಮಂದಿ ಯುವಕರಾದ ನೀರಿನವರು ಚಿನ್ನದ ದೊಡ್ಡ ದೂಡ್ಡ ಪಾತ್ರೆಗಳಲ್ಲಿ ನೀರು ತುಂಬಿಕೊಂಡು ಸಜ್ಜಾಗಿ ನಿಂತಿದ್ದರು. ಧರ್ಮರಾಜನು ಚಿಕ್ಕದೊಂದು ಬಟ್ಟೆಯನ್ನುಟ್ಟುಕೊಂಡು ಬಣ್ಣದ ಮಣೆಯ ಮೇಲೆ ಕುಳಿತನಂತರ, ಅವರು ಧರ್ಮರಾಜನ ಮೈಗೆ ಸುವಾಸನೆಯ ತೈಲಾದಿಗಳನ್ನು ಹಚ್ಚಿ ತಿಕ್ಕಿತಿಕ್ಕಿ ನ್ನಾನಕ್ಕೆ ಹಾಕಿದರು;ಯುಧಿಷ್ಠಿರನು ಶುಭ್ರವೂ ಸ್ವಚ್ಛವೂ ಆದ ಬಟ್ಟೆಯಿಂದ ಮೈ ಒರಸಿಕೊಂಡು, ಮೈಗೆ ಚಂದನ ನವರಿಕೊಂಡು ಬಟ್ಟೆಗಳನ್ನುಟ್ಟು,ಕೆಲಹೊತ್ತು ಪೂರ್ವಾಭಿಮುಖನಾಗಿ ಜಪವಾಡುತ್ತ ಕುಳಿತನಂತರ ಪ್ರದೀಪ್ತವಾದ ಅಗ್ನಿಗೃಹದೊಳಗೆ ಹೋದನು. ಅಗ್ನಿಯಲ್ಲಿ ಸಮಿಧಾ ಹಾಗೂ ಆಜ್ಯಾಹುತಿಗಳನ್ನು ಮಂತ್ರಪೂರ್ವಕವಾಗಿ ಮಾಡಿಕೊಂಡು ಹೊರಗೆ ಅಂದರೆ, ತನ್ನ ಒಳಸಭಾನ್ಥಾನಕ್ಕೆ ಬಂದು, ಅಲ್ಲಿ ಕುಳಿತಿರುವ ವೇದವೇತ್ತರಾದ ಬ್ರಾಹ್ಮಣರನ್ನು ಮಧುಪರ್ಕಾದಿಗಳಿಂದ ಪೂಜಿಸಿ, ಅವರಿಗೆಲ್ಲ ಒಂದೊಂದು ನಿಷ್ಕಗಳನ್ನು ದಕ್ಷಿಣೆ ಕೊಟ್ಟನು; ಇಷ್ಟೆಲ್ಲಾದ ನಂತರ ಯುಧಿಷ್ಠಿರನು ಹೊರಗಿನ ಸಭಾನ್ಥಾನಕ್ಕೆ ಬರಮಾಡಿದನು; ಅಲ್ಲಿ ಬಂದು 'ಸರ್ವತೋಭದ್ರ' ಎಂಬ ಸುವರ್ಣಾಸನದ ಮೇಲೆ ವಿರಾಜಮಾನನಾಗಿ ತನ್ನ ರಾಜಕಾರ್ಯ ನಡೆಯಿಸಿದನು."

ಶಾಸನ, ತೆರಿಗೆ ಮುಂತಾದುವು:— ಮುಂಚಿನಕಾಲದ ರಾಜ್ಯಗಳೆಂದರೆ ಈಗಣಕಾಲದ ಒಂದು ಅಥವಾ ಎರಡು ಜಿಲ್ಲೆಯಷ್ಟು ಇರುತ್ತಿದ್ದವು; ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಗ್ರಾಮಾಧಿ

ಪತಿ; ಹೀಗೆ ೧೦ ಗ್ರಾಮಗಳಿಗೆ, ೨೦ ಗ್ರಾಮಗಳಿಗೆ, ೧೦೦ ಗ್ರಾಮಗಳಿಗೆ, ೧೦೦೦ ಗ್ರಾಮಗಳಿಗೆ ಒಬ್ಬೊಬ್ಬ ಅಧಿಪತಿಯು ಅನುಕ್ರಮವಾಗಿರುವ ಪದ್ಧತಿಯಿತ್ತು; ಗ್ರಾಮಾಧಿಪತಿಯು ತನ್ನ ಎಲ್ಲೆಯೊಳಗಿನ ಭೂಮಿ ಗದ್ದೆಗಳಲ್ಲಿಯ ಹುಟ್ಟುವಳಿಯಿಂದ ಜೀವಿಸಿ, ತನ್ನ ಮೇಲಿನ ಅಧಿಕಾರಿಗೆ ಇಂತಿಷ್ಟು ಕೊಡಬೇಕು; ತನ್ನ ಮೇಲಣ ಅಧಿಕಾರಿಗೆ ಆ ಅಧಿಕಾರಿಯ ಹುಟ್ಟುವಳಿಯೊಳಗಿಂದ ಇಂತಿಷ್ಟು ಸಲ್ಲತಕ್ಕದ್ದೆಂದು ನಿಯಮವಿದ್ದರೂ, ನೂರು ಗ್ರಾಮಗಳ ಅಧಿಪತಿಯು ಜೀವನಕ್ಕಾಗಿ ಒಂದು ಗ್ರಾಮವೇ ಜಹಗೀರು ಇರುತ್ತಿತ್ತು; ಒಂದು ಚಿಕ್ಕ ಹಳ್ಳಿಯು ಗ್ರಾಮಾಧಿಪನ ಮೊದಲೆರ್ಗಿಂಡು ದೊಡ್ಡ ಜಹಗೀರದಾರನ ವರೆಗೆ ಎಲ್ಲರೂ ಒಬ್ಬರಿಗೊಬ್ಬರು ಹೆದರಿ ನಡೆಯುತ್ತಿದ್ದುದರಿಂದ ರಾಜ್ಯವ್ಯವಸ್ಥೆಯು ಒಟ್ಟಿನಮೇಲೆ ಬಹು ಸರಾಗವಾಗಿ ನಡೆಯುತ್ತಿದ್ದಿತು. ಹಳ್ಳಿಯೊಳಗಿನ ಮುಖ್ಯ ಅಧಿಕಾರಿಗಳೆಂದರೆ ೪-೫ ಮಂದಿ; ಇವರು ವಂಶಪರಂಪರೆಯಿಂದ ನಡೆದುಬಂದವರು; ಗೌಡ, ಶಾನುಭೋಗ, ದುಡ್ಡಿಎತ್ತುವವ, ಮತ್ತು ಸಾಕ್ಷಿದಾರ ಇವರೆಲ್ಲರೂ ಜಾಣರೂ, ಒಮ್ಮನಸ್ಸಿನವರೂ ಇರಲಿಕ್ಕೆಬೇಕು. ಸ್ಮತಿಯೊಂದು ಹಳ್ಳಿಯಿಂದ ಬರಗಾಲ ನಿವಾರಣೆಗಾಗಿ ಕೂಡಿಸಿದ ಕಾಳುಕಡಿಯನ್ನೆಲ್ಲ ರಾಜಧಾನಿಯಲ್ಲಿಯೇ ಶೇಖರಿಸಿಡುತ್ತಿದ್ದರು; ಕೃಷಿ, (ಒಕ್ಕಲತನ) ಗೋರಕ್ಷಣೆ, ವ್ಯಾಪಾರ ಇವುಗಳ ಉತ್ಕರ್ಷವಾಗಬೇಕೆಂದು ಭಾರತೀಯ ಆರ್ಯರು 'ವಾರ್ತಾ' ಎಂಬುದೊಂದು ಸ್ವತಂತ್ರಶಾಸ್ತ್ರವನ್ನೇ ಮಾಡಿದರು. ಇದಕ್ಕಾಗಿ ವೈಶ್ಯರು ಮುಖ್ಯವಾಗಿ ಟೊಂಕಕಟ್ಟಿಕೊಂಡು ನಿಂತಿದ್ದರು; ಅವಶ್ಯವಿದ್ದಾಗ ರಾಜರು ಅವರಿಗೆ ದುಡ್ಡಿನ ಸಹಾಯ ಕೊಡುತ್ತಿದ್ದರು, ಕ್ಷಾಮನಿವಾರಣೆಗಾಗಿಯೂ, ಕುರುಡ, ಕುಂಟ, ಮೂಕರ ಹೊಟ್ಟೆಬಟ್ಟೆಯ ಕ್ಷೇಮವನ್ನು ನೋಡುವದಕ್ಕಾಗಿಯೂ, ರಾಜನು ಯಾವಾಗಲೂ ತೊಗೆತೊತ್ತಿರುತ್ತಿದ್ದನು. ರಾಜ್ಯದ ಮುಖ್ಯ ಕಂದಾಯವೆಂದರೆ, ಭೂಮಿಯ ಹುಟ್ಟುವಳಿ, ಖಾಣೂ ವ್ಯಾಪಾರದ ಮೇಲಿನ ತೆರಿಗೆ. ಇವುಗಳಲ್ಲಿ ಕೆಲವರು ಧಾನ್ಯವನ್ನು, ಕೆಲವರು ಹಿರಣ್ಯವನ್ನು ಕೊಟ್ಟು ಮುಟ್ಟಿಸುತ್ತಿದ್ದರು. ಮನುಋಷಿಯಿಂದ ಪ್ರಾರಂಭಮಾಡಿಕೊಂಡು ಎಸ್ಟೋ ಶತಕಗಳ ವರೆಗೆ ರಾಜನು ಹುಟ್ಟು

ವಳಿಯ ಭಾಗದೊಳಗಿನ ಒಂದುಹದಿನೆಂಟಾಂಶ ಭಾಗವನ್ನೆತ್ತಬೇಕೆಂದು ನಿಯಮವಿದ್ದರೂ, ಅದು ಮುಂದೆ ಬದಲಾಗಿ ಒಂದುಆರಾಂಶವೇ ಸ್ಥಿರವಾಯಿತು. ಭೂಸ್ವಾಮಿತ್ವವು ರೈತರದಿದ್ದು, ಅರಸನಿಗೆ ಪ್ರಜೆಗಳ ಸಂರಕ್ಷಣೆಗಾಗಿಯೆಂದು ಒಂದುಆರಾಂಶ ಕರವನ್ನು ಕೊಟ್ಟುಬಾಯಿತು. ಗೌಳಿಗರೂ, ಕುರುಬರೂ ತಮ್ಮ ದನಕರುಗಳಲ್ಲಿ ಒಂದುಐವತ್ತಾಂಶ ಭಾಗವನ್ನು ರಾಜನಿಗೆ ಕೊಡಬೇಕಾಗುತ್ತಿತ್ತು; ಹೀಗೆ ಇರುವದರಿಂದ ರಾಜಧಾನಿಯಲ್ಲಿ ಕಾಳುಕಡಿಯ ದೊಡ್ಡ ದೊಡ್ಡ ಸಂಗ್ರಹಾಲಯಗಳೂ, ದನಕರುಗಳ ದಡ್ಡಿಗಳೂ ಇರುತ್ತಿದ್ದವು. ವರ್ತಕರ ಹಾಗೂ ಶಿಲ್ಪಿಗರ ಮೇಲೆಯೂ ಅವರವರ ಯೋಗ್ಯತೆಗೆಸರಿಯಾಗಿ ತೆರಿಗೆ ಇರುತ್ತಿತ್ತು;ಆದರೆ ಈ ತೆರಿಗೆಯೆಂದರೆ ಬಹುತರವಾಗಿ ಅವರಿಂದ ಸರಕಾರದ ಕೆಲಸವನ್ನು ಹತ್ತು ದಿವಸಕ್ಕೆ ೧ ದಿನ ಬಿಟ್ಟಿಯಾಗಿ ಮಾಡಿಸಿಕೊಳ್ಳುತ್ತಿದ್ದರು; ಆದರೂ, ಅದಕ್ಕಾಗಿ ಅವರಿಗೆ ತೊಂದರೆ ಕೊಡುತ್ತಿರಲಿಲ್ಲ. ರಾಜ್ಯವು ಯಾವ್ದೊಂದು ಘೋರವಾದ ಬೇನೆಗಾಗಲಿ, ಕ್ಷಾಮಕ್ಕಾಗಲಿ, ಯುದ್ಧಕ್ಕಾಗಲಿ ಈಡಾದರೆ, ರಾಜನು ಪ್ರಜಾಕ್ಷೇಮಕ್ಕಾಗಿ ಜನರಿಂದ ಹಣವೆತ್ತಿ, ಆ ಆಪತ್ತಿಯು ತೀರಿದ ಬಳಿಕ ತಿರಿಗಿ ಅವರವರ ಹಣವನ್ನು ತಿರಿಗಿ ಮುಟ್ಟಿಸುತ್ತಿದ್ದನು. ಇದಕ್ಕಾಗಿ ಎಂದೂ ಜನರಿಗೆ ಪೀಡಿಸುತ್ತಿರಲಿಲ್ಲ. ಪ್ರಾಚೀನಕಾಲಕ್ಕೆ ಹೆದ್ದಾರಿಗಳಿದ್ದರಿಂದ, ವರ್ತಕರು ಗುಂಪುಗಟ್ಟಿಕೊಂಡು ತಮ್ಮ ಸರಕನ್ನೆಲ್ಲ ಎತ್ತುಗಳ ಮೇಲೆ ಹೇರಿಕೊಂಡು ಹೋಗುವ ಬಳಿಕೆಯಿತ್ತು. ಇವರ ಮೇಲೆಯೂ, ಕೆಲಮಟ್ಟಿಗೆ ತೆರಿಗೆಯಿರುತ್ತಿತ್ತು; ಅಲ್ಲದೆ ಉಪ್ಪು, ಅನೆ, ಭಂಗಾರ, ವಜ್ರ, ವೈಡೂರ್ಯ ಇವೆಲ್ಲವುಗಳು ರಾಜರ ಸ್ವಾಮಿತ್ವಕ್ಕೆ ಒಳಪಟ್ಟಿದ್ದವು. ಆದ್ದರಿಂದ ಇವುಗಳ ವ್ಯವಸ್ಥೆಗಾಗಿ ರಾಜನು ಒಬ್ಬೊಬ್ಬ ಮಂತ್ರಿಗಳನ್ನೇ ನಿಯಮಿಸುತ್ತಿದ್ದನು; ಇವುಗಳಿಂದ ರಾಜನಿಗೆ ಅಪಾರವಾದ ಹುಟ್ಟುವಳಿಯಾಗುತ್ತಿತ್ತು. ಅನೆಗಳಿಲ್ಲದ ಅಡವಿಗಳಲ್ಲಿ ಸ್ವಚ್ಛಂದವಾಗಿ ದನಕರುಗಳನ್ನು ರೈತರಿಗೆ ಮೇಯಿಸಗೊಡುತ್ತಿದ್ದರು; ಕಟ್ಟಿಗೆ ಉರುವಲಗಳನ್ನು ತಂದು ತಮಗೆ ಬೇಕಾದಂತೆ ಉಪಯೋಗಿಸುತ್ತಿದ್ದರು; ಅಡವಿಗಳ ಮೇಲೆ ಯಾರ ಸ್ವಾಮಿತ್ವವೂ ಇರಲಿಲ್ಲ; ಜನತೆಯಿಂದ ಬರುವ ಕಂದಾಯ

ಮೊದಲಾದ ಹುಟ್ಟುವಳಿಯುಳ್ಳದೆ, ರಾಜನಿಗೇ ಸ್ವತಂತ್ರವಾಗಿ ಜೀವನ ಕ್ಕೆಂದು ಹೊಲಗದ್ದೆಗಳಿರುತ್ತಿದ್ದವು; ನೆರೆಸಿಂದಿಗಳ ಗಡಿಗಗಳನ್ನೂ, ಸೂಳೆಯರನ್ನೂ ನಾಧ್ಯವಾದಷ್ಟು ತಡೆಯಲಿಕ್ಕೆಬೇಕೆಂದು ಅವುಗಳ ಮೇಲೆ ಯಾವಾಗಲೂ ಕಾವಲಿರುತ್ತಿತ್ತು; ಅರ್ಥಾತ್ ಸಂಳೆತನ, ಕುಡು ಕತನ ಇವು ಇದ್ದಿಲ್ಲವೆಂದರೆ ಅತಿಶಯೋಕ್ತಿಯಾಗದು.

"ನ್ಯಾಯ ಪದ್ಧತಿ:- ಭಾರತಕಾಲದ ರಾಜ್ಯಗಳು ಚಿಕ್ಕವಿದ್ದುದ ರಿಂದ ಪ್ರತಿಯೊಬ್ಬ ರಾಜನು ತಾನೇ ಸ್ವತಃ ನ್ಯಾಯಿಮಂದಿರದೊಳಗೆ ಕುಳಿತುಕೊಂಡು ನ್ಯಾಯುಗಳನ್ನು ಬಗೆಹರಿಸಲಿಕ್ಕೆಬೇಕೆಂದು ಕಟ್ಟಳೆ ಯಿರುವಂತೆ, ಅನ್ಯರಿಗೆ ಸಹನಾ ನ್ಯಾಯ ತೀರಿಸುವ ಕಾರ್ಯವನ್ನು ಒಪ್ಪಿಸುತ್ತಿರಲಿಲ್ಲ; ಮತ್ತು ಈ ನ್ಯಾಯ ತೀರಿಸುವ ಕಾರ್ಯದಲ್ಲಿ ರಾಜ ನಿಗೆ ಸಮ್ಮತಿಕೊಡುವದಕ್ಕಾಗಿಯೇ 'ರಾಜಸಭೆ' ಯೆಂಬುದೊಂದು ಇದ್ದು, ಈ ಸಭೆಯುಲ್ಲಿ ನಾಲ್ಕು ಮಂದಿ ವೇದವೇತ್ತರೂ, ಗೃಹಸ್ಥಾಶ್ರ ಮಿಗಳೂ,ಶೀಲಸಂಪನ್ನರೂ ಆದ ಬ್ರಾಹ್ಮಣರೂ, ಎಂಟು ಮಂದಿ ಬಲಾಢ್ಯ ರಾದ ಕ್ಷತ್ರಿಯರೂ, ಇಪ್ಪತ್ತೆಂಟು ಮಂದಿ ಹಣವಂತರಾದ ವೈಶ್ಯರೂ, ಶುಚಿರ್ಭೂತರೂ, ವಿನಯಸಂಪನ್ನರೂ ಆದ ಮೂರು ಮಂದಿ ಶೂದ್ರರೂ ಕೂಡಿ ಇರಬೇಕೆಂದು ಹೇಳಿದೆ. ಥೊರೆಯ ಮುಂದೆ ನ್ಯಾಯವನ್ನು ತರ ಲಿಕ್ಕೆ ತತ್ಕಾಲೀನ ಜನಸಾಮಾನ್ಯರು ಬಹು ಹೆದರುತ್ತಿದ್ದುದರಿಂದ, ತಮ್ಮ ತಮ್ಮೊಳಗೆ ನ್ಯಾಯಗಳನ್ನು ತೀರಿಸಿಕೊಳ್ಳುವವರೇ ಆಗ ಹೆಚ್ಚಾಗಿದ್ದರು; ಏನೋ ದೊಡ್ಡ ದೊಡ್ಡ ನ್ಯಾಯಗಳಷ್ಟೇ ರಾಜರ ಮುಂದೆ ಮಂಡಿಸ ಲಾಗುತ್ತಿದ್ದವು; ಅವನ್ನು ಎಷ್ಟೂ ತಡಮಾಡದೆ ರಾಜಸಭೆಯವರ ನೆರವಿ ನಿಂದ ಬೇಗ ಬಗೆಹರಿಸಿಬಿಡುತ್ತಿದ್ದರು: ವಾಡಿಕೆಯಾಗಿ, ದಂಡ, ಸೆರೆಮನೆ ವಾಸ, ಹೊಡತ, ಕೊಲ್ಲಿಸುವದು ಇವೇ ಪೂರ್ವಕಾಲದ ನಾಲ್ಕು ಬಗೆಯ ಶೀಕ್ಷೆಗಳು ನ್ಯಾಯಾಧೀಶರು ನ್ಯಾಯಾನ್ಯಾಯ ವಿಮರ್ಶಕರಾಗಿದ್ದ ರಿಂದ ಬಹುಶಃ ಅನ್ಯಾಯಗಳು ನಡೆಯುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮ ತಪ್ಪುಗಳನ್ನು ಬಚ್ಚಿಡದೆ ಪ್ರಕಟವಾಗಿ ಹೇಳಿ ಯೋಗ್ಯ ಶೀಕ್ಷೆ ಭೋಗಿಸಲಿಕ್ಕೆ ನಾಚುತ್ತಿರದ್ದರಿಂದಲೂ, ದುಷ್ಪವಾಸನೆಯನ್ನು ಕಳೆಯ ಲಿಕ್ಕೇ ಶೀಕ್ಷೆ ಹೊರ್ತಾಗಿ ಮತ್ತೇತಕಲ್ಲವೆಂದೂ, ಆಗಿನ ಜನರ ಭಾವನೆ

ಯಿದ್ದುದರಿಂದ ಅವರು ಅನತ್ಯವನ್ನಾಡಲಿಕ್ಕೆ ಅಂಜಿ, ಸತ್ಯವನ್ನೇ ನುಡಿಯುತ್ತಿದ್ದರು. ಇದಕ್ಕೆ ಕೆಳಗಿನ ಕಥೆಯು ಆದರ್ಶವಾಗಿದೆ. ಒಬ್ಬ ಋಷಿಯು ಸ್ನಾನಕ್ಕೆ ಹೋಗುವ ದಾರಿಯಲ್ಲಿ ತೆನೆಗಳಿಂದ ತುಂಬಿರುವ ದೊಂದು ಸುಂದರವಾದ ಹೊಲವನ್ನು ಕಂಡನು; ಬಡನೆ, ಆ ಹೊಲದೊಳಗಿನ ತೆನೆಗಳನ್ನು ತಿನ್ನಬೇಕೆಂದು ಅಪೇಕ್ಷೆಯುಂಟಾಗಿ ಒಂದು ತೆನೆಯನ್ನು ಹರಿದುಕೊಂಡನು; ಕ್ಷಣಾರ್ಧದಲ್ಲಿಯೇ ತನ್ನಿಂದಾದ ಪಾಪಕೃತ್ಯದ ದೆಸೆಯಿಂದ ಆ ಋಷಿಗೆ ಬಲು ಪಾಶ್ಚಾತ್ತಾಪವಾಗಲು, ಆ ಋಷಿಯು ಆ ತೆನೆಯ ಸಹಿತವಾಗಿ ಧೊರೆಯ ಬಳಿ ಬಂದು ರಾಜನಿಗೆ ತನ್ನಿಂದಾದ ತಪ್ಪನ್ನು ಅರಿಕೆಮಾಡಿಕೊಂಡು ಕಳವು ಮಾಡಿದುದಕ್ಕೆ ತನ್ನ ಕೈ ಕಡಿದು ಹಾಕಲಿಕ್ಕೆ ಹೇಳಿಕೊಂಡನು; ಧೊರೆಯು ಋಷಿಯ ಮಾತಿಗೆ ಒಪ್ಪದೆ ಏನು ಮಾಡಬೇಕೆಂಬ ಸಂಶಯದಲ್ಲಿಬಿದ್ದನು; ಆಗ ಋಷಿಯು ಧೊರೆಯನ್ನು ಕುರಿತು "ದಂಡ್ಯನಾದ ಅಪರಾಧಿಯಾದವನಿಗೆ ತಕ್ಕ ಶಿಕ್ಷೆ ಮಾಡದೆ, ಅಪರಾಧಿಯಲ್ಲದವನನ್ನು ದಂಡಿಸುವ ರಾಜನು ನರಕ ಭಾಗಿಯಾಗುವನೆಂದು ಹೇಳಲಾಗಿ ಧೊರೆಯು ಅವನ ಮಾತು ಕೇಳಿ, ಆ ಋಷಿಯ ಕೈ ಕಡಿದು ಹಾಕಿದೊಡನೆ, ಆ ಕೈಗೆ ಬದಲಾಗಿ ಮತ್ತೊಂದು ಭಂಗಾರದ ಕೈಯು ಅಲ್ಲಿಯೇ ಬಿಗುರಿತಂತೆ!

✓ **ಸ್ವಾತಂತ್ರ್ಯ ಪ್ರೀತಿಯು:**— ಪ್ರಾಚೀನ ಭರತಖಂಡದೊಳಗೆ ಚಿಕ್ಕ ಚಿಕ್ಕ ಸಂಸ್ಥಾನಗಳಿದ್ದರೂ, ಅವು ತಮ್ಮ ಸ್ವಾತಂತ್ರ್ಯಪ್ರೀತಿಯ ಬಲದಿಂದಲೇ ಬಹುಕಾಲ ಬಾಳಿಕೊಂಡಿದ್ದವು; ಇತಿಹಾಸವನ್ನು ತೆರೆದು ನೋಡಿದರೆ, ಈ ಚಿಕ್ಕ ಚಿಕ್ಕ ರಾಜರಲ್ಲಿ ಯಾವಾಗಲೂ ಆಂತಃಕಲಹಗಳು ನಡೆಯುತ್ತಲೇ ಇದ್ದವು; ನೋಡಿದರೆ, ಜಾತಿಯಲ್ಲಿಯೂ, ಧರ್ಮದಲ್ಲಿಯೂ, ಭಾಷೆಯಲ್ಲಿಯೂ ಈ ಸಂಸ್ಥಾನಗಳು ಒಂದೇ ಆಗಿದ್ದರೂ ಇವರಲ್ಲಿ ಕಲಹಗಳು ನಡೆಯದ ಕಾಲವನ್ನು ತೋರಿಸುವದೇ ಅಸಾಧ್ಯ. ಯಾವಾಗಲೂ ಕಲಹ ನಡೆಯುತ್ತಿದ್ದರೆ, ಮನುಷ್ಯನ ಪೈರ್ಯಸ್ಥೈರ್ಯದ ನೆತ್ತರವೂ, ಹುರುಪೂ ದಡದಡನೆ ಹರಿಯುತ್ತಿದ್ದು, ಚೈತನ್ಯವು ಒಟ್ಟುಗೂಡಿರುತ್ತದೆಂಬುದು ಒಂದು ರೀತಿಯಿಂದ ನಿಜವು. ಹೀಗೆ ನಡೆಯುವದರಿಂದ ಮನುಷ್ಯನ, ರಾಜ್ಯದ ಹಾಗೂ ಸಮಾಜದ ಪ್ರಗತಿಯಾಗು

ತ್ತದೆ; ಭಾರತಕಾಲದ ಪರಿಸ್ಥಿತಿಯನ್ನೇ ಉದಾಹರಣೆಗಾಗಿಟ್ಟುಕೊಂಡು ನಿರೀಕ್ಷಿಸಿದರೆ, ಈ ರೀತಿಯ ನ್ಯಾಯಗಳು ಎಷ್ಟೆಬಿಡದೆ ನಡೆಯುತ್ತಿದ್ದವೆಂತಲೇ, ಪರಶತ್ರುಗಳನ್ನು ಹೇಗೆ ಜಯಿಸಬೇಕು, ತಮ್ಮ ಸ್ವಾತಂತ್ರ್ಯವನ್ನು ಹೇಗೆ ಕಾಪಾಡಬೇಕು, ಮಿತ್ರರಾಷ್ಟ್ರದವರನ್ನು ಹೇಗೆ ಮನಬಲಿಸಿಕೊಳ್ಳಬೇಕು, ಮಾಂಡಲೀಕ ರಾಜರನ್ನು ಹೇಗೆ ವಶದಲ್ಲಿಟ್ಟುಕೊಳ್ಳಬೇಕು ಎಂಬೀವಿಧದ ಹಲವು ವಿಷಯುಗಳ ಜ್ಞಾನವು ಪರಮಾವಧಿಯ ಉನ್ನತಿಗೇರಿತ್ತೆಂಬುದು ಸ್ಪಷ್ಟವಾಗುತ್ತದೆ. ಇಂಥ ಪಾಜ್ವಲ್ಯ ಸ್ವಾತಂತ್ರ್ಯದ ಅಭಿಮಾನವು ಜನಾಂಗದೊಳಗೆ ಜೀವಂತವಿರದೆ ಹೋದರೆ, ಆರ್ಯಜನಾಂಗದೊಳಗಿನ ನೂರಾರು ರಾಷ್ಟ್ರಗಳು ನಾವಿರಾರು ವರ್ಷ ಬದುಕಿರುತ್ತಿರಲಿಲ್ಲ. ಅವರಲ್ಲಿಯ ಬಲವೇ, ಅವರಲ್ಲಿಯ ತೇಜವೇ ಅವರನ್ನು ಜೀವಂತವಾಗಿಟ್ಟಿತ್ತು; ತಮ್ಮ ಸ್ವಾತಂತ್ರ್ಯವು ಹೋದರೆ ಅವರಿಗೆಷ್ಟು ವ್ಯಸನವಾಗುತ್ತಿತ್ತೋ ಅಷ್ಟೇ ಪರರ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲಿದರೆ ವ್ಯಥೆಯಾತ್ತಿತ್ತು. ಒಂದುವೇಳೆ ಯಾವ ರಾಜನನ್ನಾದರೂ ಗೆದ್ದರೆ, ಅವನ ಮಗನಿಗೆ ಉತ್ಸವದಿಂದ ಪಟ್ಟಗಟ್ಟಿ ಲಿಕ್ಕೆಬೇಕು; ಪರರ ಸ್ವಾತಂತ್ರ್ಯಾಪಹಾರ ಮಾಡಕೂಡದೆಂಬ ಕಟ್ಟು ನಿಟ್ಟಾದ ನಿಯಮವಿತ್ತು; ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಭಾರತೀಯ ಆರ್ಯರು ಜೀವದ ಹಂಗು ತೊರೆದು ಎಷ್ಟು ಚಿಗಟನಿಂದ ಕಾದುತ್ತಿದ್ದರೆಂಬುದಕ್ಕೆ ಭಾರತೀಯ ಯುದ್ಧವೇ ಕೈಗನ್ನಡಿಯಾಗಿದೆ. ಐದು ಮಂದಿ ಧರ್ಮಿಷ್ಠರೂ, ತೇಜಸ್ವಿಗಳೂ, ಸತ್ಯವಂತರೂ, ವೀರರೂ ಆದ ಪಾಂಡವರಿಗಾಗಿ ಭರತಖಂಡದೊಳಗಣ ಎಲ್ಲ ರಾಜರು ಒಗ್ಗಟ್ಟಾಗಿ ಸೇರಿ, ಯುದ್ಧಾರಂಭಕ್ಕೆ ಇದ್ದ ೫೫ ಲಕ್ಷ ಜನರಲ್ಲಿ ಕೊನೆಗೆ ಎಂಟೇ ಮಂದಿ ಉಳಿದರು; ಸ್ವಾತಂತ್ರ್ಯಪ್ರೇಮದ, ವೀರ್ಯದ ಇದಕ್ಕಿಂತಮೇಲಾದ ದೃಷ್ಟಾಂತವಿನ್ನಾವುದು?

೪ **ರಾಜನೀತಿ:**– ಪರಶತ್ರುಗಳೊಡನೆ ಸರ್ವಥಾ ಕಪಟದಿಂದ ನಡೆಯಲಾಗದೆಂದು ಭಾರತಕಾಲದ ಧೋರಣೆಯಿತ್ತು; ಹೀಗಿದ್ದರೂ, ಪರಶತ್ರುವು ಕುಟಿಲನೀತಿಯನ್ನನುಸರಿಸಿದರೆ, ಅವನೊಡನೆ ಕಪಟದಿಂದಲೇ ನಡೆಯತಕ್ಕುದೆಂದು ಹೇಳಿದ್ದಾರೆ. ಜನಾಂಗವು ಆಪತ್ತಿನಲ್ಲಿದ್ದಾಗ,

ಕಾಪಟ್ಯವೆಂಬ ಅಸ್ತ್ರವನ್ನು ಉಪಯೋಗಿಸಲು ಅಡ್ಡಿಯಿಲ್ಲವೆಂದು ನಮ್ಮ ಶಾಸ್ತ್ರಕಾರರ ಅಭಿಪ್ರಾಯ. ಸಾಮ, ದಾನ, ದಂಡ, ಭೇದ ಈ ನಾಲ್ಕು ರಾಜನೀತಿಯ ಉಪಾಯಗಳಲ್ಲಿ ದಂಡವೇ ಶ್ರೇಷ್ಠವಿದ್ದು, ಆದರ ಬಲದಿಂದ ರಾಜನು ಹಗೆಗಳ ಹೊಟ್ಟುಹಾರಿಸಬೇಕು; ಶತ್ರುವಿಗೂ ತನಗೂ ಹಿತವಾಗುವಂತಿದ್ದರೆ ಒಪ್ಪಂದಕ್ಕೆ ಸಿದ್ಧವಾಗಬೇಕು. ಶತ್ರುವಿನನ್ನು ಮಿತ್ರನಂತೆ ಮಧುರನುಡಿಗಳಿಂದ ಸಂತೈಸಬೇಕು. ಕಲ್ಯಾಣವನ್ನು ಬಯಸುವ ಆರಸನು ಕಪಟನಾದ ಶತ್ರುವಿನ ಮುಂದೆ, ತೊತ್ತು ಬಂದಾಗ ಕೈಮುಗಿಯಬೇಕು; ಮೆತ್ತಗಿರಬೇಕು; ಆದರೆ ಸಮಯನಾಧಿಸಿ, ಕೈಯೊಳಗಿನ ಗಡಿಗೆಯನ್ನು ನೆಲ್ಲಕ್ಕೆ ಅಪ್ಪಳಿಸುವಂತೆ, ಅವನ್ನೆಲ್ಲ ಹುರಿದೊಗೆದು, ತನ್ನ ಸ್ವಾತಂತ್ರ್ಯವನ್ನು ಗಳಿಸಲಿಕ್ಕೆಬೇಕು; ಬಹುಕಾಲ ಹೊಗೆಸುತ್ತಿಕೊಂಡು ನಿರ್ವೀರ್ಯನಾಗಿ ಬಾಳುವದಕ್ಕಿಂತ ಬಂದೇಕ್ಷಣ ಹೊತ್ತು ಬಾಳಿದರೂ ಉರಿಯುವ ಕೆಂಡದಂತೆಯೂ, ಮಿಂಚಿನಂತೆಯೂ ಬಾಳಿದರೇನೇ ಬಾಳಿದ್ದರ ಸಾರ್ಥಕವು. ಎದರುಗಳು ಬರದೆ ಮನುಷ್ಯನಿಗೆ ಬುದ್ಧಿ ಬರುವದಿಲ್ಲವಾದ್ದರಿಂದ, ಎದರುಗಳಿಗೆ ಮನುಷ್ಯನು ಎದೆಗುಂದಬಾರದು; ಮೊದಲು ಎದರುಗಳಿಗೆ ಮೈಗೊಟ್ಟರೇನೇ ಒಳ್ಳೇ ಕಾಲವನ್ನು ಕಾಣುವ ಯೋಗವು ಬರುವದು. ರಾಜನು ಸಿಂಹದಂತೆ ಯಾವಾಗಲೂ ಪರಾಕ್ರಮದಿಂದ ಗುಡುಗಾಡಿ, ಅತ್ಯಂತ ಎಚ್ಚರಿಕೆಯಿಂದ ಮಲಗಬೇಕು, ಎಚ್ಚರಗೆಟ್ಟವನ ಮೇಲೆ ಎಂಥ ಪ್ರಸಂಗವು ಬರುವದೆಂಬುದು ಗೊತ್ತಿಸದಲ್ಲ. ಶತ್ರುಗಳೊಡನೆ ಸಂಧಿನಡಿಸಿದ ನಂತರ ಅವರನ್ನು ನಂಬಿ ಹಾಯವಾಗಿ ನಿದ್ದೆಹೋದವನು ಗಿಡದ ಮೇಲೆ ಮಲಗಿದವನಂತೆ ಬೇಗ ಕೆಳಗೆ ಬೀಳುವನು. ನೀಮ್ಯವೇ ಆಗಲಿ, ಭಯಂಕರವೇ ಆಗಲಿ ಬೇಕಾದಂಥ ಉಪಾಯಾಂತರವನ್ನು ಅವಲಂಬಿಸಿ, ಆಪತ್ತಿಗೀಡಾದ ಮನುಷ್ಯನಾಗಲಿ, ರಾಜನಾಗಲಿ ಮೊದಲು ತನ್ನ ದೈನ್ಯ ಸ್ಥಿತಿಯನ್ನು ಹೋಗಲಾಡಿಸಿಕೊಂಡು, ಬಲಬಂದೊಡನೆ ಧರ್ಮದಿಂದ ನಡೆಯಬೇಕು. ನಾನಾಬಗೆಯ ದ್ವೇಷದಿಂದ ತಿರುಗುತ್ತಿರುವ ಕಳ್ಳಕಾಕರನ್ನೂ, ಲೋಕಕಂಟಕರನ್ನೂ, ಧರ್ಮವಿಧ್ವಂಸಕರನ್ನೂ ಗುಪ್ತವಾಗಿ ಕಂಡುಹಿಡಿದು ಅವರನ್ನು ಸಮೂಲ ಉಚ್ಛೇದಗೊಳಿಸಬೇಕು.

ಜ್ಞಾನಸಂಪನ್ನರೊಡನೆ ವೈರಕಟ್ಟಿಕೊಳ್ಳಬಾರದು. ತಮ್ಮ ಇಂಗಿತವನ್ನು ಯಾರಿಗೂ ತಿಳಿಯಗೊಡಬಾರದೆಂದು ಮುಂತಾಗಿ ಬೋಧಿಸಿದ್ದಾರೆ.

ಎರಡು ಉದಾಹರಣೆಗಳು:— ಮಹಾಭಾರತದೊಳಗೆ ರಾಜಕೀಯದೃಷ್ಟಿಯಿಂದ ಅತ್ಯಂತ ಮಹತ್ವದ ಒಂದೆರಡು ಪ್ರಸಂಗಗಳಿರುವವು; ಒಂದನೇದು ಪಿತಾಮಹರಾದ ಭೀಷ್ಮಾಚಾರ್ಯರದು; ಎರಡನೇದು ಧೈರ್ಯಶಾಲಿಯಾದ ವಿದುಲಾದೇವಿಯು ತನ್ನ ಮಗನಾದ ಸಂಜಯನಿಗೆ ನವಚೇತನವನ್ನುಂಟು ಮಾಡುವ ಬೋಧವು; ಭೀಷ್ಮಾಚಾರ್ಯರು ಸ್ವಭಾವದಿಂದ ಎಷ್ಟು ದೃಢಪ್ರತಿಜ್ಞರೂ, ಏಕನಿಷ್ಠಭಕ್ತರೂ ಇದ್ದರೆಂಬುದನ್ನು ನಾವಿಲ್ಲಿ ಹೊಸತಾಗಿ ಹೇಳಲಿಕ್ಕೆ ಬೇಡ; ನಾಲದು ದಕ್ಕೆ ಅವರಲ್ಲಿ ಪಾಂಡವರ ಬಗ್ಗೆ ಅಭಿಮಾನವಾದರೂ ಕಡಿಮೆಯಿರಲಿಲ್ಲ; ಹೀಗಿದ್ದ, ಅವರು ಕೌರವರ ಪಕ್ಷಕಟ್ಟಿ ಪಾಂಡವರಿಗೆ ಎದುರಾಳಿಗಳಾಗಿ ಕಾದಿದ್ದೊಂದು ಆಶ್ಚರ್ಯದ ಸಂಗತಿಯೇ! ಆದರೂ ಕುರುರಾಯನ ಉಪ್ಪಿಂಡವನೆಂದೂ, ರಾಜನು ಎಷ್ಟು ಅನ್ಯಾಯಾಚರಣೆಗೈದರೂ, ನನ್ನಮಟ್ಟಿಗೆ ರಾಜನೇ ನನ್ನ ದೇವರೆಂದೂ ಭೀಷ್ಮಾಚಾರ್ಯರು ಕೊಟ್ಟ ಬಿಡಾಸುಡಿಯಾದ ಉತ್ತರದಿಂದ ಮುಂದೆ ನಿಂತಂಥ ಸಾಕ್ಷಾತ್ ಶ್ರೀಕೃಷ್ಣನು ಸಹ ಬೆರಗುಕಚ್ಚಿಕೊಂಡನು; ಇದನ್ನು ಸರಿಗಟ್ಟುವಂಥ ಸತ್ಪಾಪಿಭಕ್ತಿಯು ಹೆಚ್ಚಳದ ಬೇರೊಂದು ಉದಾತ್ತವಾದ ದೃಷ್ಟಾಂತವು ಯಾವ ಇತಿಹಾಸದೊಳಗಾದರೂ ದೃಗ್ಗೋಚರವಾಗುವದೇ! ಎರಡನೇದು ವಿದುಲಾಮಾತೆಯದು; ಮಗನಾದ ಸಂಜಯನು ಸಿಂಧುರಾಜನಿಂದ ಸೋತು ರಣದಿಂದ ಓಡಿ ಮನೆಗೆ ಬರಲು, ವೀರಮಾತೆಯಾದ ವಿದುಲೆಯು ಮಗನನ್ನುದ್ದೇಶಿಸಿ ಏಲೋ? ಮಗನೇ! ಏತಕ್ಕೀ ಪರಿ ಸೋತು ಅವಮಾನಗೊಂಡು ಜೀವಗಳ್ಳನಾಗಿ ಬದುಕಿರುವಿ? ಹೀಗೆ ಅಂಜುಕುಳಿಯಾಗಿ ನಿನ್ನನ್ನೇ ನೀನು ಕಡೆಯಾಗಿಮಾಡಬೇಡ. ಎದ್ದೇಳು. ವೀರ್ಯ ತೋರಿಸಿ ಒಂದು ಗಳಿಗೆಯಾದರೂ ಪ್ರಕಾಶಮಾನವಾಗಿ ಬೆಳಗು; ಇಲ್ಲವಾದರೆ, ರಣದೊಳಗೆ ದೇಹವಿಟ್ಟು ಸ್ವರ್ಗವನ್ನು ಸೇರು. ದಾನದಲ್ಲಾಗಲಿ, ತಪಸ್ಸಿನಲ್ಲಾಗಲಿ, ಸತ್ಯದಲ್ಲಾಗಲಿ, ವಿದ್ಯೆಯಲ್ಲಾಗಲಿ, ಸಂಪತ್ತಿಯಲ್ಲಾಗಲಿ ಯಾವಾತನ ಹೆಸರು ನಾಲ್ಕುಜನರ ಬಾಯಲ್ಲಾಡು

ವದಿಲ್ಲವೋ ಅವನು ತಾಯಿಯ ಹೊಟ್ಟೆಯಲ್ಲಿ ಹುಟ್ಟಿದುದೇ ಭಾರ! ಇಂಥ ಹೇಡಿತನವನ್ನು ಬೀನಾಡಿ, ರಣಾಂಗಣವನ್ನು ಹೊಕ್ಕು ವೈರಿಗಳ ಹೊಟ್ಟೆ ಸೀಳಿಸಿ ಬಾ; ಅಂದರೆ ಬದುಕಿದ್ದಕ್ಕೆ ಸಾರ್ಥಕ." ಈ ರೀತಿಯಾಗಿ ಉತ್ಸಾಹ ಕಳೆತುಂಬಿಸಿಗಂಡುಗೊಳಿಸುವ ತಾಯಿಯ ಬಾಯಿಂದ ಹೊರಟ ಉಪದೇಶಾಮೃತವನ್ನುಂಡು ಸಂಜಯನು ಪ್ರೋತ್ಸಾಹಗೊಂಡವನಾಗಿ ತಿರಿಗಿ, ರಣಾಂಗಣವನ್ನು ನುಗ್ಗಿ ಶತ್ರುಗಳನ್ನು ಮುರಿಬಡಿದು ಕಳಕೊಂಡ ರಾಜ್ಯವನ್ನು ಮರಳಿ ಗಳಿಸಿದನು. ಮನುಷ್ಯನು ಸಂಸಾರದಲ್ಲಿ, ರಾಜನು ವೈರಿಗಳಿಗೆ ಸೋತಾಗಲಿ, ಜನಾಂಗವು ಅದೃಷ್ಟವಶದಿಂದಾಗಲಿ, ದೈನ್ಯಾವಸ್ಥೆಗೆ ತುತ್ತಾದರೆ, ರಣಹೇಡಿಯಂತೆ ಕೈಮುಚ್ಚಿಕೊಂಡಿರದೆ, ಸತತ ಉದ್ಯೋಗಬಲದಿಂದಲೂ, ಧೈರ್ಯದಿಂದಲೂ ಎಲ್ಲರೂ ತಮ್ಮ ತಮ್ಮ ದಾಯಿಯನ್ನು ಹುಡುಕಿಕೊಳ್ಳತಕ್ಕುದೆಂದು ಈ ಕಥೆಯಿಂದ ಕಲಿಯತಕ್ಕ ಸಂಗತಿಯಾಗಿದೆ.

ಯುದ್ಧ ಹಾಗೂ ಸೈನ್ಯ:– ಭಾರತೀಯಕಾಲಕ್ಕೆ ಪ್ರತಿಯೊಂದು ರಾಷ್ಟ್ರದಲ್ಲಿ ಯಾವಾಗಲೂ ಸೈನ್ಯವು ಸಿದ್ಧವಿರುವ ಪದ್ಧತಿಯಿತ್ತು; ಯುದ್ಧಶಾಸ್ತ್ರವು ಬಹು ಮುಂದುವರಿದುದರಿಂದ ಮನಬಂದಂತೆ ಎಲ್ಲರಿಗೂ ಸೈನಿಕರಾಗಲಿಕ್ಕೆ ಬರುತ್ತಿರಲಿಲ್ಲ. ಸೈನಿಕರಾಗಬೇಕಾದರೆ ಸೈನ್ಯದೊಳಗೆ ಅನೇಕ ವರ್ಷದ ಶಿಕ್ಷಣ ಪಡೆಯಬೇಕಾಗುತ್ತಿತ್ತು. ಸೈನ್ಯದೊಳಗೆ ಕಾಲಾಳು, ಕುದುರೆಬಲ, ಆನೆಬಲ, ರಥಬಲ ಹೀಗೆ ನಾಲ್ಕು ಭಾಗಗಳಿದ್ದವು; ಇದಕ್ಕೆ ಚತುರಂಗಬಲವೆಂದು ಹೆಸರು. ಶಿಪಾಯಿಗಳಿಗೆ ಧಾನ್ಯರೂಪದಿಂದಾಗಲಿ, ಭಂಗಾರದರೂಪದಿಂದಾಗಲಿ ಸಂಬಳ ಕೊಡುತ್ತಿದ್ದರು; ರಣದೊಳಗೆ ಮಡಿದ ವೀರಾಳುಗಳ ಕುಟುಂಬ ಪೋಷಣೆಯ ಭಾರವು ರಾಜನಮೇಲಿತ್ತು; ಹತ್ತು, ನೂರು, ಸಾವಿರ ಕಾಲಾಳುಗಳಿಗೊಬ್ಬೊಬ್ಬ ಮುಖ್ಯಸ್ಥನಿರುತ್ತಿದ್ದನು; ಸೇನಾಪತಿಯು ಇಡೀ ಸೈನ್ಯದ ನಾಯಕನಿದ್ದು ಅತನು ಧೈರ್ಯಶಾಲಿಯೂ, ಗಟ್ಟಿಗನೂ, ಶೂರನೂ, ಬುದ್ಧಿವಂತನೂ, ಕುಲೀನನೂ, ಆಚಾರಸಂಪನ್ನನೂ, ದಕ್ಷನೂ ಇರಲಿಕ್ಕೇಬೇಕೆಂದು ನಿಯಮವಿತ್ತು; ಮೇಲಾಗಿ ಅವನು ವ್ಯೂಹ ರಚನೆ, ಯಂತ್ರ, ಆಯುಧಗಳ ಉಪಯೋಗ ಇವನ್ನು ಅರಿತವನಾಗಿರಲಿಕ್ಕೆ

ಬೇಕು. ಕಾಲಾಳುಗಳು ಕೈಯಲ್ಲಿ ಒಂದೊಂದು ಕತ್ತಿ, ಒಂದು ಢಾಲು ಇರುತ್ತಿತ್ತು; ಬಲವಾನ್ ಕ್ಷತ್ರಿಯರೇ ಮಾತ್ರ ಗದೆಯನ್ನು ಉಪಯೋಗಿಸುತ್ತಿದ್ದರು; ಕುದುರೆಸವಾರನ ಕೈಯಲ್ಲಿ ಸಾಮಾನ್ಯವಾಗಿ ಭಲ್ಲೆ, ಕತ್ತಿಗಳಿರುತ್ತಿದ್ದವು; ಆನೆಯ ಮೇಲೆ ಕುಳಿತ ವೀರಾಳುಗಳೂ, ರಥದಲ್ಲಿ ಕುಳಿತವರೂ ಕವಚವನ್ನು ಹಾಕಿಕೊಂಡಿರುತ್ತಿದ್ದರು; ಬಾಣಗಳ ಸುರಿಮಳೆಗೆ ಮೈಗೊಡಬೇಕಾದ್ದರಿಂದ ಕವಚವಿಲ್ಲದೆ ರಥಿಗಳಿಗೂ ಆನೆಯವರಿಗೂ ಸಾಗುತ್ತಿರಲಿಲ್ಲ; ಗಾಂಧಾರ, ಸಿಂಧು, ಸೌವೀರದವರು, ಅಶ್ವಸೈನ್ಯದೊಳಗೆ ಹೆಸರು ಪಡೆದವರು; ಇವರು ಕುದುರೆಯನ್ನೇರಿಕೊಂಡು ಬಾಣಗಳನ್ನೆಸೆಯು ತೊಡಗಿದರೆ, ಪ್ರತಿಕ್ಷಿಗಳಿಗೆ ಹೆದರಿಕೆಯುಂಟುಮಾಡುತ್ತಿದ್ದರು; ದಕ್ಷಿಣದವರು ಕತ್ತಿಯುದ್ಧದೊಳಗೆ ನಿಪುಣರು; ಈ ರೀತಿಯಾಗಿ ಒಂದೊಂದು ದೇಶದವರು ಒಂದೊಂದರೊಳಗೆ ಮುಂದಾಗಿರುತ್ತಿದ್ದರು. ಪೂರ್ವಕಾಲದ ಯುದ್ಧದೊಳಗೆ ಆನೆಯು ಉಪಯೋಗಕ್ಕೆ ಬಹಳವಾಗಿ ಆಗುತ್ತಿತ್ತು; ಆದ್ದರಿಂದ ಆನೆಗಳ ಸಂರಕ್ಷಣೆ ಭಾಗವಾದ ಸೊಂಡಿಲಿಗೆ, ಹಾಗೂ ಕಾಲುಗಳಿಗೆ ಕಬ್ಬಿಣದ ಕವಚವನ್ನು ಹಾಕಿರುತ್ತಿದ್ದರು; ಯುದ್ಧದೊಳಗೆ ಆನೆಗಳು ಬಹು ಪರಾಕ್ರಮವನ್ನು ತೋರಿಸುತ್ತಿದ್ದವು; ಹೀಗಿದ್ದರೂ ಕೈಯಲ್ಲಿ ಯಾವ ಶಸ್ತ್ರವನ್ನು ಹಿಡಿಯದೆ ಆನೆಯೊಡನೆ ಧಾಷ್ಟ್ರ್ಯದಿಂದ ಕುಸ್ತಿಯಾಡುವಂಥ ಭೀಮ, ಭಗದತ್ತರು ಆಗಿನಕಾಲಕ್ಕೆ ಇದ್ದರು; ಈಗಣಕಾಲಕ್ಕೆ ನಮಗೆ ನೋಡಲು ಸಿಗದಂಥದೊಂದು ಅಸ್ತ್ರವೆಂದರೆ ಬಾಣವು; ಶಸ್ತ್ರಾಸ್ತ್ರಗಳಲ್ಲಿ ಧನುಷ್ಯಬಾಣಗಳೇ ಹೆಚ್ಚಿನವು; ಮತ್ತು ಅವುಗಳನ್ನೆಸೆಯುವದರಲ್ಲಿಯೂ ಭಾರತೀಯರ ಕೈ ಮೇಲಾಗಿದ್ದಿತು. ಎಸೆಯುವ ಅಸ್ತ್ರಗಳಲ್ಲಿ ಭರ್ಚಿ ಹಾಗೂ ಚಕ್ರಗಳು ತೇಜಸ್ವಿಯಾದವುಗಳು; ಚಕ್ರವು ಈಗ್ಯೂ ಪಂಜಾಬದೇಶಗಳಲ್ಲಿ ನೋಡಲಿಕ್ಕೆ ಸಿಗುತ್ತದೆ. ಧನುಷ್ಯದ ಬಲದಂತೆ ಬಾಣವು ಒಂದೊಂದು ಮೈಲು ದೂರ ಹೋಗುತ್ತಿತ್ತು; ಈ ಅಸ್ತ್ರವಿದ್ಯೆಯಲ್ಲಿ ಅಂದರೆ ಬಾಣಗಳನ್ನೆಸೆಯುವ ವಿದ್ಯೆಯಲ್ಲಿ ಭಾರತೀಯರಿಗೆ ಸರಿಗಟ್ಟುವವರಾರೂ ಇರಲಿಲ್ಲ; ವೀರರು ೪೦-೫೦ ಬಾಣಗಳನ್ನು ಒತ್ತಳಿಕೆಯಲ್ಲಿ ಹಾಕಿ ಬೆನ್ನಿಗೆ ಕಟ್ಟಿಕೊಳ್ಳುವ ವಾಡಿಕೆಯಿತ್ತು; ಅಲ್ಲದೆ ಅಶ್ವತ್ಥಾಮನ ಹಿಂದೆ ಬಾಣಗಳಿಂದ

ತುಂಬಿದ ೩ ಬಂಡಿಗಳು ಇದ್ದವಂತೆ! ಕಂಡವರೆಲ್ಲ ಧನುರ್ವೀರರಾಗುತ್ತಿರಲಿಲ್ಲ; ಏಕೆಂದರೆ ಬಾಣಗಳನ್ನೆಸೆಯುವಿಕ್ಕೆ ದೃಷ್ಟಿಯೂ ಹಸ್ತಕೌಶಲ್ಯವೂ ಸತತೋದ್ಯೋಗವೂ ಇವೆಲ್ಲ ಬೇಕಾಗುತ್ತಿದ್ದವು. ಇನ್ನು ಅಸ್ತ್ರಗಳ ವಿಷಯವಾಗಿ ಒಡೆದು ಹೇಳಬೇಕೆಂದರೆ, ಅಸ್ತ್ರಗಳನ್ನು ರಥಿಗಳೇ ಬಳಸುತ್ತಿದ್ದರು; ಮೊದಲು, ಧನುಷ್ಯಕ್ಕೆ ಬಾಣಹೂಡಿ ಆಮೇಲೆ ಯಾವುದೊಂದು ತಮಗೆ ಸಾಧ್ಯವಾಗಿರುವ ಮಂತ್ರವನ್ನು ಜಪಿಸಿ ಬಿಟ್ಟರೆ, ಆ ದೈವಿಕಶಕ್ತಿಯಿಂದ ಅಗ್ನಿ, ಮಳೆ, ಸರ್ಪ ಮುಂತಾದವುಗಳ ಸುರಿಮಳೆಯಾಗುತ್ತಿತ್ತು. ಇಂಥ ಉದಾಹರಣೆಗಳು ನಮಗೆ ರಾಮಾಯಣ ಭಾರತಗಳಲ್ಲಿ ವಿಪುಲವಾಗಿ ದೊರಕುತ್ತವೆ. ಯುದ್ಧ ಮುಗಿದ ನಂತರ ಅಶ್ವತ್ಥಾಮಾ ಆಚಾರ್ಯರು ಭಾಗೀರಥಿಯ ದಂಡೆಯಲ್ಲಿ ವ್ಯಾಸಮಹರ್ಷಿಗಳ ಹತ್ತಿರ ಕುಳಿತಿರಲು, ಪಾಂಡವರು ಒಮ್ಮಿಂದೊಮ್ಮೆ ಕೊಲ್ಲಲಿಕ್ಕೆ ಬರಲು, ಆಚಾರ್ಯರು ಹತ್ತಿರ ಇದ್ದ ಬಂದು ದರ್ಭದ ಕಡ್ಡಿಯನ್ನು ಬ್ರಹ್ಮಶಿರವೆಂಬ ಮಂತ್ರದಿಂದ ಜಪಿಸಿ ಅದನ್ನು ಪಾಂಡವರ ಮೇಲೆ ಬೀಸಾಡಿದರು; ಇದರ ಮೇಲಿಂದ ಅಸ್ತ್ರಕ್ಕೆ ಬಾಣದ ಅಥವಾ ಧನುಷ್ಯದ ಅವಶ್ಯಕತೆಯಿತ್ತೆಂದೂ ತೋರುವದಿಲ್ಲ. ಸಾರಾಂಶ, ಅಸ್ತ್ರವಿದ್ಯೆಯೆಂದರೆ ಮಂತ್ರವಿದ್ಯೆಯು; ಧನುರ್ವಿದ್ಯೆಯೆಂದರೆ ಮಾನವೀ ಧನುಷ್ಯವಿದ್ಯೆಯು; ಧನುರ್ವಿದ್ಯೆಯೊಂದು ಮಹತ್ವಪೂರ್ಣವಾದ ವಿದ್ಯೆಯಿದ್ದರಿಂದ ಇದನ್ನು ಕಲಿಯುವದು ಬ್ರಾಹ್ಮಣ ಗುರುಗಳಿಂದಲೇ. ಮಂತ್ರಾಸ್ತ್ರಗಳನ್ನರಿತವರು ಅರಿಯದವರ ಮೇಲೆ ಬಿಡಕೂಡದೆಂಬುದೊಂದು ಕಟ್ಟಳೆಯಿತ್ತು; ಇನ್ನು ರಥಗಳ ಬಗ್ಗೆ ಪ್ರಾಚೀನಕಾಲದ ರಥಗಳಿಗೆ ನಾಲ್ಕು ಕುದುರೆಗಳನ್ನು ಹೂಡುತ್ತಿದ್ದರು; ರಥವೂ, ಕುದುರೆಗಳೂ ಯಾವಾಗಲೂ ಅಲಂಕರಿಸಲ್ಪಟ್ಟಿರುತ್ತಿದ್ದವು; ಕುದುರೆಗಳ ನಾಮಾನುಗಳು ಬೆಳ್ಳಿಭಂಗಾರದಿಂದ ಮಾಡಲ್ಪಟ್ಟಿರುತ್ತಿದ್ದವು. ರಥಗಳ ಮೇಲೆ ಗುಡಿಯು ಶಿಖರದಂಥ ದುಂಡಾದ ಗುಮ್ಮಟವಿರುತ್ತಿತ್ತು. ಅದರ ಮೇಲೆ ಧ್ವಜವು ಹಾರಾಡುತ್ತಿತ್ತು. ಪ್ರತಿಯೊಬ್ಬರ ಧ್ವಜಚಿನ್ಹವು ಬೇರೆಯಾಗಿರುವದರಿಂದ ಈ ರಥವು ಇಂಥವರದೇ ಎಂದು ಗುರುತಿಸಲಿಕ್ಕೆ ಬರುವಂತಿತ್ತು; ಭೀಮಸೇನನ ರಥದ ಮೇಲೆ ಸಿಂಹಧ್ವಜ; ಕರ್ಣನ ರಥದ

ಮೇಲೆ ಆನೆಯ ಸರಪಳಿಧ್ವಜ; ಯುಧಿಷ್ಠಿರನ ರಥಕ್ಕೆ ಗ್ರಹಗಳಿಂದ ಶೋಭಿಸುವ ಚಂದ್ರಸಧ್ವಜವಿತ್ತು; ಅಲ್ಲದೆ ರಥದಲ್ಲಿ ಒಂದೊಂದು ಮದ್ದಳೆ, ಕಹಳೆಗಳೂ ಇರುತ್ತಿದ್ದವು. ರಥವನ್ನು ನಡೆಸಹತ್ತಿದೊಡನೆ ಈ ಮದ್ದಳೆಗಳು ತಮ್ಮಷ್ಟಕ್ಕೆ ತಾವೇ ಯಂತ್ರದಿಂದ ಸಪ್ಪಳ ಮಾಡುತ್ತಿದ್ದವು. ರಥಗಳಿಗೆ ಎರಡೇ ಗಾಲಿಗಳು ಇರುತ್ತಿದ್ದವು. ಶಾಲ್ವರಾಜನು ದ್ವಾರಕೆಯ ಮೇಲೆ ಸಾಗಿಹೋಗಿ, ಮುತ್ತಿದಾಗ ವಿಮಾನದಿಂದ ದ್ವಾರಕೆಯ ಮೇಲೆ ಕಲ್ಲಿನ ಮಳೆ ಸುರಿಸಿದ ಸಂಗತಿಯನ್ನೋದಿದರೆ, ಪೂರ್ವಕಾಲಕ್ಕೆ ವಿಮಾನದ ಉಪಯೋಗವು ಗೊತ್ತಿತ್ತೆಂಬುದು ನಿದರ್ಶನಕ್ಕೆ ಬರುತ್ತಿದೆ. ಈ ವೇಳೆಯಲ್ಲಿ ದ್ವಾರಕೆಯೊಳಗೆ ಅಲ್ಲಲ್ಲಿ ಕೋಪ್ಪು ಹಾಗೂ ಯಂತ್ರಗಳು ಇಡಲ್ಪಟ್ಟಿದ್ದವಂತೆ! ಭಾರತೀಯ ಯುದ್ಧಶಾಸ್ತ್ರದೊಳಗೆ ಧರ್ಮಯುದ್ಧ, ಕೂಟಯುದ್ಧ, ಸಂಕುಲಯುದ್ಧ ಎಂದು ಮೂರು ಪ್ರಭೇದಗಳು. ಭಾರತೀಯರಿಗೆ ಧರ್ಮಯುದ್ಧವೆಂದರೆ ಬಲುಪ್ರೀತಿ. ಧರ್ಮಯುದ್ಧದೊಳಗೆ ದಯಾಗುಣವೇ ಮುಖ್ಯವಾಗಿರುತ್ತಿತ್ತು. ಕೂಟಯುದ್ಧವೆಂದರೆ ಕಪಟಯುದ್ಧವು; ಅವಶ್ಯವಿದ್ದಲ್ಲಿ ಕೂಟಯುದ್ಧವನ್ನೂ ನಡಿಸಬೇಕೆಂದು ಹೇಳಿದೆ.

ಸೈನ್ಯರಚನೆ:- ಕಾಲಾಳಿನ ಮುಂದೆ ಆನೆಯದಳ; ಆನೆಯದಳದ ನಟ್ಟನಡುವೆ ರಥಗಳು; ರಥಗಳ ಹಿಂಭಾಗದಲ್ಲಿ ಕುದುರೆಸವಾರರು. ಕುದುರೆಸವಾರರ ನಡುವೆ ಕವಚಗಳನ್ನು ಧರಿಸಿದ ಕಾಲಾಳುಗಳು. ಈ ವಿಧವಾಗಿ ಸೈನ್ಯರಚನೆ ಮಾಡುತ್ತಿದ್ದರು. ಈ ಸೈನ್ಯವು ಅನೇಕ ಹರದಾರಿಗಳ ತನಕ ಹರಡಿಕೊಂಡಿರುತ್ತಿತ್ತು. ಬೇರೆ ಬೇರೆ ದಿವಸಗಳಲ್ಲಿ ಬೇರೆ ಬೇರೆ ವಿಧದಿಂದ ಸೈನ್ಯವನ್ನು ಮುಂಡಿಸುತ್ತಿದ್ದರು. ಇದರಲ್ಲಿ ಚಕ್ರವ್ಯೂಹ, ಗರುಡವ್ಯೂಹ, ಕ್ರೌಂಚವ್ಯೂಹ, ಅರ್ಧಚಂದ್ರವ್ಯೂಹ ಹೀಗೆ ವಿಧಗಳಿವೆ; ಒಟ್ಟು, ಕುರು-ಪಾಂಡವರ ಯುದ್ಧದೊಳಗೆ ೧೮ ಅಕ್ಷೌಹಿಣಿ ದಳವಿದ್ದು, ೧೮ನೇ ದಿನ ೩ ಲಕ್ಷ ಕುದುರೆಸವಾರರೂ, ೩ ಕೋಟಿ ಕಾಲಾಳುಗಳೂ ಕೌರವರ ಪಕ್ಷದಲ್ಲಿ, ಹತ್ತು ಸಾವಿರ ಸವಾರರು ಮತ್ತು ೨ ಕೋಟಿ ಕಾಲಾಳುಗಳೂ ಪಾಂಡವರ ಪಕ್ಷದಲ್ಲಿ ಇದ್ದರೆಂದು ವರ್ಣನೆಯಿದೆ. ಈ ಸಂಗ್ರಾಮದೊಳಗೆ ೬೬ ಕೋಟಿ ೧೮ ಲಕ್ಷ ೩೦ ಸಾವಿರ ಜನರು ಮಡಿದರಂತೆ!

ಭಾರತಕಾಲದ ಧರ್ಮವಿಚಾರ:- ಋಗ್ವೇದಕಾಲದಿಂದಲೂ ಭಾರತೀಯರ ಧರ್ಮವು ವೈದಿಕವಷ್ಟೇ! ವೈದಿಕಧರ್ಮದ ಮುಖ್ಯ ಲಕ್ಷಣಗಳಾದ ಸ್ವಾಧ್ಯಾಯ ಹಾಗೂ ಯಜ್ಞ ಅವೆರಡೂ ಕರ್ಮಗಳು ಪ್ರತಿಯೊಬ್ಬನ ದೈನಿಕ ಕರ್ಮಗಳಾಗಿದ್ದವು. ಭಾರತಕಾಲಕ್ಕೆ ಋಕ್, ಯಜುಸ್, ಸಾಮವೇದಗಳು ಸಂಪೂರ್ಣ ಸಿದ್ಧವಾಗಿದ್ದು, ಅವೆಲ್ಲ ಆರ್ಯ ಧರ್ಮ ಪ್ರತಿಪಾದಕವಾದ ಮೂಲ ದೈವೀಗ್ರಂಥಗಳೆಂದು ಆರ್ಯರ ದೃಢನಂಬಿಗೆಯಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳಲ್ಲಿ ಹುಟ್ಟಿದ ಪ್ರತಿಯೊಬ್ಬನು ಮೂರು ಅಲ್ಲದಿದ್ದರೂ ಒಂದಾದರೂ ವೇದವನ್ನು ಬಾಯಿಪಾಠ ಕಲಿಯಲೇಬೇಕೆಂದು ನಿರ್ಬಂಧವಿತ್ತು. ಭಾರತಕಾಲಕ್ಕೆ ವೈಶ್ಯರು ತಮ್ಮ ಉದ್ಯೋಗದ ಹರಿಗೆ ಬಿದ್ದು ವೇದಾಧ್ಯಯನವನ್ನು ಕೆಲಮಟ್ಟಿಗೆ ಕಡೆಗಣಿಸಿದ್ದರೆಂದು ತೋರಿಯುತ್ತದೆ. ಕ್ಷತ್ರಿಯರು ವೇದವಿದ್ಯೆಯಲ್ಲಿಯೂ, ಧನುರ್ವಿದ್ಯೆಯಲ್ಲಿಯೂ ಪಾರಂಗತರಾಗಿರುತ್ತಿದ್ದರೂ, ಅವರಲ್ಲಿಯೂ ವೇದವಿದ್ಯೆಯ ಬಗ್ಗೆ ಮೆಲ್ಲಗೆ ಅನಾದರವು ಮೊಳಕೆಯೊಡೆಯಲಾರಂಭಿಸಿತ್ತೆನಲು ಆಧಾರಗಳಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಪ್ರತಿನಿತ್ಯದಲ್ಲಿಯೂ ಸಂಧ್ಯಾವಂದನೆ, ಯಜ್ಞಗಳನ್ನು ಬಿಡದೆ ನಡಿಸುತ್ತಿದ್ದರು. ಇಂಥದೊಂದು ಸಮಯದೊಳಗೆ ಶ್ರೀಕೃಷ್ಣ, ಧರ್ಮಾದಿಗಳು ಸಂಧ್ಯಾವಂದನೆಯನ್ನು ಮಾಡುವದನ್ನು ಬಿಟ್ಟು ಬಿಟ್ಟರೆಂಬುದು ಭಾರತದೊಳಗೆ ಕಾಣಿಸುವದಿಲ್ಲ. ಸಂಧ್ಯೆಯೊಳಗಿನ ಮುಖ್ಯ ತಿರುಳಾದ ಸೂರ್ಯೋಪಸ್ಥಾನವೇ ಸಂಧ್ಯೆಯ ಗುರಿಯಾಗಿತ್ತು. ಭಾರತೀಯ ಘನಘೋರ ಸಂಗ್ರಾಮ ನಡೆದರಲು, ಎಲ್ಲ ಕ್ಷತ್ರಿಯ ವೀರರು ಪ್ರಾತಃಕಾಲ, ಸಂಧ್ಯಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ರಣಭೂಮಿಗೆ ಬರುತ್ತಿದ್ದರು; ಸಾಲದುದಕ್ಕೆ, ಒಂದು ದಿನವಂತೂ ರಾತ್ರೆ ಸಹ ಯುದ್ಧನಡೆಸುವ ಪ್ರಸಂಗ ಬಿದಗಿತು; ಮತ್ತು ಎಲ್ಲ ಸೈನಿಕರೂ ರಣಾಂಗಣದಲ್ಲಿಯೇ ಮಲಗಿ ಎದ್ದು ಮತ್ತೆ ಬೆಳಗಾಗುವ ಮುಂಚೆಯೇ ಯುದ್ಧಕ್ಕೆ ಸನ್ನದ್ಧರಾದರು; ಇಷ್ಟಾಗುವದಕ್ಕೆ ಅರುಣನು ಕೆಂಪುಗೊಳಿಸಿದ ರವಿಮಂಡಲವು ಸುವರ್ಣಚಕ್ರದಂತೆ ಕಾಣಿಸಿತು; ಅದೇ ಕ್ಷಣಕ್ಕೆ ಎಲ್ಲರೂ ನಡೆದ ತುಮುಲಯುದ್ಧವನ್ನು ತಡೆದುಬಿಟ್ಟು,

ತಮ್ಮ ತಮ್ಮ ರಥದಿಂದಿಳಿದು ಸೂರ್ಯನ ಕಡೆಗೆ ಮುಖವಾಗಿ ಕೈ ಮುಗಿದು ಜಪಕ್ಕೆ ಪ್ರಾರಂಭಮಾಡಿದರು. ಸಮರಾಂಗಣದಲ್ಲಿಯೇ ಸೂರ್ಯೋಪಸ್ಥಾನಕ್ಕಾಗಿಯುದ್ಧವನ್ನು ನಿಲ್ಲಿಸಿದ ಸಂಗತಿಯಿಂದ ಸಂಧ್ಯಾವಂದನೆಯ ವಿಷಯದಲ್ಲಿ ಭಾರತಕಾಲಕ್ಕೆ ಆರ್ಯರಲ್ಲಿ ಎಂಥ ಉಜ್ವಲವಾದ ಭಕ್ತಿವಿಶೇಷವು ಬೆಳಗುತ್ತಿತ್ತೆಂಬುದಕ್ಕೆ ಇದೊಂದೇ ಉದಾಹರಣೆಯಾಗಿರು. ತುಮುಲಯುದ್ಧವೆಂದರೇನು? ಆ ಕಾಲಕ್ಕೆ ಸಂಧ್ಯಾವಂದನೆಗಾಗಿಯುದ್ಧ ನಿಲ್ಲಿಸುವದೆಂದರೇನು? ನಿಜವಾಗಿಯೂ, ಈ ಉದಾಹರಣೆಯನ್ನೋದಿ ಪ್ರತಿಯೊಬ್ಬ ಭಾರತೀಯನ ಮೈಯುಬ್ಬಿ ಸಂಧ್ಯೆಯ ಬಗ್ಗೆ ನಮ್ಮ ಹಿರಿಯರ ಆದರವೆಷ್ಟಿತ್ತೆಂಬುದೂ, ಯುದ್ಧದಲ್ಲಿ ಕೂಡ ಆರ್ಯರು ಧರ್ಮದ ಪ್ರಶ್ನಬಂದಾಗ ಎಷ್ಟು ಹಿರಣ್ಯೆಯಿಂದ ನಡೆಯುತ್ತಿದ್ದರೆಂದೂ ಮನದಟ್ಟಾಗಿ ಆನಂದಬಾಷ್ಪಗಳು ಕಣ್ಣುಗಳಿಂದ ತಮ್ಮಿಂದ ತಾವೇ ಕೋಡಿಬಿಟ್ಟು ಹರಿಯುತ್ತವೆ. ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಢಾಲು ಹಿಡಿದು ಸಂಗ್ರಾಮದೊಳಗೆ ನಿಂತು ಕಾದಾಡುತ್ತಿರುವಾಗಲೂ, ಸಂಧ್ಯೆಯ ವಿಷಯದಲ್ಲಿ ಭಾರತೀಯರು ತೋರಿಸಿದ ನಿಷ್ಠೆಯನ್ನು ನೋಡಿದರೆ, ಈ ಬಗ್ಗೆ ಭಾರತೀಯ ಆರ್ಯರು ಎಷ್ಟು ಅತ್ಯಾದರವನ್ನು ಮನಸಿನಲ್ಲಿ ವಹಿಸುತ್ತಿದ್ದರೆಂಬುದು ಬಹಳ ಬೆಚ್ಚಿ ಕಾಣುತ್ತದೆ. ಇಂಥಲ್ಲಿ ಸ್ನಾನ ಮೊದಲಾದವುಗಳನ್ನು ಲಕ್ಷಿಸದೆ, ಮೊದಲು ಸೂರ್ಯೋಪಸ್ಥಾನವೇ ಹೆಚ್ಚಿನದೆಂದು ಬಗೆಯುತ್ತಿದ್ದರು; ಅಹಹ! ಭಾರತೀಯರ ಪೀಳಿಗೆಯವರಾದ ಹಿಂದೀಜನರೇ? ಇದೊಂದು ಉದಾಹರಣೆಯನ್ನು ಎದೆಯ ಮೇಲೆ ಕೊರೆದಿಟ್ಟುಕೊಂಡು ಅದರಂತೆ ನಡೆಯಿರಿ! ಅಂದರೆ ನಿಮ್ಮ ಪಾರತಂತ್ರ್ಯವೆಲ್ಲವೂ ಪಾರು ಹಾಳಾಗಿ ಹೋಗುವದು! ಇದೇ ಸೂರ್ಯೋಪಾಸನೆಯ ಪ್ರಭಾವದಿಂದ ಆರ್ಯರು ನೂರಾರು ವರ್ಷಗಳ ವರೆಗೆ ನಾವು ಸ್ವತಂತ್ರರಾಗಿಯೂ, ಅದೀನರಾಗಿಯೂ ಇರುವೆವೆಂದು ಕೈಯಲ್ಲಿ ಕಡ್ಡಿಕೊಟ್ಟು ಹೇಳಿರುವರು. ಸೂರ್ಯೋಪಸ್ಥಾನದಂತೆ, ಅಗ್ನಿಯ ಉಪಾಸನೆಯೂ ಅವಶ್ಯಕವಾದುದೊಂದು ದಿನದ ಕರ್ಮವಾಗಿತ್ತು; ಈಗಿನಂತೆ ಅಗ್ನಿ ಮೂರ್ತಿ ಪೂಜೆಯ ವಿಧಾನವು ಇನ್ನೂ ರೂಢವಾಗಿರಲಿಲ್ಲ; ಆದರೂ ವಿಷ್ಣು ಉಪಾಸನೆ

ಶಿವ ಉಪಾಸನೆಗಳ ಪಂಥಗಳು ಮೆಲ್ಲಮೆಲ್ಲಗೆ ಅಡಿಯಿಡಲಿಕ್ಕೆ ಪ್ರಾರಂಭಿಸಿದ್ದವೆನ್ನಲಿಕ್ಕೆ ಅಡ್ಡಿಯಿಲ್ಲ. ಇದರ ಜೊತೆಯಲ್ಲಿಯೇ ದುರ್ಗಾಪೂಜೆಯು ಜನಸಾಮಾನ್ಯರಲ್ಲಿ ಸೇರಿಕೊಂಡಿತ್ತು. ಭಾರತೀಯ ಆರ್ಯರಲ್ಲಿ ಶ್ರಾದ್ಧ ಸಂಪ್ರದಾಯವು ಬಹು ಪುರಾತನಕಾಲದಿಂದ ನಡೆದುಬಂದಿದೆ. ಶ್ರಾದ್ಧದೊಳಗೆ ಪಿತೃಸ್ಥಾನಕ್ಕೆ ಕುಳಿತು ಪೂಜೆಗೊಂಬುವ ಬ್ರಾಮ್ಹಣರು ವೇದವೇತ್ತರೂ, ಶೀಲಸಂಪನ್ನರೂ ಇರಲೇಬೇಕೆಂದು ಆರ್ಯರ ಮುಖ್ಯ ಕಟಾಕ್ಷವಿತ್ತು. ಭಾರತಕಾಲಕ್ಕೂ ಬ್ರಾಮ್ಹಣರು ತಮ್ಮ ಬ್ರಾಮ್ಹಣ ಧರ್ಮವನ್ನು ತ್ಯಜಿಸಿ, ಹೊಟ್ಟೆಗಾಗಿ ಬಗೆಬಗೆಯ ಕೀಳು ಕೆಲಸಕ್ಕೆ ಕೈಹಾಕಿದ್ದರೆಂದು ನಿಶ್ಚಳವಾಗುತ್ತದೆ; ಏಕೆಂದರೆ ಧರ್ಮ ಬಿಟ್ಟು, ಬೇರೆ ವ್ಯವಸಾಯವನ್ನು ಕೈಕೊಂಡಂಥ ಬ್ರಾಮ್ಹಣರನ್ನು ಶ್ರಾದ್ಧಕ್ಕೆ ಕೂಡ್ರಿಸಬಾರದೆಂದು ನಿರ್ಬಂಧಹಾಕಿದ್ದರು; ಪ್ರತಿಯೊಬ್ಬನು ದಿನಾಲು ತನ್ನ ಕೈಯಲ್ಲಿ ಇದ್ದಮಟ್ಟಿಗೆ ಚೂರುಚಾರಾದರೂ ದಾನ ಮಾಡಿಯೇ ತೀರಬೇಕೆಂದು ಪೂರ್ವಿಕರ ಹೇಳಿಕೆ. ಭಾರತಕಾಲದಲ್ಲಿ, ಭಂಗಾರ, ಭೂಮಿ, ಎಳ್ಳು, ಆಕಳು, ವಸ್ತ್ರ, ಕನ್ಯಾ, ಮೊದಲಾದವು ದಾನ ಪದಾರ್ಥಗಳಾಗಿದ್ದವು; ಇವುಗಳನ್ನು ದಾನ ಮಾಡುವದು ಮನುಷ್ಯ ಕ್ಷೇಮಕ್ಕೆ ಬಹು ಪೋಷಕವೆಂಬುದಾಗಿ ಹೇಳಿರುವರು. ಶ್ರೀಕೃಷ್ಣನು ಕರ್ಣಪರ್ವದೊಳಗೆ ಒಂದುಕಡೆಯಲ್ಲಿ "ಬಂದುವೇಳೆ ಸುಳ್ಳನ್ನಾಡಬಹುದು; ಆದರೆ ಎಂಥ ಪ್ರಸಂಗ ಬಂದರೂ, ಹಿಂಸೆಪಡಿಸಕೂಡದೆಂದು ಖಂಡತುಂಡಾಗಿ ಹೇಳಿರುವನು. ಭಾರತೀಯಕಾಲದೊಳಗೆ ಅಹಿಂಸೆಯ ಕಲ್ಪನೆಯು ಎಷ್ಟು ಪ್ರಬಲವಾಗಿತ್ತೆಂಬುದು ಇದೊಂದರಮೇಲಿಂದ ಗಮನಿಸಬಹುದಾಗಿದೆ. ಅತಿಥಿಯು ಮನೆಗೆ ಬಂದರೆ, ತಾನು ಉಪವಾಸವಿದ್ದಾದರೂ, ಅವನಿಗೆ ಅನ್ನಕೊಟ್ಟು ಸಂತುಷ್ಟಪಡಿಸಬೇಕೆಂದು ಭಾರತಕಾಲದೊಳಗಿದ್ದಂಥ ಕಟ್ಟುನಿಟ್ಟಾದ ನಿಯಮವು ಬೇರೆ ಯಾವ ಕಾಲದಲ್ಲಿಯೂ ಪ್ರಚಾರದಲ್ಲಿರುವದಕ್ಕೆ ಆಧಾರವಿಲ್ಲ. ಅತಿಥಿಯು ಉಂಡು ಉಳಿದ ಅನ್ನಕ್ಕೆ ಆರ್ಯರು ಅಮೃತವೆಂತಲೂ, ಗೃಹಸ್ಥಧರ್ಮದೊಳಗಿರುವ ಸ್ತ್ರೀಪುರುಷರು ಈ ಅಮೃತಾನ್ನವನ್ನುಂಡು ಚರಿತಾರ್ಥ ನಡೆಯಿಸಬೇಕೆಂಬುದೂ ಪರಂಪರೆಯಿಂದ ನಡೆದುಬಂದಿರುವ ಆರ್ಯನಾಂಪ್ರ

ದಾಯವಿಶೇಷವು. ಭಾರತೀಯಕಾಲದ ಜನರಲ್ಲಿ ಅತಿಥಿ ಪೂಜೆಯ ಮಹತ್ವವು ಎಷ್ಟು ಮನದಟ್ಟಾಗಿ ನೆಟ್ಟಿತ್ತೆಂಬುದಕ್ಕೆ ಭಾರತದೊಳಗೆ ಮಿಂಚುತ್ತಿರುವ ಮುಂಗಲಿಯ ಕಥೆಯೂ, ಕಪೋತಪಕ್ಷಿಯ ಕಥೆಯೂ ಉಜ್ವಲ ಆದರ್ಶಭೂತಗಳಾಗಿವೆ; (೬ಟ್ಟಿನಮೇಲೆ ಭಾರತೀಯ ಧರ್ಮದ ರಹಸ್ಯವನ್ನು ಒಂದೇ ಮಾತಿನಲ್ಲಿ ಹೇಳಿ ಮುಗಿಸಬೇಕೆಂದರೆ, ಪ್ರಾಣವನ್ನು ಎತ್ತಿಕೊಟ್ಟಾದರೂ ಧರ್ಮವನ್ನು ಕಾಪಾಡಲಿಕ್ಕೆಬೇಕು. ನಾವು ಧರ್ಮವನ್ನು ಕಾಯ್ದರೆ, ಧರ್ಮವು ನಮ್ಮನ್ನು ಕಾಪಾಡಲಿಕ್ಕೆ ಕೈಕಟ್ಟಿಕೊಂಡು ನಿಂತಿರುತ್ತದೆ; ಆದುದರಿಂದ ಮನುಷ್ಯನಿಗೆ ಧರ್ಮವೇ ಗತಿ.

ಭಾರತೀಯರ ವೈಶಿಷ್ಟ್ಯವು:- ಪ್ರಪಂಚದೊಳಗಿನ ಮಿಕ್ಕ ಜನಾಂಗದವರಿಗಿಂತ ಭಾರತೀಯುರಲ್ಲಿ ವಿಶೇಷ ಮಹತ್ವವೇನಾದರೂ ಇದ್ದುದೇ ಆದರೆ, ತತ್ವಜ್ಞಾನವೊಂದೇ. ತತ್ವಜ್ಞಾನದಿಂದಲೇ ಭಾರತೀಯರ ಭಾರತೀಯತ್ವವು ಬಲವಾಗಿ ಬೆಳಗುತ್ತಿದೆ. ಈ ತತ್ವಜ್ಞಾನವೇ ವೇದಾಂತವೆಂಬ ಬೇರೆ ಹೆಸರಿನಿಂದ ಪ್ರಸಿದ್ಧವಿದೆ. ಗಹನವಾದ ಈ ವೇದಾಂತಜ್ಞಾನವನ್ನು ಮಹಾಭಾರತಕಾರರು ಎಲ್ಲರಿಗೂ ತಿಳಿಯುವಂತೆ ಸುಲಭವಾದ ವ್ಯವಹಾರದೊಳಗಿನ ಕಥೆಗಳನ್ನು ಹೇಳಿ ಸ್ಪಷ್ಟಗೊಳಿಸಿದ್ದಾರೆ. ತತ್ವಜ್ಞಾನದಿಂದೊಡಗೂಡಿ ವೇದಾಂತವನ್ನು ತಿಳಿಸುವಂಥ ಅನೇಕ ಮನೋರಂಜಕವಾದ ಕಥೆಗಳು ಭಾರತದಲ್ಲುಂಟು; ಆದರೂ ತಿಳಿದವರಿಗೆ ತಿಳಿವಿನ ಹುಚ್ಚುಹಿಡಿಸುವಂಥ, ತತ್ವಜ್ಞಾನಪ್ರಧಾನವಾದಂಥ ಭಾರತದೊಳಗಿರುವ ಗ್ರಂಥವೆಂದರೆ ಶ್ರೀಭಗವದ್ಗೀತೆಯೇ ಸರಿ. ಆರ್ಯತತ್ವಜ್ಞಾನಪ್ರಧಾನಗಳಾದ ಗ್ರಂಥಗಳಲ್ಲಿ ಭಗವದ್ಗೀತೆಯು ಕಿರೀಟಪ್ರಾಯವಾಗಿದೆ. ಈ ತತ್ವಜ್ಞಾನಕ್ಕೆ ಪಂಚೇಂದ್ರಿಯಗಳು ಹಾಗೂ ಪಂಚಮಹಾಭೂತಗಳು ಇವೇ ಮೂಲಾಕ್ಷರಗಳು. ನೀರಿನ ಮೇಲಣ ಗುಳ್ಳೆಯಂತೆ, ಈ ಪಂಚಮಹಾಭೂತಾತ್ಮಕವಾದ ದೇಹವು ಕ್ಷಣಿಕವಿದ್ದು, ಅದರಲ್ಲಿಯ ಆತ್ಮನು ಇವೆಲ್ಲವುಗಳಿಂದ ಬೇರೆಯಾಗಿಯೂ, ಅವಿಕಾರಿಯಾಗಿಯೂ ಇರುತ್ತಾನೆಂದು ಆರ್ಯರ ತತ್ವಜ್ಞಾನದ ಸಿದ್ಧಾಂತವು. ಈ ಆತ್ಮನು ಸೃಷ್ಟಿಯ ಒಳಹೊರಗೆ ಹಾಸುಹೊಕ್ಕಾಗಿ ವ್ಯಾಪಿಸಿಕೊಂಡಿರುವನೆಂದೂ, ಆತನ ಜ್ಞಾನವನ್ನು ಪಡೆದು ಪ್ರತಿಯೊಬ್ಬನು ಆತನ

ನೇವೆಯೆಂದು ನಿಷ್ಕಾಮದಿಂದ ಕರ್ಮ ಮಾಡುತ್ತಿರಬೇಕೆಂದೇ ಗೀತೆಯು ತತ್ವಜ್ಞಾನದ ಗುಟ್ಟು.

ಭಗವಾನ್ ಶ್ರೀಕೃಷ್ಣ:— ಮಹಾಭಾರತದ ಕಾಳಗವು ಕುರು ಪಾಂಡವರಲ್ಲಿ ಜರಗಿದಂತೆ ಮೇಲ್ಮೇಲೆ ಕಂಡರೂ, ಈ ಮಹಾರಾಷ್ಟ್ರೀಯ ಸಂಗ್ರಾಮದ ಸೂತ್ರಚಾಲಕನು ಭಗವಾನ್ ಶ್ರೀಕೃಷ್ಣನೆಂದು ಹೇಳ ಬಹುದು. "ಚೆಲುವರ ಚೆಲ್ವನೂ, ಚಸ್ನಿಗರ ಚಸ್ನನೂ, ಮಲ್ಲರ ಮಲ್ಲನೂ, ಬಲ್ಲಿದರ ಬಲ್ಲನೂ, ವೀರರ ವೀರನೂ, ಅರಸರ ಅರಸನೂ, ಜ್ಞಾನಿಗಳ ಜ್ಞಾನಿಯೂ, ಅಳಿನಾಳನೂ," ಆಗಿದ್ದ, ಶ್ರೀಕೃಷ್ಣನ ಕಾರ್ಯವೆಂದರೆ, ಮಹಾಭಾರತದೊಳಗೆ ಅಷ್ಟಿಷ್ಟಿಲ್ಲ; ಹೆಜ್ಜೆಹೆಜ್ಜೆಗೆ ಶ್ರೀಕೃಷ್ಣನು ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ಮಿಂಚಿನಂತೆ ಓಡ್ಯಾಡಿ ಏನಾದರೂ ಕೌರವ ಪಾಂಡವರಲ್ಲಿ ಕದನವಾಗಬಾರದಂತೆ ಯತ್ನಿಸುತ್ತಿರುವದನ್ನು ನಾವು ಕಾಣಬಹುದು; ನಾವು ಹಿಂದೆ ಹೇಳಿದಂತೆ, ರಾಮಾಯಣದೊಳಗೆ ಹೇಗೋ ಹಾಗೆ ಈಗ್ಯೂ, ಶ್ರೀಕೃಷ್ಣನಿಗೆ ಭೂಭಾರವನ್ನು ಹಗುರು ಮಾಡಬೇಕಾದ್ದರಿಂದ ಎಲ್ಲರೊಳಗಿದ್ದು ತಾನೇ ಅವರ ಕೈಯಿಂದ ಕೆಲಸ ಮಾಡಲಿಕ್ಕೆ ಪ್ರೇರಣೆ ಮಾಡಿ, ಮತ್ತೆ ತಾನು ಬೇರೆ ಇದ್ದವನಂತೆ ನಟಿಸಿದ್ದಾನೆ. ಶ್ರೀಕೃಷ್ಣಾವತಾರದೊಳಗೆ ಭಗವಾನ್ ನಾರಾಯಣನು ಪೂರ್ಣಾಂಶದಿಂದ ಅಂದರೆ ಪೂರ್ಣ ಬ್ರಹ್ಮನಾಗಿಯೇ ಅವತರಿಸಿದ್ದನೆಂದು ಭಾರತವು ಉದ್ಘೋಷಿಸುತ್ತಿದೆ. ಧರ್ಮಾವತಾರರಾದ ಪಾಂಡವರನ್ನು ಎತ್ತಿಹಿಡಿದು ಈ ಕಾರ್ಯದೊಳಗೆ ಭಗವಂತನು ಉನ್ಮತ್ತರಾದ ಕೌರವರನ್ನು ಪಾತಾಳಕ್ಕೆ ಮೆಟ್ಟಿದನು; ಪಾಂಡವನೆಂದರೆ ತನ್ನ ಜೀವಪ್ರಾಣರೆಂದು ಶ್ರೀಕೃಷ್ಣನು ಎಷ್ಟೋ ಕಡೆಯಲ್ಲಿ ಉಸುರಿರುವನು. ಇದಕ್ಕೆ ಬಲವಾದ ಪ್ರಮಾಣವಾಗಿದೆ; ಮತ್ತೆ ಪಾಂಡವರೊಳಗೂ ಅರ್ಜುನನೆಂದರೆ ತನ್ನ ಜೀವದ ಜೀವನಾಗಿರುವದರಿಂದ ಶ್ರೀಕೃಷ್ಣನು ಯುದ್ಧದೊಳಗೆ ತಾನು ಸ್ವತಃ ಶಸ್ತ್ರವನ್ನು ಕೈಯಲ್ಲಿ ಹಿಡಿಯದೆ ಅರ್ಜುನನ ರಥಹೊಡೆಯುವ ಸಾರಥಿಯಾಗಿ, ಯುದ್ಧವೇ ಒಲ್ಲೆಂದು ಗಂಡು ಗೆಟ್ಟಿರುವ ಅರ್ಜುನನಿಗೆ ರಣಾಂಗಣದೊಳಗೆ ಗೀತಾಜ್ಞಾನೋಪದೇಶದಿಂದ ಗಂಡುಗೊಳಿಸಿ ಅಹಂಕಾರವನ್ನು ಹುರಿದು ಭಗವಂತನೇ ಎಲ್ಲ

ವನ್ನು ಮಾಡುವವನು, ಮಾಡಿಸುವನೆಂದು ತಿಳಿದು ಕರ್ಮಮಾಡೆಂದು ಕ್ಷಾತ್ರಕರ್ಮಕ್ಕೆ ಹುರಿಗೊಳಿಸಿದನು; ! ಪೂರ್ಣ ಬ್ರಹ್ಮನಾದ ಶ್ರೀಕೃಷ್ಣನಿಗೆ ತನ್ನ ಭಕುತನ ಸಾರಥ್ಯಕರ್ಮವನ್ನು ಅಂಗೀಕರಿಸಲಿಕ್ಕೆ ಹಚ್ಚುವ ಆ ಮಂಗಲ ಪ್ರಸಂಗವೆಂತಹದು? ಭಾರತಕಾಳಗದ ನಿಮಿತ್ತದಿಂದ ಇಡೀ ಜಗತ್ತಿಗೆನೇ ಸಂತೈಸುವಂಥದೊಂದು ಗೀತಾಮೃತವು ದೊರಕಿತು; ಈ ಗೀತಾಮೃತದಿಂದ ಹಿಂದೂಜನರ ತತ್ವಜ್ಞಾನವು ಹಣ್ಣುಗೊಂಡು ಅದು ಸಾಕ್ಷಾತ್ ಭಗವಂತನ ಬಾಯಿಂದ ಸುರಿಯಹತ್ತಿತು. ಭಾರತೀಯರಿಗೆ ಇದೇನು ಸಾಮಾನ್ಯ ಲಾಭವೇ? ಧರ್ಮಕ್ಕೆ ಇಳಿಗಾಲ ಒದಗಿದಾಗ ನಾನು ಮಾನವರೂಪತೊಟ್ಟು ಧರ್ಮೋದ್ಧರ್ತನಿಗಾಗಿಯೂ, ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿಯೂ ಮೈಗೊಂಡು ಬರುತ್ತೇನೆಂದು ಭಗವಂತನು ಗೀತೆಯಲ್ಲಿ ಘಂಟಾಘೋಷವಾಗಿ ತನ್ನ ಬಾಯಾರೆ ಡಂಗುರ ಹೊಯ್ಸಿದ್ದೇ ಭಾರತೀಯರಿಗೆ ಶಾಶ್ವತವಾದ ಶಾಂತಿಯನ್ನು ಕೊಡುವಂಥ ಅಮೃತವಾಣಿಯಾಗಿದೆ. ಈ ರೀತಿಯಾಗಿ ಭಾರತೀಯರ ಇತಿಹಾಸವೆಂದರೆ, ಬರಿಯ ಬಾಯಮಾತಲ್ಲದೆ, ಆದರೊಳಗೆ ತತ್ವಜ್ಞಾನದ ತಿರುಳು ಬಳಗೊಂಡಿದೆ. ಜಗತ್ತಿನ ನೆಮ್ಮದಿಗಾಗಿ ಭಗವಂತನು ಶ್ರೀಕೃಷ್ಣರೂಪದಿಂದ ಮೂರ್ತಿಗೊಂಡವನಾಗಿ ಪ್ರಿಯ ಗೆಳೆಯನಾದ ಅರ್ಜುನನನ್ನು ಮುಂದುಮಾಡಿಕೊಂಡು ಗೀತಾಮೃತವನ್ನು ಹೇಗೆ ಕರೆದನೋ, ಹಾಗೇ ಪುಣ್ಯವಂತರಾದ ಭಾರತೀಯರನ್ನು ನಿಮಿತ್ತಮಾಡಿ, ಇಡೀ ಪ್ರಪಂಚದ ಕ್ಷೇಮಕ್ಕಾಗಿಯೇ ಅದನ್ನು ಹೊರಪಡಿಸಿದ್ದಕ್ಕಾಗಿ ಭಾರತೀಯರು ಗರ್ವಪಟ್ಟು ಅದರ ರಹಸ್ಯವನ್ನು ಜಗತ್ತಿನ ಎಲ್ಲ ಅಜ್ಞಾ ಹಾಗೂ ಅಹಂಕಾರ ಮಡುವಿನಲ್ಲಿ ಶಿಲುಕಿ ತೊಳಲುತ್ತಿರುವ ಜನಾಂಗಗಳಿಗೆ ತಿಳಿಸಿ ಜಾಗೃತಿಗೊಳಿಸಬೇಕಾಗಿದೆ. ಆ ಚಿನ್ನಗಾಲವು ಇಂದಿಲ್ಲ ನಾಳೆ ಬಂದೇಬರುವದು; ಆದರೆ ಎಂದು ಬರುವದೆಂಬುದನ್ನು ಮಾತ್ರ ಮನುಷ್ಯನಿಗೆ ಹೇಳಲು ಕಷ್ಟಸಾಧ್ಯ.

ಶ್ರೀವೇದವ್ಯಾಸರ ಅಲ್ಪ ಚರಿತ್ರೆ:—ಭಾರತಕಾಲದೊಳಗೆ ಬಾಳಿದ ಪವಾಡಪುರುಷರಲ್ಲಿ ಶ್ರೀವೇದವ್ಯಾಸರೊಬ್ಬರು; ಶ್ರೀವೇದವ್ಯಾಸರೆಂದರೆ ಭಾರತಕಾಲೀನ ಜನಾಂಗದ ಬುದ್ಧಿ; ಆದುದರಿಂದಲೇ ಭಗವಾನ್

ಶ್ರೀಕೃಷ್ಣನು ಶ್ರೀಭಗವದ್ಗೀತೆಯಲ್ಲಿ "ಮುನಿಗಳಲ್ಲಿ ಶ್ರೇಷ್ಠನಾದ ವ್ಯಾಸನೇ ನಾನು" ಎಂದು ನುಡಿದಿರುವನು. ಭಾರತದ ಮಹೋನ್ನತವಾದ ಇತಿಹಾಸಮಂಡಲದೊಳಗೆ ಶ್ರೀವೇದವ್ಯಾಸರ ಹೆಸರು ಬೆಳಗಿನ ತಾರೆಯಂತೆ ಬೆಳಗುತ್ತಿದೆ. ಶ್ರೀಪರಾಶರಮುನಿಗಳೇ ಇವರ ಜನಕರು. ತಮ್ಮ ದೈವಿಕವಾದದೃಷ್ಟಿಯಿಂದ ಶ್ರೀವೇದವ್ಯಾಸರು ಮಹಾಭಾರತವೆಂಬ ಹಿರಿದಾದ ನಾಡಿಗರ ಇತಿಹಾಸದಂಧ ಹೆಬ್ಬಿತ್ತಿಗೆಯನ್ನೂ ಮತ್ಸ್ಯ, ಕೂರ್ಮ, ವರಾಹ ಅವೇ ಮುಂತಾದ ಹದಿನೆಂಟು ಮಹಾಪುರಾಣಗಳನ್ನೂ ಬರೆದು ಆಧುನಿಕ ಇತಿಹಾಸಗಾರರಿಗೆ ಗುರುವಾಗಿದ್ದಾರೆ. ಇವರಿಂದ ಬರೆಯಲ್ಪಟ್ಟ ಗ್ರಂಥಸಂಗ್ರಹವನ್ನು ನೋಡಿದರೆ ಅದೊಂದು ಚಿಕ್ಕ ಬೆಟ್ಟವಾಗಬಹುದು. ಇಂತಹ ಬೌದ್ಧಿಕ-ಮಹಾ-ವೀರರು ಭರತಖಂಡದೊಳಗೆ ಇವರೇ ಕೊನೆಯವರು. ಭಾರತಗ್ರಂಥವನ್ನು ಬರೆಯುವಾಗ ಸಾಕ್ಷಾತ್ ವಿದ್ಯಾಧಿದೇವತೆಯಾದ ಶ್ರೀಗಣೇಶನು ಮಂಡೆಗಾಲಿಟ್ಟುಕೊಂಡು ಭಾರತನನ್ನು ಬರೆಯುತ್ತಿದ್ದನೆಂದು ಹೇಳಿಯಿದೆ. ಶ್ರೀವೇದವ್ಯಾಸರಂಧ ಬೃಹಸ್ಪತಿಗಳು ಹುಟ್ಟದಿರಂತಲೇ ನಮಗೀಗ ಭಾರತೇತಿಹಾಸವು ಓದಲು ಸಿಕ್ಕುತ್ತದೆ. ಈ ಧರ್ಮಾಚಾರ್ಯರಿಂದ ನಮಗಾದ ಮಹೋಪಕಾರವನ್ನು ಎಣಿಸಲಳವಲ್ಲ.

ಆತ್ಮನನ್ನು ಹುಡುಕುವದೇ ತತ್ವಜ್ಞಾನದ ಉದ್ದೇಶವು:-

ಮನುಷ್ಯನು ಸತ್ತನೆಂದರೆ, ಆತ್ಮವು ಇರುತ್ತದೆಂದು ಕೆಲವರೂ, ಇರುವದಿಲ್ಲವೆಂದು ಕೆಲವರೂ, ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವು ಉಪನಿಷತ್ತಿನಲ್ಲಿ ಹೇಳಿಯಿದೆ. ಮತ್ತು ಅದನ್ನು ಆಲ್ಲಿಯೇ ಯಮನು ನಚಿಕೇತನಿಗೆ ಉಪದೇಶಮಾಡುವಕಾಲಕ್ಕೆ ಆತ್ಮನು ಅಮರನೆಂದು ಸಿದ್ಧಾಂತಕಟ್ಟಿದ್ದಾನೆ. ನಾಸ್ತಿಕರನ್ನುಳಿದು ಹಿಂದೂದೇಶದ ಮಿಕ್ಕ ತತ್ವಜ್ಞಾನಿಗಳೆಲ್ಲರೂ ಆತ್ಮನು ಇರುವನೆಂಬುದಿಷ್ಟೇ ಅಲ್ಲದೆ ಆತ್ಮನು ಅಮರನೆಂದೂ ಮನ್ನಿಸಿರುವರು. ಆದರೆ 'ಆತ್ಮ' ವೆಂಬ ವಸ್ತುವಿನ ಬಗ್ಗೆ ತತ್ವವೆತ್ತರಲ್ಲಿ ಮತಭೇದವುಂಟಾಗಿ, ಅವು ಸಾಂಖ್ಯ, ಯೋಗ, ಬೌದ್ಧ, ಜೈನ, ವೇದಾಂತ ಈ ಮೇರೆಗೆ ಭಿನ್ನ ಭಿನ್ನ ಪಂಗಡಗಳಾದವು. ಉಪನಿಷತ್ತುಗಳಲ್ಲಿ ಆತ್ಮನ ಬಗ್ಗೆ ಘನವಾದ ಚರ್ಚೆ ನಡೆದು ಆತ್ಮಚರ್ಚೆ

ಯನ್ನು ಉಪನಿಷತ್ಕಾರರು ಒಹುಮಟ್ಟಿಗೆ ಒಂದು ನಿಲುಗಡೆಗೆ ತಂದಿಟ್ಟಿದ್ದರು. ಆದರೆ ಬುದ್ಧಿ ವಿಕಾಸವಾದಂತೆಲ್ಲ ಆರ್ಯರಲ್ಲಿ ಈ ಚರ್ಚೆಯು ಹೆಚ್ಚು ಕೂಲಂಕಷವಾಗಿ ನಡೆದು ಅವು ಒಂದೊಂದು ವಿಧದ ದರ್ಶನಗಳೇ ಆದವು. ಇಡೀ ಆರ್ಯತತ್ವಜ್ಞಾನವೆಂಬುದೇ ಭಾರತೀಯರ ತಿಳಿಯಾದ ಮೆದುಳಿನಿಂದ ಮಾನವಜಾತಿಯ ಕ್ಷೇಮಕ್ಕಾಗಿ ಹೊರಟಿರುವ ಗಂಗೆಯೆಂದೆಣಿಸಿದರೂ, ದರ್ಶನಕಾರರು ತಮ್ಮ ಷಡ್ದರ್ಶನಗಳಲ್ಲಿ ಆರ್ಯರ ಮೆದುಳನ್ನು ಮೀರಿ ನಡೆಯಿಸಿದ್ದಾರೆ. ಅದರೊಳಗೆ ಅವರ ಮೆದುಳಿನ ಕೌಶಲ್ಯವು ತೋರಿಬರುತ್ತದೆ; ಅವರ ತರ್ಕಪ್ರಧಾನವಾದ ವಿಚಾರನಾಮರ್ಥ್ಯದ ಅರಿವುಂಟಾಗುತ್ತದೆ.

ಸೂತ್ರಕಾಲ:— ಆರ್ಯರು ವಿದ್ಯೆಯಲ್ಲಿ ತಮ್ಮ ವೈಶಿಷ್ಟ್ಯಗಳನ್ನು ತೋರಿಸುತ್ತಲೂ, ಹೆಚ್ಚುಕಡಿಮೆ ಮಾಡುತ್ತಲೂ ಹೋದಂತೆಲ್ಲ ಒಂದೊಂದು ಕಾಲ ವಿಭಾಗಗಳಾಗಿವೆ; ಇವುಗಳನ್ನು ಸಂಹಿತಾಕಾಲ, ಬ್ರಾಹ್ಮಣಕಾಲ, ಉಪನಿಷತ್ಕಾಲ ಸೂತ್ರಕಾಲವೆಂದು ಸಾಮಾನ್ಯವಾಗಿ ತಿಳಿದವರು ವಿಂಗಡಿಸಿಟ್ಟಿದ್ದಾರೆ. ಮೇಲಿನ ಕಾಲಗಳಲ್ಲಿ ಮೂರು ಕಾಲಗಳ ವಿಚಾರವಾಗಿ ಹಿಂದೆ ಹೇಳಲಾಗಿದೆ. ಇನ್ನು ಸೂತ್ರಕಾಲ. ಈ ಕಾಲದಲ್ಲಿ ಆರ್ಯರ ಪಾಂಡಿತ್ಯವು, ಅಥವಾ ಬುದ್ಧಿಶಕ್ತಿಯು ಅವರು ಇಚ್ಛಿಸಿದಂತೆ, ಮೇಣದಂತೆ ಮೆತ್ತಗಾಗಿ ಮಣಿಯುವಷ್ಟು, ಅವರ ಅಧೀನವಾಗಿದ್ದಿತು; ಅತಿಶಯ ಅರ್ಥಗರ್ಭಿತವಾದ ವಿಚಾರಗಳನ್ನು ವಿಸ್ತರಿಸಿ ಹೇಳದೆ, ಸೂತ್ರರೂಪವಾಗಿ ನಾಲ್ಕೇ ಶಬ್ದಗಳಲ್ಲಿ ಅಡಕಗೊಳಿಸುವದೇನೂ ಸಾಮಾನ್ಯ ಕಾರ್ಯವಲ್ಲ; ಇಂಥ ಘನವೂ, ಇನ್ನು ವರೆಗೆ ಭೂಮಂಡಲದಲ್ಲಿರುವ ಯಾವ ಜನಾಂಗದ ಭಾಷೆಯಲ್ಲಿಯೂ, ಕಾಣಿಸದಂಥ ವಿಶೇಷಕಾರ್ಯವನ್ನು ಆರ್ಯರು ನಿರ್ಮಿಸಿರುವದು ಆರ್ಯರಲ್ಲಿ ನೆಲಸಿರುವ ವಿಲಕ್ಷಣವಾದ ಮೇಧಾಶಕ್ತಿಯ ದ್ಯೋತಕವಾಗಿದೆ. ವಿದ್ಯೆಯಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ, ಶಾಸ್ತ್ರರಚನೆಯ ಪದ್ಧತಿಯಲ್ಲಾಗಲಿ, ತತ್ವಜ್ಞಾನದಲ್ಲಾಗಲಿ, ಆರ್ಯರ ವಿಚಾರಪದ್ಧತಿಯು ಸ್ವತಂತ್ರವೇ ಆಗಿದೆ. ಜಗತ್ತಿನೊಳಗಿರುವ ಬೇರೆ ಜನಾಂಗದವರಿಂದ ಆರ್ಯರು ಇಂಥದೊಂದು ವಿದ್ಯೆಯನ್ನು ಕಲಿತು ಅದನ್ನು ಅನು

ಕರಿಸಿದರೆಂದು ಹೇಳಲಿಕ್ಕೆ ಇಲ್ಲ; ಅಂದಬಳಿಕ ಆರ್ಯರ ಬುದ್ಧಿಬಲವು ಆ ಕಾಲಕ್ಕೆ ಎಷ್ಟು ಸರ್ವಂಕಷವೂ, ತೇಜಃಪುಂಜವೂ, ಸ್ವತಂತ್ರವೂ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಮೇರೆಗೆ ಪೃಥ್ವಿಯ ಮೇಲಿನ ಜನಾಂಗಗಳು ಒಂದಿಲ್ಲೊಂದು ಬಗೆಯಿಂದ ಆರ್ಯರಿಗೆ ಋಣಿಯಾಗಿವೆ. ಅವರ ನಾಗರಿಕತೆಯಲ್ಲಿ ಆರ್ಯನಾಗರಿಕತೆಯ ಹೆಗ್ಗುರುತುಗಳು ಕಂಗೊಳಿಸುತ್ತಿವೆ; ಇರಲಿ. ಸೂತ್ರಕಾಲದೊಳಗೆ ಆರ್ಯರು ಧರ್ಮ, ವೇದಾಂತ, ಲೌಕಿಕವಾದ ಗ್ರಂಥಗಳನ್ನೆಲ್ಲ ಸೂತ್ರಭಾಷೆಯಲ್ಲಿಯೇ ಬರೆದಿಟ್ಟರು. ಬುದ್ಧಿಪ್ರಧಾನವಾದ ಷಡ್ದರ್ಶನಗಳೂ, ಶಿಕ್ಷಾ, ಕಲ್ಪ, ವ್ಯಾಕರಣ ಮುಂತಾದ ಶಾಸ್ತ್ರಗಳೂ, ಸಾಮಾಜಿಕ ಧರ್ಮಪ್ರಧಾನವಾದ ಶ್ರೌತ ಹಾಗೂ ಗೃಹ್ಯಸೂತ್ರಗಳೂ, ಧರ್ಮಸೂತ್ರಗಳೂ, ಅಧ್ಯಾತ್ಮಪ್ರಧಾನವಾದ ವೇದಾಂತಸೂತ್ರಗಳೂ ಸೂತ್ರಕಾಲದಲ್ಲಿಯೇ ಹುಟ್ಟಿದ ಗ್ರಂಥಗಳಾಗಿವೆ.

. ಉಪವೇದಗಳು ಅಥವಾ ವಿದ್ಯೆಗಳು:– ನಾಲ್ಕು ವೇದಗಳಲ್ಲದೆ ಮತ್ತೆ ನಾಲ್ಕು ಉಪವೇದಗಳುಂಟು; ಅವು ಯಾವವೆಂದರೆ ಧನುರ್ವೇದ, ಗಾಂಧರ್ವವೇದ, ಆಯುರ್ವೇದ, ಅಥರ್ವವೇದ. ಮಾನವಜಾತಿಗೆ ಜೀವನಪ್ರದವಾಗಿರುವ ಸ್ಥಿತಿಯೊಂದು ವಿದ್ಯೆಯ ಶಾಖೆಗಳಿಗೆ ಆರ್ಯರು 'ವೇದ' ವೆಂಬ ಹೆಸರಿಟ್ಟಿದ್ದರಮೇಲಿಂದ ವಿದ್ಯೆಯ ವಿಷಯದಲ್ಲಿ ಆರ್ಯರ ಭಾವನೆಯು ಎಷ್ಟು ಘನವಾಗಿತ್ತೆಂಬುದು ಸ್ಪಷ್ಟವಾಗಿದೆ. ಧನುರ್ವೇದಕ್ಕೆ ವಿಶ್ವಾಮಿತ್ರ ಹಾಗೂ ಭಾರದ್ವಾಜಋಷಿಗಳೇ ಗುರುಗಳು; ನಾರದ, ಭರತ, ಪವನ ಮೊದಲಾದವರು ಗಾಂಧರ್ವವೇದದ ಆದಿಗರು; ಆಯುರ್ವೇದವನ್ನು ಅತ್ರೇಯಋಷಿಗಳು ತಮ್ಮ ಶಿಷ್ಯರಾದ ಜತುಕರ್ಣ, ಪರಾಶರ, ಹಾರೀತ ಮೊದಲಾದವರಿಗೆ ಕಲಿಸಿದರು; ಅಥರ್ವವೇದದೊಳಗೆ ಅನೇಕ ಜೀನೆಗಳ ಉಪಾಯಗಳನ್ನು ಹೇಳಿದ್ದು, ಶಸ್ತ್ರಕ್ರಿಯೆಯ ಚಿಕಿತ್ಸೆಯಲ್ಲಿಯೂ ಆರ್ಯರು ಬಹು ಚತುರರಿದ್ದರೆಂಬ ಬಗ್ಗೆ ನಾನ್ಹಿಗಳಿವೆ; ಅಥರ್ವವೇದ ಅಂದರೆ ಶಿಲ್ಪವಿದ್ಯೆ.)

ವೈದಿಕಸಾಹಿತ್ಯ:– ಆರ್ಯರು ವಿದ್ಯೆಯಲ್ಲಿ ಪರಾವಿದ್ಯೆ, ಅಪರಾವಿದ್ಯೆ ಎಂಬೆರಡು ಭೇದಗಳನ್ನು ಕಲ್ಪಿಸಿರುವರು; ಪರಾವಿದ್ಯೆಯೆಂದರೆ

ಅಧ್ಯಾತ್ಮವಿದ್ಯೆಯು; ಅಪರಾವಿದ್ಯೆಯಲ್ಲಿ, ಶಿಕ್ಷಾ, ಕಲ್ಪ, ನಿರುಕ್ತ, ಛಂದಸ್ಸು, ವ್ಯಾಕರಣ, ಜ್ಯೋತಿಷ ಅವೆಲ್ಲವು ಒಳಗೊಳ್ಳುತ್ತವೆ. ಶಿಕ್ಷಾ– ವೇದದ, ಉದಾತ್ತ, ಅನುದಾತ್ತ, ಸ್ವರಗಳನ್ನೂ, ಉಚ್ಚಾರಣೆಯನ್ನೂ ತಿಳಿಸುವ ಶಾಸ್ತ್ರಗ್ರಂಥ. ಕಲ್ಪ– ವೈದಿಕಕರ್ಮಗಳನ್ನು ಕ್ರಮ ಪೂರ್ವಕವಾಗಿ ಮಾಡುವ ಪ್ರಯೋಗಗಳನ್ನು ವಿವರಿಸುವಂಥ ಶಾಸ್ತ್ರವಿದು. ಇದನ್ನು ಆಶ್ವಲಾಯನ, ಆಪಸ್ತಂಬ, ಬೋಧಾಯನಋಷಿಗಳು ಬೇರೆ ಬೇರೆಯಾಗಿ ಕಟ್ಟಿದರು. ನಿರುಕ್ತ– ವೇದದಲ್ಲಿಯ ಬೇರೆ ಬೇರೆ ಶಬ್ದಗಳ ವ್ಯುತ್ಪತ್ತಿಯನ್ನೂ, ಅರ್ಥವನ್ನೂ, ನಿರ್ಧರಿಸಿಡುವ ಶಾಸ್ತ್ರರೂಪವಾದ ಕೋಶವು; ಇದನ್ನು ಯಾಸ್ಕಾಚಾರ್ಯರು ರಚಿಸಿದರು. ಛಂದಸ್ಸು– ವೇದದ ಋಕ್ಕುಗಳ ರಚನೆಯನ್ನೂ, ಕ್ರಮವನ್ನೂ ತಿಳಿಸುವಂಥ ಶಾಸ್ತ್ರವೇ ಛಂದಃಶಾಸ್ತ್ರವು. ಇದನ್ನು ಪಿಂಗಲಾಚಾರ್ಯರು ರಚಿಸಿದರು. ವ್ಯಾಕರಣ– ಭಾಷೆಯ ಪದ್ಧತಿಯನ್ನೂ, ಶಬ್ದಾರ್ಥದ ಹುಟ್ಟನ್ನೂ ತಿಳಿಸುವ ಗ್ರಂಥವೇ ವ್ಯಾಕರಣಶಾಸ್ತ್ರವು. ಶಾಕಟಾಯನವಾಣಿನಿ ಆಚಾರ್ಯರೇ ಇದರ ಪ್ರವರ್ತಕರು. ಪ್ರಾಚೀನ ಜನಾಂಗಗಳಲ್ಲಿ ಸ್ವಭಾಷೆಯ ಶಬ್ದಶಾಸ್ತ್ರವನ್ನು ಮೊದಲು ರಚಿಸಿದವರು ಆರ್ಯರೇ. ಜ್ಯೋತಿಷ– ವೈದಿಕಕರ್ಮಗಳನ್ನೂ, ಯಜ್ಞಾದಿಗಳನ್ನೂ ಇಂತಿಂತಹ ಕಾಲದಲ್ಲಿಯೇ ನಡಿಸಲಿಕ್ಕೆಬೇಕೆಂದು ಆರ್ಯರು ಅನೇಕ ಗ್ರಂಥಗಳನ್ನು ಬರೆದರು. ಈ ಗ್ರಂಥಕ್ಕೆ ಜ್ಯೋತಿಷಶಾಸ್ತ್ರವೆಂದು ಹೆಸರು. ಗರ್ಗಾಚಾರ್ಯರೇ ಈ ಶಾಸ್ತ್ರಕ್ಕೆ ಮುಂದಾಳುಗಳು; ಮುಂದೆ ಮುಂದೆ ಸರಿಯಾದ ಕಾಲಕ್ರಮವನ್ನು ಗೊತ್ತುಹಿಡಿಯಲಿಕ್ಕೆಂದು ಸೂರ್ಯ,ಚಂದ್ರ, ಹಾಗು ಗ್ರಹಗತಿಗಳನ್ನು ನೋಡುವ ಪದ್ಧತಿಯು ಪ್ರಬಲಗೊಂಡಿತು. ಆರ್ಯರು ಒಂದು ವರ್ಷದಲ್ಲಿ, ೧೨ ತಿಂಗಳಗಳನ್ನು ಕಲ್ಪಿಸಿ, ಹುಣ್ಣಿಮೆಯ ಚಂದ್ರನು ಯಾವ ನಕ್ಷತ್ರದಲ್ಲಿರುವನೋ, ಆ ನಕ್ಷತ್ರದ ಹೆಸರನ್ನೇ ಆಯಾ ತಿಂಗಳಗಳಿಗೆ ಕೊಟ್ಟರು. ಚಂದ್ರನ ಗತಿಯನ್ನನುಸರಿಸಿ, ಕಾಲಮಾನವನ್ನು ಎಣಿಸುವ ಪದ್ಧತಿಗೆ ಚಾಂದ್ರಮಾನವೆಂದೂ, ಸೂರ್ಯನ ಗತಿಯನ್ನನುಸರಿಸಿ, ಲೆಕ್ಕ ಮಾಡುವದಕ್ಕೆ ಸೌರಮಾನವೆಂದೂ ಹೆಸರು. ಇದೇ ಕಾಲಕ್ಕೆ ಆರ್ಯರು ಕಾಲವನ್ನು ನಿರ್ಣ

ಯಿಸಲಿಕ್ಕೆಂದು ಕೃತ, ತ್ರೇತಾ, ದ್ವಾಪರ, ಕಲ್ಕಿ ಎಂಬ ನಾಲ್ಕು ಯುಗಗಳನ್ನಾಗಿ ಮಾಡಿ, ಕಲಿಯುಗದ ಕಾಲಮಾನವು ೪,೩೦೦೦ ವರ್ಷವೆಂದೂ, ದ್ವಾಪರದ್ದು ಇದರ ಎರಡಷ್ಟೆಂದೂ, ತ್ರೇತಾಯುಗದ್ದು ಮೂರರಷ್ಟೆಂದೂ, ಕೃತಯುಗದ್ದು ನಾಲ್ಕರಷ್ಟೆಂದೂ ನಿರ್ಣಯಿಸಿದ್ದಾರೆ.

ಷಡ್ದರ್ಶನಗಳು:– ಆರ್ಯರ ಮೆದುಳಿನ ಬಲವು, ಹಾಗೂ ಓಜಸ್ಸು ಎಷ್ಟು ಸೂಕ್ಷ್ಮವಾಗಿರುವದೆಂಬದನ್ನು ತೋರಿಸಲಿಕ್ಕೆ ಷಡ್ದರ್ಶನಗಳೇ ಸಾಕ್ಷಿಯಾಗಿವೆ. ಆರ್ಯರ ಗ್ರಂಥಭಾಂಡಾರದೊಳಗೆ ಷಡ್ದರ್ಶನಗಳಂಥ ತರ್ಕ ಹಾಗೂ ಬುದ್ಧಿಪ್ರದಾನವಾದ ಬೇರೆ ಗ್ರಂಥಗಳೇ ಇಲ್ಲವೆಂದರೂ ಅತ್ಯುಕ್ತಿಯಾಗದು; ಷಡ್ದರ್ಶನಗಳಿಗೆ ಉಪನಿಷತ್ತುಗಳ ಬೆಂಬಲವಿದೆ. ದರ್ಶನಕಾರರು ಉಪನಿಷತ್ತುಗಳನ್ನು ಪೂಜ್ಯವೆಂದೆಣಿಸುತ್ತಾರೆ. ಷಡ್ದರ್ಶನಗಳು ಯಾವುವೆಂದರೆ, ಸಾಂಖ್ಯ; ಯೋಗ, ನ್ಯಾಯ, ವೈಶೇಷಿಕ ಪೂರ್ವಮೀಮಾಂಸೆ, ಉತ್ತರಮೀಮಾಂಸೆ ಇವುಗಳೇ. ಇವೆಲ್ಲವೂ ಸೂತ್ರಬದ್ಧವಾಗಿವೆ. ಈ ಕಾಲಕ್ಕೆ ಭಾರತೀಯರಿಗೆ ಯಾವುದೊಂದು ಮಹತ್ಪದ ಗ್ರಂಥವನ್ನು ಬರೆಯುವದಾದರೆ ಸೂತ್ರರೂಪವಾಗಿಯೇ ಬರೆಯಬೇಕೆಂಬುದೊಂದು ಗಾಳಿಬೀಸಿತ್ತು. ಮನುಷ್ಯನ ವಿಚಾರ ಸಾಮರ್ಥ್ಯವಾಗಲಿ, ಭಾಷೆಯಾಗಲಿ, ಎಷ್ಟು ಉಚ್ಚಸ್ಥಿತಿಗೆ ಮುಟ್ಟಿದ್ದುದೆಂಬುದಕ್ಕೆ ಈ ಸೂತ್ರಗಳ ಕಾಲವೂ ಒಂದು ಬಗೆಯಿಂದ ಮಹತ್ಪದ್ಧಾಗಿದೆ. ಒಳ್ಳೇ ವಿಸ್ತೃತವೂ, ಮಹತ್ವವೂ ಆದ ತತ್ವವಿಚಾರಗಳನ್ನು ಆರ್ಯರು ಸೂತ್ರರೂಪದೊಳಗೆ ಅಡಗಿಸಲಿಕ್ಕೆ ಮಾಡಿದ ಪ್ರಯತ್ನವು ಜಗತ್ತಿನ ಭಾಷಾಶಾಸ್ತ್ರದೊಳಗೇ ಹಿರಿದೂ ಅರಿದಾದುದೂ ಆಗಿದೆ. ಈ ಕಾಲದೊಳಗಾದ ಧರ್ಮಗ್ರಂಥಗಳೂ, ತತ್ವಶಾಸ್ತ್ರಗ್ರಂಥಗಳೂ, ಸೂತ್ರರೂಪವಾಗಿಯೇ ಆದವು. //

ಸಾಂಖ್ಯ:– ತತ್ವಶಾಸ್ತ್ರಗಳನ್ನು ವಿವರಿಸುವಂಥ ಆರು ಮತಗಳಲ್ಲಿ ಸಾಂಖ್ಯವೇ ತೀರ ಪ್ರಾಚೀನ ಮತವು. ಸಾಂಖ್ಯಶಾಸ್ತ್ರ ಪ್ರತಿಪಾದಕ ಕಪಿಲಋಷಿಗಳೂ ಅವರ ಶಿಷ್ಯರಾದ ಪಂಚಶಿಖರೂ, ಈ ಮತವನ್ನು ಹುಟ್ಟಿಸಿ ಬೆಳಿಸಿದರು. ಭಾವನಾಪ್ರಧಾನಗಳಾದ ವೇದಗಳು ವಿಚಾರ

ದೃಷ್ಟಿಯಿಂದ ಉಪನಿಷತ್ತಿನಲ್ಲಿ ನಾಲ್ಕು ಹೆಜ್ಜೆ ಮುಂದರಿದು ಹೋಗಿವೆ; ಮತ್ತು ಷಡ್ದರ್ಶನಗಳಲ್ಲಿ ಉಪನಿಷತ್ತಿನ ವಿಚಾರವು ಹೆಚ್ಚು ಆಳವಾಗಿಯೂ, ಸೂಕ್ಷ್ಮವಾಗಿಯೂ, ತಿಳಿಯುವಂತೆಯೂ, ಸ್ಪುಟವಾಗಿ ವಿವರಿಸಲಾಗಿದೆ; ಈ ಮೇರೆಗೆ, ಅವು ಬಂದನೆನ್ನಿಂದು ಬಜೆದು ಮನಸಿನಲ್ಲಿ ಮೂಡುವಂತೆ ಹೇಳುತ್ತಿವೆ. ವೈದಿಕತತ್ವಜ್ಞಾನವನ್ನು ಬುದ್ಧಿಯಿಂದ ಬಿಡಿಸಿ, ಮೇಳಗೂಡಿಸಲಿಕ್ಕೆ ಮೊದಲುಮಾಡಿದವರೆಂದರೆ ಸಾಂಖ್ಯ ಕಾರರೇ. ಸೃಷ್ಟಿ,ಸೃಷ್ಟಿಯುತ್ಪತ್ತಿಕ್ರಮ,ಆತ್ಮ, ಪಂಚಮಹಾಭೂತಗಳು ಇವೆಲ್ಲವುಗಳನ್ನೆಲ್ಲ ಸ್ಪಷ್ಟವಾಗಿ ಬಿಡಿಬಿಡಿಸಿ ವಿಂಗಡಿಸಿ ಹೇಳುವ ಕಾರ್ಯವನ್ನು ಮಾಡಿ ಕಪಿಲರು ಮಾನವಜಾತಿಯ ತಲೆಭಾರವನ್ನು ಹಗುರು ಮಾಡಿದ್ದಾರೆ. ಸಾಂಖ್ಯಶಾಸ್ತ್ರಕಾರರ ತರ್ಕಪ್ರಧಾನವಾದ ಬುದ್ಧಿಯ ನೆರಳು ಗ್ರೀಕರಲ್ಲಿ ಬಿದ್ದಿರುವದಾಗಿ ಕಾಣುತ್ತದೆ; ಪ್ರಸಿದ್ಧ ಗ್ರೀಕ ತತ್ವವೇತ್ತನಾದ ಪಾಯಥಾಗೋರಾಸನಿಗೆ ಈ ಶಾಸ್ತ್ರವೇ ಮಾರ್ಗದರ್ಶಕವಾಯಿತು. ಸಾಂಖ್ಯರು ದ್ವೈತರು; ಪ್ರಕೃತಿ, ಪುರುಷ ವಿವೇಕವೇ ಸಾಂಖ್ಯರ ಮಹಾಸಿದ್ಧಾಂತವು. ಪ್ರಕೃತಿಯು ಜಡ ಪದಾರ್ಥವಿದ್ದು, ಚೇತನಾತ್ಮಕವಾದ ಪುರುಷನು ಪ್ರಕೃತಿಯನ್ನು ತನ್ನ ಮನಬಂದಂತೆ ತಿರುಗಿಸುತ್ತಾನೆ. ಪುರುಷನು ಸ್ವತಂತ್ರನೂ, ಅವರ್ಣನೀಯನೂ, ಅಕ್ರಿಯನೂ ಆಗಿದ್ದು ಅತನ ನೋಟಮಾತ್ರದಿಂದಲೇ ಜಡವಾದ ಪ್ರಕೃತಿಯಲ್ಲಿ ಕ್ರಿಯೆ, ವಿಕಾರಾದಿಗಳು, ಭಾವನೆ, ವಿಚಾರಗಳೂ ಸ್ಫುರಿಸುತ್ತವೆ. ಈ ಮೇರೆಗೆ ಪ್ರಕೃತಿ ಪುರುಷ ಇವೆರಡೂ ತತ್ವಗಳಲ್ಲಿ ಸೂಚಿ, ಸೂಚಿಗಲ್ಲುಗಳಲ್ಲಿರುವ ಸಂಬಂಧವಿದೆಂದೂ ಈ ಪ್ರಪಂಚದೊಳಗಿನ ಪ್ರತಿಯೊಂದು ಪದಾರ್ಥವು ೨೫ ತತ್ವಗಳಿಂದ ಕೂಡಿ ಆಗಿರುವದೆಂದೂ, ಪ್ರಕೃತಿ-ಪುರುಷ-ವಿವೇಕದಿಂದಲೇ ಮೋಕ್ಷವೆಂದೂ ಸಾಂಖ್ಯರ ಸಿದ್ಧಾಂತವು. ಸಾಂಖ್ಯರು ನಿರೀಶ್ವರವಾದಿಗಳಾಗಿದ್ದರೂ, ಬೌದ್ಧಿಕ ದೃಷ್ಟಿಯಿಂದ ಅವರ ಸಿದ್ಧಾಂತದ ವಿಚಾರಸರಣಿಯು ಬಹು ಮಹತ್ವದ್ದಾಗಿದ್ದರಿಂದ ಆರ್ಯರ ತತ್ವಜ್ಞಾನದಲ್ಲಿ ಅದಕ್ಕೆ ಮೇಲಾದ ಗೌರವವಿತ್ತು; ಮತ್ತು ಈಗ್ಯೂ ಇದೆ. ಭಾವನಾವಿಶಿಷ್ಟರಾದ ಆರ್ಯರಿಗೆ ಬಹು ದಿವಸಗಳವರೆಗೆ ಸಾಂಖ್ಯಮತವು ಒಪ್ಪಲಿಲ್ಲ; ಆದರೆ ಕ್ರಮೇಣ

ಅವು ಅರ್ಜುನನಿಗೆ ಸಮ್ಮತವಾದವು; ಭಾಗುರಿಮುನಿಯು ಸಾಂಖ್ಯಸೂತ್ರಗಳಿಗೆ ಭಾಷ್ಯ ಬರೆದಿದ್ದಾನೆ.

ಯೋಗ:—ಹಿರಣ್ಯಗರ್ಭನೇ ಯೋಗಶಾಸ್ತ್ರದ ಮೂಲಪುರುಷನು. ಅದನ್ನು ಪತಂಜಲಮಹರ್ಷಿಗಳು ರಚಿಸಿದರು; ಈ ಶಾಸ್ತ್ರವು ಸಾಂಖ್ಯಕ್ಕಿಂತ ಪ್ರಾಚೀನವಾಗಿರುವಂತೆ ಕಾಣುತ್ತದೆ. ಯೋಗದವರು ಸಾಂಖ್ಯರಂತೆ, ಎಲ್ಲವನ್ನು ಒಪ್ಪಿಕೊಳ್ಳುವದಲ್ಲದೆ, ಈಶ್ವರನನ್ನು ಹೆಚ್ಚಾಗಿ ಹಿಡಿದು, ಅತನ ಅನುಗ್ರಹದಿಂದಲೇ ಮೋಕ್ಷವೆಂದು ಹೇಳಿ, ಚಿತ್ತದ ಹರಿದಾಟವನ್ನು ತಡೆದು ಅದನ್ನು ಒಂದೆಡೆಯಲ್ಲಿ ಕಟ್ಟಿಹಾಕಲಿಕ್ಕೆ ಕೆಲವು ಉಪಾಯಗಳನ್ನೂ ಯೋಗಶಾಸ್ತ್ರದೊಳಗೆ ನಿರೂಪಿಸಿದ್ದಾರೆ. ಯೋಗಸೂತ್ರಗಳಿಗೆ ಶ್ರೀವ್ಯಾಸಮುನಿಗಳ ಭಾಷ್ಯವಿದೆ. ಶಾರೀರಿಕ ಮಾನಸಿಕ ನೈರ್ಮಲ್ಯದಿಂದ ಧ್ಯಾನ ಧಾರಣಾದಿಗಳನ್ನು ನಡಿಸಿ, ಭಗವದ್ಧ್ಯಾನದಲ್ಲಿ ಸಮಾಧಿಸ್ಥನಾಗುವದೇ ಯೋಗಶಾಸ್ತ್ರದವರ ಗುರಿಯು.

ನ್ಯಾಯ:— ನ್ಯಾಯಶಾಸ್ತ್ರದಲ್ಲಿ ನ್ಯಾಯ, ವೈಶೇಷಿಕವೆಂಬೆರಡು ಪ್ರಭೇದಗಳು; ನ್ಯಾಯಶಾಸ್ತ್ರಕರ್ತರು ಗೌತಮಮುನಿಗಳು. ವೈಶೇಷಿಕರು ಕಣಾದಮುನಿಗಳು. ಇವರಿಗೆ ನೈಯಾಯಿಕರೆಂದೂ, ತಾರ್ಕಿಕರೆಂದೂ ಹೆಸರು; ಗೌತಮರು ೧೬ ಪದಾರ್ಥವಾದಿಗಳು; ವೈಶೇಷಿಕರು ೭ ಪದಾರ್ಥವಾದಿಗಳು. ಗೌತಮ ಹಾಗೂ ಕಣಾದ ಅವರಿಬ್ಬರೂ ಭರತಖಂಡದೊಳಗಿನ ಪರಮಾಣುವಾದದ ನ್ಯಾಪಕರು. ಶರೀರಾದಿಗಳಿಂದ ಜೀವಾತ್ಮನು ಭಿನ್ನನಿದ್ದು ಅಣುವಾಗಿಯೂ, ಒಂದು ದೇಹದಿಂದ ಮತ್ತೊಂದು ದೇಹದೊಳಗೆ ಹೋಗುವವನೂ, ಅಸಂಖ್ಯನೂ, ಅಮರನೂ ಇರುವನೆಂದು ಇವರ ಅಭಿಪ್ರಾಯ.

ಪೂರ್ವಮೀಮಾಂಸೆ:— ಜೈಮಿನ್ಯಾಚಾರ್ಯರು ಈ ಶಾಸ್ತ್ರದ ಉತ್ಪಾದಕರು. ಈ ಶಾಸ್ತ್ರದೊಳಗೆ ಅಂಗಕರ್ಮಗಳನ್ನೂ, ಪ್ರಧಾನಕರ್ಮಗಳನ್ನೂ ಯುಕ್ತಿಯಿಂದ ವಿವರಿಸಿದ್ದಲ್ಲದೆ, ಅನುಷ್ಠಾನಕ್ರಮ, ಕರ್ಮಭೇದಪ್ರಸಂಗ, ತಂತ್ರ ಮೊದಲಾದವು ನಿರ್ದೇಶಿಸಲ್ಪಟ್ಟಿವೆ. ಇದಕ್ಕೆ ಕರ್ಮಕಾಂಡವೆಂದೆನ್ನುವ ವಾಡಿಕೆಯುಂಟು.

ಉತ್ತರಮೀಮಾಂಸೆ:— ಶ್ರೀಬಾದರಾಯಣಋಷಿಗಳು ಈ

ಶಾಸ್ತ್ರದ ಕರ್ತರು. ಇದು ಉಪನಿಷತ್ತುಗಳ ಸಾರವಾಗಿದೆ. ಇದ ಕೊಳಗೆ ಬಾದರಾಯಣಮುನಿಗಳು ಸಾಂಖ್ಯ ಹಾಗೂ ಯೋಗ ಪಕ್ಷದವರನ್ನು ಖಂಡಿಸಿದ್ದಾರೆ. ಬಾದರಾಯಣಮುನಿಗಳ ವೇದಾಂತ ಮೀಮಾಂಸೆಯ ಮೇಲೆ ಬೋಧಾಯನಮುನಿಗಳ ಭಾಷ್ಯವಿದೆ. ಇದಕ್ಕೆ ಉತ್ತರಕಾಂಡವೆಂದೂ ವೇದಾಂತಸೂತ್ರವೆಂದೂ ಹೆಸರು.

ಧರ್ಮಶಾಸ್ತ್ರಗಳು:– ತಾನು ಜನ್ಮವೆತ್ತಿದ ಕುಲದೊಳಗೆ ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ತನ್ನ ಧರ್ಮಕ್ಕನುಗುಣವಾಗಿ ತನ್ನ ಆಚಾರಾದಿಗಳನ್ನಿಟ್ಟುಕೊಳ್ಳಬೇಕೆಂದು ಹೇಳುವದೇ ಧರ್ಮ ಶಾಸ್ತ್ರವು. ಧರ್ಮಶಾಸ್ತ್ರವೆಂದರೆ, ಗೃಹಸ್ಥಿತಿಯನ್ನೂ, ನಿತ್ಯದ ವಿಚಾರ ಗಳನ್ನೂ, ತಿನ್ನುಣ್ಣುವ ನಿಯಮಗಳನ್ನೂ, ಮನಃಸಂಯಮವನ್ನೂ, ಲೋಕಶಿಕ್ಷಣವನ್ನೂ, ಸ್ತ್ರೀವಾತ್ಸಲ್ಯವನ್ನೂ, ಮಾತೃಸೇವೆಯನ್ನೂ, ಪಿತೃ ಭಕ್ತಿ, ಈಶ್ವರನಿಷ್ಠೆ, ನೀತಿನೈಪುಣ್ಯ, ವ್ಯವಹಾರಜಾತುರ್ಯ ಇವುಗಳನ್ನು ವಿವರಿಸುವ ಗ್ರಂಥ. ಈ ಧರ್ಮಶಾಸ್ತ್ರದೊಳಗೆ ಮೂರು ವಿಧವಾದ ಸೂತ್ರ ಗಳಿರುವವು; ಶ್ರೌತಸೂತ್ರಗಳು, ಧರ್ಮಸೂತ್ರಗಳು, ಗೃಹ್ಯಸೂತ್ರಗಳು.

ಶ್ರೌತಸೂತ್ರಗಳು:– ಶ್ರುತಿಯ ಅಂದರೆ ವೇದದ ಆಧಾರದಿಂದ ಮಾಡುವ ಯಜ್ಞಕರ್ಮಗಳಿಗೆ ಶ್ರೌತಕರ್ಮಗಳೆಂದು ಹೆಸರು. ಶ್ರೌತ ಸೂತ್ರಗಳಲ್ಲಿ ಅಗ್ನಿಯ ಮೇಲೆ ನಡೆಯಿಸತಕ್ಕ ಕಾರ್ಯಗಳನ್ನೂ, ಅವು ಗಳ ವಿಷಯಕವಾದ ಮಂತ್ರಗಳನ್ನೂ ಕೊಟ್ಟಿದ್ದು, ಅಮಾವಾಸ್ಯೆ, ಹುಣ್ಣಿಮೆ ದಿನಗಳಲ್ಲಿ ಆಚರಿಸತಕ್ಕ ಇಷ್ಟಿ, ಋತುಯಜ್ಞ, ಪಶುಯಜ್ಞ, ಸೋಮಯಜ್ಞ ಮುಂತಾದವುಗಳಿಗೆ ಸಂಬಂಧಿಸಿರುವ ಮಂತ್ರಗಳಿವೆ; ಇವುಗಳಿಂದ ಭಾರತೀಯರ ಯಜ್ಞಸಂಸ್ಕಾರದ ಸಂಗತಿಯು ವಿಶದವಾಗಿ ತಿಳಿಯುವದು.

ಗೃಹ್ಯಸೂತ್ರಗಳು:– ಗೃಹ್ಯಸೂತ್ರಗಳೆಂದರೆ, ಮನೆತನಕ್ಕೆ ಸಂಬಂಧಿಸಿದ ನಿಯಮ ನಿರ್ಬಂಧಗಳನ್ನು ತಿಳಿಸುವ ಕರ್ತವ್ಯಸೂತ್ರ ಗಳು. ಗೃಹ್ಯಸೂತ್ರದೊಳಗಿನ ಸೂತ್ರಗಳು ಬಹು ಚಿತ್ತಾಕರ್ಷಕ ವಾಗಿವೆ. ಪುರಾತನಕಾಲದ ಆರ್ಯರು ಒಂದೇ ಅಗ್ನಿಯ ಮೇಲೆ ತಮ್ಮ ಮನೆತನದ ವಿಧಿಕಾರ್ಯಗಳನ್ನು ಹೇಗೆ ನಡಿಸುತ್ತಿದ್ದರೆಂಬುದಕ್ಕೆ

ಗೃಹ್ಯಸೂತ್ರಗಳು ಕನ್ನಡಿಯಂತಿವೆ. ಈ ಗೃಹ್ಯಕರ್ಮದ ಯಜ್ಞಾದಲ್ಲಿ ಮನೆಯ ಯಜಮಾನನೇ ಯಜ್ಞಪುರೋಹಿತನಾಗುತ್ತಿದ್ದನು. ಮನೆಯಲ್ಲಿ ಅಖಂಡವಾಗಿ ಪ್ರಜ್ವಲಿಸುತ್ತಿರುವ ಅಗ್ನಿಕುಂಡದಲ್ಲಿಯೇ ಈ ಯಜ್ಞಾದ ಆಹುತಿಗಳನ್ನಿಡುತ್ತಿದ್ದರು. ಈ ಸಣ್ಣಪುಟ್ಟ ಯಜ್ಞಗಳನ್ನು ಒಡವನೇ ಇರಲಿ, ಭಾಗ್ಯವಂತನೇ ಇರಲಿ, ಪ್ರತಿಯೊಬ್ಬ ಆರ್ಯನು ಆಚರಿಸಬೇಕೆಂದು ಧರ್ಮದ ಕಟ್ಟಳೆಯಿದ್ದಿತು. ಗರ್ಭಾಧಾನ, ಪುಂಸವನ, ಜಾತಕರ್ಮ, ನಾಮಕರಣ ಮುಂತಾದ ಸಂಸ್ಕಾರಗಳಿಂದ ಅಂತ್ಯ ಸಂಸ್ಕಾರದ ವರೆಗಿನ ಎಲ್ಲ ಹದಿನಾರು ಸಂಸ್ಕಾರಗಳು ಈ ಸೂತ್ರಗಳಲ್ಲಿ ವಿವರಿಸಲ್ಪಟ್ಟಿದ್ದು, ಪ್ರಾಚೀನ ಭಾರತೀಯರ ರೀತಿಸಂಪ್ರದಾಯಗಳೂ, ಜೀವನಕ್ರಮವೂ ಇವುಗಳಿಂದ ತಿಳಿಯುತ್ತದೆ. ಪ್ರತಿಯೊಬ್ಬ ಮನುಷ್ಯನು ತನ್ನ ಜಾತಿಗಾಗಿ, ದೇಶಕ್ಷೇಮಕ್ಕಾಗಿ, ತನ್ನ ವಂಶಕ್ಷೇಮಕ್ಕಾಗಿ ಆಚರಿಸ ತಕ್ಕ ಮುಖ್ಯವಾದ ದೈನಿಕಯಜ್ಞಗಳೆಂದರೆ ಪಂಚಮಹಾಯಜ್ಞಗಳು. ಧರ್ಮಾಚರಣೆಗೆ ಇವು ಮುಖ್ಯಾಂಗಗಳು; ಆದುದರಿಂದ ಮನೆಯ ಹಿರಿಯನು ಅವುಗಳನ್ನಾಚರಿಸಿಯೇ ತೀರಬೇಕೆಂದು ನಿರ್ಬಂಧ; ಈ ಪಂಚ ಮಹಾಯಜ್ಞಗಳೆಂದರೆ, ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ಭೂತ ಯಜ್ಞ, ಅತಿಥಿಯಜ್ಞ. ಈ ಪಂಚಮಹಾಯಜ್ಞಗಳು ಭಾರತೀಯ ಸಂಸ್ಕೃತಿಗೆ ಜೀವಾಳವಾಗಿವೆ.

ದೇವಯಜ್ಞ:— ದೇವಯಜ್ಞವೆಂದರೆ, ಬ್ರಹ್ಮ, ವಿಷ್ಣು, ವೇದ, ಗಿರಿ, ಸಮುದ್ರ, ಸೂರ್ಯ ಮೊದಲಾದ ದೇವತಾಸ್ವರೂಪಿಗಳಾದವುಗಳಿಗೆ ನೀರು ಬಿಡುವದು ಅಥವಾ ಅಗ್ನಿಯಲ್ಲಿ ಹೋಮಮಾಡುವದೆಂಬರ್ಥ. ಇದರಿಂದ ಮನುಷ್ಯರಲ್ಲಿ ಆಸ್ತಿಕಬುದ್ಧಿಯು ಹೆಚ್ಚಾಗಿ, ಪ್ರತಿಯೊಂದು ವಿಶೇಷಶಕ್ತಿಯಲ್ಲಿ ಭಗವಂತನ ಸಾನ್ನಿಧ್ಯವನ್ನು ಕಲ್ಪಿಸಿ ಅದನ್ನು ದೃಢೀಕರಿಸಲಿಕ್ಕೆ ಸಹಾಯವಾಗುತ್ತದೆ.

ಋಷಿಯಜ್ಞ:— ಮಾನವಜಾತಿಯ ಉನ್ನತಿಗೂ, ಕ್ಷೇಮಕ್ಕೂ ಆಧಾರವಾಗಿದ್ದು, ಭಾರತಕ್ಕೆ ಭಾರತೀಯ ತೇಜಸ್ಸನ್ನು ತಮ್ಮ ತಪೋಬಲದಿಂದುಂಟುಮಾಡಿಕೊಟ್ಟ ಋಷಿಗಳ ಸ್ಮರಣೆಯೂ, ಅವರ ಬಗ್ಗೆ ಕೃತಜ್ಞತೆಯ ಕುರುಹೂ ಇದರಲ್ಲಿ ಕಂಡುಬರುತ್ತಿದೆ. ದಿನಾಲು ಈ

ಋಷಿಮಹರ್ಷಿಗಳನ್ನು ಒಂದುಸಲವಾದರೂ ಸ್ಮರಿಸದ ಮನುಷ್ಯನ ಜನ್ಮವು ನರಜನ್ಮವಲ್ಲ; ಹುಳಜನ್ಮ.

ಪಿತೃಯಜ್ಞ:- ಗುರುಹಿರಿಯರ ಆಶೀರ್ವಾದವಿಲ್ಲದೆ ಯಾವ ಕಾರ್ಯವೂ ನಡೆಯದೆಂದು ನಮ್ಮ ಆರ್ಯರ ದೃಢಭಾವನೆ; ಅದಕ್ಕನು ಗುಣವಾಗಿ, ಪ್ರತಿಯೊಬ್ಬ ಆರ್ಯನು ದಿನಾಲು ತನ್ನ ತಾತ, ಮುತ್ತಾತ, ತಾಯಿ, ಮುತ್ತಾಯಿ, ಚಿಗವ್ವ, ದೊಡ್ಡಪ್ಪ, ಅಣ್ಣತಮ್ಮ, ಅಕ್ಕತಂಗಿ, ಸೋದರಮಾವ, ಸೋದರತ್ತೆಯನ್ನು ನೆನಿಸಿ ಅವರಿಗೆ ನೀರು ಬಿಡಬೇಕೆಂದು ನಿಯಮಪಡಿಸಿದ್ದಾರೆ.

ಭೂತಯಜ್ಞ:- ಪ್ರಾಣಿಗಳನ್ನೂ, ಪತಿತರನ್ನೂ, ರೋಗಪೀಡಿತರನ್ನೂ, ಅಸಹಾಯರನ್ನೂ ಕರೆದು ಸತ್ಕರಿಸಿ, ತಾನುಣ್ಣುವ ಮೊದಲು ಗೃಹಸ್ಥರು ಅನ್ನನೀಯಬೇಕೆಂದು ಆರ್ಯರ ನಿರ್ಬಂಧ. ಇದರಿಂದ ಮನುಷ್ಯನಲ್ಲಿ ದುಃಖಿತರಾದವರ ಬಗ್ಗೆ ಸಹಾನುಭೂತಿಯುಂಟಾಗಿ, ಪರೋಪಕಾರಬುದ್ಧಿಗೆ ಪುಷ್ಟಿ ದೊರೆಯುತ್ತಿತ್ತು, ದಯೆಯು ಹೆಚ್ಚು ಸರಳವಾಗಿ ಹರಿಯಲಿಕ್ಕೆ ಅನುಕೂಲವಾಗುತ್ತಿತ್ತು; ಗೃಹಸ್ಥನ ಬಾಳಿಕೆಯು ಇವರುಗಳಿಗಾಗಿಯೇ! ಇವರುಗಳ ಸೇವೆಯಿಂದಲೇ ಅವನ ಜನ್ಮವಾರ್ಥಕ! ಆದರೆ ಆದೀಗ ನ್ಯಾರ್ಥಕ್ಕೆಡೆಯಾಗಿದೆ.

ಅತಿಥಿಯಜ್ಞ:- ಮನುಷ್ಯಜಾತಿಯ ಕಲ್ಯಾಣಕ್ಕಾಗಿ ಸನ್ಯಾಸವೃತ್ತಿಯನ್ನವಲಂಬಿಸಿ, ಕೇವಲ ಪರೋಪಕಾರಾರ್ಥವಾಗಿಯೇ, ಒದುಕಿಕೊಂಡಿರುವವರು ಹೊತ್ತುಕಾಲವನ್ನರಿಯದೆ, ಗ್ರಹಸ್ಥನ ಮನೆಗೆ ಅನ್ನಕ್ಕಾಗಿ ಬಂದರೆ, ಅವರನ್ನು ಆದರಿಸಿ, ಅನ್ನವನ್ನಿಯುವದೇ ಅತಿಥಿಯಜ್ಞ.

ಧರ್ಮಸೂತ್ರಗಳು:- ಧರ್ಮಸೂತ್ರಗಳಲ್ಲಿ ಎಲ್ಲಕ್ಕೂ ಪುರಾತನವೆಂದರೆ, ಮನುಋಷಿಗಳದು; ಅಲ್ಲದೆ ವಸಿಷ್ಠ, ಗೌತಮ, ಬೋಧಾಯನ, ಆಪಸ್ತಂಭ ಮೊದಲಾದವರ ಧರ್ಮಸೂತ್ರಗಳಿವೆ; ಆದರೂ ಅವುಗಳಲ್ಲೆಲ್ಲ ಯಾಜ್ಞವಲ್ಕ್ಯ, ಪರಾಶರ, ಮತ್ತು ನಾರದ ಸ್ಮೃತಿಗಳು ವಿಶೇಷ ಚನ್ನಾಗಿವೆ; ಈ ಸ್ಮೃತಿಗಳಲ್ಲಿ ಮನುಋಷಿ ಪ್ರಣೀತವಾದ ಮನುಸ್ಮೃತಿಯು ಮನುಷ್ಯಜಾತಿಗೇನೇ ಆಧಾರಭೂತವಾದ ಧರ್ಮಶಾಸ್ತ್ರವೆಂದು ಎಣಿಸಲ್ಪಟ್ಟಿದೆ. ಮನುವು ಕ್ಷತ್ರಿಯ ರಾಜನು; ಸಮಾಜದ

ನೆಮ್ಮದಿಗಾಗಿ ನಾಮಾಜಿಕಧರ್ಮಶಾಸ್ತ್ರವನ್ನು ರಚಿಸಿದನು. ಆರ್ಯ ದೇಶವಾವುದು, ಅನಾರ್ಯದೇಶವಾವುದು? ಇಡೀ ಭೂಮಂಡಲ ದೊಳಗೆ ಆರ್ಯಾವರ್ತದ ಮೇಲ್ಮೆ; ಚತುರ್ವರ್ಣಾದ ಕರ್ತವ್ಯಗಳು; ಕಾಲಕಾಲಕ್ಕೆ ಆಯಾವರ್ಣಾದವರು ಆಯಾಯ ಆಶ್ರಮಗಳಲ್ಲಿ ಆಚರಿಸ ತಕ್ಕ ದಿನದ ಧಾರ್ಮಿಕ, ನಾಮಾಜಿಕ, ವೈದ್ಯೋಗಿಕ, ರಾಜಕೀಯ ಪಾರಮಾರ್ಥಿಕ ಕರ್ತವ್ಯಗಳು; ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಶಿಲ್ಪ ಶಾಸ್ತ್ರ, ಶಾಸನಶಾಸ್ತ್ರ, ನಗರನಿರ್ಮಾಣಶಾಸ್ತ್ರ ಅವೆಲ್ಲವೂ ಸ್ಮೃತಿಯಲ್ಲಿ ವಿವರಿಸಲಾಗಿವೆ.

ಸಾಮಾನ್ಯಸ್ಥಿತಿ:– ಭಾರತೀಯ ಯುದ್ಧವಾದ ನಂತರ ಆರ್ಯ ಜನಾಂಗದ ಸ್ಥಿತಿಯನ್ನು ಕಣ್ಮುಂದೆ ತರಬೇಕೆಂದು ಯತ್ನಿಸತೊಡಗಿದರೆ ಅದೊಂದು ಅನಾಧ್ಯವಾದ ಪ್ರಸಂಗವಾಗಬಹುದು. ಒಂದು ಯುದ್ಧ ವಾಗಬೇಕಾದರೆ, ಅದಕ್ಕಾಗಿ ಜನಾಂಗದಲ್ಲಿನ ಜನ, ಧನ, ಸಾಮಗ್ರಿಗಳ ನ್ನೆಲ್ಲ ಸೂರೆಗೊಳ್ಳಬೇಕಾಗುತ್ತದೆ; ಅಂದಮೇಲೆ ಭಾರತೀಯ ಯುದ್ಧ ರಂಥ ಮಹಾಯುದ್ಧ ಪ್ರಸಂಗವೆಂದರೆ, ಅದೊಂದು ಬಗೆಯಿಂದ ರಾಷ್ಟ್ರೀಯ ಗಂಡಾಂತರವೇ! ಈ ಗಂಡಾಂತರದೊಳಗೆ ಹಿಂದೂದೇಶ ದೊಳಗಿನ ತತ್ಕಾಲಕ್ಕೆ ಪ್ರಸಿದ್ಧವಿರುವಂಥ ಎಲ್ಲ ರಾಜರುಗಳು, ಹಾಗೂ ಜನಾಂಗಗಳು ನೆರಿದ್ದವು. ೧೮ ಅಕ್ಷೌಹಿಣಿ ಸೈನ್ಯದೊಳಗಿಂದ ಹತ್ತೋ ಜನರು ಉಳಿದರೆಂದಮೇಲೆ, ದೇಶದ ಸ್ಥಿತಿಯು ಎಷ್ಟು ಭಯಾನಕವೂ ಅನುಕಂಪನೀಯವೂ ಆಗಿರಬಹುದು? ಭಾರತೀಯಯುದ್ಧದ ಬೇಗೆಯಲ್ಲಿ ಪ್ರಚಂಡರಾದ ಕ್ಷತ್ರಿಯ ರಾಜಸಂಬಂಧಿಗಳೂ ಅಪಾರ ಸಂಪತ್ತಿ ಯಿಂದ ಹೆಸರಿಸುವ ರಾಜ್ಯಗಳು ಹಾಳಾದವು; ಕ್ಷತ್ರಿಯ ವಂಶದ ವುರಾ ತನವಾದ ಹೆಮ್ಮರವು ಮುರಿದು ನೆಲಕ್ಕುರುಳಿತು. ಕ್ಷತ್ರಿಯರ ಏಳಿಗೆಯು ಗಿಡವು ವುಸಃ ಬೆಳೆಯುದಂತೆ ಬೇರು ಸಹಿತ ಕಿತ್ತುಹೋಯಿತು. ಆರ್ಯ ಸಂಸ್ಕೃತಿಯ ಆಧಾರಸ್ತಂಭಗಳಾದ ಕ್ಷತ್ರಿಯ ರಾಜರಿಗೆ ಅಳಿಗಾಲೊದ ಗಿದ್ದರಿಂದ, ಕ್ಷತ್ರಿಯ ರಾಜರನ್ನವಲಂಬಿಸಿಕೊಂಡು ಜೀವಿಸುತ್ತಿರುವ ಬ್ರಾಹ್ಮಣ,ವೈಶ್ಯ,ಶೂದ್ರಾದಿ ಜಾತಿಯೊಳಗಣ ಬುದ್ಧಿವಂತರೂ, ವ್ಯವಸಾ ಯ ಕೈಗಾರಿಕೆಗಳಲ್ಲಿ ಪ್ರವೀಣರಾದವರೂ ಮಡಿದುಹೋಗಿ, ಮುಂದಿನ

ಪೀಳಿಗೆಯವರಿಗೆ ಅಸರವಿಲ್ಲದಾಯಿತು; ವೈದಿಕಋಕ್ಕುಗಳನ್ನು ಸ್ವಂತ ಸ್ಫೂರ್ತಿಯಿಂದ ರಚಿಸಿ ಪಾಡುವಂಥದೊಂದು ಸ್ಮರಣವು ಜನರಲ್ಲಿ ಲುಪ್ತವಾಯಿತು. ಭಾರತದ ಬುದ್ಧಿಶಕ್ತಿ, ಸಂಪತ್ತುಗಳ ಬೊಪ್ಪೆಗೇನೇ ಬಲವಾದ ಕೊಪ್ಪೆ ಬಿದ್ದು, ಅನೇಕ ವರ್ಷಗಳ ವರೆಗೆ ಭಾರತದ ತಲೆ ಮೇಲಕ್ಕೆತ್ತಲಿಲ್ಲ. ಜನರ ಮನಸು ಅಧ್ಯಾತ್ಮವಿಷಯದ ಕಡೆಗೆ ಒಲೆಯದೆ, ಬರಿಯ ಯಜ್ಞದ, ಹಾಗೂ ಶಾಸ್ತ್ರೀಯ ಮತ್ತು ವೈದಿಕ ಪದ್ಧತಿಯ ವಿಷಯದಲ್ಲಿ ಚರ್ಚೆಯ ಕಡೆಗೆಬಗ್ಗಿತು; ಜನತೆಯಲ್ಲಿ ಧರ್ಮವು ಒಂದು ತೆರನಾಗಿ ಜೀವಂತವಿದ್ದರೂ ಮೊದಲಿನಷ್ಟು ಅದರಲ್ಲಿ ಹುರುಳೂ, ಅಸ್ಥೆಯೂ ಇರಲಿಲ್ಲ; ಕ್ಷತ್ರಿಯರು ಅಲ್ಲಲ್ಲಿ ಯಜ್ಞ-ಯಾಗಾದಿಗಳನ್ನು ನಡಿಸುತ್ತಿದ್ದರೂ, ಅವರ ಬಲವೇ ಕುಂದಿದ್ದರಿಂದಲೂ, ಪೂರ್ವದಷ್ಟು ಅಸಕ್ತಿಯಿಂದ ಮಾಡುತ್ತಿರಲಿಲ್ಲವಾದ್ದರಿಂದಲೂ, ಜನರಲ್ಲಿಯೂ ಅದರ ಬಗ್ಗೆ ಮಂದಾದರವುಂಟಾಗಲು ಕಾರಣವಾಯಿತು. ಯಾವ ಕಾಲಕ್ಕಾದರೂ, ಆಯಾ ದೇಶದ ರಾಜನೇ ಕಾಲವನ್ನು ಮಾರ್ಪಡಿಸುವವನಾಗಿದ್ದಾನೆ; ಅರಸನು ಎಲ್ಲ ದೃಷ್ಟಿಯಿಂದಲೂ ಜನರ ಆದರ್ಶದೇವತೆಯಾದ್ದರಿಂದ, ಎಲ್ಲ ಬಗೆಯಿಂದ ಅತನನ್ನೇ ಅನುಕರಿಸಲು ಪ್ರಜೆಗಳು ಹಂಬಲಿಸುತ್ತಾರೆ. ಹಿಂದೂದೇಶದೊಳಗಂತೂ ಇದು ಪರಿಸ್ಫುಟವಾಗಿ ದೃಗ್ಗೋಚರವಾಗುತ್ತದೆ. ಅರಸನಾಗಲಿ, ಅರಸನ ಮನೆಯವರಾಗಲಿ, ಮಾಡುವ ಕೃತಿಗಳೂ, ತೊಡುವ ವೇಷಗಳೂ, ಆಡುವ ಮಾತುಕಥೆಗಳೂ ಜನರ ಒಳಿಕೆಯಲ್ಲಿ ಹೊಕ್ಕು ಮನುಷ್ಯನ ನೆರಳು ನೀರಿನಲ್ಲಿ ತತ್‌ಕ್ಷಣವೇ ಮೂಡುವಂತೆ ಮೂಡಿ, ಹೋಗುತ್ತವೆ. ಈ ಕಾಲದ ವಾಙ್ಮಯವನ್ನು ನಿರೀಕ್ಷಿಸಿದರೆ, ಜನರಲ್ಲಿಯ ಒಂದು ವಿಧದ ಆಶಾವಾದಿತ್ವವು, ಸಂಸಾರವು ಸುಖಮಯವಾಗಿರುವದೆಂಬಕಲ್ಪನೆಯೂ ಸಂಪೂರ್ಣವಾಗಿ ಅಳಿದು ಹೋಗಿ, ಜನ್ಮ-ಮರಣವೆಂಬ ಸುತ್ತಿನಿಂದ ಹೇಗೆ ಪಾರಾಗಿ ಹೋಗಬೇಕೆಂಬುದೊಂದು ಹಂಬಲವೇ ಜನತೆಯಲ್ಲಿ ಬಲವಾಗಿ ಹರಡಿಕೊಂಡಿತು. ಇದುವರೆಗೆ ಸಮಾಜದೊಳಗೆ ಕಂಡು ಬರುತ್ತಿದ್ದ, ಅಗ್ನಿ, ಯಮ, ವರುಣ, ಸೂರ್ಯ ಮೊದಲಾದ ವೈದಿಕ ಕಾಲದ ದೇವತೆಗಳ ಆರಾಧನೆಯು ನಿಂತುಹೋಗಿ, ಶಿವ, ವಿಷ್ಣು,

ದುರ್ಗಾ ಮೊದಲಾದ ದೇವತೆಗಳ ಪೂಜಾವಿಧಿಯು ಬಳಕೆ ಆಯಿತು.

ರಾಜಕೀಯ ಸ್ಥಿತಿ:— ಮಹಾಭಾರತಕಾಲಕ್ಕೆ ನಾಗರಜನಾಂಗ ವೆಂಬುದೊಂದು ಬೇರೆ ಕುಲವಿತ್ತೆಂದೂ, ತಕ್ಷಕನೆಂಬವನು ಈ ನಾಗರ ಅಧಿಪತಿಯಾಗಿದ್ದನೆಂದೂ, ಅವನ ರಾಜಧಾನಿಯು ತಕ್ಷಶಿಲೆಯೆಂಬ ಪಟ್ಟಣವಾಗಿತ್ತೆಂದೂ ತಿಳಿಯುತ್ತದೆ. ಈ ನಾಗಜನರಿಗೂ ಪಾಂಡವರಿಗೂ ಬದ್ಧವೈರ; ಏಕೆಂದರೆ, ಪೂರ್ವದಲ್ಲಿ ಅರ್ಜುನನು ಈ ನಾಗಜನರು ವಾಸಮಾಡುತ್ತಿರುವ ಯಮುನಾ ದಂಡೆಯಲ್ಲಿರುವ ಅರಣ್ಯವಾದ ಖಾಂಡವವನವನ್ನು ಸುಟ್ಟು ಬೂದಿ ಮಾಡಿ, ಅದನ್ನು ವಾಸಕ್ಕೆ ಯೋಗ್ಯವಾದ ಸ್ಥಳವನ್ನಾಗಿ ಮಾಡಿದನು; ಇದರಿಂದ ನಾಗರಿಗೆ ಪಾಂಡವರನ್ನು ಕಂಡರೆ ಒಹು ಬೆಟ್ಟ; ಮತ್ತು ಈ ಬೆಟ್ಟದಿಂದಲೇ ಪಾಂಡವರ ನೇಡು ತೀರಿಸಿಕೊಳ್ಳಬೇಕೆಂದು ತಕ್ಷಕನು ಅರ್ಜುನನ ಮುಮ್ಮಗನಾದ ಪರಿಕ್ಷಿತ ರಾಜನನ್ನು ಕೊಂದನು. ಅದರೆ ಮುಂದೆ ಪರಿಕ್ಷಿತನ ಮಗನಾದ ಜನಮೇಜಯನು ನಾಗರನ್ನು ಸೋಲಿಸಿ, ಒಪ್ಪಂದ ಬೆಳಿಸಿದನು. ಕ್ರಮೇಣ, ಕೌರವ-ಪಾಂಡವರ ರಾಜಧಾನಿಯಾದ ಹಸ್ತಿನಾಪುರ, ಇಂದ್ರಪ್ರಸ್ಥ ರಾಜಧಾನಿಗಳು ಹಾಳಾದವು. ಹಸ್ತಿನಾವತಿಯು ಗಂಗೆಯ ಪ್ರವಾಹದಿಂದ ಹರಿದು ಹೋಯಿತು; ಇದೇ ಕಾಲಕ್ಕೆ ಅಂದರೆ, ಕ್ರಿ. ಶ. ಪೂ. ೧೨ನೇ ಶತಮಾನದೊಳಗೆ ಸೈಪ್ರಿಯಾರಣ್ಯದಲ್ಲಿ ಅಂದರೆ ಈಗಿನ ಅಯೋಧ್ಯೆಯ ಪ್ರದೇಶದಲ್ಲಿರುವ ಗೋಮತೀನದಿಯ ದಂಡೆಯಲ್ಲಿ ಜನಮೇಜಯನ ಮುಮ್ಮಗನು ೧೨ ವರ್ಷಗಳ ಪರ್ಯಂತ ಯಜ್ಞವನ್ನು ನಡೆಸಿದನು. ಭಾರತೀಯ ಚರಿತ್ರೆಯಲ್ಲಿಯೇ ಕೊನೆಯದೂ ಮಹತ್ವದ್ದಾ ಆದ ಈ ಮಹಾ ಯಜ್ಞವು ಅಭೂತಪೂರ್ವವಾಯಿತು.

ಜನಾಂಗಸ್ಥಿತಿ:— ಭಾರತೀಯ ಯುದ್ಧದಿಂದ ಬುದ್ಧಕಾಲದ ವರೆಗಿನ ದೀರ್ಘಕಾಲದೊಳಗೆ ರಾಷ್ಟ್ರೀಯದೃಷ್ಟಿಯಿಂದ ವಿಶೇಷ ಮಹತ್ವವಾದಂಥ ಸಂಗತಿಗಳೇನೂ ಸಂಭವಿಸದಿದ್ದುದರಿಂದ ಈ ಕಾಲಕ್ಕೆ ರಾಷ್ಟ್ರೀಯ ಮಹತ್ವವಿಲ್ಲ. ಈ ಕಾಲಕ್ಕೆ ರಾಷ್ಟ್ರ ಉಪರಾಷ್ಟ್ರಗಳಲ್ಲಿ ಜಗಳಾಟಗಳು ನಡೆದಿದ್ದವು; ಆದರೆ ರಾಷ್ಟ್ರದ ದೃಷ್ಟಿಯನ್ನಾಗಲಿ, ಸ್ಥಿತಿ

ಯನ್ನಾಗಲಿ, ಮಾರ್ಪಡಿಸುವಂಥ ಕಾರ್ಯಗಳೇನೂ ಆಗಲಿಲ್ಲ. ಆರ್ಯ ಸಂಸ್ಕೃತಿ ವಿಕಾಸವಾಗುವ ಕಾರ್ಯಗಳೇನೂ ಈ ಕಾಲದಲ್ಲಿ ಬದಗದಿದ್ದರೂ, ಸಂಸ್ಕೃತವಿದ್ಯೆ ಪಾಂಡಿತ್ಯ, ಹಾಗೂ ಬ್ರಾಹ್ಮಣರ ವಿಚಾರ ಓಘಗಳು ಅಪ್ರತಿಹತವಾಗಿ ನಾಗಿದ್ದವು; ಎಲ್ಲಿ ನೋಡಿದರೂ, ಔಪನಿಷದ ವಿಚಾರಗಳೇ ಹಬ್ಬಿ ಹರಡಿಕೊಂಡು ಜನತೆಯ ಮನಸ್ಸಿನಲ್ಲಿ ಬಂದು ಬಗೆಯ ಬೌದ್ಧಿಕ-ಕ್ರಾಂತಿಯನ್ನು ಮಾಡತೊಡಗಿದ್ದರಿಂದ, ಈ ಕಾಲದ ಬೌದ್ಧಿಕ ಇತಿಹಾಸವೇ ಬಹುಮಟ್ಟಿಗೆ ಸಿಗುತ್ತದೆಯೇ ಹೊರತು ರಾಜಕೀಯ ಇತಿಹಾಸ-ಪೋಷಕವಾದ ಹೆಜ್ಜೆಗಳು ಸ್ಪಷ್ಟವಾಗಿ ಮೂಡಿರುವದಿಲ್ಲ. ಈ ಕಾಲದ ಚರಿತ್ರೆಯು ಜನಾಂಗಗಳೊಳಗೆ ನಡೆದ ಯುದ್ಧಗಳ ನೆತ್ತರದಿಂದ ಕೆಂಪು ಒಡೆಯದೆ, ಬುದ್ಧಿಯ ಬೆಳಿಗೆಯನ್ನು ತೋರ್ಪಡಿಸುವಂಥ ಹೊಸ ಹೊಸ ಧಾರ್ಮಿಕ ವಿಚಾರಗಳಿಂದಲೂ, ನವೀನವಾದ ಸಂಪ್ರದಾಯಗಳಿಂದಲೂ, ಕಲಾಕೌಶಲ್ಯದ ಬೆಳುವಳಿಗೆಯು ಕಂಪಿನಿಂದಲೂ ಮನೋರಂಜಕವಾದ ಚಟುವಟಿಕೆಗಳಿಂದಲೂ ಪೆಂಪು ಒಡೆದಿದೆ.

ಮತ್ತೊಂದು ಪ್ರಚಂಡವಾದ ತೆರೆಯು:- ಭಾರತೀಯುದ್ಧದಿಂದ ಬಹುಕಾಲ ಜನಾಂಗದ ಸ್ಥಿತಿಯು ಕಕ್ಕಾಬಿಕ್ಕಿಯಾಗಿತ್ತಷ್ಟೇ? ಇಂಥ ಸಮಾಜವನ್ನು ಒಂದೊಂದು ಬೇರೆ ಬೇರೆ ವಿಚಾರಗಳಿಂದ ಧರ್ಮದಲ್ಲಿ ಪ್ರವರ್ತಿಸುವಂಥದೊಂದು ಪ್ರಚಂಡ ಸಂಘಟನಕಾರ್ಯವು ಈ ಕಾಲದೊಳಗೆ ನಡೆಯಿತು. ಅದೇ ತಾನೇ ಮಹಾಭಾರತ ವೀರನಾದ ಭಗವಾನ್ ಶ್ರೀಕೃಷ್ಣನು ತನ್ನ ಅವತಾರ ಸಮಾಪ್ತಿ ಮಾಡಿ, ಜಗತ್ತಿನ ರಂಗಸ್ಥಳದಿಂದ ಮಾಯವಾಗಿದ್ದನು; ಹಿಂದೂಧರ್ಮದೊಳಗೆ ಜ್ಞಾನಮಾರ್ಗ, ಭಕ್ತಿಮಾರ್ಗ ಅವೆರಡರಲ್ಲಿ ವಾದ ನಡೆದಿತ್ತು; ಇದುವರೆಗೆ ಹಿಂದೂಧರ್ಮದೊಳಗೆ ಶ್ರೀಕೃಷ್ಣನಂಥ ಅವತಾರಿಕ ಪುರುಷರನ್ನು ಉಪಾಸ್ಯ-ದೇವತೆಯೆಂದಿಟ್ಟುಕೊಂಡು ನಡೆಯುವ ಮತಗಳಾವೂ ಇರಲಿಲ್ಲ. ಜನರಲ್ಲಿ ಭಕ್ತಿಯಿತ್ತು; ಜ್ಞಾನವಿತ್ತು; ಆದರೂ ಒಬ್ಬ ವಿಭೂತಿಪುರುಷನನ್ನು ಆರಾಧ್ಯದೇವತೆಯನ್ನಾಗಿಟ್ಟುಕೊಂಡಿರುವ ಸಂಪ್ರದಾಯ ಭೇದಗಳು ಇರಲಿಲ್ಲ; ಉಪನಿಷತ್ಕಾಲವು ಜ್ಞಾನಯುಗವು;

ಇದು ಭಕ್ತಿಯುಗವಾಗಿತ್ತು. ಉಪನಿಷತ್ತಿನ ಕಾಲಕ್ಕೆ ಹೇಗೆ ಜನಾಂಗದೊಳಗೆ ದೊಡ್ಡದೊಂದು ಜ್ಞಾನಮಾರ್ಗದ ತೆರೆಹಾಯ್ದು ಹೋಯಿತೋ ಹಾಗೇ ಈ ವೇಳೆಯಲ್ಲಿ.ಕರ್ಮವಾದವು ಕುಂದಿ, ಭಕ್ತಿಯು ಪ್ರಭಲಗೊಂಡು ಭಕ್ತಿಪ್ರಧಾನವಾದುದೊಂದು ಹೊಯ್ಲು ಹಾಯಿತು. ಅದುದರಿಂದ ಆರ್ಯರೊಳಗೇ ಭಾಗವತ, ಪಾಶುಪತವೆಂಬೆರಡು ಸಂಪ್ರದಾಯಗಳೂ, ಜೈನ, ಬೌದ್ಧವೆಂಬೆರಡು ಮತಗಳೂ ಮರವಾಗಿ ಬೆಳೆದವು. ಈ ಮತಗಳು ಒಲತುಕೊಂಡುದರಿಂದ ಇಡೀ ಭರತಖಂಡದಲ್ಲಿಯೇ ಧರ್ಮದ ಹೊಸದೊಂದು ಕ್ರಾಂತಿಯಾಯಿತು. ಈ ಕ್ರಾಂತಿಯು ಹೆಗ್ಗುರುತುಗಳೇಕೆ? ಸಂಪ್ರದಾಯಗಳು ಈಗ್ಯೂ ನಮ್ಮಲ್ಲಿ ಬೇರೂರಿಕೊಂಡಿವೆ. ಈ ಪೈಚಾರಿಕಕ್ರಾಂತಿಗೆ ಉಪನಿಷತ್ತುಗಳೇ ನೆಲೆಗಳಾಗಿದ್ದವೆಂಬುದನ್ನು ಮರೆಯಲಾಗದು.

ಭಾಗವತಧರ್ಮ:— ಶ್ರೀಕೃಷ್ಣನುಪಾಸನೆಯನ್ನೇ ಮುಖ್ಯವಾಗಿಟ್ಟುಕೊಂಡಿರುವಂಥ ಈ ಭಾಗವತಧರ್ಮವು ಈಗ ತಲೆಯೆತ್ತಿತು. ವಾಸುದೇವಭಕ್ತಿಯೇ ಇವರ ಹೆಗ್ಗುರಿ. ಇದು ಮೊಟ್ಟಮೊದಲು ಹಿಂದೂದೇಶದ ವಾಯವ್ಯದಿಕ್ಕಿನಲ್ಲಿ ಹಬ್ಬಿಕೊಂಡಿತ್ತು; ಈ ಧರ್ಮವನ್ನು ಚಿತ್ರಶಿಖಂಡಿಯೆಂಬ ಋಷಿಯು ನಾಟ್ಯಪಿಸಿದನು; ಈ ಧರ್ಮದವರಿಗೆ ಪಂಚರಾತ್ರವೆಂಬ ಗ್ರಂಥವೇ ಆಧಾರ. ನೂರಂಟು ದೇವತೆಗಳನ್ನು ಪೂಜಿಸುವದಕ್ಕಿಂತ ವಾಸುದೇವನನ್ನೇ ಪೂಜಿಸಿ ಮೋಕ್ಷಭಾಗಿಗಳಾಗಬೇಕಾಗಿ ಈ ಗ್ರಂಥದ ವೇಳೆಕೆ. ಧರ್ಮವು ಹೀನಸ್ಥಿತಿಗೆ ಇಳಿಯಿತೆಂದರೆ ಭಗವಂತನು ಸ್ವತಃ ಮೈಗೊಂಡು ಬರುವನೆಂಬ ಮಾತಿನಲ್ಲಿ ಇವರ ನಂಬಿಗೆ. ವಾಸುದೇವಭಕ್ತಿಯೇ ಇವರ ಮುಖ್ಯ ಪೆಟ್ಟಾಗಿದ್ದರೂ, ಶ್ರೀವಿಷ್ಣುವಿನ ಬೇರೆ ಬೇರೆ ಅವತಾರಗಳನ್ನೂ ಇವರು ನಂಬುತ್ತಾರೆ; ಭಗವಂತನ ದಶಾವತಾರಗಳಲ್ಲಿ ಶ್ರೀರಾಮಕೃಷ್ಣ ಇವೆರಡರಲ್ಲಿ ಈ ಸಂಪ್ರದಾಯದವರ ಆದರಾತಿಶಯವು ಹೆಚ್ಚು; ಭಾಗವತಧರ್ಮದವರು ಶಾಲಿಗ್ರಾಮಶಿಲೆಯನ್ನು ಪೂಜಿಸುವದುಂಟು; ಈ ಧರ್ಮವು ಮೊದಲು ವಾಯವ್ಯದಿಕ್ಕಿನಲ್ಲಿ ಹಬ್ಬಿಕೊಂಡಿದ್ದರಿಂದ ಗ್ರೀಕರೂ, ಶಕರೂ, ಪಲ್ಲವರೂ ಅವರಂಥ ನಾಸ್ತಿಕಪಂಥದ ಜನರನ್ನು ಸಹ ತನ್ನ ಕಡೆಗೆ

ಸೆಳೆದುಕೊಳ್ಳದೆ ಬಿಡಲಿಲ್ಲ; ಮುಂದೆ ಮುಂದೆ ಕೆಲದಿನ ಭಾಗವತ ಧರ್ಮಕ್ಕೆ ಬೌದ್ಧಮತದ ಬಿಟಿಗಾಳಿ ಸೋಂಕಿ, ಅದನ್ನು ಕೆಳಗೆ ಮೆಟ್ಟಿಲಕ್ಕೆ ಪ್ರಯತ್ನಿಸಿದರೂ, ಕೊನೆಗೆ ಭಾಗವತಧರ್ಮವೇ ಗೆದ್ದಿತು.

ಪಾಶುಪತಧರ್ಮ:—ಶ್ರೀಶಿವನು ಒಬ್ಬ ದೇವರೆಂದು ಕಲ್ಪಿಸಿದ್ದರೂ, ಯಜ್ಞದೊಳಗೆ ಶಿವನಿಗೆ ಹವಿರ್ಭಾಗವನ್ನು ಕೊಡಬೇಕೋ ಬಾರದೋ ಎಂಬ ಬಗ್ಗೆ ಆ ಕಾಲಕ್ಕೆ ಆರ್ಯರಲ್ಲಿ ದೊಡ್ಡ ವಾದವೇ ನಡೆಯಿತು; ಪಾಶುಪತವೆಂಬ ಬೇರೊಂದು ಮತವು ಹೊರಟ ಬಳಿಕ ಈ ಸಂದೇಹವು ಮೂಲೆಗುಂಪಾಗಿ ಶಿವನೇ ಪರದೈವವೆಂದೆನ್ನಬೊಂದು ಪಂಗಡವಾಯಿತು; ಈ ಪಂಗಡದವನಿಗೇ ಪಾಶುಪತರೆಂದು ಹೆಸರು.

ಜೈನ-ಬೌದ್ಧಮತಗಳು:—ಭರತಖಂಡದೊಳಗೆ ಹುಟ್ಟಿದ ಹೊಸ ಮತಗಳಲ್ಲಿ ಜೈನ ಬೌದ್ಧಮತಗಳೆರಡು ಮುಖ್ಯವಾಗಿರುವವು. ಜೈನ ಬೌದ್ಧಮತ ಸಂಪ್ರದಾಯಗಳ ತಾಯಿಬೇರು ಯಾವುದೆಂಬುದನ್ನು ಹುಡುಕ ತಿಳಿಸಿದರೆ, ಅದು ಉಪನಿಷತ್ತುಗಳ ವರೆಗೆ ಹೋಗಿ ಮುಟ್ಟುತ್ತದೆ. ಏಕೆಂದರೆ, ಉಪನಿಷತ್ಕಾಲಕ್ಕೆ ಬ್ರಾಹ್ಮಣರಂತೆ ಕ್ಷತ್ರಿಯರೂ ಸಹ ಬ್ರಹ್ಮಜ್ಞಾನದ ವಿಷಯವಾಗಿ ವಿಚಾರ ಮಾಡುತ್ತಿದ್ದುದರಿಂದ, ಅವರಿಗೆ ಕೆಲವಂಶದಿಂದ ಅಥವಾ ಅಪರ ಬುದ್ಧಿಯು ಹರಿಯುವ ಪುಟ್ಟಿಗೆ, ವೇದಾಂತದ ಜ್ಞಾನವು ಒಂದು ಬೇರೆ ವಿಧವಾಗಿತ್ತು; ಆ ಜ್ಞಾನವೇ ಮಹಾಭಾರತಕಾಲದಲ್ಲಿದ್ದ ಧರ್ಮಪಂಥಗಳ ಗೊಂದಲೊಳಗೆ ತನ್ನದೊಂದು ತೆರೆಯನ್ನು ಕಾಣಿಸಿಕೊಂಡಿತು. ಮಾನವಜಾತಿಯಲ್ಲಿ ಅನೇಕ ವಿಧದ ಅಥವಾ ಹಲವು ತರಗತಿಯ ಜೀವಿಗಳಿದ್ದು, ಅವರವರ ಯೋಗ್ಯತಾನುಸಾರವಾಗಿ ದೇವರು ಅವರಿಗಾಗಿ ಧರ್ಮಸಂಪ್ರದಾಯಗಳನ್ನು ಅಯಾ ಜನರ ಮುಖಾಂತರವಾಗಿ ನಿರ್ಮಿಸಿದನೆಂದು ಹೇಳಿದರೂ ತಪ್ಪಾಗದು; ಜೈನ ಬೌದ್ಧಮತದವರು ದೇವರ ಅಸ್ತಿತ್ವವನ್ನು ಮನ್ನಿಸುವದಿಲ್ಲವಾದರೂ, ಮೋಕ್ಷ ಸಾಧನೆಯ ಕಾರ್ಯದೊಳಗೆ ಶುದ್ಧಾಚರಣೆ, ಇಂದ್ರಿಯನಿಗ್ರಹ, ತಾಳ್ಮೆ, ಅಹಿಂಸೆ, ಪ್ರಾಣಿಮಾತ್ರಗಳಲ್ಲಿ ಕರುಣೆ ಇವು ಅವಶ್ಯವಾಗಿರುವ ಅಂಶಗಳೆಂದು ಪ್ರತಿಪಾದಿಸಿದ್ದಾರೆ; ಸದಾಚರಣೆ, ದಯೆ, ತಾಳ್ಮೆ, ಸತ್ಯ, ಇಂದ್ರಿಯನಿಗ್ರಹ ಇವೇ ಒಂದು ಬಗೆ

ಯಿಂದ ಸ್ವತೇವ ಭಗವತ್‌ಪ್ರಾಪ್ತಿಗೆ ಸಾಧಕವಾದವುಗಳಾದ್ದರಿಂದ ಭಗವಂತನ ಹೆಸರನ್ನು ಬಚ್ಚಿಟ್ಟು ಅವನ ಕಡೆಗೆ ಒಯ್ಯುವ ದಾರಿಗಳನ್ನಷ್ಟೇ ಜೈನ ಬೌದ್ಧರು ಹೇಳಿದಂತಾಯಿತು. ದೇವರ ವಿಷಯವಾಗಿ ಚಿತ್ತದಲ್ಲಿ ನಿಜವಾಗಿ ಹಂಬಲವನ್ನು ಹುಟ್ಟಿಸುವ ಸಾಧನಗಳನ್ನು ತೊರೆದು, ಕಿಂಬಹುನಾ ಕಡೆಗಣಿಸಿ, ಬರಿಯ ದೇವರ ಬಗ್ಗೆ ಬಾಯಿತೀಟಿಯನ್ನು ತೀರಿಸಿಕೊಳ್ಳುವಂತೆ ಮಾತನಾಡಿ, ಅದರೊಳಗೇ ಆನಂದವನ್ನು ಅನುಭವಿಸುವ ಕರ್ಮಠರಾದ ಬ್ರಾಹ್ಮಣರ ವಿರುದ್ಧವಾಗಿ ಕ್ಷತ್ರಿಯರು ಈ ಸಂಪ್ರದಾಯಗಳನ್ನು ಹೂಡಿದರು; ಕೈ ಹಿಡಿದೆಳೆದರೆ, ಮೈ ತಾನಾಗಿಯೇ ಬರುವಂತೆ, ಕ್ಷತ್ರಿಯರಾದ ಹೊಸ ಸಂಪ್ರದಾಯಿಕರು ಜಾತಿ, ಗೋತ್ರಕ್ಕಿಂತ ಸದಾಚರಣೆ ಹಾಗೂ ಶುದ್ಧಾಚರಣೆಗೆ ಇಷ್ಟೆಂದು ಬೆಲೆಗೊಟ್ಟಿದ್ದರಿಂದ ಈ ಸಂಪ್ರದಾಯಗಳು ಹಿಂದುಸ್ಥಾನದೊಳಗೆ ಬೇಗನೇ ಬೆಳೆದು ಬಲಿದು ಇಡೀ ಭರತಖಂಡದಲ್ಲೆಲ್ಲ ಧರ್ಮದ ಕೋಲಾಹಲವೆಬ್ಬಿಸಿ, ಕೆಲದಿನಗಳ ವರೆಗೆ ವೈದಿಕಧರ್ಮವನ್ನು ನಡುಗಿಸಿ, ನಲುಗಿಸಿದವು. ಜೈನ ಬೌದ್ಧ ಸಂಪ್ರದಾಯಿಗಳ ಆದಿಗರು ಸಾಮಾನ್ಯವಾಗಿ ಕ್ಷತ್ರಿಯರೇ ಆಗಿದ್ದರು; ಅವರು ಬರಿಯ ವೀರಪುರಷರಷ್ಟೇ ಆಗಿರದೆ, ದೊಡ್ಡ ದೊಡ್ಡ ರಾಜಮನೆತನದಲ್ಲಿ ಹುಟ್ಟಿ ಬೆಳೆದ ಗರ್ಭರಾಜಪುತ್ರರು. ವೈದಿಕಧರ್ಮದಲ್ಲಿ ಕೇವಲ ಯಜ್ಞ ಹಾಗೂ ಕರ್ಮಕಾಂಡದ ರಗಳೆಯೇ ಬೆಳೆದುದರಿಂದ, ವೈದಿಕಧರ್ಮದ ಪುರಾತನವಾದ ಮರಕ್ಕೆ ಈ ಕವಲುಗಳೊಡೆದವು; ಜೈನ ಬೌದ್ಧಧರ್ಮಗಳು ವೈದಿಕದಧರ್ಮದ ಶಾಖೆಗಳೆಂದು ಹೇಳಿದರೆ ತಪ್ಪಾಗದು; ಏಕೆಂದರೆ, ಅವುಗಳಲ್ಲಿ ತುದಿ ಮೊದಲ್ಗೊಂಡು ವೈದಿಕಧರ್ಮದ ಕಲಾಂಶಗಳು ಅಲ್ಲಲ್ಲಿ ಕಂಗೊಳಿಸುತ್ತಿವೆ. ವೈದಿಕಧರ್ಮದೊಳಗೆ ಭಕ್ತಿಗೆ ವಿಶೇಷ ಪ್ರಾಶಸ್ತ್ಯಕೊಟ್ಟು, ಪೂರ್ಣಾವತಾರನೂ, ವಿಭೂತಿವಿಶೇಷನೂ ಆದ ಶ್ರೀಕೃಷ್ಣನ ಭಕ್ತಿಯನ್ನು ಹೆಚ್ಚಿಸಿ, ವಿಶ್ವತೋಮುಖವಾಗಿ ಹರಿಯುವ ವೈದಿಕಧರ್ಮಕ್ಕೆ ಭಾಗವತಧರ್ಮವು ಒಮ್ಮುಖವಾಗಿ ಹರಿಯಲಿಕ್ಕೆ ಹಚ್ಚಿತು. ವೈದಿಕಧರ್ಮವೆಂಬ ಪುರಾಣವೃಕ್ಷಕ್ಕೆ ಬಿಟ್ಟ ಹಣ್ಣುಗಳಲ್ಲಿ ಭಾಗವತಧರ್ಮವೆಂಬುದೊಂದು ಭಕ್ತಿರಸದಿಂದ ಸುರಿಯುತ್ತಿರುವ ರಸಗಾಯಿಯಾಗಿದೆ; ಇಂಥ ರಸವಿಶೇಷವುಳ್ಳ

ಹಣ್ಣು ಆ ಕಾಲಕ್ಕೆ ಸಿಗದಿದ್ದರೆ, ವೈದಿಕಧರ್ಮವು ಉಳಿಯುತ್ತಿರಲಿಲ್ಲ. ಭಾಗವತಧರ್ಮಕ್ಕೂ ವೈದಿಕಧರ್ಮಕ್ಕೂ ಈ ವಿಧದ ಜೀವಾಳ ಸಂಬಂಧವಿದೆ. ಜೈನ ಬೌದ್ಧಮತಗಳು ಆರ್ಯಧರ್ಮವೆಂಬ ವೃಕ್ಷಕ್ಕೆ ಬಿಟ್ಟ ಮಘಮಘಿಸುವ ಹೂವುಗಳಂತಿವೆ. ಆದುದರಿಂದಲೇ ಜೈನ ಬೌದ್ಧ ಮತಗಳು ಆರ್ಯಧರ್ಮದ ಬೌದ್ಧಿಕ ಮಕ್ಕಳೆಂದೆನ್ನುವದು. ನಾವು ಹೇಳತೊಡಗಿರುವ ಹಿಂದೂಜನಾಂಗಗಳೊಳಗಿನ ಈ ಮೂರು ಮತಗಳ ಆದಿಗರು ಕ್ಷತ್ರಿಯ ರಾಜಪುತ್ರರೇ ಆಗಿರುವರೆಂಬುದು ವಿಶೇಷ ಭಾರವಣೆಯ ಸಂಗತಿಯು; ಇದರ ಮೇಲಿಂದ ಈ ಕಾಲಕ್ಕೆ ಧರ್ಮಸ್ಥಾಪನೆಯು ಕಾರ್ಯವು ಕ್ಷತ್ರಿಯರ ಕಡೆಗೆ ಹೇಗೆ ಬಂತೆಂಬುದು ತಿಳಿಯುವದು.

ಜೈನಮತವು:- ಆರ್ಯಜನಾಂಗದೊಳಗೆ ಹುಟ್ಟಿ ಬಾಳಿಕೊಂಡಿರುವ ಅನೇಕ ಪುರಾಣಮತಗಳಲ್ಲಿ ಜೈನಮತವೊಂದು ಅತಿ ಪ್ರಾಚೀನ ಮತವಾಗಿದೆ; ಆದರೂ ಈ ಬಗ್ಗೆ ಅವರಲ್ಲಿ ಇಷ್ಟು ಮಟ್ಟಿಗೆ ಪ್ರಾಚೀನ ಗ್ರಂಥಗಳಾವೂ ದೊರೆಯುವದಿಲ್ಲ. ತಮ್ಮ ಮತ ಪ್ರವರ್ತಕರಾದವರು ೨೪ ಮಂದಿ ತೀರ್ಥಂಕರರೆಂದು ಜೈನರು ಬಗೆಯುತ್ತಾರೆ. ಪಾರ್ಶ್ವನಾಥ ಸ್ವಾಮಿಯೇ ಜೈನಮತದ ಆದಿ ಗುರು; ಮುಖ್ಯವಾಗಿ ಮಹಾವೀರ ಸ್ವಾಮಿಯು ಜೈನಮತದ ಕೊನೆಯ ದೇವದೂತನು; ವಿದೇಹನಗರನೆರೆಯಲ್ಲಿರುವ ವೈಶಾಲಿಲಿಚ್ಛವಿ ಎಂಬ ಚಿಕ್ಕ ರಾಜಮನೆತನದಲ್ಲಿ ಶ್ರೀಮಹಾವೀರನು ಜನಿಸಿದನು; ಈತನ ವಂಶದ ಹೆಸರು ಜ್ಞಾತೃಕ ಅಥವಾ ಜ್ಞಾತ ಪುತ್ರ; ಚಿಕ್ಕವನಿರುವಾಗಲೇ ಶ್ರೀಮಹಾವೀರಸ್ವಾಮಿಯು ಸಂಸಾರವನ್ನು ಬಿಟ್ಟು, ವಾರಸನಾಥಜೀಯವರ ಸಂಪ್ರದಾಯಕ್ಕೆ ಸೇರಿಕೊಂಡು, ಅದರಲ್ಲಿಯೇ ಮುಂದಾಳಾದ್ದರಿಂದ, ಶಿಷ್ಯರಿಂದ ಅವನಿಗೆ ಮಹಾವೀರ, ಜಿನ, ವರ್ಧಮಾನ ಹೀಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟರು. ಮಹಾವೀರದೇವನು ಮುದುಕನಿರುವಾಗ ಬುದ್ಧದೇವನುಹುಡುಗನಿದ್ದನೆಂದು ಕೆಲವರ ಊಹೆ; ಮಹಾವೀರದೇವನ ನಿರ್ವಾಣಕಾಲ ಕ್ರಿ.ಶ.ಪೂ. ೫೨೭ ಎಂದು ಸಿದ್ಧಾಂತ. ಜೈನರಲ್ಲಿ ಶ್ವೇತಾಂಬರ, ದಿಗಂಬರ ಎಂಬೆರಡು ಪಂಗಡಗಳಿವೆ; ಶ್ವೇತಾಂಬರರು ಉತ್ತರಹಿಂದುಸ್ಥಾನದಲ್ಲಿ ಹೆಚ್ಚಿಗಿದ್ದು,

ದಕ್ಷಿಣಹಿಂದುಸ್ಥಾನದಲ್ಲಿ ದಿಗಂಬರಜೈನರ ಸಂಖ್ಯೆ ಹೆಚ್ಚಿದೆ. ಯತಿಗಳು ಬತ್ತಲೆಯಾಗಿರಬೇಕೆಂಬ ವ್ರತವನ್ನು ಶ್ವೇತಾಂಬರರು ಅಗ್ರಾಹ್ಯವೆಂದೆಣಿಸಿದ್ದರಿಂದ ದಿಗಂಬರರು ಬೇರೆಯಾಗಲಿಕ್ಕೆ ಕಾರಣವಾಯಿತು.

ಮಹಾವೀರಪಂಥ:~ ಜೈನರ ಮುಖ್ಯವಾದ ಧರ್ಮಗ್ರಂಥವೆಂದರೆ, ನಿರ್ಗ್ರಂಥವು. ಮಹಾತ್ಮ ಮಹಾವೀರಸ್ವಾಮಿಗಿಂತಿದು ಪ್ರಾಚೀನವಾದುದು. ಮಹಾವೀರಸ್ವಾಮಿಯು ತನ್ನದೊಂದು ಬೇರೆ ಪಂಥವನ್ನೇ ಸ್ಥಾಪಿಸಲಿಲ್ಲ. ಆದರೆ, ಮೊದಲಿನ ಜೈನಮತದೊಳಗೆ ಹೆಚ್ಚುಕಡಿಮೆ ಮಾಡಿತಿದ್ದಿದನು; ಮತ್ತು ಅವೇ ನಿಯಮಗಳನ್ನು ಕಠಿಣಗೊಳಿಸಿ, ಅದಕ್ಕೆ ಪಂಚಯಾಮವೆಂದು ಹೆಸರು ಕೊಟ್ಟನು; ಪಂಚಯಾಮವೆಂದರೆ, ಅಹಿಂಸೆ, ಸೂನೃತ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಮುಂತಾದ ಮಹಾವ್ರತಗಳನ್ನೊಳಗೊಂಡಿರುವ ಮತವು. ಮಹಾವೀರಸ್ವಾಮಿಯು ಬಾಲಬ್ರಹ್ಮಚಾರಿಯಿದ್ದುದರಿಂದ ಸಮಾಜದೊಳಗೆ ರೂಢವಾಗಿರುವ ತಿಳುವಳಿಕೆಗಳನ್ನು ತೆಗೆದುಹಾಕಲಿಕ್ಕೆ ಯತ್ನಿಸಲಿಲ್ಲ; ಅಥವಾ ಶ್ರದ್ಧೆ ಹಾಗೂ ಸದಾಚಾರದ ತಳಹದಿಯ ಮೇಲೆ ಹೊಸ ಪಂಥವನ್ನೊಂದು ಹುಟ್ಟಿಸಲಿಕ್ಕೂ ಹೆಣಗಲಿಲ್ಲ. ತಮ್ಮ ಪಂಥವು ಸೃಷ್ಟಿಯ ಆರಂಭದಿಂದಲೂ ಇದ್ದುದೆಂದು ಜೈನರ ನಂಬಿಗೆಯು.

ಜೈನಧರ್ಮದ ಸಿದ್ಧಾಂತ:~ ಜೈನಧರ್ಮದವರು ತತ್ಕಾಲಕ್ಕೆ ಹಿಂದೂಧರ್ಮದ ತಿದ್ದುಪಡಿಗಾಗಿ ಯತ್ನಿಸಿದರು. ಹಿಂದೂಧರ್ಮದಲ್ಲಿಯ ಜಾತಿಗೋತ್ರಗಳಲ್ಲಿ ಗೊಂದಲವೆಬ್ಬಿಸದೆ, ನಡೆನುಡಿಗಳನ್ನು ಜರಿಯದೆ, ದೇವದೇವತೆಗಳನ್ನು ದೂಷಿಸದೆ, ಸುಮ್ಮನೆ ತಮ್ಮದೊಂದು ಬೇರೆ ದಾರಿಯನ್ನು ಹಿಡಿದುಬಿಟ್ಟರು. ಪ್ರಕೃತಿ ಹಾಗೂ ಜೀವ ಅವೆರಡಕ್ಕೂ ಸಂಬಂಧವಿಲ್ಲೆಂದು ಜೈನರ ಮತಸಿದ್ಧಾಂತ. ಸೃಷ್ಟಿಯೊಳಗಿನ ಕಲ್ಲು, ಮಣ್ಣು, ಮರ, ಕಟ್ಟಿಗೆ ಮೊದಲಾದವುಗಳಲ್ಲಿಯೂ ಜೀವವಿರುವದೆಂದು ಅವರದೊಂದು ಮುಖ್ಯ ಸಿದ್ಧಾಂತವು. ಜೈನರು ದೇವರ ಇರುವಿಕೆಯನ್ನು ಒಪ್ಪುವದಿಲ್ಲ; ಶ್ರೇಷ್ಠನೂ, ತ್ಯಾಗಿಯೂ ಆದ ಮನುಷ್ಯನೇ ದೇವರೆಂದು ಅವರ ಭಾವನೆ. ಜೈನಮತದ ಇನ್ನೊಂದು ಜೀವಾಳದ ಸಿದ್ಧಾಂತವೆಂದರೆ, ಅಹಿಂಸೆಯು; ಈ ಸಿದ್ಧಾಂತದೊಳಗೆ ಜೈನ

ರನ್ನು ಸರಿಗಟ್ಟುವವರು ಭಾರತವರ್ಷದಲ್ಲೆಯೇ ಯಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಜೈನರು ಇಷ್ಟು ಕಟ್ಟುನಿಟ್ಟಾದ ಅಹಿಂಸಾ ವಾದಿಗಳಿದ್ದರೂ, ಧರ್ಮಯುದ್ಧವಾಡುವದೂ, ಶಿಕ್ಷೆ ಕೊಡುವದೂ ಪಾಪವೆಂದು ತಿಳಿಯುವದಿಲ್ಲ; ಜೈನಮತದಂತೆ, ಮುಕ್ತಿಯೆಂದರೆ ಶಾಶ್ವತವಾದ ಮನಸ್ಸಿನ ಶಾಂತಿ.

ಜೈನಧರ್ಮದಿಂದಾದ ಲಾಭ ಅಥವಾ ಹಾನಿ:- ಹಿಂದೂದೇಶದೊಳಗೆ ಜೈನಧರ್ಮವು ಚೆನ್ನಾಗಿಯೇ ಹಬ್ಬಿಕೊಂಡಿತು; ಎಂದಾದರೂ ಭಾರತೀಯರಿಗೆ ಸನ್ಯಾಸ, ಅಹಿಂಸೆ ಅವೆಲ್ಲವೂ ಬೇಕಾದ ತತ್ವಗಳು; ಹೆಚ್ಚಿಗೇನು ಈ ಮಾತುಗಳನ್ನಾಡತೊಡಗಿದರೆ, ಭಾರತೀಯರಿಗೆ ಒಂದು ವಿಧದ ಹುಚ್ಚೇ ಹಿಡಿಯುತ್ತದೆ. ಜೈನಮತದೊಳಗಿನ ತತ್ವ, ಆಚಾರಗಳೆಲ್ಲವೂ ಆರ್ಯಧರ್ಮದ ತತ್ವಗಳಂತೆಯೇ ಇದ್ದರೂ, ಜೈನರು ತಮ್ಮ ಮತದೊಳಗೆ ಅಹಿಂಸೆಗೆ ವಿಶೇಷ ಪ್ರಾಶಸ್ತ್ಯ ಕೊಟ್ಟದ್ದೇ ಹೆಚ್ಚಿನ ಸಂಗತಿಯು. ಉಪನಿಷತ್ಕಾಲಕ್ಕೆ ಹೇಗೆ ಅನೇಕ ಸ್ವತಂತ್ರ ವಿಚಾರ ಶೀಲರು ಯಜ್ಞಪದ್ಧತಿಗೆ ವಿರೋಧ ಕಟ್ಟಿ, ಅದನ್ನು ಬಗೆಬಗೆಯಿಂದ ಖಂಡಿಸಿ, ತತ್ವಜ್ಞಾನಕ್ಕೆ ಪ್ರಾಧಾನ್ಯವನ್ನು ಕೊಟ್ಟರೋ ಹಾಗೆಯೇ ಈ ಕಾಲದಲ್ಲಿ ಆರ್ಯರಾದ ಜೈನರು ಜಾತಿಯ ಕಟ್ಟನ್ನು ಕೆಡಿಸದೆ, ಆರ್ಯಧರ್ಮದೊಳಗಿನ ವಿಶಿಷ್ಟವಾದ ಪದ್ಧತಿ ಆಚಾರಗಳನ್ನೇ ತಮ್ಮ ಮತಕ್ಕೆ ಜೀವಾಳವನ್ನಾಗಿಟ್ಟು ನಡೆದರು. ಜೈನರ ಅಹಿಂಸಾಪ್ರಧಾನವಾದ ಮತದಿಂದ ಬ್ರಾಹ್ಮಣರ ಯಜ್ಞಸಂಸ್ಥೆಗೆ ಚೆನ್ನಾಗಿ ಧಕ್ಕೆ ತಗಲಿದರೂ, ಅದರಿಂದ ಭಾರತೀಯರ ರಾಜನೀತಿಗೇನೇ ಕೊಡ್ಲಿ ಬಿತ್ತೆಂದು ಕೆಲವರು ಆಕ್ಷೇಪಿಸುತ್ತಾರೆ; ಏಕೆಂದರೆ ಜೈನಮತದೊಳಗೆ ಹೇಳಿರುವಷ್ಟು ಅಹಿಂಸೆಯಾಗಲಿ, ತ್ಯಾಗವಾಗಲಿ ಸಾಮಾನ್ಯಜನತೆಗೆ ನಿಲುಕುವಂಥ ವಿಷಯವಲ್ಲವಾದ್ದರಿಂದ ಐಹಿಕ ಉನ್ನತಿಗೆ ಇಂಥ ತತ್ವಗಳು ಬಾಧಕವೆಂದು ಅನೇಕರ ಅಭಿಪ್ರಾಯ. ಹಿಂದೂದೇಶವು ತ್ಯಾಗಭೂಮಿಯಾದ್ದರಿಂದ, ತ್ಯಾಗದ ಕಲ್ಪನೆಯು ಯಾವಾಗ ಕುಂದುವದೋ, ಆಗ ಅದನ್ನು ಹೆಚ್ಚಿಸಲಿಕ್ಕೆ ಇಂಥ ಮತಗಳು ಹುಟ್ಟುತ್ತಿರುತ್ತವೆಂಬುದು ಅನೇಕ ಮತಗಳ ಹುಟ್ಟಿನ ಇತಿಹಾಸವನ್ನು ಸೂಕ್ಷ್ಮವಾಗಿ ವಿಚಾರಿಸಿದರೆ ತಿಳಿ

ಯುವದು. ರಾಷ್ಟ್ರೀಯ ಅಥವಾ ರಾಜನೀತಿದೃಷ್ಟಿಯಿಂದ ಜೈನಮತ ದಿಂದ ಈ ಬಗೆಯಾದ ಹಾನಿ ತಪ್ಪಿದರೂ, ಕರುಣೆಯ ದೃಷ್ಟಿಯನ್ನು ವ್ಯಾಪಕಗೊಳಿಸಿ, ಜೈನರು ಒಂದು ಪಂಗಡದ ಮಾನವಸ್ವಭಾವವನ್ನು ಹಣ್ಣುಗೊಳಿಸಲಿಕ್ಕೆ ಮಾಡಿದ ಯತ್ನವೇನೂ ಸಾಮಾನ್ಯವಾದ ಲಾಭ ವಲ್ಲ; ಆದರೆ, ಒಂದೆತೆಯಿಂದ ಮನುಷ್ಯಸ್ವಭಾವವನ್ನು ದಯೆಯಿಂದ ತುಂಬಬೇಕೆಂದು ಮಾಡಿದ ಯತ್ನದೊಳಗೆ ಮೈಪುರೆತು ಜೈನರು ತಮ್ಮ ಮೈಮೇಲಿನ ಮಲಿನವಾದ ಬಟ್ಟೆಗಳನ್ನು ಸಹ ತೊಳೆಯಲಿಕ್ಕೆ ಹಿಂಜರಿ ದಿದ್ದು ದಯೆಯ ಪರಾಕಾಷ್ಟೆಯೆಂತಲೇ ಹೇಳಲಿಕ್ಕೆಬೇಕು.

ಜೈನರ ನಡೆನುಡಿಗಳು:– ಅಹಿಂಸೆಯ ಈ ಕಲ್ಪನೆಯು ಅಳತೆ ಗೆಟ್ಟು, ತಲೆ ಬೋಳಿಸದೆ, ತಲೆಯ ಮೇಲಿನ ಕೂದಲುಗಳನ್ನು ಕಿತ್ತು ಕೊಳ್ಳುವ ಪದ್ಧತಿಯು ಪ್ರಾರಂಭವಾಯಿತು. ಮೈಮೇಲೆ ಹುಳಹುಪ್ಪಡಿ ಗಳು ಓಡಾಡತೊಡಗಿದರೆ, ಅವುಗಳಿಗೆ ಧಕ್ಕೆ ತಗಲಿಸದೆ, ಹಾಗೇ ಓಡಾಡಗೊಡುವ ಮಟ್ಟಿಗೂ ಸುಮ್ಮನಿರುತ್ತಿದ್ದರು. ನಡೆಯುವಾಗ್ಗೆ ತಮ್ಮ ಕಾಲ್ಕೆಳಗೆ ಇರುವೆ ಮುಂತಾದ ಪ್ರಾಣಿಗಳು ನಾಯ ಬಾರದೆಂದು ಅತ್ಯಂತ ಜಾಗರೂಕತೆಯಿಂದ ಕಣ್ಣಲ್ಲಿ ಕಣ್ಣಿಟ್ಟು, ನೋಡಿಕೊಂಡು ಹೂವಿನ ಹಾಸಿಗೆಯ ಮೇಲೆ ನಡೆಯುವಷ್ಟು ಮೆಲ್ಲಗೆ ನಡೆಯುತ್ತಿದ್ದರು. ಯಾವ ಠಾವಿನಲ್ಲಾದರೂ ಕುಳ್ಳಿರಬೇಕಾದರೆ ತಮ್ಮ ಕೈಯಲ್ಲಿರುವ ಬಟ್ಟೆಯಿಂದ ಆ ಸ್ಥಳವನ್ನು ಝಾಡಿಸಿ, ಕುಳಿತುಕೊಳ್ಳುತ್ತಿದ್ದರು. ರಾತ್ರೆ ದೀಪ ಹಚ್ಚಿರರೆ, ದೀಪದಿಂದ ಪ್ರಾಣಿಗಳು ನಾಯುವವೆಂದು ರಾತ್ರೆಯ ವೇಳೆ ಜೈನರು ದೀಪವನ್ನು ಹಚ್ಚುತ್ತಿರಲಿಲ್ಲ. ಆದುದರಿಂದ ಹಗಲು ಹೊತ್ತೇ ಅವರು ತಮ್ಮ ರಾತ್ರೆಯ ಊಟವನ್ನು ತೀರಿಸಿಕೊಳ್ಳುತ್ತಿ ದ್ದರು. ಕಿವಿಯಿಂದ ಇಂಪಾದ ಸ್ವರವನ್ನು ಕೇಳದೆ, ಕಣ್ಣಿನಿಂದ ಸೊಗ ಸಿನ ನೋಟವನ್ನು ನೋಡದೆ, ನಾಲಿಗೆಯಿಂದ ಸವಿಯನ್ನವನ್ನು ಸವಿ ಯದೆ ಸಂಪೂರ್ಣ ವಿರಕ್ತರಾಗಿದ್ದುಕೊಂಡು ಹರಯೋಗವನ್ನು ಸಾಧಿ ಸುತ್ತಿದ್ದರು; ಮತ್ತು ತಾವು ಮೋಕ್ಷಕ್ಕೆ ಪಾತ್ರವಾಗುವ ಪರಿಣತ ಸ್ಥಿತಿಗೆ ಮುಟ್ಟಿದ್ದು ತಮ್ಮ ತಮಗೆ ತಿಳಿದೊಡನೆ, ಏಕಾಂತಸ್ಥಳಕ್ಕೆ ಹೋಗಿ, ಅನ್ನನೀರಿಲ್ಲದೆ, ಪ್ರಾಣಬಿಡುತ್ತಿದ್ದರು. ಇವುಈಗ್ಯೂ ಜೈನರಲ್ಲಿ ಬಳ

ಕೆಯಲ್ಲಿವೆ. ಇವೆಲ್ಲವೂ ಜೈನಮತದೊಳಗಿನ ಮುಖ್ಯಾಂಶಗಳಾಗಿದ್ದರೂ, ಇವುಗಳಲ್ಲಿ ಅನೇಕ ವ್ರತನಿಯಮುಪವಾಸಗಳನ್ನು ಪ್ರತಿಯೊಬ್ಬನೂ ಕೈಲಾದಮಟ್ಟಿಗೆ ಆಚರಿಸಲೇಬೇಕೆಂದು ಧರ್ಮದ ಕಟ್ಟಳೆಯುಂಟು; ಮತ್ತು ಅದರಂತೆ ಅನೇಕ ಜೈನರೂ ಆಚರಿಸುವದುಂಟು; ಮೇಲೆ ಹೇಳಿದಂತೆ ಕಠೋರತರವಾದ ನಿಯಮವ್ರತಗಳಿಂದ ಮುಕ್ತಿಯನ್ನು ಪಡೆದವರಿಗೆ, ಅರ್ಹತರೂ ಅಥವಾ ಜಿನರು ಎಂದು ಹೇಳುವ ವಾಡಿಕೆಯುಂಟು. ಜೈನರಲ್ಲಿ ವೈದಿಕ ಲೌಕಿಕವೆಂಬೆರಡು ಭೇದಗಳುಂಟು; ಲೌಕಿಕರಿಗೆ ಶ್ರಾವಕರೆಂದೂ,ವೈದಿಕರಿಗೆ ಶ್ರಮಣರೆಂದೂ ಹೆಸರು; ಜೈನರ ಮಠಗಳಿಗೆ ಬಸ್ತಿ ಅಥವಾ ಬಸದಿಯೆನ್ನುತ್ತಾರೆ; ಇದು ವಸತಿಯೆಂಬ ಶಬ್ದದಿಂದ ಬಂದಿದೆ; ಈ ಬಸ್ತಿಯಲ್ಲಿ ಜೈನರು ತಮಗೆ ಪೂಜ್ಯವಾಗಿರುವ ತೀರ್ಥಂಕರರ ವಿಗ್ರಹಗಳನ್ನು ಸ್ಥಾಪಿಸಿ, ಪೂಜಾದಿಸಂಭ್ರಮಗಳನ್ನು ನಡಿಸುವದುಂಟು.

೭ ನೇ ಪ್ರಕರಣ.

ಬೌದ್ಧಕಾಲ.

(ಕ್ರಿ. ಪೂ. ಪೂರ್ವ ೫೫೭–೩೦೦ ವರೆಗೆ)

ಸೀಮಾಪುರುಷರ ಕಾರ್ಯ:- ಈ ಕಾಲದಲ್ಲಿ ಗೌತಮಬುದ್ಧನಂಥ ಶಕಪುರುಷನು ಮೈದೋರಿ, ಜನತೆಯಲ್ಲಿ ವಿಲಕ್ಷಣವಾದ ವೈಚಾರಿಕ ಗಲಭೆಯನ್ನೆಬ್ಬಿಸಿ, ತನ್ನದೊಂದು ಬೇರೆ ಪಂಥವನ್ನೇ ನಿರ್ಮಾಣ ಮಾಡಿದ್ದರಿಂದ ಈ ಕಾಲಕ್ಕೆ ಬೌದ್ಧಕಾಲವೆಂದು ಹೇಳುವದುಂಟು. ದೈವೀಸಂಪತ್ತಿಯಿಂದ ಬೆಳಗುವ ಪುರುಷರು ಕಾಲಕ್ಕೆ ತಕ್ಕಂತೆ ನಡೆಯದೆ ತಾವು ಹೇಳಿದಂತೆ ಕಾಲವನ್ನು ತಿರುಗಿಸುವದುಂಟು. ಕಾಲವನ್ನೇ ಆಳುವ ಈ ಮಹಿಮಾಪುರುಷರು ಜನಾಂಗದ ಇತಿಹಾಸವನ್ನು ನಿರ್ಮಿಸಿ, ಅದಕ್ಕೆ ಹೊಸ ಹೊಸದಾದ ಚೈತನ್ಯದಿಂದ ಚಾಲನ ಕೊಡುತ್ತಿರುವದರಿಂದ ಇವರಿಗೆ ಸೀಮಾ ಪುರುಷರೆಂದು ಹೆಸರು. ಈ ಸೀಮಾಪುರುಷರ ಚಾರಿತ್ರ್ಯವನ್ನು ನಾವು ಅಲ್ಲಲ್ಲಿ ಕಂಡು ಶೋಧಿಸಿದರೆ, ಜೇನು ಹುಟ್ಟಿಗೆ ಜೇನುನೊಣಗಳು ಮುತ್ತಿರುವಂತೆ, ಜನಗಳೆಲ್ಲರೂ ಈ ಸೀಮಾಪುರುಷರ ಸುತ್ತುಮುತ್ತಿರುವದು ನಮಗೆ ಕಂಡುಬರುತ್ತದೆ. ಈ ಸೀಮಾಪುರುಷರೆಂದರೆ, ವೈರಾಗ್ಯದ ತವರ್ಮನೆ; ಕಾರುಣ್ಯದ ಜೀವಂತಕಾವ್ಯಗಳು; ಪರಾರ್ಥಕ್ಕಾಗಿಯೇ ಜನ್ಮವೆತ್ತಿದ ಪುತ್ಥಳಿಗಳು; ಇಂಥವರು ಅವತರಿಸಿದೊಡನೆ ಪ್ರಪಂಚದೊಳಗಿನ ಮರುಳುಪ್ರಾಣಿಗಳು ಹುಚ್ಚು ಹಿಡಿದಂತೆ ಮನೆಮಾರು, ಹೆಂಡಿರುಮಕ್ಕಳು, ಆಸ್ತಿಪಾಸ್ತಿಯನ್ನೂ ನಾಲ್ದೆಕ್ಕೆ ಅರಸೊತ್ತಿಗೆಯನ್ನೇ ಎಡಗಾಲಿನಿಂದೊದ್ದು ಈ ಸೀಮಾಪುರುಷರನ್ನು ಬೆನ್ನಟ್ಟುವದರಲ್ಲೇನು ಸೋಜಿಗ? ಇಂಥ ಸೋಟವು ನಮಗೆ ಸೀಮಾಪುರುಷರು ಹುಟ್ಟಿದಕಾಲಕ್ಕೆಲ್ಲ ಸಿಕ್ಕಿಯೇ ಸಿಕ್ಕುತ್ತದೆ. ಉಪನಿಷತ್ಕಾಲವನ್ನು ಒಳಹೊಕ್ಕು ನೋಡಿರಿ! ರಾಮಾಯಣಕಾಲವನ್ನು

ನಿರೀಕ್ಷಿಸಿರಿ! ಮಹಾಭಾರತಕಾಲವನ್ನು ಪರೀಕ್ಷಿಸಿರಿ! ಅದೇ ಕೋಲ್ಮಿಂಚಿನ ಸೋಟವು ನಮಗೀಗ ಮಾರನೇ ಸಲ ಬುದ್ಧಯುಗದೊಳಗೆ ಮಿಂಚುತ್ತದೆ.

ಬುದ್ಧನ ಕಾಲದ ಸ್ಥಿತಿ:- ಗೌತಮಬುದ್ಧನಿಗೆ ಬೌದ್ಧರು ಅವತಾರಿಕನೆನ್ನುವುದುಂಟು; ಬೌದ್ಧಧರ್ಮ ಸ್ಥಾಪನೆಗೆ ಇಂಥವರು ಆಗಾಗ್ಗೆ ಹುಟ್ಟುವರೆಂದು ಬೌದ್ಧರ ನಂಬಿಗೆ; ಹಿಂದೂಜನರ ದೃಷ್ಟಿಯಿಂದ ಗೌತಮಬುದ್ಧನು ಹಿಂದೂಜನರಿಗೆ ಸಮ್ಮತವಾದ ಅವತಾರಿಕಪುರುಷನಲ್ಲವಾದರೂ, ಉತ್ತರಹಿಂದೂಸ್ತಾನದಲ್ಲಾಗಿ ಹೋದ ಶ್ರೀಜಯದೇವಕವಿಯು ತನ್ನ ದಶಾವತಾರ ಸ್ತೋತ್ರದೊಳಗೆ ಗೌತಮಬುದ್ಧನನ್ನೇ ವಿಷ್ಣುವಿನ ಅವತಾರವೆಂದೆಣಿಸಿರುವನು. ಈ ವಿಷಯವನ್ನು ಚರ್ಚಿಸುವದು ಇತಿಹಾಸಗಾರರಿಗೆ ಕಷ್ಟವಾಧ್ಯ. ವೃತ್ತ ನಮಗೆ ಸಂಬಂಧಿಸಿದ ಬುದ್ಧಕಾಲೀನ ವಿದ್ಯಮಾನಗಳನ್ನು ನಿರೀಕ್ಷಿಸೋಣ. ಶ್ರೇಷ್ಠ ವಿಭೂತಿಗಳು ಅವತಾರವೆತ್ತಿ ಬರಬೇಕಾದರೆ ತಕ್ಕ ಸ್ಥಿತಿಯ ಅವಶ್ಯ. ಕಿಂಬಹುನಾ, ಅಂಥ ಅವಶ್ಯವಾದ ಸ್ಥಿತಿಯು ಇರದಿದ್ದರೆ, ವಿಭೂತಿಗಳು ಹುಟ್ಟಿಬರುವದೇ ಇಲ್ಲ. ಬುದ್ಧನಕಾಲಕ್ಕೆ ಇಂಥ ಸಮಾಜಸುಧಾರಕನು ಸಮಾಜಪರಿಷ್ಕರಣಕ್ಕಾಗಿ ಕ್ಷತ್ರಿಯರಂಥ ಉಚ್ಚ ಹಾಗೂ ಸಮಾಜವನ್ನಾಳುವಂಥ ಜಾತಿಯಿಂದ ಹುಟ್ಟಿಬರದೇ ಬೇರೆ ಉಪಾಯವಿರಲಿಲ್ಲ; ಏಕೆಂದರೆ, ಸಮಾಜಕ್ಕೇ ಮಾರ್ಗದರ್ಶಿಗಳಾದ ಬ್ರಾಹ್ಮಣರು ಜಾತಿಯೇ ಮೇಲೆಂದು ಅಜ್ಞಾನದಿಂದ ನೀತಿಯನ್ನು ಲಕ್ಷಿಸದೆಯೂ ವೇದವಿಹಿತವಾದ ಯಜ್ಞದ ಮಹಿಮೆಯನ್ನು ಮರೆತೂ ಕೇವಲ ಇಂದ್ರಿಯ ತೃಪ್ತಿಗಾಗಿ, ಯಾವಾಗ್ಗೆ ವಿಧಿಹೀನ ಯಜ್ಞವನ್ನಾಚರಿಸುವರೋ, ಆಗ್ಗೆ ಅವರನ್ನು ದಾರಿಗೆ ತಂದು, ಅವರಿಗೆ ನಿಜವಾದ ದಾರಿಯನ್ನು ತೋರಿಸುವ ಭಾರವನ್ನು ಕ್ಷತ್ರಿಯರು ಹೊತ್ತಿರುವಂತೆ ನಮಗೆ ಇತಿಹಾಸದೊಳಗೆ ಪದೆಪದೆ ಕಾಣಿಸುತ್ತದೆ. ಸಮಾಜಕ್ಕೆ ಶಿರಸ್ಸಿನಂತೆ ಶ್ರೇಷ್ಠವಾಗಿರುವ ಬ್ರಾಹ್ಮಣಸಮಾಜಕ್ಕೆ ಅನೀತಿಯು ಹುಳಹತ್ತಿ, ಅದು ಕೆಡುತ್ತಿರುವದನ್ನು ಬರಿಗಣ್ಣಿನಿಂದ ನೋಡುತ್ತ ಕುಳ್ಳಿರುವದು ಯಾರಿಗೆ ತಾನೇ ಸಹ್ಯವಾದೀತು? ಇವ್ವರಿಂದಲೇ ಬುದ್ಧನ ಜನ್ಮ.

ಬುದ್ಧಜನ್ಮ:-ಈಗಣ ನೇಪಾಳದ ಗಡಿಯಲ್ಲಿ ಅನಾರ್ಯ ಪಂಗಡಕ್ಕೆ ಸೇರಿದ ಅನೇಕ ಜನರು ಚಿಕ್ಕ ಚಿಕ್ಕ ರಾಜ್ಯಗಳನ್ನು ಕಟ್ಟಿಕೊಂಡು ಆಳುತ್ತಿದ್ದರು. ಹೀಗೆ ಆಳಿಕೊಂಡು ಚಿಕ್ಕದೊಂದು ರಾಜ್ಯಕ್ಕೆ ಅಧಿಪತಿಯಾಗಿರುವವರಲ್ಲಿ ಶಾಕ್ಯರೆಂಬ ಜನರು ರೋಹಿಣೀನದಿಯ ದಂಡೆಯಲ್ಲಿ ಕಪಿಲವಸ್ತುವೆಂಬ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ಮನೆತನದಲ್ಲಿಯ ಶುದ್ಧೋದನನೆಂಬ ಅರಸನ ಹೆಂಡತಿಯಾದ ಮಾಯಾದೇವಿಯ ಹೊಟ್ಟೆಯಲ್ಲಿ 'ಲುಂಬಿನಿ' ಎಂಬೆಸರಿನ ಉಪವನದೊಳಗೆ ಕ್ರಿ. ಶ. ಪೂ. ೫೬೦ ರಲ್ಲಿ ಶಾಕ್ಯಸಿಂಹ ಗೌತಮಬುದ್ಧನು ಜನ್ಮವೆತ್ತಿದನು; ಈ ಕಪಿಲವಸ್ತುನಗರದ ಕುರುಹು ಈಗಲೂ ನೇಪಾಳದ ದಟ್ಟಾದ ಅರಣ್ಯದೊಳಗೆ ಉಳಿದುಕೊಂಡಿದೆ. ಅಶೋಕಮಹಾರಾಯನು ಬುದ್ಧಜನ್ಮಸ್ಥಾನವನ್ನು ನೋಡಹೋಗಿ, ಬುದ್ಧನಲ್ಲಿರುವ ತನ್ನ ಅಪಾರವಾದ ವಿಶ್ವಾಸಕ್ಕಾಗಿ ಇದು 'ಬುದ್ಧಜನ್ಮಸ್ಥಾನ' ವೆಂದು ಹೇಳಲಿಕ್ಕೆ ಅಲ್ಲಿಯೊಂದು ಶಿಲಾಸ್ತಂಭ ನಿಲ್ಲಿಸಿ, ಬೌದ್ಧಪಂಥದವರ ಮೇಲೂ, ಬುದ್ಧನ ಅನುಯಾಯಿಗಳ ಮೇಲೂ ಬಹು ಉಪಕಾರ ಮಾಡಿದ್ದಾನೆ.

ಬುದ್ಧನ ಬಾಲ್ಯ:- ಬುದ್ಧನು ಹುಟ್ಟಿದ ಏಳು ದಿವಸಕ್ಕೇನೇ ತಾಯಿಯಾದ ಮಾಯಾವತಿಯು ಮಡಿದುದರಿಂದ, ಆಗ ಆತನ ಅಬಚಿಯಾದ ಗೌತಮಿ ಎಂಬುವಳು ಸಿದ್ಧಾರ್ಥನನ್ನು ಮೊಲೆಯುಣಿಸಿ ಜೋಕೆ ಮಾಡಿ ದೊಡ್ಡವನನ್ನಾಗಿ ಮಾಡಿದಳು. ಸಿದ್ಧಾರ್ಥನು ಬಹು ರೂಪ ಸಂಪನ್ನನು. ತಂದೆಯಾದ ಶುದ್ಧೋದನನು ಸಿದ್ಧಾರ್ಥನ ಜನ್ಮಪತ್ರಿಕೆಯನ್ನು ಮಾಡಿಸಬೇಕೆಂದು ಜೋಯಿಸರನ್ನು ಕರೆಯಿಸಲು, ಜೋಯಿಸರು ಸಿದ್ಧಾರ್ಥನ ಕುಂಡಲಿಯನ್ನು ನೋಡಿ "ಸಂಸಾರದೊಳಗಿನ ದುಃಖವನ್ನು ಕಂಡು ಈತನು ಸಂಸಾರ ತ್ಯಾಗಿಯಾಗುವನು" ಎಂದು ಹೇಳಿದ ಮಾತಿಗೆ ರಾಜನು ಅಗಲೇ ಬಹು ಗಾಬರಿಯಾದನು; ಆದರೂ ಅದಕ್ಕೆ ತಕ್ಕ ಯೋಚನೆಗೈದು ಮಗನ ಕಣ್ಣಿಗೆ ಸಂಸಾರದೊಳಗಿನ ದುಃಖವು ಬೀಳಗೊಡದಂತೆ ಜಾಗರೂಕನಾಗಿರಲು ನಿರ್ಧರಿಸಿದನು; ಇತ್ತ ಬಾಲನಾದ ಸಿದ್ಧಾರ್ಥನು ಕ್ರಮೇಣ ದೊಡ್ಡವನಾಗುತ್ತ ನಡೆ

ದನು. ತಂದೆಯು ಅವನಿಗಾಗಿ ಉಪಾಧ್ಯಾಯರನ್ನು ನಿಯಮಿಸಿ ಶಿಕ್ಷಣ ಕೊಡಿಸಿದನು; ಆದರೂ ಬಾಲ್ಯದೊಳಗೆ ಸಿದ್ಧಾರ್ಥನು ಸ್ವಾಭಾವಿಕವಾಗಿ ಬಹು ಚಂಚಲನಿದ್ದರೂ, ಅತನ ಮನಸ್ಸು ಆಗಾಗ್ಗೆ ಆಧ್ಯಾತ್ಮಿಕ ವಿಷಯದ ಕಡೆಗೇ ಓಡಿ ಏಕಾಂತದೊಳಗೆ ಅಸರ ಪಡೆಯುತ್ತಿತ್ತು; ಹೀಗೆ ಹಗಲಿರಳು ಯಾವುದೋ ಒಂದು ಬಗೆಯ ಚಿಂತನೆಯಲ್ಲಿಯೇ ಅತನ ಮನಸ್ಸು ರಮಿಸುತ್ತಿರುವಂತೆ ಕಾಣಿಸುತ್ತಿತ್ತು; ಆದರಂತೆ, ಸಿದ್ಧಾರ್ಥನ ತಂದೆಯಾದರೂ ಮಗನ ಕಣ್ಣಿಗೆ ಜಗತ್ತಿನ ದುಃಖಮಯವಾದ ನೋಟವನ್ನು ಬೀಳಗೊಡಬಾರದೆಂದು ಮನುಷ್ಯಯತ್ನ ಮೀರಿ ಪ್ರಯತ್ನ ಪಡುತ್ತಿದ್ದನು; ಸಿದ್ಧಾರ್ಥನು ವಿದ್ಯಾಭ್ಯಾಸವನ್ನು ಮುಗಿಸಿ, ಶಸ್ತ್ರಾಸ್ತ್ರ, ರಾಜನೀತಿ ಮೊದಲಾದವುಗಳಲ್ಲಿ ಮೇಲಾದನು.

ಬುದ್ಧನ ಮದುವೆ ಮತ್ತು ವೈರಾಗ್ಯ:- ಪ್ರಪಂಚದೊಳಗಿನ ಪದ್ಧತಿಯಂತೆ ರಾಜನು ತನ್ನ ನೆರೆಯ ಅರಸುಮನೆತನದೊಳಗಿನ ಕನ್ಯೆಯನ್ನಾರಿಸಿ ಮಗನ ಮದುವೆ ಮಾಡಿದನು. ಸಿದ್ಧಾರ್ಥನ ಹೆಂಡತಿಯ ಹೆಸರು ಯಶೋಧರೆ, ರೂಪದಲ್ಲಿ ಲಾವಣ್ಯವತಿಯೂ, ಗುಣದಲ್ಲಿ ಸುಗುಣೆಯೂ, ಪತಿಸೇವೆಯಲ್ಲಿ ಮನನಿಟ್ಟಿರುವ ಪತಿವ್ರತೆಯೂ ಆದ್ದರಿಂದ, ಈ ಹೊಸ ಗೆಳತಿಯಿಂದ ಸಿದ್ಧಾರ್ಥನ ಮನಸ್ಸು ಸಂಸಾರದೊಳಗೆ, ಬಲುಮಟ್ಟಿಗೆ ಮುಳುಗಿತು; ಮತ್ತು ರಾಜನಿಗಾದರೂ ಸಾಧ್ಯವಾದಷ್ಟು ಪ್ರಪಂಚದಲ್ಲಿನ ಸುಖಮಯವಾದ ಅಂಶವನ್ನಷ್ಟೇ ಮಗನ ಕಣ್ಣಿಗೆ ಹಾಕಬೇಕೆಂಬ ಹುಚ್ಚು ಹಂಬಲವಿರುವದರಿಂದಂತೂ, ಈತನ ಮನಸು ಮರುಳುಗೊಳಿಸಲಿಕ್ಕೂ, ಮನಸನ್ನು ವಿಷಯಗಳ ಕಡೆಗೆ ಎಳೆದು ಅಲ್ಲಿಯೇ ಯಾವಾಗಲೂ ತೊಡಗಿರುವಂತೆ ಮಾಡಲಿಕ್ಕೂ ಅತನ ಸುತ್ತುಮುತ್ತು ಹೆಣ್ಣು, ಹೊನ್ನು, ಮಣ್ಣು, ನೃತ್ಯ, ಗೀತ, ವಾದ್ಯ ಮೊದಲಾದ ಮನಸ್ಸನ್ನೆಳೆಯುವ ಭದ್ರವಾದ ಕೋಟೆಯನ್ನೇ ರಚಿಸಿದ್ದನೆಂದರೆ ಸಲ್ಲುವದು. ಆದರೆ, ಮನುಷ್ಯಪ್ರಯತ್ನದ ಓಟವು ಎಲ್ಲಿಯ ವರೆಗೆ? ಕೇವಲ ದುಃಖಮಯವಾಗಿರುವ ಪ್ರಪಂಚದಲ್ಲಿ ಸುಖಮಯಸ್ವರೂಪದ ಪರಿಮಾಣವೆಂದರೆ, ಸಮುದ್ರದೊಳಗೆ ಮಳಲಿನ ಕಣದಷ್ಟು; ಅಂದಮೇಲೆ ಅದನ್ನು ಮರೆಮಾಜುವದೆಷ್ಟು ದಿವಸ? ಬಾಲ್ಯದೊಳಗೆ ಇತಿಹಾಸಿಕದ ವಿರಾಗ

ಭಾವವು ಇತ್ತೀಚೆ ಸಿದ್ಧಾರ್ಥನಲ್ಲಿ ಪ್ರಪಂಚದ ನವಿಯನ್ನುಣ್ಣುವ ಅವ
ಸರದೊಳಗೆ ಇಣಿಕಿಹಾಕಿರಲಿಲ್ಲ. ಒಂದಾನೊಂದು ದಿನ ಬೆಳಿಗ್ಗೆ
ಭಟ್ಟಂಗಿಗಳು ಹಾಡುವ ಹಾಡನ್ನು ಕೇಳಿ ಮನುಷ್ಯಜೀವನದ ಕ್ಷಣಿಕ
ಕಲ್ಪನೆಯು ಒಮ್ಮಿಂದೊಮ್ಮೆ ಸಿದ್ಧಾರ್ಥನ ಮನಸಿನಲ್ಲಿ ಮೈದೋರಿ
ಅವನನ್ನು ಒಂದೆರಡು ದಿವಸ ಹುಚ್ಚು ಹಿಡಿಸಿಬಿಟ್ಟಿತು; ಮೇಲೆ ಮೇಲೆ
ತೇಲಿಸಿ ನೋಡುವವರಿಗೆ ರಾಜ್ಯಭೋಗೈಶ್ವರ್ಯದ ಮಡುವಿನೊಳಗೆ
ಸಿದ್ಧಾರ್ಥನ ಮನಸು ಮುಳುಗಿರುವಂತೆ ತೋರಿದರೂ, ಆ ಮಡುವಿನ
ಕೆಳಗೆಯೇ ಪ್ರಖರಜ್ವಾಲೆಯಂಥ ದಿವ್ಯವೈರಾಗ್ಯವು ಅವನಲ್ಲಿ ಸ್ವಾಭಾವಿ
ಕವಾಗಿಯೇ ಮನೆಮಾಡಿಕೊಂಡು ಉರಿಯುತ್ತಿದ್ದಿತು; ಅಂದಮೇಲೆ,
ಮೇಲ್ಮೈಲೆ ಹಾಕುವ ಐಹಿಕವೂ ಕ್ಷಣಿಕವೂ ಆದ ಹುಲ್ಲಿನಂಥ ಹುರುಳಿ
ಲ್ಲದ ಪದಾರ್ಥದ ಆಮಿಷದಿಂದ ಅದು ಸೊಂದಿಹೋಗುವದೆಂತು?
ಭಗವಂತನ ಸಂಕಲ್ಪದಿಂದಲೋ! ಸಿದ್ಧಾರ್ಥನ ವೃಣ್ಯವಿಶೇಷದಿಂ
ದಲೋ! ಅಥವಾ ಭರತಭೂಮಿಯ ಭಾಗ್ಯವಿಶೇಷದಿಂದಲೋ! ಒಳ
ಗಿಂದೊಳಗೇ ಧಗಿಧಗಿಸುತ್ತಿದ್ದ ಆ ವೈರಾಗ್ಯ ಧಗೆಯು ಯಾವುದೋ
ಒಂದು ಹೊರಗಣ ನಿಮಿತ್ತಕ್ಕಾಗಿ ದಾರಿಕಾಯುತ್ತಿರುವಂತೆ ಕಾಣು
ತ್ತಿದ್ದಿತು; ಕ್ರಮೇಣ ಹೆಚ್ಚೆಚ್ಚು ಸೂಕ್ಷ್ಮವಾಗತೊಡಗಿರುವ ಸಿದ್ಧಾ
ರ್ಥನ ಸ್ವಭಾವವನ್ನು ಬಲಿಸಲಿಕ್ಕೆ ತಂದೆ, ತೊಂಡತಿ ಮೊದಲಾದವರಂತೂ
ತಮ್ಮ ಆಳವು ಮೀರಿ ಪ್ರಯತ್ನ ಪಡುತ್ತಿದ್ದರು. ನಾಂತಾರಿಕ ದುಃಖ
ಯಾತನೆಗಳ ಗಾಳಿಯು ಸಹ ಸಿದ್ಧಾರ್ಥನ ಮೈಗೆ ಸೋಂಕಗೊಡದಷ್ಟು
ಅವರು ಆತನನ್ನು ಬಲಿಸುತ್ತಿದ್ದರು; ಇಷ್ಟಾದರೂ ಒಮ್ಮೆ, ಸಿದ್ಧಾ
ರ್ಥನು ಪಟ್ಟಣದೊಳಗಿಂದ ಹಾಯ್ದು ತನ್ನ ಉದ್ಯಾನವನಕ್ಕೆ ಹೋಗು
ತ್ತಿರಲು, ಅಕಸ್ಮಾತ್ತಾಗಿ ದಾರಿಯಲ್ಲಿ ಒಬ್ಬ ಮುಪ್ಪಿನ ಮುದುಕನಾದ
ತಿರುಕರವನು ಕಣ್ಣಿಗೆ ಬಿದ್ದನು; ಬಲಗುಂದಿದವನೂ, ಕೈಯಲ್ಲಿ ಹಿಡಿದ
ಊರುಗೋಲಿನಿಂದ ನಡೆಯುವವನೂ ಆದ ಅವನನ್ನು ನೋಡಿದೊಡನೆ,
ಮನುಷ್ಯಜಾತಿಗೇನೇ ಬೆನ್ನಟ್ಟಿದ ಮುಪ್ಪು, ಮೃತ್ಯುಗಳ ದುಃಖದ ಚಿತ್ರ
ವೆಲ್ಲ ಕಣ್ಣಿಗೆ ಕಟ್ಟಿದಂತಾಗಿ, ಮೈ ಜುಮ್ಮೆಂದಿತು. ಮನಸಿನಲ್ಲಿ ಹುದುಗಿ
ಕೊಂಡಿದ್ದ ವೈರಾಗ್ಯವು ಒಮ್ಮಿಂದೊಮ್ಮೆ ಮೈದೋರಿ, ಕಾವೇರಿತು;



ಗೌತಮನಿಗೆ ಶವದರ್ಶನದಿಂದ ವೈರಾಗ್ಯ ಉತ್ಪನ್ನವಾಗುವುದು [ಪುಟ ೧೪೬]

ಈಗ ಅವನ ಮನಸಿನಲ್ಲಿ ನಿತ್ಯಾನಿತ್ಯ ವಸ್ತುವಿನ ವಿಚಾರಗೊಂದಲ ವೆದ್ದು ವೈರಾಗ್ಯದ ಬಿರುಗಾಳಿಯನ್ನುಂಟು ಮಾಡಿತು. ಈ ಬಿರುಗಾಳಿಯು ಸಿದ್ಧಾರ್ಥನಲ್ಲಿ ಅಡಿಯಿಟ್ಟಿದ್ದೇ ತಡ; ಒಂದೆರಡು ದಿವಸಗಳೆನ್ನುವಷ್ಟರಲ್ಲಿ ಸ್ವರ್ಗವನ್ನು ಧಿಕ್ಕರಿಸುವಂಥ ಅರಮನೆಯನ್ನೂ, ನಾಮಾನ್ಯರಿಗೆ ಅರೆಹುಚ್ಚು ಹಿಡಿಸಿ ಅರವುಗೆಡಿಸುವಂಥ ಅಂಗೈಯೆಳಗಿನ ಆರಗಿಳಿಯಂಥ ಮಡದಿಯನ್ನೂ, ಅದೇ ತಾನೇ ಹುಟ್ಟಿದ ಹೂವಿನ ಮೊಗ್ಗೆಯಂತಿರುವ ಮುದ್ದಿನ ಹಸುಗೂಸನ್ನೂ, ನಿರ್ದಯದಿಂದ ಬಿಡಿಸಿ ಬೀಸಾಡಿ, ರಾತ್ರೆಯಲ್ಲಿ ಓಡಿಸಿಬಿಟ್ಟಿತು. ಬುದ್ಧನಲ್ಲಿ ಕಂಡುಬರುವ ವೈರಾಗ್ಯದ ಅಗ್ನಿಯೂ, ಅತ್ಯಶಾಂತಿಗಾಗಿ ಹಂಬಲಿಸುತ್ತಿರುವ ಹೊರ ಸೂಸುವ ಹಂಬಲವೂ, ಜನರ ನರಳುವಿಕೆಯನ್ನು ಕಂಡು ನರಳುವಂಥ ಮರುಕವೂ, ರಾಣಿಯ ಕಟ್ಟಿಗೆ ಶಿಲುಕಿ ಬಳಲುತ್ತಿರುವಪರರ ದೆಸೆಯಿಂದ ಅತನಲ್ಲಿ ಉಕ್ಕಿ ಹರಿಯುವ ಕಾರುಣ್ಯರಸವೂ, ಅವೆಲ್ಲವೂ ಜಗತ್ತಿನ ಯಾವ ಇತಿಹಾಸದೊಳಗೂ ದೊರೆಯದಷ್ಟು ಘನವಾಗಿವೆ; ಇಂಥ ಅರಸು ಸನ್ಯಾಸಿಯು ಹಿಂದೂದೇಶದ ಪಾಲಿಗಲ್ಲದೆ ಪುತ್ತ್ಯಾವ ದೇಶಕ್ಕೂ ಸಿಗುವ ಭಾಗ್ಯವಿಲ್ಲದ್ದು ಭಾರತೀಯರ ಭಾಗ್ಯದ್ಯೋತಕವು.

ಗೌತಮನು ಬುದ್ಧನಾದುದು:— ರಾತ್ರೆ ತನ್ನ ಊರಿನಿಂದ ಚನ್ನನೆಂಬ ಸಾರಥಿಯೊಡನೆ ಹೊರಟ ಗೌತಮನು ಬೆಳಗಿನ ವರೆಗೆ ಪ್ರವಾಸ ಮಾಡಿ, ಒಂದು ನದಿಯ ಧಡಕ್ಕೆ ಬಂದನು. ಸುಗಂಧತೈಲವನ್ನು ಹಚ್ಚಿ ಬೆಳೆಸಿದ ರೇಶ್ಮೆಯಂಥ ತನ್ನ ಉದ್ದವಾದ ಕೂದಲುಗಳನ್ನು ತನ್ನ ಹರಿತವಾದ ಕತ್ತಿಯಿಂದ ಕತ್ತರಿಸಿ, ಮೈಮೇಲಿನ ವಸ್ತ್ರಾಲಂಕಾರಗಳನ್ನೆಲ್ಲ ಬಿಚ್ಚಿ ಕಪಿಲವಸ್ತುವಿಗೆ ಕಳಿಸಿ, ನೇರವಾಗಿ ಮಗಧರಾಜ್ಯಕ್ಕೆ ಹೋಗಿ, ರಾಜ್ಯಗೃಹದ ಒಳ ವಾಸಿಸುತ್ತಿರುವ ಆಲಾರ ಹಾಗೂ ಉದ್ರಕ ಎಂಬಿಬ್ಬರು ಬ್ರಾಹ್ಮಣರನ್ನಾಶ್ರಯಿಸಿ ಬೇರೆಬೇರೆ ಧರ್ಮಸಿದ್ಧಾಂತಗಳನ್ನೂ, ಶಾಸ್ತ್ರಗಳನ್ನೂ ಅಳವಾಗಿ ಅಭ್ಯಾಸ ಮಾಡಿದನು. ಶಾಸ್ತ್ರಾಭ್ಯಾಸವು ಮನುಷ್ಯನ ಮನಸು ಬುದ್ಧಿಗಳನ್ನು ಹದಗೊಳಿಸಿ, ಧರ್ಮದ ಹದನವನ್ನು ತಿಳಿಸಲು ಸಾಧಕವಾಗಿರುವದೆಂದು ಬಗೆದು ಶಾಸ್ತ್ರಾಭ್ಯಾಸ ನಡಿಸಿದನು. ಉದ್ರಕನು ನಿರೀಶ್ವರವಾದಿಯಿದ್ದು ಸಾಂಖ್ಯತತ್ತ್ವಜ್ಞಾನದೊಳಗೆ ಮೇಲಾ

ಗಿದ್ದನು. ಉದ್ರಕನಿಂದ ಗೌತಮನಿಗೆ ತತ್ವಜ್ಞಾನದ ಬೋಧವಾಗುವ ದಲ್ಲದೆ, ಧ್ಯಾನಯೋಗ, ಸಮಾಧಿಯೋಗಗಳ ಕೊನೆಯ ಮೆಟ್ಟಿಲುಗಳ ಜ್ಞಾನವೂ ಆಯಿತು. ಉದ್ರಕನ ಹತ್ತಿರ ಕೆಲದಿನ ಕಾಲಕಳೆದು ಗೌತಮನು ನಿರ್ಜನವಾದ ಸ್ಥಳಕ್ಕೆ ನಾರಿ, ೬ ವರ್ಷಕಾಲ ತಪಸ್ಸು ಮಾಡಿದನು. ಮನಸು ಕೈಗೆ ಸಿಕ್ಕು ವಾಸನೆಯು ಕ್ಷಯವಾಗಬೇಕೆಂದು ಗೌತಮನು ಅನ್ನ ಬಿಟ್ಟನು. ಉಪವಾಸದಿಂದ ಅವನು ತೀರ ಬಲಗುಂದಿದವನಾಗಿ ಬಂದುಸಲ ಎಚ್ಚರಗೆಟ್ಟು ಸಹ ಬಿದ್ದನು; ಆಗ ವಾಸನೆಯು ಕ್ಷಯವಾಗುವ ದಾರಿಯಿದಲ್ಲವೆಂದೆಣಿಸಿ, ಗೌತಮನು ಸುಜಾತಾ ಎಂಬ ಗೋವಳಗಿತ್ತಿಯು ಕೊಟ್ಟ ಹಾಲು ಅನ್ನವನ್ನುಂಡು ಉಪವಾಸವು ಮುರಿದು ಆದೇ ಕಾಡಿನಲ್ಲಿರುವ ನಿರಂಜನಾನದಿಯ ಹತ್ತಿರಿರುವ ಬಂದು ಅಶ್ವತ್ಥ ವೃಕ್ಷದ ಕೆಳಗೆ ಆಸನ ಹಾಕಿ ಯೋಗನಾಧನೆ ನಡಿಸಿರಲು, ಇದ್ದಕ್ಕಿದ್ದ ಹಾಗೆ ಹೃದಯದೊಳಗೆ ಆತ್ಮಜ್ಯೋತಿಯು ಮಿಂಚಿ ಮನಸ್ಸು ಸಮಾಧಾನಗೊಂಡಿತು. ಈ ವೃಕ್ಷವು ಈಗಲೂ 'ಬೋಧಿವೃಕ್ಷ' ವೆಂಬ ಹೆಸರಿನಿಂದ ಗಯಾಕ್ಷೇತ್ರದ ನೆರೆಯಲ್ಲಿದೆ. ಇಡೀ ರಾತ್ರಿಯನ್ನೆಲ್ಲ ಅವನೀ ಏಕಾಂತಿಕ ಮನಃಸಮಾಧಿಯಲ್ಲೆಯೇ ಕಳೆದು ಮರುದಿನದಿಂದ ತನಗೆ ಸಿಕ್ಕ ಜ್ಞಾನದ ದಾರಿಯನ್ನು ಜನರಿಗೆ ಕಲಿಸಲು ಪ್ರಾರಂಭಿಸಿದನು. ಮತ್ತು ಈ ಅತ್ಯಂತ ಪವಿತ್ರ ಕಾರ್ಯದೊಳಗೆ ಅತನು ತನ್ನ ಮಿಕ್ಕಳಂ ವರ್ಷಗಳನ್ನು ಪೆಚ್ಚಿಮಾಡಿದನು.

ಜ್ಞಾನೋತ್ತರ ಬುದ್ಧಕಾರ್ಯ:— ಸತ್ಯಜ್ಞಾನವಾದ ಮೇಲೆ ಗೌತಮನು ಪ್ರಪಂಚದ ನಿಜಸ್ಥಿತಿಯನ್ನರಿತುದರಿಂದ ಅವನಿಗೆ 'ಬುದ್ಧ' ಅಂದರೆ ತಿಳಿದವ, ಎಚ್ಚೆತ್ತವನೆಂಬ ಹೆಸರಿನಿಂದ ಕರೆಯಹತ್ತಿದರು. ತನಗೆ ನಿಜಜ್ಞಾನವಾದೊಡನೆ ಬುದ್ಧದೇವನು ಪ್ರಪಂಚದೊಳಗೆ ಉಪದೇಶ ಮಾಡುತ್ತಲೇ ಉಳಿದ ೪೦ ವರ್ಷ ಕಳೆದನು. ಅನೇಕರೊಡನೆ, ವಾದ ಹಾಕಿದನು; ಅನೇಕರನ್ನು ತನ್ನ ದೈವೀವೃತ್ತಿಯಿಂದ ಶಿಷ್ಯರನ್ನಾಗಿ ಮಾಡಿಕೊಂಡನು. ಸ್ವಾನುಭವಬಲದಿಂದಲೂ, ದೃಷ್ಟಾಂತಗಳಿಂದಲೂ ಜನರಾಡುವ ಸುಲಭವಾದ ನುಡಿಯಿಂದಲೂ ಬುದ್ಧದೇವನು ಜನರಿಗೆ ಜ್ಞಾನ ಬೋಧಿಸುತ್ತಿದ್ದುದರಿಂದ ಅವನ ಬೋಧವು ಜನರೆಲ್ಲಿ

ನೆಡುತ್ತಿತ್ತು. ಕೋಸಲ ಹಾಗೂ ಮಗಧ ಪ್ರಾಂತಗಳೇ ಮುಖ್ಯವಾಗಿ ಅವನ ಕಾರ್ಯಕ್ಷೇತ್ರಗಳಾಗಿದ್ದರೂ, ಅವನ ಕೀರ್ತಿಯು ದಿಗ್ದೇಶಗಳಲ್ಲಿ ಹರಡಿತು. ಬುದ್ಧನ ಹೆಂಡತಿಯೂ ಮಗನಾದ ರಾಹುಲನೂ ಅವನ ಶಿಷ್ಯರಾದರು. ಹಲವು ರಾಜರೂ, ಶಾಸ್ತ್ರಸಂಪನ್ನರಾದ ಬ್ರಾಹ್ಮಣರೂ ಬುದ್ಧನ ಪಾದಕ್ಕೆರಗಿ ಬುದ್ಧಶಿಷ್ಯರಾದರು. ಚಾರ, ಚೋರ, ಪತಿತ, ಚಾಂಡಾಲ, ಅವರಂತಹ ಮೂಢರು ಸಹ ಬುದ್ಧದೇವನ ಪ್ರಸಾದತೀರ್ಥದಿಂದ ಅಂತರ್ಬಾಹ್ಯ ಶುದ್ಧರಾಗಿ ಸದ್ಗುಣಿಗಳಾದರು. ಒಬ್ಬ ಭಿಕ್ಷುವು ಅತಿಸಾರ ಬೇನೆಯಿಂದ ನೆರಳುತ್ತ ಹಾಸಿಗೆ ಹಿಡಿದು ಬಿದ್ದಿರಲು, ಬುದ್ಧನು ಅವನನ್ನು ಕೇಳುವವರು ಯಾರೂ ಇಲ್ಲದ ಸ್ಥಿತಿಯನ್ನು ಕಂಡು ತಾನೇ ಸ್ವತಃ ಅವನ ಸೇವೆಗೆ ಕೈಕಟ್ಟಿಕೊಂಡು ನಿಂತಿರುವ ಕಥೆಯ ಮೇಲಿಂದ ಬುದ್ಧದೇವನ ಅಂತಃಕರಣದ ಕಲ್ಪನೆಯಾಗುತ್ತದೆ. ರಾಜವೈಭವದೊಳಗೆ ಓಲಾಡುತ್ತಿರುವ ಅನೇಕ ರಾಜಪುತ್ರರು ಬುದ್ಧದರ್ಶನದಿಂದ ಸಂಸಾರವನ್ನು ತೊರೆದು ಭಿಕ್ಷುಗಳಾದ ಕಥೆಗಳಿವೆ. ಯಾವುದೊಂದು ಊರಲ್ಲಿ ಒಂದು ದೊಡ್ಡ ಸಮಾರಂಭ ನಡೆದಿರಲು, ಅಲ್ಲಿ ಬುದ್ಧದೇವನು ಹೋಗಿದ್ದನು. ಆ ಸಮಾರಂಭದೊಳಗಿರುವ ಮನೆತನಸ್ಥಾದ ಒಬ್ಬ ಸುಂದರ ಹಾಗೂ ಶ್ರೀಮಂತ ಯುವತಿಗೆ ಬುದ್ಧದೇವನನ್ನು ನೋಡಿದೊಡನೆಯೇ ವೈರಾಗ್ಯವುಂಟಾದ್ದರಿಂದ ಅವಳು ಬೌದ್ಧ ಮಠಕ್ಕೆ ಹೋಗಿ, ಬುದ್ಧನ ಬೋಧೆಯಿಂದ ಭಿಕ್ಷುಣಿಯಾದಳು. ಬುದ್ಧ ಸಂಘದೊಳಗೆ ಅಂಬಾಪಾಲಿಯೆಂಬ ವೇಶ್ಯೆಯೂ, ಸುವಿನೀತನೆಂಬ ಭಂಗಿಯವನೂ, ಉಪಾಲಿಯೆಂಬ ಕ್ಷೌರಕನೂ ಸೇರಿ, ಒಳ್ಳೇ ಗೌರವಕ್ಕೇರಿದ್ದರು. ವಾರಾಣಸಿಯಂಥ ಸನಾತನ ವೈದಿಕಧರ್ಮದ ಕೋಟೆಯಲ್ಲಿ ಸಹ ಹೊಕ್ಕು ಬುದ್ಧದೇವನು ತನ್ನ ವಾಗ್ಬಲದಿಂದ ವಿದ್ವಾಂಸರನ್ನು ಗೆದ್ದನು. ನಿಜವಾಗಿ ನೋಡಿದರೆ, ಸ್ತ್ರೀಯರನ್ನು ಕಂಡರೆ ಬುದ್ಧನಿಗಾಗುತ್ತಿರಲಿಲ್ಲ. ಸ್ತ್ರೀಯರು ಚಂಚಲರೂ, ಅವರಲ್ಲಿ ನೈತಿಕ ಬಲವು ಕಡಿಮೆಯಿರುವದೆಂದೂ ಅರಮನೆಯಲ್ಲಿರುವಾಗ ಅವನಿಗೆ ಮನದಟ್ಟಾದ್ದರಿಂದ ಸ್ತ್ರೀಯರ ವಿಷಯದಲ್ಲಿ ಅವನಿಗೆ ಬಲವಾದ ತಿರಸ್ಕಾರ; ಆದುದರಿಂದ ಮೊತ್ತಮೊದಲು ಅವನು ಸ್ತ್ರೀಯರನ್ನು ತನ್ನ ಭಿಕ್ಷುಸಂಘ

ದೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಆನಂದನೆಂಬ ಶಿಷ್ಯನ ಬಲವಂತ ಕ್ಕಾಗಿ ಬುದ್ಧನು ಕೋಸಲಾಧಿಪನ ಹೆಂಗಸರನ್ನೂ, ತನ್ನ ಮಲತಾಯಿ ಯನ್ನೂ, ಭಿಕ್ಷುಣಿಯರನ್ನಾಗಿ ಮಾಡಿಕೊಂಡು ಅವರದೊಂದು ಬೇರೆ ಸಂಘವನ್ನೇರ್ಪಡಿಸಿದನು. ಆ ಸಂದರ್ಭದಲ್ಲಿ "ಹಲವು ವರ್ಷಗಳ ವರೆಗೆ ಬಾಳಿ ಬದಕುವ ನನ್ನ ಮತವು ಐದುನೂರು ವರ್ಷಗಳೊಳಗಾಗಿ ಹೆಸರಿಲ್ಲದಂತಾಗುವದು" ಎಂದು ಬುದ್ಧನು ಉಸುರ್ಗರೆದು ಮಾತನಾಡಿದನಂತೆ! ಇವರ ತರುವಾಯ ಬುದ್ಧನು ಹಲವು ಹೆಂಗಸರನ್ನು ಭಿಕ್ಷುಣಿಯನ್ನಾಗಿ ಮಾಡಿಕೊಂಡದ್ದು ಹಿಂದೆಯೇ ಬಂದಿದೆ.

ಬುದ್ಧನ ನಿರ್ವಾಣವು:– ತನ್ನ ಜೀವಮಾನದ ಅರ್ಧ ಕಾಲದಲ್ಲಿ ಪ್ರಚಂಡವಾದ ಧರ್ಮಕ್ರಾಂತಿಯನ್ನು ಮಾಡಿ ಕುಶೀನಗರವೆಂಬ ಊರಿಗೆ ಹೊರಟರಲು, ದಾರಿಯಲ್ಲಿ 'ಪಾವಾ' ಎಂಬೂರಿಗೆ ಮುಟ್ಟಿದನು. ಆಲ್ಲಿರುವ ಶಿಷ್ಯನ ಆದರಾತಿಥ್ಯವನ್ನು ಸ್ವೀಕರಿಸಿ ತನ್ನ ಶಿಷ್ಯನಾದ ಆನಂದನೊಡಗೂಡಿ, ಮುಂದೆ ಪ್ರಯಾಣ ಬೆಳಿಸಿದನು. ಹಾದಿಯಲ್ಲಿ ಬಾಯಾರಿಕೆಯಿಂದ ಬಹು ಬಳಲಿ ಅಲ್ಲಲ್ಲಿ ನೀರು ಕುಡಿಯುತ್ತ ಅವನು ಕಕುತ್ಥ ನದಿಗೆ ಬಂದು ತಲ್ಪಿದನು. ದಾರಿ ನಡೆದು ಶ್ರಮವಾದ್ದರಿಂದ ಆ ನದಿಯಲ್ಲಿ ಸ್ನಾನ ಮಾಡಿದನು. ದಾರಿ ನಡೆದ ಶ್ರಮವು ಸ್ನಾನದಿಂದ ಕಡಿಮೆಯಾಗದೆ ಹೆಚ್ಚೆಚ್ಚು ಬಳಲಿಕೆಯೂ, ಭ್ರಮೆಯೂ ಆಗತೊಡಗಿದ್ದರಿಂದ ನೆರೆಯಲ್ಲಿದ್ದ ಬಂದು ಮಾವಿನಕೋಪಿನಲ್ಲಿ ಹೊಕ್ಕು ಮಾವಿನಮರದ ನೆರಳಿನಲ್ಲಿಯೇ ನಡೆಯುತ್ತ ಕುಶೀನಗರದಲ್ಲಿರುವ ಶಾಲವೃಕ್ಷದ ಬನವನ್ನು ಹಾಗೂ ಹೀಗೂ ಬಂದು ಸೇರಿದನು. ಅಲ್ಲಿ ಬಂದೊಡನೆ ಶಿಷ್ಯನಾದ ಆನಂದನು ಗುರುವಿನ ಆಜ್ಞೆಯ ಮೇರೆ ಎರಡು ಶಾಲವೃಕ್ಷಗಳ ನಡುವೆ ಉತ್ತರಕ್ಕೆ ತಲೆಯಾಗುವಂತೆ ಬಂದು ಆಸನವನ್ನು ಹಾಸಿದನು. ಸಿಂಹನಂತೆ ಬಲಮಗ್ಗಲಾಗಿ ಬುದ್ಧನು ಈ ಆಸನದ ಮೇಲೆ ಬಂದು ಕಾಲಿನ ಮೇಲೆ ಮತ್ತೊಂದು ಕಾಲು ಹಾಕಿಕೊಂಡು ಸಮಾಧಾನದಿಂದ ಮಲಗಿಕೊಂಡನು. ಆಗ ವಸಂತಕಾಲವಲ್ಲದಿದ್ದರೂ, ಗಿಡಗಳಿಗೆ ಹೂಗಳ ಭರ ಬಂದು, ಬುದ್ಧನ ಮೇಲೆ ಹೂಗಳು ಸುರಿಯ ತೊಡಗಿದವು. ಕೊನೆಗಾಲದಲ್ಲಿ ತನ್ನ ಬಳಿಯಲ್ಲಿರುವ ಆನಂದನಿಗೂ, ಬೇರೆ ಯತಿಗಳಿಗೂ

ಬುದ್ಧನು ಹಲವು ಬಗೆಯ ಉಪದೇಶಪರವಾದ ಬೋಧ ಮಾಡಿದನು. ಮರಣಕಾಲಕ್ಕೆ ಸುಭದ್ರ ಎಂಬೊಬ್ಬ ಸನ್ಯಾಸಿಯು ಅಲೆಯುತ್ತಲೆಯುತ್ತ ಆಲ್ಲಿ ಬರಲು ಬುದ್ಧನ ಬೋಧದಿಂದ ಶಿಷ್ಯನಾದನು. ಇವನೇ ಕೊನೆಯವನು. ಆ ಮೇಲೆ ಬುದ್ಧನು ತನ್ನ ಶಿಷ್ಯರಿಗೆಲ್ಲ ಧಮ್ಮ (ಧರ್ಮ) ಹಾಗೂ ಸಂಘದ ನಿಯಮಗಳನ್ನು ಕುರಿತು ಕೇಳಬೇಕಾದ ಸಂಶಯಗಳನ್ನು ಕೇಳಿಕೊಳ್ಳಿರೆಂದೂ, "ನನ್ನ ತರುವಾಯ ನಿಮಗೆ ನಾನು ಹೇಳಿ ಕೊಟ್ಟ ಬೋಧವೂ, ಸಂಘದ ನಿಯಮಗಳೂ ಅವೇ ಗುರುವೆಂದು ತಿಳಿಯಿರಿ. ನಾನಿನ್ನು ಹೋಗುತ್ತೇನೆ. ಕಣ್ಣಿಗೆ ಕಾಣಿಸುವ ಘಟಕಗಳಿಲ್ಲವೂ ಕ್ಷಣಿಕವಾದವುಗಳು. ನಿಮ್ಮ ಮುಕ್ತಿಯನ್ನು ನೀವುಗಳು ಯತ್ನದಿಂದ ಸಾಧಿಸಿಕೊಳ್ಳಿರಿ." ಎಂದು ಮುಂತಾಗಿ ಕೊನೆಯ ನುಡಿಗಳನ್ನಾಡಿ, ಮೊದಲನೇ ಧ್ಯಾನದಿಂದ, ಎರಡು, ಮೂರು ಧ್ಯಾನ ಪ್ರದೇಶದೊಳಗೆ ಹೊಕ್ಕು ನಾಲ್ಕನೆಯ ಧ್ಯಾನಭೂಮಿಕೆಯೊಳಗಿಂದ ಅನಂತ ಆಕಾಶದೊಳಗೆ ಸೇರಿ ಸಂವೇದನೆಯಿಲ್ಲದ ಸ್ಥಿತಿಯಲ್ಲಿ ಮಗ್ನನಾದನು. ನಿರ್ವಾಣಕಾಲಕ್ಕೆ ಬುದ್ಧನು ೮೦ ವರ್ಷದವನಿದ್ದನು; ಅಂದರೆ ಕ್ರಿ. ಶ. ಪೂ. ೪೮೨ ವರ್ಷದ ಏಪ್ರಿಲ ತಿಂಗಳ ೧೧ನೇ ತಾರೀಖಿನ ದಿನ ದೇಹವಿಟ್ಟನೆಂಬುದು ಈಗ ಸಿದ್ಧವಾಗಿದೆ.

ಬೌದ್ಧ ಸಂಪ್ರದಾಯ:– ಬುದ್ಧನು ಮುಖ್ಯವಾಗಿ ಬ್ರಾಹ್ಮಣ ಜಾತಿಯ ವಿರುದ್ಧ ಬಂಡಾಯವೆಬ್ಬಿಸಿದನು. ಬ್ರಾಹ್ಮಣರು ನಡಿಸುವ ಹಿಂಸಾತ್ಮಕವಾದ ಯಜ್ಞಯಾಗಾದಿಗಳು ಅತನಿಗೆ ಅಸಹ್ಯವೆನಿಸಿ, ಇಂಥ ವುಗಳಿಂದ ಜಗತ್ತಿನ ಉದ್ಧಾರವಾಗುವದಿಲ್ಲೆಂದು ಮನಗಂಡು ಹಿರಿದಾದ ನಾಮಾಜಿಕ ಬಂಡಾಯವನ್ನು ಹೂಡಿದನು. ಬ್ರಾಹ್ಮಣರನ್ನು ಅವನು ಇದಕ್ಕಾಗಿಯೇ ಹೀಯಾಳಿಸುತ್ತಿದ್ದನೇ ಹೊರ್ತು ಬೇರೊಂದು ಉದ್ದೇಶದಿಂದಲ್ಲ. ಕೇವಲ ಹಿಂಸಾಪ್ರಚುರವಾದ ಯಜ್ಞಯಾಗಾದಿಗಳ ಆಚರಣೆಯಿಂದ ಬ್ರಾಹ್ಮಣಜಾತಿಯಲ್ಲಿಯ ಕಾರುಣ್ಯಾದಿ ಮನುಷ್ಯತ್ವದ ಮುಖ್ಯ ಸದ್ಗುಣಗಳು ಲೋಪಹೊಂದಿ, ಮನುಷ್ಯನನ್ನು ಬುದ್ಧಿಯುಳ್ಳ ಕ್ರೂರಪಶುವೆಂಬ ಮಟ್ಟಿಗೆ ಮತಿಗೆಡಿಸಿ, ದಾರಿಗೆಡಿಸಿ, ತಪ್ಪು ದಾರಿಗೆ ಬಯ್ಯುತ್ತಿರುವ ಅಧರ್ಮದಿಂದ ತರುಬಿ ತಿರುಗಿಸಿದನು. ತನ್ನ

ಹೊಸ ಸಾಂಪ್ರದಾಯದ ಬೀಜಗಳನ್ನು ಯಾವ ಸ್ಥಳಗಳಲ್ಲೂರಿದರೆ, ಅವುಗಳ ಬೆಳವಳಿಗೆಗೆ ಹದವಾದ ಭೂಮಿ ದೊರೆತು ಅವು ಬೆಳೆಯಲಿಕ್ಕೆ ಅನುವಾಗುವದೆಂಬುದರ ಹದನವನ್ನರಿತುಕೊಂಡೇ ಬುದ್ಧನು ಮೊದಲು ತನ್ನ ಹೊಸ ತತ್ವಗಳನ್ನು ಕೋಸಲ ಹಾಗೂ ಮಗಧ ದೇಶಗಳಲ್ಲಿ ಬಿತ್ತಿದನು. ಈ ಪ್ರದೇಶವು ಬ್ರಾಹ್ಮಣ ಸಂಸ್ಕೃತಿಯಿಂದ ಬಹು ದೂರ ವಿದ್ದುದರಿಂದ ಇಲ್ಲಿ ಬೌದ್ಧಮತವು ಬೇರೂರಿ ಬೆಳೆಯಲು ಅಪ್ಪದ ದೊರೆಯಿತು. ಈ ದೇಶದ ಜನರ ಆಧ್ಯಾತ್ಮಿಕಜೀವನದಲ್ಲಿ ಬುದ್ಧನ ಮತತತ್ವಗಳು ಇಳಿದು ಇಂಗಿ ಹೋಗಿರುವಷ್ಟು ಮತ್ತ್ಯಾವ ದೇಶದಲ್ಲಿಯೂ, ಇಂಗಿರುವದಿಲ್ಲವೆಂಬುದು ಅಲ್ಲಿಯ ಜನಜೀವನದಿಂದ ತಿಳಿಯುತ್ತದೆ. ಬುದ್ಧಸಂಪ್ರದಾಯವು ಲೋಪವಾಗಿ ಅನೇಕ ಶತಕಗಳು ಸಂದು ಹೋದರೂ, ಅದರ ಹೆಗ್ಗುರುತುಗಳು ಈಗ್ಯೂ ಬಿಹಾರಪ್ರಾಂತದ ಜನ ಜೀವನದೊಳಗೆ ಎದ್ದು ಕಾಣಿಸುತ್ತಿವೆ. ಬೌದ್ಧರ ವಿಹಾರಗಳು ಈ ಪ್ರಾಂತದೊಳಗೆ ಅಸಂಖ್ಯಾಕವಾಗಿದ್ದರಿಂದಲೇ ಈ ದೇಶವು ಬಿಹಾರವೆಂದು ಹೆಸರಾಯಿತು. ವಿಹಾರಗಳೆಂದರೆ ಬೌದ್ಧ ಭಿಕ್ಷುಗಳ ಮತಗಳು. ಬೌದ್ಧಮತವು ಸಯಾಮ, ಬ್ರಹ್ಮದೇಶ, ಸಿಲೋನ, ಜಾವಾ, ಸುಮಾತ್ರಾ, ಚೀನ, ಕೋರಿಯಾ, ಜಪಾನ ದೇಶಗಳಲ್ಲಿ ಈಗ್ಯೂ ಬೆಳೆದುಕೊಂಡಿದೆ.

ಬೌದ್ಧಸಂಪ್ರದಾಯದ ಐತಿಹಾಸಿಕ ಬೆಲೆ:— ಭಾರತೀಯರ ಚರಿತ್ರೆಯಲ್ಲಿ ಬೌದ್ಧಸಂಪ್ರದಾಯದ ಕಾರ್ಯವು ಅಷ್ಟಿಷ್ಟು ಮೆಹತ್ವದ್ದೆಂದು ಹೇಳಲಿಕ್ಕೆ ಬಾರದಷ್ಟು ಮೇಲಾಗಿರುವದು. ಭಗವಾನ್ ಬುದ್ಧದೇವನು ನೆರವೇರಿಸಿದ ಕಾರ್ಯದ ಮೇಲ್ಮೈಯನ್ನು ಜ್ಞಾಪಕಕ್ಕೆ ತಂದುಕೊಂಡರೆ, ಮಾನವಧರ್ಮದ ಬಗ್ಗೆ ಕುರುಡಾದ ಸಮಾಜಕ್ಕೆ ಕಣ್ಣು ಕೊಟ್ಟು, ಅದನ್ನು ನೀತಿಯ ದಾರಿಗೆಳದು, ತನಿಗಂಪಾದ ಅಹಿಂಸೆಯನ್ನೂ, ಕಾರುಣ್ಯವನ್ನೂ, ಸ್ವತಃ ಆಚರಿಸಿ, ಅದನ್ನು ತಿದ್ದಿ ತಿಳಿಗೊಳಿಸಲು ಹೆಣಗಿದವರಲ್ಲಿ ಬುದ್ಧನೇ ಆದಿಗನು. ಅವನನ್ನು ಸರಿಗಟ್ಟುವ ಬೇರೆ ಪುರುಷರು ಹುಟ್ಟಲಿಲ್ಲವೆಂದೇ ಹೇಳಬಹುದು. ಬುದ್ಧನು ತನ್ನ ಮತವನ್ನು ಕೇವಲ ಮತವಾಗಿಯೇ ಇಡದೆ, ಆರ್ಯಧರ್ಮಕ್ಕೆ ಪೋಷಕವಾಗುವಂತೆ ಅದನ್ನೊಂದು ಬೇರೆ ಸಂಪ್ರದಾಯವನ್ನಾಗಿಯೇ ಬೆಳಿಸಿ ಹರಡಿ

ಸಿದನು. ಈಶ್ವರ ಹಾಗೂ ವೈದಿಕವಾಙ್ಮಯವನ್ನು ಕುರಿತು ಬುದ್ಧ ದೇವನು ಹೆಚ್ಚಿಗೇನೂ ಹೇಳಲಿಲ್ಲ. ಈಶ್ವರ ವಿಷಯವಾಗಿ ಅತನ ಕಲ್ಪನೆ ವಿಚಾರಗಳೇನಿದ್ದವೆಂಬುದೂ ನಿಶ್ಚಯವಾಗಿ ತಿಳಿಯಬರು ವಂತಿಲ್ಲ. ಇಂದ್ರಾದಿದೇವತೆಗಳಲ್ಲಿ ಅತನಿಗೆ ನಂಬಿಕೆ ಇತ್ತೆಂದು ಕೆಲವೆ ಡೆಯಲ್ಲಿ ತೋಚುತ್ತದೆ. ಸ್ವರ್ಗ, ಪಾತಾಳ, ನರಕಗಳ ಬಗ್ಗೆಯೂ ಅತನ ಮತವು ಭಿನ್ನವಾಗಿರಲಿಲ್ಲ. ಜನ್ಮಾಂತರದ ಕಲ್ಪನೆಯು ಅವನಿಗೆ ಮಾನ್ಯವಿತ್ತೆಂಬುದು ಅತನ ಮಾತುಗಳಿಂದ ಸಿದ್ಧವಾಗುತ್ತದೆ. ಮಾನವನ ಜೀವನವು ದುಃಖಮಯವೂ, ಕರ್ಮವು ಬಲಶಾಲಿಯೂ, ಇರುವ ವೆಂದೇ ಯಾವಾಗಲೂ ಅತನ ಹೇಳುವ ಮಾತಿನ ಮಥಿತಾರ್ಥವಾಗಿ ದ್ದಿತು; ತಾನು ಹೇಳುವ ಮಾತು ನಿಜವಾದುದು, ನಿಜಸುಖದ ದಾರಿ ಯನ್ನು ತೋರಿಸುವಂಥದು ಎಂಬೀ ನೆಚ್ಚಿನ ನಂಬುಗೆಯಿಂದ ನಡೆಯು ತ್ತಿದ್ದುದರಿಂದ ಯಾರೊಡನೆ ವಾದ ಬೆಳಿಸಲಿಕ್ಕೂ, ಧರ್ಮದ ಬಗ್ಗೆ ಒಣ ಚರ್ಚೆ ಮಾಡಲಿಕ್ಕೂ ಅತನು ಮನಪೆಳಿಸುತ್ತಿರಲಿಲ್ಲ. ಪ್ರಪಂಚ ದೊಳಗೆ ಎದ್ದು ಕಾಣುವ ದುಃಖದ ಸ್ಥಿತಿಯನ್ನೂ, ಹುರುಳಿಲ್ಲದ ಜೀವಿ ತದ ಕಲ್ಪನೆಯನ್ನೂ, ಜನರ ಕಣ್ಮುಂದೆ ತಂದು ಕಟ್ಟಿ, ಇಂಥ ಶೋಚ ನೀಯವಾದ ಪ್ರಪಂಚದೊಳಗೆ ಅಹಿಂಸೆ, ಕಾರುಣ್ಯವೃತ್ತಿ, ತಪಸ್ಸು, ಇವುಗಳನ್ನು ಬಿಟ್ಟು ಬೇರೆ ಬರಡು ಧರ್ಮದ ಮತಗಳನ್ನು ತೆಗೆದು ಕೊಂಡು ಪ್ರಯೋಜನವೇನೆಂದು ಜನಸಾಮಾನ್ಯಕ್ಕೆಲ್ಲ ಬಹು ಬಲವಾಗಿ ಬೋಧಿಸಿದನು. ಬುದ್ಧನ ಬೋಧದಲ್ಲಿ ಕಣ್ಣಿಗೆ ಕಾಸಿದಂಥದೊಂದು ದಿವ್ಯಜ್ಯೋತಿಯು ಮಿಂಚುತ್ತಿದ್ದುದರಿಂದ, ಅವನ ಮಾತುಗಳು ಕೇಳು ವವರ ಹೃದಯಗಳಲ್ಲಿ ಹೊಕ್ಕು ಬೆಳಕನ್ನುಂಟು ಮಾಡುತ್ತಿದ್ದವು. ಪರಂಪರೆಯ ಕುರುಡದಾರಿಯನ್ನು ಹಿಡಿದು ನಡೆಯುತ್ತಿರುವ ಜನಜಂಗು ಗಳಿಗೆ ಕೆಲಹೊತ್ತು ವಿಚಾರ ಮಾಡಲಿಕ್ಕೆ ಬುದ್ಧನು ಹಚ್ಚಿದರೂ, ಕೊನೆಯ ವರೆಗೂ ಅವರನ್ನು ವಿಚಾರದ ಬಲೆಯಲ್ಲಿಯೇ ತೊಡಕಿಸಿ ಡದೆ, ನ್ಯಾನುಭವಬಲದಿಂದ ಅವರನ್ನು ಕೆಲಸಕ್ಕೇ ಪ್ರೇರಿಸುತ್ತಿದ್ದನು; ಇದರಿಂದ ಅವನ ಮಾತಿನಲ್ಲಿ ಎಷ್ಟೊಂದು ತೇಜವಿತ್ತೆಂಬುದು ಸ್ಪಷ್ಟವಾ ಗುತ್ತಿದೆ. ಇಂತಹ ಪ್ರಭಾವಶಾಲಿಯಾದುದೊಂದು ಶಕ್ತಿಯು ಅವನಲ್ಲಿ

ಚಲಿಸುತ್ತಿದ್ದುದರಿಂದಲೇ, ಅವನು ಗೊಡ್ಡು ನೀತಿಮಾರ್ಗದರ್ಶಕನೂ, ತತ್ವಜ್ಞಾನಿಯೂ ಆಗಿ ಉಳಿಯದೆ, ತನ್ನ ಭಕುತರಿಂದ ಜೀವಂತ ದೇವರೆಂದೆಣಿಸಲ್ಪಟ್ಟನು. (ಧರ್ಮಪಕ್ಷವಾಯುವಿನಿಂದ ಅಂಧವಾದ ನಮ್ಮ ಧರ್ಮದೃಷ್ಟಿಯನ್ನು ತೆರೆದು ಸ್ವಲ್ಪು ವಿಶಾಲಗೊಳಿಸಿ, ನೋಡಿದರೆ, ಬುದ್ಧದೇವನು ಆರ್ಯಧರ್ಮವನ್ನು ಖಂಡಿಸದೆ, ಆರ್ಯಧರ್ಮವನ್ನು ಮುಸುಕಿರುವ ಬಹು ದಿವಸದ ಬೂದಿಯನ್ನು ಹಾರಿಸಿ, ಅದರ ತನಿಗಿಚ್ಚನ್ನು ಪ್ರಕಾಶವನ್ನೂ ಹೆಚ್ಚಿಸಿದನೆಂತಲೇ ಒಪ್ಪಬೇಕಾಗುವದು.) ಬುದ್ಧದೇವನು ತನ್ನ ಸೂಕ್ಷ್ಮಬುದ್ಧಿಯಿಂದ ಸಮಾಜದ ತಪ್ಪನ್ನು ಕಂಡುಹಿಡಿದು ಸುಮ್ಮನಿರದೆ, ಯಜ್ಞಯಾಗಾದಿಗಳ ಮುಚ್ಚಿಗೆ ಬಿದ್ದು, ದಯೆಯೇ ಧರ್ಮಮೂಲವೆಂಬ ತತ್ವವನ್ನು ಮರೆತು, ಸಾಮಾನ್ಯವಾದ ನೀತಿತತ್ವಕ್ಕೆ ಅರೆದಾಳಾಗಿ ನಡೆಯುತ್ತಿರುವ ಬ್ರಾಮ್ಹಣಸಮಾಜವನ್ನು ಒಂದು ಕೈಯಿಂದ ತಡೆದು, ಮತ್ತೊಂದು ಕೈಯಿಂದ ಜನಜಂಗುಳಿಗೆ ಅವರ ಉದ್ಧಾರಕ್ಕಾಗಿ ಧರ್ಮದ ರಾಯಬೀದಿಯನ್ನು ತೋರಿಸಿದನು.

ಬುದ್ಧಕಾಲದ ಸಾಮಾಜಿಕಸ್ಥಿತಿಯು:—ಬುದ್ಧಕಾಲೀನ ಸಾಮಾಜಿಕಚಿತ್ರವನ್ನು ನೋಡುವ ಕುತೂಹಲವು ಪ್ರತಿಯೊಬ್ಬರಿಗಿರುವದು ಸರಿಯೇ! ಏಕೆಂದರೆ, ಆಯಾಯ ಕಾಲದ ಸಾಮಾಜಿಕ ಜೀವನದಲ್ಲಿ ಬೇರೆ ಬೇರೆ ಬದಲಾವಣೆಗಳಾಗಿ ಅದು ಮಾರ್ಪಡುತ್ತಿರುತ್ತದೆ. ಈ ಜೀವನನ್ನು ತಿಳಿಸುವದೊಂದು ಇತಿಹಾಸದ ಪ್ರಮುಖಕಾರ್ಯವಾಗಿದೆ. ಮೇಲಾಗಿ, ಆಯಾ ಕಾಲದ ಸಮಾಜಚಿತ್ರಗಳನ್ನರಿಯದೆ, ದೇಶದ ಚರಿತ್ರೆಯ ಆಳಿಕೆ ಬಾಳಿಕೆಗಳನ್ನು ತಿಳಿಯುವದು ಕಷ್ಟವಾಗುತ್ತದೆ. ರಾಷ್ಟ್ರದ ಬಾಳುಬದುಕುಗಳೇ ಚರಿತ್ರೆಯ ನಡುಗಂಬಗಳು. ಬುದ್ಧಕಾಲಕ್ಕೆ ಹಿಂದೂಸಮಾಜದೊಳಗೆ ಪಂಚಾಯತಿ ಪದ್ಧತಿಯಿತ್ತು. ಒಕ್ಕಲಿಗರು ತಮ್ಮ ತಮ್ಮ ಹೊಲಗಳನ್ನು ಬಿತ್ತಿ ಬೆಳೆದುಕೊಂಡು ಸುಖದಿಂದಿರುತ್ತಿದ್ದರು. ಪ್ರತಿಯೊಬ್ಬನ ಹೊಲಕ್ಕೆ ಈಗಿನಂತೆ ಬೇಲಿಗಳಿರದೆ, ಎಲ್ಲ ಹೊಲಗಳಿಗೆ ಕೂಡಿ ಒಂದೇ ಸಾಮಾನ್ಯವಾದ ಬೇಲಿಯಿರುತ್ತಿತ್ತು. ಹಳ್ಳಿಯ ಜನರಲ್ಲಿ ತಮ್ಮ ಜಾತಿ, ಕುಲ ಊರವರ ಬಗ್ಗೆ ವಿಲಕ್ಷಣವಾದ ಅಭಿಮಾನವಿರುತ್ತಿತ್ತು. ಯಾವುದೊಂದು ಕೆಲಸವನ್ನು ದುಡ್ಡು ತೆಗೆದು

ಕೊಂಡು ಮಾಡುವದೆಂದರೆ, ಅವಮಾನವೆಂದು ಬಗೆಯುತ್ತಿದ್ದರು. ಕುಟುಂಬದೊಳಗೆ ಹಿರಿಯ ಮಗನಿಗೆ ವಿಶೇಷ ಹಕ್ಕು ಇರಲಿಲ್ಲವಾದರೂ ಮನೆಯೊಳಗಿನ ಹಿರಿಯರು ತೀರಿಕೊಂಡರೆ ಎಲ್ಲ ಅಧಿಕಾರವೂ ಹಿರಿಯ ಮಗನ ಕೈಸೇರುತ್ತಿತ್ತು. ಕ್ಷತ್ರಿಯರಿಗೆ ವಿಶೇಷ ಮರ್ಯಾದೆಯಿತ್ತು. ಕ್ಷತ್ರಿಯರ ತರುವಾಯ ಬ್ರಾಹ್ಮಣಋತ್ವಿಜರಿಗೆ ಮೇಲಾದ ಮಾನವು. ಇಂತಿಂಥವರು ಇಂತಿಂತಹ ಕಸಬು-ಕಾಯಕಗಳನ್ನು ಮಾಡಬೇಕೆಂದು ನಿರ್ಬಂಧನವಿರಲಿಲ್ಲ. ಬೇಕಾದವರು ಬೇಕಾದ ಕೆಲಸ ಕೈಕೊಳ್ಳುತ್ತಿದ್ದರು. ಕ್ಷತ್ರಿಯರು ಅಡಿಗೆಯ ಕೆಲಸವನ್ನು ಸಹ ಮಾಡುತ್ತಿದ್ದರು. ಯುದ್ಧದೊಳಗೆ ಸಿಕ್ಕ ಪರದೇಶದ ಜನರನ್ನೂ, ಶಿಕ್ಷೆ ಹೊಂದಿದವರನ್ನೂ, ಗುಲಾಮರೆಂದು ಬಗೆಯುತ್ತಿದ್ದರು; ಆದರೆ ಗುಲಾಮರೆಂದರೆ ಶೂದ್ರರಲ್ಲ. ಬ್ರಾಹ್ಮಣ ಕ್ಷತ್ರಿಯರಲ್ಲಿ ನಾರೋದ್ಧಾರವಾಗಿ ಊಟಗಳು ನಡೆಯುತ್ತಿದ್ದವು. ಕೆಲವೆಡೆಯಲ್ಲಿ ಜಾತಿಭೇದ, ಭೋಜನಾವಳಿಗಳಲ್ಲಿ ಕಟ್ಟಾದ ನಿಯಮಗಳಿದ್ದಂತೆ ಕಾಣುತ್ತಿವೆ. ಧರ್ಮಾಭಿಮಾನ, ಕುಲಾಭಿಮಾನಗಳು ಆ ಕಾಲದ ಜನರ ಮನೋಧರ್ಮದ ಮುಖ್ಯ ವಿಷಯಗಳಾಗಿದ್ದವು. *

ಸಾರ್ವಜನಿಕವಾದ ಸ್ನಾನದ ಮನೆಗಳು:- ತುರ್ಕರ ಸ್ನಾನದಲ್ಲಿರುವಂತೆ, ಬಾಷ್ಪಸ್ನಾನದ ದೆಸೆಯಿಂದ ಕಟ್ಟಲ್ಪಟ್ಟ ಕಟ್ಟಡಗಳು ಅಲ್ಲಲ್ಲಿರುತ್ತಿದ್ದವು. ಎತ್ತರವಾದ ಸ್ಥಳಗಳಲ್ಲಿ ಇಟ್ಟಿಗೆಗಳಿಂದ ಈ ಮನೆಗಳನ್ನು ಕಟ್ಟುತ್ತಿದ್ದರು. ಈ ಮನೆಯಲ್ಲಿ ಒಂದು ಚಿಕ್ಕ ಸ್ನಾನದ ಕೋಣೆಯಿರುತ್ತಿತ್ತು; ಮತ್ತು ಇದರಲ್ಲಿ ಒಂದು ಹೌದು ಇದ್ದು, ಉಷ್ಣವಾಯು ಸ್ನಾನಕ್ಕಾಗಿ ಈ ಕೋಣೆಯಲ್ಲಿ ನಡುವೆ ಒಂದು ಅಗ್ನಿಷ್ಟಿಗೆಯನ್ನು ಇಟ್ಟಿರುತ್ತಿದ್ದರು. ಈ ಸ್ನಾನದ ಮನೆಯು ಕೈಗಾರಿಕೆಯ ಕೆತ್ತಿನೆಯ ಕೆಲಸದಿಂದ ಬಹು ಅಂದಗೊಳಿಸಿರುತ್ತಿದ್ದರು. ಇಂತಹ ಕಟ್ಟಡಗಳು ಅನುರಾಧಾಪುರದೊಳಗೆ ಈಗ್ಯೂ ಜೀರ್ಣಾದ ಸ್ಥಿತಿಯಲ್ಲಿದ್ದುದನ್ನು ನೋಡಬಹುದು.

ಜಾತಿಸಂಸ್ಥೆ ಮತ್ತು ಅರಮನೆ:- ಯಾವುದೊಂದು ಕೆಲಸಕ್ಕಾಗಿ ಜನರ ಸಲಹೆ ಕೇಳುವದಾಗಲಿ, ಜನರನ್ನು ಕರೆಕಳಿಸುವದಾಗಲಿ

* ಈ ಸಂಗತಿಗಳನ್ನು ಜ್ಞಾನಕೋರದೊಳಗಿಂದ ಎತ್ತಿರುವೆವು.

ಅದರೆ, ಅರಸನು ಪ್ರತಿಯೊಂದು ಜಾತಿಯಲ್ಲಿಯು ಮೇಟಿವಕ್ಕಲನ್ನಾಗಲಿ, ಹಣವಂತನನ್ನಾಗಲಿ ಕರೆಯಿಸುತ್ತಿದ್ದನು. ಪತಿಪತ್ನಿಯರ ಜಗಳಗಳನ್ನೂ, ಜಾತಿ ಜಾತಿಗಳೊಳಗಿನ ಕಲಹಗಳನ್ನು ಜಾತಿಸಂಘದ ಪ್ರಮುಖರೇ ಬಗೆಹರಿಸುತ್ತಿದ್ದರು. ಮುಂದೆ ಈ ಸಂಘದ ಮುಖಂಡನಿಗೇನೇ ನಗರ-ಶ್ರೇಷ್ಠಿ ಅಥವಾ ಊರಸೆಟ್ಟಿ ಎಂಬ ಹೆಸರು ಬಂದಿತು. ಜೂಜಿನಾಟದ ಗೊಂದಲವು ಈ ಕಾಲದಲ್ಲಿ ವಿಪರೀತವಾಗಿ ಬೆಳೆದುಕೊಂಡಿದ್ದು ಅರಮನೆಯಲ್ಲಿಯೇ ಜೂಜಿನಾಟಕ್ಕಾಗಿ ಬಂದು ಅಡ್ಡೆಯನ್ನು ಕಲ್ಪಿಸಿರುತ್ತಿದ್ದರು. ಜೂಜಾಡುವವರ ಹುಟ್ಟುವಳಿಯೊಳಗಿನ ಕೆಲಭಾಗವು ಅರಸನಿಗೆ ಸಲ್ಲಬೇಕೆಂದು ನಿಯಮವಿದ್ದಿತು.

ವ್ಯಾಪಾರ:– ಅಲ್ಲಲ್ಲಿ ವರ್ತಕರ ಸಂಘಗಳು ಇಲ್ಲದಿದ್ದರೂ, ಹುಂಡಿಯ ವ್ಯಾಪಾರವು ಹಿಂದೂದೇಶದ ಪುರಾತನ ವ್ಯಾಪಾರವು. ಎಂದಿನಂತೆ, ಜನರು ಮನೆಯಲ್ಲಿ ಹಣ ಕೂಡಿಟ್ಟು ನೆಲದಲ್ಲಿ ಹೂಳಿಡುತ್ತಿದ್ದರು; ಅಥವಾ ಸ್ನೇಹಿತರ ಹತ್ತರ ಇಟ್ಟು ಅವರಿಂದ ಕಾಗದ ಬರೆಯಿಸಿಕೊಳ್ಳುತ್ತಿದ್ದರು. ಒಂದೂರಿಂದ ಇನ್ನೊಂದೂರಿಗೆ ಹೋಗಲಿಕ್ಕೆ ಛತ್ರಿಗಳು ಇರುತ್ತಿರಲಿಲ್ಲ. ಒಕ್ಕಲಿಗರೂ, ವರ್ತಕರೂ ದೊಡ್ಡ ದೊಡ್ಡ ನದಿಗಳನ್ನು ದಾಟಿ, ಅಥವಾ ಸಮುದ್ರದಂಡೆಗುಂಟ ಚಿಕ್ಕ ಡೋಣಿಗಳನ್ನು ಹಾಯಿಸಿ ಸರಕು ತರುಬಯ್ಯುತ್ತಿದ್ದರು. ನೆಲಮಾರ್ಗದಿಂದ ಬಂದು ಊರಿಂದ ಮತ್ತೊಂದು ಊರಿಗಾಗಲಿ, ಬಂದು ದೇಶದಿಂದ ಮತ್ತೊಂದು ದೇಶಕ್ಕಾಗಲಿ ಸರಕುಗಳನ್ನು ಹೇರಿಕೊಂಡು ಹೋಗುವ ಎರಡು ಗಾಲಿಯ ಬಂಡಿಗಳು ಯಾವಾಗಲೂ ನಾಲು ಹಿಡಿದು ನಡೆಯುತ್ತಿದ್ದವು. ಈ ಬಂಡಿಗಳು ವಾಡಿಕೆಯಾಗಿ ಕಂದರದೊಳಗಿಂದಾಗಲಿ, ಹೊಲದೊಳಗಿಂದಾಗಲಿ ಹೋಗುತ್ತಿದ್ದವು. ಯಾವುದೊಂದು ದೇಶದೊಳಗಿಂದ ಹಾಯಬೇಕಾದರೆ ಸುಂಕ ತೆರಬೇಕಾಗುತ್ತಿತ್ತು. ಈ ಬಂಡಿಕಾರರನ್ನು ಸುಲಿಗೆಗಾರರು ದೋಚಿಕೊಳ್ಳಬಾರದೆಂದು, ಇವರ ರಕ್ಷಣೆಗಾಗಿ ಇಟ್ಟಿರುವ ಸಿಪಾಯರ ಖರ್ಚನ್ನು ಸಹ ಈ ಸುಂಕಿನೊಳಗಿಂದಲೇ ಎತ್ತುತ್ತಿದ್ದರು. ರೇಶ್ಮೆ, ರೇಶ್ಮೆಬಟ್ಟೆ, ಮಲಮಲ, ಜಾಕು, ಕತ್ತೂರಿ, ಔಷಧ, ಸುಗಂಧದ್ರವ್ಯ, ಅನೆಯ ಹಲ್ಲು, ರತ್ನಗಳು, ಚಿಲಕತ್ತು ಇವೇ ವ್ಯಾಪಾ

ರದ ಸರಕುಗಳು. ರಾಜಮುದ್ರಾಂಕಿತವಾದ ನಾಣ್ಯಗಳು ಬಳಕೆಯಲ್ಲಿರಲಿಲ್ಲ. ಸರಕಿನ ವಿನಿಮಯದಿಂದ ವ್ಯಾಪಾರ ನಡಿಸುವ ಪದ್ಧತಿಯು ನಿಂತುಹೋಗಿತ್ತು.

ಜನರ ಆರ್ಥಿಕಸ್ಥಿತಿ ಹಾಗೂ ಓದುಬರಹ:– ಒಟ್ಟಿನಮೇಲೆ, ಈ ಕಾಲಕ್ಕೆ ಜನಾಂಗದ ಆರ್ಥಿಕಸ್ಥಿತಿಯು ಚನ್ನಾಗಿತ್ತು. ವ್ಯಾಪಾರ ಉದ್ಯಮವೇ ಹೆಚ್ಚಾಗಿ ನಡೆಯುತ್ತಿದ್ದುದರಿಂದ ಜಮೀನದಾರ ವರ್ಗವು ಇರಲಿಲ್ಲ. ಒಕ್ಕಲಿಗರ ಸಂಖ್ಯೆಯು ಹೆಚ್ಚು. ಒಕ್ಕಲಿಗರೇ ಭೂಮಿಯ ಒಡೆತನ ನಡಿಸುತ್ತಿದ್ದರು. ನಾವುಕಾರರು ಬಹಳ ಕಡಿಮೆಯಿದ್ದರು. ಕೌಶಾಂಬಿ, ಶ್ರಾವಸ್ತಿ, ವೈಶಾಲಿ, ರಾಜಗೃಹ, ಕಾಶಿ, ತಕ್ಷಶಿಲೆಯಂಥ ದೊಡ್ಡ ರಾಜಧಾನಿಯ ಪಟ್ಟಣಗಳಲ್ಲಿ ಲಕ್ಷಾಧೀಶರಾದ ನಾವುಕಾರರು ಕೈಮೇಲೆ ಎಣಿಸುವಷ್ಟೆ ಇರುತ್ತಿದ್ದರ ಮೇಲಿಂದ ತತ್ಕಾಲೀನ ಜನರ ಆರ್ಥಿಕಸ್ಥಿತಿಯು ಹೇಗಿತ್ತೆಂಬುದು ಚನ್ನಾಗಿ ಪ್ರತೀತವಾಗುತ್ತದೆ. ಈ ಕಾಲಕ್ಕೆ ಓದುಬರೆಯಲಿಕ್ಕೆ ಬರಿಯ ವಿಶಿಷ್ಟವರ್ಗದವರೇ ಕಲಿಯದೆ, ಸಾಮಾನ್ಯರೂ, ಸ್ತ್ರೀಯರೂ ಸಹ ಕಲಿಯುತ್ತಿದ್ದರು. ಪರ್ಸ್ಪರ ಪತ್ರ ವ್ಯವಹಾರ ನಡೆಯುತ್ತಿದ್ದಿತು. ಪಶ್ಚಿಮಕ್ಕಿರುವ ಕುರುಕ್ಷೇತ್ರದಿಂದ ಮಗಧದೇಶದ ಪರೆಗೂ, ಉತ್ತರಕ್ಕಿರುವ ಶ್ರಾವಸ್ತಿಯಿಂದ ನೇಪಾಳದ ತನಕವೂ, ದಕ್ಷಿಣಕ್ಕೆ ಉಜ್ಜಯಿನಿಯ ವರೆಗೂ ಒಂದೇ ಒಂದು ಭಾಷೆ ಬಳಕೆಯಲ್ಲಿತ್ತು. ದಾರಿಕಾರರು ಹೋಗುಬರುವ ಹೆದ್ದಾರಿಗಳ ಮೇಲೆ ಅಲ್ಲಲ್ಲಿ ಈಗಿನಂತೆ, ದಾರಿಯ ಅಂತರವನ್ನು ಸೂಚಿಸುವ ಕಲ್ಲುಗಳೂ, ಪ್ರಯಾಣಿಕರೂ ಇಳಿಯುವ ಮನೆಗಳೂ ಇದ್ದ ಬಗ್ಗೆ ಉಲ್ಲೇಖವಿದೆ. ಹಲಗೆಯ ಮೇಲೆ ಮಳಲನ್ನು ಹಾಕಿ ವರ್ಣಕದಿಂದ ಬರೆಯುವ ರೂಢಿಯಿತ್ತು. ಅಕ್ಕರಿಕಾ ಎಂಬುದೊಂದು ಮಕ್ಕಳ ಆಟವೂ ಪ್ರಚಾರದಲ್ಲಿತ್ತು. ಇದು ನಾಮಾಸ್ಯ ವಿದ್ಯೆಯ ಮಾತಾಯಿತು.

ಬ್ರಾಮ್ಹಣರು ತಮ್ಮ ಸಂಸ್ಕೃತಿಯನ್ನು ಕಾಯ್ದುದ್ದು:– ಬುದ್ಧಕಾಲವೆಂದರೆ, ಒಂದು ಬಗೆಯಿಂದ ಬ್ರಾಮ್ಹಣಧರ್ಮಕ್ಕೆ ಬಂದ ಗಂಡಾಂತರವೇ! ಆದುದರಿಂದ ಬ್ರಾಮ್ಹಣಸಂಸ್ಕೃತಿಯು ಈ ಕಾಲಕ್ಕೆ ಬಲವಾದ ಇರುಕಿನೊಳಗೆ ಸಿಕ್ಕಿಕೊಂಡಿತ್ತು. ಅರಸನಿಂದ ಆಳುಮಗನ

ವರೆಗೂ ಎಲ್ಲರು ಬುದ್ಧಧರ್ಮದ ಅನುಯಾಯಿಗಳೇ ಆದ್ದರಿಂದ ಬ್ರಾಮ್ಹಣಿದ್ವೇ, ಬ್ರಾಹ್ಮಣಭಾಷೆಯಾದ ಸಂಸ್ಕೃತವನ್ನು ಯಾರೂ ಕೇಳದಂತಾದರು. ಬುದ್ಧಧರ್ಮ ಕಾಲಾನು ಬುದ್ಧರು ಬಳಸುತ್ತಿದ್ದ ಪಾಲೀಭಾಷೆಗೆ ವಿಶೇಷ ಮರ್ಯಾದೆಯುಂಟ್ತೆಂದು ಕಾಣುತ್ತದೆ. ಬುದ್ಧದೇವನು ಯಜ್ಞಯಾಗಾದಿಗಳನ್ನು ಜರಿಯುತ್ತಿದ್ದುದರಿಂದ ವೈದಿಕದೇವತೆಗಳ ಬಗ್ಗೆ ಸಾಮಾನ್ಯವಾಗಿ ಜನರಲ್ಲಿ ಆದರವಿರಲಿಲ್ಲ. ಹೀಗೆ ಬುದ್ಧದೇವನಂತಹ ಧರ್ಮಾವತಾರನಾದ ವಿಭೂತಿಯುಳ್ಳ ಪುರುಷನಿಂದಲೂ, ಆ ಮೇಲೆ ಜನಸಾಮಾನ್ಯರಿಂದಲೂ ನಿಂದೆಗೆ ಗುರಿಯಾದ ಬ್ರಾಮ್ಹಣ ಧರ್ಮವನ್ನು ಪುನಃ ವುರೋಭಿವೃದ್ಧಿಗೆ ಹೇಗೆ ತರಬೇಕೆಂಬುದೊಂದು ಒಳ್ಳೇ ಬಿಕ್ಕಟ್ಟಿನ ಕಾರ್ಯವೇ ಆಗಿತ್ತು. ಬೌದ್ಧ ಧರ್ಮದಂತಹ ಸುಲಭ ಧರ್ಮವು ಬಂದೆಯೆಲ್ಲಿ ಮನಸನ್ನು ಎಳೆಯುತ್ತಿದ್ದ ಸಮಯದಲ್ಲಿ ಬ್ರಾಮ್ಹಣಧರ್ಮದಂತಹ ಕಷ್ಟಸಾಧ್ಯವಾದ ಧರ್ಮಕ್ಕೆ ಜನರ ಮನಸು ಸೋಲುವದರಲ್ಲಾಶ್ಚರ್ಯವೇನು? ಇಂಥ ಸ್ಥಿತಿಯೊಳಗಿಂದ ಬಂದಿಲ್ಲೊಂದು ಉಪಾಯದಿಂದ ಜನರನ್ನು ತಮ್ಮ ಕಡೆಗೆ ಒಲಿಸಬೇಕೆಂಬ ಹವಣಿನಿಂದ ಕಲ್ಪಕರಾದ ಬ್ರಾಮ್ಹಣರು ಹೊಸ ದೇವತೆಗಳನ್ನು ಕಲ್ಪಿಸಿ, ಅದಕ್ಕನುಗುಣವಾಗಿ ತಮ್ಮ ವಾಙ್ಮಯವನ್ನು ರಚಿಸಿದರು. ಯಜ್ಞಕರ್ಮದ ಗೊಂದಲಕ್ಕೆ ಶಿಲುಕದೆ, ಸಾಮಾನ್ಯ ಜನರ ಮನಸಿಗೆ ಹಿಡಿಯುವಂಥ ಕಾವ್ಯಮಯವಾದ ವಾಙ್ಮಯವನ್ನು ಬರೆಯಲಿಕ್ಕೆ ಬದ್ಧಕಂಕಣರಾದರು. ಹಳೆ ಸಂಗತಿಗಳನ್ನೇ ಹೊಸ ವಾಙ್ಮಯವೆಂಬ ಹೊದಿಕೆಯಿಂದ ಹೊದಿಸಿ, ಜನರನ್ನಾಕರ್ಷಿಸುವ ಭರದೊಳಗೆ ಬ್ರಾಮ್ಹಣರ ಐತಿಹಾಸಿಕದೃಷ್ಟಿಯು ಅಂಧವಾಯಿತೇನೋ ನಿಜ; ಆದರೆ ರಾಮಕೃಷ್ಣಾದಿ ವಿಭೂತಿ ವಿಶೇಷಗಳ ಮಹಿಮೆಯನ್ನು ಕಾವ್ಯಮಯವಾಗಿ ಬಣ್ಣಿಸಿ, ಹಾಡತೊಡಗಿದ್ದುದೇ ಬ್ರಾಹ್ಮಣಸಂಸ್ಕೃತಿಯನ್ನು ಕಾಯಲಿಕ್ಕೆ ಬ್ರಾಮ್ಹಣರಿಗೊಂದು ತರಣೋಪಾಯವಾಗಿ ಪರಿಣಮಿಸಿತು. ಬೌದ್ಧರು ಇತ್ತ ತಮ್ಮ ಧರ್ಮಸ್ಥಾಪಕನಾದ ಬುದ್ಧನನ್ನು ಹೊಗಳಿ ಹಾಡುತ್ತಿರುವಾಗ್ಗೆ ಬ್ರಾಮ್ಹಣರೂ ಅದಕ್ಕೆ ಸರಿಯಾಗಿ, ರಾಮಕೃಷ್ಣಾದಿಗಳ ಪವಾಡಗಳನ್ನು ಮನಸೊಲಿಯುವಂತೆ ಹಾಡತೊಡಗಿದರಿಂದಲೇ ವೈದಿಕ

ಧರ್ಮವು ಉಳಿದುಕೊಂಡಿತು. ಈ ಮೇರೆಗೆ ಸರಿಸುರಿಯ ಒಳದಾರಿಯನ್ನು ಬ್ರಾಮ್ಹಣರು ಹುಡುಕದಿದ್ದರೆ ಬ್ರಾಮ್ಹಣಧರ್ಮವು ಉಳಿಯುತ್ತಿರಲಿಲ್ಲ.

ರಾಜಕೀಯ ಸ್ಥಿತಿಯು:- ಬುದ್ಧನ ಕಾಲದಿಂದ ಚಂದ್ರಗುಪ್ತನ ವರೆಗಿನ ಸಾಮಾಜಿಕಚಿತ್ರವನ್ನು ತೆಗೆದುದಾಯಿತು. ಇನ್ನು ರಾಜಕೀಯ ಸ್ಥಿತಿಯ ಚಿತ್ರವನ್ನು ನೋಡತೊಡಗಿದರೆ, ರಾಜಕೀಯಾಂಗಣದೊಳಗೆ ಚಂದ್ರಗುಪ್ತನ ವರೆಗೆ ಒಡೆದು ಕಾಣುವಂಥ ಯಾವ ರಾಜರೂ ತಲೆಯೆತ್ತಿದಂತೆ ಕಾಣಲಿಲ್ಲ. ಈ ಅವಧಿಯಲ್ಲಿ ಉತ್ತರಹಿಂದುಸ್ಥಾನದೊಳಗೆ ಮಗಧ, ಕೋಸಲ, ವತ್ಸ, ಅವಂತಿ, ಗಾಂಧಾರ, ಕಾಶಿ, ಚೇದಿ, ಪಾಂಚಾಲ, ಕುರು, ಸಾತ್ವತ, ಶೂರಸೇನ, ಮಲ್ಲ, ಕಾಂಭೋಜ, ವೃಜಿಕ ಅವೇ ಮುಂತಾದ ೧೬ ಚಿಕ್ಕ ದೊಡ್ಡ ರಾಜ್ಯಗಳಿದ್ದವು. ಇವುಗಳಲ್ಲಿ ಹಲವು ಬಹುದಿನಗಳ ವರೆಗೆ ತಮ್ಮ ಪ್ರಜಾಧಿಪತ್ಯವನ್ನು ಕಾಯ್ದುಕೊಂಡಿದ್ದವೆಂಬುದು ಜ್ಞಾಪಕದೊಳಗಿಡತಕ್ಕ ಸಂಗತಿಯಾಗಿದೆ. ಈ ಅರಸರುಗಳಲ್ಲಿ ಕೆಲಕಾಲ ಕಾಶಿಯ ಶೈಶುನಾಗವಂಶದ ಅರಸರು ಕೆಲಮಟ್ಟಿಗೆ ತಮ್ಮ ಬಾಹುಬಲದಿಂದ ರಾಜ್ಯವನ್ನು ಹರಡಲಿಕ್ಕೆ ಪ್ರಯತ್ನಿಸಿದರು. ಅವರಲ್ಲಿ ಬಿಂಬಸಾರನೆಂಬಾತನೇ ಮುಖ್ಯನು; ಈತನ ಆಳಿಕೆಯಲ್ಲಿಯೇ ಬುದ್ಧದೇವನೂ, ಮಹಾವೀರದೇವನೂ ತಮ್ಮ ತಮ್ಮ ಮತ ಪ್ರಸಾರಗೊಳಿಸುವ ಕಾರ್ಯಗಳನ್ನು ಪ್ರಬಲವಾಗಿ ನಡೆಯಿಸಿದರು. ಅಲ್ಲದೆ ರಾಜರಿಂದಲೂ ಪ್ರತ್ಯಕ್ಷವಾಗಿ ಈ ಮತ ಪ್ರಸಾರಕರಿಗೆ ಬೆಂಬಲದೊರೆಯಿತು. ಮಗಧರಾಜ್ಯವನ್ನು ಈತನು ಅಂಗದೇಶದ ವರೆಗೆ ಬೆಳೆಸಿದನು. ಈ ಕಾಲಕ್ಕೆ ವೈಶಾಲಿಯು ವ್ಯಾಪಾರದ ಕೇಂದ್ರಸ್ಥಾನವಾದ್ದರಿಂದ, ಈತನು ವೈಶಾಲಿಯ ರಾಜಕನ್ಯೆಯನ್ನು ಮದುವೆಯಾಗಿ ಬಲಾಢ್ಯವಾದ ಲಿಚ್ಛವಿಸಂಘದ ರಾಜ್ಯವನ್ನು ತನ್ನಂತೆ ಮಾಡಿಕೊಂಡನು. ಈತನ ಮಗನಾದ ಅಜಾತಶತ್ರುವು ಈತನನ್ನು ಕೊಂದು ತಾನೇ ರಾಜ್ಯವನ್ನಾಳಲಾರಂಭಿಸಿದನು. ಅಜಾತಶತ್ರುವು ತನ್ನ ಆಳ್ವಿಕೆಯಲ್ಲಿ ರಾಜಗೃಹವನ್ನು ಬಿಟ್ಟು ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿ ಅದರ ಕೋಟೆಯನ್ನು ಕಟ್ಟಿಸಿದನು. ಪಾಟಲಿಯೆಂಬ ಸೂಳೆಯ ಮಗನಿಂದ

ಈ ಪಟ್ಟಣವು ನ್ಯಾಪಿಸಲ್ಪಟ್ಟದ್ದರಿಂದ ಇದಕ್ಕೆ ಪಾಟಲಿಪುತ್ರವೆಂಬ ಹೆಸರು ಬಂದಿತು. ಅಜಾತಶತ್ರುವು ಶೂರನಿದ್ದು ಲಿಚ್ಛವಿ ಅರಸನೊಡನೆ ಬಹು ದಿನಗಳ ವರೆಗೆ ಹೋರಾಡಿದನು; ಈತನ ಹೆಂಡತಿಯಾದ ಮಲ್ಲಿಕಾದೇವಿಯು ಬುದ್ಧಶಿಷ್ಯಳಿದ್ದಳು. ಅಜಾತಶತ್ರುವಿನ ತರುವಾಯ ಉದಯನು ಪಟ್ಟಕ್ಕೆ ಬಂದನು.

ಹಿಂದೂದೇಶದ ಮೇಲೆ ಇರಾಣಿಯರ ಕಣ್ಣು:—ಕ್ರಿ. ಶ. ಪೂ. ಸುಮಾರು ೫೦೦ ವರ್ಷಕ್ಕೆ ಅಂದರೆ ನಂದವಂಶದ ಉದಯನು ಆಳುತ್ತಿರಲು, ಇರಾಣದ ಚಕ್ರವರ್ತಿಯಾದ ಡರಾಯಸನು ಹಿಂದೂದೇಶದ ಸ್ಥಿತಿಗತಿಗಳನ್ನರಿತುಕೊಳ್ಳಲಿಕ್ಕೆ ತನ್ನ ಸರದಾರನಾದ ನಾಯಲಾಕ್ಸ ಎಂಬವನನ್ನು ಕಳಿಸಿದನು. ಈತನು ಸಿಂಧುನದಿಯೊಳಗಿಂದ ಪ್ರಯಾಣ ಮಾಡಿ, ಹಿಂದೂದೇಶವು ಧನಧಾನ್ಯಾದಿಗಳ ಸಮೃದ್ಧಿಯಿಂದ ಹೇಗೆ ಮೇರೆಯಿಲ್ಲದೆ ಮೆರೆಯುತ್ತಿರುವದೆಂಬುದನ್ನು ಕಣ್ಣಾರೆ ಕಂಡು, ಈ ಸಂಗತಿಯನ್ನೆಲ್ಲ ತನ್ನ ಧೊರೆಗೆ ತಿಳಿಸಿದನು; ಧೊರೆಯು ಅಪ್ಪಣೆಯ ಮೇರೆಗೆ ನಾಯಲಾಕ್ಸನು ಸಿಂಧುನದಿಯ ವರೆಗಿನ ಪ್ರದೇಶವನ್ನೆಲ್ಲ ಜಯಿಸಿದನು. ಮತ್ತು ಸಿಕಂದರನು ದಂಡೆತ್ತಿ ಬರುವ ವರೆಗೂ ಪಂಜಾಬ ಕಡೆಯ ಭಾಗವನ್ನಾಳಿದರು. ಇರಾಣಿಯರೊಡನೆ ಹಿಂದೂಜನರ ಒಡನಾಟವು ಬಹು ದಿನಗಳಿಂದ ನಡೆದುಬಂದ ಮಾತಾಗಿದ್ದಿತು. ಹೀಗೆ ಅವರಿವರಿಗೂ ತೀರ ಸಮೀಪದ ಸಂಬಂಧವು ಬೆಳೆದುದರಿಂದ ಇರಾಣಿಯರ ಸಂಸ್ಕೃತಿಯ ಕುರುಹುಗಳು ನಮ್ಮಲ್ಲಿ ಕೆಲದಿನಗಳ ವರೆಗೆ ಒಡಮೂಡಿಕೊಂಡಿದ್ದವು.

ನಂದವಂಶವು:— ಶೈಶುನಾಗವಂಶದೊಳಗೆ ಮುಂದೆ ಮುಂದೆ ಯಾವ ಬಲಾಢ್ಯರಾದ ವೀರ ಅರಸರು ಹುಟ್ಟಿದ್ದರಿಂದ ಈ ವಂಶವು ಕೊನೆಗಂಡಿತೆಂದರೂ ನಂದರೂ ಶೈಶುನಾಗವಂಶದೊಳಗಿನ ಕೊನೆಯ ಅರಸರೆಂದು ಕೆಲವರ ಮತವಿದೆ. ನಂದವಂಶಕ್ಕೆ ಸೇರಿದ ಮಹಾನಂದಿ ಎಂಬುವನಿಗೆ ಮುರಾದೇವಿಯೆಂಬ ಶೂದ್ರಸ್ತ್ರೀಯಲ್ಲಿ ಮಹಾಪದ್ಮ ನಂದನು ಜನಿಸಿ, ಕ್ಷತ್ರಿಯರನ್ನು ನಿರ್ಮೂಲಗೊಳಿಸಿದನು. ಈತನ ಎಂಟು ಮಂದಿ ಮಕ್ಕಳು ಅಳಿದರು. ನಂದರಾಜ್ಯವು ಪ್ರಜೆಗಳಿಗೆ ಸುಖಕರ

ವಾಗಿರಲಿಲ್ಲ. ನಂದರು ಉನ್ಮತ್ತರೂ, ಕ್ರೂರರೂ ಆಗಿದ್ದರು. ಇವರಿಗೆ ನವನಂದರೆನ್ನುವ ವಾಡಿಕೆಯುಂಟು. ಈ ರಾಜರ ವಿಷಯವಾಗಿ ಸಂಸ್ಕೃತದೊಳಗೆ ಮುದ್ರಾರಾಕ್ಷಸವೆಂಬುದೊಂದು ನಾಟಕವೇ ನಿರ್ಮಾಣವಾದುದನ್ನು ನೋಡಿದಿರೆ, ನಂದ ಹಾಗೂ ಮೌರ್ಯವಂಶದವರ ಆಳಿಕೆಯು ಪ್ರಜೆಗಳ ಮನಸಿನಲ್ಲಿ ಯಾವ ವಿಧವಾಗಿ ಪರಿಣಮಿಸಿರುವದೆಂಬುದನ್ನು ಕಂಡುಹಿಡಿಯಲಿಕ್ಕೆ ಅಸುವು ದೊರೆಯುತ್ತದೆ. ನವನಂದರು ಹಾಗೂ ಮೌರ್ಯರ ವಿಷಯವಾಗಿ ವಿಶ್ವಸನೀಯವಾದ ಐತಿಹಾಸಿಕ ಸಂಗತಿಯು ದೊರೆಯದ್ದರಿಂದ ನಾವು ಮುದ್ರಾರಾಕ್ಷಸ ನಾಟಕದೊಳಗಿರುವ ಸಂಗತಿಯನ್ನೇ ಆಧಾರವಾಗಿಟ್ಟುಕೊಂಡು ಮುಂದೆ ನಾಗುವದೇ ಯುಕ್ತವಾಗಿ ತೋರುತ್ತದೆ. ಪಾಟಲೀಪುತ್ರದಲ್ಲಿ ಸರ್ವಾರ್ಥಸಿದ್ಧಿಯೆಂಬ ಅರಸನು ಪ್ರಜಾಕ್ಷೇಮ ಚಿಂತನೆಯಲ್ಲಿಯೇ ಆಸಕ್ತನಾಗಿ ರಾಜ್ಯವಾಳುತ್ತಿದ್ದನು. ಅತನಿಗೆ ಸುನಂದೆಯೆಂಬ ಪಟ್ಟದ ರಾಣಿಯೂ, ಮುರೆಯೆಂಬ ಗಾಡಿಗಾರ್ತಿಯೂ, ಆದ ಇಬ್ಬರು ಹೆಂಡಿರಿದ್ದರು. ಸುನಂದೆಗೆ ಬಂಭತ್ತು ಮಕ್ಕಳು. ಮುರಾದೇವಿಗೆ ಮೌರ್ಯನೆಂಬೊಬ್ಬ ಸುಕುಮಾರ. ಸರ್ವಾರ್ಥಸಿದ್ಧಿಯ ನಂತರ ಹಿರಿಯವನಾದ ಮೌರ್ಯನೇ ಪಟ್ಟಕ್ಕೆ ಕುಳಿತು ರಾಜ್ಯದ ಸೂತ್ರಗಳನ್ನೆಲ್ಲ ತನ್ನ ಕೈಯಲ್ಲಿಟ್ಟುಕೊಂಡು ಪ್ರಜಾರಂಜಕನಾಗಿಯೂ, ಎಲ್ಲರಿಗೆ ಅನುಕೂಲವಾಗಿಯೂ ಇದ್ದನು. ನವನಂದರು ಚಿಕ್ಕವರಿದ್ದುದರಿಂದ ವಿದ್ಯಾಭ್ಯಾಸಕ್ಕಾಗಿ ಅಮಾತ್ಯರಾಕ್ಷಸನೆಂಬ ಸ್ವಾಮಿಭಕ್ತನಾದ ವಿದ್ಯಾವಂತನಿಗೆ ಅವರನ್ನೆಲ್ಲ ಒಪ್ಪಿಸಿದನು. ಇತ್ತ ನವನಂದರು ವಿದ್ಯಾವಂತರಾಗಿಯೂ, ಬಲವಂತರಾಗಿಯೂ ಅಭಿವೃದ್ಧಿಗೆ ಬರುತ್ತಿರಲು,' ಮೌರ್ಯನಿಗೆ ಚಂದ್ರಗುಪ್ತನೇ ಮೊದಲಾದ ನೂರು ಮಕ್ಕಳು ಹುಟ್ಟಿದರು. ತೇಜಸ್ವಿಗಳೂ, ವೀರರೂ, ನಿರ್ಮಲರೂ, ಶೀಲಸಂಪನ್ನರೂ ಆದ ಮೌರ್ಯ ಹಾಗೂ ಮೌರ್ಯಮಕ್ಕಳಾದ ಚಂದ್ರಗುಪ್ತ ಅವರೇ ಮೊದಲಾದವರ ದೆಸೆಯಿಂದ ನಂದರಲ್ಲಿ ವೈರಭಾವವುಂಟಾಗಿ ಅವರನ್ನು ಹೇಗಾದರೂ ಮಾಡಿ ನಿರ್ನಾಮಗೊಳಿಸಬೇಕೆಂಬ ಹಂಚಿಕೆ ಮಾಡಿ, ಬೇಟೆಯ ನಿಮಿತ್ತ ಉದ್ಯಾನಕ್ಕೆ ಹೋಗಿ ಅಲ್ಲಿ ಒಂದೆರಡು ದಿನಗಳನ್ನು ವಿನೋದದಿಂದ ಕಳೆಯಬೇಕೆಂಬ ವಿಚಾರ

ವನ್ನು ಮಾಡಿ, ಅದನ್ನು ಮೌರ್ಯರಿಗೆ ತಿಳಿಸಿದರು. ನಂದರ ಕುಯುಕ್ತಿಯನ್ನರಿಯದಿದ್ದ ಮೌರ್ಯರು ಕೂಡಲೇ ಇದಕ್ಕೊಪ್ಪಿ, ಉದ್ಯಾನಕ್ಕೆ ನಡೆದರು. ವನಭೋಜನಕ್ಕಾಗಿಯೇ ಬೇಕೆಂದು ನಿರ್ಮಿಸಿದ ದಿವ್ಯ ಆರಮನೆಯಲ್ಲಿ ರಾಜಪುತ್ರರೆಲ್ಲರು ಬಂದು ಸೇರಿ, ತಮತಮಗಾಗಿ ಹಾಕಿಟ್ಟ ಮಣೆಗಳ ಮೇಲೆ ಕುಳಿತರು. ಆರಮನೆಯ ಕೆಳಗಣ ಅಂಕಣದೊಳಗೆ ಮೌರ್ಯರಿಗಾಗಿ ನೂರೊಂದು ಎಲೆಗಳೇ ಮಾತ್ರ ಹಾಕಲ್ಪಟ್ಟಿದ್ದವು. ನಂದರು ಊಟಕ್ಕೆ ಕುಳಿತವರ ಪರಾಮರಿಕೆಯನ್ನು ತೆಗೆದುಕೊಳ್ಳುತ್ತ ಅಲ್ಲಲ್ಲಿ ತಿರುಗಾಡುತ್ತಿದ್ದರು. ನಂದರ ಒಳಸಂಚನ್ನರಿಯದ ಮೌರ್ಯರಿಗೆ ಈ ವಿಷಯದಲ್ಲಿ ಶಂಕೆಯುಪ್ಪಾದರೂ ಸಂಶಯಬರಲಿಲ್ಲ. ಎಲ್ಲರೂ ಸಂತೋಷದಿಂದ ಊಟ ಮಾಡತೊಡಗಿದರು; ಹೀಗೆ ಎಲ್ಲರೂ ದಿವ್ಯವಾದ ಊಟದ ಸಂಭ್ರಮದೊಳಗೆ ಮೈಮರೆತಿರಲು, ಒಮ್ಮೆಲೇ ಕೆಳಗಿನ ಅಂಕಣದ ಬಾಗಿಲು ರಭಸದಿಂದ ಮುಚ್ಚಿತು. ಗಾಳಿಯಿಂದ ಬಾಗಿಲು ಮುಚ್ಚಿರಬಹುದೆಂದೂ, ಕೂಡಲೇ ಬಾಗಿಲ ತೆರೆಯಿರೆಂದು ಕೂಗಿ ಗಂಟಲ ಹರಕೊಂಡದ್ದಾಯಿತು. ಯಾರಾದರೂ ಬಾಗಿಲು ತೆರೆಯಬಹುದೆಂದೂ ಐದು ನಿಮಿಷ, ಹತ್ತು ನಿಮಿಷ, ಕೊನೆಗೆ ಅರ್ಧ ಗಂಟೆಯ ವರೆಗೆ ದಾರಿಕಾಯ್ದರೂ ಬಾಗಿಲು ತೆರೆಯಲಿಲ್ಲ. ಏಳಲುಬೇಕೆಂದರೆ, ಎದ್ದು ಕೈ ತೊಳೆಯಲು ನೀರಿಲ್ಲ; ಎದ್ದರೆ ಕುಳ್ಳಿರಲಿಕ್ಕೆ ಸ್ಥಳವಿಲ್ಲ. ಹೊರಗಿನಿಂದ ಒಳಕ್ಕೆ ಬರಲಿಕ್ಕೆ ಕಿಟಕಿಗಳಿಲ್ಲದ್ದರಿಂದ ನೂರಾರು ಜನರ ಶ್ವಾಸದಿಂದಲೂ, ದೀವಿಗೆಯ ಹೊಗೆಯಿಂದಲೂ, ಒಳಗಿನ ಗಾಳಿಯು ಕೆಲಹೊತ್ತಿನಲ್ಲಿ ವಿಷಮಯವಾಯಿತು. ಬಾಯಾರಿಕೆಯಿಂದಲೂ ಒಳಗಿನ ಸೆಕೆಯ ತಾಪದಿಂದಲೂ, ಉಸುರು ಕಟ್ಟಿ ಮರಣ ಸಂಕಟವನ್ನು ಸಹಿಸಲಾರದೆ, ಮೌರ್ಯರೆಲ್ಲರೂ ಎಚ್ಚರಗೆಟ್ಟು ಒಬ್ಬರ ಮೇಲೊಬ್ಬರು ಬಿದ್ದು ಇವನು ಅಣ್ಣ, ಈತನು ತಮ್ಮ ಎಂಬುವದನ್ನು ಮರೆತು ಒಬ್ಬರನ್ನೊಬ್ಬರು ಕಚ್ಚಿ, ಮೈಮೇಲಿನ ಬಟ್ಟೆಗಳನ್ನು ಹರಿದುಕೊಂಡು ಗಾಳಿಗಾಗಿ ಹೆಣಗಾಡಿ ಹೊರಳಾಡಿ ಒದ್ದಾಡಿ, ದಿಕ್ಕಿಗೊಬ್ಬರಂತೆ ಬಿದ್ದು ಸತ್ತುಹೋದರು! ಆದರೆ ಈ ದಾರುಣವಾದ ಪ್ರಸಂಗದೊಳಗಿಂದ ಮೌರ್ಯವಂಶದ ಪುಣ್ಯದಿಂದ ಚಂದ್ರಗುಪ್ತನೊಬ್ಬನೇ

ಮಾತ್ರ ಕುಟುಕು ಜೀವ ಹಿಡಿದುಕೊಂಡು ಬಾಗಿಲ ಕೆಳಭಾಗದ ಹತ್ತಿರ ತಲೆಯನ್ನಿಟ್ಟುಕೊಂಡು ಬಿದ್ದಿದ್ದನು. ಎರಡು ಮೂರು ದಿನಗಳಾದ ನಂತರ ರಾಜಭಟರು ಬಾಗಿಲು ತೆರೆದು ನೋಡುವಷ್ಟರಲ್ಲಿ ಅವರಿಗೀ ಸ್ಥಿತಿಯು ಕಂಡುಬಂದಿತು. ಕಾವಲಿಗರು ಚಂದ್ರಗುಪ್ತನಿಗೆ ನೀರು ಹಾಕಿ ಉಪಚರಿಸಿದರು. ಕೊಂಚ ಮೈಮೇಲೆ ಅರಿವು ಬಂದೊಡನೆ ಬಂಧುಗಳೆಲ್ಲ ಸತ್ತುಹೋಗಿರುವದಕ್ಕಾಗಿ ಬಹು ವ್ಯಸನ ಪಟ್ಟನು; ಆದರೆ ಮಾಡುವದೇನು? ಹೊತ್ತಿಯಲ್ಲಿರುವ ಸಿಟ್ಟನ್ನು ತೋರಿಸುವ ಬಲವು ರತ್ತಿಯಲ್ಲಿಲ್ಲದೆ, ಚಂದ್ರಗುಪ್ತನಿಗೆ ನಂದರ ಸೆರೆಮನೆಯಲ್ಲಿರಬೇಕಾಯಿತು. ಹೀಗೆ ಚಂದ್ರಗುಪ್ತನು ಅತಿ ಕಷ್ಟದಿಂದ ಕಾಲಕಳೆಯುತ್ತಿರಲು ಅತನ ದೈವ ತೆರೆಯುವಂತಹದೊಂದು ಪ್ರಸಂಗ ಒದಗಿತು. ಪರ್ವತ ರಾಜ್ಯದವರು ಬಂದು ವಿಚಿತ್ರವಾದ ಶಿಲ್ಪಯಂತ್ರದಿಂದ ತಿರುಗುವ ಸಿಂಹವನ್ನು ರಚಿಸಿ ಮಗಧರಾಜ್ಯಕ್ಕೆ ತಂದರು. ಈ ಸಿಂಹವು ಲೋಹದಿಂದ ಮಾಡಲ್ಪಟ್ಟಿದ್ದರೂ ಅದು ಯಾರಿಗೂ ತಿಳಿಯದೆ ಸರ್ವರಿಗೆ ಆತ್ಯಾಶ್ಚರ್ಯವನ್ನುಂಟು ಮಾಡುವಂತಿದ್ದುದರಿಂದ ಅದರ ಗುಟ್ಟನ್ನರಿಯುವದೊಂದು ಮೇಲಾದ ಕೆಲಸವಾಗಿತ್ತು. ಸಿಂಹವು ಲೋಹದಿಂದ ಮಾಡಲ್ಪಟ್ಟಿದ್ದು, ಲೋಹಚುಂಬಕದ ಆಕರ್ಷಣೆಯಿಂದ ಜೀವಂತ ಸಿಂಹದಂತೆ ತಿರಗುವದೆಂಬುವ ಮರ್ಮವನ್ನು ಚಂದ್ರಗುಪ್ತನು ತನ್ನ ಬುದ್ಧಿಪ್ರಭೆಯಿಂದ ಕಂಡುಹಿಡಿದು ಹೊರಗೆಡಹಿದನು; ಈ ಮೇರೆಗೆ ಯಂತ್ರಗಾರರ ಗುಟ್ಟು ಹೊರಬೀಳಿಸಿದ್ದನ್ನು ಕಂಡು, ಚಂದ್ರಗುಪ್ತನ ಬುದ್ಧಿಚಾತುರ್ಯಕ್ಕಾಗಿ ಎಲ್ಲರೂ ಹೊಗಳಿ, ಅವನ ಬಿಡುಗಡೆ ಮಾಡಿ ಅಮಾತ್ಯ ರಾಕ್ಷಸನ ಸಲಹೆಯಂತೆ ಅವನನ್ನು ಸತ್ರಾಧಿಕಾರಿಯನ್ನಾಗಿ ನಿಯಮಿಸಿದರು. ದುರ್ದೈವಕ್ಕೀಡಾದ ಚಂದ್ರಗುಪ್ತನು ಮುಂಗಾಣದೆ ಅಲ್ಲಿ ತನ್ನ ದೈವ ಅರಳುವ ದಾರಿಯನ್ನೆದುರು ನೋಡುತ್ತ ಬಂದವರಿಗೆ ಪ್ರೀತಿಯಿಂದ ಆದರಾತಿಥ್ಯ ಮಾಡುತ್ತ ಇದ್ದುಕೊಂಡನು.

ಗ್ರೀಕರ ದಾಳಿ:- ಉತ್ತರ ಹಿಂದೂದೇಶದೊಳಗೆ ಈ ಸಂಗತಿಗಳು ನಡೆದಿರಲು, ಗ್ರೀಸ ದೇಶದೊಳಗೆ ಮ್ಯಾಸಿಡನ್ನಪ್ರಾಂತದ ಭೀಮಪರಾಕ್ರಮಿ ಅರಸನಾದ ಅಲೆಕ್ಸಾಂಡರನು ಮೆಲ್ಲಮೆಲ್ಲಗೆ ಮೆರೆಯು

ಹತ್ತಿದನು. ಈತನು ತನ್ನ ರಾಜ್ಯದೊಳಗೆ ಸರ್ವೋತ್ಕೃಷ್ಟವಾದ ರಾಜ್ಯ ದಾಡಳಿತದ ತಳಹದಿಯನ್ನು ಹಾಕಿ ಅರಸೆಂದರೆ ಈತನೆಂಬುವ ಮಟ್ಟಿಗೆ ವಾಶ್ಚಾತ್ಯರಾದ ಗ್ರೀಕರಿಗೆ ಮಾನ್ಯನಾದನು. ತನ್ನ ಆಳ್ವಿಕೆಯಲ್ಲಿ ಒಂದೇ ಭಾಷೆ, ಒಂದೇ ಸಂಸ್ಕೃತಿಯನ್ನು ನಡೆಯಿಸಿ, ಲಲಿತಕಲೆಗಳನ್ನು ಪ್ರೋ ತ್ಸಾಹಿಸಿದನು. ಮೇಲಾಗಿ ಅನೇಕ ಬೇರೆ ಜನಾಂಗಗಳನ್ನು ಜಯಿಸಿ, ವಿಶ್ವ-ಸಾಮ್ರಾಜ್ಯ ಹಾಗೂ ವಿಶ್ವ-ಸಂಸ್ಕೃತಿಯನ್ನು ಸ್ಥಾಪಿಸಿದನು! ಈತನು ಏಸಿಯಮೈನರ, ಸಿರಿಯಾ, ಇಜಿಪ್ತ ಹಾಗೂ ಇರಾಣ ಇವೇ ಮುಂತಾದ ಬಲಶಾಲಿಯಾದ ರಾಷ್ಟ್ರಗಳನ್ನು ಜಯಿಸುತ್ತ ಹಿಂದೂ ದೇಶದ ಕಡೆಗೆ ಮುಖ ತಿರುವಿದನು. ತನ್ನ ಹಿಂದಿನವರಾದ ಹೆರ್ಯಾ ಕ್ಲೀಜ, ಸೆಮಿರಾಮಿನ್ ಅವರಂತಹ ವೀರಾಧಿವೀರರಿಂದಾದ ಪರಾಕ್ರ ಮವನ್ನು ಮರೆಯಿಸಿ, ತತ್ಕಾಲಕ್ಕೆ ಗೊತ್ತಿರುವಷ್ಟು ಜಗತ್ತಿನ ಭಾಗವ ನ್ನೆಲ್ಲ ಗೆದ್ದು "ಜಗಜೆಟ್ಟಿ" ಎಂದು ಹೆಸರುಪಡೆಯಬೇಕೆಂಬ ಮಹೋ ನ್ನತ ಅಕಾಂಕ್ಷೆಯು ಅಲೆಕ್ಸಾಂಡರನಲ್ಲಿ ಎಂದಿನಿಂದಲೋ ಕುದಿಯು ತ್ತಿದ್ದು ಅದಕ್ಕೀಗ ತಕ್ಕ ಕಾಲವು ದೊರೆತಂತಾಯಿತು. ಕ್ರಿ. ಶ. ಪೂ. ೩೨೭ನೆಯ ವರ್ಷದ ವಸಂತಮಾಸದ ಕೊನೆಗಾಲವು. ಅಲೆಕ್ಸಾಂಡರನು ತನ್ನ ೫೦ ಸಾವಿರ ಸೈನ್ಯದೊಂದಿಗೆ ಹಿಂದುಕುಶ ಪರ್ವತಾವಳಿಯ ದರಿ ಕಂದರಗಳೊಳಗಿಂದ ಸಾಗಿದನು. ಅಪಾರವಾದ ಸೈನಿಕರೊಡನೆ ಬಿರು ಗಾಳಿಯಂತೆ, ಸಾಗಿ ಬರುತ್ತಿರುವ ಈತನಿಗೆ ದಾರಿಯಲ್ಲಿ ಹಲವು ಚಿಕ್ಕ ಚಿಕ್ಕ ರಾಜರುಗಳು ತಮ್ಮಷ್ಟಕ್ಕೆ ತಾವೇ ಶರಣು ಬಂದರು. ಹಸ್ತಿ ಎಂಬ ನಾಯಕನೊಬ್ಬನು ತನ್ನ ಕೋಟೆಯನ್ನು ಕಾಯ್ದುಕೊಳ್ಳಲಿ ಕ್ಕೆಂದು ಎಷ್ಟೆಬಿಡದೆ ೩೦ ದಿನಗಳ ವರೆಗೆ ಹೋರಾಡಿದನು; ಆದರೆ ಕೊನೆಗೆ ಕೈಸಾಗದೆ ಮಣಿಯಬೇಕಾಯಿತು. ಸೈನ್ಯದ ಒಂದು ದಳ ವನ್ನು ಅಲೆಕ್ಸಾಂಡರನು ತನ್ನ ಆಧೀಪತ್ಯದಲ್ಲಿಟ್ಟುಕೊಂಡು ಉಳಿದವು ಗಳನ್ನು ಬೇರೆ ಬೇರೆ ದಳಪತಿಗಳಿಗೆ ಒಪ್ಪಿಸಿದ್ದನು. ಈ ಗುಡ್ಡಗಾಡು ದೇಶಗಳಲ್ಲಿ ಅಲ್ಲಲ್ಲಿ ಅನೇಕ ಕಾಡುಜಾತಿಯ ಜನರು ವಾಸಿಸುತ್ತಿದ್ದುದ ರಿಂದ ಅವರನ್ನೆಲ್ಲ ಗೆದ್ದು, ತನ್ನ ಸೈನ್ಯವನ್ನು ಕಾಯ್ದುಕೊಳ್ಳುವದೊಂದು ವಿಶೇಷ ಕಾರ್ಯವಾಗಿತ್ತು. ಮೈಬಿರಿದು ಬಿಚ್ಚುವಂಥ ಬೆಳಗಿನ ಚಳಿ

ಯಿಂದಲೂ, ಮೈತೊಗಲು ಸುಟ್ಟು ಸುಲಿಯುವಂಥ ಕಾಡುಬಿಸಿಲಿನ ತಾಪ ದಿಂದಲೂ, ಹಣ್ಣುಹಣ್ಣಾಗಿ ಹೋದ ಸೈನಿಕರಿಗೆ ಕಾಡುಜನರೊಡನೆ ಕಾದುವದು ಆಗದನೀಗದ ಕೆಲಸವಾಗಿತ್ತು; ಆದರೂ ಅಲೆಕ್ಸಾಂಡರನು ಅನಾಮಾನ್ಯವಾದ ತೇಜಸ್ವಿ ಪುರುಷನಿದ್ದುದರಿಂದ ಆಗಾಗ್ಗೆ ತಲೆಎತ್ತುವ ಎಡರುಗಳಿಗೆ ಎದೆಗುಂದದೆ, ಕೆಚ್ಚೆದೆಯಿಂದ ಮುನ್ನಡೆದನು. ಈ ಗುಡ್ಡಗಾಡು ಪ್ರದೇಶದೊಳಗಿನ ಬಂದು ಊರೊಳಗೆ ಅಲೆಕ್ಸಾಂಡರನ ಹೆಗಲಿಗೆ ಕಾಡುಜನರಿಂದ ಬಂದು ಬಾಣವು ತಗಲಿ ಗಾಯವಾಯಿತು. ತಮ್ಮ ಒಡೆಯನನ್ನು ಗಾಯಗೊಳಿಸಿದಕ್ಕಾಗಿ ಅಲೆಕ್ಸಾಂಡರನ ದಂಡಿನೊಳಗಿನ ಸೀಪಾಯಿಗಳು ರೇಗಿ ಆ ಊರಲ್ಲಿ ಸೆರೆಸಿಡಿದ ಸೆರೆಯಾಳುಗಳನ್ನೆಲ್ಲ ಒತ್ತಡವೆಯೇ ಕೊಲೆಮಾಡಿ, ಊರನ್ನು ಹಾಳುಗೆಡವಿದರು; ಹೀಗೆ ಗುಡ್ಡಗಾಡೊಳಗಿನ ಪಾಳೆಯಗಾರರನ್ನು ಮುರಿಬಡಿದು ಅವರನ್ನು ಗೆಲಿಯುತ್ತಲೂ, ಸಾಧ್ಯವಿದ್ದರೆ ಅವರಿಂದ ಸಹಾಯ ಪಡೆಯುತ್ತಲೂ, ಕಾಡಿನ ಪಯಣದಿಂದ ಬೇಸತ್ತ ದಂಡಿನವರಿಗೆ ಆಗಾಗ್ಗೆ ವಿಶ್ರಾಂತಿ ಕೊಡುತ್ತಲೂ, ಕಾಡುಜನರ ಆಟನೋಟಗಳನ್ನು ನೋಡಿ ನಲಿಯುತ್ತಲೂ ಅಲೆಕ್ಸಾಂಡರನು ಓಹಿಂದಕ್ಕೆ ಬಂದು ತಲ್ಪಿದನು. ಹೊಸದಾಗಿ ತಕ್ಷಶಿಲೆಯ ಪಟ್ಟಕ್ಕೆ ಕುಳಿತಂಧ ಆಂಭಿರಾಜನು ಇಲ್ಲಿಗೆನೇ ಅಲೆಕ್ಸಾಂಡರನ ಕಡೆಗೆ ತನ್ನ ರಾಯಭಾರಿಯನ್ನು ಕಳುಹಿ, ಅಲೆಕ್ಸಾಂಡರನ ಮಾಂಡಲೀಕನಾಗಲೊಪ್ಪಿ ಅತನಿಗೆ ಕಾಣಿಕೆಯೆಂದು ವೆಗ್ಗಳ ದ್ರವ್ಯವನ್ನೂ ೩೦೦ ಕುದುರೆ, ೩೦ ಆನೆ, ೩ ಸಾವಿರ ಎತ್ತು, ೧೦ ಸಾವಿರ ಕುರಿಗಳನ್ನೂ ಒಪ್ಪಿಸಿದನು. ಈ ಸಮಯಕ್ಕೆ ತಕ್ಷಶಿಲೆಯ ಅರಸನಿಗೂ ಪೋರಸರಾಜನಿಗೂ ಹಗೆತನವಿದ್ದುದರಿಂದ ತನಗೆ ಅಲೆಕ್ಸಾಂಡರನಿಂದ ನೆರವು ದೊರೆಯಬೇಕೆಂಬ ಒಳಉದ್ದೇಶದಿಂದ ಹೀಗೆ ಮಾಡಿದನಂತೆ! ಈ ಕಾಲಕ್ಕೆ ತಕ್ಷಶಿಲೆಯು ದೊಡ್ಡದೊಂದು ವಿದ್ಯಾಪೀಠವೆಂದು ಖ್ಯಾತಿಗೊಂಡಿದ್ದು, ದೂರದೂರಿನ ದೇಶಗಳಿಂದ ಇಲ್ಲಿಗೆ ವಿದ್ಯಾರ್ಥಿಗಳೂ, ವಿದ್ವಾಂಸರೂ ಅಧ್ಯಯನಕ್ಕಾಗಿ ಬರುತ್ತಿದ್ದರು. ಅಲೆಕ್ಸಾಂಡರನು ತಕ್ಷಶಿಲೆಯ ವಿದ್ಯಾಪೀಠದೊಳಗಿರುವ ವಿದ್ವಾಂಸರೊಡನೆ ಮಾತುಕತೆಯಾಡಿದನಂತೆ! ತಕ್ಷಶಿಲೆಯ ಅರಸನೊಡನೆ ಈ ಬಗೆಯಾಗಿ

ಮೊದಲೇ ಸಖ್ಯವನ್ನು ಹೊಂದಿದ ಅಲೆಕ್ಸಾಂಡರನು ಕೆಲದಿನ ತಕ್ಷಶಿಲೆಯಲ್ಲಿಯೇ ತಾತ್ಪರ್ಯವನ್ನು ಊರಿದನು. ಪೋರಸನಿಗೆ ಶರಣುಬರಲಿಕ್ಕೆ ಕಾಗದ ಬರೆದನು; ಆದರೆ ಪೋರಸನು ವೀರನಿದ್ದುದರಿಂದ ಈ ಬೆದರಿಕೆಗೆ ಬೆಚ್ಚಿಬೀಳದೆ, ಸೈನ್ಯಸಹಿತವಾಗಿಯೇ ಭೇಟ್ಟಿಯಾಗುವೆನೆಂದು ಹೇಳಿಕಳಿಸಿದನು. ದಂಡುಗಟ್ಟಿಕೊಂಡು ಅಲೆಕ್ಸಾಂಡರನು ಪೋರಸನ ಮೇಲೆ ಸಾಗಿ ನಡೆದು ಝೀಲಮಕ್ಕೆ ಬಂದನು. ಝೀಲಮನದಿಗೆ ಪೂರಾ ನೆರೆಬಂದು ಹೊಳೆಯನ್ನು ದಾಟಲಿಕ್ಕೆ ಬರುವಂತಿರಲಿಲ್ಲ; ಎದುರಿಗೆ ಅಚೆಯ ದಂಡೆಯಲ್ಲಿ ಪೋರಸನು ತನ್ನ ಸೇನೆಯೊಂದಿಗೆ ಬಿಡಾರ ಹೂಡಿದ್ದನು; ಅಲೆಕ್ಸಾಂಡರನಿಗೆ ದೇಶ ಪರಿಸ್ಥಿತಿಯ ಜ್ಞಾನವಿಲ್ಲದ್ದರಿಂದ, ಅತನು ಇನ್ನೇನು ಮಾಡಬೇಕೆಂದು ಮುಂದುಗಾಣದೆ ನದಿಯು ಇಳಿಯುವ ವರೆಗೆ ಅಲ್ಲಿಯೇ ಇರುವಂತೆ ನಟಿಸಿದನು. ಕೆಲದಿನಗಳಾದರೂ ಯುದ್ಧವು ಮುಂದಕ್ಕೆ ಬಿದ್ದ ಸಂಗತಿಯನ್ನರಿತು ಪೋರಸನ ದಂಡಿನವರು ಏನೇನಾದರೊಳಗೆ ದಿನಗಳೆಯ ತೊಡಗಿದರು; ಇತ್ತ ಅಲೆಕ್ಸಾಂದರನು ಸುಮ್ಮನೆ ಕೈಮುಚ್ಚಿಕೊಂಡಿರದೆ, ಸಮೀಪದಲ್ಲಿಯೇ ಎಲ್ಲಿಯಾದರೂ ಹೊಳೆಯನ್ನು ದಾಟಲಿಕ್ಕೆ ಬರುವ ದೇನೋ ಎಂದು ಸೂಕ್ಷ್ಮವಾಗಿ ಶೋಧನೆಯನ್ನು ನಡೆಸಿದ್ದನು. ಕೊನೆಯಲ್ಲಿ ಅತನ ಅದೃಷ್ಟದಿಂದ ಅವನಿಳಿದುಕೊಂಡಿರುವ ಸ್ಥಳದಿಂದ ೧೬ ಮೈಲುಗಳ ಮೇಲೆ ಒಂದು ನದಿಯು ಒತ್ತು ಇರುವದೆಂದು ಗೊತ್ತು ಹಚ್ಚಿದೊಡನೆಯೇ ತನ್ನ ಸೇನಾಪತಿಯಾದ ಕ್ರೇಟೆರಾಸನಿಗೆ ಝೀಲಮದ ತಾತ್ಪರ್ಯವನ್ನು ಕಾಯಲಿಕ್ಕೆ ನಿಯಮಿಸಿ, ತಾನು ಸ್ವತಃ ಹನ್ನೊಂದು ಸಾವಿರ ಬಲ್ಲಾಳುಗಳನ್ನು ಕಟ್ಟಿಕೊಂಡು ರಾತ್ರೆಯಲ್ಲಿಯೇ ಯಾರಿಗೂ ತಿಳಿಯದಂತೆ ಅಲ್ಲಿಗೆ ಸಾರಿ ನಾವಿನೊಳಗಿಂದ ನದಿಯನ್ನು ದಾಟದಡ್ಡಕ್ಕೆ ಮುಟ್ಟಿದನು; ಇಷ್ಟಕ್ಕೆ ಮುಗಿಯದೆ ತಾನು ಮತ್ತೊಂದು ಆಳವಾದ ನದಿಯ ಪ್ರವಾಹವನ್ನು ಕಡೆಹಾಯಲಿಕ್ಕೆ ಬೇಕೆಂಬುವ ಸುದ್ದಿಯನ್ನು ಕೇಳಿದನು. ಇದಕ್ಕೆ ಎದೆಗೆಡದೆ ಅಲೆಕ್ಸಾಂಡರನು ಸ್ವತಃ ಅತ್ತಿತ್ತ ಹೊಸ ದಾರಿಯನ್ನು ಹುಡುಕಲಿಕ್ಕೆ ಹೆಣಗಾಡಿ ಎದೆಮಟ ನೀರಿನೊಳಗಿಂದ ಹಾಯ್ದು ಆಚೆಗೆ ಹೋಗುವದೊಂದು ದಾರಿಯನ್ನು ಕಂಡು

ಹಿಡಿದು ತನ್ನ ದಂಡಿನವರಿಗೆಲ್ಲ ನೀರಿನೊಳಗಿಂದ ಹಾಯಲಿಕ್ಕೆ ಅಪ್ಪಣೆ ಕೊಟ್ಟನು. ನೀರಿನೊಳಗಿಂದ ಹಾಯ್ದುದಕ್ಕಾಗಿ ದಂಡಿನವರ ಬಟ್ಟೆಬರೆಗಳೆಲ್ಲ ತೋಯ್ದುಹೋದ್ದರಿಂದ ಪೋರಸನ ದಂಡಿನವರ ಮೇಲೆ ದಾಳಿಮಾಡುವದಕ್ಕೆ ಒಂದೆರಡು ದಿನ ತಡವಾಯಿತು. ಇಷ್ಟಾಗುವದರಲ್ಲಿ ಪೋರಸನಿಗೆ ಅಲೆಕ್ಸಾಂಡರನ ಒಳಕಾಯಕವೆಲ್ಲ ತಿಳಿದುದರಿಂದ ಅವನು ಆಲಸ್ಯ ಮಾಡದೆ ತನ್ನ ಮಗನನ್ನು ಎರಡು ಸಾವಿರ ಕುದುರೆ ಸವಾರರೊಂದಿಗೆ ಅಲೆಕ್ಸಾಂಡರನನ್ನು ಅಟ್ಟಿಸಲು ಕಳುಹಿದನು. ಆದರೆ ಅಲೆಕ್ಸಾಂಡರನ ಮುಂದೆ ಅತನ ಆಟ ನಡೆಯದೆ ಹತ್ತಿರವಿದ್ದ ಕುದುರೆ ಹಾಗೂ ರಥಗಳನ್ನೆಲ್ಲ ಕಳಿದುಕೊಂಡು ಜೋಪೋರೆಯಿಂದ ಹಿಂತಿರುಗ ಬೇಕಾಯಿತು. ಮಗನು ಸೋತು ಬಂದುದನ್ನು ಕಂಡು ಪೋರಸನು ತಾನೇ ತನ್ನ ನಿಶ್ಚಿತದ ದಂಡಿನವರೊಡನೆ ಚಿಂತಕಟ್ಟಿದನು. ಪೋರಸನ ದಂಡಿನಲ್ಲಿ ೩೦ ಸಾವಿರ ಕಾಲಾಳುಗಳೂ, ೪ ಸಾವಿರ ಕುದುರೆಸವಾರರೂ, ೩ ಸಾರು ರಥಗಳೂ ಇಷ್ಟಿದ್ದರೂ, ವ್ಯಾಸಿಪೋನಿಯದ ಚಪಲರಾದ ವೀರಾಳುಗಳ ಮುಂದೆ ನಿಂತು ಕೈಗೊಡುವದು ಸಾಹಸದ ಕಾರ್ಯವೇ ಆಗಿತ್ತು. ಅಲೆಕ್ಸಾಂಡರನು ಮೊದಲು ಎದುರಿನಿಂದ ಹಗೆಗಳ ಮೇಲೆ ಸಾಗಿಹೋಗದೆ, ಕುದುರೆಯ ಸವಾರರ ಮೇಲೆ ಬಿದ್ದನು. ಹೀಗೆ ಸುತ್ತೂಕಡೆಯಿಂದ ಮೊದಲು ಮಾಡಿಟ್ಟ ಹಂಚಿಕೆಯಂತೆ, ಅಲೆಕ್ಸಾಂಡರನ ದಂಡಿನವರು ಓರಣೆಯಿಂದ ಶತ್ರುಗಳನ್ನು ಮುರಿಬಡಿಯ ಆರಂಭಿಸಿದರು. ಗ್ರೀಕರ ಮುಂದೆ ನಿಲ್ಲಲಿಕ್ಕಾಗದೆ ಪೋರಸನ ಸೈನ್ಯದವರು ದಿಕ್ಕುಪಾಲಾಗಿ ಓಡಹತ್ತಿದರು. ಪೋರಸನ ದಂಡಿನಲ್ಲಿ ೩೦೦ ಜನರು ಮಡಿದರು; ೯೦೦ ಜನರು ಸೆರೆಯಾಳಾದರು. ಪೋರಸನು ಜೀವದ ಹಂಗುತೊರೆದು ಕಾದುತ್ತಿರಲು ಅತನ ಮೈಗೆ ಬಂಭತ್ತು ಗಾಯಗಳು ತಗಲಿ ಅನೆಯಿಂದ ಬಿದ್ದು ಮೂರ್ಛಿತನಾಗಿರಲು ಶತ್ರುಗಳ ಕೈಗೆ ಸಿಕ್ಕನು. ಅವನನ್ನು ಹೆಡಮುರಿಕೆ ಕಟ್ಟಿಕೊಂಡು ಅಲೆಕ್ಸಾಂಡರನ ಸೈನಿಕರು ತಮ್ಮ ಧೊರೆಯ ಮುಂದೆ ತರಲು ಪೋರಸನನ್ನು ಕುರಿತು "ಈಗ ನಿನ್ನನ್ನು ಹೇಗೆ ಕಾಣಬೇಕು?" ಎಂದು ಕೇಳಲು, ಅದಕ್ಕೆ ಪೋರಸನು ಧೈರ್ಯದಿಂದಲೂ ಸ್ವಾಭಿಮಾನದಿಂದಲೂ "ಧೊರೆಯಂತೆಯೇ

ಕಾಣಬೇಕೆಂದು'' ಉತ್ತರವಿತ್ತುದಕ್ಕೆ ಅವನು ಬಹು ಸಂತುಷ್ಟನಾಗಿ ಮೆಚ್ಚಿ ಅವನನ್ನು ಮಿತ್ರನನ್ನಾಗಿ ಮಾಡಿಕೊಂಡನು. ಅಲೆಕ್ಸಾಂಡರನು ಗುಣವುಳ್ಳವನೂ, ಗುಣವನ್ನರಿತವನೂ, ಗುಣಪಕ್ಷಪಾತಿಯೂ ಆಗಿದ್ದರಿಂದ, ಪೋರಸನಂಥವನನ್ನು ಮಿತ್ರನನ್ನಾಗಿ ಮಾಡಿಕೊಳ್ಳುವದೇ ತನ್ನ ಸಾಮ್ರಾಜ್ಯಕ್ಕೆ ಹಿತವೆಂದರಿತು, ತಿರಿಗಿ ಪೋರಸನಿಗೆ ರಾಜ್ಯವನ್ನೊಪ್ಪಿಸಿ ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡನು. ಈ ಬಗೆಯಾಗಿ ಪೋರಸನೊಡನೆ ಸ್ಥಿರವಾದ ಸ್ನೇಹವನ್ನು ಬೆಳಿಸಿ, ತನ್ನ ಸಾಮ್ರಾಜ್ಯದ ಚಕ್ರಾಧಿಪತ್ಯದ ಹೆಗ್ಗುರುತನ್ನಿಟ್ಟನು. ಈ ಜಯದ ಸ್ಮರಣೆಗಾಗಿ ಅಲೆಕ್ಸಾಂಡರನು ಈಗಿರುವ ಝೀಲಂ ಪಟ್ಟಣವನ್ನು ಕಟ್ಟಿಸಿದನು. ಇದೇ ಸಮಯಕ್ಕೆ ಅಲೆಕ್ಸಾಂಡರನು ತನ್ನ ನಾಣ್ಯದಮೇಲೆ ಒಂದು ಬದಿಗೆ ಮ್ಯಾಸಿಡನ್ನ ಪ್ರಾಂತದ ಕುದುರೆಸವಾರನ ಚಿತ್ರವನ್ನೂ, ಮತ್ತೊಂದು ಬದಿಗೆ ಇರಾಣಿಯರ ಕಿರೀಟವನ್ನು ಹಾಕಿಕೊಂಡು, ಕೈಯಲ್ಲಿ ವಜ್ರವನ್ನು ಹಿಡಿದಿರುವ ತನ್ನದೇ ಒಂದು ನಿಂತಿರುವ ಚಿತ್ರವನ್ನಿ ಮುದ್ರೆ ಹಾಕಿಸಿರುವನು.

ವ್ಯಾಸನದಿಯ ವರೆಗೆ ಪಯಣ:-ವಾಡಿಕೆಯಂತೆ ಅಲೆಕ್ಸಾಂಡರನು ಕಾಳಗದೊಳಗೆ ಮಡಿದಂತಹ ತನ್ನ ವೀರಾಳುಗಳ ಸ್ಮರಣಾರ್ಥವಾಗಿ ಅಂತ್ಯವಿಧಿಯನ್ನೂ ಬಲಿಯನ್ನೂ ಕೊಟ್ಟು ಆಟಸ್ಪೋಟಗಳನ್ನು ನಡೆಯಿಸಿ, ಹಿಂದೆ ಗೆದ್ದ ಪ್ರಾಂತಗಳಮೇಲೆ ಕಣ್ಣಿಡಲಿಕ್ಕೆಂದು ಕ್ರೆತೀರಾಸನನ್ನು ಕೆಲವು ದಂಡಿನೊಡನೆ ಇಟ್ಟು, ತಾನೂ ಸ್ವತಃ ಮುಂದೆ ಪಯಣ ಬೆಳಿಸಿದನು. ಮಾರ್ಗದೊಳಗೆ ದಾಳಿ ನಡಿಸುತ್ತ ನಾಗಿದಂತೆ ಚಿಕ್ಕ ದೊಡ್ಡ ರಾಜರುಗಳು ಅಲೆಕ್ಸಾಂಡರನಿಗೆ ಎದುರಾಳಿಯಾಗದೆ ಮೆತ್ತಗೆ ಶರಣು ಬರಹತ್ತಿದ್ದರಿಂದ ಅವನಿಗೆ ದಾರಿಯಲ್ಲಿ ಯುದ್ಧವಾಡುವ ಪ್ರಸಂಗವು ಒದಗಲಿಲ್ಲ. ಚಿನಾಬನದಿಯನ್ನು ಇಳಿದು ಮುಂದೆ ರವಿ ನದಿಯನ್ನು ದಾಟಿ ಮುಂದೆ ನಡೆಯಲು 'ಸಂಗಲ' ಎಂಬೂರಿನ ಮೇಲೆ ದೌಡುಯಿಡಲು, ಅಲ್ಲಿಯ ಜನರು ಅಲೆಕ್ಸಾಂಡರನಿಗೆ ತಮ್ಮ ಶೌರ್ಯವನ್ನು ಚನ್ನಾಗಿ ತೋರಿಸಿದರು. ಈ ದಾಳಿಯಲ್ಲಿ ಅಲೆಕ್ಸಾಂಡರನು ಸೋಲುವ ಸ್ಥಿತಿಯಲ್ಲಿರಲು ಪೋರಸನಿಂದ ನೆರವಿಗಾಗಿ ದಂಡು

ಬರಲು ಆ ಊರನ್ನು ಮುತ್ತಿ ವಶವಾಡಿಕೊಂಡನು. ಇಲ್ಲಿಂದ ವ್ಯಾಸ ನದಿಯನ್ನು ದಾಟಿ ಅದರಾಚೆಯ ಪ್ರದೇಶವನ್ನು ಗೆಲಿಯಬೇಕೆಂಬ ಉತ್ಸಾಹವು ಅಲೆಕ್ಸಾಂಡರನಲ್ಲಿ ಉಕ್ಕೇರಲು ಪ್ರಾರಂಭವಾಯಿತು. ಕೈಹಾಕಿದಲ್ಲಿ ಭಗವಂತನು ತನಗೆ ಜಯಕೊಡುತ್ತಿರುವನೆಂಬ ಭಾವನೆಯಿಂದ ಪ್ರೇರಿತನಾದ್ದರಿಂದ ಅವನಿಗೆ ಹಿಂದಿರುಗಬೇಕೆನ್ನುವ ಕಲ್ಪನೆಯು ಸರಿದೋರದಂತಾಯಿತು; ಇತ್ತ ತನ್ನ ದಂಡಿನವರಲ್ಲಂತೂ ಮುಂದೆ ನಾಗುವ ವಿಷಯದಲ್ಲಿ ನಾನಕಷ್ಟು ಹುರುವು ಕಂಡುಬಾರದ್ದರಿಂದ, ತನ್ನ ದಂಡಾಳುಗಳನ್ನೆಲ್ಲ ಒಕ್ಕಡೆಯಲ್ಲಿ ಕಲೆಯಿಸಿ, ಇದುವರೆಗೆ ತಾವು ಮಾಡಿರುವ ಪರಾಕ್ರಮವನ್ನೂ, ಮಹಾಮಹಾರಾಜರನ್ನು ಗೆದ್ದಿರುವದನ್ನೂ ಮತ್ತು ಹೀಗೆ ಮುಂದೆ ನಾಗಿದರೆ ತಮಗೆ ಏಸಿಯ ಖಂಡದೊಳಗಿರುವ ಅಪಾರವಾದ ಸಂಪತ್ತಿಯು ಕೈಸೇರುವದಲ್ಲದೆ ಇನ್ನೂ ಹೆಚ್ಚು ವಿಸ್ತಾರವಾದ ರಾಜ್ಯವು ತಮ್ಮ ನಾಮ್ರಾಜ್ಯಕ್ಕೆ ಲಭಿಸುವದೆಂಬುದನ್ನೂ ಎಲ್ಲರ ಮನಸಿಗೆ ಹಿಡಿಯುವಂತೆ ಬಣ್ಣಿಸಿ ಅವರನ್ನು ಹುರಿದುಂಬಿಸಲಿಕ್ಕೆ ಪ್ರಯತ್ನಿಸಿದನು; ಆದರೆ ಎಲ್ಲವೂ ಬೋರ್ಗರ್ಲ್ಲ ಮೇಲೆ ಮಳೆ ಸುರಿದಂತಾಯಿತು! ಕಡೆಗೆ ಅಲೆಕ್ಸಾಂಡರನಿಗೆ ವಿರೋಧಿಸಿ ಮಾತಾಡಲಿಕ್ಕೆಂದು ಅವನ ಸೇನಾಪತಿಯಾದ ಕೋಯಿನಾಸನು ಎದ್ದು ನಿಂತು "ನಮ್ಮ ದಂಡಿನ ಸ್ಥಿತಿಯು ಈಗ ಬಹು ಹಣ್ಣಾಗಿದೆ; ದೇಶಾಂತರಕ್ಕೆ ಬಂದು ಬಹು ದಿನಗಳಾದ್ದರಿಂದ ಎಲ್ಲರೂ ತಮ್ಮ ತಮ್ಮ ಮನೆ ಕಾಣಲಿಕ್ಕೆ ಹಾತೊರೆಯುತ್ತಿರುವದರಿಂದ ಮುಂದೆ ದಂಡೆತ್ತಿ ನಡೆಯುವದು ನಾಕೆಂ"ದು ಪ್ರತಿಸ್ಪರ್ಧಿಯಾಗಿ ಮಾತನಾಡಿದನಲ್ಲದೆ, ಬಂದು ಬಗೆಯಿಂದ ಗಲಭೆಯನ್ನೆಬ್ಬಿಸಿದನು. ಕೋಯಿನಾಸನ ಮಾತಿನಿಂದ ಅನೇಕರಿಗೆ ಊರುಮನೆ ಕಡೆಗಿನ ಹಳವಂಡವು ಹೆಚ್ಚಾಯಿತು. ತನ್ನ ಮಾತು ಯಾರಿಗೂ ಸರಿಕಾಣದ್ದರಿಂದ ಅಲೆಕ್ಸಾಂಡರನು ಮುಚ್ಚಿದ ತುಟಿ ಬಿಚ್ಚದೆ ತೆಪ್ಪಗೆ ತನ್ನ ಬಿಡಾರಕ್ಕೆ ಹೋಗಿ ಔದಾಸೀನ್ಯದಿಂದ ಮೂರು ದಿನಗಳವರೆಗೆ ತನ್ನ ಡೇರೆಯೊಳಗೆ ಹೊರ್ಬವನು ಹೊರಬೀಳಲಿಲ್ಲ. ಮನಸಿನ ಔದಾಸೀನ್ಯವು ಕೊಂಚ ಕಡಿಮೆಯಾದ ನಂತರ, ಇನ್ನು ಮುಂದೆ ನಾಗುವದು ಅಸಾಧ್ಯವೆಂದು ಯೋಚನೆಗೈದು

ತಾನು ದಂಡೆತ್ತಿ ಬಂದಿರುವುದರ ಕುರುಹೆಂದು ವ್ಯಾಸ (ಬಿಯಾಸ) ನದಿಯ ದಂಡೆಯ ಮೇಲೆ ೧೨ ಕಲ್ಲಿನ ಕಂಬಗಳನ್ನು ನಿಲ್ಲಿಸಿ, ಅದರ ಮೇಲೆ ತನ್ನ ದಾಳಿಯ ವೃತ್ತಾಂತವನ್ನೆಲ್ಲ ಬರೆಯಿಸಿದನು. ಇಷ್ಟಾದ ನಂತರ ಅಲೆಕ್ಸಾಂಡರನು ತಳ ಜಿಡಲಿಕ್ಕೆ ತನ್ನ ದಂಡಿನವರಿಗೆ ಆಜ್ಞೆ ಮಾಡಿದನು; ಮತ್ತು ತಾನು ನದಿಯೊಳಗಿಂದಲೇ ಸಮುದ್ರದ ವರೆಗೆ ಪ್ರಯಾಣ ಮಾಡಬೇಕೆಂಬ ಉದ್ದೇಶದಿಂದ ಕೆಲವು ದಂಡಿನವರೊಡನೆ ೨೦೦೦ ದೋಣಿಗಳನ್ನೊಂದು ಪಡೆಯನ್ನು ಕಟ್ಟಿಸಲಿಕ್ಕೆ ಹಚ್ಚಿದ, ಇತ್ತ ಕಡೆ, ತಾನು ಹಿಂದೂ ದೇಶದೊಳಗೆ ಗೆದ್ದ ಮಾಂಡಲೀಕ ರಾಜರ ಹಾಗೂ ಸರದಾರರದೊಂದು ಸಭೆಯನ್ನು ನೆರೆಯಿಸಿ, ಆ ಸಭೆಯಲ್ಲಿಯೇ ವ್ಯಾಸ ಮತ್ತು ಝೆಲಂ ನದಿಗಳ ನಡುವಿನ ಭಾಗದ ಪ್ರದೇಶದ ಮೇಲೆ ಪುರುಷೋತ್ತಮ (ಪೌರಸ) ನನ್ನೇ ಅರಸನನ್ನಾಗಿ ನಿಯಮಿಸಿದ್ದನ್ನು ಸಾರಿ ಹೇಳಿದನು. ಇದೇ ಕಾಲಕ್ಕೆ ತಕ್ಷಶಿಲೆಯರಾಜನಿಗೂ ಪುರುಷೋತ್ತಮನಿಗೂ ಸ್ನೇಹಬೆಳೆದು ಶರೀರಸಂಬಂಧವೂ ಕೂಡಿತು; ಹೀಗಾಗಿ ಅವರೆಲ್ಲರೂ ಸುಖದಿಂದ ರಾಜ್ಯವಾಳತೊಡಗಿದರು.

ಮುಲ್ಲರೊಡನೆ ಲಗ್ಗೆ:– ಸಿಂಧೂನದಿಯ ಮಾರ್ಗವಾಗಿ ಹೋಗುವಾಗ ದಾರಿಯಲ್ಲಿ ಹಲವು ಕೋಟೆಕೊತ್ತಳಗಳನ್ನು ಹಿಡಿದುಕೊಳ್ಳುತ್ತಲೂ, ಅವನ್ನು ವಶಪಡಿಸಿಕೊಳ್ಳುತ್ತಲೂ ಹೊರಟನು. ನಡುವೆ ಮುಲ್ಲ ಜನರದೊಂದು ಸಂಸ್ಥಾನವಿದ್ದಿತು. ಇದನ್ನು ಸ್ವಾಧೀನಪಡಿಸಿಕೊಳ್ಳುವಾಗ್ಗೆ ಅಲೆಕ್ಸಾಂಡರನು ತೇಕುತ್ತ ಬೀಳುತ್ತ ಬರುತ್ತಿರುವಂಥ ತನ್ನ ದಂಡಾಳಿನ ಕೈಯೊಳಗಿರುವ ನಿಶ್ಚಣಿಕೆಯನ್ನು ಕಸಿದುಕೊಂಡು ಅದನ್ನು ಸ್ವತಃ ಕೋಟೆಯ ಗೋಡೆಗೆ ನಿಲ್ಲಿಸಿ, ತಾನು ಕೋಟೆಯ ಮೇಲೇರುವದಲ್ಲದೆ ತನ್ನ ಜತೆಯಲ್ಲಿ ಇನ್ನಿಬ್ಬರನ್ನು ಏರಿಸಿಕೊಂಡನು. ಅಲೆಕ್ಸಾಂಡರನು ತಮ್ಮ ಕೋಟೆಯನ್ನು ಏರಿಬಂದಿರುವದನ್ನರಿತುಕೊಂಡು ಕೋಟೆಯೊಳಗಿನವರು ಅಲೆಕ್ಸಾಂಡರನ ಮೇಲೆ ಬಾಣಗಳನ್ನೆಸೆಯಬೇಕೆನ್ನುವಷ್ಟರಲ್ಲಿ ಶತ್ರುಗಳ ಮನದೆಣಿಕೆಯನ್ನು ತಿಳಿದುಕೊಂಡು ತತ್‌ಕ್ಷಣವೇ ಅಲೆಕ್ಸಾಂಡರನು ಮೇಲಿಂದಲೇ ಮೂವರೊಡನೆ ಕೋಟೆಯೊಳಗೆ ಹಾರಿಕೊಂಡನು. ಈ ಪೆಟ್ಟಿನಿಂದ ಒಬ್ಬ ದಂಡಾಳು ಸತ್ತುಬಿದ್ದನು-

ಅಲೆಕ್ಸಾಂಡರನು ಮಾತ್ರ ಹತ್ತಿರಿರುವ ಒಂದುಗಿಡವನ್ನು ಆತುಕೊಂಡು ನಿಂತನು. ಅಲ್ಲಿಯ ಜನರಿಗೂ ಒಂಟಿಗನಾದ ಅವನಿಗೂ ಲಗ್ಗೆಹತ್ತಿತು. ಈ ಲಗ್ಗೆಯಲ್ಲಿ ಕೋಟೆಯಯ ಪಾಳೆಯಗಾರನು ಮಡಿದನು; ಆದರೂ ಅಲೆಕ್ಸಾಂಡರನು ಒಬ್ಬೊಂಟಿಗನಾಗಿ ಅಷ್ಟು ಜನರೊಡನೆ ಕಾದುವಭರದೊಳಗೆ ಅವನ ಮೈಗೆ ಬಾಣದ ಪೆಟ್ಟು ತಗಲಿ ಕೆಳಕ್ಕೆ ಬಿದ್ದನು. ಈ ಸಮಯವನ್ನರಿತುಕೊಂಡು ನೆರೆಯಲ್ಲಿದ್ದ ಅತನ ದಂಡಾಳು ಅಲೆಕ್ಸಾಂಡರನ ಮೇಲೆ ಚಲಬತ್ತನ್ನು ಬೀಸಾಡಿದನು. ಅವರಿಬ್ಬರೂ ಕಾದಲಾರಂಭಿಸಿದರು. ಕೋಟೆಯನ್ನೇರಿಬಂದು ತಮ್ಮ ರಾಜನಿಗೆ ನೆರವಾಗಬೇಕೆಂದರೆ ಕೋಟೆಗೆ ಹಚ್ಚಿದ ನಿಚ್ಚಣಿಕೆಯು ಮುರಿದು ಹೋದದ್ದರಿಂದ ಗ್ರೀಕ ದಂಡಾಳುಗಳು ಬಹಳ ಹೊತ್ತಿನವರೆಗೆ ಚಡಪಡಿಸಿ ಕೊನೆಗೆ ಹೇಗೋ ಸಂಕಟಪಟ್ಟು ಕೋಟೆಯನ್ನೇರಿ ಕೋಟೆಯ ಬಾಗಿಲವನ್ನೊದೆದು ಒಳಗೆ ಧುಮುಕಿ ತೀರ ಹತಾಶನಾಗಿರುವ ಅಲೆಕ್ಸಾಂಡರನನ್ನುಳಿಸಿದರು. ಈ ಲಗ್ಗೆಯಲ್ಲಿ ಅಲೆಕ್ಸಾಂಡರನ ಎದೆಯಲ್ಲಿ ಬಾಣ ನೆಟ್ಟಿದ್ದರಿಂದ ಅವನು ಬದಕುವದೇ ಕೈವಿುರಿದ ಕೆಲಸವಾಗಿತ್ತು; ಆದರೆ ನ್ವಾಭಾವಿಕವಾಗಿ ಅವನ ಮೈಕಟ್ಟು ಬಹು ಗಟ್ಟಿಯಿರುವದರಿಂದ ಇದನ್ನು ಲೆಕ್ಕಿಸದೆ ಬಾಣವನ್ನು ಶಸ್ತ್ರಕ್ರಿಯೆಯಿಂದ ತೆಗೆಯಿಸಿಕೊಂಡು ಕ್ರಮೇಣ ನೆಟ್ಟಗಾದನು. ಮಲ್ಲರು ಅಲೆಕ್ಸಾಂಡರನಿಗೆ ಶರಣುಬಂದರು; ಅಲ್ಲದೆ ನೆರೆಯ ಪುಂಡರು ಗ್ರೀಕ ಅರಸನ ಶೌರ್ಯದ ಕೀರ್ತಿಯನ್ನು ಕೇಳಿ ತಾವಾಗಿಯೇ ಕಪ್ಪುಕಾಣಿಕೆಯೊಡನೆ ಶರಣಾಗತರಾದರು. ಈ ಪ್ರಾಂತಕ್ಕೆಲ್ಲ ಅಲೆಕ್ಸಾಂಡರನು ಫಿಲಿಪ್ಪಾಸ ಎಂಬೊಬ್ಬ ತನ್ನ ಸರದಾರನನ್ನು 'ಕ್ಷತ್ರಪ' ನನ್ನಾಗಿ ಇಟ್ಟನು. ದಾರಿಯೊಳಗೆ ಅಲ್ಲಲ್ಲಿಯ ಸೃಷ್ಟಿಸೌಂದರ್ಯವನ್ನು ನೋಡುತ್ತಲೂ ಹಲವು ಬಗೆಯ ಕ್ರೀಡೆಗಳನ್ನು ನಡಿಸುತ್ತಲೂ ಸಿಂಧು ನದಿಯ ಮುಖಕ್ಕೆ ಬಂದು ಮುಟ್ಟಿ, ತನ್ನ ಬಂದು ದಂಡಿನ ತಂಡನ್ನು ಜಲಮಾರ್ಗವಾಗಿ ನಡಿಸಿಕೊಂಡು ಹೋಗಬೇಕೆಂದೂ, ತಾನು ಸ್ವತಃ ಮತ್ತೊಂದು ದಂಡಿನ ತಂಡನ್ನು ತೆಗೆದುಕೊಂಡು ಭೂಮಾರ್ಗವಾಗಿ ಹೋಗಬೇಕೆಂದೂ ನಿರ್ಧರಿಸಿ, ಆ ಪ್ರಕಾರ ಜಲಮಾರ್ಗ ಪ್ರಯಾಣದ ಹೊಣೆಯನ್ನು ನಿಯಾರ್ಕನನಿಗೆ ಹೊರಿಸಿ, ತಾನು ಬೆಟ್ರೋದೊಳಗಿಂದ

ನಡೆದನು. ನಿಯಾರ್ಕನನಿಗೂ ಅಲೆಕ್ಸಾಂಡರನಿಗೂ ಮಾರ್ಗದೊಳಗೆ ಕಷ್ಟಪರಂಪರೆಗಳಿಗೀಡಾಗಬೇಕಾಯಿತು. ಅಲೆಕ್ಸಾಂಡರನಿಗೂ ಅವನ ದಂಡಿನವರಿಗೂ ಪಾಲಾ ಪರ್ವತದೊಳಗೆ ಕುಡಿಯಲಿಕ್ಕೆ ನೀರು ಸಹ ದೊರೆಯದ್ದರಿಂದಲೂ, ಪಾಲಾ ಪರ್ವತದ ಬೆಂಗಾಡಿನಿಂದಲೂ ಊಹಿಸ ಲಾರದಷ್ಟು ತಾಪವಾಗಿ ನಾನಿರಾರು ಸೈನಿಕರೂ, ದನಕರುಗಳೂ ನಾವಿ ಗೆಯಾದರು. ಈ ಬೆಂಗಾಡಿನಲ್ಲಿ ಪಯಣ ನಡಿಸಿರುವಾಗ ಸ್ವತಃ ಅಲೆಕ್ಸಾಂಡರನಿಗೂ ನೀರಿನ ಬಳಲಿಕೆಯಾಯಿತು. ದಂಡಾಳುಗಳು ಎಲ್ಲಿಂದಲೋ ಒಂದು ಬಟ್ಟಲು ನೀರು ತಂದುಕೊಟ್ಟರು. ತನ್ನ ದಂಡಾ ಳುಗಳು ನೀರಿನಥವೆಯಿಂದ ಪ್ರಾಣಬಿಡುತ್ತಿರಲು ತಾನು ಒಂದು ಬಟ್ಟಲ ನೀರು ಕುಡಿದು ನೀರಡಿಕೆಯನ್ನು ಹಿಂಗಿಸಿಕೊಳ್ಳುವದು ಸರಿಯಲ್ಲವೆಂದು ಆ ನೀರನ್ನು ಮಳಲಿನಲ್ಲಿ ಸುರಿದು ಬಿಟ್ಟನಂತೆ! ಈ ದೃಷ್ಟಾಂತದಿಂದ ಅಲೆಕ್ಸಾಂಡರನಲ್ಲಿ ಸಹಾನುಭೂತಿ ಗುಣವು ಎಷ್ಟು ಬಲವಾಗಿತ್ತೆಂಬದು ತಿಳಿಯುತ್ತದೆ. ಮುಂದೆ ಅಲೆಕ್ಸಾಂಡರನು ಹೀಗೆ ಕಷ್ಟಪಡುತ್ತಲೇ ಈಗ ತುರ್ಕಸ್ಥಾನದೊಳಗೆ ಯುಪ್ರೆತೀಸ ನದಿಯ ದಂಡೆಯ ಮೇಲಿ ರುವ ಬಾಬಿಲನ್ನಪಟ್ಟಣಕ್ಕೆ ಸೇರಿದನು. ದೂರಿನ ಪಯಣದಿಂದ ಅವನು ಬಲಗೆಟ್ಟಿದ್ದನು; ಇಂಥ ಸ್ಥಿತಿಯಲ್ಲಿ ಒಂದುದಿನ ನದಿಯಲ್ಲಿ ಈಜಾಡಿದ್ದೇ ನೆವವಾಯಿತು. ಆತನಿಗೆ ಬಂದ ಜ್ವರ ಆರದೆ ದಿನದಿನಕ್ಕೆ ಏರುತ್ತ ಹೋಗಿ ಕೊನೆಗೆ ಜ್ವರಬೇನೆಗೆ ತುತ್ತಾದನು. ಅಲೆಕ್ಸಾಂಡರನ ದಾಳಿಯು ಕ್ರಿ. ಶ. ಪೂ. ೩೨೭ರಿಂದ ೩೨೪ರ ವರೆಗೆ ಸಾಗಿತ್ತು.

ಅಲೆಕ್ಸಾಂಡರನ ಗುಣಕಲಾಪ:— ತನ್ನ ಆಳಿಕೆಯ ಸ್ವಲ್ಪಾವಧಿ ಯಲ್ಲಿಯೇ ಅಲೆಕ್ಸಾಂಡರನು ವಿೂರಿದ ಪರಾಕ್ರಮವನ್ನು ತೋರಿಸಿ, ತನ್ನ ಹೆಸರಿನ ಜಯಭೇರಿಯನ್ನು ಇಡೀ ಭೂಮಂಡಲದೊಳಗೆ ಮೊಳ ಗಿಸಲಿಕ್ಕೆ ಹಚ್ಚಿದ್ದೆಂದರೆ ಇತಿಹಾಸದೊಳಗೆ ಇದುವೇ ಮೊದಲನೇ ಉದಾಹರಣೆ. ಆದುದರಿಂದಲೇ ಇತಿಹಾಸಗಾರರು ಅತನಿಗೆ 'ಜಗಜಿಟ್ಟಿ' ಯೆಂದು ಗೌರವಿಸಿದ್ದಾರೆ. ಗ್ರೀಕರು ಸ್ವಾಭಾವಿಕವಾಗಿ ಬಂಟರ ಜಾತಿಯವರಾದ್ದರಿಂದ, ಅವರು ಯುದ್ಧನೀತಿಯಲ್ಲಿ ಒಳ್ಳೇ ಮೇಲುಗೈ ಯಾಗಿದ್ದರು. ಅವರ ಯುದ್ಧನೀತಿಯು ಚನ್ನಾಗಿ ಪರಿಣತಾವಸ್ಥೆಯ

ನ್ನಡರಿತ್ತಾಗಿ ತೋರುತ್ತದೆ. ಗ್ರೀಕಸೈನ್ಯಕ್ಕೆ ಒಡೆಯನಾದ ಅಲೆಕ್ಸಾಂ ಡರನಾದರೂ ತನ್ನ ದಂಡಾಳುಗಳಿಗೆ ತಕ್ಕಂತೆ ಶೂರನೂ, ಸಾಹಸಿಗನೂ ಸಂಕಟಗಳಿಗೆ ಎದೆಗೊಟ್ಟು ಹೋರಾಡುವ ಮೂರ್ತಿಮಂತ ಎದೆಗಾ ರನೇ ಇದ್ದುದರಿಂದ ಅವನನ್ನು ಕಂಡೊಡನೆ ದಂಡಾಳುಗಳಲ್ಲಿ ಹೊಸ ಹುರುಪು ಹುರುಡುಗಳು ಜೀವಗೊಂಡು ಕೆಲಸ ಮಾಡುತ್ತಿದ್ದವು. ಅತನ ದಂಡಿನ ಓರಣ, ಶಿಕ್ಷಣಕ್ರಮಗಳ ಮುಂದೆ ಭಾರತೀಯ ದಂಡಿನ ಕೋತಿಯಗೋಪೆಗಳಾದ ಅನೆಗಳ ಆಟವೂ ನಡೆಯದೆ ಅವು ಕುನ್ನಿ ಯಾದವು. ಹಿಂದೂ ದೇಶವನ್ನು ತನ್ನ ಸಾಮ್ರಾಜ್ಯಕ್ಕೆ ಕೂಡಿಸಬೇಕೆಂ ಬುದೊಂದು ಅಲೆಕ್ಸಾಂಡರನ ಬಲವಾದಾಕಾಂಕ್ಷೆ; ಆದರೆ ಅವನು ಅಕಾ ಲಮೃತ್ಯುವಿಗೆ ತುತ್ತಾದ್ದರಿಂದ ಅದು ಕೈಗೂಡದೆ ಹೋಯಿತು. ಆರ್ಯ ವೈದ್ಯಶಾಸ್ತ್ರದ ಮಹತ್ವವನ್ನರಿತು ಈತನು ತನ್ನ ದಂಡಿನೊಳಗೆ ಹಿಂದೂ ವೈದ್ಯರನ್ನು ಔಷಧೋಪಚಾರಕ್ಕಾಗಿ ಇಟ್ಟುಕೊಂಡಿದ್ದರಿಂದ ಈತನು ಗುಣಪಕ್ಷಿಯಾಗಿದ್ದನೆಂಬುದು ಸ್ಪಷ್ಟವದೆ. ಈತನು ಮಡಿದ ಐದೆರಡು ವರ್ಷಗಳಲ್ಲಿಯೇ ಪೌರ್ವಾತ್ಯ ಜನಾಂಗದೊಳಗಿನ ಈತನ ಸಾಮ್ರಾ ಜ್ಯದ ಕಟ್ಟುಬಿಚ್ಚಿ, ಎಲ್ಲ ಸರದಾರರು ತಮ್ಮತಮ್ಮಷ್ಟಕ್ಕೆ ಸ್ವತಂತ್ರರಾ ದರು. ಗ್ರೀಕ ಸಂಸ್ಕೃತಿಯು ಹಿಂದೂ ಸಂಸ್ಕೃತಿಯೊಡನೆ ಕೂಡಿ ನಡೆ ಯಲಿಕ್ಕೆ ಅಸ್ಪದ ದೊರೆಯದೆ ತನ್ನಷ್ಟಕ್ಕೆ ತಾನೇ ಮರೆಯಾಯಿತು. ಹಿಂದೂದೇಶಕ್ಕೆ ನೆರೆಯಾಗಿರುವ ಮಧ್ಯ ಏಸಿಯದ ರಾಜ್ಯಭಾರವೆಲ್ಲವೂ ಸಿಕಂದರನ ತರುವಾಯ ಅವನ ದಳವಾಯಿಯಾದ ಸೇಲ್ಯೂಕಸನ ಕೈಸೇರಿ ಅವನೇ ಆ ಪ್ರಾಂತವನ್ನೆಲ್ಲ ಆಳಲಾರಂಭಿಸಿದನು.

ಆರ್ಯಚಾಣಕ್ಯ:- ತಕ್ಷಶಿಲಾನಗರವು ಗ್ರೀಕರ ದಾಳಿಗೆಷ್ಟೊಗರಲು, ಅಲ್ಲಿರುತ್ತಿದ್ದ ವಿಷ್ಣುಶರ್ಮ (ಆರ್ಯಚಾಣಕ್ಯ) ನೆಂಬೊಬ್ಬ ಬ್ರಾಹ್ಮಣಶ್ರೇಷ್ಠನು ಗ್ರೀಕರ ಕಾಟಕ್ಕೆ ಬೇಸತ್ತು ಆ ಊರನ್ನೇ ಬಿಟ್ಟು, ಹಿಂದುಸ್ಥಾನದೊಳಗೆ ಬ್ಲೇರೊಂದು ಸಾಮ್ರಾಜ್ಯವನ್ನೇ ಸ್ಥಾಪಿಸಬೇ ಕೆಂದು ಮನಸಿನೊಳಗೆ ತೀರ್ಮಾನಿಕೆಮಾಡತೊಡಗಿದ್ದನು. ಈತನು ಮಹಾ ವಿದ್ವಾಂಸನು, ಚತುರ್ವೇದಗಳು ಅತನ ಬಾಯಲ್ಲಾಡುತ್ತಿದ್ದವು. ದಂಡ ನೀತಿಶಾಸ್ತ್ರದೊಳಗಂತೂ ಅತನಿಗಾರೂ ಸಾಟಿಯಿರಲಿಲ್ಲ. ಒಡತನವು

ಈತನನ್ನು ರೂಪಗೊಂಡು ಕಾಡುತ್ತಿದ್ದರೂ ಈತನೇನೂ ಧೈರ್ಯಗೆಟ್ಟಿರಲಿಲ್ಲ. ತಾಯಿ ಸೇವೆಯಲ್ಲಿಯೇ ಸದಾ ಮುಳುಗಿರುತ್ತಿದ್ದನು. ಆ ತಾಯಿಯೂ ಒಬ್ಬನೇ ಒಬ್ಬ ಮಗನಾದ ಈತನ ಸೇವೆಗೆ ಮನಮೆಚ್ಚಿ "ಅಪ್ಪಾ ಮಗುವೇ! ನೀನು ನನಗಿಂತಲೂ ಮೇಲಾದ ಹುಟ್ಟಿದ ಭೂಮಿ ತಾಯಿಯನ್ನು ಉದ್ಧರಿಸುವಂಥ ಕಾರ್ಯವನ್ನು ಕೈಕೊಳ್ಳು, ನಿನ್ನಲ್ಲಿರುವ ವಿದ್ಯಾಪ್ರೌಢಿಮೆಗಳಿಂದ ಏನಾದರೊಂದು ಮಹೋನ್ನತವಾದ ಕಾರ್ಯವನ್ನು ನಾಧಿಸು; ಅದಕ್ಕಾಗಿ ಒಂದುವೇಳೆ ನೀನು ಈ ಸ್ಥಳವನ್ನು ಬಿಡಬೇಕಾದ ಸಂದರ್ಭ ಬಂದರೂ ಅಡ್ಡಿಯಿಲ್ಲ; ಹುಟ್ಟಿದ ಸ್ಥಳದಿಂದ ಕಿತ್ತಿ ಬೇರೆ ಕಡೆಯಲ್ಲಿ ನಾಟಿದ ಗಿಡಗಳು ಬೆಳೆದು ಬಲಿಯುವಂತೆ, ನೀನು ದೇಶಾಂತರವನ್ನಾಶ್ರಯಿಸಿ, ತೇಜಸ್ವಿಯಾಗಿಯೂ, ಆಯುಷ್ಮಂತನಾಗಿಯೂ ಬಾಳು. ನಿನ್ನ ತಾಯ್ನಾಡಿನ ನೆಮ್ಮದಿಗಾಗಿಯೇ ದೇಹವನ್ನು ದಂಡಿಸು; ಅದರಲ್ಲಿಯೇ ನಿನ್ನ ಪುರುಷಾರ್ಥ." ಎಂದು ತೇಳಿ ಪ್ರಾಣಬಿಟ್ಟಳು. ತಾಯಿಯ ಮಾತನ್ನು ಕೇಳಿಕೊಂಡು, ತಾಯಿಯ ಉತ್ತರಕ್ರಿಯಾದಿಗಳನ್ನು ತೀರಿಸಿಕೊಂಡು ಆರ್ಯಚಾಣಕ್ಯನು ಇನ್ನಾವ ರಾಜ್ಯವನ್ನಾಶ್ರಯಿಸಬೇಕೆಂಬ ಯೋಚನೆಯಲ್ಲಿರುವೇ ಅಲೆಯುತ್ತಲೆಯುತ್ತ ಮಗಧರಾಜಧಾನಿಯಾದ ಪಾಟಲೀಪುತ್ರವನ್ನು ಸೇರಿದನು. ಊರಲ್ಲಿ ಹೋಗುತ್ತಿರುವಾಗ ಚಂದ್ರಗುಪ್ತನಿರುತಿರುವ ಸತ್ರದ ಎದುರಿಗೆನೇ ಅತನ ಕಾಲಿಗೊಂದು ಕರಿಕೆಯ ಬೇರು ಸುತ್ತಿಕೊಂಡು ಮುಗ್ಗರಿಸಿದನು. ಮಧ್ಯಾನ್ಹದ ಬಿಸಿಲಿನಿಂದ ಬಾಯಾರಿ ಬೆಂಡಾದ ಆರ್ಯಚಾಕ್ಯನು ಇದರಿಂದ ಬಹು ಕೋಪಗೊಂಡು ತನ್ನ ಕೈಯಲ್ಲಿರುವ ದಂಡದ ಮೊನೆಯಿಂದ ಆ ಕರಿಕೆಯನ್ನು ಬೇರು ಸಹಿತ ಕಿತ್ತಬೇಕೆಂದೆಣಿಸಿ ಅಳವಾಗಿ ಅಗಿಯಲು ಮೊದಲುಮಾಡಿದನು. ಆರ್ಯಚಾಣಕ್ಯನು ಕರಿಕೆಯ ಬೇರಿನೊಡನೆ ನಡೆಯಿಸಿದ ಛಲದಂಕವನ್ನು ಚಂಂದ್ರಗುಪ್ತನು ಕಿಟಕಿಯ ದ್ವಾರದಿಂದಲೇ ತನ್ನಷ್ಟಕ್ಕೆ ತಾನೇ ನೋಡುತ್ತಿರಲು "ಅಹಹ! ಇವನೀಗ ತಕ್ಕ ನನಗೆ ಗುರುವು. ಇಂಥವರ ಬೆನ್ನಿಗೆ ಬಿದ್ದು ಅದೃಷ್ಟಗೇಡಿಯಾದ ನಾನೆನ್ನ ಅದೃಷ್ಟವನ್ನು ಪರೀಕ್ಷಿಸಲಿಕ್ಕೆಬೇಕು" ಎಂದು ಆ ಬ್ರಾಹ್ಮಣನನ್ನು ಅದರದಿಂದ ತನ್ನ ಸತ್ರಕ್ಕೆ ಕರೆದುಕೊಂಡು ತನ್ನ ಆತಿಥ್ಯವನ್ನು

ಸ್ವೀಕರಿಸಬೇಕೆಂದು ಬಿನ್ನವಿಸಿಕೊಂಡನು. ರಾಜಲಕ್ಷಣಗಳಿಂದೊಪ್ಪುವ ಚಂದ್ರಗುಪ್ತನ ಮುಖಕಾಂತಿಯನ್ನೂ, ವಿನಯವನ್ನೂ ಚೆನ್ನಾಗಿ ನೋಡಿ ಚಾಣಕ್ಯನು ಆನಂದಪಟ್ಟು ಅವನ ಬಿನ್ನಹವನ್ನು ಮನ್ನಿಸಿ, ನಡೆದನು. ಚಂದ್ರಗುಪ್ತನ ಬೀಡಾರಕ್ಕೆ ಹೋಗಿ ವಿಶ್ರಮಿಸಿದೊಡನೆ, ಚಂದ್ರಗುಪ್ತನು ಬ್ರಾಹ್ಮಣೋತ್ತಮನಾದ ಚಾಣಕ್ಯನಿಗೆ ನ್ಹಾನಾನ್ನಿಕ ಭೋಜನದ ಏರ್ಪಾಟು ಮಾಡಿಸಿದನು. ಊಟವಾದ ಮೇಲೆ ಆ ಬ್ರಾಹ್ಮಣನು ಕೊಂಚ ವಿರಾಮಗೈಯುತ್ತಿರಲು ಚಂದ್ರಗುಪ್ತನು ಅತನ ಪಾದಗಳನ್ನು ಒತ್ತುತ್ತ ಕುಳಿತುಕೊಂಡನು. ಚಂದ್ರಗುಪ್ತನು ತನ್ನ ದುರದೃಷ್ಟದ ದೆಸೆಯಿಂದ ಯಾವಾಗಲೂ ಒಂದು ಬಗೆಯಿಂದ ಪೆನ್ನ ಮನಸ್ಸಿನಿಂದಲೇ ಕಾಲಕಳೆಯುತ್ತಿದ್ದುದರಿಂದ, ಅವನಲ್ಲಿ ಯಾವುದೋ ಒಂದು ಅಡಿತೋರಿಸದಂಥ ವ್ಯಥೆಯು ಶರೀರವನ್ನು ಸುಡುತ್ತಿರುವಂತೆ ಇದ್ದಿತು. ಇದರ ಇಂಗಿತವನ್ನರಿಯಲು ಆರ್ಯಚಾಣಕ್ಯನು ದುಃಖದ ಕಾರಣವೇನೆಂದು ಕೇಳಲು ನಂದರು ನಡಿಸಿದ ಅನ್ಯಾಯಾಚರಣೆಯ ಸಂಗತಿಯೆಂದು ತಿಳಿಯಿತು.

ನಂದರನ್ನು ನಿರ್ಮೂಲಗೊಳಿಸಲು ನಿಶ್ಚಯ:- ಆಗ ನಂದರನ್ನು ಯಾವ ಹಂಚಿಕೆಯಿಂದ ಪಾತಾಳಕ್ಕೆ ಮೆಟ್ಟಿಬೇಕೆಂಬ ಯೋಚನೆಯು ಚಾಣಕ್ಯನ ಮನಸಿನಲ್ಲಿ ಕುದಿಯಲಾರಂಭಿಸಿತು. ನಂದರನ್ನು ರೇಗಿಸಿ, ಅವರ ಸತ್ವಪರೀಕ್ಷೆ ಮಾಡಬೇಕೆಂದೆಣಿಸಿ, ಒಂದು ದಿನ ಚಾಣಾಕ್ಷನಾದ ಚಾಣಕ್ಯನು ನಂದರ ಮನೆಗೆ ಊಟಕ್ಕೆಂದು ಹೋಗಿ, ಬ್ರಾಹ್ಮಣರು ಕುಳಿತಿರುವ ಪಂಕ್ತಿಯೊಳಗೆ ತಾನು ಕುಳ್ಳಿರದೆ, ನಂದರಿಗಾಗಿ ಸಿದ್ಧಪಡಿಸಿದ ದಿವ್ಯವಾದ ಚಿನ್ನದ ಗದ್ದುಗೆಯ ಮೇಲೆ ಒಳ್ಳೇ ಆಢ್ಯತೆಯಿಂದ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತನು. ಅಷ್ಟರಲ್ಲಿ ನಂದರೂ ಬಂದು ನೋಡುತ್ತಾರೆ; ಒಬ್ಬ ಹಾರುವನು ತಮಗಾಗಿ ಏರ್ಪಡಿಸಿಟ್ಟ ಪೀಠದ ಮೇಲೆ ಯಾರನ್ನೂ ಲೆಕ್ಕಿಸದೆ ಕುಳಿತಿರುವದನ್ನು ಕಂಡು, ಆ ಬ್ರಾಹ್ಮಣನ ತೇಜವನ್ನು ಲಕ್ಷಿಸದೆ, ಮದೋನ್ಮತ್ತರಾಗಿ ಅತನನ್ನು ಕೆಳಕ್ಕೆ ದಬ್ಬಿಹಾಕಿಸಿದರು. ಈ ಮಾನಭಂಗದಿಂದ ಕೆಂಡಾಗಿ ಆರ್ಯಚಾಣಕ್ಯನು ಕಣ್ಣಾಗಿಂದ ಕಿಡಿಗಳನ್ನು ಕಾರುತ್ತ ನಂದರನ್ನು

ಸುಟ್ಟು ಬೂದಿಯನ್ನಾಗಿ ಮಾಡುವನೆಂಬಂತೆ, ಹಲ್ಲುಗಳನ್ನು ಕಡಿಯುತ್ತಲೂ, ಪ್ರಳಯಕಾಲದ ಸಿಡಿಲಿನಂತೆ ಆರ್ಭಟಿಸುತ್ತಲೂ "ಬಿಸಿಲಿನಿಂದ ಬೆಂದು ಭೋಜನಕ್ಕಾಗಿ ಬಂದಿರುವ ಬ್ರಾಹ್ಮಣನಾದ ನನನ್ನು ಉನ್ಮತ್ತರಾದ ನೀವು ಸತ್ಕರಿಸದೆ, ಕೆಳಗೆ ತಳ್ಳಿಸಿದಕ್ಕಾಗಿ ನಾನು ಈ ಕ್ಷಣಕ್ಕೇನೇ ನಿಮ್ಮನ್ನು ನಿರ್ನಾಮಗೊಳಿಸಬೇಕಾಗಿತ್ತು; ಆದರೆ ಪಾಪ ಬೇಡ; ನೀವು ನನ್ನನ್ನು ಪೀಠದಿಂದ ಕೆಳಗೆ ಎಳೆಸಿದಂತೆಯೇ ನಾನು ನಿಮ್ಮೆಲ್ಲರನ್ನು ನಾಯಿಗಳಂತೆ ಎಳೆಯಿಸಿದಾಗಲೇ ಈಗ ಬಿಚ್ಚಿರುವ ಜುಟ್ಟನ್ನು ಕಟ್ಟುವೆನು; ಅಲ್ಲಿಯ ವರೆಗೆ ಕಟ್ಟಲಿಕ್ಕಿಲ್ಲ." ಎಂದು ಪಣತೊಟ್ಟು, ಇತ್ತ ತನಗೆ ಒಳ್ಳೆಯ ದಿನಗಳು ಯಾವಾಗ ಸಮಿಾಪಿಸುವವೋ ಎಂದು ಚಾತಕಪಕ್ಷಿಯಂತೆ ದಿನಗಳೆಯುತ್ತಿದ್ದ ಚಂದ್ರಗುಪ್ತನ ಬಳಿಸಾರಿ "ಅಯ್ಯಾ, ಚಿಂತಿಸಬೇಡ! ನಿನ್ನ ಹಣೇ ಬರಹವು ಹಣ್ಣಾಗುವ ಕಾಲವಿದೀಗ ಒದಗಿದೆ!! ಖಂಡಿತವಾಗಿಯೂ ನಿನ್ನನ್ನು ಮಗಧರಾಜ್ಯದ ಸಿಂಹಾಸನದ ಮೇಲೆ ಕೂಡಿಸದೆ ಬಿಡೆನು. ಎಂದು ಮಾತು ಕೊಟ್ಟು, ಮುಂದಣ ಯೋಚನೆಗಾಗಿ ನೈಮಿಷಾರಣ್ಯಾದಲ್ಲೆದ್ದ ಇಂದುಶರ್ಮನೆಂಬ ತನ್ನ ಮಿತ್ರನೊಬ್ಬನನ್ನು ಕಾಣಲಿಕ್ಕೆ ಹೊರಟನು. ನೈಮಿಷಾರಣ್ಯಕ್ಕೆ ಹೋಗಿ ಇಂದುಶರ್ಮನಿಗೆ ನಿಜಸಂಗತಿಯನ್ನೂ, ತನ್ನ ಮಹತ್ವಾಕಾಂಕ್ಷೆಯನ್ನೂ ಯಥಾವತ್ತಾಗಿ ತಿಳಿಸಲು, ಮಿತ್ರನ ಮಹಾ ಕಾರ್ಯದೊಳಗೆ ತಾನು ತನ್ನ ಶಿಷ್ಯರೊಂದಿಗೆ ತನುಮನಧನಗಳಿಂದ ನೆರವಾಗುವೆನೆಂದು ಇಂದುಶರ್ಮನು ಒಪ್ಪಿ, ನಂದರ ಸೇನಾಧೀಶರಲ್ಲಿ ವೈದ್ಯ, ಜ್ಯೋತಿಷಿ ಅವೇ ಮುಂತಾದ ಕೆಲಸಗಳನ್ನು ಕೈಕೊಂಡು, ಚಂದ್ರಗುಪ್ತನಿಗೆ ರಾಜ್ಯವಾಗಲಿಕ್ಕೆ ಮಾಡಬೇಕಾದ ಉಪಾಯಗಳನ್ನೆಲ್ಲ ಮಾಡುತ್ತಲೂ, ಅಮಾತ್ಯ ರಾಕ್ಷಸನಯುಕ್ತಿ ಪ್ರಯುಕ್ತಿಗಳನ್ನು ಚಾಣಕ್ಯನಿಗೆ ಆಗಾಗ ತಿಳಿಸುತ್ತಲೂ ಇದ್ದರು. ರಾಜಕಾರ್ಯದೊಳಗೆ ಬೇಕಾದ ಕುಟಿಲನೀತಿಯಲ್ಲಿ ಚಾಣಕ್ಯನ ಚಾತುರ್ಯವು ಮಿಗಿಲಾಗಿದ್ದಿತು; ಅತನ ನಿಶ್ಚಯವು ಅಚಲವಾಗಿದ್ದಿತು; ಅತನ ತೇಜವು ಕಣ್ಣು ಕುಕ್ಕಿಸುವಂತಹದಾಗಿದ್ದಿತು. ಚಂದ್ರಗುಪ್ತನು ಇವುಗಳನುಭವ ಕಂಡದ್ದರಿಂದ ತನ್ನ ಅರಿಷ್ಟಕಾಲವು ಅಡಗುವ ವೇಳೆ ಬಂತೆಂದು ಅರಿತುಕೊಂಡನು. ಅತನ ಜೀವನದೊಳಗೆ

ಒಂದು ಬಗೆಯ ನವಚೇತನದ ಗಾಳಿಯು ಸುಳಿಯತೊಡಗಿತು. ನಿರಾಶೆಯಿಂದ ಕಮರಿ ಬಿಣಗಿ, ಕುದುರಿ ಹೋದ ಆತನ ಮುಂದಣ ಆಶೆಯ ಸಸಿಯು ಚಿಗುರಹತ್ತಿತು. ತಾನು ಮಾಡಿದ ಪಣದ ಎಚ್ಚರಿಕೆಯು ಯಾವಾಗಲೂ ಮನಸಿನಲ್ಲಿ ಉರಿಯುತ್ತಿದ್ದುದರಿಂದ ಆತನು ಕೆಚ್ಚೆದೆಯಿಂದ ತನ್ನ ಕಾರ್ಯಗಳನ್ನು ನಡೆಸಲುದ್ಯುಕ್ತನಾಗಿ, ಚಂದ್ರಗುಪ್ತನಿಗೆ ಅನುಕೂಲರಾಗಿರುವವರನ್ನು ಕಂಡು, ಅವರೊಡನೆ ಮಾತನಾಡಿಕೊಂಡು, ಶತ್ರುಗಳಾದ ನಂದರನ್ನು ಮೂಲೋತ್ಪಾಟನೆಯ ಕಾರ್ಯದೊಳಗೆ ತನಗೆ ಯಾರಿಂದ ಸಹಾಯವಾಗಬಹುದೆಂಬುದನ್ನು ಅಳೆದುಕೊಂಡು, ಚಂದ್ರಗುಪ್ತನ ದುಃಸ್ಥಿತಿಗಾಗಿಯೂ, ನಂದರ ದುರ್ನಡತೆಗಾಗಿಯೂ ಮನಸು ಕರಗುವಂತೆ ಮಾತನಾಡಿ ನೆರೆಹೊರೆಯ ರಾಜನಾದ ಪರ್ವತೇಶ್ವರನನ್ನು ತನ್ನ ಕಡೆಗೆ ಒಲಿಸಿಕೊಂಡು, ಮಗಧರಾಜ್ಯದೊಳಗಿನ ಅರ್ಧರಾಜ್ಯವನ್ನು ಪರ್ವತೇಶ್ವರನಿಗೆ ಸಲ್ಲಿಸಲಾಗುವದೆಂದು ಹೇಳಿ ಯುದ್ಧದ ಸೌರಣೆ ನಡೆಯಿಸಿದನು.

ಯುದ್ಧಸಿದ್ಧತೆ:- ತಮ್ಮ ತಮ್ಮ ಮಿತ್ರರಾಜರಿಗೆ ಸೈನ್ಯಸಿದ್ಧತೆ ನಡೆಸುವ ವಿಷಯವಾಗಿ ಕಾಗದಗಳು ಕಳಿಸಲ್ಪಟ್ಟಿದ್ದವು; ಬೇರೆ ಬೇರೆ ರಾಜರಿಂದ ಸೈನ್ಯಗಳು ನಡೆದು ಬಂದು ಪರ್ವತೇಶ್ವರನ ರಾಜ್ಯದಲ್ಲಿ ಬಿಡಾರಗಳನ್ನು ಬಿಡಹತ್ತಿದವು. ಈ ಗುಟ್ಟನ್ನು ತಿಳಿದುಕೊಂಡ ನಂದರಾದರೂ ಕೈಮುಚ್ಚಿಕೊಂಡಿರದೆ, ತಮ್ಮ ಸಿದ್ಧತೆಯಲ್ಲಿಯೇ ಇದ್ದರು. ಪರ್ವತೇಶ್ವರನ ದಂಡು ಮಗಧರಾಜ್ಯದ ವರೆಗೆ ವ್ಯಾಪಿಸಿಕೊಂಡಿತ್ತು. ಇಬ್ಬಣದವರಿಗೂ ಯುದ್ಧವೆನಿಗಿತು. ನಂದಾದಿಗಳು ತಮ್ಮ ಕೈಯಲ್ಲಿದ್ದಿನ ಭಾಗವನ್ನು ತೆಗೆದುಕೊಂಡು ಬಹು ದಕ್ಷರಾಗಿ ಕಾದುತ್ತಿದ್ದರು. ನಂದರು ಈ ಕಾಳಗದೊಳಗೆ ಶತ್ರುಗಳ ಸೈನ್ಯದ ಒಡಲು ಹೊಕ್ಕು, ಸಿಂಹ, ಹುಲಿ ಮೊದಲಾದ ಮೃಗರಾಜರು ಕುರಿ ಹಿಂಡನ್ನು ಮುರಿದು, ತರಿದು ಸದೆಬಡೆಯುವಂತೆ, ದಂಡಾಳುಗಳ ತಲೆಗಳನ್ನು ಚಂಡಾಡುತ್ತಲೂ, ರಥಿಕರನ್ನು ಬಂದೆ ಪೆಟ್ಟಿಗೆ ದಿಂಡುಗಡಹುತ್ತಲೂ, ಕುದುರೆಯಾಳುಗಳನ್ನು ನೆಲಕ್ಕುರಿಳಿಸುತ್ತಲೂ, ಆನೆಗಳ ಬಲವನ್ನು ಕತ್ತರಿಸಿ ಶುಂಡರಿಸುತ್ತಲೂ, ರಣಾಂಗದ ಮೇಲೆ ಪ್ರತಿರುದ್ರರೋ ಎಂಬಂತೆ

ಸುಳಿಯಿಂಚಿನಂತೆ ತಾಂಡವವಾಡಿ ಕ್ಷಣಹೊತ್ತು ಶತ್ರುಪಕ್ಷದವರನ್ನು ಗಾಬರಿಗೊಳಿಸಿ ದಿಗುಬಲಿಯಿಕ್ಕಿದರು. ಈ ವೇಳೆಯಲ್ಲಿ ಧೂರ್ತನಾದ ಚಾಣಕ್ಯನು "ಈಗ ನೋಡುತ್ತ ಕುಳ್ಳಿರುವದು ತಕ್ಕುದಲ್ಲ" ವೆಂದು ಮೈ ಮೇಲೆ ಹೊತ್ತುಕೊಂಡಿದ್ದ ಧೋತರವನ್ನು ಸೊಂಟಕ್ಕೆ ಬಿಗಿದು, ಕೈಯಲ್ಲಿ ತನ್ನ ದಂಡಪನ್ನತ್ತಿಕೊಂಡು ಒಳ್ಳೇ ಆವೇಶದೊಡನೆ ಎಲ್ಲರಿಗೂ ಧೈರ್ಯಗೊಡುತ್ತ ಹೊರಟನು. ಇದರಿಂದ ಹುರಿದುಂಬಿದವರಾಗಿ ಚಂದ್ರಗುಪ್ತ ಅವರೇ ಮುಂತಾದವರು ಮುಂದಕ್ಕೆ ಧುಮುಕಿ ಕಾದಲಾರಂಭಿಸಿದ್ದರಿಂದ ಮತ್ತೆ ದಂಡಿನೊಳಗೆ ಚೈತನ್ಯ ತುಂಬಿತು. ಸರ್ವರೂ ಇಮ್ಮಡಿ ಹುರುಪಿನಿಂದ ಕೈಗಟ್ಟಿದರು. ಈಗ ರಣದೇವತೆಯು ಶತ್ರುಪಕ್ಷದವರಾದ ಪರ್ವತರಾಜನ ಸೈನ್ಯದ ವರೆಗೆ ಕೃಪಾದೃಷ್ಟಿಯಿಂದ ನೋಡಿದ್ದರಿಂದ, ಅವರ ದಂಡಿನೊಳಗೆ ಒಳ್ಳೇ ಜಯಘೋಷವು ಕೇಳಿ ಬರಹತ್ತಿತು. ನೋಡುವಷ್ಟರಲ್ಲಿ ಬಿಬ್ಬಿಬ್ಬ ನಂದರು ಶತ್ರುಗಳ ಕತ್ತಿಗಳಿಗೆ ತುತ್ತಾಗುವದು ಕಂಡುಬಂದಿತು; ಆಗ ಆ ದಂಡಿನವರು ಎದೆಯಿಲ್ಲದಂತಾಗಿ ಮಗಧ ಸೈನ್ಯವು ದಿಕ್ಕು ದಿಕ್ಕಿಗೆ ಜೀವವುಳಿಸಕೊಳ್ಳಲಿಕ್ಕೆಂದು ಹಿಂಗಾಲು ಹಾಕಿ ಓಡತೊಡಗಿತು. ಶತ್ರುಸೈನ್ಯವು ಗಾಬರಿಗೊಂಡು ಗಾಬರಿಗಾಗಿ ಓಡುತ್ತಿರುವದನ್ನು ನೋಡಿ, ಚಾಣಕ್ಯನಿಗೆ ತಾವು ಮಾಡಿದ ಪಣದ ನೆನಪಿಗಾಗಿ, ಮೂರು ಮಂದಿ ನಂದರನ್ನು ಬೀಸುಹಗ್ಗಗಳನ್ನು ಹಾಕಿಸಿ ಹಿಡಿಸಿ, ಕೊಲ್ಲಲಿಕ್ಕೆ ಆಜ್ಞಾಪಿಸಿದನು; ಆಗ ದಂಡಿನವರೆದುರಿಗೆ ಬಂಧಿತ್ತು ಮಂದಿ ನಂದರ ತಲೆಗಳನ್ನೆಲ್ಲ ಒಟ್ಟು ಗೂಡಿಸಿ, ರಣದ ಮೇಲೆ ನಾಯಿಯಂತೆ ಎಳೆಯಿಸಿದನು. ಈ ಬಗೆಯಾಗಿ ನಂದವಂಶದ ದೀಪವು ನೊಂದಿಹೋಯಿತು. ನಂದವಂಶವನ್ನು ಕಾಪಾಡಬೇಕೆಂದು ಅಮಾತ್ಯರಾಕ್ಷಸನು ಬೇಕಾದಷ್ಟು ಹೆಣಗಿದರೂ ಕೈನಾಗದೆಹೋಯಿತು. ಕೊನೆಗೆ ತನ್ನ ದೈವ ತೆರೆಯುವ ದಾರಿಯನ್ನು ಕಾಯುತ್ತಿದ್ದ ಚಂದ್ರಗುಪ್ತನಿಗೆ ಪಟ್ಟವಾಯಿತು.

———

೮ ನೇ ಪ್ರಕರಣ

ಮೌರ್ಯರ ಆಳಿಕೆ.

(ಕ್ರಿ. ಪೂ. ೩೨೦–೧೮೦ ವರೆಗೆ)

ಚಕ್ರವರ್ತಿ ಮೌರ್ಯಚಂದ್ರಗುಪ್ತನು:— ಸಿಕಂದರ ಶಹನು ಹಿಂದೂದೇಶಕ್ಕೆ ದಂಡೆತ್ತಿಬಂದಾಗ, ಅವನ ನೆರವು ಪಡೆದು ಕಳಕೊಂಡ ತನ್ನ ರಾಜ್ಯವನ್ನು ತಿರಿಗಿ ಗಳಿಸಿ ಆಳಬೇಕೆಂದು ಚಂದ್ರಗುಪ್ತನು ಎಷ್ಟೊಂದು ಸಾಹಸ ಪಟ್ಟರೂ ಹೊಳ್ಳಾಯಿತು. ಮನುಷ್ಯನು ಕೆಲಸ ಸಾಧಿಸಲಿಕ್ಕೆ ಕಾಲನಿರೀಕ್ಷಣೆಯೊಂದು ಅವಶ್ಯವಾದ ಸಾಧನವಾಗಿದೆ; ಆಗ ಎಷ್ಟು ಪ್ರಯತ್ನಿಸಿದರೂ ಕೈಸೇರದ ಕಾರ್ಯವು ಇದೀಗ ಚಾಣಕ್ಯರ ಕೃಪೆಯಿಂದಲೂ, ಮಹಿಮೆಯಿಂದಲೂ ಚಂದ್ರಗುಪ್ತನಿಗೆ ಸಾಧ್ಯವಾಯಿತು. ಇದುವೇ ದೈವದಾಟನೆಂಬುದು. ಯುದ್ಧದ ಗೊಂದಲ ಮುಗಿದು ಎಲ್ಲೆಡೆಯಲ್ಲಿ ಶಾಂತಿಸಮಾಧಾನಗಳು ನೆಲಗೊಂಡನಂತರ ಹಿಡಿದ ಕಾಯವು ಕೊನೆಗೆಂಡಿತೆಂಬುವ ಮೇಲಾದ ಉಬ್ಬಿನಿಂದ ಆರ್ಯಚಾಣಕ್ಯರು ಹಿರಿಹಿರಿ ಹಿಗ್ಗಿದವರಾಗಿ ಎಲ್ಲ ಸಾಮಂತ ರಾಜರಿಗೆ ಚಂದ್ರಗುಪ್ತನನ್ನು ಪಟ್ಟಗಟ್ಟುವ ಬಗ್ಗೆ ತಿಳಿಸಿ, ಇತ್ತ ಪಟ್ಟಾಭಿಷೇಕದ ಸಿದ್ಧತೆಯನ್ನು ನಡೆಯಿಸಿದರು. ಚಾಣಕ್ಯರ ವಿಷಯದಲ್ಲಿ ಚಂದ್ರಗುಪ್ತನಲ್ಲಿಯೂ, ಅವನ ಪಕ್ಷದವರಾದ ಸರದಾರರಲ್ಲಿಯೂ, ಪ್ರೀತಿವಿಶ್ವಾಸಗಳು ತುಂಬಿ ಹಿಡಿಸಲಾರದೆ ಹೆಕ್ಕಳಿಸುತ್ತಿದ್ದವು. ಪಟ್ಟಾಭಿಷೇಕದ ಮಂಗಲ ಸಮಯವು ಸಮೀಪಿಸಲು, ಸಾಮಂತರಾಜರು ತಮ್ಮ ತಮ್ಮ ದಂಡುದಳದೊಡನೆ ಬಂದು ತಲ್ಪಿದರು. ರಾಜ್ಯದಲ್ಲೆಲ್ಲ ಆನಂದ ಸಾಮ್ರಾಜ್ಯವೇ ರೂಪುಗೊಂಡು ಕೆಲದಿನ ಆಳುತ್ತಿದ್ದಿತು. ಬಹು ವಿಜೃಂಭಣೆಯಿಂದ ಚಂದ್ರಗುಪ್ತನಿಗೆ ಪಟ್ಟವಾಯಿತು. ದೈವಗೇಡಿ

ಯಾಗಿ ಎಲ್ಲಿಯೋ ಒಂದು ಕೊಂಪೆಯಲ್ಲಿ ದೈನ್ಯದಿಂದಲೂ ದುಃಖದಿಂದಲೂ ಕಾಲಯಾಪನೆ ಮಾಡುತ್ತಿದ್ದ ಚಂದ್ರಗುಪ್ತನಿಗೆ ಚಾಣಕ್ಯರ ದಯೆಯಿಂದ ಅರಸುಪಟ್ಟವು ದೊರೆಯಲು, ಚಂದ್ರಗುಪ್ತನು ಕೃತಜ್ಞತೆಯ ಭರದಿಂದ ಮೈಮರೆತವನಾಗಿ ಸಭೆಯೊಳಗೆ ಚಾಣಕ್ಯರ ಪಾದಗಳಿಗೆರಗಿ "ನಿಮ್ಮಿಂದ ಕೃತಾರ್ಥನಾದೆನು; ದೈವಗೇಡಿಯಾದ ನಾನು ದೈವಶಾಲಿಯಾದೆನು" ಎಂದು ತನ್ನನ್ನು ಆಶೀರ್ವಾದಿಸಲು ಬಿನ್ನವಿಸಿದನು. ತನ್ನಿಂದಲೇ ಮೂರ್ತಸ್ವರೂಪಕ್ಕೆ ಬಂದಂಥ ಮೂರ್ತಿಯು ದಿನದಿನಕ್ಕೆ ಉಚ್ಚ್ರಾಯಕ್ಕೇರುವಂತೆ ಚಾಣಕ್ಯರು ಆನಂದ ನಿರ್ಭರರಾಗಿ ಹರಿಸಿ ಆತನಿಗೆ ಅನೇಕ ಬಗೆಯ ರಾಜಧರ್ಮ, ನೀತಿಧರ್ಮಗಳನ್ನು ಹೇಳಿ. ಪರರಾಯರಿಂದ ಸ್ವದೇಶವನ್ನು ರಕ್ಷಿಸಲು ಬಲವಾಗಿ ಪ್ರೇರಿಸಿದನು ರಾಜನೀತಿಯನ್ನು ಕುರಿತು ಒಂದು ಕೌಟಿಲ್ಯಶಾಸ್ತ್ರವೆಂಬುವ ಗ್ರಂಥವನ್ನು ಬರೆದು ಅನೇಕ ವರ್ಷಗಳ ವರೆಗೆ ಮಂತ್ರಿಯಾಗಿ ರಾಜ್ಯವಾಳಿದರು ಚಾಣಕ್ಯರಂಥ ಹಣೆಬರಹಗಾರರು ಜಗತ್ತಿನ ಇತಿಹಾಸದೊಳಗೆ ತೀರ ಸ್ವಲ್ಪು ಜನರು ಸಿಗುತ್ತಾರೆ; ಆದರೆ ಅಂಧಪರು ಚಂದ್ರಗುಪ್ತನಂತಹ ದೈವಶಾಲಿಗಳಿಗೆ ಲಭಿಸಬೇಕೇ ಹೊತ್ತು ಅನ್ಯರಿಗಲ್ಲ.

ಹಿಂದುಸ್ಥಾನದ ಮೊದಲನೇ ಚಕ್ರವರ್ತಿ:—ರಾಜನೀತಿ ನಿಪುಣನಾದ ಚಾಣಕ್ಯ ಮಂತ್ರಿಯ ಮಂತ್ರಾಲೋಚನೆಯಂತೆ ಚಂದ್ರಗುಪ್ತನು ಮೂರಿದ ವೈಭವದಿಂದ ರಾಜ್ಯವಾಳತೊಡಗಿದನು. ಮನುಷ್ಯನಿಗೆ ದೈವವು ಅನುಕೂಲವಾಯಿತೆಂದರೆ, ಹಿಂದೆ ಆತನ ಕೈಯಿಂದ ಆಗದ ನೀಗದಂಥ ಕಾರ್ಯಗಳು ಹಾಯವಾಗಿ ನಾಗುತ್ತವೆ; ದೈವಬಾಟವೆಂಥದು? ಅದರ ಮಾಟಗಾರಿಕೆಯ ಮಂತ್ರಕ್ಕೆ ಶಿಲುಕಿದ ಹಿಂದಿನ ಹೆದರುಕುಳಿಯಾದ ಚಂದ್ರಗುಪ್ತನು ಇದೀಗ ಮಹಾ ಪರಾಕ್ರಮಶಾಲಿಯಾಗಿ ಬೆಳಗಿ, ತಮ್ಮತಮ್ಮೊಳಗೆ ಬಡಿದಾಡುತ್ತಿರುವ ನೆರೆಯಲ್ಲಿರುವ ಚಿಕ್ಕ ಪುಟ್ಟ ರಾಜರುಗಳನ್ನು ತನ್ನ ಬಾಹುಬಲದಿಂದ ಸೋಲಿಸಿ ಮಾಂಡಲಿಕರನ್ನಾಗಿಸಿ, ಚಕ್ರವರ್ತಿ ಪದವಿಯನ್ನೇರಿ ಏಕಛತ್ರಾಧಿಪನಾಗಿ ಆಳಿದನು. ಕ್ರಿ. ಶ. ಪೂ. ೩೦೫ ರ ಸುಮಾರಕ್ಕೆ ಈಗಿನ ಏಸಿಯಮೈನರ, ಸಿರಿಯಾ ಹಾಗೂ ಕೆಲವು ಪೂರ್ವದಿಕ್ಕಿನ ಪ್ರಾಂತಗಳನ್ನಾಕ್ರಮಿಸಿಕೊಂಡು



ಚಂದ್ರಗುಪ್ತ ಮೌರ್ಯನು ಸೆಲ್ಯೂಕೆಸನ ಮಗಳನ್ನು ಮದುವೆಮಾಡಿಕೊಂಡು ಸಂಭ್ರಮದಿಂದ
ಪುರಪ್ರವೇಶಮಾಡುವುದು

(ಪುಟ ೨೨೧)

ತಾನೇ ಧೊರೆಯೆಂದು ಆಳುತ್ತಿದ್ದ ಶಿಕಂದರನ ಸುಭೇದಾರನಾದ ಸೆಲ್ಯುಕಸನೂ, ತನ್ನ ಧೊರೆಯಂತೆ ತಾನೂ ಸಿಂಧುನದಿಯನ್ನು ದಾಟಿ ಹಿಂದು ದೇಶವನ್ನು ಗೆಲಿಯಬೇಕೆಂಬ ಉನ್ನತಾಕಾಂಕ್ಷೆಯಿಂದ ದೊಡ್ಡ ದಂಡಿನೊಡನೆ ಹಿಂದೂ ದೇಶವನ್ನು ನುಗ್ಗಿದನು; ಆದರೆ ಮೊದಲಿನಂತೆ ಈ ಕಾಲಕ್ಕೆ ಹಿಂದೂ ದೇಶವು ನಿರ್ವೀರವಾಗಿರಲಿಲ್ಲ. ಚಂದ್ರಗುಪ್ತನಂತಹ ಪ್ರತಾಪಶಾಲಿಯಾದ ಸೂರ್ಯನು ಇಡೀ ಹಿಂದೂ ದೇಶವನ್ನೆಲ್ಲ ಆಳಿ, ಪರರಾಯರಿಗೆ ಭಯಂಕರನಾಗಿ ತೋರುತ್ತಿದ್ದುದರಿಂದ ಅವನ ಮುಂದೆ ಸೆಲ್ಯುಕಸನ ಬೆಳಕು ಮಸಕಾಗಿ ಶರಣಾಗತನಾಗಬೇಕಾಯಿತು. ಅವನಿಂದ ಪಂಜಾಬ, ಬಲೂಚಿಸ್ಥಾನ, ಅಫಗಾಣಿಸ್ಥಾನ ಪ್ರಾಂತಗಳನ್ನು ತೆಗೆದುಕೊಂಡು ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತನು ಸಲುವಳಿಯಿಂದ ಸೆಲ್ಯುಕಸನಿಗೆ ೫೦೦ ಆನೆಗಳನ್ನು ಸಲ್ಲಿಸಿದನು. ಈಮೇರೆಗೆ ಉಭಯತರಲ್ಲಿ ಸ್ನೇಹ ಬೆಳೆದುದರಿಂದ ಮುಂದೆ ಇದರಿಂದಲೇ ಸೆಲ್ಯುಕಸನು ತನ್ನ ಮಗಳನ್ನು ಚಂದ್ರಗುಪ್ತನಿಗೆ ಕೊಟ್ಟು ಶರೀರಸಂಬಂಧ ಬೆಳೆಸಿದನು. ಸೆಲ್ಯುಕಸನು ತನ್ನ ಪರವಾಗಿ ಮೆಗಾಸ್ಥೆನಿಸ್ ಎಂಬೊಬ್ಬ ರಾಯಭಾರಿಯನ್ನು ಚಂದ್ರಗುಪ್ತನ ಆಸ್ಥಾನದಲ್ಲಿರಿಸಿದನು. ಈತನು ತತ್ಕಾಲೀನ ಚಂದ್ರಗುಪ್ತನ ರಾಜ್ಯದ ಇತಿಹಾಸವನ್ನು ಬರೆದನು; ಆದರ ಬಹುಭಾಗವು ಕಳೆದುಹೋದ್ದರಿಂದ, ಶಿಕ್ಕ ಹಲಕೆಲವು ಸಂಗತಿಗಳನ್ನು ಮುಂದೆ ಕೊಡುವೆವು. ಚಂದ್ರಗುಪ್ತನ ರಾಜ್ಯವು ಅತನ ಜೀವಮಾನದೊಳಗೆ ಉತ್ತರಕ್ಕೆ ಹಿಮಾಲಯದಿಂದ ದಕ್ಷಿಣಕ್ಕೆ ಮೈಸೂರ ಪ್ರಾಂತದ ವರೆಗೂ, ಪೂರ್ವಕ್ಕೆ ಅನಾಮದಿಂದ ಪಶ್ಚಿಮಕ್ಕೆ ಕಂದಹಾರದ ವರೆಗೂ ಹರಡಿಕೊಂಡಿತ್ತು. ಇಡೀ ಭರತಖಂಡವನ್ನು ಅಖಂಡವಾಗಿ ೨೫ ವರ್ಷಗಳವರೆಗೆ ಒಂದೇ ಕೊಡೆಯಿಂದ ಆಳಿದ ಚಕ್ರವರ್ತಿಗಳಲ್ಲಿ ಚಂದ್ರಗುಪ್ತನೇ ಮೊದಲಿಗನು. ತನ್ನ ಗುರುಗಳೂ, ತನ್ನ ದೈವ ತಿರುಗಿಸುವವರೂ ಆದ ಚಾಣಕ್ಯರಿಂದ ರಚಿಸಲ್ಪಟ್ಟ ಕೌಟಲ್ಯಶಾಸ್ತ್ರ (ಅರ್ಥಶಾಸ್ತ್ರ) ಗ್ರಂಥದ ಆಧಾರವಿಟ್ಟುಕೊಂಡು ಪ್ರಜೆಗಳಿಗೆ ಕ್ಷೇಮವಾಗುವಂತೆ ರಾಜ್ಯಭಾರ ನಡೆಯಿಸಿದನು. ಮುಂದೆ ತನಗೆ ದಿವಸಗಳಾದ ಬಳಿಕ ಹಿಂದೂರಾಜರ ಪದ್ಧತಿಯಂತೆ, ಮೋಕ್ಷಮಾರ್ಗವನ್ನನುಸರಿಸಿ ಜನ್ಮ

ಸಾರ್ಥಕಮಾಡಿಕೊಳ್ಳಬೇಕೆಂಬ ಹಂಬಲವು ಅವನಲ್ಲಿ ತಲೆದೋರಿತು. ಆಗ ಯುವರಾಜನಾದ ಬಿಂದುಸಾರನಿಗೆ ರಾಜ್ಯಭಾರವನ್ನೊಪ್ಪಿಸಿ, ತಾನು ಜೈನಮತವನ್ನು ಸೇರಿ, ಅಕಾಲಕ್ಕೆ ಪ್ರಸಿದ್ಧಿಪಡೆದಿರುವ ಭದ್ರಬಾಹುವೆಂಬ ಜೈನಾಚಾರ್ಯರನ್ನು ಹಿಂಬಾಲಿಸಿದನು. ಈ ಸಮಯಕ್ಕೆ ಉತ್ತರಹಿಂದುಸ್ಥಾನದೊಳಗೆ ಭೀಷಣವಾದ ಕ್ಷಾಮವುಂಟಾಗಲು, ಭದ್ರಬಾಹು ಮುನಿಗಳು ತಮ್ಮ ೧೨ ಸಾವಿರ ಜೈನ ಶಿಷ್ಯರೊಡನೆ ದಕ್ಷಿಣಕ್ಕೆ ಸಾಗಿದರು. ಈ ಸಂಘದೊಳಗೆ ಚಂದ್ರಗುಪ್ತನೂ ಇದ್ದನು. ತನ್ನ ಗುರುಗಳ ಸಂಗಡ ಚಂದ್ರಗುಪ್ತನು ಮೈಸೂರ ಸೀಮೆಯ ವರೆಗೆ ಹೋದ ಬಳಿಕ ಶ್ರವಣ ಬೆಳಗುಳದೊಳಗೆ ಭದ್ರಬಾಹು ಮುನಿಗಳು ಬಂದು, ಅಲ್ಲೊಂದು ಬಸದಿಯನ್ನು ಕಟ್ಟಿಕೊಂಡು ಇರುತಿರಲು, ಅವರಿಗೆ ಅವಸಾನ ಕಾಲವು ಪ್ರಾಪ್ತವಾಯಿತು. ಗುರುಗಳು ದೇಹವಿಟ್ಟನಂತರ ಚಂದ್ರಗುಪ್ತನು ೧೨ ವರ್ಷ ಕಾಲ ಸಾಮಾನ್ಯ ಸನ್ಯಾಸಿಯಂತೆ ತಪಸ್ಸು ಮಾಡುತ್ತಿದ್ದು ಮುಂದೆ ಸಲ್ಲೇಖನವೆಂಬ ಉಪವಾಸವ್ರತಗೈದು ಕ್ರಿ. ಶ. ಪೂ. ೨೯೩ ರಲ್ಲಿ ಮರ್ತ್ಯಶರೀರವನ್ನು ತೊರೆಗಿ ಹೋದನು. ಶ್ರವಣಬೆಳಗುಳದ ಚಿಕ್ಕ ಬೆಟ್ಟದ ಮೇಲೆ ಈಗ್ಯೂ ಚಂದ್ರಗುಪ್ತನ ಬಸ್ತಿ ಎಂಬ ಜಿನಾಲಯವನ್ನೂ, ಭದ್ರಬಾಹುವಿನ ಗುಹೆಯನ್ನೂ ಕಾಣಬಹುದು.

ಚಂದ್ರಗುಪ್ತನ ರಾಜಧಾನಿ, ಅರಮನೆ:- ಚಂದ್ರಗುಪ್ತನು ರಾಜ್ಯಭಾರ ಕ್ರಮವನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆಯೇ ನಡೆಯಿಸಿದ್ದನು. ರಾಜಧಾನಿಯಾದ ಪಾಟಲೀಪುತ್ರವು ಶೋಣನದಿಯ ಉತ್ತರದಂಡೆಗೆ ೯ ಮೈಲುಗಳ ವರೆಗೆ ಹರಡಿಕೊಂಡ ಬಂದು ವಿಶಾಲ ಪಟ್ಟಣವಾಗಿತ್ತು. ಪಟ್ಟಣ ಸುತ್ತಲೂ ಮರಗಟ್ಟಿಗೆಯಿಂದ ಮಾಡಿದ ಕೋಟೆ ಗೋಡೆಗಳಿದ್ದು, ಕೋಟೆಗೆ ೬೪ ಬಾಗಿಲುಗಳೂ, ೫೭೦ ಕೊತ್ತಳಗಳೂ ಮೆರೆಯುತ್ತಿದ್ದವು. ಕೋಟೆಯ ಹೊರಬದಿಗೆ ಪರಶತ್ರುಗಳು ಸುಲಭವಾಗಿ ಬರಬಾರದೆಂದು ಯಾವಾಗಲೂ ನೀರಿನಿಂದ ತುಂಬಿರುವದೊಂದು ಆಳವಾದ ಅಗಳತವಿದ್ದಿತು. ಅರಮನೆಯೆಲ್ಲವೂ ಕಟ್ಟಿಗೆಯದಿದ್ದು, ಕಂಬಗಳ ಮೇಲೆ ಚಿನ್ನಬೆಳ್ಳಿಯ ಚಿತ್ರಗಳು ಕಂಗೊಳಿಸುತ್ತಿದ್ದವು. ಅರಮನೆಯಲ್ಲಿರುವ ಚಿತ್ರದ ಕೈಗಾರಿಕೆಯೆಲ್ಲವೂ

ಇರಾಣಿಯ ಪದ್ಧತಿಯನ್ನೇ ಹೋಲುತ್ತಿದ್ದಿತು. ಚಿನ್ನದಿಂದ ಮಡಾಯಿಸಿದ ಪಲ್ಲಕ್ಕಿಯಲ್ಲಿ ಕುಳಿತುಕೊಂಡಾಗಲಿ, ಸಿಂಗರಿಸಿದ ಆನೆಯ ಮೇಲೆ ಕುಳಿತಾಗಲಿ ಚಕ್ರವರ್ತಿಯು ತನ್ನ ಓಲಗಕ್ಕೆ ಬರುವವಾಡಿಕೆ. ಒಪ್ಪೋಲಗದ ಗಾಂಭೀರ್ಯ ವೈಭವವನ್ನು ವರ್ಣಿಸುವದೆಂತು? ಅರಮನೆಯೊಳಗೆ ಅರಸನ ಸುತ್ತಲೂ ಶಸ್ತ್ರಗಳಿಂದ ಸಜ್ಜಾಗಿರುವ ಹೆಂಗಸರ ಮೈಗಾವಲಿರುತ್ತಿತ್ತು. ಅರಮನೆಯಲ್ಲಿ ಆರಾರು ಅಡಿ ಅಗಲವಾಗಿರುವ ಭಂಗಾರದ ಪಾತ್ರೆಗಳನ್ನು ಬಳಿಸುತ್ತಿದ್ದರು.

ಅರಸನ ನಡೆನುಡಿ:— ಬೇಟೆಯಾಡುವ ಉದ್ದಿಶ್ಯ ಅರಸರಿಗಾಗಿ ಕಾಡುಗಳನ್ನು ಕಾಯ್ದಿಡುತ್ತಿದ್ದರು. ಬೇಟೆಯಲ್ಲಿ ಯಾವನಿಂದಾದರೂ ಅರಸನಿಗೆ ಅಡ್ಡಿಯುಂಟಾದರೆ ಅವನಿಗೆ ಶಿಕ್ಷೆ ಕೊಡುತ್ತಿದ್ದರು. ಜಟ್ಟಿಗಳ ಕುಸ್ತಿಗಳನ್ನೂ ಪ್ರಾಣಿಗಳ ಕಾದಾಟಗಳನ್ನೂ ಆಗಾಗ್ಗೆ ರಾಜರ ವಿನೋದಕ್ಕಾಗಿ ಅರಸರು ನಡೆಸುತ್ತಿದ್ದರು. ಆ ಕಾಲಕ್ಕೆ ಇರಾಣಿಯ ರೊಡನಾಟವು ಬಹು ಸಾಮಾನ್ಯವಾಗಿ ನಡೆಯುತ್ತಿದ್ದುದರಿಂದ ಅವರ ಸಂಸ್ಕೃತಿಯ ಹೆಗ್ಗುರುತುಗಳು ತಪ್ಪದೆ ಕಾಣುತ್ತಿದ್ದವು.

ರಾಜ್ಯಭಾರ ನಡಿಸುವ ಕ್ರಮ:- ಚಂದ್ರಗುಪ್ತನು ಸ್ವತಃ ನಂದರನ್ನು ನಿರ್ನಾಮಗೊಳಿಸಿ, ತಾನು ರಾಜನಾದ್ದರಿಂದ, ತನ್ನ ಮೇಲೆಯೂ ಅಂಥ ಪ್ರಸಂಗವೇ ಬರಬಹುದೇನೋ ಎಂದು ಭಯಪಡುತ್ತಿದ್ದನು; ಆದರೆ ಜಾತಿಯಿಂದ ಚಂದ್ರಗುಪ್ತನು ಮೈಯಲ್ಲಿ ಕಣ್ಣು ಮಾಡಿಕೊಂಡು ನಡೆಯುತ್ತಿದ್ದದರಿಂದಲೇ ನಂದರ ಅನುಯಾಯಿಗಳು ಅವನನ್ನು ಕೊಲ್ಲಬೇಕೆಂದು ಮಾಡಿದ ಪ್ರಯತ್ನಕ್ಕೆಡೆಯಾಗಲಿಲ್ಲ. ಚಂದ್ರಗುಪ್ತನು ಮಂತ್ರಿಮಂಡಲವನ್ನೇರ್ಪಡಿಸಿದ್ದರೂ, ಕೊನೆಯ ತೀರ್ಮಾನ ಹೇಳುವ ಅಧಿಕಾರವನ್ನೆಲ್ಲ ತನ್ನ ಅಂಕೆಯಲ್ಲಿಯೇ ಇರಿಸಿಕೊಂಡಿದ್ದನು. ಚಂದ್ರಗುಪ್ತನಾಳಿಕೆಯಲ್ಲಿ ದಂಡನೀತಿಯು ರೂಢಿಯಲ್ಲಿತ್ತು; ಅಪರಾಧಿಯನ್ನು ಬಲವಾಗಿ ದಂಡಿಸಿ, ಅವನಿಂದ ದಂಡವನ್ನು ತೆಗೆದುಕೊಂಡು ಅರಮನೆಯ ಬೊಕ್ಕಸಕ್ಕೆ ಸೇರಿಸುತ್ತಿದ್ದರು. ಕಳ್ಳತನಮಾಡಿದವರಿಗೆ ಎಳ್ಳಷ್ಟು ಕನಿಕರ ತೋರದೆ, ಅವರಿಂದ ನಿಜಸ್ಥಿತಿಯನ್ನು ತೂರಗೆಡಹಲಿಕ್ಕೆ ಹಿಂದುಮುಂದೆ ನೋಡುತ್ತಿರಲಿಲ್ಲ. ಮನೆಗೆ ಬೆಂಕೆಹಚ್ಚಿದವನನ್ನು ಬೆಂಕೆ

ಯಲ್ಲಿಯೇ ನೂಕಿ ಶೀಕ್ಷೆ ಕೊಡುತ್ತಿದ್ದರು. ಶೀಕ್ಷೆಗಳಲ್ಲಿ ದಂಡ, ಅವಯವ ಕಡಿಯುವದು, ಕೊಲ್ಲಿಸುವದು ಇವೇ ಮುಖ್ಯವಾದುವು. ಮನುಷ್ಯನ ಜಾತಿ, ಮನೆತನಗಳನ್ನು ಲಕ್ಷವಾಗಿಟ್ಟುಕೊಂಡು ಅಪರಾಧಿಗೆ ಶೀಕ್ಷೆ ಕೊಡುವದೊಂದು ಆಳಿಕೆಯ ವಿಶೇಷ ಲಕ್ಷಣವಾಗಿದ್ದಿತು. ಚಾಣಕ್ಯನು ಹೇಳಿದ ೧೮ ತೆರದ ದಂಡನೆಗಳಿದ್ದು, ಅವುಗಳಲ್ಲಿಯ ಒಂದೊಂದನ್ನು ಒಂದೊಂದು ದಿನದಂತೆ ಬಳೆಯಿಸುತ್ತಿದ್ದರು. ನಿರಪರಾಧಿಯಾದವನನ್ನು ಅಧಿಕಾರಿಗಳು ಉಬ್ಬಿನಿಂದ ದಂಡಿಸಿದರೆ, ಅವನನ್ನೂ ಶೀಕ್ಷಿಸಬೇಕೆಂದು ಚಾಣಕ್ಯರ ಅರ್ಥಶಾಸ್ತ್ರದಲ್ಲಿ ಹೇಳಿಯಿದೆ. ಚಿಕ್ಕದೊಂದು ವ್ರಾಂತವನ್ನು ನಾಲ್ಕು ಬಗೆಯಾಗಿ ವಿಭಾಗಿಸಿ, ಒಂದೊಂದು ವ್ರಾಂತಕ್ಕೆ ಒಬ್ಬ ಅಧಿಕಾರಿಯನ್ನು ನಿಯಮಿಸಬೇಕೆಂದು ಚಾಣಕ್ಯರ ಮತವಿದೆ. ಇದನ್ನನುಸರಿಸಿ, ರಾಜಧಾನಿಯಲ್ಲಿ ಕೂಡ ನಾಲ್ಕು ಭಾಗ ಮಾಡಿ, ಒಂದೊಂದು ಭಾಗದ ವ್ಯವಸ್ಥೆಯನ್ನು ನೋಡಿಕೊಂಡಿರಲಿಕ್ಕೆ ಒಬ್ಬ ಸ್ಥಾನಿಕನನ್ನು ಗೊತ್ತುಪಡಿಸುತ್ತಿದ್ದರು. ಅವನಿಗೆ ೧೦ ಮಂದಿ ಗೋಪರೆಂಬ ಸಹಾಯಕರಿದ್ದರು. ಪಟ್ಟಣದ ವ್ಯವಸ್ಥೆಯನ್ನು ನೋಡಿಕೊಳ್ಳುವ ಭಾರವೆಲ್ಲವೂ 'ನಾಗರಕ'ರ ತಲೆಯ ಮೇಲಿದ್ದು ಬರುಹೋಗುವವರ ಮೇಲೆ ಅವರು ಕಣ್ಣಿಡಬೇಕಾಗುತ್ತಿತ್ತು. ಗೋಪರೆಂಬುವರ ವಶದಲ್ಲಿ ೧೦ರಿಂದ ೪೦ ಮನೆಗಳ ಲೆಕ್ಕವಿರುವದರಿಂದ ಪ್ರತಿಯೊಬ್ಬರಿಗೆ ತಮ್ಮ ಕಡೆಗಿರುವ ಮನೆತನಗಳ ಹುಟ್ಟುವಳಿ, ಕುಲ, ಗೋತ್ರ, ಜನರ ಜನನ ಮರಣ ಇವೇ ಮುಂತಾದವುಗಳ ಸಂಗತಿಯು ಗೊತ್ತಿರಲಿಕ್ಕೆ ಬೇಕೆಂದು ಕಡ್ತಾಯದ ನಿರ್ಬಂಧವಿದ್ದುದರಿಂದ ಪ್ರಜಾಗಣನೆಯ (ಖಾನೆಸುಮಾರಿ) ಕಾರ್ಯ ಬಹು ಸುಲಭವಾಗಿ ನಡೆಗುತ್ತಿತ್ತು. ಭೂಕಂದಾಯವೆಂದು ರಾಜನಿಗೆ ಹುಟ್ಟುವಳಿ ನಾಲ್ಕರಲ್ಲೊಂದು ಭಾಗವು ಅರಸನದಾಗಿತ್ತು. ಹೊಲಗದ್ದೆಗಳಿಗೆ ನೀರು ಪೂರೈಸುವದರ ಕಡೆಗೆ ರಾಜನು ವಿಶೇಷ ಲಕ್ಷಕೊಡುತ್ತಿದ್ದರಿಂದ, ನೀರಾವರಿಯ ಖಾತೆಯವರಿಂದ ಆ ಕಾರ್ಯ ನಡಿಸುತ್ತಿದ್ದನು; ಮಾತ್ರ ನೀರಾವರಿಯಿಂದ ನೀರು ತೆಗೆದುಕೊಳ್ಳುವವರಿಂದ ನೀರು ತೆರಿಗೆಯನ್ನೆತ್ತುವದೊಂದು ಪದ್ಧತಿಯಿತ್ತು. ಊರಿಂದೂರಿಗೆ ಹೋಗುವ ರಾಜಮಾರ್ಗಗಳನ್ನು ಕಟ್ಟಿಸಿ, ದಾರಿಕಾರ

ರಿಗೆ ಅನುಕೂಲವಾಗಲೆಂದು ಅಲ್ಲಲ್ಲಿ ಅಂತರ ಸೂಚಿಸುವ ಕಲ್ಲುಗಳನ್ನಿಡುತ್ತಿದ್ದರು. ಹೀಗೆ ರಾಜಮಾರ್ಗಗಳನ್ನು ಕಟ್ಟಿಸುವದೊಂದು ಅರಸನ ಕರ್ತವ್ಯವೆಂದು ಅರ್ಥಶಾಸ್ತ್ರದಲ್ಲಿ ಉಕ್ತವಾಗಿದೆ. ತಕ್ಷಶಿಲೆಯಿಂದ ಪಾಟಲೀ ಪುತ್ರದವರೆಗೂ ದೊಡ್ಡದಾದ ರಾಜಮಾರ್ಗವಿದ್ದ ಬಗ್ಗೆ ಉಲ್ಲೇಖಗಳಿವೆ.


ಕೈಗಾರಿಕೆ, ವ್ಯವಸಾಯ:— ಕಲಾಕೋವಿದರಾದ ಶಿಲ್ಪಿಗರು ಸರಕಾರದ ಸೇವಕರೆಂದೆಣಿಸಿರುವದರಿಂದ, ಅವರನ್ನು ಪೀಡಿಸಿದವರನ್ನು ಸರಕಾರದವರು ದಂಡಿಸುತ್ತಿದ್ದರು. ಸರಕುಗಳ ಮೇಲೆ ಸುಂಕವೆತ್ತುತ್ತಿದ್ದರು. ನೆರೆಯ ಮಾರಾಟಕ್ಕೆ ಪ್ರತಿಬಂಧವಿರಲಿಲ್ಲ. ಸುರಾಧ್ಯಕ್ಷನೆಂಬುವನೇ ಇದರ ಅಧಿಕಾರಿ; ಅತನು ನೆರೆಯನ್ನು ಮಾರಲಿಕ್ಕೂ ಕುಡಿಯಲಿಕ್ಕೂ ಅಪ್ಪಣೆ ಕೊಟ್ಟು ನೆರೆಗಾರರಿಂದ ಸುಂಕವೆತ್ತುವನು. ಸುರಾಧ್ಯಕ್ಷನಲ್ಲದೆ, ವಣ್ಯಾಧ್ಯಕ್ಷ, ಕುಲಾಧ್ಯಕ್ಷ, ನಾವಧ್ಯಕ್ಷ, ಸೂತಾಧ್ಯಕ್ಷ ಇವೇ ಮೊದಲಾದ ಹೆಸರುಗಳು ಬೇರೆಬೇರೆ ಖಾತೆಗಳ ವಿದ್ಯಮಾನಗಳನ್ನು ಸೂಚಿಸುತ್ತವೆ.

ದಂಡಿನ ಖಾತೆ:— ಚಂದ್ರಗುಪ್ತನ ಆಳ್ವಿಕೆಯಲ್ಲಿ ಚತುರಂಗಬಲ ಪದ್ಧತಿಯು ರೂಢಿಯಲ್ಲಿತ್ತು. ಚಂದ್ರಗುಪ್ತನ ದಂಡಿನಲ್ಲಿ ಆರು ಲಕ್ಷ ಕಾಲಾಳುಗಳೂ, ಒಂಬತ್ತು ನಾವಿರ ಆನೆಗಳೂ ಇದ್ದವು. ದಂಡಿನೊಳಗೆ ಹಡಗುಪಡೆಯು ಖಾತೆ, ಕಾಲಾಳಿನ ಖಾತೆ, ಕುದುರೆಯ ಸವಾರ ಖಾತೆ, ಗಜಖಾತೆ, ರಥಖಾತೆ ಹೀಗೆ ಆರು ವಿಭಾಗಗಳಿದ್ದು ಇವುಗಳನ್ನೆಲ್ಲ ನೋಡಿಕೊಳ್ಳುವ ಭಾರವು ಒಬ್ಬೊಬ್ಬ ನಂಟರಿಗೆ ಒಪ್ಪಿಸಲಾಗಿದ್ದಿತು; ಇದಲ್ಲದೆ ಗುಪ್ತಚಾರರದೊಂದು ವಿಭಾಗವಿದ್ದಿತು; ಈ ವಿಭಾಗದ ಓರಣೆಯು ಹೊಗಳತಕ್ಕಂಥದೂ ಬಹು ಅಚ್ಚುಕಟ್ಟಿನದೂ ಇದ್ದು ಜರ್ಮನಿಯವರ ಪದ್ಧತಿಯನ್ನು ಅನುಸರಿಸಿತ್ತೆನ್ನಲಿಕ್ಕೇನೂ ಅಡ್ಡಿಯಿಲ್ಲ.

ಪ್ರಜೆಗಳ ಸ್ಥಿತಿ:— ಚಂದ್ರಗುಪ್ತನ ಆಳಿಕೆಯಲ್ಲಿ ಪ್ರಜೆಗಳು ಬಹು ಸುಖವಾಗಿ ಬಾಳಿಕೊಂಡಿದ್ದರು. ಮಳೆಬೆಳೆಗಳು ಸಮೃದ್ಧಿಯಾಗಿರುವದರಿಂದ ಯಾತಕ್ಕೇನೂ ಕೊರತೆಯಿರಲಿಲ್ಲ. ಕಳ್ಳಕಾಕರ ಸುಳಿದಾಟವಿರದ್ದರಿಂದ ಪ್ರಜೆಗಳು ತಮ್ಮ ಮನೆಗಳಿಗೆ ಬೀಗ ಮೊದಲಾದವುಗಳನ್ನು ಹಾಕದೆ, ಹೆಂಗಸರು ಮೈಮೇಲೆ ಬೇಕಾದಷ್ಟು ಬಂಗಾರದ ಒಡವೆಗಳ

ನ್ನಿಟ್ಟುಕೊಂಡು ಭಯವಿಲ್ಲದೆ ಒಬ್ಬರೇ ಸ್ವತಂತ್ರರಾಗಿ ಎಲ್ಲಿಯಾದರೂ ಸುತ್ತಿಕೊಂಡು ಬರುವಷ್ಟರ ಮಟ್ಟಿಗೆ ಇರುತ್ತಿದ್ದರು. ಒಕ್ಕಲಿಗರಿಗೆ ವಿಶೇಷ ಮರ್ಯಾದೆಯಿತ್ತು. ಬೇಕಾದಂಥ ಭೀಕರ ಯುದ್ಧದ ಲಗ್ಗೆ ಹತ್ತಿರಲು ಒಕ್ಕಲಿಗನಿಗೇನೂ ಭಯವಿರಲಿಲ್ಲ. ಅವನು ತನ್ನ ಹೊಲ ಗದ್ದೆಯ ವ್ಯವಸಾಯವನ್ನು ನಿರ್ಭಯವಾಗಿ ನಾಗಿಸುತ್ತಿದ್ದನು. ಜನರು ಸತ್ಯಕ್ಕಾಗಿ ನ್ಯಾಯಲಿಕ್ಕೂ, ತಮ್ಮ ಕೈಮೆ ತೋರಿಸುವದಕ್ಕಾಗಿ ರಣಾಂಗಣದ ಮೇಲೆ ನೆತ್ತರ ಬಸಿಯಲಿಕ್ಕೂ ಎಳ್ಳಷ್ಟಾದರೂ ಹಿಂದೆಗೆಯುತ್ತಿರಲಿಲ್ಲ. ಹೆಂಗಸರು ಮನೆತನದ ಕಾರ್ಯಗಳಲ್ಲಿಯೇ ಯಾವಾಗಲೂ ಆಸಕ್ತರಾಗಿದ್ದುಕೊಂಡು ಮನೆಗೆ ಬಂದವರ ಆದರಾತಿಥ್ಯವನ್ನು ನೋಡಿಕೊಂಡು ಬಳ್ಳೇ ಶುದ್ಧವಾಗಿರುತ್ತಿದ್ದರು. ಈ ಬಗೆಯಾಗಿ ಎಲ್ಲರೂ ತಮ್ಮ ತಮ್ಮ ಧರ್ಮಕ್ಕನುಗುಣವಾಗಿ ನಡೆಯುತ್ತಿದ್ದುದರಿಂದ ಈ ಕಾಲದ ಮಹಿಮೆಯನ್ನು ಎಷ್ಟು ಹೊಗಳಿದರೂ ಸಾಲದೆಂಬುವಂತಿದೆ. ಪರಕೀಯ ರಾಯಭಾರಿಯಾದ ಮೆಗಾಸ್ಥೆನೀಸನಿಗೆ ಭಾರತೀಯರ ತತ್ಕಾಲೀನ ಸ್ಥಿತಿಗತಿ, ನಡೆನುಡಿ, ಧರ್ಮ, ಶೀಲ ಅನೇ ಮುಂತಾದವುಗಳನ್ನು ಪ್ರತ್ಯಕ್ಷವಾಗಿ ಕಂಡು ಸೋಜಿಗಪಡಿಸಿತ್ತೆಂಬುದು ಅತನೇ ಬರೆದಿಟ್ಟಿರುವ ಮೇಲಿನ ವೃತ್ತಾಂತದಿಂದ ಬಯಿದು ಕಾಣುತ್ತದೆ.

ಬಿಂದುಸಾರ:– ಚಂದ್ರಗುಪ್ತನ ತರುವಾಯ ಅವನ ಮಗನಾದ ಬಿಂದುಸಾರನು ಕ್ರಿ. ಶ. ಪೂ. ೨೯೫ ರಿಂದ ೨೭೦ ರ ವರೆಗೆ ಆಳಿದನು. ಈತನು ತಂದೆಯಂತೆ ವೀರನಿದ್ದರೂ, ಅತನಂತೆ ಯುದ್ಧದೊಳಗೆ ಕಾಲ ಕಳೆಯುವೇಕಾದ ಪ್ರಸಂಗ ಬರಲಿಲ್ಲ. ಚಾಣಕ್ಯನೊಡನೆ ಬಿಂದುಸಾರನು ಪೂರ್ವ ಪಶ್ಚಿಮ ಸಮುದ್ರಗಳ ನಡುವಿನ ದೇಶವನ್ನು ಗೆದ್ದನೆಂದು ತಿಳಿಯುತ್ತದೆ. ಈತನ ಓಲಗದೊಳಗೆ ಗ್ರೀಕ ರಾಯಭಾರಿ ಸೈಮೆಕಾಸ ಎಂಬುವನೂ, ಇಜಿಪ್ತದಿಂದೊಬ್ಬ ರಾಯಭಾರಿಯೂ ಹೀಗೆ ಇಬ್ಬರು ಪರರಾಷ್ಟ್ರ ಮಂತ್ರಿಗಳಿದ್ದರು. ಬಿಂದುಸಾರನು ತನ್ನ ಮಗನಾದ ಯುವ ರಾಜ ಅಶೋಕನನ್ನು ಕೆಲವು ವಾಯವ್ಯ ಹಾಗೂ ಪಶ್ಚಿಮ ಪ್ರಾಂತಗಳಿಗೆ ಮಾಂಡಲಿಕನನ್ನಾಗಿ ಸೊತ್ತುಪಡಿಸಿದ್ದನು. ಈತನ ಆಳ್ವಿಕೆಯಲ್ಲಿ ಒಡಮೂಡುವಂಥ ಭಾರತೀಯ ಸಂಗತಿಗಳಾವೂ ಜರಗಲಿಲ್ಲ.



ಕಳಿಂಗ ದೇಶದೊಂದಿಗೆ ಯುದ್ಧವಾದ ನಂತರ ಅಶೋಕನ ಶಾಂತಿ ಮತ್ತು ಪ್ರೇಮಶಾಸನದ ಒಕ್ಕಣೆಯನ್ನು ಕೇಳಿ ಪ್ರಜೆಗಳು ಸಂತೋಷದಿಂದ ವಿಜಯೋತ್ಸವನ್ನಾಚರಿಸುವಿಕೆ. [ಪುಟ ೨೨೭–೨೮]

ಅಶೋಕ:– ಕ್ರಿ. ಶ. ಪೂ. ೨೭೫–೨೩೨ ರ ವರೆಗೆ. ಬಿಂದುಸಾರನ ತರುವಾಯ ಅಶೋಕನು ತನ್ನ ಅಣ್ಣತಮ್ಮಂದಿರೊಡನೆ ಬಡಿದಾಡಿ ತಾನೇ ಪಟ್ಟವೇರಿದನು. ಚಂದ್ರಗುಪ್ತನು ಆಳಿಬಾಳಿ ಹೋದನಂತರ ಅವನ ಮನೆತನದಲ್ಲಿ ಹುಟ್ಟಿದ ಶ್ರೇಷ್ಠವಾದ ವಿಭೂತಿ ಪುರುಷನೆಂದರೆ ಅಶೋಕನೇ ಸರಿ. ಈತನಲ್ಲಿ ಮೊಟ್ಟಮೊದಲು ಹೇಳುವಷ್ಟೇನೂ ಧರ್ಮಬುದ್ಧಿಯಾಗಲಿ, ಪ್ರಜೆಗಳ ವಿಷಯದಲ್ಲಿ ಅನುರಾಗವಾಗಲಿ ಕಂಡುಬರಲಿಲ್ಲ. ಎಲ್ಲರಂತೆ ಈತನು ವಿಲಾಸದಲ್ಲಿಯೇ ಮೈಮರೆತು ಕಾಲಹರಣ ಮಾಡುತ್ತಿದ್ದನು. ಆದರೆ, ಕಲಿಂಗರು ಅಶೋಕನ ವಿರುದ್ಧವಾಗಿ ಬಂಡಾಯವೆಬ್ಬಿಸಿದ್ದೊಂದೇ ತಡ; ಅಶೋಕನಿಗೆ ಬಲಗಾಲವು ಸಂಧಿಸಿತು. ಕಲಿಂಗದೇಶಕ್ಕೆ ದಂಡೆತ್ತಿ ಹೋಗಿ ಅಶೋಕನು ಅವರನ್ನು ಮುರಿಬಡಿದು ತನ್ನ ಪಾದಕ್ಕೆರಗುವಂತೆ ಮಾಡಿದನು. ಈ ಯುದ್ಧದೊಳಗೆ ಅಶೋಕನು ೧ ಲಕ್ಷ ಜನರ ನೆತ್ತರ ಕಾವಲಿ ಹರಿಸಿದ್ದಲ್ಲದೆ, ತನ್ನ ದೇಶಕ್ಕೆ ಕಲಿಂಗ ದೇಶದಿಂದ ಬಂದೂವರೆ ಲಕ್ಷ ಜನರನ್ನು ಸೆರೆಯಾಳಾಗಿ ಒಯ್ದನು. ಇದುವೇ ಅಶೋಕನ ಮೊದಲಿನ ಹಾಗೂ ಕೊನೆಯ ಕಾಳಗವು. ಈ ಕಾಲಕ್ಕೆ ಬೆಳೆಯುತ್ತಿದ್ದ ಬುದ್ಧನ ತತ್ವಗಳು ಮೆಲ್ಲಮೆಲ್ಲಗೆ ಅಶೋಕನ ಮನಸಿಗೆಹಿಡಿದು ಉಪಗುಪ್ತನೆಂಬ ಗುರುವು ದೊರೆತುದರಿಂದ ಕಲಿಂಗ ದೇಶವನ್ನು ಗೆಲಿಯುವಾಗ್ಗೆ ಅಶೋಕನಲ್ಲಿ ಸಂಚಾರವಾಗಿದ್ದ ರಣದೇವತೆಯ ಭೀಕರ ಸ್ವರೂಪವು ಈ ಯುದ್ಧವಾದ ನಂತರ ಮೆಲ್ಲಮೆಲ್ಲಗೆ ಇಳಿಯತೊಡಗಿ, ಕೊನೆಗೆ ಅದುವೇ ಅವನಿಗೆ ಒಳ್ಳೆಯ ದಾರಿಗೊಯ್ಯುವದೊಂದು ಮೆಟ್ಟಿಲಾಗಿ ಪರಿಣಮಿಸಿತು. ಅಶೋಕನ ಮನಸ್ಸು ತಿರುಗಿತು. ಮರಿಗಳಂತೆ ಎಷ್ಟೊಂದು ಜನರನ್ನು ಕೊಲೆಮಾಡಿದ ಬಗ್ಗೆ ಅಶೋಕನು ಮರಮರನೆ ಮರುಗಿ ತನ್ನ ಘೋರ ಕೃತಿಯ ಬಗ್ಗೆ ಪಶ್ಚಾತ್ತಾಪಪಟ್ಟು, ಅಂದು ಮೊದಲ್ಗೊಂಡು ತನ್ನ ಸಾಮ್ರಾಜ್ಯದೊಳಗೆ ಶಾಂತಿಯ ಹಾಗೂ ಪ್ರೇಮದ ರಾಜ್ಯವನ್ನು ನಡಿಸಿಯೇ ತೀರಬೇಕೆಂದು ಪಣಗಟ್ಟಿದನು. ಮತ್ತು ಸರ್ವರಿಗೂ ಈ ವಿಷಯವು ತಿಳಿಯಬೇಕೆಂದು “ಈಗ ನಡೆದು ಹೋಗಿರುವ ಕೊಲೆಯ ಮಾತು ಬೇಡ. ಮುಂದೆ ಈ ಕೊಲೆಯಲ್ಲಿ ನಡೆದಂಥ ಒಂದೆರಡು

ಘೋರ ಕಾರ್ಯಗಳಾದರೂ ನನ್ನ ರಾಜ್ಯದೊಳಗೆ ಒದಗಿದ್ದೇ ಆದರೆ ನನಗೆ ಬಹು ವ್ಯಸನವಾಗುವದು. ನನ್ನನ್ನು ಕುರಿತು ಯಾರಾದರೂ ಅಪರಾಧ ಮಾಡಿದರೂ ಅದನ್ನು ನಾನು ಸೈರಿಸುವೆನು. ಕಾಡು ಜನರು ಕೂಡ ಒಳ್ಳೇ ರೀತಿಯಿಂದ ನಡೆದುಕೊಂಡು ಸುಖದಿಂದ ಬಾಳಿರಬೇಕೆಂದು ಸಮ್ರಾಟನ ಅಪೇಕ್ಷೆಯಿದ್ದು, ಎಲ್ಲರೂ ಸಂಯಮನ, ಮನಃಶಾಂತಿಗಳಿಂದೊಡಗೂಡಿ ಬಾಳತಕ್ಕದ್ದು. ಧರ್ಮದಿಂದ ಜನರನ್ನು ಗೆಲಿಯುವದೇ ನಿಜವಾದ ಗೆಲವು" ಎಂದು ಮುಂತಾಗಿ ರಾಜಶಾಸನ ಬರೆಯಿಸಿದನು. ಅಶೋಕನು ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಬರೆದ ಶಾಸನಗಳಲ್ಲಿ "ಪ್ರಜೆಗಳೇ ನನ್ನ ಮಕ್ಕಳು" ಎಂದು ನುಡಿದು ಅವರನ್ನು ಒಳ್ಳೇ ಪ್ರೇಮದಿಂದಲೂ, ಸಮಾಧಾನದಿಂದಲೂ ರಕ್ಷಿಸಬೇಕೆಂದೂ ಹೇಳಿದ್ದಲ್ಲದೆ, ಕಾಡುಮೇಡುಗಳಲ್ಲಿರುವ ಜನರ ಪ್ರವೃತ್ತಿಯನ್ನೊಲಿಸಿ, ಅವರನ್ನು ಸನ್ಮಾರ್ಗಕ್ಕೆಳೆಯಲಿಕ್ಕೂ ಅಲ್ಲಲ್ಲಿ ಬೌದ್ಧಮತಪ್ರಚಾರಕರನ್ನು ಕಳಿಸಿದನು.

ಅಶೋಕ ಚಕ್ರವರ್ತಿಯ ರಾಜನೀತಿ:– ಅಶೋಕ ಚಕ್ರವರ್ತಿಯ ಧರ್ಮಛತ್ರದ ನೆರಳಲ್ಲಿ ಇಡೀ ಹಿಂದುಸ್ಥಾನವು ತಣಿದಿದ್ದಲ್ಲದೆ, ಅಫಗಾಣಿಸ್ಥಾನ, ಬಲೂಚಿಸ್ಥಾನ, ಕಾಶ್ಮೀರ, ನೇಪಾಳಗಳು ಕೂಡ ವಿಶಾಲವಾದ ಪಟವೃಕ್ಷದ ನೆರಳಿನಲ್ಲಿ ನಾವಿರಾರು ಪ್ರಾಣಿಗಳು ಆಶ್ರಯಿಸಿಕೊಂಡಿರುವಂತೆ ನಿಶ್ಚಿಂತೆಯಿಂದಿದ್ದವು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ ಅಶೋಕನ ರಾಜ್ಯಪದ್ಧತಿಯು ನಡೆದಿದ್ದಿತು. ಮೇಲಾಗಿ ಅರಸನು ಕೂಡ ತನ್ನ ದಿನದ ಆಚರಣೆಯನ್ನು ಅರ್ಥಶಾಸ್ತ್ರದೊಳಗೆ ಹೇಳಿದಂತೆ ರಾಜನು ಇರಬೇಕಾದ ರೀತಿಯಲ್ಲಿಯೇ ಇಟ್ಟುಕೊಂಡಿದ್ದನು. ತೇಜಃಪೂರ್ಣವಾದ ತ್ಯಾಗಬುದ್ಧಿಯಿಂದಲೂ ಭೂತದಯೆಯಿಂದಲೂ ಆತನ ಮನಸು ತಿಳಿದುಕೊಂಡದ್ದರಿಂದ ಪರಂಪರೆಯಿಂದ ಬಂದ ಮಾಂಸಾಹಾರ, ಬೇಟಿ, ರಾಜವಿಲಾಸ ಅವುಗಳನ್ನೆಲ್ಲ ಅರಮನೆಯಿಂದ ಗಡಿಪಾರು ಮಾಡಿದನು. ಈತನು ಪ್ರಜೆಗಳ ಸಣ್ಣಾಪುಟ್ಟ ಗೋಳುಗಳನ್ನು ಸ್ವತಃ ಕೇಳಿಕೊಂಡು ನಿವಾರಿಸಲಿಕ್ಕೆ ಯತ್ನಿಸುತ್ತಿದ್ದನು. ತಾನು ತನ್ನ ಪೂರ್ವ ವಯಸ್ಸಿನಲ್ಲಿ ಪ್ರಜೆಗಳ ಸುಖದುಃಖಗಳನ್ನು ಲಕ್ಷಿಸದೆ ಉನ್ಮತ್ತನಾಗಿದ್ದುದಕ್ಕೆ ಕಡು ಕಳವಳಗೊಂಡು ಬಂದು

ಸಲ ಅಶೋಕನು ಅಂದದ್ದು—"ಕಳೆದ ಹಲವು ವರ್ಷಗಳಲ್ಲಿ ಪ್ರಜೆಗಳ ಕ್ಷೇಮ ಸಮಾಚಾರವನ್ನು ಕೇಳಿಕೊಂಡು, ಅವರ ಹಿತಕ್ಕಾಗಿ ಹೆಣಗಿರಲಿಲ್ಲ. ಆದರೆ ಇಂದು ಮೊದಲು ನಾನು ಆಟ ನೋಟ, ಊಟ ಉಡಿಗೆ, ವಿಲಾಸ ನಿದ್ರೆ, ಕಾರ್ಯಕಲಾಪ ಮೊದಲಾದವುಗಳಲ್ಲಿ ತೊಡಗಿರುವದನ್ನು ಎಣಿಸದೆ ಅಧಿಕಾರಿಗಳು ಬೇಕಾದ ಕಾರ್ಯಕ್ಕಾಗಿ ನಾನಿದ್ದೆಡೆಯಲ್ಲಿ ಬರಬಹುದು. ಪ್ರಜೆಗಳ ಕಾರ್ಯಕ್ಕಾಗಿ ನಾನು ಯಾವಾಗಲೂ ಸಿದ್ಧನಿರುವೆ." ಜಗತ್ತಿನಲ್ಲಿ ಇದುವರೆಗೆ ರಾಜ್ಯವಾಳಿ ಹೋದ ಯಾವ ರಾಜರ ಹೃದಯದಲ್ಲಿಯೂ ಪ್ರಿಯದರ್ಶಿಯಾದ ಅಶೋಕನಷ್ಟು ಪ್ರಜೆಗಳ ಬಗ್ಗೆ ಕರ್ತವ್ಯಜಾಗೃತಿಯ ಜ್ಯೋತಿಯು ಉರಿಯುತ್ತಿದ್ದುದು ನೋಡಲು ಶಿಗುವದು ದುರ್ಲಭ; ನಾಲದುದಕ್ಕೆ ನಮಗೆ ರಾಮ ಚಂದ್ರ, ಹರಿಶ್ಚಂದ್ರ, ಧರ್ಮರಾಜನಂತಹ ಬಂದೆರಡು ಉದಾಹರಣೆಗಳು ಸಿಕ್ಕುತ್ತವೆ. ಅಶೋಕನು ತನ್ನ ರಾಜ್ಯದೊಳಗೆ ಅಲ್ಲಲ್ಲಿ "ತಾಯಿ ತಂದೆಗಳ ಮಾತು ಕೇಳತಕ್ಕದ್ದು. ಶಿಷ್ಯನು ಗುರುವಿನೊಡನೆ ವಿನೀತನಾಗಿ ನಡೆಯುಕ್ಕದ್ದು; ಅಲ್ಲದೆ ಸೇವಕರನ್ನು ಅಕ್ಕರೆಯಿಂದ ನೋಡಿಕೊಳ್ಳತಕ್ಕದ್ದು. ದಾನಧರ್ಮವನ್ನಾಚರಿಸತಕ್ಕದ್ದು. ಪರಧರ್ಮದಲ್ಲಿ ಆದರವಿಡತಕ್ಕದ್ದು." ಎಂದು ಮುಂತಾಗಿ ಪ್ರಜೆಗಳ ಶಿಕ್ಷಣಕ್ಕಾಗಿ ಉನ್ನತವಿಚಾರಗಳನ್ನೊಡಗೊಂಡ ಬೋಧಪಚನಗಳನ್ನು ಬಂಡೆಗಲ್ಲುಗಳ ಮೇಲೆ ಬರೆಸಿದ್ದನು.* ದಾರಿಕಾರರ ದೆಸೆಯಿಂದ ರಾಜಮಾರ್ಗದೊಳಗೆ ಛಾವಿ, ಛತ್ರಗಳನ್ನು ಇಡಿಸಿದ್ದು, ನಡೆಯುವಾಗ್ಗೆ ಅವರಿಗೆ ಬಿಸಿಲು ತಾಕಬಾರದೆಂದು ಇಬ್ಬದಿಗೆ ಮಾವು ಸಾಗೂ ಆಲದಮರಗಳನ್ನು ಹಚ್ಚಿಸಿದನು. ಪ್ರಾಣಿಗಳಿಗಾಗಿಯೂ, ಮನುಷ್ಯರಿಗಾಗಿಯೂ ಆಸ್ಪತ್ರೆಗಳನ್ನು ಇಟ್ಟಿದ್ದನೆಂಬುದು ಗೊತ್ತಾಗುತ್ತದೆ. ಐದೈದು ವರ್ಷಕ್ಕೊಮ್ಮೆ ತನ್ನ ವರಿಷ್ಠ ಅಧಿಕಾರಿಗಳನ್ನು ತಾಲೂಕಿನ ಸ್ಥಿತಿಗತಿಗಳನ್ನು ನೋಡಿಕೊಂಡು ಬರಲಿಕ್ಕೆ ಕಳಿಸುತ್ತಿದ್ದನು. ಇದರಲ್ಲಿ ಪ್ರಜೆಗಳ ಗೋಳು ಕೇಳಿಕೊಳ್ಳು

* ಈ ಕಲ್ಲುಗಳು ನಿಜಾಂ ಹೈದರಾಬಾದ ಸೀಮೆಯಲ್ಲಿರುವ ಮಸ್ಕಿ ಎಂಬಲ್ಲಿಯೂ ಮೈಸೂರ ಪ್ರಾಂತದೊಳಗಿನ ಮೊಳಕಾಲ್ಮೂರು ತಾಲೂಕಿನಲ್ಲಿಯೂ ಇತ್ತೀಚೆ ದೊರಕಿವೆ.

ವದೂ ರಾಜ್ಯಭಾರ ಕ್ರಮವು ಸರಿಯಾಗಿ ನಾಗಿರುವದೋ ಎಂಬುದನ್ನು ಲಕ್ಷಪೂರ್ವಕವಾಗಿ ನೋಡುವದೂ, ಸದ್ಧರ್ಮದ ಪ್ರಸಾರವಾಗಬೇಕೆಂಬುದೂ ಇವೇ ಅವನ ಬಳಗಿನ ಇಂಗಿತಗಳಾಗಿದ್ದವು. ಬೌದ್ಧಮತದೊಳಗೆ ತನ್ನ ನಂಬಿಗೆಯಿದ್ದು, ತಾನೊಬ್ಬ ಆ ಮತದ ಕಟ್ಟಾಳಿದ್ದರೂ, ಬೇರೆ ಮತದವರನ್ನೆಂದೂ ಅಶೋಕನು ಜರಿಯುವದನ್ನರಿಯನು. ಮಿಕ್ಕ ಪಂಥದವರನ್ನು ಸಹಾನುಭೂತಿಯಿಂದಲೇ ಕಂದು ಅವರಿಗೂ ದಾನಧರ್ಮಾದಿಗಳನ್ನು ವಿತರಣೆಯಿಂದ ನಡಿಸುತ್ತಿದ್ದನು. ಈ ಬಗೆಯಾಗಿ ಪ್ರಜೆಗಳಿಗೆ ತಂದೆಯಾಗಿ, ಹೆತ್ತ ತಂದೆಗಳನ್ನು ನಾಚಿಸುವಷ್ಟರ ಮಟ್ಟಿಗೆ ಅಶೋಕನು ಅವರುಗಳಲ್ಲಿ ಪ್ರೀತಿ, ವಿಶ್ವಾಸಗಳನ್ನು ತೋರ್ಪಡಿಸಿರುವದು ಅನ್ಯಾದೃಶವಾದುದು. ದೇವತೆಗಳಿಗೂ ಅನುಸರಿಸಲು ಮೇಲುಪಂಕ್ತಿಯಾಗಿರುವ ಆತನೀ ಸದ್ಗುಣಗಳಿಗೆ ಮೆಚ್ಚಿದ್ದರಿಂದಲೇ ಅವನಿಗೆ 'ದೇವಾನಾಂ ಪ್ರಿಯದರ್ಶಿ' ಎಂಬ ದೈವಿಕವಾದ ಹೆಸರು ಭೂಷಣವಾಗಿತ್ತು. ಆದರೆ ಅವನಿಗೆ ಹೆಸರು ಭೂಷಣವಾಗಿತ್ತೆಂದು ಹೇಳುವದಕ್ಕಿಂತ ಅವನೇ ಆ ಹೆಸರಿಗೆ ಅಲಂಕಾರಪ್ರಾಯನಾಗಿದ್ದನೆಂದರೆ ಅತ್ಯುಕ್ತಿಯಾಗದು.

ಕಲಾಭಿವೃದ್ಧಿ:— ಮೌರ್ಯಕಾಲೀನರಾದ ಶಿಲ್ಪಿಗರು ತಮ್ಮ ಕೈಗಾರಿಕೆಯಲ್ಲಿ ಬಹು ನಿಷ್ಣಾತರಿದ್ದರು. ಅವರಿಗೆ ತಕ್ಕ ಸಹಾಯ ಸಂಪತ್ತಿಯನ್ನು ಅಶೋಕನು ಒದಗಿಸಿಕೊಟ್ಟದ್ದರಿಂದ ವಾಙ್ಮಯ ಹಾಗೂ ಕಲೆಗಳು ಬಹುಮಟ್ಟಿಗೆ ಪುರೋಭಿವೃದ್ಧಿಯನ್ನೈದಿದವು. ಬೌದ್ಧ ಭಿಕ್ಷುಗಳು ಜನಶಿಕ್ಷಣದ ಪವಿತ್ರಕಾರ್ಯ ಕೈಕೊಂಡಿದ್ದರಿಂದ ಆ ಕಾರ್ಯವು ಸರಾಗವಾಗಿ ನಾಗಿತ್ತು. ಈತನ ಅಳ್ವಿಕೆಯಲ್ಲಿ ಅನೇಕ ಗ್ರಂಥಗಳು ಬರೆಯಲ್ಪಟ್ಟಿದ್ದರೂ, ಅವೀಗ ಶಿಗುವದಿಲ್ಲ. ಈತನ ಕಾಲದ ಬೌದ್ಧವಿಹಾರ ಹಾಗೂ ಸ್ತೂಪಗಳಲ್ಲಿ ವ್ಯಕ್ತವಾಗಿರುವ ಕೈಗಾರಿಕೆಯ ಕೈಮಾಟವು ಆಶ್ಚರ್ಯಾವಹವಾಗಿವೆ. ಇವು ನಾಂಜಿ, ಹಾಗೂ ಗ್ವಾಲ್ಹೆರ ಸಂಸ್ಥಾನಗಳಲ್ಲಿವೆ.

ಬೌದ್ಧಧರ್ಮದ ಮಹಾ ಸಭೆ:— ಅಶೋಕನ ಮನಸ್ಸು ಬುದ್ಧತತ್ವಗಳಲ್ಲಿ ಹಗಲಿರಳು ಮುಳುಗೇಳುತ್ತಿದ್ದಿತು. ಬುದ್ಧಮತದ ಶ್ರದ್ಧಾ

ವಂತ ಹಾಗೂ ನಿಜವಾದ ಅನುಯಾಯಿಯಾದ್ದರಿಂದ, ಬಹು ದಿವಸ ಗಳಿಂದ ನಮೆದು ಬಂದಿರುವ ಬುದ್ಧಮತ ತತ್ವಗಳನ್ನು ಚಾಕಿಸಿ, ಶುದ್ಧೀ ಕರಿಸಬೇಕೆಂಬ ಉತ್ಕಟವಾದ ಅಪೇಕ್ಷೆಯಿಂದ ಪ್ರೇರಿತನಾಗಿ ಕ್ರಿ. ಶ. ಪೂ. ೨೪೦ ರಲ್ಲಿ ಬಂದು ಮಹಾ ಸಭೆಯನ್ನು ನಮೆಯಿಸಿದನು. ಈ ಸಭೆಗೆ ದಶದಿಕ್ಕುಗಳಿಂದ ಬುದ್ಧಭಿಕ್ಷುಗಳು ನೇರಿದ್ದರು. ಅನೇಕರ ಪರೀಕ್ಷೆ ಚರ್ಚೆ, ವಾದವಿವಾದಗಳು ೯ ತಿಂಗಳ ವರೆಗೆ ನಾಗಿದ್ದವು. ಈ ಸಭೆ ಯಿಂದ ಬುದ್ಧಮತ ತತ್ವಗಳು ಹೆಚ್ಚು ತಿಳಿಗೊಂಡವು; ಕಳಿಗೊಂಡವು; ಬೆಳಿಗೊಂಡವು. ಬುದ್ಧಮತದಲ್ಲಿರುವ ತನ್ನ ಈಡಿಲ್ಲದ ನಂಬುಗೆಯನ್ನು ನಿಜವೆಂದು ತೋರಿಸುವದಕ್ಕಾಗಿಯೇ ಈ ಮಹಾರಾಯನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಬೌದ್ಧಧರ್ಮಕ್ಕೆ ಧಾರಯೆರೆದನು. ತಮ್ಮನಾದ ಮಹೇಂದ್ರನೆಂಬವನೂ, ತಂಗಿಯಾದ ಸಂಘಮಿತ್ರೆಯೆಂಬ ವಳೂ ಇವರೀರ್ವರೂ ಒಟ್ಟಾಗಿ ಬುದ್ಧಧರ್ಮವನ್ನು ಹೆಚ್ಚಿಸಲಿಕ್ಕೆ ಸಿಂಹ ಲದ್ವೀಪದಕ್ಕೆ ನಾರಿ, ಅಲ್ಲಿರುವ ಜನರಿಗೆ ಬೌದ್ಧಧರ್ಮತತ್ವಗಳನ್ನು ತಿಳಿ ಸಿದರು. ಇವರ ಪ್ರಯತ್ನದಿಂದ ಅಲ್ಪಾವಧಿಯಲ್ಲಿಯೇ ಸಿಂಹಲದ್ವೀ ಪವೇ ಬೌದ್ಧಮಯವಾಯಿತು. ಅದರಂತೆ ಜಪಾನ, ಚೀನ, ತಿಬೇಟ, ಸುಮಾಮ ಮೊದಲಾದ ದೇಶಗಳು ಸಹ ಈ ಧರ್ಮೋಪದೇಶದಿಂದ ಚೇತ ರಿಸಿಕೊಂಡೆದ್ದು ತಮ್ಮ ಹೊಸ ಸಂಸ್ಕೃತಿಯಿಂದ ಬೆಳಗತೊಡಗಿದವು. ಈಗಲೂ ಮೇಲ್ಕಾಣಿಸಿದ ಜನಾಂಗಗಳಲ್ಲಿ ಬೌದ್ಧಧರ್ಮವು ತಲೆಯೆತ್ತಿ ಕೊಂಡು ಮೆರೆಯುತ್ತಿದೆ.

ಬೌದ್ಧಸಂಪ್ರದಾಯ ಪ್ರಸಾರ:– ತನ್ನ ಗುರುವಾದ ಉಪಗು ಪ್ತನ ಉಪದೇಶದಂತೆ, ಅಶೋಕಮಹಾರಾಯನು ಧರ್ಮೋಪದೇಶಕರ ದೊಂದು ತಂಡನ್ನು ಸಿದ್ಧಪಡಿಸಿ, ಬುದ್ಧಮತದ ದಿವ್ಯತತ್ವಗಳನ್ನು ಭೂಮಂಡಲದೊಳಗೆಲ್ಲ ಬಿತ್ತಿ ಬೀರಿ, ಧರ್ಮಧ್ವಜವನ್ನು ನಿಲ್ಲಿಸಲು, ಅವರನ್ನು ಏಸಿಯಾ, ಆಫ್ರಿಕಾ ಯುರೋಪ ಮೊದಲಾದ ಖಂಡಗಳಿಗೆ ಕಳಿಸಿದನು. ಬನವಸೆ, ಮಹಿಷಮಂಡಲ, ಕಾಂಚೀಪುರಗಳಿಗೆ ಧರ್ಮ ಪ್ರಚಾರಕರನ್ನು, ಕಳಿಸಿ, ಎಲ್ಲೆಲ್ಲಿಯೂ ಅಹಿಂಸೆಯ ಸಂದೇಶವನ್ನು ಹರಡಿದನು. ಮುಂದೆ ಸ್ವಲ್ಪಾವಕಾಶದೊಳಗೆ ಅಶೋಕನು ತೀರ್ಥ

ಯಾತ್ರೆಗಾಗಿ ತನ್ನ ಗುರುವಿನೊಡನೆ ಭಿಕ್ಷುವೇಷದಿಂದಲೇ ಹೊರ ಹೊಂಟನು. (ಕ್ರಿ. ಶ. ಪೂ. ೨೪೯ ರಲ್ಲಿ) ಹೀಗೆ ಯಾತ್ರೆಗಾಗಿ ಹೊರಟವನು ಮೊದಲು ಬುದ್ಧಜನ್ಮಸ್ಥಾನವನ್ನು ನೋಡುವದಕ್ಕಾಗಿ ಲುಂಬಿನೀ ಉಪವನಕ್ಕೆ ಹೋಗಿ, ಮನದಣಿಯುವಂತೆ ಬುದ್ಧನನ್ನು ಕುರಿತು ಹೊಗಳಿ ಹಾಡಿ, ಎಲ್ಲರಿಗೆ ತಿಳಿಯಲಿಕ್ಕೆಂದು ಅಲ್ಲಿ ಬುದ್ಧಜನ್ಮಭೂಮಿ ಇದೇ ಎಂಬುವದನ್ನು ದೃಢಪಡಿಸುವದೊಂದು ಶಿಲಾಸ್ತಂಭವನ್ನು ನಿಲ್ಲಿಸಿ ತಾನು ಮರಳಿದನು. ತಾನು ಸಿಂಹಾಸನವನ್ನೇರುವ ಮೊದಲು ಕೆಲವರ ಮತವಾಗಿದ್ದ ಬುದ್ಧಧರ್ಮವು ಈಗ ಜಗತ್ತಿನ ಧರ್ಮವಾದುದನ್ನು ಕಣ್ಣಾರೆ ಕಾಣುವ ಸುದೈವವು ಅಶೋಕನಿಗೆ ಲಭಿಸಿತು. ಪ್ರಪಂಚದಲ್ಲಿ ಎಲ್ಲೆಲ್ಲಿಯೂ, ಪ್ರೇಮಸಾಮ್ರಾಜ್ಯದ ಅಳಿಕೆಯಾಗುವದನ್ನು ನೋಡುವದೇ ಧರ್ಮಜೀವನನಾದ ಅತನ ಜೀವವಾನದ ಹೆಗ್ಗುರಿಯಲ್ಲದೆ ಮತ್ತೇನು ಇರಲಿಕ್ಕೆ ಸಾಧ್ಯವು? ಪ್ರಜೆಗಳ ಹಿತಕ್ಕಾಗಿಯೇ ತನ್ನ ಪ್ರಾಣವನ್ನು ಸಹ ಒಲಾಗಿಡುವ ಈ ಮಹಾತ್ಮನು ರಾಜರ್ಷಿಯಂತೆ ೩೭ ವರ್ಷಕಾಲ ತನ್ನ ಪ್ರೇಮದ ಅಳಿಕೆಯಿಂದ ಪ್ರಜೆಗಳನ್ನು ತಣಿಸಿ, ತಕ್ಷಶಿಲೆಯೆಂಬಲ್ಲಿ ಜಗತ್ತಿನ ರಂಗಸ್ಥಳದಿಂದ ಮಾಯವಾದನು.

ಮೌರ್ಯರ ಮುಳುಗು:– ವೈಭವಶಾಲಿಯಾದ ಚಂದ್ರಗುಪ್ತ ಮಗೂ ಅಶೋಕ ಇವರೀರ್ವರ ಘನತೆಯಿಂದ ಅಳಿಕೆಯಲ್ಲಿ ವಿದ್ವಾಂಸರಿಗೆ ಅನೇಕ ಬಗೆಯಿಂದ ಪ್ರೋತ್ಸಾಹನ ದೊರೆಯುತ್ತಿದ್ದುದರಿಂದ ಪಾಣಿನಿಯು ವ್ಯಾಕರಣಗ್ರಂಥಕ್ಕೆ ಕಾತ್ಯಾಯನೆಂಬವನು ವಾರ್ತಿಕವನ್ನು ಬರೆದನು. ವಾತ್ಸಾಯನನು ಕಾಮಸೂತ್ರಗಳನ್ನು ಬೈಲಿಗೆ ತಂದನು. ಶಾಲಿಹೋತ್ರನೆಂಬುವ ಪಂಡಿತನು ಪಶುಶಾಸ್ತ್ರ ನಿರ್ಮಿಸಿದನು. ಪ್ರಸಿದ್ಧ ಪಂಚತಂತ್ರವೆಂಬ ಗದ್ಯಗ್ರಂಥವು ಮೌರ್ಯರ ಅಳಿಕೆಯಲ್ಲಿಯೇ ಬೆಳಕು ಕಂಡಿತು. ಆದರೆ ದೀಪವು ಅರುವ ಮುಂದೆ ದೊಡ್ಡದಾಗುವಂತೆ ಮುಳುಗುವ ಕಾಲಕ್ಕೆ ಈ ವಂಶಕ್ಕೆ ಅಶೋಕ ಮಹಾರಾಯನಂಥ ಧರ್ಮಾತ್ಮನಾದ ಧೊರೆಯು ದೊರೆತುದೇ ಕೊನೆಯಾಯಿತು. ಅಶೋಕನ ನಂತರ ದಶರಥ, ಬೃಹದ್ರಥ ಮೊದಲಾದವರು ಇಂತಹ ಅಪಾರವಾದ ಸಾಮ್ರಾಜ್ಯವನ್ನು ಅಂಕೆಯಲ್ಲಿಡುವಷ್ಟು ಸಮ

ರ್ಥರಲ್ಲದ್ದರಿಂದ, ಸ್ವತಂತ್ರರಾಗುವ ದಾರಿಯನ್ನೇ ಕಾಯುತ್ತಿದ್ದ ಕಲಿಂಗ ದೇಶಿಕರು ಮೌರ್ಯರ ಅಪ್ಪಿಕೆಯ ನೊಗವನ್ನು ಎತ್ತಿ ಬೀಸಾಡಿ ಸ್ವತಂತ್ರರಾದರು; ಇತ್ತ ಕೃಷ್ಣಾ, ಗೋದಾವರಿನದಿಗಳ ಮಧ್ಯದಲ್ಲಿರುವ ಆಂಧ್ರಭೃತ್ಯರೂ ನಿರಂಕುಶರಾದರು. ಬ್ರಹದ್ರಥನು ಕೈಲಾಗದವನಿದ್ದುದರಿಂದ ಅವನ ದಣ್ಣಾಯಕನಾದ ಪುಷ್ಯಮಿತ್ರನೆಂಬ ಬ್ರಾಹ್ಮಣ ವೀರನು ದಂಡಿನವರೆದುರಿನಲ್ಲಿಯೇ ಇದೀಗ ಪಟ್ಟವನ್ನು ಸಾಧಿಸುವ ಸಮಯವೆಂದರಿತು ಬ್ರಹದ್ರಥನನ್ನು ವಿಶ್ವಾಸಘಾತದಿಂದ ಕೊಲ್ಲಿಸಿ ತಾನೇ ಪಟ್ಟಕ್ಕೆ ಕುಳಿತನು. ಹೀಗೆ ಬಂದುಸಲ ನೆಲಹಿಡಿದ ಮೌರ್ಯ ವಂಶವು ಕತೆಯ ಪರೆಗೂ ತಲೆಯೆತ್ತದೆ, ಸೊರಗುತ್ತ ಕೊನೆಗೆ ಕುರುಹಿಲ್ಲದೆ ಕರಗಿಹೋಯಿತು. ಮೌರ್ಯರ ಮುಳುಗೆಂದರೆ ಬಂದು ಬಗೆಯಿಂದ ಬೌದ್ಧಧರ್ಮಕ್ಕೆ ಮರಣಪ್ರಾಯವಾದ ಪೆಟ್ಟು ಎಂತಲೇ ಎಣಿಸುವಲ್ಲೇನೂ ಸಂದೇಹವಿಲ್ಲ. (ಬೌದ್ಧಧರ್ಮವೆಂದರೆ ಆರ್ಯಧರ್ಮದ ಕಣ್ಮುಂದೆ ಇಂದು ಹುಟ್ಟು ನಾಳೆ ಕಸ್ತೆರೆದು ಬಿಕ್ಕುವಗು; ಅಂದಮೇಲೆ ಅದರ ಬೆಳಕು ಆರ್ಯಧರ್ಮದ ಮುಂದೆ ಹೆಚ್ಚುವದೆಂತು? ಹೆಚ್ಚಿದರೂ ಮಿಂಚಿನಂತೆ ಕ್ಷಣಹೊತ್ತೆಂಬುದನ್ನರಿತುಕೊಂಡೇ ಬುದ್ಧ ಅರಸರಾಗಲಿ, ಯಾವ ಅರಸರಾಗಲಿ, ಧರ್ಮದಿಂದ ಆಳುತ್ತಿರುವರೆಂಬ ಸಮಾಧಾನ ಹಚ್ಚಿಕೊಂಡು ತತ್ಕಾಲೀನ ಆರ್ಯಪಂಗಡದ ನಾಮಾಜಿಕರು ತೆಪ್ಪಗೆ ಬಾಯಿ ಮುಚ್ಚಿಕೊಂಡು ಮಾಗಿಯ ಕೋಗಿಲೆಯಂತೆ ಇದ್ದರು. ಮೇಲಾಗಿ ಅಶೋಕನ ಮರಣಾನಂತರ ಬೌದ್ಧಧರ್ಮಕ್ಕಾರೂ ಎತ್ತಿ ಹಿಡಿಯುವ ಮಹಾತ್ಮರು ಸಿಗದ್ದರಿಂದ, ಬಲುಮಟ್ಟಿಗೆ ಅದರ ತಲೆ ಕೆಳಗಾಗತೊಡಗಿತು. ಮನುಷ್ಯನಿಗೆ ಬಂದೊಂದು ಗೃಹಬಲ ಬಂದಾಗ ಅವನ ಅದೃಷ್ಟವು ಬಮ್ಮೆಲೆ ತನ್ನಷ್ಟಕ್ಕೇ ತಾನೇ ತೆರೆದು, ಕೊಂಪೆಯೊಳಗೆ ಕಷ್ಟದಿಂದ ಕಾಲಕಳೆಯುತ್ತಿರುವವಗೆ ರಾಜ್ಯಲಕ್ಷ್ಮಿಯು ಮಾಲೆ ಹಾಕುವದುಂಟು. ಸಿಂಹಾಸನದ ಮೇಲೆ ಮೆರೆಯುವವರು ಜನರು ನೋಡುತ್ತಿರುವ ಹಾಗೆಯೇ ಸಾಮಾನ್ಯ ಜನರಂತೆ ಹೊಟ್ಟೆಗೆ ಹಿಟ್ಟಿಲ್ಲವೆಂದು ಯೋಚಿಸುವಷ್ಟರ ಮಟ್ಟಿಗೆ ಆಗುವದೂ ಉಂಟು. ಈ ಮೇರೆಗೆ ಚಂದ್ರಗುಪ್ತನಂಥ ಮನುಷ್ಯನಿಗೆ ದೈವದ ಜೊತೆಗೆ ಅವನ ಕರ್ಮಗಳೂ,

ಗ್ರಹಗಳೂ ಅವನ ಬುದ್ಧಿ ಮೊದಲಾದ ಸಾಮಗ್ರಿಗಳೂ ಅನುಕೂಲವಾ ಗುತ್ತಿರುವಂತೆ ರಾಷ್ಟ್ರದ ಉನ್ನತಿಗೂ ಇವೆಲ್ಲವುಗಳು ಬೇಕೇ ಬೇಕಲ್ಲದೆ ಬೇರೆ ಮಾತು ಎತ್ತಲಿಕ್ಕಿಲ್ಲವೆಂಬ ಮಾತು ಇತಿಹಾಸದಿಂದ ತಿಳಿಯು ವದು. ದೈವವೆಂಬುದು ಅದೃಷ್ಟವು; ಅಂದರೆ ಕಣ್ಣಿಗೆ ಕಾಣಿಸುವ ವಸ್ತುವಲ್ಲ. ಭಗವಂತನಲ್ಲಿ ಬೇಡಿಬಂದವರಿಗೆ ದೈವೇಚ್ಛೆಯಲ್ಲಿ ಸಂಪೂರ್ಣ ವಿಶ್ವಾಸವಿರುವ ಮೂಲಕ ಅವರು ಎಡೆಬಿಡದೆ ಮೈಮರೆತು ಸ್ವಪ್ರಯ ತ್ನಕ್ಕೆ ಕೈಹಾಕುತ್ತಾರೆ. ಅವರು ಪ್ರಯತ್ನಿಸುತ್ತಾರೆನ್ನುವದಕ್ಕಿಂತ ಅದೃ ಷ್ಟನಾದ ದೈವವು ಅವರಿಗೆ ಒಳಗಿಂದಲೇ ಪ್ರಯತ್ನಮಾರ್ಗಕ್ಕೆ ಬಲ ವಂತವಾಗಿ ನೂಕುತ್ತಿರುವದೆಂದರೆ ಹೆಚ್ಚು ಸರಿಯಾಗುವದು. ಆದರೆ ಅದೃಷ್ಟವನ್ನು ನೋಡುವ ಭಾಗ್ಯವು ಎಷ್ಟು ಜನರ ಪಾಲಿಗೆ ಬರುವದು? ಚಂದ್ರಗುಪ್ತ ಅಶೋಕನಂತಹ ಮಹನೀಯರಿಗೆ ಅದು ಕಣ್ಮುಂದೆ ನಲಿ ದಾಡುತ್ತಿರುತ್ತದೆ. ಅವರಿಗೆ ತಮ್ಮ ಪ್ರಯತ್ನದಲ್ಲಿ ಅಲ್ಲಾಡದ ನಂಬಿಗೆ ಯಿರುವದರಿಂದ ಸಂಶಯದ ಸುಂಕವು ಸೋಂಕುವದಿಲ್ಲ. ತಮ್ಮ ಭವಿ ಷ್ಯವನ್ನು ಅವರು ಈ ತೊಗಲಿನ ಕಣ್ಣುಗಳಿಂದ ನೋಡದೆ ಒಳಗಣ್ಣಿ ನಿಂದ ನೋಡುತ್ತಿದ್ದು ಆಗಾಗ್ಗೆ ತಮ್ಮ ಮುಂದಣ ಅಭ್ಯುದಯದ ಕಣ ಸುಗಳನ್ನು (ದೃಷ್ಟಾಂತ) ಗಳನ್ನು ಕಾಣುತ್ತಿರುವದುಂಟು. ಈ ಭರ ವಸೆಯೇ ಅವರನ್ನು ಬಲವಾಗಿ ಒಳಗಿನಿಂದ ಮೊದಲು ಮನೋಭೂಮಿ ಕೆಯಲ್ಲಿ ಅಲೆಗ್ಲಾಲ ಕಲೆಗ್ಲಾಲವನ್ನುಂಟು ಮಾಡಿ ಕಾರ್ಯಕ್ಕೆ ಪ್ರೇರಿ ಸುತ್ತದೆ. ಮನುಷ್ಯನ ಅಧವಾ ಜನಾಂಗದ ಶರೀರ ಹಾಗೂ ಮಾನಸ ಶಾಸ್ತ್ರವನ್ನು ಅನುಭವದ ಒರೆಗಲ್ಲಿಗೆ ಹಚ್ಚಿದ ಸಿದ್ಧಾಂತಗಳೇ ಇತಿಹಾಸಕ್ಕೆ ಜೀವವಾಗಿರುತ್ತವೆಂಬುವ ಮಾತನ್ನೊಂದು ನಾವು ಜ್ಞಾಪಕದಲ್ಲಿಟ್ಟು ಕೊಂಡರೆ, ಇತಿಹಾಸವೆಂದರೆ ನಮಗೊಂದು ಕೈಗನ್ನಡಿಯಾಗುವದು.

ರಾಷ್ಟ್ರಜೀವನ:— ಮೌರ್ಯ ಅರಸರ ಕಾಲದಲ್ಲೆಲ್ಲ ರಾಜ್ಯಪದ್ಧ ತಿಯು ಚಂದ್ರಗುಪ್ತನು ಹಾಕಿಕೊಟ್ಟ ಮೇಲುಪಂತ್ತಿಯನ್ನೇ ಅನುಸರಿ ಸಿದ್ದಿತು. ಅಶೋಕನೊಬ್ಬನು ಮಾತ್ರ ತನ್ನ ಮನಸಿಗೆ ಸರಿಯಾಗುವಂತೆ ಅಷ್ಟಿಷ್ಟು ಸರಿಪಡಿಸಿಕೊಂಡನು. ಭಾರತೀಯ ಧರ್ಮರಾಜ್ಯವಾದ ನಂತರ ಹಿಂದೂಜನರು ಇಷ್ಟರಮಟ್ಟಿಗೆ ಜೀವನನೌಖ್ಯ, ಸ್ವಾತಂತ್ರ್ಯ

ನೌಷ್ಯಗಳನ್ನನುಭವಿಸಿರಲಿಲ್ಲ. ಅಶೋಕನಂತೂ, ಪ್ರಜಾರಂಜನೆಯ ಕಾರ್ಯದೊಳಗೆ ಎಲ್ಲ ರಾಜರಿಗಿಂತ ಮುಂದುವರಿದು, ಚಂದ್ರಗುಪ್ತನಿಂದ ಕಟ್ಟಲ್ಪಟ್ಟು, ಬಿಂದುಸಾರನಿಂದ ನಡೆಯಿಸಲ್ಪಟ್ಟ ಪ್ರಜೆಗಳ ಸುಖವೆಂಬ ಗೋಪುರವನ್ನು ತಾನು ಪೂರ್ತಿಗೊಳಿಸಿ ಕಳಸವನ್ನಿಟ್ಟನು. ಪ್ರಜೆಗಳ ಸುಖವೇ ತನ್ನ ಸುಖವೆಂಬುವಷ್ಟು ಅಶೋಕಮಹಾರಾಯನು ಉದಾರಹೃದಯವುಳ್ಳವನಾದ್ದರಿಂದ ಆವಾಗಿನ ರಾಷ್ಟ್ರಜೀವನವು ಎಷ್ಟು ಸ್ವರ್ಗೀಯ ಜೀವನವಾಗಿರಬಹುದೆಂಬುದನ್ನು ಯಾರಾದರೂ ತರ್ಕಿಸಬಹುದು.

———

೯ ನೇ ಪ್ರಕರಣ.

ಅನಾಯಕರ ಕಾಲವು.

(ಕ್ರಿ. ಶ. ಪೂರ್ವ ೩೨೦–೨೩೦ ವರೆಗೆ) (೩೨೦–೨೩೦ ಶ್ರೀ ಶ.)

ಸಂಗಮನೆತನ:– ಮೌರ್ಯರ ಆಳ್ವಿಕೆಯ ಕೀಲಗಳು ಸಡಲಿ, ಅದು ಕ್ಷೀಣದೆಶೆಗೆ ಹೋಗುವದಕ್ಕಾದ ಕಾರಣಗಳನ್ನು ನಾವು ಈ ಮೊದಲೇ ಕೊಟ್ಟಿರುವೆವು. ಅದೇನು ಕಾರಣವೋ ಅಶೋಕನಿಂದ ಕಳೆಗುಂದುತ್ತ ಬಂದ ಹಿಂದೂದೇಶವು ಮೊದಲು ಕೊಂಚ ತಲೆಯೆತ್ತಿದರೂ, ಮುಂದೆ ಎಷ್ಟೋ ವರ್ಷಗಳ ವರೆಗೆ ವೀರರು ಹುಟ್ಟಲಿಲ್ಲ. ಸಂಗಮನೆತನಕ್ಕೆ ಸೇರಿದ ಪುಷ್ಯಮಿತ್ರನು ತನ್ನ ಧೊರೆಯನ್ನು ಕೊಲ್ಲಿಸಿ, ಅವನಿಂದ ಸಿಂಹಾಸನವನ್ನು ಕಸಿದುಕೊಂಡು ರಾಜ್ಯವಾಳಿದನು. ಪಾಟಲೀಪುತ್ರವನ್ನೇ ಈತನು ತನ್ನ ರಾಜಧಾನಿಯನ್ನಾಗಿಟ್ಟನು. ಈ ಮೊದಲೇ ಹಿಂದುಸ್ಥಾನದ ಸಮೃದ್ಧಿ ಸೌಭಾಗ್ಯಗಳ ವಾಸನೆಯು ಅನ್ಯ ದೇಶದವರಿಗೆ ತಗಲಿದ್ದರಿಂದ, ಸ್ವಾಭಾವಿಕವಾಗಿ ಅವರಾದರೂ ಹಿಂದೂ ದೇಶಕ್ಕೆ ದಾಳಿಯಿಡಬೇಕೆಂದು ಹೊಂಚುಹಾಕುವಲ್ಲೇನು ಸಂಶಯ? ಹಿಂದೂದೇಶವು ಕೆಲವೊಂದು ದೌರ್ಭಾಗ್ಯಕ್ಕೆಡೆಯಾಗಿ ಅಲ್ಲಿ ವೀರರು ಹುಟ್ಟದಿದ್ದರೆ, ಬೇರೆ ನಾಡಿನಲ್ಲಿಯೂ ಅವರು ಹುಟ್ಟದಿರುವದುಂಟೇ? ಈ ಕಾಲಕ್ಕೆ ಬಾಕ್ಟ್ರಿಯಾದ ಅರಸನಾದ ಮೀನಾಂಡರ ಎಂಬುವ ವೀರನು ಕಾಬೂಲ ಪಂಜಾಬ ಪ್ರಾಂತಗಳಲ್ಲಿ ರಾಜ್ಯವಾಳುತ್ತಿದ್ದನು. ತನ್ನ ತೋಳತೀಟತೆಯನ್ನು ತೀರಿಸಿಕೊಂಡು ತನ್ನ ರಾಜ್ಯ ವಿಸ್ತಾರಗೊಳಿಸಲು ಈತನು ಹಿಂದೂದೇಶಕ್ಕೆ ದಂಡೆತ್ತಿಬಂದು ಸಿಂಧಪ್ರಾಂತ, ಕಾಠೇವಾಡ, ಮಧುರೆ ಮೊದಲಾದವುಗಳನ್ನು ಸುಲಿದು ಕೈವಶಮಾಡಿಕೊಂಡು ರಾಜಧಾನಿಯಾಗಿದ್ದ ಪಾಟಲೀಪುತ್ರವನ್ನೂ ಬಾಯಲ್ಲಿ ಹಾಕಿಕೊಳ್ಳ

ಬೇಕೆಂಬೆಣಿಕೆಯಲ್ಲಿದ್ದನು. ಈ ಮಿನಾಂಡರನು ಸ್ವತಃ ಗ್ರೀಕನಿದ್ದು ಬೌದ್ಧಮತವನ್ನವಲಂಬಿಸಿದ್ದನು. ಈತನಿಗೂ ಪುಷ್ಯಮಿತ್ರನಿಗೂ ಕಾಳಗವೆಸಗಿ ಹಿಂದೂಜನರ ಪುಣ್ಯದಿಂದ ಪುಷ್ಯಮಿತ್ರನಿಗೇ ಈ ಹೋರಾಟದೊಳಗೆ ಗೆಲವಾಯಿತು. ಯವನರು ಹಿಂದೂದೇಶದೊಳಗೆ ನುಗ್ಗಲಿಕ್ಕೆ ಯತ್ನಿಸಿದ್ದು ಇದುವೇ ಎರಡನೇ ಸಲವು. ಪುಷ್ಯಮಿತ್ರನಿಗೆ ಅಗ್ನಿಮಿತ್ರನಂಥ ಮುಮ್ಮಗನೂ ಲಭಿಸಿದ್ದರಿಂದ ಬಲುಮಟ್ಟಿಗೆ ರಾಜ್ಯಗಳಿಸುವ ಕಾರ್ಯದೊಳಗೆ ಇವರೀರ್ವರಿಂದ ಅವನಿಗೆ ಸಹಾಯವಾಯಿತು; ಮೇಲಾಗಿ ಅಗ್ನಿಮಿತ್ರನು ವಿದರ್ಭದೇಶವನ್ನು ಗೆದ್ದುಕೊಂಡದ್ದರಿಂದಂತೂ ಅವನು ಗರಿಗಟ್ಟಿಕೊಂಡಂತಾದನು. ಚಂದ್ರಗುಪ್ತನಿಂದ ಮೊದಲುಗೊಂಡು ಇತ್ತೀಚೆ ಬಹುದಿನಗಳಿಂದ ವೈದಿಕಧರ್ಮಧ್ವಜವನ್ನೆತ್ತಿಹಿಡಿದು, ಪರರಾಯರ ದಾಳಿಗಳಿಂದ, ಅದಕ್ಕೆ ತಗಲಿದ ಧೂಳು ಮಣ್ಣನ್ನು ಕೊಡವಿಹಾಕಲಿಕ್ಕಾರೂ ವೈದಿಕಧರ್ಮಾಭಿಮಾನಿಗಳಾದ ವೀರರು ಹುಟ್ಟಿರದ್ದರಿಂದ ವೈದಿಕಧರ್ಮಕ್ಕೆ ಹಲವು ಬಗೆಯಿಂದ ಅರಿಷ್ಟಕಾಲವು ಒದಗಿದಂತಿತ್ತು. ಅದೀಗ ಪುಷ್ಯಮಿತ್ರನಂಥ ವೀರಪುರುಷನ ಮೈದೋರುವಿಕೆಯಿಂದ ಲೋಪವಾಯಿತು.

ಪುಷ್ಯಮಿತ್ರನ ಅಶ್ವಮೇಧಯಜ್ಞ:- ನಾರ್ವಭೌಮತ್ವದ ಹಕ್ಕನ್ನು ನ್ಯಾಪಿಸಲೋಸುಗ ಪುಷ್ಯಮಿತ್ರನು ವೈದಿಕಅರಸರ ಪರಂಪರೆಯಂತೆ, ಅಶ್ವಮೇಧಯಾಗವನ್ನು ಮಾಡುವ ತನ್ನ ಮನದೆಣಿಕೆಯನ್ನು ನಿರ್ಧರಿಸಿ, ಒಂದು ಕುದುರೆಯನ್ನು ಬಿಟ್ಟು, ಅದರ ರಕ್ಷಣೆಗಾಗಿ ವಸುಮಿತ್ರನನ್ನು ದೊಡ್ಡ ಸೇನೆಯೊಂದಿಗೆ ಕಳಿಸಿದನು. ಅನೇಕ ಯವನರಾಜರನ್ನು ಸೋಲಿಸಿ, ವಸುಮಿತ್ರನು ಅಜೇಯನಾಗಿ ಹಿಂದಿರುಗಿದನು. ಈ ದಿಗ್ವಿಜಯದಿಂದ ಮತ್ತಷ್ಟು ಪುಷ್ಯಮಿತ್ರನಿಗೆ ಸಂತೋಷವಾಗಿ ಹಿಗ್ಗಿ ಅಶ್ವಮೇಧಯಾಗದ ಸಿದ್ಧತೆಯನ್ನು ನಡಿಸಿ, ಸರ್ವ ರಾಜರಿಗೂ ಯಜ್ಞಕ್ಕೆ ಬರಲು ಹೇಳಿ ಕಳಿಸಿದನು. ಈ ಯಜ್ಞಸಮಾರಂಭವನ್ನು ನೋಡಲು, ತತ್ಕಾಲೀನ ಪ್ರಖ್ಯಾತರಾದ ಪಾಣಿನೀಭಾಷ್ಯಕಾರರಾದ ಶ್ರೀಪತಂಜಲಿಯವರು ಬಂದಿದ್ದರಂತೆ! ಅಹಿಂಸಾ ಪ್ರತಿಪಾದಕವಾದ ಬುದ್ಧಧರ್ಮತತ್ವಗಳಿಂದ ಅನೇಕ ವರ್ಷಗಳಿಂದ ಯಾರ ದೃಷ್ಟಿಗೂ ಬೀಳದ

ಅಶ್ವಮೇಧಯಜ್ಞದಂತಹ ವೈದಿಕಧರ್ಮ ಪುನರುಜ್ಜೀವನದ ಮಹೋತ್ಸವ ಸಮಾರಂಭವನ್ನು ನೋಡಿ ವೈದಿಕರ ಕಣ್ಣಿನ ಪಾರಣೆಯಾಯಿತು. ಬೌದ್ಧಧರ್ಮದ ಸದ್ದಡಗಿ, ಅದಕ್ಕೆ ಬದಲಾಗಿ ವೈದಿಕಧರ್ಮವು ಮತ್ತೆ ತನ್ನ ಪೂರ್ವಸ್ಥಾನಕ್ಕೆ ಬಂದು, ಆರ್ಯಜನಾಂಗವನ್ನು ಆಳುತ್ತಿದ್ದುದಕ್ಕೆ ಅಶ್ವಮೇಧವೆಂಬುದೊಂದು ನಿದರ್ಶಕವಾಗಿತ್ತು. ಹೀಗೆ ಪುಷ್ಯಮಿತ್ರನು ವೈದಿಕಧರ್ಮದ ಕಟ್ಟಾಳಾಗಿದ್ದರೂ, ಬೌದ್ಧಧರ್ಮದ ಮಠಗಳನ್ನು ಸುಟ್ಟು, ಬೌದ್ಧಭಿಕ್ಷುಗಳ ಕೊಲೆಮಾಡಿದ್ದರಿಂದ ಭಿಕ್ಷುಗಳು ಹಿಂದೂದೇಶವನ್ನು ಬಿಟ್ಟು ಬೇರೆ ದೇಶವನ್ನಾಶ್ರಯಿಸಬೇಕಾಯಿತೆಂದು ಬೌದ್ಧರ ಆಕ್ಷೇಪಣೆ; ಮತ್ತು ಮನುಷ್ಯಸ್ವಭಾವವನ್ನು ಕುರಿತು ನಾವು ಕೊಂಚ ಆಳವಾಗಿ ವಿಚಾರಿಸತೊಡಗಿದರೆ ಎಷ್ಟು ಮಾತ್ರಕ್ಕೂ ಇದು ಆಗದಮಾತೆಂದು ಖಂಡಿತವಾಗಿ ಹೇಳಲಿಕ್ಕಾಗದು. ಮನುಷ್ಯನಿಗೆ ಮುಯ್ಯಕ್ಕೆ ಮುಯ್ಯವೆಂಬ ರಾಜಸಕಲ್ಪನೆಯಿಂದ ಎಷ್ಟು ಆನಂದವಾಗುತ್ತದೆಯೋ ಅಷ್ಟು "ವಿಷ ಕುಡಿಸಿದವನಿಗೆ ಹಾಲು ಕುಡಿಸಬೇಕೆಂ" ಬ ಕಲ್ಪನೆಯಿಂದ ಆನಂದವಾಗದು. ವಿಷವಿಕ್ಕಿದವರಿಗೆ ಹಾಲನ್ನವನ್ನು ಇಕ್ಕುವವರು ನಾಸ್ತಿಕರು, ದೇವಗಣದವರು. ಪುಷ್ಯಮಿತ್ರನು ಇಷ್ಟರಮಟ್ಟಿಗೆ ನಾಸ್ತಿಕನಿದ್ದನೆಂದು ಅನ್ನಲಿಕ್ಕೆ ಆಧಾರಗಳಿಲ್ಲ. ಪುಷ್ಯಮಿತ್ರನಂಧವರು ಭಾರತೀಯ ಚರಿತ್ರೆಯಲ್ಲಿ ಕೈಮೇಲೆ ಎಣಿಸುವಷ್ಟು ಕೂಡ ಇಲ್ಲ. ನಮ್ಮ ಜನಾಂಗದೊಳಗೆ ಎಷ್ಟೋ ಅನ್ಯಮತದವರು ಪರಸ್ಪರ ಸಂತೋಷ ಸಹಾನುಭೂತಿಗಳಿಂದಿರುವ ಸಂಗತಿಗಳೇ ನಮಗೆ ಹೆಚ್ಚಾಗಿ ದೊರಕುತ್ತವೆಯೇ ಹೊರತು ಪುಷ್ಯಮಿತ್ರನಂತಹ ಸಂಗತಿಗಳು ಬಹು ವಿರಲ. ಪುಷ್ಯಮಿತ್ರನು ಈ ತರುವಾಯ ೨೫ ವರ್ಷ ಆಳಿದನು. ಈ ಮನೆತನದಲ್ಲಿ ಹತ್ತುಮಂದಿ ರಾಜರು ಆಳಿದರು. ಯಾರೂ ಹೇಳುವಷ್ಟು ಬೆಳಕಿಗೆ ಬರಲಿಲ್ಲ; ಆದರೂ ಹಣಕುತ್ತ ಮಿಣಕುತ್ತ ಈ ರಾಜವಂಶವು ೧೨೨ ವರ್ಷಗಳ ವರೆಗೆ ಜೀವ ಹಿಡಿದುಕೊಂಡಿದ್ದಿತು. ಮುಂದೆ ಪುಷ್ಯಮಿತ್ರನು ಮೊದಲು ಯಾವ ದುಷ್ಟ ಕಾಯಕದಿಂದ ತನ್ನ ಪಟ್ಟವನ್ನು ಗಳಿಸಿದ್ದನೋ, ಅದೇ ಕಾಯಕದಿಂದಲೇ ವಸುದೇವನೆಂಬ ಬ್ರಾಹ್ಮಣ ಮಂತ್ರಿಯು ಈ ದೊರೆಯನ್ನು ಕೊಲ್ಲಿಸಿ ತಾನು ಪಟ್ಟವೇರಿದನು.

ಆಂಧ್ರರು:– ಈ ವಂಶದವರಿಗೆ ಕಾಣ್ವರೆಂದು ಹೆಸರು. ಇವರ ಮನೆತನದಲ್ಲಿ ಯಾವ ವೀರಪುರುಷರು ಹುಟ್ಟದಿದ್ದರೂ ೫೦–೬೦ ವರ್ಷಗಳವರೆಗೆ ಇವರ ಆಳಿಕೆಯು ಹಾಗೂ ಹೀಗೂ ಕುಂಟುತ್ತ ನಡೆದಿತ್ತು. ಈ ವಂಶಕ್ಕೆ ಸೇರಿದ ಕೊನೆಯ ಅರಸನನ್ನು ಆಂಧ್ರ ಅಥವಾ ಶಾಂತವಾಹನ ಅರಸರು ಕೊಲೆ ಮಾಡಿದ್ದರಿಂದ ಆಂಧ್ರರ ಆಳಿಕೆಯೇ ಪ್ರಬಲವಾಯಿತು. ಆಂಧ್ರರು ತೆಲಗಕರ್ನಾಟಕರೆಂದು ಕೆಲವರನ್ನುವರು; ಆದರೂ ಅದಿನ್ನೂ ನಿರ್ಧಾರವಾಗಿಲ್ಲ. ಚಂದ್ರಗುಪ್ತನ ಕಾಲಕ್ಕೆ ಆಂಧ್ರರು ಕೃಷ್ಣಾ, ಗೋದಾವರಿ ನದಿಗಳ ಮಧ್ಯದಲ್ಲಿರುವ ಪ್ರದೇಶವನ್ನಾಳುತ್ತಿದ್ದರು. ದಂಡಿನ ಬಲದೊಳಗೆ ಆಂಧ್ರರು ಚಂದ್ರಗುಪ್ತನಿಗೆ ಎಡವಾಗಿದ್ದರೂ ಆ ಕಾಲಕ್ಕೆ ಚಂದ್ರಗುಪ್ತನ ತರುವಾಯ ದಂಡಿನಲ್ಲಿ ಇವರೇ ಮೇಲುಗೈಯಾಗಿದ್ದರು. ಪ್ರಕಾಕುಲಂ ಎಂಬದು ಇವರುಗಳ ರಾಜಧಾನಿಯು. ಮೊತ್ತಮೊದಲು ಇವರು ಸ್ವತಂತ್ರರಾಗಿ ಆಳುತ್ತಿದ್ದು, ಮೌರ್ಯಚಂದ್ರಗುಪ್ತನ ಆಳಿಕೆಯಲ್ಲಿ ಮಾಂಡಲೀಕರಾಗಿ ಅಶೋಕನ ಆಳಿಕೆಯ ವರೆಗೆ ಮೌರ್ಯರಿಗೆ ಒಲಗೈಯಾಗಿಯೇ ಇದ್ದರೂ ಅಶೋಕನ ಮರಣದ ತರುವಾಯ ಇವರು ಸ್ವತಂತ್ರರಾದರು. ಸಿಮುಕನೇ ಸ್ವತಂತ್ರವಾದೀ ಆಂಧ್ರರಾಜ್ಯದ ಮೊದಲನೇ ಅರಸು. ಸಿಮುಕನ ತರುವಾಯ ಸಟ್ಟಪೇರಿದ ರಾಜಾಕೃಷ್ಣನ ಆಳಿಕೆಯಲ್ಲಿಂತೂ ಆಂಧ್ರಸಾಮ್ರಾಜ್ಯದ ಹಬ್ಬುಗೆಯು ವಾಯುವೇಗದಿಂದಾಗಿ ಕೃಷ್ಣಾ, ಸಿಂಧ, ಕರ್ನಾಟಕ, ಮಹಾರಾಷ್ಟ್ರ, ನಾಶಿಕದ ವರೆಗೆಲ್ಲ ಪ್ರದೇಶವು ಆಂಧ್ರರ ವಶವಾಯಿತು; ಆಂಧ್ರರಿಗೆ ಶಾಂತವಾಹನ, ಶಾಂತಕರ್ಣಿ ಎಂದು ಹೆಸರು. ಆಂಧ್ರರಲ್ಲಿ ಪುಲುಮಾಯಿ, ಯಜ್ಞಶ್ರಿ, ವಿಜಯ ಮೊದಲಾದ ಅರಸುಗಳು ಆಳಿಹೋದರು. ಇವರಲ್ಲಾರೂ ಅಶೋಕನಷ್ಟು ಘನತೆಗೇರದಿದ್ದರೂ ತಮ್ಮ ಕೈಲಾದಮಟ್ಟಿಗೆ ಉತ್ತರದಿಂದ ಬಳನುಗ್ಗಿ ಬರುತ್ತಿರುವ ಶಕ ಯವನರನ್ನು ಅಡ್ಡಗಟ್ಟಿದರು. ಬ್ರಾಹ್ಮಣ ಹಾಗೂ ಬೌದ್ಧ ಸಂಸ್ಕೃತಿಗಳನ್ನು ಕಾವಾಡಿ 'ಇಬ್ಬರನ್ನೂ ಸಮದೃಷ್ಟಿಯಿಂದ ಕಂದು ತಾವು ಬ್ರಾಹ್ಮಣರಿದ್ದರೂ ಬೌದ್ಧರಿಗೆ ಆಶ್ರಯಕೊಟ್ಟು ಅವರಿಗೆ ಸಹಾಯಗೊಟ್ಟದ್ದೊಂದು ವಿಶೇಷ. ಮಗಧರಾಜ್ಯವು ಕಣ್ಮರೆಯಾದನಂತರ ದಕ್ಷಿಣ

ದೇಶದಲ್ಲಿ ಘನವೂ, ಸ್ಥಿರವೂ ವಿಶಾಲವಾದ ಸಾಮ್ರಾಜ್ಯವೆಂದರೆ ಶಾತವಾಹನರದೇ ಎಂದು ಹೇಳಬಹುದು. ಆಂಧ್ರರಾಜ್ಯವು ನಷ್ಟವಾಗಲಿಕ್ಕೆ ಕಾರಣಗಳಾವುವೆಂಬುದು ಸಿಗುವದಿಲ್ಲವಾದ್ದರಿಂದ ಆಂಧ್ರರಾಜರುಗಳ ವಿಷಯದಲ್ಲಿ ಇತಿಹಾಸಗಾರರು ಮೌನಭಾವವನ್ನು ತಾಳಬೇಕಾಗಿದೆ. ಒಟ್ಟಿಗೆ, ಇ. ಸ. ದ ೩ನೇ ಶತಕವೆಂದರೆ ಹಿಂದೂದೇಶದ ಚರಿತ್ರೆಯಲ್ಲಿಯೇ ಕಗ್ಗತ್ತಲೆಯ ಕಾಲವಾಗಿದೆ. ಬಂದೂ ಸಂಗತಿಗಳು ಕಾಣಿಸಲಿಕ್ಕಿಲ್ಲ.

ವೀರವಿಕ್ರಮಾರ್ಕ:– ಈ ಕಗ್ಗಾಲದೊಳಗೆ ಹಿಂದೂದೇಶವೆಲ್ಲ ತಿರಗಣಿಯ ಮಡುವಿಗೆ ಸಿಕ್ಕು ಬಳಲುತ್ತಿದ್ದಿತು. ಚೀನ, ಇರಾಣ, ಬಾಕ್ತ್ರಿಯಾಗಳ ಭಾಗದಿಂದ ಶಕರೂ, ಯವನರೂ, ಇಂಡೋಪಾರ್ಥಿಯನ್ನರೂ (ತುರ್ಕರೂ) ಅವರೇ ಮುಂತಾದ ಕಾಡುಪುಂಡಜಾತಿಯ ಜನರು ತೋಳಿನಂತೆ ಗುಂಪುಗಟ್ಟಿಕೊಂಡು ಹಿಂದೂದೇಶದೊಳಗೆ ನುಗ್ಗಿ ಪಂಜಾಬ, ಸಿಂಧ, ಕಾಠೇವಾಡದ ವರೆಗೆ ನಾಗಿಬಂದು, ತಮ್ಮ ಗಟ್ಟಿಗತನದಿಂದಲೂ, ಪುಂಡತನದಿಂದಲೂ, ಸಿಂಧ, ಕಾಠೇವಾಡ, ಮಧುರೇ, ತಕ್ಷಶಿಲೆ, ಮೊದಲಾದವುಗಳಲ್ಲಿ ತಮ್ಮ ರಾಜ್ಯಗಳನ್ನು ನಮ್ಮಲ್ಲಿ ಕಟ್ಟಿಕೊಂಡರು. ಇವರಲ್ಲಿ ಅನೇಕರು ಬೌದ್ಧಮತವನ್ನು ಅವಲಂಬಿಸಿದ್ದರು. ಹಿಂದೂರಾಜ್ಯಗಳು ಅಲ್ಲಲ್ಲಿ ಮಿಣುಗುಟ್ಟುತ್ತಿದ್ದರೂ, ಒಬ್ಬರಿಗಾದರೂ, ಈ ಶಕಯವನರ ಹಾವಳಿಯನ್ನು ಅಡ್ಡಗಟ್ಟಬೇಕೆಂಬ ದೇಶಾಭಿಮಾನವಾಗಲಿ, ಧರ್ಮಾಭಿಮಾನವಾಗಲಿ ತಲೆಯೆತ್ತಲಿಲ್ಲ. ಹಿಂದುಗಳ ಜನಜೀವನವೇ ಯಾಕೋ ಬೂದಿಮುಚ್ಚಿದ ಕೆಂಡದಂತೆ, ಆಗಿತ್ತು. ಶಕರಾಗಲಿ, ಇಂಡೋಪಾರ್ಥಿಯನ್ನರಾಗಲಿ, ಬೇರೆ ದೇಶದಿಂದ ಬಂದ, ಬೇರೆ ಜಾತಿಗೆ ಸಂಬಂಧಪಟ್ಟ ಕಾಡುಜಾತಿಯವರಾದ್ದರಿಂದ, ಧರ್ಮಜೀವನರಾದ ಹಿಂದುಗಳಿಗೆ ಅವರ ರಾಜ್ಯನಿರ್ವಹಣಕ್ರಮವು ~~ಹೇಗೆ~~ ರುಚಿಸುವದೆಂತು? ಹಿಂದೂದೇಶಕ್ಕೆ ಬಂದಿರುವ ಗೋಳನ್ನು ತಪ್ಪಿಸಬೇಕೆಂದು ಈ ವಿಪತ್ತಿಗೆ ಎದುರಾಳಿಯಾಗಿ ನಿಂತು ಎದೆಗೊಟ್ಟು ಕಾದಿದ ವೀರರಲ್ಲಿ ವೀರವಿಕ್ರಮಾದಿತ್ಯನೊಬ್ಬನು. ತನ್ನ ನೆರೆಯಲ್ಲಿಯೇ ಆಳಿಕೊಂಡಿರುವ ಶಕರೆಂಬ ವಿಧರ್ಮದವರ ರಾಜ್ಯವನ್ನು ಸಹಿಸದೆ ಅವರೊಡನೆ ಯುದ್ಧ

ಹೂಡಿದನು. ಶಕರ ರಾಜ್ಯಗಳು ಅಲ್ಲಲ್ಲಿಗೆ ಹರಡಿಕೊಂಡಿರುವದರಿಂದ ಅವರೆಲ್ಲರೂ ಒಟ್ಟಾಗಿ ಸೇರಿ ವಿಕ್ರಮಾದಿತ್ಯನಿಂದ ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಹೆಣಗಿದರು; ಕರೂರೆಂಬಲ್ಲಿ ಕಾಳಗವಾಯಿತು. ಆದರೂ ಅದರಲ್ಲಿ ಅವರಿಗೆ ಗೆಲವಾಗದೆ ಕ್ರಿ. ಶ. ಪೂ. ೫೬ ರಲ್ಲಿ ಸೌರಾಷ್ಟ್ರದಲ್ಲಿರುವ ಶಕರಾಜಮನೆತನವು ಮುಳುಗಿ ಹೋಯಿತು. ಉತ್ತರದಿಂದ ಹಿಂಡುಗಟ್ಟಿಕೊಂಡು ಬಂದು, ಧರ್ಮಿಷ್ಠರೂ, ಶಾಂತರೂ ಆದ ಹಿಂದೂಜನರನ್ನು ಹಿಂಸಿಸುವ ಈ ಕಾಡುಜಾತಿಯ ಜನರನ್ನು ವಿಕ್ರಮಾದಿತ್ಯನು ತನ್ನ ಭುಜವಿಕ್ರಮದಿಂದ ಹೊಡೆದೋಡಿಸಿದ್ದರಿಂದ, ಅವನಿಗೆ ಶಕಾರಿಯೆಂಬ ಭಾರಣೆಯ ಹೆಸರು ದೊರೆತು, ತನಗೆ ಸಿಕ್ಕ ಜಯದ ಗುರುತೆಂದು ಅಂದು ಮೊದಲು ವಿಕ್ರಮಶಕವನ್ನು ಅವನು ಪ್ರಾರಂಭಿಸಿದ್ದು. ವಿಕ್ರಮನಂತಹ ಒಬ್ಬ ರಾಜನು ಇವರನ್ನು ಅಡ್ಡಗಟ್ಟಿದಿದ್ದರೆ ಉತ್ತರಹಿಂದೂದೇಶದೊಳಗಿನವರ ಗತಿಯು ಯಾವ ವಾಡಾಗುತ್ತಿತ್ತೋ ಊಹಿಸಲಿಕ್ಕಾಗದು.

ಕುಶಾನರು:- ಚೀನದ ವಾಯವ್ಯ ದಿಕ್ಕಿನಲ್ಲಿಯ ಗುಡ್ಡಗಾಡುಗಳಲ್ಲಿರುವ ತಿರುಕ ಜಾತಿಯವರಿವರು. ಚೀನ ಇತಿಹಾಸಕಾರರು ಇವರಿಗೆ ಯುಯೆಷಿ ಎಂದು ಕರೆಯುತ್ತಾರೆ. ಈ ಜಾತಿಗೆ ಸಂಬಂಧಪಟ್ಟ ಕುಶಾನಮನೆತನದವರು ಎಲ್ಲೆಕಟ್ಟಿನಲ್ಲಿರುವ ಇಂಡೋಗ್ರೀಕ, ಇಂಡೊ ಪಾರ್ಥಿಯನ್ನ ರಾಜರನ್ನು ಬಗ್ಗುಬಡಿದು ಇರಾಣ, ಕಾಬೂಲ, ಬಾಕ್ಟ್ರಿಯಾದಿಂದ ಪ್ರಾರಂಭಮಾಡಿಕೊಂಡು ದಕ್ಷಿಣಕ್ಕೆ ನರ್ಮದಾ ನದಿಯವರೆಗೆ ತಮ್ಮ ಆಳ್ವಿಕೆಯನ್ನು ಕಟ್ಟಿದರು. ಇವರ ಮನೆತನದಲ್ಲಾಗಿ ಹೋದ ೧–೨ ನೇ ಕಡಫಿಸೆಸ ಎಂಬ ಇಬ್ಬರೂ ರಾಜರೂ ಅಪ್ರತಿಮ ವೀರರಿದ್ದರು. ಚೀನ ರಾಜನಿಗೂ ೨ನೇ ಕಡಫಿಸೆಸನಿಗೂ ಮಾನಮರ್ಯಾದೆಯ ವಿಷಯದಲ್ಲಿ ಜೊಂಕು ಬಂದು, ಈ ಕೊಂಕಿನ ಬಿಂಕದಿಂದ ಇಬ್ಬರಿಗೂ ಯುದ್ಧವೆಸಗಿತು. ೨ನೇ ಕಡಫಿಸೆಸನು ಸೋತು ಕಪ್ಪ ಕೊಡಲೊಪ್ಪಿದನು. ಕಡಫಿಸೆಸನ ತರುವಾಯ ಕನಿಷ್ಕನೆಂಬುವನು ಪಟ್ಟವೇರಿದನು. ಈತನು ಕಡಫಿಸೆಸನ ವಂಶಕ್ಕೆ ದೂರಿನವನಾದರೂ ಇವನಿಗೆ ಪಟ್ಟವಾಯಿತು. ಅಂತೂ ಕನಿಷ್ಕನು ಯುಯೆಷಿಜಾತಿಗೆ ಸಂಬಂಧಪಟ್ಟ

ವನೆಂದು ಹೇಳಲಿಕ್ಕೇನೂ ಆಡ್ಡಿಯಿಲ್ಲ. ಈತನ ಆಳಿಕೆಯು ಕ್ರಿ. ಶ. ೧೨೦–೧೬೨ ವರೆಗೆ. ಕನಿಷ್ಕನು ಬಹು ಪರಾಕ್ರಮಿ. ಹೀದೂದೇಶದ ಒಳನಾಡಿನಲ್ಲಿರುವ ಚಿಕ್ಕ ದೊಡ್ಡ ರಾಜರುಗಳನ್ನೆಲ್ಲ ಸೋಲಿಸಿ, ಮಗಧ ರಾಜಧಾನಿಯಾದ ಪಾಟಲೀಪುತ್ರದ ವರೆಗೂ ಅಭಯೋಗ ಮಾಡಿ, ಅಲ್ಲಿಂದ ಬುದ್ಧಘೋಷ ಎಂಬೊಬ್ಬ ಬುದ್ಧ ಸನ್ಯಾಸಿಯನ್ನು ತನ್ನೊಡನೆ ಒಯ್ದನು. ಈತನ ಆಳಿಕೆಯಲ್ಲಿ ಈಗಿನ ಮಹಾರಾಷ್ಟ್ರದ ಆಗಿನ ಅರಸ ನಾದ ನಹವಾನನೆಂಬುವನು ಸಹ ಕನಿಷ್ಕನ ಮಾಂಡಲಿಕನಾಗಿದ್ದನೆಂದು ಸಿದ್ಧವಾಗುತ್ತದೆ. ಅಂದರೆ ಉತ್ತರಕ್ಕೆ ಕಾಬೂಲದಿಂದ ಕೆಳಗೆ ದಕ್ಷಿಣಕ್ಕೆ ಮಹಾರಾಷ್ಟ್ರದ ವರೆಗೆ, ಅತ್ತ ಗಂಗೆಯ ಧಡದವರೆಗೆ ಈತನ ರಾಜ್ಯ ವಿನ್ನಾರ. ಕನಿಷ್ಕನು ತನ್ನ ರಾಜಧಾನಿಯನ್ನು ಪೇಶಾವರಕ್ಕೆ ಬಯ್ದನು. ಈ ಪಟ್ಟಣವು ಹಿಂದುನ್ಥಾನ ಹಾಗೂ ಅಫಗಾಣಿನ್ಥಾನಕ್ಕೆ ನಡುವೆ ಇರುವದರಿಂದ ಎರಡೂ ಕಡೆಯಿಂದ ರಾಜ್ಯಭಾರ ನೋಡಿಕೊಳ್ಳಲು ಅನುವಾಗಿತ್ತು. ಬರಬರುತ್ತ ಕನಿಷ್ಕನಿಗೆ ಬುದ್ಧತತ್ವಗಳಲ್ಲಿ ಹೆಚ್ಚಿನ ವಿಶ್ವಾಸ ಹುಟ್ಟಿದ್ದರಿಂದ ಉತ್ತರ ವಯಸಿನಲ್ಲಿ ಆತನು ಬೌದ್ಧಸಂಪ್ರದಾ ಯಕ್ಕೆ ಸೇರುವದಲ್ಲದೆ ಬೌದ್ಧರಿಗೆ ಆಶ್ರಯದಾತನೂ, ಬೌದ್ಧಧರ್ಮದ ಕಟ್ಟಾಳಾಗಿಯೂ ನಿಂತುಕೊಂಡನು. ಬುದ್ಧದೇವನ ಸಮಾಧಿಯಮೇಲೆ ಆಶ್ಚರ್ಯಕರವಾದುದೊಂದು ಕಟ್ಟಡವನ್ನು ಕಟ್ಟಿಸಿದ್ದನು. ಆದರೆ ಅದು ಅನೇಕ ಸಲ ಬೆಂಕೆಗೀಡಾಗಿ ನಾಶವಾಯಿತು.

ಬೌದ್ಧಮತದ ಹಬ್ಬುಗೆ:– ಮೊದಲಿನಿಂದ ಅಂದರೆ ಕಡಫಿಸೆಸ ಅರಸನಿಂದಲೂ ಚೀನರಿಗೆ ಕಪ್ಪುಕಾಣಿಕೆ ಕೊಡುವದೊಂದು ಅಪಮಾ ನಕರವಾದ ಪದ್ಧತಿಯಿತ್ತಷ್ಟೇ! ಇದು ಕನಿಷ್ಕನಿಗೆ ಸಹನವಾಗಲಿಲ್ಲ. ಆತನು ವಾಮಿಾರ ತಪ್ಪಲನ್ನು ದಾಟಿ, ಚೀನರ ಆಳಿಕೆಗೊಳಪಟ್ಟ ಕಾಶ ಗರ, ಯಾರ್ಕಂದ ಮತ್ತು ಖೋತಾನಗಳನ್ನು ಗೆದ್ದು, ಚೀನರಿಗೆ ಕಾಣಿಕೆ ಕೊಡುವದನ್ನು ನಿಲ್ಲಿಸಿಬಿಟ್ಟನು. ಇವ್ವಾಗುವದರಲ್ಲಿ ಕನಿಷ್ಕನಿಗೆ ಅಶೋ ಕನಂತೆ ಕೊಳ್ಳೆಕಾಟಗಳಿಂದ ರಾಜ್ಯ ಗಳಿಸುವ ವಿಷಯದಲ್ಲಿ ಅನುತಾಪ ವುಂಟಾಗಿ ತನ್ನ ಕಾಲವನ್ನೆಲ್ಲ ಬೌದ್ಧಮತದ ಹಬ್ಬುಗೆಯಲ್ಲಿಯೇ ವೆಚ್ಚ ಮಾಡತೊಡಗಿದನು. ಈತನು ಮಹಾಯಾನ ಎಂಬುದೊಂದು ಬೌದ್ಧ

ಮತದೊಳಗೆ ಹೊಸ ಪಂಥವನ್ನು ತೆಗೆದು, ಅದರೊಳಗೆ ಹಿಂದು, ಪಾರ್ಶಿ ಕ್ರೈಸ್ತ, ಹೆಲೆನಿಕ್ ಹೀಗೆ ಅನೇಕ ಮತದ ಜನರನ್ನು ಸೇರಿಸಿಕೊಂಡನು. ಈ ಮಹಾಯಾನ ಪಂಥದ ಹಬ್ಬುಗೆಯು ಕನಿಷ್ಕನ ರಾಜ್ಯದೊಳಗೆ ಮಿಂಚಿನ ವೇಗದಿಂದ ಬೆಳೆದು ಎಲ್ಲೆಲ್ಲಿ ನೋಡಿದರೂ ಚೈತ್ಯಾಲಯಗಳೂ, ಸಂಘಾರಾಮಗಳೂ, ವಿಹಾರಗಳೂ ಕಂಗೊಳಿಸತೊಡಗಿದವು. ಮುಂದೆ ಕ್ರಮೇಣ ಕನಿಷ್ಕನು ಬುದ್ಧಸಂಪ್ರದಾಯದ ಮತಗ್ರಂಥಗಳನ್ನು ಅಭ್ಯಾಸಿಸುತ್ತಿರಲು ಅವನಿಗೆ ಬೇರೆ ಬೇರೆ ಗ್ರಂಥಗಳಲ್ಲಿ ವಿರೋಧವು ಕಂಡುಬಂದುದರಿಂದ, ತನ್ನ ಸಲಹೆಗಾರನಾದ ಪುಷ್ಯವಾರ್ಶ್ವನೆಂಬುವನ ಸನುಮತಿಯಿಂದ ಬೌದ್ಧಸಂಪ್ರದಾಯದ ವಿದ್ವಾಂಸರದೊಂದು ಧರ್ಮಸಭೆ ನೆರೆಯಿಸಿದನು. ಈ ಸಭೆಯು ಕಾಶ್ಮೀರ ನೆರೆಯಲ್ಲಿರುವ ಕುಂಡಲವನವೆಂಬ ಮರದೊಳಗೆ ನಡೆಯಿತು. ಈ ಧರ್ಮ ಸಭೆಗೆ ವಸುಮಿತ್ರನೆಂಬುವನು ಅಧ್ಯಕ್ಷನು. ಅಶ್ವಘೋಷನು ಉಪಾಧ್ಯಕ್ಷನು. ಪ್ರಾಚೀನ ಕಾಲದಿಂದ ನಡೆದುಬಂದಿರುವ ಬುದ್ಧಸಂಪ್ರದಾಯದ ತತ್ವಗಳನ್ನು ಮೂರು ವಿಧವಾಗಿ ವಿಂಗಡಿಸಿ, ಪರೀಕ್ಷಿಸಿ, ಅವುಗಳಿಗೆ ಟೀಕಾಗ್ರಂಥಗಳನ್ನು ಬರೆಯಿಸಿದರು. ಮಹಾವಿಭಾಷಾ ಎಂಬುದೊಂದು ಬೌದ್ಧತತ್ವಜ್ಞಾನದ ದೊಡ್ಡ ಜ್ಞಾನಕೋಶವು ಈಗ್ಯೂ ಚೀನದಲ್ಲುಂಟು. ಇದನ್ನೊಂದು ತಾಮ್ರಪಟದ ಮೇಲೆ ಬರೆದು ಸ್ತೂಪದೊಳಗಿಟ್ಟಿದ್ದಾರೆ. ಈ ಮೇರೆಗೆ ಬೌದ್ಧಮತಕ್ಕೆ ತಟ್ಟಿದ ಕಿಟ್ಟನ್ನು ಬಹುಮಟ್ಟಿಗೆ ಶುದ್ಧೀಕರಿಸಿದ್ದೊಂದು ಕನಿಷ್ಕನ ಜೀವಮಾನದೊಳಗಿನ ವಿಶೇಷ ಕಾರ್ಯವು. ಈತನ ಜೀವಮಾನದಲ್ಲಿ ಅಶೋಕನ ಜೀವಮಾನವು ಬಹುಮಟ್ಟಿಗೆ ಪ್ರತಿಬಿಂಬಿತವಾಗಿತ್ತೆಂದು ಹೇಳಬಹುದು; ಆದರೂ ಅಶೋಕನಲ್ಲಿರುವ ಶುದ್ಧ ಧರ್ಮಾಚರಣೆಯೂ, ಪ್ರಜೆಗಳಲ್ಲಿ ದಯಾದಾಕ್ಷಿಣ್ಯವೂ ಈತನಲ್ಲಿರುವಂತೆ ಕಾಣಲಿಲ್ಲ. ಹಾಗೆಂತಲೇ ಈತನ ಕಾಟಕ್ಕೆ ಬೇಸತ್ತು, ಮಾಧರ ಎಂದೆಸರಿನ ಈತನ ಮಂತ್ರಿಯೂ, ಕೆಲವು ಸರದಾರರೂ ಒಗ್ಗಟ್ಟಾಗಿ ಈತನು ಜ್ವರದಿಂದ ಹಾಸಿಗೆ ಹಿಡಿದು ಮಲಗಿರುವಾಗ ದೊಡ್ಡದೊಂದು ಹೊದ್ದಿಕೆಯನ್ನು ಈತನ ಮೇಲೆ ಹಾಕಿ ಮೇಲೊಬ್ಬನು ಕುಳಿತು ಉಸುರುಗಟ್ಟಿಕೊಂದುಬಿಟ್ಟರು. ಈತನ ತರುವಾಯ ಹವಿಷ್ಕ ಹಾಗೂ ವಸುದೇವ

ಎಂಬಿಬ್ಬರು ಅಳಿದರು. ಹವಿಷ್ಕನು ತಂದೆಯಿಂದ ಬಂದ ರಾಜ್ಯವನ್ನು ಅವನಿಗೆ ತಕ್ಕಂತೆ ಚನ್ನಾಗಿಯೇ ನಡಿಸಿಕೊಂಡಿದ್ದನು. ಈತನಾದರೂ ತಂದೆಯಂತೆ ಬುದ್ಧಾನುಯಾಯಿಯಾಗಿದ್ದು ಬೌದ್ಧರಿಗೆ ಕೈತುಂಬ ನೆರವಾದನು. ವಸುದೇವನಿಂದ ಇವರ ಅಳಿಕೆಗೆ ಇಳಿಗಾಲ ಒದಗಿತು. ಈತನ ಹೆಸರು ಹಿಂದೂಜನರಂತೆ ಇದ್ದುದರಿಂದ ಈತನ ಕಾಲಕ್ಕೆ ಪರದೇಶದಿಂದ ಬಂದವರ ಮೇಲೆಯೂ ಹಿಂದೂಸಂಸ್ಕೃತಿಯ ನೆರಳು ಎಷ್ಟು ಮೂಡಿತೆಂಬುದು ಸ್ಪಷ್ಟವಾಗುತ್ತದೆ. ವಸುದೇವನ ಕಾಲದ ನಾಣ್ಯಗಳ ಮೇಲೆ ಶಿವ ಹಾಗೂ ನಂದಿಯ ಮೂರ್ತಿಗಳಿದ್ದು ಮಥುರೆಯ ನೆರೆಯಲ್ಲಿದೊರೆತಿವೆ.

ದಕ್ಷಿಣಹಿಂದೂದೇಶ:- ಉತ್ತರಹಿಂದುನ್ಹಾನವೆಲ್ಲವೂ ಶಕ, ಯವನರ ಕೈಗೆ ಸಿಕ್ಕು ಬಳಲುತ್ತಿರುವಾಗ್ಗೆ ದಕ್ಷಿಣಹಿಂದೂದೇಶದ ಸ್ಥಿತಿಯು ಹೇಗಿತ್ತೆಂಬದನ್ನು ನೋಡೋಣ. ದಕ್ಷಿಣದೇಶದೊಳಗೆ ಬಹು ದಿನಗಳಿಂದಲೂ ಚೇರ, ಚೋಳ, ಪಾಂಡ್ಯ, ಸಿಂಹಳ, ಪಲ್ಲವ, ಕದಂಬ ಮೊದಲಾದ ರಾಜರುಗಳು ಒಂದು ಬಗೆಯಿಂದ ಯಾರ ಅಂಕೆಗೂ ಈಲಾಗದೆ ಚಿಕ್ಕ ರಾಜ್ಯವಾದರೂ ಸ್ವತಂತ್ರವಾಗಿ ಆಳುತ್ತಿದ್ದರು. ಇವರಲ್ಲಿ ಇಡೀ ದಕ್ಷಿಣದೇಶವನ್ನೇ ಆಗಲಿ ಉತ್ತರಹಿಂದುನ್ಹಾನವನ್ನೇ ಆಗಲಿ ಜಯಿಸಿ ಏಕಚತ್ರಾಧಿಪರಾಗಿ ಆಳುವಂಥ ಯಾವ ಪುರುಷರೂ ಹುಟ್ಟಲಿಲ್ಲ. ಚೇರ ಚೋಳ, ಪಾಂಡ್ಯ, ಪಲ್ಲವ, ಗಂಗ ಮೊದಲಾದವರು ಇಡೀ ಹಿಂದೂದೇಶದಮೇಲೆ ತಮ್ಮ ಆಧಿಪತ್ಯವನ್ನು ನಡಿಸದಿದ್ದರೂ ಅವರು ಅಶೋಕನಂಥವರಿಗೂ ಬಾಗದೆ ತಮ್ಮ ಸೀಮೆಯಲ್ಲಿ ಸಿಂಹದಂತೆ ವಿರಾಜಿಸುತ್ತಿದ್ದುದು ತಿಳಿಯುತ್ತದೆ. ಈ ರಾಜರೆಲ್ಲರೂ ಒಂದೇ ಬುಡಕಟ್ಟಿಗೆ ಸೇರಿದವರಾದರೂ, ರಾಜ್ಯದ ದೆಸೆಯಿಂದ ಅವರಿವರಲ್ಲಿ ಅನೇಕ ಕಾಳಗಗಳು ನಡೆದವು. ಬಂಗಾಲದಿಂದ ವಿಜಯನೆಂಬೊಬ್ಬ ನಾಹಸಿಗನು ತನ್ನ ದೇಶ ಬಿಟ್ಟು ಅನೇಕ ಜನರೊಡನೆ ಸಿಂಹಲದ್ವೀಪಕ್ಕೆ ಸಮುದ್ರಮಾರ್ಗವಾಗಿ ಹೋಗಿ ಅಲ್ಲಿ ತನ್ನದೊಂದು ರಾಜ್ಯ ಕಟ್ಟಿಕೊಂಡನೆಂದೂ, ಪಾಂಡವರ ವಂಶಸ್ಥನಾದ ಒಬ್ಬ ರಾಜಕುಮಾರ್ತಿಯು ಪಾಂಡ್ಯರಾಜ್ಯವನ್ನು ದಕ್ಷಿಣದೇಶದಲ್ಲಿ ಸ್ಥಾಪಿಸಿದಳೆಂದೂ, ಓದಿದರೆ ನಮಗೆ ನಮ್ಮಲ್ಲಿಯ ಜನರ ಸಾಹಸದ ಬಗ್ಗೆ ಕೌತುಕವೆನಿಸುತ್ತದೆ. ಚೋಳರಾಜ್ಯವು ಬಹು ಪ್ರಾಚೀನ

ರಾಜ್ಯವು. ಚೋಳರ ಕರಿಕಾಲಚೋಳನೆಂಬೊಬ್ಬ ಅಸಾಮಾನ್ಯ ವೀರನು ಸಿಂಹಳದ್ವೀಪಕ್ಕೆ ದಂಡಯಾತ್ರೆ ಹೊರಟು, ಅಲ್ಲಿಯ ಜನರನ್ನು ಹಿಡಿತಂದು ೧೦೦ ಮೈಲುಗಳ ವರೆಗೂ ಕಾವೇರಿನದಿಗೆ ಅಣೆಕಟ್ಟೆಯನ್ನು ಕಟ್ಟಿಸಿ, ಕಾವೇರಿಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿಮಾಡಿಕೊಂಡನು. ಪ್ರಜೆಗಳಿಗೆ ಈತನದು ತಂದೆಯ ಆಳಿಕೆಯಾಗಿತ್ತು. ಜಾತಿಗೆಟ್ಟು ಹಿಂದೂಮತಕ್ಕೆ ಸೇರಿದ ಪಲ್ಲವರೆಂಬುವರು ಕಂಚಿಯಲ್ಲಿಆಳುತ್ತಿದ್ದು,ಇವರಿಗೂ ಬನವಾಸಿಯ ಗಂಗರಿಗೂ ಯುದ್ಧಗಳಾಗಿವೆ. ಬನವಾಸಿಯ ಗಂಗರ ಮೂಲಪುರುಷನು ತ್ರಿಲೋಚನನೆಂಬುವನು. ಈತನೊಬ್ಬ ದಾರಿಹೋಕ ಬ್ರಾಹ್ಮಣನು. ಬನವಾಸೆಯ ಹತ್ತರ ಬರಲು, ಅದೇ ತಾನೇ ಧೊರೆಯನ್ನು ಪಟ್ಟಕ್ಕೆ ಕುಳ್ಳಿರಿಸುವ ಸಮಾರಂಭವು ನಡೆದಿರಲು, ಆ ಪಟ್ಟದಾನೆಯು ದಾರಿಹೋಕನಾದ ತ್ರಿಲೋಚನನಿಗೆ ಮಾಲೆ ಹಾಕಲು ರಾಜಪ್ರಾಪ್ತವಾಯಿತು.ತ್ರಿಲೋಚನನು ತತ್ಕಾಲಕ್ಕೆ ಅನುಸರಿಸಿ,ಅನೇಕ ಅಗ್ರಹಾರಾದಿಗಳನ್ನು ಕಟ್ಟಿಸಿತನ್ನ ರಾಜ್ಯವನ್ನು ಸುಖವಾಗಿ ಆಳಿಹೋದನು. ಈತನಿಂದ ೩ನೇ ತಲೆಯವನಾದ ಮಯೂರವರ್ಮನು ಪಟ್ಟಕ್ಕೆ ಬಂದನು. ಪಲ್ಲವರಿಗೂ ಈತನಿಗೂ ಬದ್ಧದ್ವೇಷ ಬಿದ್ದಿತು. ಚಿಕ್ಕಚಿಕ್ಕ ಈ ರಾಜ್ಯಗಳಲ್ಲಿಯಾವತ್ತೂ ಅಂತಃಕಲಹದಹೊಗೆಯು ಹೊರಡುತ್ತಲೇ ಇದ್ದಿತು.

ಈ ಕಾಲದ ಜನರ ಸ್ಥಿತಿ:— ಮಳೆಬೆಳೆಗಳಲ್ಲಿ ಹಿಂದೂದೇಶಕ್ಕೆ ಎಂದೂ ಕೊರತೆಯಾಗದ್ದರಿಂದ ಅದೊಂದರ ಮಾತೆತ್ತುವಂತಿರಲಿಲ್ಲ. ಪ್ರತಿವರ್ಷ ಮಳೆಮಾರು ಸೂರ್ಯಚಂದ್ರರಂತೆ ತಪ್ಪದೆ ಆಯಾ ಕಾಲಕ್ಕನುಸರಿಸಿ ಆಗುತ್ತಿದ್ದು ಧಾನ್ಯಸಮೃದ್ಧಿಯಿರುತ್ತಿತ್ತು. ಯಾವಾಗಲೋ ಒಮ್ಮೆ ಕ್ಷಾಮಕಾಲವು ಬದಗಿತೆಂದರೆ, ಮಾತ್ರ ಜನಗಳು ಅನ್ನವಿಲ್ಲದೆ ದೇಚಾಡಿ ಸತ್ತು ಹೋಗುತ್ತಿದ್ದರು; ಅಥವಾ ಜನರು ದೇಶಾಂತರಕ್ಕೆ ಹೋಗುತ್ತಿದ್ದರು. ಇದಕ್ಕೆ ಚಂದ್ರಗುಪ್ತನ ಕಾಲಕ್ಕೆ ಬಿದ್ದ ಬರವೇ ಸಾಕ್ಷಿ! ಇಡೀ ದೇಶದೊಳಗೆಲ್ಲ ಒಂದೇ ಚಕ್ರಾಧಿಪತ್ಯವಿಲ್ಲದ್ದರಿಂದ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಾಳುಕಡಿಗಳನ್ನು ಸಾಗಿಸುವದು ಬಹು ಕಷ್ಟದ ಮಾತಾಗಿತ್ತು. ಜನಗಳಲ್ಲಿ ಈ ಕಾಲಕ್ಕೆ ಮತಾಭಿಮಾನವು ಹೆಚ್ಚಿತ್ತಲ್ಲದೆ ದೇಶಾಭಿಮಾನವಿರಲಿಲ್ಲ. ಸ್ವಾಭಾವಿಕ

ವಾಗಿಯೇ ಆರ್ಯರಿಗೆ ಮತಾಭಿಮಾನದ ಮುಂದೆ ದೇಶಾಭಿಮಾನಕ್ಕೆ ಬೆಲೆಯಿಲ್ಲ; ಏಕೆಂದರೆ ಮತವೇ ಅವರ ಜೀವನದ ಗುಟ್ಟು. ಮೇಲಾಗಿ ಹಿಂದೂದೇಶವೆಂಬುದು ಪೇರೆಯಿಲ್ಲದ ಪಿಂಡದಂತೆ ನಾಲ್ಕು ದಿಕ್ಕಿಗೆ ಹಬ್ಬಿಕೊಂಡು ನಾವಿರಾರು ಪಾಳೆಗಾರುಗಳಿಗೆ ವಶವಾಗಿದ್ದುದರಿಂದ, ತಾವು ಬಾಳಿಕೊಂಡಿರುವ ರಾಜ್ಯ ಹಾಗೂ ರಾಜನ ಮಟ್ಟಿಗೆನೇ ಅವರ ದೇಶಾಭಿಮಾನವು ಸಂಕೋಚಗೊಂಡು ಮತಾಭಿಮಾನವೇ ಮನುಷ್ಯನ ಬಾಳಿಕೆಯ ಸರ್ವಸ್ವವೆಂದು ಭಾವಿಸಲ್ಪಟ್ಟಿತ್ತು. ಪೂರ್ವದಿಂದಲೂ ಹಿಂದೂದೇಶವೆಂದರೆ ಮತಾಮತಾಂತರಗಳ ಗಲಭೆಯ ನ್ಹಾನವು. ವೈದಿಕರು, ಶೈವರು, ವೈಷ್ಣವರು, ಶಾಕ್ತರು, ಗಾಣಪತ್ಯರು, ಜೈನರು, ಬೌದ್ಧರು ಇಷ್ಟೆಲ್ಲ ಮತದವರಿದ್ದರೂ, ಅವರೆಲ್ಲರೂ ಅನ್ಯೋನ್ಯ ಸೌಹಾರ್ದದಿಂದಲೇ ಇರುತ್ತಿದ್ದರು. ಬಂದಾನೊಂದು ಕಾಲಕ್ಕೆ ಬೌದ್ಧಮತವು ರಾಜಧರ್ಮವಾಗಿ ಮೆರೆದು ಮೆರೆದು ಇದೀಗ ಅದು ಯಾರೂ ಉದ್ಧಾರಕರಿಲ್ಲದೆ ಒಡಮೇಲಾಗಹತ್ತಿತ್ತು. ಅನೇಕ ವರ್ಷಗಳ ವರೆಗೆ ಬೌದ್ಧಮತದ ಇರುಕಿಗೆ ಸಿಕ್ಕು ರಾಜಾಶ್ರಯವಿಲ್ಲದೆ ಬಳಲುತ್ತಿದ್ದ ವೈದಿಕ ಮತೀಯರು ಅದೇ ತಾನೇ ತಲೆಯೆತ್ತಿಕೊಂಡು ಬೌದ್ಧರ ದಾರಿಯನ್ನು ಬಿಟ್ಟು ದಕ್ಷಿಣ ಹಿಂದೂದೇಶಕ್ಕೆ ನಡೆದರು. ಅಲ್ಲಿ ಚೋಳ ಪಾಂಡ್ಯ ರಂಥ ಆರ್ಯರಾಜರು ಆಳುತ್ತಿದ್ದುದರಿಂದ ಅವರನ್ನು ತಮ್ಮ ದಾರಿಗೆಳೆದು ಅವರಿಂದ ರಾಜಸೂಯದಂಥ ಯಜ್ಞಗಳನ್ನು ಮಾಡಿಸಿದರು. ಶಕಯವನರಂಥ ಪರದೇಶದ ಜನರಿಂದ ಹಿಂದೂಸಂಸ್ಕೃತಿಗೆ ತತ್ಕಾಲಕ್ಕೆ ಪೆಟ್ಟು ತಿನ್ನುವ ಪ್ರಸಂಗ ಬಂದಾಗ್ಯೂ, ಆ ಶಕಯವನರು ದಂಡಯಾತ್ರೆಗೆಂದು ಈ ದೇಶಕ್ಕೆ ಬಂದವರು ಇಲ್ಲೆಯೇ ನಿಂತು ರಾಜ್ಯ ನ್ಹಾಪಿಸಿಕೊಂಡು ಹಿಂದೂಜನರೊಡನೆ ಬೆಂದಾಗಿಹೋದರು.

೪ **ಬೌದ್ಧಿಕಸ್ಥಿತಿ:-** ಜನಾಂಗದ ಸ್ಥಿತಿಯು ಇಷ್ಟು ಅಲ್ಲೋಲಕಲ್ಲೋಲವಾಗಿದ್ದರೂ, ಈ ಕಾಲಕ್ಕೆ ಜನಾಂಗದ ಬೌದ್ಧಿಕಸ್ಥಿತಿಯು ಮಾತ್ರ ತಲ್ಲಣಗೊಂಡಿರಲಿಲ್ಲ. ಈ ಹೊತ್ತಿಗೆ ಕನಿಷ್ಕನ ಓಲಗದಲ್ಲಿರುವ ಅಶ್ವಘೋಷನೆಂಬುವನು ಬುದ್ಧಚರಿತವೆಂಬ ಗ್ರಂಥ ಬರೆದನು-ಚರಕಾಚಾರ್ಯರು ಆಯುರ್ವೇದವನ್ನು ಕುರಿತು ಒಳ್ಳೇ ಮಹತ್ವದ

ಗ್ರಂಥವನ್ನು ಬೆಳಕಿಗೆ ತಂದರು. ಸುಶ್ರುತರೆಂಬುವರು ಆಯುರ್ವೇದ ಶಾಸ್ತ್ರದೊಳಗಿನ ಮುಖ್ಯ ಅಂಗಗಳಾದ ಔಷಧ ಚಿಕಿತ್ಸೆ, ಹಾಗೂ ಶಸ್ತ್ರ ಚಿಕಿತ್ಸೆಯ ಬಗ್ಗೆ ಈಗಿನವರು ಸೋಜಿಗದಿಂದ ಬೆರಳು ಕಚ್ಚಿಕೊಳ್ಳುವಂಥ ವಿದ್ವತ್ತೆಯಿಂದ ಬೆಳಗುವ ಗ್ರಂಥಗಳನ್ನುಂಟು ಮಾಡಿದರು. ಶಸ್ತ್ರ ಚಿಕಿತ್ಸೆಯೊಳಗೆ ೧೫೪ ಶಸ್ತ್ರಗಳನ್ನು ಉಪಯೋಗಿಸುವ ವಿಧವನ್ನು ಹೇಳಿದ್ದು ಅದಕ್ಕೆ ಶಲ್ಯತಂತ್ರವೆಂದು ಹೆಸರುಂಟು. ಕೆಲವು ಶಸ್ತ್ರಗಳು ಕೂದಲನ್ನು ಇಬ್ಭಾಗವಾಗಿ ಕಡಿಯುವಷ್ಟು ಸೂಕ್ಷ್ಮವಾಗಿವೆ. ನ್ಯಾಯ ಹಾಗೂ ಮೀಮಾಂಸಾಶಾಸ್ತ್ರಗಳಿಗೆ ಪ್ರಶಸ್ತವಾದ ಮತ್ತು ಶಬರ ಎಂಬಿಬ್ಬರು ಘನವಿದ್ವಾಂಸರು ಭಾಷ್ಯಗಳನ್ನು ಬರೆದುದರಿಂದ ಕೆಲದಿನಗಳವರೆಗೆ ಬರಡು ಬಂಜೆಯಾದ ಆರ್ಯರ ಮೆದುಳು ಬೆಳಸಾಯಿತು. ಕವಿಕುಲಗುರುವೆಂದು ಹೆಸರು ಪಡೆದ ಮಹಾಕವಿ ಭಾಸನು ಇದೇ ಕಾಲದ ಮೆದುಳಿನಿಂದ ಮಿಂಚಿದ ಜ್ಯೋತಿಯು. ಮೃಚ್ಛಕಟಿಕದಂಥ ಉದಾತ್ತ ರಸದಿಂದುಕ್ಕುವ ನಾಟಕವನ್ನು ಬರೆದು ಶೂದ್ರಕ ಕವಿಯು ಇದೇ ಕಾಲಕ್ಕೆ ತನ್ನ ಹೆಸರು ಅಮರಗೊಳಿಸಿದ್ದು.ವ್ಯಾಕರಣಕ್ಕೆ ಮಹಾಭಾಷ್ಯ ಬರೆದು ಭಾಷಾಸೇವೆಗೈದ ವೈಯ್ಯಾಕರಣಿಗಳಾದ ಪತಂಜಲಿಯವರು ಈ ಗೊಂದಲದ ಕಾಲದೊಳಗೇ ಮೈದೋರಿ, ತಮ್ಮ ಬುದ್ಧಿಪ್ರಭೆಯನ್ನು ಸೂರೆಮಾಡಿ ಹೋದರು. ದಕ್ಷಿಣಹಿಂದೂದೇಶದೊಳಗೊಂದು ಚುಕ್ಕೆಯು ಈ ಸಂದರ್ಭಕ್ಕೆ ಹೊಳೆಯಿತು. ಆವರ ಹೆಸರು ನಾಗಾರ್ಜುನರು. ಅವರು ಬೌದ್ಧಮಹಾಯಾನಪಂಥದ ಪುರಸ್ಕರ್ತರಿದ್ದುದಲ್ಲದೆ, ನ್ಯಾಯ, ಆಯುರ್ವೇದ, ಜ್ಯೋತಿಷ ಆವೆಲ್ಲ ಶಾಸ್ತ್ರಗಳನ್ನಾಳಿ ತಮ್ಮ ಘನವಾದ ಲೇಖ್ಯಣಿಕೆಯಿಂದ ಅವುಗಳ ಬಗ್ಗೆ ಉದ್ಗ್ರಂಥಗಳನ್ನು ರಚಿಸಿದರು. ರಾಜಕೀಯ ದೃಷ್ಟಿಯಿಂದ ಈ ಕಾಲವು ಬಲುಮಟ್ಟಿಗೆ ಅಳಿಕೆಗೆಟ್ಟ ಸ್ಥಿತಿಗೀಡಾದ್ದರೂ ಬೌದ್ಧಿಕಪ್ರತಾಪವೇನೂ ಕಡಿಮೆಯಿರಲಿಲ್ಲ. ದಕ್ಷಿಣಹಿಂದೂದೇಶವು ಈ ಸಂದುಕಟ್ಟಿನಲ್ಲಿ ವೈದಿಕಸಂಸ್ಕೃತಿಯನ್ನು ಜೀರ್ಣೋದ್ಧಾರಮಾಡದಿದ್ದರೆ ಅದು ಜೀವಿತಸಂಶಯದೊಳಗೆ ಬೀಳಬಹುದಾಗಿತ್ತು; ದಕ್ಷಿಣಹಿಂದೂದೇಶವೇ ಈ ಕಾಲಕ್ಕೆ ವೈದಿಕಸಂಸ್ಕೃತಿಯ ಕೋಟೆಯಾಗಿತ್ತು. ಕಂಚಿಯಲ್ಲಿಯೂ ಧಾನ್ಯಕಟಕದಲ್ಲಿಯೂ ವೈದಿಕವಿದ್ಯೆಯ ದೊಡ್ಡ ವಿದ್ಯಾಲಯ

ಗಳಿದ್ದು ಅವಕ್ಕೆ 'ಘಟಿಕ' ಗಳೆಂದೆನ್ನುವ ವಾಡಿಕೆಯಿದ್ದಿತು.

ಹಿಂದುಗಳ ವ್ಯಾಪಾರದ ಸಾಹಸವು ಮತ್ತು ಪರನಾಡುಗಳಲ್ಲಿ ಹೋಗಿ ನೆಲಿಸಿದುದು:-

ದೇಶಾಂತರಕ್ಕೆ ವ್ಯಾಪಾರಕ್ಕಾಗಿ ಹೋಗುವದು ಹಿಂದೂಜನರಿಗೆ ಅರಿದಲ್ಲವೆಂಬುದನ್ನು ನಾವು ಹಿಂದೆ ಋಗ್ವೇದಕಾಲದ ಇತಿಹಾಸದೊಳಗೆ ತೋರಿಸಿದ್ದೇವೆ. ಉತ್ತರಹಿಂದುಸ್ತಾನದವರು ಎಂದಾದರೂ ಭೂಮಾರ್ಗದಿಂದ ದೂರದೂರ ದೇಶಕ್ಕೆ ವ್ಯಾಪಾರಕ್ಕೆ ಹೋಗುವದರಲ್ಲಿ ಗಟ್ಟಿಗರಾದ್ದರಿಂದ ಇರಾಣ, ಅಫಗಾಣಿಸ್ತಾನ, ಚೀನ, ಅವರೊಡನೆ ಅವರ ಸಂಬಂಧವೇನೂ ಹೊಸದಾಗಿರಲಿಲ್ಲ.ಜಲಪಯಣದೊಳಗೆ ಅವರು ಬಹು ಸಾಹಸಿಗರಿದ್ದುದರಿಂದಲೂ, ಸಮುದ್ರವು ದಕ್ಷಿಣಾಪಥದವರಿಗೆ ಸಮೀಪವಿದ್ದುದರಿಂದಲೂ, ದಕ್ಷಿಣದವರು ಬಹು ದೂರವರೆಗೆ ಜಲಪರ್ಯಟನ ಬೆಳಿಸುತ್ತಿದ್ದರು. ವ್ಯಾಪಾರಕ್ಕಾಗಿ ಹಿಂದೂವರ್ತಕರು ಹಡಗು ಕಟ್ಟಿಕೊಂಡು ಹೋಗುತ್ತಿರಲು ಬರುಗಾಳಿಗೆ ಶಿಕ್ಕು ಈಗಣ ಜರ್ಮನಿಗೆ ಹೋಗಿ ತಲ್ಪಿದ್ದರೆಂದು ಕಾರ್ನೆಲಿಯನ್ ನೇಪಾನ್ ಎಂಬುವನು ಬರೆದಿಟ್ಟಿದ್ದಾನೆ. ಈಗಣ ಯುರೋಪಖಂಡದೊಳಗೆ ರೋಮನರು ರಾಜ್ಯವಾಳುತ್ತಿರಲು, ಬ್ರಾಹ್ಮಣರು ಅಲೆಕ್ಸಾಂಡ್ರಿಯಾದೊಳಗೆ ಒಕ್ಕಲಾಗಿ ನಿಂತುಕೊಂಡು ಅವರಲ್ಲಿ ಕೆಲವರು ರೋಮನ್ ಹೆಂಗಸರಿಗೆ ಶಕುನ ಸ್ವಪ್ನಾದಿಗಳ ಫಲವನ್ನು ಹೇಳುತ್ತಿದ್ದ ಬಗ್ಗೆ ಉಲ್ಲೇಖವಿದೆ. ಕಾಲದ ಹೊಟ್ಟೆಯೊಳಗೆ ಹೊಕ್ಕು ನೋಡಿದರೆ,ಆಗಿನವರಿಗೆದೂರಿನ ದ್ವೀಪಾಂತರಗಳಿಗೆ ಹೋಗಿ ಒಕ್ಕಲಾಗಿರಬೇಕೆಂಬುವ ಹವ್ಯಾಸವು ಹುರಿದುಂಬಿತ್ತೆನ್ನಲಿಕ್ಕೆ ಅಡ್ಡಿಯಿಲ್ಲ. ಬೌದ್ಧರೂ, ಬ್ರಾಹ್ಮಣರೂ ಮೊದಲಾದವರಿಗೆ ದೊಂದು ಸಾಹಸದ ಕಾಲ ಬಿದಗಿತ್ತು. ಈ ಕಾಲದ ಜುಟ್ಟವನ್ನು ಕೈಲಿ ಹಿಡಿದು ಆರ್ಯರು ದಕ್ಷಿಣಕ್ಕೆ ಜಾವಾ, ಬೋರ್ನಿಯೋ, ಸುಮಾತ್ರಾ, ಸಯಾಮ ಮೊದಲಾದ ನಾಡುಗಳಲ್ಲಿ ಸುಗ್ಗಿ ಅಲ್ಲಿ ತಮ್ಮ ಸಂಸ್ಕೃತಿಯ ಧ್ವಜವನ್ನೂರಿದರು. ಇದೇ ಸಮಯಕ್ಕೆ ಬೌದ್ಧಮತವು ಬಹುಮಟ್ಟಿಗೆ ಚೀನ, ಜಪಾನ, ಸಯಾಮಗಳಲ್ಲಿಯೂ ಕೆಲಮಟ್ಟಿಗೆ, ಬೋರ್ನಿಯೋ ಜಾವಾಗಳಲ್ಲಿ ಮನೆಮಾಡಿಕೊಂಡಿತು. ಆಂಧ್ರರಾಜರೂ, ಪಾಂಡ್ಯರೂ,

ದಕ್ಷಿಣಹಿಂದೂದೇಶದಿಂದ ಜಾವಾ, ಬೋರ್ನಿಯೊ, ಸಯಾಮಗಳಿಗೆ ಪಯಣಬೆಳಿಸಿ, ಅಲ್ಲಿ ತಮ್ಮ ಸಂಸ್ಕೃತಿ, ಭಾಷೆಗಳನ್ನು ಹರಡಿ ಬಿತ್ತಿದರು. ಆಂಧ್ರಭೃತ್ಯರ ವಂಶಕ್ಕೆ ಸೇರಿದ ಒಬ್ಬ ರಾಜನು ಬೋರ್ನಿಯೋದಲ್ಲಿ ಒಂದು ಯಾಗವನ್ನು ಮಾಡಿದ ಬಗ್ಗೆ ಉಲ್ಲೇಖವಿದೆ. ಜಾವಾ ಅಥವಾ ಬಲಿದ್ವೀಪದ ಭಾಷೆಗೆ ಕವಿಭಾಷೆಯೆಂದು ಹೆಸರಿದ್ದು ನಮ್ಮ ಜನರು ಧರ್ಮಸೂತ್ರಾದಿಗಳನ್ನು ಅವರಿಗೆ ಕಲಿಸಿದ್ದಲ್ಲದೆ, ಅವರಿಗೆ ತಮ್ಮ ಸಂಸ್ಕೃತಿಯನ್ನೇ ಎರವಾಗಿ ಕೊಟ್ಟು, ಅಲ್ಲಿ ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿಸಿದರು. ಅದರ ಹೆಗ್ಗುರುತುಗಳು ಈಗಲೂ ಜಾವಾ ಬೋರ್ನಿಯೋ ಮುಂತಾದ ದ್ವೀಪಾಂತರಗಳಲ್ಲಿ ಬಹಿದು ಕಾಣುತ್ತವೆ. ಹೀಗೆ ಆರ್ಯರು ಕಡಲಪಯಣ ಪ್ರಿಯರಾದ್ದರಿಂದ ಅಲ್ಲಲ್ಲಿ ತಮಗನುಕೂಲವಾಗುವಂತೆ ರೇವುಗಳನ್ನು ಕಟ್ಟಿಸಿದ್ದಲ್ಲದೆ, ದೀಪಸ್ತಂಭಗಳನ್ನು ಇಡಿಸಿದ್ದರು. ಇಂಥದೊಂದು ದೀಪಗಂಬವು ಕಾವೇರಿಯ ಮುಖದ ಹತ್ತರ ಇದ್ದು, ಅದನ್ನು ಇಟ್ಟಿಗೆಗಳಿಂದ ಕಟ್ಟಿ ಅದರ ತುದಿಯಲ್ಲಿ ದೊಡ್ಡದೊಂದು ದೀಪವನ್ನು ಇಟ್ಟಿದ್ದರೆಂಬುದರ ಮೇಲಿಂದ ಆಗಿನ ಸಮುದ್ರಯಾನವು ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿತ್ತೆಂಬುದು ತಿಳಿದು ನಮಗೆ ಆಶ್ಚರ್ಯವೆನಿಸುವದು. ಜನಾಂಗದಲ್ಲಿ ಸ್ವಾತಂತ್ರ್ಯತೇಜವೆಂಬುದೊಂದು ಮಿಣುಕುತ್ತಿದ್ದರೆ, ಬೇಕಾದುದನ್ನು ಮಾಡಬಹುದೆಂಬುದೊಂದು ಅನ್ಯಾದೃಶವಾದ ಧೈರ್ಯವು ಮನಸಿನಲ್ಲಿ ಕುಣಿಯುತ್ತಿರುತ್ತದೆ. ಅದೇ ಮನುಷ್ಯನನ್ನು ಇಂಥ ಕಾರ್ಯಗಳಿಗೆ ಪ್ರೇರಿಸುತ್ತದೆ. ಇಡೀ ಹಿಂದುಸ್ಥಾನಕ್ಕೆ ನಾವು ಹೇಳುವ ಈ ಕಾಲವು ಒಂದು ಜಗಯಿಂದ ಗಂಡಾಂತರದ ವಿಷವೇಳೆಯಿದ್ದರೂ, ಈ ವಿಷವೇಳೆಯಲ್ಲೆಯೇ ಮನುಷ್ಯರಿಗೆ ಧೈರ್ಯದ ಪಾರವನ್ನು ಸ್ವತಃ ಅಡರಿಸಿ ತೋರಿಸುವದೊಂದು ಪ್ರಯೋಗವನ್ನು ಮಾಡಿ ತೋರಿಸಬೇಕಾಗುತ್ತದೆ. ಆದೀಗ ಹಿಂದೂಜನರಿಂದ ಬದಗಿತು. ಈ ಕಾಲವೆಂದರೆ ನಾಹಸದ ದೃಷ್ಟಿಯಿಂದಲೂ, ಪರದೇಶದೊಳಗೆ ಹೋಗಿ ನೆಲಿಸಿದ ದೃಷ್ಟಿಯಿಂದಲೂ, ಬಹು ವೈಭವಕಾಲವು. ಕಡಲಪಯಣದ ವರ್ಣನೆಯಿಂದ ನಾವಿನ್ನು ಕೈಗಾರಿಕೆಯ ಸ್ಥಿತಿಯ ಕಡೆಗೆ ಹೊರಳಿದರೂ, ಅದು ಕೂಡ ಕಡಲ

ಪಯಣದಷ್ಟೇ ಸಾಹಸದ್ದಾಗಿ ಪರಿಣಮಿಸಿರುವದು ಕಂಡುಬರುತ್ತದೆ. ಹಿಂದೂಜನರು ತಮ್ಮ ಕೈಗಾರಿಕೆಯನ್ನು ಎಷ್ಟು ಸ್ಪೃಹಣೀಯ ಸ್ಥಿತಿಗೆ ತಂದು ಮುಟ್ಟಿಸಿದ್ದರೆಂಬುವ ಬಗ್ಗೆ ನಾಕಷ್ಟು ಆಧಾರಗಳು ಸಿಕ್ಕುತ್ತವೆ. ಗಾಳಿಯ ಪರೆಗಳಂಥ (Webs of woven wind) ಹಿಂದೂ ದೇಶದ ಬಟ್ಟೆಗಳನ್ನು ಉಡಲಿಕ್ಕೆ ರೋಮದೇಶದ ಹೆಂಗಸರು ಮೆಚ್ಚಿ ಮರುಳಾಗಿದ್ದರೆಂದಮೇಲೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಇನ್ನಾವುದು ಬೇಕು? ರೋಮರಾಜ್ಯದಿಂದ ಹಿಂದೂರಾಜ್ಯದೊಳಗೆ ವರ್ಷಕ್ಕೆ ಕೋಟ್ಯವಧಿ ರೂಪಾಯಿಗಳು ಬಂದು ಸುರಿಯುತ್ತಿದ್ದವು. ರೋಮ ಸಾಮ್ರಾಜ್ಯಕ್ಕೆ ಇದೀಗ ಬಳ್ಳೇ ಘನತೆಯ ಕಾಲ ಬದಗಿದ್ದರಿಂದಲೂ, ಅವರಲ್ಲಿ ಸುಖ-ವಿಲಾಸಗಳು ಅಳತೆಗೆಟ್ಟು ಬೆಳೆದುದರಿಂದಲೂ, ತಮ್ಮ ಸುಖವಿಲಾಸಕ್ಕಾಗಿ ಹಣದ ಕಾಪಲಿಯನ್ನೇ ಅವರು ಹಿಂದೂದೇಶಕ್ಕೆ ಹರಿಯಿಸುತ್ತಿರುವಲ್ಲೇನಾಶ್ಚರ್ಯ? ಹಿಂದೂದೇಶದೊಳಗೆ ಎಂದಾದರೂ ಒಕ್ಕಲತನ ಕೈಗಾರಿಕೆ ಅವೆರಡೂ ಮೇಲಾದ ಉದ್ಯೋಗಗಳೆಂದು ಎಣಿಸಲ್ಪಟ್ಟಿದ್ದು, ಅವುಗಳ ತರುವಾಯ, ವ್ಯಾಪಾರ, ಕಡಲ ಪಯಣ, ಲಲಿತಕಲೆಗಳಿಗೆ ಪ್ರಾಧಾನ್ಯವಿದ್ದಿತು. ಇಲಿಗಳ ಉಣ್ಣೆಯಿಂದಲೂ ಹಿಂದೂಜನರು ಬೆಚ್ಚಗಿನ ಬಟ್ಟೆಗಳನ್ನು ನೇಯುತ್ತಿದ್ದರು. ಹತ್ತಿಯಿಂದ ನೇಯುವ ಬಟ್ಟೆಗಳನ್ನು ಹಾವಿನ ಪರೆಗೂ, ಹಾಲಿನ ಕೆನೆಗೂ ಹಲವೆಡೆಯಲ್ಲಿ ಹೋಲಿಸಿದ್ದಾರೆ. ಯವನರು ತಮ್ಮ ದೇಶಗಳಿಂದ ಭಂಗಾರವನ್ನು ಹೇರಿಕೊಂಡು ಬಂದು ಅದಕ್ಕೆ ಬದಲಾಗಿ ಇಲ್ಲಿಂದ ಮುತ್ತು, ರತ್ನ, ವಜ್ರ, ಆನೆಯ ಕೋರೆ, ಮಸಾಲೆ ಹೀಗೆ ತಮತಮಗೆ ಇಷ್ಟವಾದ ಪದಾರ್ಥಗಳನ್ನು ಒಯ್ಯುತ್ತಿದ್ದರು. ಈ ಸಮಯಕ್ಕೆ ದಕ್ಷಿಣ ಹಿಂದೂದೇಶವು ವೈದಿಕಧರ್ಮದ ತವರ್ಮನೆಯಾಗಿ ಪರಿಣಮಿಸಿದ್ದರೂ, ಜೈನ ಬೌದ್ಧಮತಗಳು ಅನಿರ್ಬಾಧವಾಗಿಯೂ, ನಿರಂಕುಶವಾಗಿಯೂ, ವೈದಿಕಮತದೊಡನೆ ಒಡನಾಡಿ ನಲಿಯುತ್ತಿದ್ದವೆಂದು ಧಾರಾಳವಾಗಿ ಹೇಳಬಹುದಷ್ಟು ಆಧಾರಗಳು ದೊರೆಯುತ್ತವೆ. ಇನ್ನೊಂದು ವಿಧದಿಂದ ಈ ಯುಗವು ವಿಶೇಷ ಸ್ಮರಣೀಯವಾಗಿದೆ. ಅದಾವುದೆಂದರೆ, ಇದೇ ಕಾಲದಲ್ಲಿ ಏಸುಕ್ರಿಸ್ತನ ಶಿಷ್ಯರಲ್ಲೊಬ್ಬನಾದ ಜುಡಾನ್‌ಥಾಮಸ್

ನೆಂಬುವನು ಹಿಂದೂದೇಶಕ್ಕೆ ಬಂದನು.

ಏಸಿಯದ ಮಹತ್ಕಾರ್ಯ:—ಜಾಗತಿಕ ಚರಿತ್ರೆಯಲ್ಲಿ ಧಾರ್ಮಿಕ ದೃಷ್ಟಿಯಿಂದ ಏಸಿಯದ ಕಾರ್ಯವು ಬಹು ಮಹತ್ವದ್ದಾಗಿದೆ. ಏಕೆಂದರೆ ಈಗ ಜಗತ್ತಿನಲ್ಲಿ ಪ್ರಚಲಿತವಿರುವ ಧರ್ಮಗಳ ಧರ್ಮಸ್ಥಾಪಕರೆಲ್ಲರೂ ಇದೇ ಖಂಡದಲ್ಲಿ ಹುಟ್ಟಿ ಬೆಳೆದು ಜಗತ್ತಿಗೆ ಧರ್ಮವನ್ನು ನೀಡಿದರು. ಹೀಗೆ ಜಗತ್ತಿಗೊಂದು ಬೇರೆ ಮತವನ್ನು ಕೊಟ್ಟು ಜಗತ್ತನ್ನೇ ಋಣಿಯಾಗಿಟ್ಟಿರುವವರಲ್ಲಿ ಮಹಾತ್ಮಾ ಏಸೂಕ್ರಿಸ್ತನೊಬ್ಬನು. ಬುದ್ಧದೇವನ ತರುವಾಯ ೫೦೦ವರ್ಷಗಳಾದಮೇಲೆ ಪ್ರಪಂಚಕ್ಕೆ ಲಭಿಸಿದ ಈ ವಿಭೂತಿ ಪುರುಷನ ಕಾರ್ಯವು ಸಾಮಾನ್ಯವಾಗಿರಲಿಲ್ಲ. ಈತನು ಜಾತಿಯಿಂದ ಯಹುದೀ ಮತಕ್ಕೆ ಸಂಬಂಧಪಟ್ಟವನು. ಸುಮಾರು ಮೂವತ್ತು ವರ್ಷಗಳಾಗುವವರೆಗೆ ಈತನು ತನ್ನ ತಾಯಿತಂದೆಗಳೊಡನೆ ಇದ್ದು ತಂದೆಯ ವ್ಯವಸಾಯದ ಬಡಿಗತನವನ್ನೇ ನಡಿಸಿದನು. ಹೀಗಿದ್ದ ಮೇಲೆ ಅವನಿಗೆ ಅಕ್ಷರಜ್ಞಾನವು ಎಷ್ಟರಮಟ್ಟಿಗೆ ಇತ್ತೆಂಬುದೂ ಅವನ ಶಿಕ್ಷಣವು ಎಷ್ಟು ಮೇಲ್ತರದ್ದಿತ್ತೆಂಬುದೂ ಸ್ಪಷ್ಟವಾಗುತ್ತದೆ; ಮಾತ್ರ ಅತನಿಗೆ ಹಿಬ್ರ್ಯರ ಜನರ ಪವಿತ್ರಗ್ರಂಥದ ಪರಿಚಯವು ತಕ್ಕಮಟ್ಟಿಗೆ ಇತ್ತೆಂಬುದರಲ್ಲಿ ಸಂದೇಹವಿಲ್ಲ. ಹಿಬ್ರ್ಯರ ವಾಙ್ಮಯ ಹಾಗೂ ಧರ್ಮ ಆವರೆಡೂ ಪರಂಪರಾಗತವಾಗಿ ನಡೆದು ಬಂದಿರುವ ಹಲವು ಸಾಧು ಸಜ್ಜನರ ವಿಚಾರಗಳದೊಂದು ಹಳೇ ಹೊತ್ತಿಗೆ. ಇದಕ್ಕೆ ಹಳೇ ಒಡಂಬಡಿಕೆ ಅನ್ನುವದುಂಟು. ಭಾರತೀಯ ಧರ್ಮವಿಕಾಸ ಹಾಗೂ ವಿಚಾರವಿಕಾಸಗಳ ಅನೇಕದೃಷ್ಟಾಂತಗಳು ಇದರಲ್ಲಿ ದೊರೆಯುತ್ತವೆ. ೩೦ವರ್ಷಗಳು ಮಿಂಚಿದನಂತರ ಯೇಸೂಕ್ರಿಸ್ತನು ಧರ್ಮೋಪದೇಶಕನಾಗಿ ಸ್ವಂತ ಸ್ಫೂರ್ತಿಯಿಂದ ಹೊರಕ್ಕೆ ಬಂದನು. ಬುದ್ಧಿಬಲವಿಲ್ಲ; ರಾಜ್ಯಬಲವಿಲ್ಲ; ಇಂಥವನು ಏನು ತಾನೇ ಮಾಡಬಲ್ಲನು? ಆದರೆ ಯೇಸುಕ್ರಿಸ್ತನು ಭಗವಂತನಲ್ಲಿರುವ ಅಚಲವಾದ ಶ್ರದ್ಧೆಯ ಬಲದಿಂದಲೇ ಬರಿಯ ಹದಿನೆಂಟು ತಿಂಗಳಲ್ಲಿ ತನ್ನ ನೈತಿಕ ಧಾರ್ಮಿಕವಾದ ಹೊಸ ತತ್ವಗಳನ್ನು ಜನರಲ್ಲೆಲ್ಲ ಬಿತ್ತಿ ತನ್ನ ಮತವನ್ನು ಜಗದ್ವ್ಯಾಪಕ ಸಂಪ್ರದಾಯವನ್ನಾಗಿ ಬೆಳಿಸಿದನು. ಮುಂದೆ ಈತನ ದೇಶಬಂಧುಗಳೇ ಈತನನ್ನು

ರೋಮನ್ನ ಅಧಿಕಾರಿಗಳಿಂದ ಗಲ್ಲಿಗೇರಿಸಿದರು. ಯೇಸುಕ್ರಿಸ್ತನ ವಚನಗಳಲ್ಲಿ ಲೋಕೋತ್ತರಭಕ್ತಿ, ಭಗವಂತನ ಬಗ್ಗೆ ಒಂದು ಬಗೆಯ ನಿಶ್ಚಿತ ಜ್ಞಾನವಿದ್ದಂತೆ ಪ್ರಕಟವಾಗುತ್ತದೆ. ಹಳ್ಳಿಯ ಬಡಿಗನ ಮಗನೊಬ್ಬನು ಮೂವತ್ತು ವರ್ಷಕಾಲ ಹಾಗೂ ಹೀಗೂ ಸಾಮಾನ್ಯ ಮನುಷ್ಯನಂತಿದ್ದು ಆ ಮೇಲೆ ಹದಿನೆಂಟೇ ತಿಂಗಳಕಾಲ ಉಪದೇಶ ನಡಿಸಿ, ತನ್ನ ಧರ್ಮವನ್ನು ಜಗತ್ತಿನ ಧರ್ಮವಾಗಿ ಮಾಡಿದ್ದೊಂದು ಇತಿಹಾಸದೊಳಗೆ ಅತ್ಯಂತ ಆಶ್ಚರ್ಯದ ಮಾತೇ ಸರಿ. ಈಶ್ವರನು ಸರ್ವವ್ಯಾಪಿ, ಅವನು ದಯಾಮಯನು. ಅವನು ನ್ಯಾಯಪಕ್ಷಪಾತಿಯು. ಎಂಬೀ ಸೊಲ್ಲುಗಳಲ್ಲಿಯೇಸುವಿನ ನೆಚ್ಚಿನನಂಬುಗೆಯಿದ್ದುದರಿಂದಅವನು ಹೆಚ್ಚು ವಾದದ ಗೊಂದಲದೊಳಗೆ ಬಾಯಿ ಹಾಕುತ್ತಿರಲಿಲ್ಲ. ಕ್ರಿಸ್ತನು ಬೆಂದು ಬೆಂಡಾದವರ ಬೆಂಬಲಿಗ, ಬಿದ್ದು ತತ್ತರಿಸುವವರ ಎತ್ತಿಗ, ಕುತ್ತಿಗೆ ತುತ್ತಾದವರ ತೆತ್ತಿಗ, ಬನ್ನ ಬಡುವವರ ನನ್ನಿಸುವ ಚೆನ್ನಿಗ. ಪಶ್ಚಾತ್ತಾಪದ ಮಹತ್ವವು ಈತನ ಉಪದೇಶದೊಳಗೆ ಎದ್ದುಕಾಣುತ್ತದೆ. ಜೀರ್ಣಯಹೂದೀಧರ್ಮವೆಂಬ ಗಿಡದ ಬೊಡ್ಡಿಯಲ್ಲಿ ಹುಟ್ಟಿದ ಕ್ರಿಸ್ತಮತವು ಸ್ವಲ್ಪು ಕಾಲಾಂತರದಲ್ಲಿಯೇ ವಿಸ್ತಾರವಾದ ಮರವಾಗಿ ಜಗತ್ತಿನ ಧರ್ಮಗಳಲ್ಲೊಂದು ಮುಖ್ಯ ಧರ್ಮವಾಯಿತು.*

---

* ಯೇಸುಕ್ರಿಸ್ತನ ಜಾತಿಯ ಬಗ್ಗೆ ಈಗ ಚರ್ಚೆ ನಡೆದಿದೆ. ಈ ವಿಷಯದೊಳಗೆ ಚನ್ನಾಗಿ ಬುಡಮುಟ್ಟಿ ಶೋಧ ನಡೆಯಿಸಿದ ಮದರಾಸಿನ ಶ್ರೀ. ರಾಮಸ್ವಾಮಿ ಎಂಬುವ ಚರಿತ್ರ ಸಂಶೋಧಕರು ಕ್ರಿಸ್ತನ ವಿಷಯದಲ್ಲಿ ಅನ್ನುವದು "ಪೂರ್ವಕಾಲದಲ್ಲಿ ಇರಾಣ, ತುರ್ಕಸ್ಥಾನ, ಅರಬಸ್ಥಾನ, ಅಫಗಾನಿಸ್ಥಾನಗಳಲ್ಲೆಲ್ಲ ಹಿಂದೂಜನರು ಒಕ್ಕಲಾಗಿದ್ದರಷ್ಟೇ! ಈ ಮೇರೆಗೆ ಒಕ್ಕಲಾಗಿರುವವರಲ್ಲಿ ತಮಿಳರೇ ಮುಂದಾಳುಗಳು. ಯೇಸುವಿನ ಕಾಲಕ್ಕೆ ಪ್ರಖ್ಯಾತಿಹೊಂದಿದ ಪ್ಯಾಲೆಸ್ತಾಯಿನ ಎಂಬೂರಿನ ಮೂಲ ಹೆಸರು ಪಲ್ಲಿಸ್ಥಾನವೆಂದು. ಇದು ದಕ್ಷಿಣದ ತಮಿಳರ ಒಕ್ಕಲನಾಡು; ಅಂದರೆ ಯೇಸುಕ್ರಿಸ್ತನಾದರೂ ತಮಿಳನಾಡಿನ ಹಿಂದೂವೆಂದೂ, ಆತನದೊಂದು ಭಾವಚಿತ್ರದಲ್ಲಿ ಆತನ ಮೈಮೇಲೆ ಜನವಾರವಿತ್ತೆಂದೂ, ಆತನ ತತ್ತ್ವೋಪದೇಶದೊಳಗೆ ಬುದ್ಧಮತ ತತ್ತ್ವಗಳು ಹೆಚ್ಚಾಗಿ ಸೇರಿಕೊಂಡಿವೆಂದೂ, ಕ್ರಿಸ್ತಮತದ ಆದ್ಯ ಪ್ರಚಾರಕನಾದ ಸೆಂಟಿಪಾಲನು ಬ್ರಾಮ್ಮಣನಾಗಿದ್ದನೆಂದೂ ಹಲವು ಆಧಾರಗಳಿಂದ ಸಿದ್ಧಪಡಿಸಿರುವರು- ಪ್ಯಾಲೆಸ್ತಾಯಿನ್ ಪ್ರಾಂತದೊಳಗೆ ಬಳಕೆಯಲ್ಲಿರುವ ಕೆಲವು ನಡೆಗಳು ಕೂಡ ಹಿಂದೂಜನರಲ್ಲಿರುವ ನಡೆನುಡಿಗಳಿಗೆ ಹೇಗೆ ಹೊಂದಿಕೊಳ್ಳುತ್ತವೆಂಬದನ್ನು ಇದಕ್ಕೆ ಬೆಂಬಲವಾಗಿಟ್ಟುಕೊಂಡಿರುವರು.

೧೦ ನೇ ಪ್ರಕರಣ.

ಗುಪ್ತವಂಶ ಸ್ಥಾಪಕನಾದ ಚಂದ್ರ.

(ಕ್ರಿ. ಶ. ಪೂರ್ವ ೩೨೦–೨೮೦ ವರೆಗೆ)

ಗುಪ್ತವಂಶವು:– ಹಿಂದಣ ಸ್ಥಿತಿಯನ್ನು ನಿರೀಕ್ಷಿಸಿಲು, ಹಿಂದೂ ದೇಶವು ಕೆಲವು ಶತಕಗಳ ವರೆಗೆ ಎಷ್ಟು ನಿರಾಶವಾಗುವಂತೆ ಅಳಿಕೆ ಗೆಟ್ಟಿತ್ತೆಂಬದು ನಮಗೆ ತಿಳಿದುಬಂದಿತು. ಜನಾಂಗದ ಇತಿಹಾಸದೊಳಗೆ ಇಂತಹ ಅನೇಕ ಅಗುಹೋಗುಗಳು ನಡೆದಿರುತ್ತವೆ. ಆದರೆ ನಾಲ್ಕನೇ ಶತಮಾನವು ಅಡಿಯಿಟ್ಟೊಡನೆ, ಇದು ವರೆಗೆ ಮಸಮಸ ಕಾಗಿರುವ ಅದರ ಇತಿಹಾಸವು ಮೆಲ್ಲಗೆ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸ ತೊಡಗಿತು. ಈ ಕಾಲದಲ್ಲಿ ಪಾಟಲೀಪುತ್ರದ ನೆರೆಹೊರೆಯಲ್ಲಾಳಿ ಕೊಂಡು ಇರುತಿರುವ ಗುಪ್ತವಂಶದ ಚಂದ್ರನೆಂಬ ಚಿಕ್ಕ ಪಾಳ್ಯಗಾರನಲ್ಲಿ ನಾಮ್ರಾಜ್ಯ ಸ್ಥಾಪಿಸುವ ಮಹತ್ವಾಕಾಂಕ್ಷೆಯು ಮೈಯಲ್ಲಿ ತುಂಬಿಕೊಂಡಿತು. ಚಂದ್ರಗುಪ್ತನು ಲಿಚ್ಛವಿವಂಶದ ಕನ್ಯೆಯಾದ ಕುಮಾರದೇವಿಯೆಂಬವಳನ್ನು ಮದುವೆಯಾದ ಮುಹೂರ್ತವಂದರೆ ಅದೊಂದು ಅಮೃತಸಿದ್ಧಿಯೋಗವೇ ಎಂದು ಹೇಳಬಹುದು. ಏಕೆಂದರೆ, ಈ ಶರೀರಸಂಬಂಧವನ್ನು ಬೆಳಿಸಿದಂದಿನಿಂದ ಚಂದ್ರಗುಪ್ತನ ಗ್ರಹಗಳು ಒಮ್ಮಿಂದೊಮ್ಮೆ ಬದಲಾಗಿ, ಅವನಿಗೆ ಪಾಟಲೀಪುತ್ರದ ರಾಜ್ಯವೂ ಕೈಸೇರಿತು. ಪುಷ್ಯಮಿತ್ರನಾಳಿಹೋದ ನಂತರ ದೇಶವೆಲ್ಲ ಅನಾಯಕವಾಗಿ ಬಹು ತೊಂದರೆಗಳಿಗೀಡಾಗಬೇಕಾಯಿತಷ್ಟೇ! ಆ ಕಾಲದಲ್ಲಿ ಲಿಚ್ಛವಿವಂಶದ ಶೂದ್ರ ಅರಸರು ತಮ್ಮ ಕೈಪೆಯಿಂದ ಪಾಟಲೀಪುತ್ರವನ್ನೊಂದು ಗೆದ್ದುಕೊಂಡಿದ್ದರು. ಅದೀಗ ಅಳಿಯುತನದ ನಿಮಿತ್ತದಿಂದ ಚಂದ್ರಗುಪ್ತನ ಕಡೆಗೆ ಬಂದಿತು. ಮುಂದೆ ತನ್ನ ಶೌರ್ಯದಿಂದ ಈತನು ಗಂಗಾಯಮುನೆಯ ದಂಡೆಯ ಪ್ರದೇಶವನ್ನು ಗೆದ್ದುಕೊಂಡದ್ದಲ್ಲದೆ,

ದಕ್ಷಿಣದ ಬಿಹಾರ, ಅಯೋಧ್ಯಾ ಮುಂತಾದ ನೆರೆಯ ಸೀಮೆಯಲ್ಲಿ ತನ್ನ ಅಧಿಪತ್ಯವನ್ನು ನೆಲಿಸಿ, ತಾನಾಳುವ ಪ್ರದೇಶದೊಳಗೆ ತನ್ನದೊಂದು ಶಕವನ್ನೇ ಪ್ರಾರಂಭಿಸಿದನು. ತನ್ನ ಹೆಂಡತಿಯಿಂದ ಈತನಿಗೆ ಒಳ್ಳೇ ಅಭ್ಯುದಯ ಕಾಲವು ಪ್ರಾಪ್ತವಾದ್ದರಿಂದ, ಅದರ ಗುರುತಿಗಾಗಿಯೇ ಎನೋ ಈತನು ತನ್ನ ರಾಜ್ಯದೊಳಗೆ ನಡಿಸಿದ ನಾಣ್ಯಗಳ ಮೇಲೆ ತನ್ನ ಹಾಗೂ ತನ್ನ ರಾಣಿಯ ಹೆಸರನ್ನು ಮುದ್ರೆ ಹಾಕಿಸಿದ್ದನು. ಹೀಗೆ ಒಂದು ಬಗೆಯಿಂದ ಗುಪ್ತ ಸಾಮ್ರಾಜ್ಯದ ಶಂಕುಸ್ಥಾಪನೆ ಮಾಡಿದ ನಂತರ ಚಂದ್ರಗುಪ್ತನು ಕುಮಾರದೇವಿ ಹೊಟ್ಟೆಯಲ್ಲುದಯನಾದ ಸಮುದ್ರಗುಪ್ತನೆಂಬ ತನ್ನ ಮಗನಿಗೆ ಪಟ್ಟಗಟ್ಟಿ ತಾನು ಕಡೆಗಾದನು.

ದಿಗ್ವಿಜಯಿಯಾದ ಸಮುದ್ರಗುಪ್ತನು:—ಕ್ರಿ. ಶ. ೩೩೦ ರಿಂದ ೩೭೫ ವರೆಗೆ. ಅನಾಯಕರ ಕಾಲವೆಂದರೆ, ಅದೊಂದು ಬಗೆಯಿಂದ ಜನಾಂಗದ ಮಧನ ಕಾಲವೇ ಸರಿ. ಮಜ್ಜಿಗೆಯನ್ನು ಕಡೆಯುವದರಿಂದ, ಅದರೊಳಗೆ ಎಲ್ಲಪೆಯಲ್ಲಿ ವ್ಯಾಪಿಸಿಕೊಂಡಿರುವ ಬೆಣ್ಣೆಯು ಒಂದೆಡೆಯಲ್ಲಿ ಕೂಡಿಕೊಂಡು ಒಂದು ಮುದ್ದೆಯಾಗಿ ನಮ್ಮ ಕಣ್ಣಿಗೆ ಬೀಳುವಂತೆ, ಜನಾಂಗವನ್ನು ಮಥಿಸುವ ಕಾಲವಾದ ನಂತರವೇ ನಮಗೆ ಬೆಣ್ಣೆಯ ರೂಪದಿಂದ ಜನಾಂಗದ ನಾರಸರ್ವಸ್ವರಾದ ಮಹಾವೀರರು ಕಂಗೊಳಿಸುವದುಂಟು. ಅಂತಹ ವರರಾಜರಲ್ಲಿ ಸಮುದ್ರಗುಪ್ತನೊಬ್ಬನು. ಈತನು ತನ್ನ ಅಳ್ವಿಕೆಯ ಬಹು ಭಾಗವನ್ನೆಲ್ಲ ದಿಗ್ವಿಜಯದೊಳಗೆ ಕಳೆದನು. ನಾ ಸಾಮ್ರಾಜ್ಯ ಗಳಿಸಬೇಕೆಂಬುದೊಂದು ಆಶೆಯು ಅತನ ಮನಸಿನಲ್ಲಿ ಹಗಲಿರಳು ಕಚ್ಚಿಯುತ್ತಿದ್ದುದರಿಂದ ಅದನ್ನು ಸಾಧಿಸಲೋಸುಗ ಸಮುದ್ರಗುಪ್ತನು ತನ್ನ ಜೀವಮಾನದೊಳಗೆಲ್ಲ ಮೀರಿದ ಎತ್ತುಗಡೆ ನಡಿಸಿದನು. ಆವನೀ ಹಿರಿದಾದ ಆಶೆಗನುಗುಣವಾಗಿ ಸಮುದ್ರಗುಪ್ತನು ಸರಸ್ವತಿಯ ಭಕ್ತನೂ, ಮಹತ್ವಾಕಾಂಕ್ಷಿಯಾದ ಶೂರನೂ ಇದ್ದುದರಿಂದ ಶ್ರೀ, ವಿಜಯ, ಭೂತಿ ಇವೆಲ್ಲವು ಇವನಲ್ಲಿ ಒಂದೇ ಕಾಲಕ್ಕೆ ಮನೆಮಾಡಿಕೊಂಡಿರುವಂತೆ ಕಾಣಿಸಿತು. ಯುವನ ವೀರನಾದ ಅಲೆಕ್ಸಾಂಡರನಂತೆ, ರಾಜ್ಯ ವಿಸ್ತಾರಗೊಳಿಸುವದೊಂದು ಹಿರಿಯಾಸೆಯು ಈತನ ಮನಸಿನಲ್ಲಿ ಬಲವಾಗಿ ಮಸೆಯುತ್ತಿದ್ದುದರಿಂದ, ಪ್ರತಿಭೆಯುಂದ ಮಿಂಚುವ ತನ್ನ

ಕಣ್ಣುಗಳಿಂದ ಇಡೀ ಜನಾಂಗದ ಸ್ಥಿತಿಯನ್ನು ಮುಂಗಂಡು ಎಲ್ಲರೂ ನೋಡುತ್ತಿರುವ ಹಾಗೆ ಈಗಿನ ಉತ್ತರಹಿಂದುಸ್ಥಾನದ ಎಲ್ಲ ಭಾಗವನ್ನೂ, ದಕ್ಷಿಣಹಿಂದುಸ್ಥಾನದ ಅರ್ಧಕರ್ಧ ಭಾಗವನ್ನು ಗೆದ್ದುಕೊಂಡ ದ್ದಲ್ಲದೆ, ಹಿಂದೂದೇಶದಾಚೆಗಿರುವ ಸಿಥಿಯನ್ ರಾಜರ ಸಂಗಡಲೂ, ಸಿಂಹಲದ್ವೀಪದಂತಹ ಬೇರೆ ದೂರಿನ ದ್ವೀಪಾಂತರಗಳಲ್ಲಿರುವ ರಾಜರ ಕೂಡಲೂ, ಈತನು ಹೊಕ್ಕು ಬಳಿಕೆಯನ್ನಿಟ್ಟುಕೊಂಡಿದ್ದನು. ಇಷ್ಟೆಲ್ಲ ರಾಜ್ಯ ವಿನ್ಯಾರವನ್ನು ತನ್ನ ಒಲೆಯಲ್ಲಿರಿಸಲಿಕ್ಕೆಂದು ಅವನು ಒಂದೊಂದು ಸಲ ಒಂದೊಂದು ದಿಕ್ಕಿಗೆ ದಂಡಯಾತ್ರೆ ಹೊರಡಿಸಿ, ಏಳು ಮೆಟ್ಟಿನ ಹುಲಿಯು ತನ್ನ ಕಣ್ಣಿಟ್ಟ ಬೇಟೆಯನ್ನು ಬಹು ಸುಲಭವಾಗಿ ನಾಥಿಸುವಂತೆ ಈತನು ಗೆದ್ದ ಆಯಾ ರಾಜರುಗಳನ್ನು ತನ್ನ ನಾರ್ವಭೌಮತ್ವವನ್ನು ಒಪ್ಪಲಿಕ್ಕೆ ಹಚ್ಚಿದನು; ಮತ್ತು ಈ ದಿಗ್ವಿಜಯದ ನಿಮಿತ್ತವನ್ನು ಮಾಡಿಕೊಂಡು, ಪ್ರಾಚೀನರ ಪದ್ಧತಿಯಂತೆ, ಅಶ್ವಮೇಧಯಾಗವನ್ನು ಮಾಡಿ ಅಗ್ನಿಕುಂಡದ ಮುಂದೆ ಯಜ್ಞದ ಕುದುರೆಯು ನಿಂತಿರುವ ಚಿತ್ರ ವಿರೊಡಗೂಡಿದ ಚಿನ್ನದ ಪದಕಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಅವುಗಳಲ್ಲಿ ಕೆಲವೀಗ ಸಿಕ್ಕಿವೆ. ಸಮುದ್ರಗುಪ್ತನು ಸಾಹಿತ್ಯದಲ್ಲಿ ಹೇಗೋ ಹಾಗೇ ಸಂಗೀತ ಕಲೆಯಲ್ಲಿಯೂ, ಒಲವುಳ್ಳವನಾದ್ದರಿಂದ ಬಹು ರಸಿಕನಿದ್ದನು. ವೈದಿಕಧರ್ಮದಲ್ಲಿ ಅತನ ಭಕ್ತಿಯು ನಿಚ್ಚಟವಾಗಿದ್ದರೂ, ಬೌದ್ಧಮತ ತತ್ವಗಳನ್ನೆಲ್ಲ ವಸುಬಂಧು ಎಂಬ ಬೌದ್ಧ ಸಾಧುವಿನಿಂದ ತಿಳಿಸಿಕೊಂಡಿದ್ದನು. ಸಮುದ್ರಗುಪ್ತನ ಒಪ್ಪೋಲಗದ ಕವಿಯಾದ ಹರಿಸೇನನೆಂಬವನು ಈ ಚಕ್ರವರ್ತಿಯನ್ನು ಕುರಿತು, ಗದ್ಯ ಪದ್ಯಮಯವಾಗಿ ವರ್ಣಿಸಿದ ಸಂಗತಿಗಳು ಈಗ್ಯೂ ದೊರಕುತ್ತವೆ; ಅವುಗಳನ್ನು ನೋಡಿದರೆ, ಈತನು ಹಿಂದುಸ್ಥಾನದ ಎರಡನೇ ಚಕ್ರವರ್ತಿಯೆನ್ನಲು ಅಡ್ಡಿಯಿಲ್ಲ. ಅಶೋಕನ ತರುವಾಯ ಭರತಖಂಡವನ್ನೆಲ್ಲ ತನ್ನ ಆಧೀನಕ್ಕೊಳಪಡಿಸಿದ ರಾಜನೆಂದರೆ ಸಮುದ್ರಗುಪ್ತನೇ ಸರಿ. ೫೦ ವರ್ಷ ಕಾಲ ಅತ್ಯಂತ ವೈಭವದಿಂದಲೂ, ಮಿಕ್ಕ ರಾಜರಂತೆ ಮೆತ್ತನ್ನ ಹಾಸಿಗೆಯಮೇಲೆ ಉರುಳಾಡಿ ಕಾಲಕಳೆಯದೆ ವೀರನಿಗುಚಿತವಾದ ತೆರದಿಂದ ರಾಜ್ಯಭಾರವನ್ನು ನಿರ್ವಹಿಸಿ, ಕ್ರಿ.ಶ. ೩೭೫ರಲ್ಲಿ ಮಡಿದನು.

೨ನೇ ಚಂದ್ರಗುಪ್ತ:– ಸಮುದ್ರಗುಪ್ತನು ಜೀವದಿಂದಿರುವಾಗಲೇ ರಾಜಕಾರ್ಯದೊಳಗೆ ಆಸಕ್ತಿಯುಳ್ಳವನಾದ ಯುವರಾಜ ೨ನೇ ಚಂದ್ರಗುಪ್ತನು ಕೆಲಮಟ್ಟಿಗೆ ರಾಜ್ಯಭಾರದ ಹೊಣೆಯನ್ನು ಹೊತ್ತಿದ್ದನು. ತಂದೆಯು ತೀರಿಕೊಂಡೊಡನೆ ತಂದೆಯ ಸಿಂಹಾಸನವನ್ನೇರಿ "ವಿಕ್ರಮಾದಿತ್ರ" ನೆಂಬ ಬಿರುದು ಧರಿಸಿದನು. ತನ್ನ ರಾಜ್ಯವಲ್ಲದೆ ಈತನು ಪ್ರಿಪ್ರದಲ್ಲಿಯೇ ಸುರಾಷ್ಟ್ರ (ಕಾಠೇವಾಡ) ಮಾಳವ ಹಾಗೂ ಗುಜರಾಥಗಳನ್ನು ಹೊಕ್ಕು ಅನೇಕ ವರ್ಷಗಳಿಂದ ಶಕ ಆರಸರ ಕೈಗೆ ಶಿಲುಕಿದ್ದ ಆರ್ಯಭೂಮಾತೆಯನ್ನು ಅವರ ಅಂಕೆಯಿಂದ ಬಿಡಿಸಿ, ಪಶ್ಚಿಮ ದಂಡೆಯ ಮೇಲಿರುವ ರೇವುಗಳನ್ನೆಲ್ಲ ಸ್ವಾಧೀನ ಪಡಿಸಿಕೊಂಡನು. ಇದರಿಂದ, ಹಿಂದುಸ್ಥಾನಕ್ಕೂ ಯುರೋಪಖಂಡಕ್ಕೂ ಇಜಿಸ್ತದ ಮಾರ್ಗವಾಗಿ ನಡೆಯುತ್ತಿದ್ದ ಕಡಲ ವ್ಯಾಪಾರವು ೨ನೇ ಚಂದ್ರಗುಪ್ತನ ಕೈಸೇರಿತು. ಈ ಕಾಲದಲ್ಲಿ ಉಜ್ಜಯಿನೀ ಪಟ್ಟಣವು ಬಹು ಗೌರವಕ್ಕೇರಿದ್ದಿತು. ವ್ಯಾಪಾರದ ದೃಷ್ಟಿಯಿಂದ ಪಶ್ಚಿಮಸಮುದ್ರದಂಡೆಯ ಮೇಲಿರುವ ರೇವುಗಳಿಗೂ, ಒಳದೇಶಕ್ಕೂ ನಡುವೆ ಉಜ್ಜಯಿನೀ ಪಟ್ಟಣವಿರುವದರಿಂದ ಅದೊಂದು ವ್ಯಾಪಾರದ ಪಡಮೂಲೆಯು ಸ್ಥಳವಾಗಿತ್ತು. ಮೇಲಾಗಿ ಹಳೆಯ ಪಟ್ಟಣವೆಂದು ಬಹು ಪುರಾತನ ಕಾಲದಿಂದ ಅದು ಪ್ರಾಚೀನ ಸಂಸ್ಕೃತವಿದ್ಯೆಯ ತೌರೂರಾಗಿತ್ತು. ಅಲ್ಲದೆ ಉತ್ತರ ಹಿಂದೂದೇಶಕ್ಕೆಲ್ಲ ಅದೇ ಕೇಂದ್ರಸ್ಥಳವಾಗುವದರಿಂದ ಅಲ್ಲಿ ಪೂರ್ವ ಪಶ್ಚಿಮ ರೇಖಾಂಶಗಳನ್ನೆಣಿಸುವದೊಂದು ಶಾಲೆಯಿದ್ದಿತು. ಹೀಗೆ ವೈದಿಕಸಂಸ್ಕೃತಿಗೆ ಪೋಷಕವಾಗುವಂಥ ಎಲ್ಲ ಬಗೆಯ ಅನುಕೂಲ್ಯಗಳು ಉಜ್ಜಯಿನೀ ಪಟ್ಟಣದೊಳಗೆ ಒಟ್ಟುಗೂಡಿದ್ದರೂ, ಪರರಾಯರ ಆಳಿಕೆಗೀಡಾಗಿರುವದೊಂದೇ ಒಂದು ನ್ಯೂನತೆಯಿದ್ದಿತು. ವೈದಿಕಸಂಸ್ಕೃತಿಯ ಪ್ರಾಚೀನ ಪಟ್ಟಣವು ಪರರಾಯರ ಕೈಗೆ ಬಿದ್ದು ಬಳಲುತ್ತಿರುವದು ಅವಮಾನವೆಂದೆಣಿಸಿ ವಿಕ್ರಮಾದಿತ್ಯನು ಅಲ್ಲಿಯ ರಾಜನನ್ನು ಸೋಲಿಸಿ, ಉಜ್ಜಯಿನಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಈತನ ಆಳ್ವಿಕೆಯಲ್ಲಿ ಚೀನದ ಮೊದಲನೇ ಪ್ರವಾಸಿಯಾದ ಫಾಹಿಯಾನನೆಂಬವನು ಹಿಂದೂದೇಶಕ್ಕೆ ಬಂದಿದ್ದನು. ಬೌದ್ಧಧರ್ಮದ

ಹುಟ್ಟುಭೂಮಿಯು ಹಿಂದೂದೇಶವಾದ್ದರಿಂದಲೂ, ಚೀನರು ಬೌದ್ಧರಿರುವದರಿಂದಲೂ, ಅವರಿಗೆ ಹಿಂದೂದೇಶದ ಹೆಸರೆತ್ತಿದೊಡನೆ ನಮಗೆ ಕಾಶಿರಾಮೇಶ್ವರಗಳ ನೆನಪಾದಷ್ಟು ಆನಂದ! ಹೀಗಿರುವದರಿಂದ ಚೀನ ಯಾತ್ರಿಕರು ಬುದ್ಧದೇವನ ಬೋಧಿವೃಕ್ಷದ ಹಾಗೂ ಅವನ ಅವಶೇಷಗಳನ್ನು ಹೂಳಿಟ್ಟಿರುವ ಪವಿತ್ರಸ್ಥಳದ ಸಂದರ್ಶನಾರ್ಥವಾಗಿ ಗುಂಪುಗಟ್ಟಿಕೊಂಡು ಬರುತ್ತಿದ್ದರು. ಅವರಲ್ಲಿ ಫಾಹಿಯಾನ ಒಬ್ಬನು. ಈ ಪಂಡಿತ ಯಾತ್ರಿಕನು ಸಂಸ್ಕೃತಗ್ರಂಥ, ಬೌದ್ಧಗ್ರಂಥ, ಕಥೆ ಹಾಗೂ ಚಮತ್ಕಾರಗಳ ಜ್ಞಾನಪಡೆಯಲೋಸುಗ ೬ ವರ್ಷ ಕಾಲ ಹಿಂದುಸ್ಥಾನದೊಳಗೆ ಇದ್ದನು. ವಿಕ್ರಮಾದಿತ್ಯನ ಆಳಿಕೆಯ ಬಗ್ಗೆ ಈತನು ಉಸುರಿದ ಸೊಲ್ಲುಗಳು ಬಹು ಮನನೀಯವಾಗಿವೆ. "ಮಗಧದೇಶದೊಳಗಿನ ಪಟ್ಟಣಗಳು ಸಂಪನ್ನಸ್ಥಿತಿಯಲ್ಲಿದ್ದವು. ಬರಿಯ ಕಾಣಿಕೆಗಳ ಬಲದಿಂದಲೇ ನಡಿಸಲ್ಪಟ್ಟ ಅನೇಕ ಸಂಸ್ಥೆಗಳಿದ್ದವು. ಪ್ರಯಾಣಿಕರಿಗೆ ಇಳಿದುಕೊಳ್ಳಲು ದೊಡ್ಡ ದೊಡ್ಡ ಛತ್ರಗಳು ಅಲ್ಲಲ್ಲಿ ದಾರಿಯ ಮೇಲೆ ಬೇಕಾದಷ್ಟಿದ್ದವು. ರಾಜಧಾನಿಯ ನಡುವೆ ದೊಡ್ಡದೊಂದು ಆಸ್ಪತ್ರೆಯಿದ್ದು, ಬಡವರೂ, ಅನಾಥರೂ ಆದ ರೋಗಿಗಳಿಗಾಗಿ ಔಷದ ಚಿಕಿತ್ಸೆ ನಡಿಸುವ ಔಷಧಾಲಯಗಳಿದ್ದವು. ಸಿಂಧುನದಿಯ ಮುಖಪ್ರದೇಶದಿಂದ ಮೊದಲ್ಗೊಂಡು ಯಮುನಾನದಿಯ ದಂಡೆಯವರೆಗೆ ನಾವಿರಾರು ಬೌದ್ಧಭಿಕ್ಷುಗಳಿರುತ್ತಿದ್ದ ಹಲವು ದೊಡ್ಡ ಮಠಗಳು ಹರಡಿಕೊಂಡಿದ್ದವು. ಅಪರಾಧಿಗಳಿಗೆ ತಕ್ಕಮಟ್ಟಿಗೆ ದಂಡನೆ ಕೊಡುವ ವಾಡಿಕೆಯಿದ್ದರೂ ಶೂಲಕ್ಕೇರಿಸುವ ನಡವಳಿಕೆಯಿರಲಿಲ್ಲ. ಸರಕಾರದ ಅಧಿಕಾರಿಗಳಿಗೆ ಸಂಬಳವು ಇಂತಿಷ್ಟೆಂದು ಗೊತ್ತು ಮಾಡಲ್ಪಟ್ಟಿದ್ದರಿಂದ ರೈತರ ಮೇಲೆ ಹಣಕ್ಕಾಗಿ ಒತ್ತಾಯಿ ಬಲವಂತಗಳು ನಡೆಯುತ್ತಿರಲಿಲ್ಲ. ದೇಶದಲ್ಲಿ ಹಿಂಸೆಯು ಹೆಸರಿಲ್ಲ; ನೆರೆ ಕುಡಿತದ ಕುರುಹಿಲ್ಲ; ಈರುಳ್ಳಿ ಬೆಳ್ಳುಳ್ಳಿಗಳ ತಿನಸಿಲ್ಲ. ದನಗಳ ಮಾರಾಟವಿಲ್ಲ; ಪೇಟೆಯಲ್ಲಿ ಕಟುಕರ ಅಂಗಡಿಗಳಿಲ್ಲ; ಭಿಕ್ಷುಗಳಿಗೆ ಅರಸರಿಂದ ಅನ್ನಬಟ್ಟೆಗಳ ಏರ್ಪಾಟು ಮಾಡಲಾಗುತ್ತಿತ್ತು. ಒಟ್ಟಾರೆ ಜನರು ನೆಮ್ಮದಿಯಿಂದಲೂ, ಆನಂದದಿಂದಲೂ ಬಾಳಿಕೊಂಡಿರುತ್ತಿದ್ದರು." ಎಂದು ಮುಂತಾಗಿ ಬಹು ಪ್ರಶಂಸಾ

ಪೂರ್ವಕವಾಗಿ ಫಾಹಿಯಾನನು ತೆಗೆದಿರುವ ಉದ್ಗಾರಗಳ ಸಾಕ್ಷಿ ಸಾಕಲ್ಲವೇ? ಪ್ರಜೆಗಳಿಗೆ ಸರಕಾರದವರಿಂದ ಯಾವ ವಿಧದಿಂದಲೂ ನಿರ್ಬಂಧವಿರಲಿಲ್ಲವಾದ್ದರಿಂದ ಪ್ರಜೆಗಳಿಗೆ ಈ ರಾಜ್ಯವು ಸುಖಾವಹವಾಗಿದ್ದಿತು. ಜೈನ, ಬೌದ್ಧ ಮುಂತಾದ ಬೇರೆ ಮತದವರು ಅನ್ಯೋನ್ಯವಾಗಿ ಬಹು ಹಾಯವಾಗಿರುತ್ತಿದ್ದರು. ಅವರಿಗೆ ರಾಜನಿಂದಾಗಲಿ, ಬೇರೆ ಮತದವರಿಂದಾಗಲಿ ಎಳ್ಳಷ್ಟು ತೊಂದರೆ ತಟ್ಟುತ್ತಿರಲಿಲ್ಲ. ಈ ಮೇರೆಗೆ ಪ್ರಜೆಗಳ ಸೌಖ್ಯಕ್ಕಾಗಿಯೇ ತನ್ನ ರಾಜ್ಯವನ್ನು ಪಾಲಿಸುತ್ತಿದ್ದ ಚಂದ್ರಗುಪ್ತನು ಮಡಿದು ಹೋದ ಬಳಿಕ ಅವನ ಮಗನಾದ ಕುಮಾರಗುಪ್ತನು ಪಟ್ಟಕ್ಕೇರಿದನು. ಈತನು ಅಜ್ಜ ತಂದೆಗಳಂತೆ ಹೆಚ್ಚಿನ ರಾಜ್ಯವನ್ನು ಗಳಿಸುವ ಹವ್ಯಾಸಕ್ಕೆ ಬೀಳದೆ, ಹಿರಿಯರು ಗಳಿಸಿಟ್ಟ ರಾಜ್ಯವನ್ನೇ ಸರಿಯಾಗಿ ಕಾಯ್ದುಕೊಂಡು ತನ್ನ ಅಜ್ಜನಂತೆ ಅಶ್ವಮೇಧಯಾಗವನ್ನು ನೆರವೇರಿಸಿದನು. ಇದರ ಮೇಲಿಂದ ಈತನಾದರೂ ಅನೇಕ ರಾಜ್ಯಗಳನ್ನು ಗೆದ್ದಿರಬೇಕೆಂದು ತರ್ಕಿಸಲಿಕ್ಕೆ ಅಸ್ಪದವಿದೆ. ಹಾಗಿರದಿದ್ದರೆ ಅಶ್ವಮೇಧಯಜ್ಞದ ಅವಶ್ಯಕತೆ ಏನಿತ್ತು? ಆದರೂ ಈ ಬಗ್ಗೆ ವಿಶೇಷ ಸಂಗತಿಯೇನೂ ದೊರೆತಿಲ್ಲ. ಕುಮಾರಗುಪ್ತನ ತರುವಾಯ ಸ್ಕಂದಗುಪ್ತನೆಂಬವನು ಪಟ್ಟಕ್ಕೆ ಕುಳಿತನು. ಈತನ ಆಳಿಕೆಯಲ್ಲಿ ಏಸಿಯದ ಟೈಲಿನೊಳಗಿರುವ ಹೂಣರೆಂಬ ಕಾಡುಜಾತಿಯ ಜನರು ಹಿಂದೂದೇಶಕ್ಕೆ ಚಿಟ್ಟೆಗಳಂತೆ ಸಾಗಿಬಂದರು. ಇವರಿಗೆ ಸಂಬಂಧಪಟ್ಟ ಒಬ್ಬ ವೀರಪುರುಷನಾದ ಅಟೀಲಾ ಎಂಬವನು ತಸ್ಮೊಡನೆ ಈ ಜನರ ದೊಂದು ಗುಂಪನ್ನು ಕಟ್ಟಿಕೊಂಡು ಯುರೋಪದೊಳಗೆ ಹೊಕ್ಕು ಅಲ್ಲಿ ತನ್ನ ಕೈಬಲದಿಂದ ಒಂದು ಸಾಮ್ರಾಜ್ಯವನ್ನು ಕಟ್ಟಿದನು. ಏಸಿಯದ ಕಪೆಗೆ ಮುಖ ತಿರುವಿದ ಹೂಣರು ಕಾಬೂಲದಲ್ಲಿ ಆಳುತ್ತಿರುವ ಕುಶಾನರಾಜನನ್ನು ಹಣ್ಣುಗೊಳಿಸಿ, ಅಲ್ಲಿಂದ ನೇರವಾಗಿ ಹಿಂದೂದೇಶವನ್ನು ಕ್ರಿ. ಶ. ೪೫೫ ರಲ್ಲಿ ನುಗ್ಗಿದರು. ಆದರೆ ಮೊದಲನೇ ಹೊಡತಕ್ಕೇನೇ ಸ್ಕಂದಗುಪ್ತನು ಹೂಣರ ಈ ಚಿಟ್ಟೆಗಳನ್ನು ಬಹು ಪರಾಕ್ರಮದಿಂದ ಹೊಡದೋಡಿಸಿ ಹಿಂದೂದೇಶವನ್ನು ಕಾಯ್ದನು. ಪರರಾಯರ ದಾಳಿಯಿಂದ ಭಾರತಭೂಮಿಯನ್ನು ಕಾಯ್ದುದರ ಗುರುತಿಗಾಗಿ

ಸ್ಕಂದನು ಗೋರಖಪುರ ಜಿಲ್ಲೆಯೊಳಗೆ 'ಭತರಿ' ಎಂಬುವಲ್ಲಿ ಒಂದು ಜಯಸ್ತಂಭವನ್ನು ನಿಲ್ಲಿಸಿದನು. ಮುಂದೆ ಹತ್ತು ವರ್ಷಗಳ ವರೆಗೆ ಸ್ಕಂದನು ಶಾಂತವಾಗಿ ಆಳುತ್ತಿದ್ದನು; ಆದರೆ ಹೂಣರಿಗೆ ಹಿಂದೂ ದೇಶದ ಸಂಪತ್ತಿಯ ಸವಿಹತ್ತಿರುವದೊಂದು ಹುಲಿಗೆ ಮನುಷ್ಯನ ಮಾಂಸದ ರುಚಿಹತ್ತಿದಂತಾಗಿ ಅವರು ಬಲವಾದ ಸೈನ್ಯದೊಡನೆ ಮತ್ತೆ ಹಿಂದೂದೇಶಕ್ಕೆ ನಾಗಿಬಂದರು. ಈ ಸಂದರ್ಭಕ್ಕೆ ಗುಪ್ತರಾಜ್ಯವು ಗಟ್ಟಿಗರಾದ ಅಂಕೆಯುಲ್ಲಿರದ್ದರಿಂದ ಹೂಣರ ಹಾವಳಿಗೆ ಅದು ಹೊರಳಿ ಬಿದ್ದಿತು; ಗುಪ್ತರಾಜ್ಯವು, ವಿನಾಶವು ನಷ್ಟವಾಯಿತು. ದೊಡ್ಡ ಹಳ್ಳದ ಹೊಯ್ಲು ಹಾಯ್ದು ಕೆಲದಿನಗಳಾದ ನಂತರ ಆ ಹೊಯ್ಲಿನ ಗುರುತೆಂದು ಚಿಕ್ಕ ಚಿಕ್ಕ ನೀರಿನ ಗುಂಡಿಗಳು ನಿಂತುಕೊಂಡಿರುವಂತೆ, ಗುಪ್ತಸಾಮ್ರಾಜ್ಯವು ಕರಗಿ ಹೋಗಿ, ಆ ಸಾಮ್ರಾಜ್ಯದ ಚಿಕ್ಕದೊಂದು ಗುಂಡಿಯು ಮಗಧರಾಜ್ಯದೊಳಗೆ ಉಳಿದುಕೊಂಡು, ಅಲ್ಲಿ ಬಾಲಾದಿತ್ಯ ಅಥವಾ ನರಸಿಂಹಗುಪ್ತನೆಂಬವನು ರಾಜ್ಯವಾಳುತ್ತಿದ್ದನು. ಈತನು ಬೌದ್ಧಧರ್ಮಪಕ್ಷಪಾತಿಯಿದ್ದು ಮಗಧದೇಶದೊಳಗಿನ ನಾಲಂದದಲ್ಲಿ ಮುನ್ನೂರಡಿ ಎತ್ತರವಾದೊಂದು ಒಬ್ಬದೇವಾಲಯವನ್ನು ಕಟ್ಟಿಸಿದನು. ಹೀಗೆ ನಸೆಯುತ್ತ ನಪಯುತ್ತ ನಡೆದ ಗುಪ್ತಮನೆತನವು ನೂರಾರು ವರ್ಷಗಳ ವರೆಗೆ ಹಾಗೂ ಹೀಗೂ ಜೀವಾ ಹಿಡಿದುಕೊಂಡಿತ್ತು; ಮುಂದೆ ಶ್ರೀಹರ್ಷನು ಕಾಲವಾದ ನಂತರ ಗುಪ್ತಮನೆತನದಲ್ಲಿಯೇ ಆದಿತ್ಯಗುಪ್ತನೆಂಬವನೊಬ್ಬನು ಮೈದೋರಿ ಸ್ವತಂತ್ರನಾಗಿ ಸಾರ್ವಭೌಮನೆಂದೆನಿಸಿಕೊಂಡು ಕ್ಷಣಕಾಲ ಮಿಂಚಿಹೋದನು. ಗುಪ್ತರಾಜಮನೆತನದ ಈ ಕೊನೆಯ ಜ್ಯೋತಿಯು ಆರಿದ ನಂತರ ಅದರಲ್ಲಾರೂ ಶ್ರೇಷ್ಠಪುರುಷರು ಹುಟ್ಟಿದ್ದರಿಂದ ಆ ರಾಜ್ಯವು ವಾಲಮನೆತನದ ರಾಜರಿಗೆ ಸೇರಿಹೋಯಿತು.

ಹಿಂದೂದೇಶದಲ್ಲಿ ಹೂಣರ ರಾಜ್ಯ:— ಹೂಣರು ಹಿಂದೂದೇಶಕ್ಕೆ ದಾಳಿಯೆತ್ತಿಕೊಂಡು ಬಂದ ವೇಳೆಯು ಅವರಿಗೆ ಕೆಲದಿನಗಳವರೆಗಾದರೂ ಶುಭಕಾಲವಾಗಿ ಪರಿಣಮಿಸಿತೆನ್ನಬಹುದು; ಏಕೆಂದರೆ ಈ ಸಂಧಿಯಲ್ಲಿ ಗುಪ್ತರಾಜ್ಯಕ್ಕೆ ಇಳಿಗಾಲದ ಇದಿಯು ಬೆನ್ನಟ್ಟಿದ್ದರಿಂದ

ಅವರೆಷ್ಟು ವಿಧವಾಗಿ ಹಿಂದೂದೇಶ ರಕ್ಷಣೆಗಾಗಿ ಹೋರಾಡಿದರೂ ಕೊನೆಗೆ ಹಿಂದೂರಾಜರಿಗೆ ಸೋಲಾಗಿ ಹೂಣರ ಮುಖಂಡನಾದ ತೋರಮಾಣನೆಂಬವನಿಗೆ ಜಯ ದೊರೆಯಿತು. ತೋರಮಾಣನು ಮಾಳವ ಪ್ರಾಂತದೊಳಗೆ ತನ್ನದೊಂದು ರಾಜ್ಯವನ್ನು ಕಟ್ಟಿ ಹಿಂದೂ ಜನರ ಪದ್ಧತಿಯಂತೆ 'ಮಹಾರಾಧಿರಾಜ' ಎಂಬ ಗೌರವದ ಬಿರುದನ್ನು ಧರಿಸಿದನು. ಈತನಿಗೆ ಕಾಶ್ಮೀರವಾಡದ ವಲಭಿ ರಾಜರೂ, ಬೀರೆ ಕೆಲ ಮಂದಿ ಸ್ಥಾನಿಕ ಪಾಳೆಗಾರರು ಕಪ್ಪಕಾಣಿಕೆ ಕೊಡುತ್ತಿರುವಂತೆ ಕಾಣುತ್ತದೆ. ತೋರಮಾಣನ ತರುವಾಯ ಮಹಾಕುಲನೆಂಬ ಅತನ ಮಗನೇ ಪಟ್ಟಕ್ಕೆ ಕುಳಿತನು. ಈತನು ತನ್ನ ರಾಜಧಾನಿಯನ್ನು ಸಿಯಾಲಕೋಟಕ್ಕೆ ಒಯ್ದನು. ಸ್ವಭಾವದಿಂದ ಬಹು ಕ್ರೂರನೂ, ನಿರ್ದಯನೂ, ಉನ್ಮತ್ತನೂ ಇರುವದರಿಂದ ಬಲುಮೆಯಿಂದ ನೆರೆಹೊರೆಯ ರಾಜರಿಂದ ಈತನು ಕಪ್ಪುಕಾಣಿಕೆಗಳನ್ನೆತ್ತುವ ಉದ್ದಾಮಕ್ರಮವನ್ನು ನಡಿಸಿದ್ದನು. ಯಮನಂತಿರುವ ಈತನ ಉರವಣಿಗೆಗೆ ನೆರೆಯ ರಾಜರೂ, ಪ್ರಜೆಗಳೂ ಬೇಸತ್ತು ಬೇಲಿ ಹೊಕ್ಕಿದ್ದರು. ಈತನ ಉಪಟಳಕ್ಕಾಗಿ ಒಂದಿಲ್ಲೊಂದು ಉಪಾಯದಿಂದ ಈತನ ರಾಜ್ಯವನ್ನೇ ಬುಡಮೇಲು ಮಾಡಿಬಿಡಬೇಕೆಂದು ಕೆಲವರು ರಾಂಘಿಕವಾಗಿ ಪ್ರಯತ್ನ ನಡೆಯಿಸಿದರು. ಈ ರಾಂಘಿಕ ಪ್ರಯತ್ನದೊಳಗೆ ಮಾಳವದೇಶದ ಬಲಾಢ್ಯ ಬ್ರಾಹ್ಮಣ ಅರಸನಾದ ಯಶೋಧರ್ಮ ವಿಷ್ಣುವರ್ಧನನೆಂಬುವನೂ, ಬಾಲಾದಿತ್ಯನೂ ಅವರೀರ್ವರೂ ಮುಂದಾಳಾಗಿ ನಿಂತು ಕಾಳಗ ಗೊಟ್ಟರು. ಈ ಕಾಳಗದೊಳಗೆ ಮಿಹಿರಕುಲನು ಸೋತು ಸುಣ್ಣಾಗಿ ತನ್ನನ್ನು ಸೋಲಿಸಿದ ಉಭಯ ವೀರರ ವಾದಗಳಿಗೆ ತನ್ನ ತಲೆಯಲ್ಲಿರುವ ಹೂವಿನ ಕುಚ್ಚುಗಳನ್ನು ಅರ್ಪಿಸಿ ಶರಣಾಗತನಾದನು. ಆಗ ಮಿಹಿರಕುಲನಿಗೆ ಜೀವದಾನಕೊಟ್ಟು ಅವನನ್ನು ಉತ್ತರ ದಿಕ್ಕಿಗೆ ಅಟ್ಟಿಬಿಟ್ಟರು; ಆದರೆ ಹಾವಿನ ಜಾತಿಯವನಾದ ಮಿಹಿರಕುಲನು ಮತ್ತೆ ತಿರಿಗಿ ಬಂದು ನೋಡುವಷ್ಟರಲ್ಲಿ ತನ್ನ ಒಡಹುಟ್ಟಿದ ತಮ್ಮನೇ ರಾಜ್ಯವಾಳುತ್ತಿದ್ದುದನ್ನು ನೋಡಿ ಸಹಿಸದೆ, ಕಾಶ್ಮೀರದ ರಾಜ್ಯವನ್ನಾಶ್ರಯಿಸಿ, ಮೊದಲು ಮೆತ್ತಗೆ ತಾನು ಕಾಲುಚಾಚಿ ಅಲ್ಲಿ ತನ್ನ ಬೇರು ಬಿಟ್ಟು

ಕೊಂಡು ಇರುತ್ತಿರಲು ಸಂಧಿಸಾಧಿಸಿ ಆ ರಾಜನನ್ನು ಕೊಂದು ರಾಜ್ಯವನ್ನು ತಾನು ಕಸಿದುಕೊಂಡು ಅಳಬೇಕೆಂಬ ದುರುದ್ದೇಶದಿಂದ ಬಂಡಾಯವೆಬ್ಬಿಸಿ ಅಸಂಖ್ಯವಾಗಿ ಪ್ರಜೆಗಳ ಕೊಲೆಮಾಡಿದನು. ಈತನು ಶೈವನು. ಈತನ ಕೃತಿಗಳೆಲ್ಲವೂ ಹಿಂದೂಜನರ ಮಟ್ಟಿಗೆ ಬಹು ಕ್ರೂರವಾಗಿಯೂ, ಕಠೋರವಾಗಿಯೂ ಕಾಲರುದ್ರನಂತಿದ್ದವು. ಈತನ ತಲೆಯಿಂದಲೇ ಹೂಣರ ರಾಜ್ಯವು ಹೂತುಹೋಗಿ ಹೂಣರು ಹಿಂದೂಜನರೊಡನೆ ಕಲೆತು ಒಂದಾಗಿ ಹೋದರೂ, ಕೊನೆಯ ವರೆಗೆ ಹೂಣರೆಂದರೆ ಕಾಡುಜನರೆಂಬ ಹೆಸರು ಸಂಸ್ಕೃತವಾಙ್ಮಯದೊಳಗೆ ಸ್ಥಿರವಾಯಿತು. ಮಿಹಿರಕುಲನು ಹಿಂದೂಜನರಿಗೆ ರಾಕ್ಷಸನಾಗಿ ದುರಾಚರಣೆಯಿಂದ ನಡೆದುಕೊಂಡದ್ದೇ ಹೂಣರಿಗೆ ಈ ಕೆಟ್ಟ ಹೆಸರು ತರಲಿಕ್ಕೆ ಕಾರಣವಾಯಿತು.

ದಕ್ಷಿಣಹಿಂದುಸ್ಥಾನ:— ಉತ್ತರಹಿಂದುಸ್ಥಾನದೊಳಗೆ ಈ ಮೇರೆಗೆ ಹೂಣ ಗುಪ್ತರಲ್ಲಿ ಕದನಗಳು ನಾಗುತ್ತಿರಲು, ದಕ್ಷಿಣಹಿಂದೂದೇಶವು ಯಾವ ಸ್ಥಿತಿಯಲ್ಲಿತ್ತೆಂಬದನ್ನು ನೋಡುವಾ— ಉತ್ತರಹಿಂದೂದೇಶದಾಚೆಕಡೆಯ ಎಲ್ಲೆಯಲ್ಲಿ ವಿಜಾತಿಯ ಜನರು ವಾಸವಾಗಿದ್ದರು. ಈ ವಿಜಾತಿಯ ಜನರಿಗೆ ಹಿಂದೂದೇಶದೊಳಗೆ ಸೇರಲಿಕ್ಕೆ ಪಂಜಾಬದ ದಾರಿಯೊಂದೇ ಉಳಿದಿರುವದರಿಂದ ಪರರಾಯರ ದಾಳಿಗೆ ಎದೆಗೊಡುವ ಪ್ರಸಂಗವು ಉತ್ತರಹಿಂದೂದೇಶದವರಿಗೆ ಆಗಾಗ್ಗೆ ಪ್ರಾಪ್ತವಾಗುತ್ತಿದ್ದುದರಿಂದ ಅದು ಅವರಿಗೆ ದಡ್ಡುಗಟ್ಟಿ ಹೋದಂತಾಗಿತ್ತು. ಅಂತೂ ಉತ್ತರಹಿಂದೂದೇಶವೆಂದರೆ ಬಂದು ರೀತಿಯಿಂದ ಅನೇಕ ಶತಮಾನಗಳ ವರೆಗೆ ರಣರಂಗಸ್ಥಳವಾಗಿತ್ತೆನ್ನಲಿಕ್ಕೆ ಅಡ್ಡಿಯಿಲ್ಲ. ಇದರಿಂದ ಸ್ವಾಭಾವಿಕವಾಗಿಯೇ ಉತ್ತರದ ಜನರಲ್ಲಿ ಕ್ಷಾತ್ರತೇಜವು ಹೆಪ್ಪುಗಟ್ಟಿ ಹೆಚ್ಚು ಧೈರ್ಯವಾಗಿ ಪೈಯೊಡ್ಡಲಿಕ್ಕೆ ಹಚ್ಚತೆಂಬುದಕ್ಕೆ ಒಂದೆರಡು ಶತಕಗಳ ಅಂತರದಲ್ಲಿ ಅಲ್ಲಿ ನಡೆದ ಅನೇಕ ರಾಜ್ಯವಿಪ್ಲವಗಳೂ, ಅನಾಹೂತಗಳೂ ಅವೇ ದೃಷ್ಟಾಂತಗಳು ನಾಕು. ಕ್ಷಾತ್ರತೇಜವು ಕೈಮುಚ್ಚಿಕೊಂಡು ಕುಳ್ಳಿರಗೊಡುವದಿಲ್ಲ. ಎಲ್ಲರಲ್ಲಿಯೂ ತಕ್ಕಮಟ್ಟಿಗೆ ಹೆಚ್ಚು ಕಡಿಮೆ ಕ್ಷಾತ್ರವೀರ್ಯವು ಉಕ್ಕುತ್ತಿದ್ದುದರಿಂದ, ಸಾಮಾ

ನ್ಯನಾದ ವೀರನಿಗೆ ಇವರು ಸಹಜವಾಗಿ ಈಲಾಗುತ್ತಿರಲಿಲ್ಲ. ಅಂಥ ಅಪ್ರತೀಮ ವೀರನು ಎರಡನೇ ಮೂರನೇ ಶತಮಾನಗಳಲ್ಲಿ ಹುಟ್ಟಿದ್ದರಿಂದ ದೇಶವೆಲ್ಲ ಅನಾಯಕವಾಯಿತು. ಇರಲಿ, ಉತ್ತರಹಿಂದೂ ದೇಶಕ್ಕೂ ದಕ್ಷಿಣಹಿಂದೂದೇಶಕ್ಕೂ ಬಹುದೂರದ ಅಂತರವಿರುವದರಿಂದ ಉತ್ತರದವರಿಗೆ ದಕ್ಷಿಣದ ವರೆಗೆ ಸುಲಭವಾಗಿ ಬರಲಿಕ್ಕಾಗುತ್ತಿರಲಿಲ್ಲ. ಬಂದರೆ ಅಂಥ ವೀರರು ಬರಬೇಕು. ಹೀಗೆ ವಸ್ತುಸ್ಥಿತಿಯಿದ್ದುದರಿಂದ ದಕ್ಷಿಣದೊಳಗೆ ಬಹು ಕಾಲದಿಂದ ಆಳಿಕೊಂಡಿರುವ ಚೋಳ, ಚೇರ, ಪಾಂಡ್ಯ, ಪಲ್ಲವ, ಗಂಗ ಮೊದಲಾದವರಿಗೆ ಯಾವ ವಿಧದ ಆಡ್ಡಿಯಿಲ್ಲದೆ ರಾಜ್ಯ ನಡಿಸಲಿಕ್ಕೂ ದ್ವೀಪಾಂತರಗಳಿಗೆ ಹೋಗಿ ವ್ಯಾಪಾರ ನಡಿಸಲಿಕ್ಕೂ ಸುಲಭವಾಗುತ್ತಿತ್ತು. ದಕ್ಷಿಣದೇಶದ ರಾಜರುಗಳು ಅಂತಃಕಲಹದ ಮಡುವಿಗೆ ಸಿಕ್ಕು ತಂಡವಾಗಿರುವ ನೋಟವೇ ಪದೆ ಪದೆ ನೋಡಲಿಕ್ಕೆ ಸಿಗುತ್ತಿತ್ತೇ ಹೊರ್ತು ಪರರಾಯರ ದವಡೆಗೆ ಶಿಲ್ಕಿರುವ ನೋಟವು ಬಹು ಕಡಿಮೆ. ಕೃಷ್ಣಾ ನರ್ಮದೆಗಳ ನಡುವಿನ ಪ್ರದೇಶವನ್ನು ಗುಪ್ತರಾಳಿಕೆಯಲ್ಲಿ ವಾಕಾತಕ ಮನೆತನದವರು ಆಳುತ್ತಿದ್ದರಿಂದ ಅವರಿಗೂ ಗುಪ್ತರಾಜರಿಗೂ ಶರೀರಸಂಬಂಧವಾಗಿತ್ತು.

ಬೌದ್ಧಿಕ ಬೆಳವಳಿಗೆ:– ಗುಪ್ತರಾಜರು ವೈದಿಕ ಭಕ್ತರಿದ್ದ ಸಂಗತಿಯು ಅವರು ಆಯಾ ಕಾಲದಲ್ಲಿ ಸಿದ್ಧಗೊಯ್ದ ಅಶ್ವಮೇಧಾದಿಗಳಿಂದ ವ್ಯಕ್ತವಾಗುತ್ತದೆ; ಹೀಗಿದ್ದ ಮೂಲಕವೇ ಅಪರಲ್ಲಿ ವೈದಿಕಸಂಸ್ಕೃತಿಯ ಸರ್ವಸ್ವವಾದ ಸಂಸ್ಕೃತವಿದ್ಯೆಯು ದೆಸೆಯಿಂದ ಅಭಿಮಾನವಿರುವದು ಸ್ವಾಭಾವಿಕವೇ ಸರಿ. ಇದುವರೆಗೆ ವೈದಿಕ ಅಭಿಮಾನಿಗಳಾದ ಅರಸರ ಆಸರ ಸಿಗದ್ದರಿಂದಲೂ, ಬೌದ್ಧರ ಗದ್ದಲದಿಂದಲೂ ಸಂಸ್ಕೃತ ವಿದ್ಯೆಗೆ ತಟ್ಟಿರುವ ಮಾಲಿನ್ಯವು ಬಲುಮಟ್ಟಿಗೆ ಹಾರಿ ಹೋಗಿ ಗುಪ್ತ ಅರಸರ ಆಳಿಕೆಯಲ್ಲಿ ಅದಕ್ಕೊಂದು ಬಗೆಯ ಮಿಂಚು ಕೊಡಲಾಯಿತು. ವೈದಿಕಧರ್ಮದ ಬೇರೆ ಬೇರೆ ಪಂಗಡಗಳಾದ ಶೈವ, ವೈಷ್ಣವ ಮತಗಳನ್ನು ಪುಷ್ಟೀಕರಿಸುವಂಥ ಗ್ರಂಥಗಳೂ ಬೇರೆ ಕೆಲವು ಉಪನಿಷತ್ತುಗಳೂ, ಧನುರ್ವಿದ್ಯೆ, ನಾಟ್ಯವಿದ್ಯೆ, ಶಿಲ್ಪವಿದ್ಯೆ, ಅವುಗಳ ಬಗ್ಗೆ ಅನೇಕ ಶ್ಲೋಕಬದ್ಧ ಗ್ರಂಥಗಳಾದವು. ಒಹು ಶತಾಬ್ದದಿಂದ ಮೊಂಡವಾಗಿ

ಕುಳಿತ ವೈದಿಕ ಪಂಡಿತರ ಲೆಕ್ಕಣಿಕೆಯು ಈ ಕಾಲದಲ್ಲಿ ಚಿಗುರೊಡೆದು ಕೊಂಡ ನಿರಂಕುಶವಾಗಿ ವಿಹರಿಸಲು ಅವಕಾಶ ದೊರೆಯುತು. ಪಾಟಲೀಪುತ್ರದೊಳಗೆ ಆರ್ಯಭಟ್ಟನೆಂಬ ಗಣೀತಜ್ಞನು ಜನ್ಮನೆತ್ತಿ (೪೭೦ ಕ್ರಿ. ಶ.) ಭಾರತೀಯರ ಜ್ಯೋತಿಷಶಾಸ್ತ್ರವನ್ನು ಮುನ್ನಡೆಯ ಹಚ್ಚಿದನು. ದೇವರು ದಯಪಾಲಿಸಿರುವ ಸೂಕ್ಷ್ಮಬುದ್ಧಿಯಿಂದ ಈತನು ತನ್ನ ೨೩ ನೇ ವರ್ಷವೇ ತುಕ್ಕು ಹಿಡಿದ ಭಾರತೀಯ ಜ್ಯೋತಿಷಶಾಸ್ತ್ರವನ್ನು ಕುರಿತು ಮೊದಲನೇ ಗ್ರಂಥ ಬರೆದು ಸೂರ್ಯನ ಸುತ್ತು ಪೃಥ್ವಿಯು ತಿರುಗುತ್ತಿರುವುದರ ಮರ್ಮವನ್ನು ಜನರಿಗೆ ತಿಳಿಸಿ ಕೊಟ್ಟದ್ದಲ್ಲದೆ, ಸೂರ್ಯಗ್ರಹಣ, ಚಂದ್ರಗ್ರಹಣಾದಿಗಳ ನಿಜವಾದ ಅರ್ಥವನ್ನು ಹೇಳಿ ಬಹು ದಿನಗಳಿಂದ ಬಳ್ಳಿಗುರುಡರಂತೆ ನಡೆಯುತ್ತಿದ್ದ ಹಿಂದೂ ಜನಾಂಗಕ್ಕೆ ಹೊಸದೊಂದು ಕಣ್ಣು ಕೊಟ್ಟನು. ಯಾವ ವಿದ್ಯೆಗಳಾಗಲಿ ಏಳಿಗೆ ಹೊಂದಲಿಕ್ಕೆ ರಾಜಾಶ್ರಯವಿದ್ದೇ ತೀರಬೇಕು. ಪೈರುಗಳಿಗೆ ಮಳೆರಾಜನ ಆಶ್ರಯ ದೊರೆತರೆ, ಅವು ಹೇಗೆ ಭರದಿಂದ ಬೆಳೆದು, ಜನರ ಕಣ್ಣಿಗೂ, ಮನಸಿಗೂ, ದೇಹಕ್ಕೂ, ಆನಂದ ಕೊಡಲು ಸಮರ್ಥವಾಗುವವೋ ಹಾಗೆಯೇ ಪಂಡಿತರ ಕಾರ್ಯವು. ಬುದ್ಧಿದೇವತೆಯಾದ ಸರಸ್ವತಿಗೆ ಲಕ್ಷ್ಮೀದೇವಿಯ ಬೆಂಬಲವಿಲ್ಲದೆ ಹೋದರೆ ಸರಸ್ವತಿಯು ಕಾಡಿನೊಳಗಿನ ಕಂಪಾದ ಹೂಗಳಂತೆ ಬಾಡಿ ಹೋಗುವದೇ ಸರಿ; ಆದರೆ ಸಾಂಪ್ರತಕಾಲಕ್ಕೆ ಗುಪ್ತರಾಜರು ಸಂಸ್ಕೃತವಿದ್ಯೆ, ವೈದಿಕ ಸಂಸ್ಕೃತಿ ಅವೆರಡನ್ನೂ ಹಿಡಿದೆತ್ತಿ ಜೀರ್ಣೋದ್ಧಾರ ಮಾಡಬೇಕೆಂದು ಕಂಕಣಬದ್ಧರಾಗಿ ನಿಂತುದರಿಂದ ಆರ್ಯರ ಬುದ್ಧಿಶಕ್ತಿಗೆ ನೀರೆರೆದಂತಾಯಿತು. ಯಥೇಚ್ಛವಾಗಿ ನೀರುಂಡು ತೃಪ್ತಿಪಡೆದಿರುವ ಆ ಬುದ್ಧಿಶಕ್ತಿಯಿಂದ ಆ ಮೇಲೆ ಕಾಲಿದಾಸಾದಿಗಳಂಥ* ಜಗದ್ವಂದ್ಯರಾದ ಕವಿ

* ಟಿಪ್ಪಣಿ– ಕಾಲಿದಾಸನ ಜನ್ಮ ಮೊದಲಾದವುಗಳ ಬಗ್ಗೆ ಆಧಾರಭೂತವಾದ ಐತಿಹಾಸಿಕ ಸಂಗತಿಗಳೇನೂ ತಿಳಿಯುವದಿಲ್ಲ; ಆದರೂ ಇತ್ತೀಚೆ ದೊರೆತ ಕೆಲವು ಆಧಾರಗಳಿಂದ ಕಾಲಿದಾಸನು, ಸ್ಕಂದಗುಪ್ತನ ಕಾಲಕ್ಕೆ ಇದ್ದನು. ಕುಮಾರಧಾತುಸೇನನೆಂಬ ಸಿಂಹಲದ್ವೀಪದ ಅರಸನು ಕಾಲಿದಾಸನನ್ನು ತನ್ನ ನಾಡಿಗೆ ಕರೆಕಳಿಸಿ ಆತನಿಗೆ ಮರ್ಯಾದೆಮಾಡಿ ಕೆಲದಿನ ಅಲ್ಲಯೇ ಇಟ್ಟುಕೊಂಡನು. ನಂತರ, ಕಾಲಿದಾಸನು ತನ್ನ ದೇಶಕ್ಕಾಗಿ ಹೊರಟನು. ಆದರೆ ದಾರಿಯಲ್ಲಿಯೇ ಅಕಸ್ಮಿಕವಾಗಿ ಕಾಲಿದಾಸನು ಮಡಿದ ಸುದ್ದಿಯನ್ನು

ಸಮ್ರಾಟರು ಹುಟ್ಟುವಲ್ಲೇನಾಶ್ಚರ್ಯ? ಕಾಲಿದಾಸನ ಕಾಲಕ್ಕೆ ವಿಕ್ರಮಾದಿತ್ಯ ಓಲಗವು ಇಂಥ 'ನವರತ್ನ' ಗಳಿಂದ ಝಗಝಗಿಸುತ್ತಿದ್ದಿತು. ಪ್ರಾಚೀನ ಸಂಸ್ಕೃತವಾಙ್ಮಯಕ್ಕೆ ರಾಮಾಯಣವು ಹೇಗೋ ಹಾಗೆ ಅಧುನಿಕ ಸಂಸ್ಕೃತಕ್ಕೆ ಕವಿಕುಲತಿಲಕ ಕಾಲಿದಾಸನ ಕಡುಗಂಪಿನ ಕೃತಿಗಳು. ಅದೊಂದು ರಸಗಾಲ ಬದಗಿತು; ಕಾವ್ಯರಸದ ತಿಳಿಗೊಳವು ಕಾಲಿದಾಸನ ಕಾಲಕ್ಕೆ ತುಂಬಿ ಸೂಸಿ ಹರಿಯಿತು. ಒಮ್ಮೆ ಹರಿದು ಹೋದ ಆ ತಿಳಿಗೊಳಕ್ಕೆ ವಾಸಕ್ತಿಯಾಗುವ ಕಾವ್ಯರಸವು ಕೊನೆಯ ವರೆಗೂ ಹಾಗೇ ಹರಿಯದೆ ಅಲ್ಲಲ್ಲೇ ಇಂಗಿ ಹೋಗಿಯಿತು. ಆ ತಿಳಿನೀರಿನ ಗುಂಡಿಗಳು ಈಗ್ಯೂ ಶಕುಂತಲಾ, ವಿಕ್ರಮೋರ್ವಶಿ, ಮೇಘದೂತಗಳೆಂಬ ಹೆಸರುಗಳಿಂದ ನಮ್ಮೆದುರಿಗೆ ನಲಿದಾಡುತ್ತಿವೆ. ಕಾಲಿದಾಸನೆಂದರೆ ಆರ್ಯರ ಬುದ್ಧಿವೈಭವ; ಸಂಸ್ಕೃತವಿದ್ಯೆಗೂ, ನಮ್ಮ ಸಂಸ್ಕೃತಿಗೂ ಅವನೊಂದು ತುಟ್ಟತುದಿಯಲ್ಲಿ ತೊಟ್ಟಿಕ್ಕಿ ತೂಗಾಡುವ ತನಿವಣ್ಣು. ಅತನ ಮಧುರವಾಣಿಗೆ ಕಟ್ಟುಬಿದ್ದು ಭಾರತಸರಸ್ವತಿಯು ಧನ್ಯಳಾದಳು; ಭಾಸಕವಿಯ ತರುವಾಯದಲ್ಲಿ ಇದೇ ತಾನೇ ವಾಗ್ದೇವಿಯು ಕಾಲಿದಾಸನ ಮುಖಾಂತರವಾಗಿ ಎರಡನೇ ಸಲ ಮೈಗೊಂಡು ಬಂದು ಕಾವ್ಯಗಂಗೆಯಾಗಿ ತಿರುಗಿ ಹರಿಯ ತೊಡಗಿದಳು. ಇದೇ ಶತಮಾನದಲ್ಲಿಯೇ ವರಾಹಮಿಹಿರನೆಂಬ ಪಂಡಿತನು ಭಾರತೀಯ ಜ್ಯೋತಿಷ ಗ್ರಂಥಗಳನ್ನು ತಿದ್ದಿ ಸಂಗ್ರಹಿಸಿ ಪಂಚಸಿದ್ಧಾಂತಿಕಾ ಎಂಬ ಗ್ರಂಥ ಬರೆದುದಲ್ಲದೆ ಹೋರಾಶಾಸ್ತ್ರ, ಬೃಹತ್‌ಸಂಹಿತೆ, ಬೃಹಜ್ಜಾತಕ ಗಳೆಂಬ ಹೊಸ ಗ್ರಂಥಗಳನ್ನು ಬೆಳಕಿಗೆ ತಂದನು. ಅಮರಕೋಶದ ಕರ್ತೃವಾದ ಅಮರಸಿಂಹನೂ, ಭಟ್ಟೀಕಾವ್ಯದ ಬರಹಗಾರನಾದ ವೇತಾಳಭಟ್ಟಿಯೂ, ವರರುಚಿಯೆಂಬ ವೈಯ್ಯಾಕರಣಿಯೂ ಇದೇ

ಕೇಳಿ, ತನ್ನ ಅತನ ಜೀವಾಜೀವ ಗೆಳೆತನಕ್ಕಾಗಿ ಕುಮಾರಧಾತುಸೇನನು ಕಾಲಿದಾಸನು ಮಡಿದೆದೆಗೆ ಧಾವಿಸಿ ಬಂದು ಮಿತ್ರವಿಯೋಗವನ್ನು ಸೈರಿಸಲಾರದೆ, ಅವನನ್ನು ಸುಡುವ ಕಿಚ್ಚಿನಲ್ಲಿಯೇ ತಾನೂ ಹಾರಿಕೊಂಡನಂತೆ! ಈ ಬಗೆಯಾಗಿ, ಕಾಲಿದಾಸನು ಸಿಂಹಲದೇಶದೊಳಗೆ ಗತಿಸಿದನೆಂದೂ, ಈಗಿನ್ನು ಕಾಲಿದಾಸನ ದಫನ ಭೂಮಿಯು ಅಲ್ಲಿ ಇರುತ್ತದೆಂದೂ, ಅಲ್ಲಿಯ ಜನರು ಅದನ್ನು ತೋರಿಸುವರೆಂದೂ ಶ್ರೀ. ಸತೀಶಚಂದ್ರವಿದ್ಯಾಭೂಷಣರೆಂಬುವರು ತಮ್ಮ ಬರೆದಿದ್ದಾರೆ.

ಕಾಲದ ಬುದ್ಧಿಯ ಬೆಡಗುಗಳು. ಈ ಮುಂದೆ ಕೆಲ ದಿನಗಳು ಸಂದು ಹೋದ ನಂತರ ಸಂಸ್ಕೃತವಾಙ್ಮಯಕ್ಕೊಂದು ಸುಗ್ಗಿಯ ಕಾಲವೊದ ಗಿತು, ಈ ಕಾಲಕ್ಕೆ ಸಂಸ್ಕೃತವಾಙ್ಮಯವು ಹುಲನಾಗಿ ಬೆಳೆದು ಪರಿ ಪುಷ್ಟವಾಯ್ತು. ಸಂಸ್ಕೃತವಾಙ್ಮಯದ ನಾನಾ ಬಗೆಯ ಸೌಂದರ್ಯ ಹಾಗೂ ರಸನಾಕಗಳು ಸುಬಂಧು, ದಂಡೀ, ಭಾರವಿ, ಮಾಘ, ನಾರಾ ಯಣಭಟ್ಟೀ (ವೇಣೀಸಂಹಾರ) ಅವರ ಬಾಯ್ತುಂಬಿ ಹೊರಳಲ್ಲಿದವು. ಈ ಕವಿಗಳ ಕೃತಿಗಳನ್ನು ಓದಿದರೆ ಅವುಗಳಲ್ಲಿ ಶಬ್ದಸಂಪತ್ತಿ, ಅರ್ಥ ಸಂಪತ್ತಿ, ರಸಸಂಪತ್ತಿ, ಅವೆಲ್ಲವುಗಳು ಮೊಗವೆತ್ತಿ ಮೆರೆಯುತ್ತಿವೆ; ಅಲ್ಲದೆ ಪ್ರಾಯಕ್ಕೆ ಬಂದ ಮನುಷ್ಯನಲ್ಲಿ ಶೃಂಗಾರಾದಿ ರಸಗಳು ಉಕ್ಕುತ್ತಿದ್ದರೂ, ಅಷ್ಟೇ ಪ್ರಮಾಣದಿಂದ ವೀರರಸವು ಉಕ್ಕುತ್ತಿರುವಂತೆ ಈ ಕಾವ್ಯಗಳಲ್ಲಿ ವೀರವಾಣಿಯು ಸ್ಫುಟವಾಗಿ ಹೊರಡುತ್ತಿದೆ. ಭಾರವಿಕವಿಯ ಕಿರಾತಾರ್ಜುನೀಯ, ಮಾಘಕವಿಯ ಶಿಶುಪಾಲವಧೆ, ನಾರಾಯಣಭಟ್ಟನ ವೇಣೀಸಂಹಾರ ಈ ಕಾವ್ಯಗಳೇ ವೀರವಾಣಿಯ ಖಣಿಗಳು. ಈ ವೀರಕಾವ್ಯಗಳಲ್ಲಿ ಕಾವ್ಯಗಳಿಗೆ ನಾಲಿಗೆಯುಂಟಾಗಿ ಅವು ವಾತನಾಡುತ್ತಿರುವನೆಂಬುವಷ್ಟರ ಮಟ್ಟಿಗೆ ಭಾಸವಾಗುತ್ತಿದೆ. ಬೇರೆ ಶಾಸ್ತ್ರೀಯ ಗ್ರಂಥಸಂಪತ್ತಿಯೂ ಈ ಕಾಲಕ್ಕೆ ತನ್ನಾಗಿಯೇ ಬೆಳೆಯಿತು. ವಾಗ್ಭಟನೆಂಬ ಮಹಾವೈದ್ಯಶಾಸ್ತ್ರಜ್ಞನು ತನಗಿಂತ ಹಿಂದೆ ಆಗಿ ಹೋದ ಅನೇಕ ಗ್ರಂಥಕಾರರ ಗ್ರಂಥಗಳನ್ನೆಲ್ಲ ಸಂಗ್ರಹಿಸಿ, ಅಷ್ಟಾಂಗಹೃದಯವೆಂಬ ವೈದ್ಯಕ ಗ್ರಂಥವನ್ನೂ ರಸರತ್ನಸಮುಚ್ಚಯ ವೆಂಬ ರಸತಂತ್ರವನ್ನೂ ಬರೆದನು. ಮೇಲಾಗಿ ಅಕಳು, ಕುಮುರಿ, ಪೊದ ಲಾದವುಗಳಿಗೆ ಕೊಡಬೇಕಾದ ಔಷಧಶಾಸ್ತ್ರವೂ ಈ ಕಾಲಕ್ಕೆ ಬಹು ಮಟ್ಟಿಗೆ ವಿಕಾಸವಾಗಿ ಅವುಗಳನ್ನು ತಿಳಿಸುವಂಥ ಗ್ರಂಥಗಳಾದವು. ಅನೆಗಳ ಬೀನೆಯ ಚಿಕಿತ್ಸೆಯನ್ನೂ ಅವುಗಳಿಗೆ ಕೊಡತಕ್ಕ ಔಷಧ ಶಾಸ್ತ್ರವನ್ನೂ ಪಾಲಕಾವ್ಯನೆಂಬವನು ರಚಿಸಿದನು. ಮೇಲ್ಕಾಣಿಸಿದ ಸಂಗತಿಗಳಮೇಲಿಂದ ಸಂಸ್ಕೃತವಾಙ್ಮಯದ ಅಭಿವೃದ್ಧಿಯಲ್ಲಿ ಈ ಕಾಲ ದವರು ಎಷ್ಟು ಮುಂದಾಳಾಗಿ ದುಡಿದು, ಅದನ್ನು ಸಂಪನ್ನಗೊಳಿಸಿದ ರೆಂಬುದು ವ್ಯಕ್ತವಾಗುತ್ತದೆ. ಪರಮಾರ್ಥ ಎಂಬೆಸರಿನ ಉಜ್ಜಯಿನಿಯ

ಬ್ರಾಹ್ಮಣನೊಬ್ಬನು ಚೀನದ ಅರಸನ ಅಪ್ಪಣೆಯನ್ನು ಮನ್ನಿಸಿ, ಚೀನ ದೇಶಕ್ಕೆ ಹೋಗಿದ್ದುಕೊಂಡು ಹಿಂದೂದೇಶದೊಳಗಿನ ಅನೇಕ ಗ್ರಂಥಗಳನ್ನು ಚೀನಭಾಷೆಗೆ ಪರಿವರ್ತಿಸಿ, ತನ್ನ ವಯಸ್ಸಿನ ೭೨ನೇ ವರ್ಷಕ್ಕೆ ಅಂದರೆ ಕ್ರಿ. ಶ. ೫೬೯ ರಲ್ಲಿ ಕ್ಯಾಂಟನ್ನದಲ್ಲಿ ಮಡಿದುದರ ಮೇಲಿಂದ ಚೀನರಿಗೂ ಹಿಂದೂಜನರಿಗೂ ಇರುವ ವ್ಯವಹರಣೆ, ಅದರ ಅವುಗಳ ವಿಷಯವು ತಿಳಿಯುತ್ತದೆ. ಇರಾಣದ ಅರಸನ ಅಪ್ಪಣೆಯಿಂದ ಈ ಕಾಲದಲ್ಲಿ ಸಂಸ್ಕೃತ ಪಂಚತಂತ್ರವು ಪೆಹಲವಿಭಾಷೆಯಲ್ಲಿ ಮಾಡಲಾಯಿತು. ತಮಿಳಭಾಷೆಯು ಸಹ ಈ ಕಾಲಕ್ಕೆ ಊರ್ಜಿತಸ್ಥಿತಿಗೇರಿತು. ಇದಕ್ಕೆ ಆ ಭಾಷೆಯನ್ನಾಡುವ ಪ್ರಾಂತದೊಳಗೆ ಮಹಾ ಮಹಾ ಕವಿಗಳೂ ಸತ್ಪುರುಷರೂ ಹುಟ್ಟಿದುದೇ ಕಾರಣ.

ಧಾರ್ಮಿಕಸ್ಥಿತಿ:– ಗುಪ್ತರಾಜರು ವೈಷ್ಣವಮತಾನುಯಾಯಿಗಳಿದ್ದರು. ಅನೇಕ ವರ್ಷಗಳಿಂದ ಯಾರೂ ಪ್ರೋತ್ಸಾಹಕರಿಲ್ಲದೆ ಸೊರಗುತ್ತಿದ್ದ ವೈದಿಕಧರ್ಮಕ್ಕೆ ಇವರಿಂದ ಆತ್ಮೆಗೊಂದು ಕಾಲ, ಸೊಸೆಗೊಂದು ಕಾಲವೆಂಬುವ ನಾಣ್ಣುಡಿಯಂತೆ, ಬೌದ್ಧಮತವು ಕಳೆಗುಂದಿ ಮುಳುಮುಳುಗೇಳುತ್ತಿರಲು ಗುಪ್ತರ ಕೈಯಾಸರ ದೊರೆತುದರಿಂದ ಅದು ಚೇತರಿಸಿಕೊಂಡೆದ್ದಿತು. ಗುಪ್ತರಾಜರು ನಿಜವಾಗಿಯೂ ಬೌದ್ಧಧರ್ಮವನ್ನು ಯಾವ ಬಗೆಯಿಂದಲೂ ಕೀಳಾಗೆಣಿಸದೆ, ತಮ್ಮ ತಮ್ಮ ಕೈಲಾದ ಮಟ್ಟಿಗೆ ಪ್ರೋತ್ಸಾಹಿಸುತ್ತಿದ್ದುದರಿಂದ ಅದು ಇಷ್ಟರ ಮಟ್ಟಿಗಾದರೂ ಜೀವ ಹಿಡಿದುಕೊಂಡಿತ್ತೆನ್ನತಕ್ಕದ್ದು; ಏಕೆಂದರೆ ಕಾಲಚಕ್ರ ಮಹಿಮೆಯಿಂದ ಈಗ ಬೌದ್ಧರು ತಮ್ಮ ಕಾಲ್ಮೇಲೆ ತಾವೇ ಕಲ್ಲು ಹಾಕಿಕೊಳ್ಳುವ ನಡೆಯನ್ನನುಸರಿಸಿದ್ದರು. ಒಂದಾನೊಂದು ಕಾಲಕ್ಕೆ ಅವರಲ್ಲಿ ಹೊಳೆಯುತ್ತಿದ್ದ ಆ ಕೆಂಡದಂಥ ವೈರಾಗ್ಯಭಾಗ್ಯ, ಆ ಸಾಧನಸಂಪತ್ತಿ, ಆ ಕಾರುಣ್ಯವೃತ್ತಿ, ಅವೆಲ್ಲವುಗಳು ಮಾಯವಾಗ ತೊಡಗಿದ್ದವು. ಬೌದ್ಧಧರ್ಮದೊಳಗೆ ಭಿಕ್ಷುಣಿಯರ ಅನಾಚಾರ ಬೆಳೆದು, ಇರುಳು ಕಂಡ ಹಳ್ಳದೊಳಗೆ ಹಗಲು ಬೀಳುವ ಸ್ಥಿತಿಯಾಗಿತ್ತು; ಆದರೆ ಕಾಲಚಕ್ರದ ಗತಿಯನ್ನು ತಪ್ಪಿಗಟ್ಟುವರಾರು? ಹಿಂದಕ್ಕೊಮ್ಮೆ ಬುದ್ಧದೇವನು ಹೆಂಗಸರನ್ನು ಕುರಿತು– "ನನ್ನ ಪಂಥದೊಳಗೆ ಹೆಂಗಸರು

ಸೇರಿಕೊಂಡ ಐದು ನೂರು ವರ್ಷಗಳಲ್ಲಿ ನನ್ನ ಮತವು ಹೇಳಹೆಸರಿಲ್ಲದಂತಾಗುವದು." ಎಂದು ಕಣಿ ಹೇಳಿದ ವಾಕ್ಯವು ಮೆಲ್ಲಗೆ ಅನುಭವಕ್ಕೆ ಬರಲಾರಂಭಿಸಿತು. ಬೌದ್ಧರ ಏಳಿಗೆಯ ಕಾಲಕ್ಕೆ ಮೆರೆಯುವ ಪಟ್ಟಣಗಳು ನೋಡಿದಲ್ಲೆಲ್ಲ ಈಗ ಹಾಳು! ಬುದ್ಧದೇವನಿಗೆ ಜ್ಞಾನ ಪ್ರಾಪ್ತವಾದ ಪವಿತ್ರ ಬುದ್ಧಗಯೆಯು ಮುಳ್ಳುಕಂಟಿಗಳಿಂದ ಮುಚ್ಚಿ ಹೋಯಿತು. ಬೌದ್ಧರೇ ಬೌದ್ಧಮತವನ್ನು ಕೆಳಗೆಳೆಯಲಿಕ್ಕೆ ನಿಮಿತ್ತರಾದರೇ ಹೊರ್ತು ಯಾವ ಬ್ರಾಹ್ಮಣರಾಜರೂ ಅದನ್ನು ಕೆಳದೂಡಲಿಕ್ಕೆ ಕಾರಣರಾದ ಸಂಗತಿಯು ಇತಿಹಾಸದಲ್ಲೆಲ್ಲಿಲ್ಲ. ಇದಕ್ಕೆ ಪ್ರತಿಯಾಗಿ ಪಾಟಲೀಪುತ್ರದ ನೆರೆಯಲ್ಲೊಂದು ಬೌದ್ಧವಿಹಾರವಿದ್ದು ಅಲ್ಲಿ ನಾವಿರಾರು ಬೌದ್ಧ ಸನ್ಯಾಸಿಗಳೂ ಭಿಕ್ಷುಗಳೂ ಇದ್ದರೆಂದೂ, ಅವರಿಗೆಲ್ಲ ಕಲಿಸಲಿಕ್ಕೆ ಮಂಜುಶ್ರಿ ಎಂಬ ಬ್ರಾಹ್ಮಣ ವಿದ್ವಾಂಸನು ಇದ್ದನೆಂದೂ, ಅವನನ್ನು ಮಹಾಯಾನಪಂಥದ ಬೌದ್ಧರು ಬಹು ಮನ್ನಿಸುತ್ತಿದ್ದರೆಂದೂ ಒಂದೆಡೆಯಲ್ಲಿ ಹೇಳಿಯಿದೆ. ಬೌದ್ಧಮತದಂತೆ ಜೈನಮತವು ಕೆಳಗೆ ಬೀಳುವಷ್ಟು ಏರದೆ ಹುಟ್ಟುವವರಿಗೆ ಅಣ್ಣನಂತೆಯೂ, ಬೆಳೆಯುವವರಿಗೆ ತಮ್ಮನಂತೆಯೂ ಬಾಳಿಕೊಂಡಿದ್ದಿತು; ವೈದಿಕಧರ್ಮದ ಕೈಗೂಸುಗಳಾದ ವೈಷ್ಣವ ಹಾಗೂ ಶೈವಮತಗಳು ಬಹುಮಟ್ಟಿಗೆ ತಲೆಯೆತ್ತಿರವು. ಈ ಗೊಂದಲದೊಳಗೆ ಶಕ್ತಿಯುಪಾಸಕರಾದ ಶಾಕ್ತರೆಂಬ ಮತದವರು ಕೆಲಮಟ್ಟಿಗೆ ಕಾಣಿಸಿಕೊಂಡರೂ, ಅವರ ಮಾರ್ಗವು ಅತಿ ಕ್ರೂರವಾದುದರಿಂದ ಬಹು ಜನರ ಆದರಕ್ಕದು ಪಾತ್ರವಾಗದೆ ಉಳಿಯಿತು.

ಶಿಲ್ಪಕಲೆ:– ಆರ್ಯಜನಾಂಗಕ್ಕೆ ಆರ್ಯರಾದ ಗುಪ್ತರಿಂದ ಧಾರ್ಮಿಕ ರಾಜಕೀಯ ಸಾಮಾಜಿಕ ಮುಂತಾದ ದೃಷ್ಟಿಯಿಂದ ಸುಖವಾದಂತೆ, ಶಿಲ್ಪಕಲೆಯೂ ಇವರ ಆಳಿಕೆಯಲ್ಲಿ ಘನತೆಗೇರಿತು; ಆದುದರಿಂದ ಗುಪ್ತರ ಕೈಮಾಟವೆಂಬದೊಂದು ಬೇರೆ ಮಾದರಿಯೇ ಉತ್ಪನ್ನವಾಯಿತು. ಗುಪ್ತರಾಜರು ಕಟ್ಟಿಸಿದ ಗುಡಿಗಳು ಭವ್ಯವಾಗಿಯೂ, ಮೂರ್ತಿಗಳು ಬಹು ಅಂದವಾಗಿಯೂ, ಇರುವವೆಂದು ಅನೇಕ ಆಧುನಿಕ ಶಿಲ್ಪಜ್ಞರು ಬಹು ಪರಿಯಾಗಿ ಹೊಗಳಿದ್ದಾರೆ. ಪ್ರಪಂಚವನ್ನೆಲ್ಲ

ಬೆರಗುಗೊಳಿಸುವಂತಹ ಅಜಂಟಾ ಹಾಗೂ ವೇರೂಳದಲ್ಲಿಯ ಕೆಲವು ದಿವ್ಯ ಗುಹಾಲಯಗಳು ಗುಪ್ತರಾಳಿಕೆಯ ಕಾಲದಲ್ಲಿಯೇ ನಾಕಾತಕ ರೆಂಬ ದಕ್ಷಿಣದಲ್ಲಾಳುವ ಅರಸು ಮನೆತನದವರಿಂದ ಕೊರೆಯಿಲ್ಪಟ್ಟವು. ಅಜಂಟಾ ಗವಿಗಳಲ್ಲಿನ ನೋಡೆಗಳೆಲ್ಲ ನಾನಾವಿಧದ ಚಿತ್ರಗಳಿಂದ ಅಲಂಕರಿಸಲ್ಪಟ್ಟು,ಇಂದಿಗೂ ಹಿಂದೂಜನರ ಮೂರ್ತಿಕಲೆ, ಚಿತ್ರಕಲೆ, ಶಿಲ್ಪಕಲೆಗಳ ಜಾಣ್ಮೆಯನ್ನೂ, ಅವರ ಕೈವಾಡದ ಮೇಲ್ಮೆಯನ್ನೂ, ಅವರ ದೀರ್ಘೋದ್ಯಮದ ತಾಳ್ಮೆಯನ್ನೂ, ಅವರ ಸೂಕ್ಷ್ಮದೃಷ್ಟಿಯ ಬಲ್ಮೆಯನ್ನೂ ಹೊಗಳುತ್ತ ನಿಂತಿರುವಂತಿವೆ! ಗುಡ್ಡದೊಳಗೆ ಕೊರೆದ ಈ ಗುಹೆಗಳನ್ನೂ, ಅವುಗಳ ಸೊಬಗನ್ನೂ, ಅವುಗಳೊಳಗಿನ ಚಿತ್ರ ಕಲೆಯನ್ನೂ ನೋಡಿದರೆ ಎಂಥವನ ಮನಸಾದರೂ ಅಚ್ಚರಿಯಿಂದ ಬೆಚ್ಚಿ ಬೀಳುತ್ತದೆ; ಆದುದರಿಂದ ಇವುಗಳನ್ನು ಜಗತ್ತಿನೊಳಗಿನ ಚಮ ತ್ಕಾರಗಳೆಂದು ಬಲ್ಲವರು ಎಣಿಸುವದುಂಟು. ಕಲ್ಲಿನ ಕೆತ್ತಿಗೆಯ ಕೆಲ ಸದಲ್ಲಿ ಹೇಗೋ ಹಾಗೆ ಧಾತುಗಳಿಂದ ಮೂರ್ತಿ ಮಾಡುವದರಲ್ಲಿಯೂ ಎರಕ ಹೊಯ್ಯುವದರಲ್ಲಿಯೂ ಈ ಕಾಲದ ಜನರು ಬಹು ಗಟ್ಟಿಗರು. ಧ್ಯಾನಸ್ಥನಾಗಿ ಕುಳಿತಿರುವ ಏಳುವರೆ ಅಡಿಯುಳ್ಳ ತಾಮ್ರದಲ್ಲಿ ಎರಕ ಹೊಯ್ದದ್ದೊಂದು ಬುದ್ಧದೇವನ ಮೂರ್ತಿಯು ಇದೇ ಕಾಲದಲ್ಲಿ ಮಾಡಿದುದಾಗಿದ್ದು ಈಗ್ಯೂ ಇಂಗ್ಲಂಡದೇಶದೊಳಗಿನ ಬರ್ಮಿಂಗ ಹ್ಯಾಮ ಪಟ್ಟಣದ ವಸ್ತುಸಂಗ್ರಹಾಲಯದಲ್ಲಿ ಮಿರಿ ಮಿರಿ ಮಿಂಚುತ್ತಿದೆ. ಎಂಭತ್ತು ಅಡಿ ಎತ್ತರವಾದ ಬುದ್ಧನ ಇನ್ನೊಂದು ಮೂರ್ತಿಯು ಮಗಧರಾಜ್ಯದೊಳಗಿನ ನಾಲಂದವಿಹಾರದೊಳಗೆ ಇಡಲ್ಪಟ್ಟಿತ್ತು. ಈಗ ದಿಲ್ಲಿಯಲ್ಲಿರುವ ಕಬ್ಬಿಣದ ಕಂಬವು ೨ನೇ ಚಂದ್ರಗುಪ್ತನ ನೆನಪಿಗಾಗಿ ನೆಡಿಸಲಾಯಿತು. ಇದನ್ನು ನೋಡಿದರೆ ಧಾತುಗಳಿಂದ ಇಂತಿಂತಹ ಅನಾ ಮಾನ್ಯವಾದ ಕೈಗೆಲಸಗಳನ್ನು ಹಿಂದೂಜನರು ಹೇಗೆ ಮಾಡುತ್ತಿದ್ದರೆಂ ಬುವ ಬಗ್ಗೆಯೂ ಅವರ ಕೈಗಾರಿಕೆ ನೈಪುಣ್ಯದ ವಿಷಯದಲ್ಲಿಯೂ ಸೋಜಿಗದಿಂದ ಮನುಷ್ಯನು ಹುಚ್ಚನಾಗುತ್ತಾನೆ. ಇಂಥ ಕಾರ್ಯವು ಜಗತ್ತಿನಲ್ಲಿಯೇ ಅಗುವದು ಅನಾಧ್ಯವೆಂದು ಹಲವು ತಜ್ಞರ ಅಭಿ ಪ್ರಾಯ. ಈ ಮೇರೆ, ಗುಪ್ತರ ಈ ಕಾಲಕ್ಕೆ ಹಿಂದೂಜನರ ಬೌದ್ಧಿಕ

ವ್ಯವಸಾಯವು ಲಲಿತವಾಙ್ಮಯ, ಶಾಸ್ತ್ರೀಯವಾಙ್ಮಯ, ಕಲಾಕೌಶಲ್ಯ, ಧರ್ಮಾಭಿಮಾನ ಇವೆಲ್ಲವುಗಳಿಂದ ಬೇರೆ ಬೇರೆ ಬಣ್ಣದ ಹರಳು ಕೆಚ್ಚಿದ ಉಂಗುರದಂತೆ ಸರ್ವಾಙ್ಮನೋಹರವಾಗಿದ್ದಿತು. ಇದಕ್ಕೆ ಇನ್ನೂ ಒಂದು ಹೆಚ್ಚಿನ ಕಾರಣವೆಂದರೆ, ಈ ಕಾಲದಲ್ಲಿ ಒಂದೆಡೆಯಲ್ಲಿ ಚೀನರಾಷ್ಟ್ರವು ಮತ್ತೊಂದೆಡೆಯಲ್ಲಿ ರೋಮನ್‌ರ ಸಾಮ್ರಾಜ್ಯವು ಅವೆರಡೂ ಭಿನ್ನ ಸಂಸ್ಕೃತಿಯ ಜನಾಂಗಗಳೊಡನೆ ಹರಿಯುವ ನೀರಿನಂತೆ ಹಿಂದೂ ಜನರ ಹೊಕ್ಕುಬಳಿಕೆ ನಡೆದುದರಿಂದ ಆ ಜನಾಂಗದವರ ನಡೆಯೊಳಗಿನ ಅನೇಕ ನೆರಳುಗಳು ನಮ್ಮಲ್ಲಿ ಮೂಡಿ, ಬುದ್ಧಿವಿಕಾಸಕ್ಕೆ ಇಂಬು ದೊರೆಯಿತು. ನಮ್ಮ ಶಾಸ್ತ್ರ ಹಾಗೂ ಕಲೆಗಳು ಮುಂದೋಡಲಿಕ್ಕೆ ಪರಕೀಯ ಸಂಸ್ಕೃತಿಯ ಜನಾಂಗದವರೊಡನೆ ಸಂಬಂಧ ಬೆಳೆದುದೊಂದು ವಿಶೇಷ ಕಾರಣವೆಂದೆನ್ನಲು ಏನೂ ಅಡ್ಡಿಯಿಲ್ಲ.

ಕರ್ನಾಟಕದ ಬೆಳಿಗೆ:—ಚಂದ್ರಗುಪ್ತನು ಕರ್ನಾಟಕಕ್ಕೆ ಬಂದು ಈ ನಾಡಿನಲ್ಲಿಯೇ ದೇಹವಿಟ್ಟ ಸಂಗತಿಯನ್ನು ಹಿಂದಕ್ಕೆ ಹೇಳಿದ್ದೇವೆ. ಈ ಕಾಲದಲ್ಲೆಲ್ಲ ಕನ್ನಡನಾಡಿನ ಚರಿತ್ರೆಯು ದಿನಕೊಂದು ಚಂದಾಗಿ ಶರೀರದಿಂದ ಬೆಳೆದು ಕಳೆಗೊಳ್ಳುತ್ತಲೂ, ಮನಸಿನಿಂದ ವಿಚಾರಗಳನ್ನು ಮೈಗೂಡಿಸಿಕೊಂಡು ಮೆಲ್ಲಗೆ ಮೂಡುತ್ತಲೂ ನಡೆದಿತ್ತು. ಈ ನಾಡಿನ ಭವಿಷ್ಯವು ಮುಂದೆ ಬಹು ವೈಭವವುಳ್ಳದ್ದಾಗಬೇಕೆಂದು ಭಗವಂತನ ಸಂಕಲ್ಪವಿದ್ದರಿಂದಲೋ ಏನೋ, ಇದರ ವಿಷಯವಾಗಿ ನಮಗೆ ಅಲ್ಲಿಷ್ಟು ಇಲ್ಲಿಷ್ಟು ಹೀಗೆ ಚದರಿ ಚಲ್ಲಾಪಿಲ್ಲೆಯಾಗಿ ಹೋದ ಸಂಗತಿಗಳು ದೊರಕುತ್ತವೆ. "ಕರ್ನಾಟಕ ಬಲವು" ಕ್ರಿ. ಶ. ಪೂ. ೨೦೫ರಿಂದ ಮುಂದೆ ಬಹು ದಿನಗಳ ವರೆಗೆ ಅನೇಕ ರಾಜರಿಗೆ ಬೆಂಬಲವಾಗಿದ್ದನ್ನೂ ಚೋಳರಾಜನು ಸಿಂಹಲದ್ವೀಪವನ್ನು ಗೆಲಿಯಲು ಹೋದಾಗ ಕನ್ನಡ ದಂಡನ್ನು ಮೈಸೂರಿನಿಂದ ಒಯ್ದಿರುವ ಸಂಗತಿಯನ್ನೂ ಓದಿದರೆ ಕನ್ನಡಿಗರು ಇಷ್ಟರಲ್ಲಿ ತಮ್ಮದೊಂದು ವೈಶಿಷ್ಟ್ಯವನ್ನು ಶಾರೀರಿಕದೃಷ್ಟಿಯಿಂದ ಬೆಳಿಸಿಕೊಂಡು ದಂಡಿನೊಳಗೆ ತೇಜವಪೆದು ನಿಂಚುತ್ತಿದ್ದರೆನ್ನಲಿಕ್ಕೆ ನಾಕು. ರಾಜಕೀಯದೃಷ್ಟಿಯಿಂದ ನೋಡಿದರೆ, ಕನ್ನಡ ನಾಡಿನ ಧೊರೆಗಳಾದ ಬಾಣ, ಗಂಗ, ಕದಂಬ ಮುಂತಾದವರು ರಾಜ್ಯ

ವಾಳುತ್ತಿದ್ದು, ಪಲ್ಲವರೊಡನೆ ಬಹು ದಿನಗಳ ವರೆಗೆ ಕಾದುತ್ತಿರುವದು ಇತಿಹಾಸ ಪ್ರಸಿದ್ಧವಿರುವದರಿಂದ, ಅವರಲ್ಲಿ ಕ್ಷಾತ್ರತೇಜವು ಎಷ್ಟರ ಮಟ್ಟಿಗೆ ಇತ್ತೆಂಬುದಕ್ಕೆ ನಿದರ್ಶಕವಾಗಿದೆ. ಕದಂಬವಂಶ ಭೂಷಣನಾದ ಕಕುಸ್ಥವರ್ಮನು ಉತ್ತರಹಿಂದೂದೇಶದ ಚಕ್ರವರ್ತಿಯಾದ ಸಮುದ್ರಗುಪ್ತನೊಡನೆ ನೆಂಟಸ್ತನವನ್ನು ಬೆಳಿಸಿದ್ದನೆಂಬುದೊಂದು ಸಂಗತಿಯಿಂದ ಕದಂಬರ ದರ್ಪವು ಕರ್ನಾಟಕದೊಳಗೆ ಎಷ್ಟು ಪ್ರಕಾಶಿಸುತ್ತದೆಂಬುದೂ, ಆ ಪ್ರಭಾವಕ್ಕೆ ಮೆಚ್ಚಿ ಸಮುದ್ರಗುಪ್ತನಂಥ ಸಮ್ರಾಟನು ಅವರೊಡನೆ ಶರೀರಸಂಬಂಧವನ್ನು ಬೆಳೆಯಿಸಿದ್ದನೆಂಬುದೂ ಅವೆರಡು ಸಂಗತಿಗಳೂ ಒಂದೇ ಕಾಲಕ್ಕೆ ಪ್ರತೀತವಾಗುತ್ತವೆ. (ಇನ್ನು ವಾಙ್ಮಯದೃಷ್ಟಿಯಿಂದ ನೋಡಲು, ಗಂಗ ಕದಂಬರು ಕನ್ನಡ ಮಾತನ್ನಾಡುವವರಾದ್ದರಿಂದ ಇವರ ಕಾಲದಿಂದಲೇ ಅಂದರೆ ೫ನೇ ಶತಮಾನದಿಂದಲೇ ಶಿಲಾಲಿಪಿಗಳು ಬಿಣಿಕೆ ಹಾಕುತ್ತಿರುವ ಸಂಗತಿಯು ಮಹತ್ವದ್ದಾಗಿದೆ. ಆದರೂ ನಮಗೆ ಈ ಪ್ರಾಚೀನ ಕಾಲದ ಕನ್ನಡ ಸುಭಿಯ ಗ್ರಂಥಗಳು ಸಿಕ್ಕಿಲ್ಲ; ಅಂತೂ ಗಂಗವಂಶದಲ್ಲಾಳಿದ ಕೆಲ ಅರಸರು ಸರಸ್ವತಿಯ ಭಕುತರಿದ್ದ ಬಗ್ಗೆ ದುರ್ವಿನೀತ ಪೂಜ್ಯಪಾದ ಮೊದಲಾದ ಅರಸುಗಳ ಹೆಸರುಗಳು ದೊರೆಯುತ್ತವೆ. ಕಾಲಚಕ್ರದ ಸುಳಿಗೆ ಸಿಕ್ಕು ಮುಂದೆ ಗಂಗ ಕದಂಬವಂಶದ ರಾಜರ ಬಲವು ಕುಗ್ಗುತ್ತ ನಡೆದು ಕೊನೆಗೆ ಕರ್ನಾಟಕಮಂಡಲದೊಳಗೆ ಮೂಡಿ ಏರುತ್ತಿರುವ ಚಾಲುಕ್ಯ ಅರಸರಿಗೆ ಅವರು ಸಾಮಂತರಾಗಿ ಎಷ್ಟೋ ವರ್ಷ ಕಾಲ ಕಳೆಯಬೇಕಾಯಿತು. ಈ ಚಾಲುಕ್ಯರಿಂದಲೇ ಕರ್ನಾಟಕದ ಕೀರ್ತಿಯು ದಿಙ್ಮಂಡಲಗಳಲ್ಲೆಲ್ಲ ಮೊಳಗಿ ಬೆಳಗಿದ ಅತ್ಯಂತ ವೈಭವಶಾಲಿಯಾದ ಚರಿತ್ರವನ್ನು ಮುಂದೆ ಹೇಳಬೇಕಾದ್ದಿರುವದರಿಂದ ಅದನ್ನೀಗ ಪ್ರಸ್ತಾಪಿಸಿಟ್ಟಿದ್ದೇವೆ.

---

೧೧ ನೇ ಪ್ರಕರಣ.

ಹಿಂದೂದೇಶದ ಸಿರಿಗಾಲವು.

(ಕ್ರಿ. ಶ. ೬೦೦–೭೦೦ ವರೆಗೆ)

ಕತ್ತಲೆಗಾಲ:– ಗುಪ್ತವಂಶದ ರಾಜ್ಯರಾಳಿಹೋದ ನಂತರದಲ್ಲಿ ಒಂದು ನೂರು ವರ್ಷದ ಇತಿಹಾಸವು ಮಟ್ಟಿಗೆ ನಮ್ಮ ಪಾಲಿಗೆ ಕತ್ತಲೆಯಲ್ಲಡಗಿ ಹೋಗಿದೆ. ಈ ಕತ್ತಲೆಗಾಲದೊಳಗೆ ಹಿಂದೂದೇಶದ ಇತಿಹಾಸವನ್ನು ಬೆಳಗಿಸುವಂಥ ಯಾವ ಪುಹನೀಯ ಪುರುಷರೂ ಆಗಲಿಲ್ಲ; ಅಥವಾ ಬೇರೆ ಯಾವ ಇತಿಹಾಸಗಾರರೂ ಹುಟ್ಟಲಿಲ್ಲ; ಹೀಗಾಗಿ ಅದು ನಮ್ಮ ಪಾಲಿಗೆ ಮಾತ್ರ ಕತ್ತಲವಾಗಿಯೇ ಉಳಿದು ಹೋಯಿತು. ಮುಂದೆ ಬರುವ ಬೆಳಕಿನ ಸುಚಿಹ್ನವನ್ನು ಜ್ಞಾಪಕಕ್ಕೆ ತಂದುಕೊಂಡರೆ ಈಗಿನ ಕತ್ತಲೆಗಾಲವೆಂದರೆ ಒಂದು ಬಗೆಯಿಂದ ಬೆಳಗುಬಾವದ ಕತ್ತಲೆಯೇ ಎಂದೆನ್ನಬಹುದು. ಕತ್ತಲೆಯೊಳಗಿಂದ ಕನಸು ಕಂಡು ಪಾರಾಗದೆ ಬೆಳಕಿನಂತಹ ಬೇಗುಬೆಳಗಾಗುವ ಸಿರಿಗಾಲನ್ನು ಕಣ್ಣಿನಿಂದ ಕಾಣಲಿಕ್ಕೆ ಸಾಧ್ಯವೆಂತು! ಒಟ್ಟಾರೆ, ಈ ಕಾಲಕ್ಕೆ ಉತ್ತರ ಹಾಗೂ ದಕ್ಷಿಣ ಹಿಂದೂದೇಶದೊಳಗೆ ಅಲ್ಲಲ್ಲಿ ಚಿಕ್ಕ ಚಿಕ್ಕ ರಾಜ್ಯಗಳಿದ್ದು, ಅಲ್ಲಿಯ ಪಾಳ್ಯಗಾರರು ತಮ್ಮ ಪಾಲಿಗೆ ಬಂದಿರುವ ಪ್ರದೇಶವನ್ನು ಒಂದೇ ಮನೆಯೊಳಗಿನ ಅಣ್ಣತಮ್ಮಂದಿರಂತೆ ಒಂದು ಕ್ಷಣ ಬಡಿದಾಡುತ್ತಲೂ, ಮತ್ತೊಂದು ಕ್ಷಣಕ್ಕೆ ಮಾತಾಡುತ್ತಲೂ ಆಳಿಕೊಂಡಿದ್ದರು. ಉತ್ತರದಲ್ಲಿ ರಾಜಪುತ್ರರು (ರಜಪುತ) ತಲೆಯೆತ್ತಲಿಕ್ಕೆ ಪ್ರಾರಂಭಿಸಿದ್ದರು. ವ್ಹಿನ್ಸೆಂಟಸ್ಮಿಥರಂಥ ಇತಿಹಾಸಗಾರರು "ರಜಪುತರು ಹೂಣರಂತೆ ಬೇರೆ ದೇಶದಿಂದ ಹಿಂದುಸ್ಥಾನಕ್ಕೆ ಬಂದವರೆಂದೂ, ಇಲ್ಲಿ ಬಂದು ಬಲವಾಗುತ್ತಿರುವ ವೈದಿಕಸಂಸ್ಕೃತಿಯನ್ನು ಉದ್ಧಾರ ಮಾಡಿ, ತಾವು ಸ್ವತಃ ಯಜ್ಞಯಾಗಾದಿಗಳಲ್ಲಿ ವಿಶೇಷವಾದ ಆಸ್ಥೆಯನ್ನು ತೋರ್ಪ

ಡಿಸಿ, ಹಿಂದೂಧರ್ಮದೊಳಗೆ ಸೇರಿಕೊಂಡರು." ಎಂದು ಬರೆಯುತ್ತಾರೆ; ಆದರೂ ಅವರ ಬಗ್ಗೆ ನಾಧಾರವಾದ ಇತಿಹಾಸವನ್ನು ಬರೆಯಲಿಕ್ಕೆ ನಮ್ಮ ಬಳಿ ನಾಧನಗಳಿಲ್ಲದ್ದರಿಂದ ಅದನ್ನು ಹಾಗೆಯೇ ಬಿಟ್ಟು ಬಿಡಬೇಕಾಗಿದೆ. ೬೩೦ ರಿಂದ ೬೪೫ ನೇ ವರ್ಷಗಳ ಸುಮಾರಕ್ಕೆ ಚೀನ ದೇಶದ ಪ್ರಯಾಣಿಕನಾದ ಹ್ಯುಯೆನತ್ಸಂಗನು ಹಿಂದೂದೇಶಕ್ಕೆ ಯಾತ್ರೆಗಾಗಿ ಬಂದಂದಿನಿಂದ ಮತ್ತೆ ನಮ್ಮ ಚರಿತ್ರೆಯ ಕಾಲಕ್ಕೆ ಮೊದಲಾಗುತ್ತದೆನ್ನಲಿಕ್ಕೇನೂ ಅಡ್ಡಿಯಿಲ್ಲ. ಈತನು ಹಿಂದೂದೇಶಕ್ಕೆ ಬರುವ ಮುಂಚಿತವಾಗಿಯೇ ಮಾಳವಪ್ರಾಂತ್ಯದ ಧೊರೆಯಾದ ಶಿಲಾದಿತ್ಯನೆಂಬ ಬೌದ್ಧಮತಾಭಿಮಾನಿಯಾದ ಅರಸನು ಆಳಿ ಹೋಗಿದ್ದನೆಂದೂ, ಆತನು ನಡೆಯಿಸಿದ ಅನೇಕ ಧಾರ್ಮಿಕ ನಡತೆಗಳು ಮಾಳವಪ್ರಾಂತದಲ್ಲಿ ನಡೆದಿದ್ದವೆಂದೂ, ಬೌದ್ಧರಿಗೆ ಈತನು ಬಹುಪರಿಯಾಗಿ ಸಹಾಯ ಮಾಡಿದನೆಂದೂ ತಿಳಿಯುತ್ತದೆ. ಇಂತಹ ಕತ್ತಲೆಗಾಲದೊಳಗೆ ಹ್ಯುಯೆನತ್ಸಾಂಗನಂಥ ಬೆಳ್ಳಿಯ ಚಿಕ್ಕೆಯೊಂದು ಮೂಡಿ, ನಮ್ಮ ಇತಿಹಾಸವನ್ನು ಬರೆದಿಡದಿದ್ದರೆ ನಮ್ಮ ಗತಿಯು ಇನ್ನೂ ಹೆಚ್ಚು ಕನಿಕರ ಪಡತಕ್ಕು ದಾಗುತ್ತಿದ್ದಿತು. ಇರಲಿ.

ಥಾಣೇಶ್ವರ ಮನೆತನ:— ಇದೀಗ ಹಿಂದೂದೇಶದ ಇತಿಹಾಸದ ಆದಿಯುಗದೊಳಗಣ ಹಗಲಿರುಳಿನ ಚಕ್ರದೊಳಗಿಂದ ಹಾಯ್ದು ಮಧ್ಯಯುಗವು ಮೂಡುವ ಕಾಲದೊಳಗೆ ಕಾಲಿಡುತ್ತಿರುವೆವು. ಈ ಕಾಲದೊಳಗೆ ನಮ್ಮ ಕಣ್ಣುಗಳಿಗೆ ಎದ್ದುಕಾಣಿಸಿ, ಅವುಗಳನ್ನು ಎಳೆದೊಯ್ಯುವ ನೋಟವೆಂದರೆ ಥಾಣೇಶ್ವರದಲ್ಲಾಳುತ್ತಿದ್ದುದೊಂದು ಚಿಕ್ಕ ಅರಸುಮನೆತನ. ನಾವು ನಡೆಯುತ್ತಿರುವ ಏಳನೇ ಶತಮಾನದಲ್ಲಿ ಪ್ರಭಾಕರವರ್ಧನನೆಂಬವನು ಉತ್ತರಹಿಂದೂದೇಶದ ಅರಸರಲ್ಲಿ ಮುಖಂಡನೂ ಶೂರನೂ ಆಗಿ ಮೆರೆಯುತ್ತಿದ್ದನು. ಈತನು ತನ್ನ ಕೈಮೆಯಿಂದ ಹೂಣರನ್ನು ದೇಶಾಂತರಕ್ಕೆ ಅಟ್ಟಿ, ಲಾಟ, ಮಾಳವ, ಸಿಂಧ, ಗುರ್ಜ್ಜರ ಮೊದಲಾದ ಚಿಕ್ಕ ಚಿಕ್ಕ ಚಿಕ್ಕೆಗಳನ್ನೆಲ್ಲ ತನ್ನ ಪ್ರಭಾವದಿಂದ ಮುಚ್ಚಿ ಮರೆಮಾಡಿ ಅಳತೊಡಗಿ ಮುಂದೆ ಸ್ವಲ್ಪು ದಿನಗಳಲ್ಲಿ ಮಡಿದನು. ಪ್ರಭಾಕರವರ್ಧನನಿಗೆ ರಾಜ್ಯವರ್ಧನ, ಹರ್ಷವರ್ಧನ ಎಂಬಿಬ್ಬರು

ಗಂಡುಮಕ್ಕಳೂ, ರಾಜ್ಯಶ್ರೀ ಎಂಬೋರ್ವ ಕನ್ಯೆಯು ಹೀಗೆ ಮೂವರು ಮಕ್ಕಳು. ರಾಜ್ಯಶ್ರೀಯನ್ನು ಕನೋಜದ ಅರಸನಾದ ಗೃಹವರ್ಮನಿಗೆ ಕೊಟ್ಟಿದ್ದರು; ಆದರೆ ಗೃಹವರ್ಮನ ಮೇಲೆ ಮಾಳವದ ಅರಸನಾದ ದೇವಗುಪ್ತನು ದಂಡೆತ್ತಿ ಹೋಗಿ ಗೃಹವರ್ಮನನ್ನು ಸೋಲಿಸಿ ಕೊಲೆ ಮಾಡಿ, ಆತನ ಹೆಂಡತಿಯಾದ ರಾಜ್ಯಶ್ರೀಯನ್ನು ಸಂಕೋಲೆಗಳಿಂದ ಕಟ್ಟಿ ಸೆರೆಯಲ್ಲಿಟ್ಟು, ಬಂಗಾಲದ ಧೊರೆಯಾದ ಶಶಾಂಕಗುಪ್ತನ ನೆರವಿನಿಂದ ರಾಣೇಶ್ವರರಾಜ್ಯವನ್ನು ಮುರಿಯಬೇಕೆಂದು ಹೊಂಚು ಹಾಕಿದನು. ಹೀಗೆ ಹೊಂಚು ಹಾಕಿಕೊಂಡು ಕುಳಿತಿರುವಷ್ಟರಲ್ಲಿಯೇ ತನ್ನ ಭಾವಮೈದುನನ್ನು ಕೊಂದ ನೇಡು ತೀರಿಸಿಕೊಳ್ಳಬೇಕೆಂದು ಮುನ್ನೋಟದ ರಾಜ್ಯವರ್ಧನನು ನಿರ್ಧರಿಸಿಕೊಂಡು ಮಾಳವಾಧಿಪತಿಯ ಮೇಲೆ ನಡೆಮಾಡಿ, ಅವನನ್ನು ಸೋಲಿಸಿ, ತನ್ನ ಕತ್ತಿಗೆ ತುತ್ತು ಹಾಕಿದನು. ಇವ್ವಾಟ ಸುದ್ದಿಯನ್ನು ತಿಳಿಯದಲೆ, ಶಶಾಂಕಗುಪ್ತನು ಮಿತ್ರನ ಅಭಿಮಾನದಿಂದ ಅತನ ಸಹಾಯಕ್ಕಾಗಿ ಧಾವಿಸಿ ಬಂದು ನೋಡುವಷ್ಟರಲ್ಲಿ ದೇವಗುಪ್ತನ ಕಥೆಯೇ ಮುಗಿದು ಹೋಗಿದ್ದಿತು. ಆಮೇಲೆ ಮಾಡುವದೇನು? ಶಶಾಂಕಗುಪ್ತನು ಥಾಣೇಶ್ವರದ ರಾಜ್ಯವರ್ಧನನೊಡನೆ ಒಪ್ಪಂದದ ಮಾತುಕಥೆ ನಡೆಯಿಸಿ ತನ್ನ ಮಗಳನ್ನು ಅತನಿಗೆ ಕೊಡಲೊಪ್ಪಿದನು. ಅದೇ ನಿಮಿತ್ತವಾಗಿ ನಿರ್ಧಯದಿಂದ ಎಲ್ಲರೂ ಕೂಡಿಕೊಂಡು ಪ್ರೀತಿಯಿಂದ ಊಟಕ್ಕೆ ಕುಳಿತಿರಲು, ರಾಜ್ಯವರ್ಧನನ್ನು ಶಶಾಂಕಗುಪ್ತನು ಕಪಟದಿಂದ ಕೊಲ್ಲಿಸಿದನು. ಈ ಮೇರೆಗೆ ಸಿಂಹಾಸನವನ್ನೇರಿದ ಒಂದು ಒಂದುವರೆ ವರ್ಷದೊಳಗಾಗಿ ಅಂದರೆ ಕ್ರಿ. ಶ. ೬೦೬ ರಲ್ಲಿ ರಾಜ್ಯವರ್ಧನನ ಆಳಿಕೆಯು ಏಸಿರಿಯು ಮುಕ್ತಾಯವಾಯಿತು.

ಶ್ರೀಹರ್ಷವರ್ಧನಃ- ಕ್ರಿ. ಶ. ೬೦೬ ರಿಂದ ೬೪೭ ವರೆಗೆ. ಈ ಸಮಯಕ್ಕೆ ಹರ್ಷವರ್ಧನನು ಹದಿನಾರು ವರ್ಷದ ಕುಮಾರ. ತಂದೆಯಾದ ಪ್ರಭಾಕರವರ್ಧನನು ಮಡಿದನಂತರ ಅವನೊಡನೆ ತಾಯಿಯೂ ಸಹಗಮನ ಹೋದ್ದರಿಂದ ಇವರಿಗೆ ಪರದೇಶಿತನವೇ ಬಂದಿತ್ತು; ಆದರೂ ಒಡಹುಟ್ಟಿದ ಇಬ್ಬರೂ ಅಣ್ಣತಮ್ಮಂದಿರಲ್ಲಿ ರಾಮಲಕ್ಷ್ಮಣ

ರಂತೆ ಪರಸ್ಪರ ಸೌಹಾರ್ದಭಾವವು ಸಂಪೂರ್ಣವಾಗಿ ನೆಲಸಿದ್ದುದರಿಂದ ಅವರಿವರಲ್ಲಿ ಭೇದಭಾವವಾಗಲಿ, ಮತ್ಸರಭಾವವಾಗಲಿ ಇಂಬುಗೊಂಡಿರಲಿಲ್ಲ. ಒಂದೇ ಜೀವ, ದೇಹ ಎರಡು. ಮೇಲಾಗಿ, ಹರ್ಷವರ್ಧನನು ತನಗಿಂತ ಕೈಮೆಯಲ್ಲಿಯೂ, ಜಾಣ್ಮೆಯಲ್ಲಿಯೂ, ಇಮ್ಮಡಿ ಕೈಮೇಲಾಗಿಯೂ, ದೈವಶಾಲಿಯೂ ಆಗಿದ್ದುದು ರಾಜ್ಯವರ್ಧನನ ಆನಂದಕ್ಕೊಂದು ಕುಂದಣ. ಅದರೆ ಸೋದರರ ಈ ಸೌಹಾರ್ದದ ಸೊಗಸನ್ನು ಬಹು ದಿನಗಳ ವರೆಗೆ ಅನುಭವಿಸುವದನ್ನು ಶಟನಿಯು ಇಬ್ಬರ ಹಣೆಬರಹದಲ್ಲಿ ಬರೆಯದ್ದರಿಂದ, ಮನಸಿನಲ್ಲಿ ಮಾಡಿಟ್ಟ ಮಂಡಿಗೆಯ ಸಾಮಗ್ರಿಯೆಲ್ಲವೂ ಕೆಲವು ದಿನ ಮಾತ್ರ ಅಲ್ಲಿಯೇ ಕೊಳೆಯುತ್ತಿರುವದಕ್ಕೆ ರಾಜ್ಯವರ್ಧನನ ಅಕಸ್ಮಿಕವಾದ ಮರಣವೇ ಕಾರಣವಾಯಿತು. ಅಣ್ಣತಮ್ಮಂದಿರಲ್ಲಿ ಒಂದು ವಿಧದ ಜೀವದ ಪ್ರೇಮವೂ, ಒಂದು ಭಾವವೂ ಇದ್ದರೂ ತನ್ನ ಅಣ್ಣನನ್ನು ಅಕಾಲಿಕವಾಗಿ ಯಮನು ಕಟ್ಟಿಕೊಂಡು ಹೋದುದಕ್ಕೆ ಹರ್ಷನು ವ್ಯಸನಗೊಂಡು ಕುಳ್ಳಿರದೆ, ಅಣ್ಣನು ಅರ್ಧಕ್ಕೆ ಬಿಟ್ಟ ಕಾರ್ಯವನ್ನು ಅಂದರೆ ತಂಗಿಯಾದ ರಾಜ್ಯಶ್ರಿಯನ್ನು ಪರರಾಯರ ಸೆರೆಯಿಂದ್ಬಿಡಿಸಲಿಕ್ಕೆ ಕೆಚ್ಚೆದೆಯಿಂದ ಮೊದಲು ಕೈಕಟ್ಟಿದನು. ಬುದ್ಧಿವಂತಿಕೆಯಲ್ಲಿಯೂ, ಬಲ್ಲಾರಿಕೆಯಲ್ಲಿಯೂ ಎಲ್ಲರಿಗಿಂತ ಮೇಲುಗೈಯಾಗಿ ಮೆರೆಯುತ್ತಿರುವ ದೈವದ ಮಗುವಾದ ಹರ್ಷವರ್ಧನನಿಗೆ ಯಾವ ಕಾರ್ಯ ತಾನೇ ಈಡು! ದುರ್ಭಾಗ್ಯಕ್ಕೆಡೆಯಾದ ತನ್ನ ತಂಗಿಯನ್ನು ಬಿಡುಗಡೆ ಮಾಡುವದನ್ನು ನಿಮಿತ್ತವಾಗಿಟ್ಟುಕೊಂಡು ಇಡೀ ಭರತಖಂಡವನ್ನೇ ಗೆದ್ದು ಚಕ್ರವರ್ತಿಮಹಾರಾಯನಾಗಬೇಕೆಂಬ ಹಿರಿದಾದ ಹವಣಿಕೆಯಿಂದ ಹರ್ಷನು ಬಲವಾದ ಸೈನ್ಯಸಾರಣೆ ನಡಿಸಿದನು; ಮತ್ತು ತಾನು ದಿಗ್ವಿಜಯಕ್ಕೆ ಬಿಜಯ ಮಾಡಿದ ಕಾಲದಲ್ಲಿ ತನ್ನ ರಾಜ್ಯದ ಅಡಳಿತವು ಸುಸೂತ್ರವಾಗಿ ನಾಗಬೇಕೆಂದು ಅದಕ್ಕಾಗಿ ಬಲ್ಲವರನ್ನು ಆರಿಸಿ ಅವರ ಕೈಗೆ ರಾಜ್ಯವನ್ನೊಪ್ಪಿಸಿ, ಶುಭಮುಹೂರ್ತದಲ್ಲಿ ದಿಗ್ವಿಜಯದ ಪ್ರಸ್ಥಾನ ಗಂಟನ್ನು ತೆಗೆದಿಟ್ಟನು. ೬೦ ಸಾವಿರ ಆನೆಗಳನ್ನೂ, ೧ ಲಕ್ಷ ೫೦ ಸಾವಿರ ಕುದುರೆಸವಾರರನ್ನೂ, ೫೦ ಸಾವಿರ ಕಾಲಾಳುಗಳನ್ನೂ ಅಣಿಮಾಡಿ ಓರಣಗೊಳಿಸಿಕೊಂಡು ಕನೋಜದ ದಾರಿ ಹಿಡಿದನು.

ಹರ್ಷನ ಮೊದಲಿನ ಹಳವಂಡವೆಂದರೆ ತಂಗಿಯನ್ನು ಕಾರಾಗೃಹದಿಂದ ಬಿಡಿಸುವದು. ಅದಾದ ಮೇಲೆ ದಿಗ್ವಿಜಯದ ಮಾತು. ಅದರೆ ಕನೋ ಜಕ್ಕೆ ಬಂದು ಕೇಳುವದರೊಳಗೆ ಎಲ್ಲವೂ ವಿಪರೀತಸ್ಥಿತಿಯೇ! ಕಾರಾ ಗೃಹದಲ್ಲಿದ್ದ ರಾಜ್ಯಶ್ರೀಯು ನಾಹಸದಿಂದ ವಾರಾಗಿ ವಿಂಧ್ಯಾಚಲಕ್ಕೆ ಓಡಿ ಹೋಗಿರುವಳೆಂದೂ, ಎಷ್ಟು ಹುಡುಕಿದರೂ ಅವಳಿರುವ ಸ್ಥಳದ ಎಳೆಯು ಹತ್ತಿಲ್ಲವೆಂಬುದೂ ಹರ್ಷನಿಗೆ ತಿಳಿಯಿತು. ಒಡಹುಟ್ಟಿದವರಲ್ಲಿ ಹೆಣ್ಣುಗರಳಿನವನಾದ ಹರ್ಷನಿಗೆ ಈ ಸುದ್ದಿಯನ್ನು ಕೇಳಿದೊಡನೆ ಮನಸು ಮಿತಿಮೀರಿ ಮರುಗಿ, ಕೊರಗಿ, ಕಳವಳಿಸಿ ಅವನಿಗೆ ತಂಗಿ ಯನ್ನು ಕಾಣುವ ಹಂಬಲದ ಹುಚ್ಚು ಹಿಡಿದಂತೇ ಆಯಿತು. ತತ್‌ಕ್ಷ ಣವೇ ತನ್ನ ಸೈನಿಕರನ್ನೆಲ್ಲ ಅಲ್ಲಿಯೇ ನದಿಯ ಧಡದಲ್ಲಿ ಬೀಡು ಬಿಡಲಿಕ್ಕೆ ಆಜ್ಞಾಪಿಸಿ, ಕೆಲವು ಕೆಚ್ಚೆ ಬಂಟರನ್ನು ತನ್ನೊಡನೆ ಕಟ್ಟಿಕೊಂಡು ತಂಗಿಯ ಶೋಧಕ್ಕಾಗಿ ಲಗುಬಗೆಯಿಂದ ಹೊರಟನು. ಕಾಡಿನಲ್ಲಿ ಹುಡುಕುತ್ತ ತಿರುಗುತ್ತಿರಲಾಗಿ ತನ್ನ ಭಾವ ಮೈದುನನ ಮಿತ್ರನಾದ ದಿವಾಕರ ಮಿತ್ರನೆಂಬೊಬ್ಬ ಬೌದ್ಧಭಿಕ್ಷುವಿನ ಆಶ್ರಮಕ್ಕೆ ಬಂದು ತಲ್ಪಿ ದನು. ಅದರೆ ಅಲ್ಲೇನಿದೆ? ತಂಗಿಯೇ ಇಲ್ಲ! ಕಾಣಬೇಕೆಂದು ಅತುರ ಪಡುತ್ತಿರುವ ಹರ್ಷನಿಗೆ ಈ ಆಶ್ರಮದಲ್ಲಿ ತಂಗಿಯು ಕಾಣಿಸದ್ದರಿಂದ ಅತನ ಮನಸ್ಸು ಹೆಚ್ಚೆಚ್ಚು ತಳಮಳಗೊಂಡಿತು; ಹೀಗೆ ಮೊದಲೇ ತಳಮಳಗೊಳ್ಳುತ್ತಿರುವ ಹರ್ಷನಿಗೆ, "ಸಮೀಪದಲ್ಲಿಯೇ ಯಾವಳೋ ಬ್ಬ ದುಃಖಾರ್ತಳಾದ ಹೆಂಗಸು ಉರಿಯುವ ಕಿಚ್ಚಿನ ಕೊಂಡದಲ್ಲಿ ಹಾರಿಕೊಳ್ಳಬೇಕೆಂದು" ಸಜ್ಜಾಗಿರುವ ಸಂಗತಿಯನ್ನು ಕೇಳಿಯಂತೂ ಹುಣ್ಣಿಗೆ ಬರೆ ಕೊಟ್ಟಂತಾಗಿ ಆ ಹೆಂಗಸಿದ್ದಲ್ಲಿಗೆ ಧಾವಿಸಿ ಬಂದು ನೋಡುವಷ್ಟರಲ್ಲಿ ತನ್ನ ಪ್ರಿಯ ತಂಗಿ! ಅಹಹ! ಅಣ್ಣನಿಗೂ ತಂಗಿಗೂ ದುಃಖದ ಉಕ್ಕು ಬಂದಿತು. ಒಬ್ಬರಿಗೊಬ್ಬರು ಬಿಗಿದಪ್ಪಿಕೊಂಡು ಕಣ್ಣೀರಿನ ಕೋಡಿ ಹರಿಸಿ ಮನಸನ್ನು ಹಗುರು ಮಾಡಿಕೊಂಡರು. ಯಾರೂ ದಿಕ್ಕಿಲ್ಲದವಳಂತೆ ಆಸೆಗೆಟ್ಟು ಮುಂಗಾಣದೆ ಜೀವದ ಹಂಗು ತೊರೆದು ಅಗ್ನಿನಾರಾಯಣನಿಗೆ ತನ್ನ ಕೋಮಲ ಕಾಯವನ್ನು ಆಹುತಿ ಯಾಗಿಡಲು ಸಿದ್ಧಳಾದ ತಂಗಿಯನ್ನು ಹರ್ಷನು ತಡೆದು ಸಂತಸನುಡಿಗ

ಳಿಂದ ಸಂತೈಸಿ, ಧೈರ್ಯಗೊಟ್ಟು, ತನ್ನೊಡನೆ ಕರೆದುಕೊಂಡು ಹೊರಟನು. ದಾರಿಯಲ್ಲಿರುವ ದಿವಾಕರಮಿತ್ರನೆಂಬ ಬೌದ್ಧ ಭಿಕ್ಷುವು ತನ್ನ ಪತಿಯು ಗೆಳೆಯನೆಂಬ ವಿದ್ಯಮಾನವನ್ನರಿತಾಗಂತೂ, ಸಂಸಾರ ಪಾಶವನ್ನು ಹರಿದೊಗೆದು ತಣ್ಣಗೆ ಭಿಕ್ಷುಣಿಯಾಗಿ ಕಾಲಕಳೆಯಬೇಕೆಂದು ಅವಳು ಹಟ ವಿಡಿದಳು; ಆದರೆ 'ಮೊದಲು ಕರ್ತವ್ಯ, ಕೊನೆಯಲ್ಲಿ ಸನ್ಯಾಸ' ಎಂಬೀ ಅಣ್ಣನ ಹಾಗೂ ದಿವಾಕರಮಿತ್ರರ ಸಲಹೆಯನ್ನು ಮನ್ನಿಸಿ ಅಣ್ಣನೊಡನೆ ತನ್ನ ರಾಜಧಾನಿಯಾದ ಕನೋಜಕ್ಕೆ ಬಂದು ತಲ್ಪಿದಳು. ಆಮೇಲೆ ರಾಜ್ಯವಾಳುವ ಸಲುವಾಗಿ ಯಾವ ದಾರಿಯನ್ನವಲಂಬಿಸಬೇಕೆಂದು ಅವರವರೊಳಗೆ ಚರ್ಚೆನಡೆದು ಕೊನೆಗೆ ಹರ್ಷನು ರಾಜ್ಯಶ್ರಿಯನ್ನು ಪಟ್ಟಕ್ಕೆ ಕುಳ್ಳಿರಿಸಿ, ತನ್ನ ರಾಜಧಾನಿಯನ್ನು ರಾಣೇಶ್ವರದಿಂದ ಕನೋಜಕ್ಕೆ ಒಯ್ದು, ತನ್ನ ಹಾಗೂ ತಂಗಿಯ ರಾಜ್ಯಭಾರ ನಡಿಸಹತ್ತಿದನು. ಅಣ್ಣ ತಂಗಿಯರ ಈ ಅಕೃತ್ರಿಮವಾದ ಅಕ್ಕರತೆಯು ಇಬ್ಬರ ಜೀವಮಾನದವರೆಗೆ ಅಖಂಡವಾಗಿ ನಾಗಿತು; ಅಲ್ಲದೆ ಅವರಿಬರ ಮನಸಿನ ಬಲವು ಬಲುಮಟ್ಟಿಗೆ ಬೌದ್ಧಧರ್ಮದ ಕಡೆಗೆ ಬಲಿದಿದ್ದರಿಂದಲೂ ಧಾರ್ಮಿಕ ಅಂಶದೊಳಗೂ ಅವರಿಬ್ಬರೂ ಒಂದಾಗಿ ಹೋಗುತ್ತಿದ್ದರಿಂದಲೂ ಕಡೆಗಾಲದವರೆಗೂ ಅವರಲ್ಲಿ ಯಾವ ವಿಧದ ಕೊಂಕೂ ಕಾಣಿಸಿಕೊಳ್ಳಲಿಲ್ಲ. ಹಿಂದೂದೇಶದ ಇತಿಹಾಸದೊಳಗೆ ಈ ಅಣ್ಣ ತಂಗಿಯರ ಶುದ್ಧ ಪ್ರೇಮದ ಕತೆಗೆ ಸಾಟಿಯಿಲ್ಲ.

ಹರ್ಷನ ಸಾಮ್ರಾಜ್ಯ ವಿಸ್ತಾರ:— ಕಟ್ಟಿಯ ಕಲ್ಲನ್ನು ಕಟ್ಟಿಗೆ ಕೂಡ್ರಿಸುವ ತೆರನಾಗಿ ಹರ್ಷನು ತಂಗಿಯನ್ನು ಪಟ್ಟಕ್ಕೆ ಕುಳ್ಳಿರಿಸಿ ಕೃತಾರ್ಥನಾಗಿ ಮತ್ತೆ ಯಥಾಪ್ರಕಾರ ದಿಗ್ವಿಜಯಕ್ಕೆ ಅಡಿಯಿಟ್ಟನು. ಆರು ವರ್ಷಗಳ ತನಕ ಇಡೀ ಉತ್ತರಹಿಂದೂದೇಶವನ್ನೆಲ್ಲ ತನ್ನ ಅಂಕೆಗೆ ಬಳಪಡಿಸದೆ ಅತನೇನು ಶಸ್ತ್ರವನ್ನು ಕೆಳಗಿಡಲಿಲ್ಲ; ಕುದುರೆಯ ತಡಿಯನ್ನು ಬಿಚ್ಚಲಿಲ್ಲ; ಆನೆಗಳ ಮೇಲೆ ಹೇರಿದ ಅಂಬಾರಿಯನ್ನು ಕೆಳಗಿಳಿಸಲಿಲ್ಲ. ಉತ್ತರಹಿಂದೂದೇಶದೊಳಗಿನ ಪಂಜಾಬ, ಸಿಂಧ, ಹಾಗೂ ಕಾಶ್ಮೀರ ಇವಿಷ್ಟು ಪ್ರಾಂತಗಳು ಪೂರ್ಣವಾಗಿ ಅವನ ಕೈಸೇರದಿದ್ದರೂ ಅವರಿಂದಲೂ ಕಪ್ಪನ್ನು ತೆಗೆದುಕೊಂಡಿದ್ದನು. ಅಸಾ

ಮದ ಕುಮಾರರಾಜನು ಈತನಿಂದಲೇ ಉದ್ಧಾರವಾದನು. ಈ ಮೇರೆಗೆ ದಿಗ್ವಿಜಯ ಮಾಡಿಕೊಂಡು ಮರಳಿ ಬಂದ ನಂತರ ಹರ್ಷವರ್ಧನನು ಕ್ರಿ. ಶ. ೬೧೨ ರಿಂದ ತನ್ನ ಶಕವನ್ನು ಪ್ರಾರಂಭಿಸಿದನು. ಚಕ್ರವರ್ತಿ ಪದವಿಯನ್ನೇರಿದವನು ತನ್ನ ಹೆಸರಿನ ಶಕವನ್ನು ಪ್ರಾರಂಭಿಸುವದೊಂದು ತತ್ಕಾಲೀನ ಲಕ್ಷಣವಾಗಿತ್ತೆಂಬುದು ಅನೇಕ ರಾಜರ ನಡೆಯಿಂದ ಸಿದ್ಧವಾಗುತ್ತದೆ. ಉತ್ತರಹಿಂದೂದೇಶವೆಲ್ಲ ತನ್ನ ಅಧೀನಕ್ಕೆ ಬಂದ ನಂತರ ತನ್ನ ದಿಗ್ವಿಜಯದ ದಿಕ್ಕನ್ನು ಹರ್ಷನು ದಕ್ಷಿಣಕ್ಕೆ ತಿರುಗಿಸಿದನು; ಮತ್ತು ನರ್ಮದೆಯ ದಕ್ಷಿಣಕ್ಕೂ ತನ್ನ ರಾಜ್ಯವನ್ನು ಬೆಳಿಸಬೇಕೆಂದು ಹಾತೊರೆಯ ತೊಡಗಿದನು. ಆದರೆ ಆ ಕಾಲದಲ್ಲಿ ದಕ್ಷಿಣದೇಶವನ್ನೆಲ್ಲ ಕರ್ನಾಟಕ ವೀರನಾದ ೨ ನೇ ಪುಲಿಕೇಶಿಯು ಆಳುತ್ತಿದ್ದುದರಿಂದ ಅವನು ಶ್ರೀಹರ್ಷನಿಗೆ ನರ್ಮದೆಯ ದಂಡೆಯ ಹತ್ತಿರವೇ ತನ ಕೈಮೆಯನ್ನು ತೋರಿಸಿ ಬಿಂಕಬೆಸೆದು ಓಡಿಸಿ, ಅಚೆ ಅಟ್ಟಿದನು. ಈ ಮೇರೆಗೆ ಹೊಡತ ತಿಂದು ಇನ್ನು ಮುಂದೆ ನಾಗುವದು ಒಳಿತಲ್ಲವೆಂದರಿತು, ಶ್ರೀಹರ್ಷನು ಮರಳಿ ರಾಜಧಾನಿಗೆ ನಾಗಿ ಮುಂದೆ ೪೧ ವರ್ಷಗಳ ವರೆಗೆ ಅವಿಚ್ಛಿನ್ನವಾಗಿಯೂ, ಬಹು ಸಂಭ್ರಮದಿಂದ ರಾಜ್ಯಭಾರ ನಡಿಸಿದನು. ಹರ್ಷನ ಆಳಿಕೆಯೆಂದರೆ, ಸಿರಿಗಾಲದ ತುಟ್ಟತುದಿ.

ಮನೆತನದ ಸ್ಥಿತಿ ಹಾಗೂ ಅಂತಕಾಲ:- ಹರ್ಷನು ಸಾಮ್ರಾಜ್ಯಸುಖವನ್ನನುಭವಿಸುವಂಥ ಮಹಾಭಾಗ್ಯಶಾಲಿಯಿದ್ದರೂ ತನ್ನ ತರುವಾಯ ತಾನು ಗಳಿಸಿದ ರಾಜ್ಯಭೋಗವನ್ನನುಭವಿಸಲು ಗಂಡು ಸಂತತಿ ಇರದ್ದರಿಂದ ಅತನು ರಾಜ್ಯದ ಬಗ್ಗೆ ಬಹು ಉದಾಸೀನನಾಗಿ ಬರಬರುತ್ತ ಹೆಚ್ಚೆಚ್ಚು ಧರ್ಮಪರನಾದನು. ಈತನ ಹೊಟ್ಟೆಯಿಂದ ಒಬ್ಬಳೇ ಕನ್ನೆಯಿದ್ದಳು; ಆಕೆಯನ್ನು ವಲಭೀರಾಜನಿಗೆ ಕೊಟ್ಟಿದ್ದಿತು. ತನಗೆ ಗಂಡು ಮಕ್ಕಳಿಲ್ಲೆಂಬ ಅಳಲಿನಿಂದ ಅವನ ಮನಸ್ಸಿನಲ್ಲಿಯು ಹವ್ಯಾನವೆಂಬುದೆಲ್ಲವೂ ಉಡುಗಿತು. ಅದ್ವಿತೀಯ ಸಮ್ರಾಟನಾದ ಹರ್ಷನನ್ನು ಹೀಗೆ ವೈರಾಗ್ಯವು ಮುಸುಕಿಕೊಂಡದ್ದರಿಂದ ಅತನು ಮುಂದುಗಾಣದೆ ಐದು ವರ್ಷಕ್ಕೊಮ್ಮೆ ಮಹಾಸಮಾರಂಭವನ್ನು ನಡೆಯಿಸಿ, ಆ ಸಮಾರಂಭಕ್ಕೆ ಬರುವ ವಿದ್ವಾಂಸರಾದ ಬ್ರಾಹ್ಮಣರಿಗೂ ಭಕ್ತಿವಂತರಾದ ಬೌದ್ಧ

ಭಿಕ್ಷುಗಳಿಗೂ ತನ್ನಲ್ಲಿರುವ ಐಶ್ವರ್ಯ ಸಂಪತ್ತನ್ನೆಲ್ಲ ದಾನಮಾಡುತ್ತಿದ್ದನು. * ಒಂದೊಂದು ಸಲ ಈ ದಾನಪ್ರೇಮವು ಕೈತಪ್ಪಿಹೋಗಿ, ಹರ್ಷನಿಗೆ ಮೈಮೇಲೆ ಹೊದ್ದುಕೊಳ್ಳಲು ಬಟ್ಟೆ ಬರೆದುಡ್ಡುದುಗ್ಗಾಣಿ ಉಳಿಯದ್ದರಿಂದ ತಂಗಿಯಾದ ರಾಜಶ್ರಿಯನ್ನು ಕುರಿತು ಒಂದೆರಡು ಹೊದ್ದುಕೊಳ್ಳುವ ಬಟ್ಟೆಗಳಿಗಾಗಿ ಭಿಕ್ಷೆಬೇಡುವ ಪ್ರಸಂಗವೂ ಒದಗುತ್ತಿತ್ತು! ಅಶೋಕನನ್ನುಳಿದು ಜಗತ್ತಿನೊಳಗಾಗಿಹೋದ ಯಾವ ಸಮ್ರಾಟನೂ ಈತನಿಗೆ ಸರಿಗಟ್ಟಲಾರನು. ಈವೇರೆಗೆ ಧರ್ಮರಾಜನಂತೆ ಜ್ಞಾನಿಯೂ, ಕರ್ಣನಂತೆ ದಾನವೀರನೂ, ಪಾರ್ಥನಂತೆ ಶೂರನೂ, ಸದ್ವಿದ್ಯಾಭಿಮಾನಿಯೂ ಒಟ್ಟಿನ ಮೇಲೆ ಗುಣಗಳ ಖಣಿಯೇ ಆದ ಶ್ರೀಹರ್ಷ ಸಮ್ರಾಟನೆಂದರೆ ಅದ್ವಿತೀಯ ಚಕ್ರವರ್ತಿಯಾಗಿ ಕೆಲ ಕಾಲ ಪ್ರಪಂಚದೊಳಗೆ ಝಗಝಗಿಸಿ ತನ್ನೊಡನೆ ತಂದಿದ್ದ ನಶ್ವರವಾದ ದೇಹವನ್ನು ಇಲ್ಲಿಯೇ ಬಿಟ್ಟು ಕ್ರಿ. ಶ. ೬೪೩ರಲ್ಲಿ ಗೆದ್ದುಹೋದನು.

ಹರ್ಷಕಾಲದ ಜಾತಿ ವ್ಯವಹಾರಗಳು :- ಹರ್ಷಕಾಲವೆಂದರೆ ಉತ್ತರ ಹಿಂದುಸ್ಥಾನಕ್ಕೆ ಎಲ್ಲ ಬಗೆಯಿಂದಲೂ ಅದೊಂದು ಹರುಷ ಕಾಲವು. ಐತಿಹಾಸಿಕದೃಷ್ಟಿಯಿಂದ ಅಲ್ಲಿಂದಿಲ್ಲಿಯ ವರೆಗಿನ ಇತಿಹಾಸವನ್ನು ಹಕ್ಕಿಯು ಆಕಾಶದೊಳಗೆ ಹಾರುವಂತೆ ಹಾರಿಸುತ್ತೆಲ್ಲ ಕಣ್ಣು ತಿರುಗಿಸಿದರೆ, ಹರ್ಷನಕಾಲಕ್ಕೆ ಆರ್ಯರ ನಾಗರಿಕತೆಯ ವೈಭವದ ಮಧ್ಯಾಹ್ನ ಕಾಲವು ಮುಗಿಯುತ್ತ ಬಂದು ಅದು ಕೆಳಗಿಳಿಯಲಿಕ್ಕೆ ಮೊದಲು ಮಾಡಿತ್ತೆಂದು ಹೇಳಲಿಕ್ಕೇನೂ ಅಡ್ಡಿಯಿಲ್ಲ. ನಮ್ಮಗಳ ಸುದೈವದಿಂದ ಈ ಕಾಲದ ಚರಿತ್ರೆಯನ್ನರಿಯಲು, ಸುಪ್ರಸಿದ್ಧ ಚೀನ ಯಾತ್ರಿಕನಾದ ಹ್ಯೂಯೆನತ್ಸಂಗನು ಚನ್ನಾಗಿ ನೋಡಿಕೊಂಡು ಬರೆದಿಟ್ಟಿರುವ ಪ್ರವಾಸವರ್ಣನೆಯೂ ಹರ್ಷನ ಒಡ್ಡೋಲಗದೊಳಗೆ ಒಡೆದುಮೂಡಿ

* ಟಿಪ್ಪಣಿ— ಕುಮಾರಿಲಭಟ್ಟನೆಂಬ ಅಸಾಮದೇಶದ ಬ್ರಾಮ್ಹಣನೊಬ್ಬನು ಈ ಧರ್ಮಸಭೆಗೆ ಬಂದು ಬೌದ್ಧಧರ್ಮವನ್ನು ಚನ್ನಾಗಿ ಖಂಡಿಸಿದ್ದನು. ಈತನು ಪೂರ್ವ ಮೀಮಾಂಸಾಶಾಸ್ತ್ರದಲ್ಲಿ ಬಲು ಗಟ್ಟಿಗನು. ಆಗಿನ ಕಾಲಕ್ಕೆ ಈತನ ಕೈ ಹಿಡಿಯುವವರು ಯಾರೂ ಇದ್ದಿಲ್ಲ.

ಮಿರುಗುತ್ತಿರುವ ಬಾಣಭಟ್ಟನೆಂಬ ಗದ್ಯ ಕವಿಯು ಬರೆದಿಟ್ಟಿರುವ ಹರ್ಷಚರಿತವೆಂಬುದೂ, ಅವೆರಡೇ ವಿಶ್ವಸನೀಯವಾದ ಆಧಾರಗ್ರಂಥಗಳು ಉಳಿದಿವೆ. ಆದುದರಿಂದ ಈ ಬಗ್ಗೆ ಹ್ಯೂಯೆನತ್ಸಂಗ ಪ್ರವಾಸವರ್ಣನೆಯಲ್ಲಿರುವ ವಿಷಯವನ್ನಷ್ಟು ತೆಗೆದುಕೊಳ್ಳುವ. "ಈ ಕಾಲ ಕ್ಕಾದರೂ ಭರತಖಂಡಕ್ಕೆ ಶಿಂತು ಅಥವಾ ಹಿಂತು ದೇಶವೆಂಬ ಹೆಸರಿತ್ತು. ಈ ದೇಶದಲ್ಲಿ ಕಂಡುಬರುವ ನಾನಾ ಬಗೆಯ ಜನರುಗಳಲ್ಲಿ ಬ್ರಾಹ್ಮಣರೆಂಬುವರು ಶುದ್ಧರೂ, ಸಾತ್ವಿಕರೂ, ಸರ್ವರ ಮನ್ನಣೆಗೆ ಅರ್ಹರಾದವರು. ಇವರ ನಿಷ್ಕಲಂಕವಾದ ನಡೆಯಿಂದಲೇ ಈ ದೇಶಕ್ಕೆಲ್ಲ ಬ್ರಹ್ಮಾವರ್ತ ಅಥವಾ ಬ್ರಾಹ್ಮಣರ ದೇಶವೆಂದೇ ವಾಡಿಕೆಯಾಯಿತು." ಬುನಾದಿಕಾಲದಿಂದ ಹೊದಲುಗೊಂಡು ಆರನೇ ಏಳನೇ ಶತಾಬ್ದಗಳ ವರೆಗೆ ಬ್ರಾಹ್ಮಣರು ತಮ್ಮ ನಿರ್ಮಲವಾದ ಚಾರಿತ್ರ್ಯದಿಂದಲೂ, ಬುದ್ಧಿಯ ಹೆಚ್ಚುಗಾರಿಕೆಯಿಂದಲೂ, ಒಂದು ಬಗೆಯಿಂದ ಸಮಾಜದ ಪ್ರಭುಗಳಾಗಿ ಬಾಳುತ್ತಿದ್ದುದು ಬ್ರಾಹ್ಮಣ ಜಾತಿಗೇನೇ ಭೂಷಣವೆಂದಾರು ಅನ್ನಲಿಕ್ಕಿಲ್ಲ? ಯಾವುದೊಂದು ದೇಶಕ್ಕೆ ಅಲ್ಲಿರುವ ಜನರ ಪ್ರೌಢಿಮೆಯು ಮೂಲಕ ಅದೇ ಆನ್ವರ್ಥಕವಾದ ಹೆಸರು ಬಂದಿರುವದೆಂದು ಪರದೇಶದ ಪ್ರವಾಸಿಕರು ಬರೆದಿಟ್ಟಿರುವಲ್ಲಿ ಎಷ್ಟೊಂದು ಅರ್ಥವಿದೆ? ಬ್ರಾಹ್ಮಣರಂತೆ ಕ್ಷತ್ರಿಯರ ಬಗ್ಗೆಯೂ ಹ್ಯೂಯೆನತ್ಸಂಗನು "ಕ್ಷತ್ರಿಯು ಹಾಗೂ ಬ್ರಾಹ್ಮಣರ ನಡೆಯು ಚೊಕ್ಕಟವಾಗಿಯೂ ಸಾದಾ ಆಗಿಯೂ ಇದೆ. ಇವರು ಅಡಂಬರದವರಲ್ಲ. ಬಡತನದಿಂದ ಬಾಳ್ವೆ ಮಾಡಿಕೊಂಡಿರುವವರು. ಈ ದೇಶದೊಳಗೆ ಅನುವಂಶಿಕವಾಗಿ ನಡೆದುಬಂದಿರುವಂಥ ಒಟ್ಟು ನಾಲ್ಕು ಜಾತಿಗಳು. ಅವರೆಲ್ಲರೂ ತಮ್ಮ ತಮ್ಮಗಳ ತತ್ವಕ್ಕೆ ಮಿಗದಂತೆ ಸಮಾಧಾನದಿಂದಿರುವರು. ಇವರಲ್ಲಿ ಕ್ಷತ್ರಿಯರು ಎರಡನೇ ಮೆಟ್ಟಿನವರು. ಸಮಾಜದ ಒಡೆಯರು ಅವರೇ. ಪರೋಪಕಾರ ಭೂತದಯೆಗಳೇ ಅವರ ಅಳ್ವಿಕೆಯ ಮುಖ್ಯ ಲಕ್ಷಣಗಳು. ಮೂರನೇ ಮೆಟ್ಟಿಲಿನವರೇ ವೈಶ್ಯರು. ಬಳನಾಡಿನಲ್ಲಿಯೂ ಹೊರನಾಡಿನಲ್ಲಿಯೂ ವ್ಯಾಪಾರನಡಿಸುವದೇ ಅವರ ಗೊತ್ತಿನ ಹೋರೆ. ಶೂದ್ರಜಾತಿಯೇ ನಾಲ್ಕನೆಯುದು. ಹೊಲಗದ್ದೆಗಳಲ್ಲಿ ದುಡಿದು, ಉತ್ತು

ಬಿತ್ತಿ ಬೆಳೆಬರುವಂತೆ ಕಷ್ಟಪಡುವರವರು. ಮೇಲ್ಕಂಡ ಜಾತಿಜಾತಿಗಳಲ್ಲಿ ಹೆಣ್ಣುಗಂಡಿನ ವ್ಯವಹಾರವಿಲ್ಲ. ಎಲ್ಲರೂ ತಮ್ಮ ತಮ್ಮ ಜಾತಿಯೊಳಗಿನ ಹೆಣ್ಣುಗಂಡುಗಳನ್ನಾರಿಸುವರು. ಹೆಂಗಸರು ಪುನರ್ವಿವಾಹ ಮಾಡಿಕೊಳ್ಳುವದಿಲ್ಲ. ಕುಲಶೀಲಕ್ಕನುಗುಣವಾಗಿ ಅವರಲ್ಲಿ ಅನೇಕ ಪಂಗಡಗಳುಂಟಾಗಿವೆ." ಮೇಲ್ಕಾಣಿಸಿದಂತೆ ಹ್ಯೂಯೆನತ್ಸಂಗನು ಬರೆದಿಟ್ಟಿದ್ದರೂ, ಅರಮನೆತನಗಳಲ್ಲಿ ಕ್ಷತ್ರಿಯವೈಶ್ಯರೆಂಬುವ ನಿಷೇಧವಿಲ್ಲದೆ ಶರೀರಸಂಬಂಧಗಳು ನಾಗುತ್ತಿದ್ದವೆನ್ನಲಿಕ್ಕೆ ವೈಶ್ಯರಾದ ಹರ್ಷಮನೆತನಕ್ಕೂ ಕ್ಷತ್ರಿಯರಾದ ಗುಜರಾತಿನ ವಲಭೀರಾಜರಿಗೂ ನೆಂಟಸ್ತನವಿದ್ದುದೇ ನಾಕು. ಕೆಲವೆಡೆಯಲ್ಲಿ ಬ್ರಾಮ್ಹಣ ವೈಶ್ಯ, ಕ್ಷತ್ರಿಯ ಶೂದ್ರ, ಬ್ರಾಮ್ಹಣ ಶೂದ್ರರಲ್ಲಿಯೂ ಅನುಲೋಮ ವಿವಾಹಗಳಾದ ಉದಾಹರಣೆಗಳುಂಟು. ಹೀಗೆ ನಡಿಲುಗೊಂಡಿರುವ ನಾಮಾಂಚಿಕ ರೂಢಿಯು ಬರಬರುತ್ತ ಹೆಚ್ಚೆಚ್ಚು ಬಿಗುವಾಗುತ್ತ ಮುಂದೆ ಯಾವ ಜಾತಿಗಳೊಡನೆಯೂ ಶರೀರಸಂಬಂಧ ಬೆಳಿಸುವದೆಂದರೆ ಅಧರ್ಮವೆಂಬುವಷ್ಟರ ಮಟ್ಟಿಗೆ ಸ್ಥಿತ್ಯಂತರವಾಯಿತು. ಇರಲಿ. ಕ್ಷತ್ರಿಯರೇ ರಾಜರಾಗಬೇಕೆಂದಿದ್ದರೂ ಶೂದ್ರರಿಗಾಗಲಿ, ವೈಶ್ಯರಿಗಾಗಲಿ ಅವರವರ ದೈವಯೋಗದಿಂದ ರಾಜ್ಯಪ್ರಾಪ್ತಿಯಾದರೆ ಅವರನ್ನೆಂದೂ ಕ್ಷತ್ರಿಯರಲ್ಲಿ ಸೇರಿಸುತ್ತಿದ್ದಿಲ್ಲ; ಅಧವಾ ಕ್ಷತ್ರಿಯರೆಂದು ಸಂಬೋಧಿಸುತ್ತಿರಲಿಲ್ಲ. ಬಾಣಭಟ್ಟನಿಗೆ ಆಶ್ರಯದಾತನಾಗಿರುವ ನಾರ್ವಭೌಮ ಹರ್ಷಮಹಾರಾಜನನ್ನು ಕೂಡ ಬಾಣನು ಹರ್ಷಚರಿತ ಗ್ರಂಥದೊಳಗೆ ಕ್ಷತ್ರಿಯನೆಂದು ಹೇಳದೆ, ವೈಶ್ಯನೆಂದೇ ಸ್ಪಷ್ಟವಾಗಿ ನುಡಿದಿರುವನು. ಇದರಲ್ಲಿಯ ತಿರುಳಿನ ಮಾತೆಂದರೆ, ರಾಜ್ಯಪ್ರಾಪ್ತಿಯಾದರೂ, ಜಾತಿದೃಷ್ಟಿಯಿಂದ ಮನುಷ್ಯನ ಯೋಗ್ಯತೆಯು ಮೇಲು ಕೀಳಾಗುತ್ತಿರಲಿಲ್ಲ; ಮತ್ತು ಹಾಗಾಗಬೇಕೆಂದು ಯಾರೂ ಬಯಸುತ್ತಿರಲಿಲ್ಲ. ಬ್ರಾಮ್ಹಣರ ಹೆಸರಿನ ಮುಂದೆ ಶರ್ಮಾ, ಭಟ್ಟ, ದೇವ, ಆರ್ಯ ಹಾಗೂ ನ್ವಾಮಿ ಈ ಉಪಪದಗಳನ್ನು ಹಚ್ಚುವ ವಾಡಿಕೆಯಿದ್ದಿತು. ಹೀಗಿದ್ದರೂ, ಅವರು ಬರಿಯ ಧರ್ಮ ಅಧವಾ ವಿದ್ಯಾಧ್ಯಯನಾದಿಗಳಲ್ಲಿಯೇ ಕಾಲಕಳೆಯದೆ, ರಾಜಕಾರ್ಯದೊಳಗೆ ತೊಕ್ಕು ದೊಡ್ಡ ದೊಡ್ಡ ಹುದ್ದೆಯ ಕೆಲಸಗಳನ್ನು

ಮಾಡಿದ ಬಗ್ಗೆ ಎಷ್ಟೋ ಆಧಾರಗಳಿವೆ. ಕ್ಷತ್ರಿಯರು ವರ್ಮಾ, ಭಟ್ಟ, ತ್ರಾತಾ ಈ ಪದವಿಗಳನ್ನು ಹಚ್ಚಿಕೊಳ್ಳುತ್ತಿದ್ದರು. ವೈಶ್ಯರು ಗುಪ್ತ, ವರ್ಧನ, ಭೂತಿ ಈ ಜಾತಿವಾಚಕ ಬಿರುದುಗಳನ್ನು ಬಳಸುತ್ತಿದ್ದರು.

ಸಾಮಾಜಿಕ ದೇಶಾಚಾರಗಳು:— ಹರ್ಷಮಹಾರಾಯನ ಕಾಲವೆಂದರೆ, ಪ್ರಾಚೀನಾರ್ವಾಚೀನ ಕಾಲಗಳಲ್ಲಿಯ ಭೇದವನ್ನು ತೋರಿಸುವಂಥ ಮೇರೆ ಗೆರೆಯು; ಮತ್ತು ಅವೆರಡೂ ಕಾಲಗಳನ್ನು ಕೂಡಿಸುವ ಕೊಂಡಿಯು. ಹಳೆಯ ಕಾಲದ ಹೊದಿಕೆಯು ಇಲ್ಲಿಗೆ ಮುಗಿದು ಹೊಸಗಾಲಕ್ಕೆ ಮೊದಲಾಯಿತು. ಈ ಕಾಲದ ಜನರ ಉಡಿಗೆತೊಡಿಗೆ, ನಡೆನುಡಿ, ಒಡವೆತೊಡವೆಗಳನ್ನು ಕುರಿತು ಹ್ಯುಯೆನತ್ಸಂಗನು ಬರೆದಿಟ್ಟಿರುವದನ್ನೇ ಸಂಕ್ಷೇಪವಾಗಿ ನೋಡೋಣ. "ಈ ಜನರು ಹೊಲಿದ ಬಟ್ಟೆಗಳನ್ನು ಬಳಸುವದಿಲ್ಲ. ಇವರಿಗೆ ಬೆರಿಕೆಯ ಬಣ್ಣದ ಬಟ್ಟೆಗಳು ಸೇರುವದಿಲ್ಲ. ಬಿಳಿ ಬಟ್ಟೆಯೆಂದರೆ ಬಹು ಇಷ್ಟ. ಗಂಡಸರು ಸೊಂಟಕ್ಕೊಂದು ಉದ್ದವಾದ ಬಟ್ಟೆಯನ್ನು ಸುತ್ತಿಕೊಳ್ಳುವರು. ಅಂಥದೇ ಪಂಚೆಯನ್ನು ಎಡ ಹೆಗಲಿನ ಮೇಲಿಂದ ಹಾಯಿಸಿ ಬಲಗೈಯನ್ನು ತೆರವಿಟ್ಟಿರುತ್ತಾರೆ. ಹೆಂಗಸರು ಉದ್ದೋದ್ದವಾದುದೊಂದು ಉಡಿಗೆಯನ್ನುಟ್ಟು ಕಚ್ಚೆ ಹಾಕದೆ ಹಾಗೆಯೇ ಬಿಟ್ಟಿರುವದುಂಟು. ತಲೆಯ ಮೇಲ್ಗಡೆಯ ಕೂದಲಿಗೊಂದು ಗಂಟು ಹಾಕಿ ಕೆಳಗಡೆಯ ಕೂದಲನ್ನು ಜೋತು ಬಿಟ್ಟಿರುತ್ತಾರೆ. ಗಂಡಸರಲ್ಲಿ ಕೆಲವರಿಗೆ ಮೀಸೆಯುಂಟು. ಕೆಲವರಿಗಿಲ್ಲ. ಗಂಡಸರು ಚಂಡಿಕೆಗೆ ಹೂವಿನ ಕುಚ್ಚುಗಳನ್ನು ಮುಡಿದುಕೊಳ್ಳುವದುಂಟು." ಇದರಿಂದ ಹರ್ಷಕಾಲದಲ್ಲಿ ಹಿಂದುಸ್ಥಾನದೊಳಗೆ ಇನ್ನೂ ಹೊಲಿಯುವ ಕಲೆಯು ವಾಡಿಕೆಯಲ್ಲಿರಲಿಲ್ಲವೆಂಬದು ಸಿದ್ಧವಾಗುತ್ತದೆ. ಹ್ಯುಯೆನತ್ಸಂಗನ ಮೇಲಿನ ವಿಧಾನಕ್ಕೆ ಹರ್ಷಚರಿತ್ರೆಯಲ್ಲಿ ಬೆಂಬಲವುಂಟು. ಹರ್ಷಮಹಾರಾಯನು ದಿಗ್ವಿಜಯಕ್ಕೆ ಬಿಜಯ ಮಾಡಿಸಿದ ಕಾಲಕ್ಕೆ ಆತನ ಮೈಮೇಲೆ ರಾಜಹಂಸ ಅಚ್ಚಿನ ಬಂದೇಸಮವಾಗಿರುವ ಎರಡು ಬಿಳೀ ವಸ್ತ್ರಗಳಿದ್ದವು. ಚಕ್ರವರ್ತಿಯ ಲಕ್ಷಣವೆಂದು ಕೋರೆಚಂದ್ರನಾಕಾರದ ಹೂವಿನ ಮಾಲೆಯೊಂದನ್ನು ತಲೆಗೆ ಕಟ್ಟಿಕೊಂಡಿದ್ದನೆಂದು ಬಾಣನು ಬಣ್ಣಿಸಿದ್ದಾನೆ.

ಚಕ್ರವರ್ತಿಯಾಗಿರುವ ಮಹಾರಾಯನ ಉಡಿಗೆಯು ಬಗೆಯೇ ಹೀಗಿದ್ದ ಮೇಲೆ ಸಾಮಾನ್ಯರ ಪಾಡೇನು? ರೇಶ್ಮೆ, ಉಣ್ಣೆ, ಹತ್ತಿಗಳಿಂದ ನೂತು ನೇಯ್ದ ಈ ಬಟ್ಟೆದೊಡವುಗಳು ಹಾವಿನ ಪರೆಯಂತೆ ಹೊಳಪಾಗಿಯೂ, ಅಂದವಾಗಿಯೂ, ಗಟ್ಟಿಯಾಗಿಯೂ, ಉಸಿರು ತಗಲಿದರೆ ಹಾರುವಂಥವುಗಳೂ, ಇಂದ್ರಧನುಷ್ಯದ ತೆರನಾಗಿ ಚಿತ್ರವಿಚಿತ್ರ ಬಣ್ಣದವುಗಳೂ ಇರುತ್ತಿದ್ದವು. ಅಂಚಿಲ್ಲದ ಸಾದಾ ಬೆಳ್ಳೆ ಬಟ್ಟೆಗಳನ್ನು ವಿಧವೆಯರು ಮಾತ್ರ ಉಡುತ್ತಿದ್ದರು. ವಿಧವೆಯರು ಕೆಂಪು ಬಟ್ಟೆಗಳನ್ನುಡುವ ಈಗಿನ ಪದ್ಧತಿಯೂ ಬೌದ್ಧ ಭಿಕ್ಷುಣಿಯರ ಅನುಕರಣೆಯೇ ಸರಿ. ಉಡಿಗೆತೊಡಿಗೆಗಳಲ್ಲಿ ಹರ್ಷಕಾಲದವರು ಇಷ್ಟೊಂದು ಸಾದಾ ನಡೆಯವರಿದ್ದರೂ, ಒಡವೆ ತೊಡವೆಗಳೆಂದರೆ ಎಂದಾದರೂ ಅವರಿಗೆ ಬಲು ಹಿಗ್ಗು. ಈ ಬಗ್ಗೆ ಈಹೊತ್ತಿಗೂ ನಮ್ಮ ಸಮಾಜದೊಳಗೆ ರೂಢವಾಗಿರುವ ಪದ್ಧತಿಗಳೇ ಸಾಕ್ಷಿ. ಹರ್ಷಮಹಾರಾಯನ ಕಾಲದಲ್ಲಿಯೂ, ಹಿಂದೂಗಳು "ತಲೆಯಲ್ಲಿ ವಜ್ರವೈಡೂರ್ಯಾದಿಗಳಿಂದ ಕೆತ್ತಿದ ಕಿರೀಟ, ಕೊರಳಲ್ಲಿ ರತ್ನಹಾರ, ಕೈಯಲ್ಲಿ ಕಡಗ, ಬೆರಳಲ್ಲಿ ಉಂಗುರ ಮುಂತಾದವುಗಳನ್ನಿಟ್ಟುಕೊಂಡು ಶಿಂಗರಿಸಿಕೊಳ್ಳುವ ವಾಡಿಕೆಯಿತ್ತೆಂದು" ಹ್ಯುಯೆನತ್ಸಂಗನು ಬರೆದಿರುವನು. ಹೀಗಿದ್ದರೂ ಹರ್ಷಮಹಾರಾಯನು ಇವೆಲ್ಲವುಗಳ ಜಂಜಡಕ್ಕೆ ಶಿಲುಕದೆ ಕವಿಯಲ್ಲಿ ಕುಂಡಲಗಳನ್ನೂ ರತ್ನಿಯಲ್ಲಿ ಬರಿಯ ಕಡಗವೊಂದನ್ನೂ ಹಾಕಿಕೊಂಡಿದ್ದನೆಂದು ಬಾಣನು ವರ್ಣಿಸಿದ್ದಾನೆ. ಸಾಮಾನ್ಯ ಜನರೆಲ್ಲರೂ ಬರಿಗಾಲಿನಿಂದ ನಡೆಯುತ್ತಿದ್ದರೆಂಬುದನ್ನು ಹ್ಯುಯೆನತ್ಸಂಗನು ಬರೆದಿರುವನು. ಶಿಷ್ಟರಾದ ಬ್ರಾಹ್ಮಣರೂ, ಹೆಂಗಸರೂ, ಹಳ್ಳಿಯವರೂ ಈ ಪದ್ಧತಿಗೆ ಇನ್ನೂ ಕುರುಹುಗಳಾಗಿರುವರು. ದಂಡಿನ ಅಧಿಕಾರಿಗಳು ಕೆಲವರು ತಲೆಯ ಮೇಲೆ ನಿಡುಗೂದಲು, ಕಲ್ಲೀಮೀಸೆ, ಹೊಕ್ಕಳ ವರೆಗೆ ಜೋಲುತ್ತಿರುವ ಗಡ್ಡಗಳನ್ನಿಡುತ್ತಿದ್ದರೆಂದೂ ಬಾಣನ ವರ್ಣನೆ. ಬಾಣಭಟ್ಟನ ಲಗ್ನದ ಪರಿಯನ್ನೂ, ರಾಜ್ಯಶ್ರೀದೇವಿಯ ಲಗ್ನದ ರೀತಿಯನ್ನೂ ಓದಿದರೆ ಆ ಕಾಲಕ್ಕೆ ಪ್ರಾಥವಿವಾಹವೇ ಬಳಕೆಯಲ್ಲಿತ್ತೆಂದೂ ಊಟಉಪಚಾರದ ಗೊಂದಲವಿರಲಿಲ್ಲೆಂದೂ ಸಿದ್ಧವಾಗುತ್ತದೆ. ನಿಜವಾಗಿ ತಿಳಿದು ಆಳೆದು

ನೋಡಿದರೆ, ಈ ಕಾಲದಿಂದ ಮುಂದೆಯೇ ದೇಶದೊಳಗೆ ಬಾಲವಿವಾಹದ ಖೋಡಿ ನಡೆಯು ನಮ್ಮಲ್ಲಿ ಪ್ರಚಾರವಾಯಿತು. ಕ್ಷತ್ರಿಯರಲ್ಲಿ ಬುರುಕೆಯ ವಾಡಿಕೆಯಿದ್ದು ಮದುವೆಯ ಹೊತ್ತಿನಲ್ಲಿ ರಾಜ್ಯಶ್ರಿಯು ಪತಿರಾಯನ ಮುಂದೆ ಮರ್ಯಾದೆಯಿಂದ ಕೆಳಮೋರೆ ಮಾಡಿಕೊಂಡು ಕುಳಿತಿದ್ದಳು. ಬಾಣನು ಬಣ್ಣಿಸಿರ ವಿಧವೆಯರ ಸಂಗತಿಯನ್ನು ಓದಿದರೆ ಆ ಕಾಲಕ್ಕೆ ಬ್ರಾಮ್ಹಣ ವಿಧವೆಯಿರನ್ನು ಈಗಿನಂತೆ ಮಡಿ ಮಾಡುವದು ಬಳಿಕೆಯಲ್ಲಿರಲಿಲ್ಲವೆಂಬುದು ಗೊತ್ತಾಗುವದು. ಎದೆ ಸೀಳುವಂತಹ ವೈಧವ್ಯಸ್ಥಿತಿಯಲ್ಲಿ ಕಾಲ ನೂಕುವದು ಅಸಾಧ್ಯವೆಂದರಿತುಕೊಂಡು ಹಲವು ಸ್ತ್ರೀಯರು ಬೌದ್ಧ ಭಿಕ್ಷುಣಿಯರಾಗಲಿಕ್ಕೆ ಮನಗೊಳ್ಳುತ್ತಿರುವದೇನು ಸೋಜಿಗ? ಹೀಗಾಗಿ ಬೌದ್ಧಮತದೊಳಗೆ ವಿಧವೆಯರ ಸಂಖ್ಯೆಯೇ ಹೆಚ್ಚು. ಸೋತ ಅರಸನ ಹೆಂಡತಿಯರನ್ನು ಗೆದ್ದ ಅರಸನು ತನ್ನರಮನೆಯ ಊಳಿಗದವರನ್ನಾಗಿ ನಿಯಮಿಸುತ್ತಿದ್ದುದರಿಂದ ಮುಂಬರುವ ಈ ಪ್ರಖರ ಪ್ರಸಂಗವನ್ನು ತಾಳಲಾರದೆ, ಮೊದಲೇ ಅನೇಕರು ಆತ್ಮಹತ್ಯ ಮಾಡಿಕೊಳ್ಳಲನುವಾಗುತ್ತಿದ್ದರು. ಪ್ರಭಾಕರವರ್ಧನನ ಪಟ್ಟರಾಣಿಯೂ ಹರ್ಷನ ತಾಯಿಯೂ ಆದ ಯಶೋಮತಿಯಂತೂ ಪತಿಯು ಇನ್ನುಳಿಯುವದಿಲ್ಲವೆಂದು ತಿಳಿದೊಡನೆ ತಾನು ಅಗ್ನಿಪ್ರವೇಶ ಮಾಡಿದಳೆಂದು ಬಾಣನು ಬರೆದಿಟ್ಟಿರುವದರ ಮೇಲಿಂದ ಸತಿ ಹೋಗುವದು ಧಾರಾಳವಾಗಿ ವಾಡಿಕೆಯಲ್ಲಿತ್ತೆಂಬುದು ತಾನೇ ಸ್ಪಷ್ಟವಾಗುತ್ತದೆ. ಕೆಲಸಾರೆ, ಪುರುಷರು ಕೂಡ ತಮ್ಮ ಸ್ವಾಮಿಯ ಅಥವಾ ಮಿತ್ರನ ವಿಯೋಗದುಃಖವನ್ನು ಸೈರಿಸಲಾರದೆ ಅವರೊಡನೆ ತಮ್ಮ ದೇಹವನ್ನೂ ಕಿಚ್ಚಿಗೊಡ್ಡಿದ ದೃಷ್ಟಾಂತಗಳಿವೆ. ಕಾಲಿದಾಸನು ಕಾಲವಾದ ಸಮಯಕ್ಕೆ ಸಿಂಹಲದ್ವೀಪದ ಮಹಾರಾಜನೂ, ಪ್ರಭಾಕರವರ್ಧನನು ಮೃತವಾದಾಗ್ಗೆ ಅವನ ನಂಬಿಗೆಯು ಮಂತ್ರಿಯೂ, ರಾಜವೈದ್ಯನೂ, ಬೇರೆ ಕೆಲಜನ ಊಳಿಗದವರೂ ಅವನೊಡನೆ ಅಗ್ನಿಯಲ್ಲಿ ಹಾರಿಕೊಂಡ ಸಂಗತಿಯು ಈ ಪದ್ಧತಿಗೆ ಕೈಗನ್ನಡಿಯಾಗಿದೆ. ಈ ತೆರವಾದ ಪದ್ಧತಿಯು ಜಪಾನದೊಳಗೆ ಈಗ್ಗೂ ನಡೆಯಲ್ಲಿದ್ದು ಈಗ ಕೆಲವರ್ಷಗಳಾಚೆ ಮೊದಲಿನ ಮಿಕ್ಯಾಡೋ ರಾಜನು ಮರಣ ಹೊಂದಿ

ದಾಗ್ಗೆ ಜಪಾನದ ಮಂತ್ರಿಯೊಬ್ಬನು ಗುಂಡು ಹಾಕಿಕೊಂಡು ಸತ್ತ ಸಂಗತಿಯು ಪ್ರಸಿದ್ಧವಿದೆ. ಧೊರೆಯ ದೆಸೆಯಿಂದ ಪೂರ್ವಿಕರಲ್ಲಿ ತಮ್ಮ ಜೀವವನ್ನು ಸಹ ನಿವಾಳಿಸಿ ಒಗೆಯುವಂಥದೊಂದು ಲೋಕೋತ್ತರವಾದ ಸ್ವಾಮಿಭಕ್ತಿಯೂ, ಸಖ್ಯಭಕ್ತಿಯೂ ಇರುವದು ನಿಶ್ಚಯವಾಗಿಯೂ ಬಣ್ಣಿಸಲಾಗದ ಮಾತೇ ಸರಿ. ಹಿಂದೂಜನರ ತತ್ಕಾಲೀನ ಮನಸಿನ ಒಲವು ಬಲಗಳು ಎಷ್ಟು ಸೂಕ್ಷ್ಮ ಮತ್ತು ಕಾಲನಿಗೂ ಒಲಿಸತಕ್ಕ ಮಾತಾಗಿದ್ದವೆಂಬುದು ಮಾದರಿಗಾಗಿ ಮೇಲ್ಕಾಣಿಸಿದ ಮಾತುಗಳಿಂದ ವ್ಯಕ್ತವಾಗುತ್ತದಲ್ಲವೇ?

ಶಿಕ್ಷಣ ಪದ್ಧತಿ:— ಹರ್ಷನ ಆಡಳಿತೆಯ ಸಮಯಕ್ಕೆ ಅರಸು ಮಕ್ಕಳ ಶಿಕ್ಷಣವೂ, ಸಾಮಾನ್ಯರ ಶಿಕ್ಷಣವೂ ಬೇರೆಬೇರೆಯಾಗಿ ನಡೆಯುತ್ತಿತ್ತೆಂದು ಹೇಳಲು ನಮಗಾವ ಅನುಮಾನವೂ ತೋರುವದಿಲ್ಲ. ಏಕೆಂದರೆ ಬಾಣಕವಿಯು ತನ್ನ ಹರ್ಷಚರಿತ್ರೆಯಲ್ಲಿ ಹರ್ಷನ ಶಿಕ್ಷಣವನ್ನು ಕುರಿತು ಅಕ್ಷರಗಳಿಂದ ಬಣ್ಣಿಸುವಾಗ್ಗೆ ಹೇಳಿದ್ದು— ಪಟ್ಟಣದ ಹೊರಗಡೆ ಇಟ್ಟಿಗೆಗಳಿಂದ ಕಟ್ಟಲ್ಪಟ್ಟದ್ದೊಂದು ಕಟ್ಟಡ. ಬೆಳ್ಳಗೆ ಮಂಜಿನಂತೊಪ್ಪುವ ಅದರ ಗೋಡೆಗಳು. ಸುತ್ತಲೂ ನೀರಿನಿಂದ ತುಳುಕಾಡುತ್ತಿರುವ ಕಂದಕವು. ಇಂಥ ಕೋಟೆಯೊಳಗೊಂದು ವಿದ್ಯಾಮಂದಿರವು. ವಿದ್ಯಾಮಂದಿರದೊಳಗೆ ಮಹಾಮಹಾ ವಿದ್ವಾಂಸರು ಉಪಾಧ್ಯಾಯರಾಗಿ ತರ್ಕ, ವ್ಯಾಕರಣ, ನ್ಯಾಯ, ಅರ್ಥಶಾಸ್ತ್ರ, ಧರ್ಮಶಾಸ್ತ್ರಾದಿಗಳ ಅಧ್ಯಯನವನ್ನು ತಮ್ಮ ಹಾಗೂ ಅರಸುಮಕ್ಕಳಿಗೆ ಮಾಡಿಸುತ್ತಿದ್ದರು. ಗುರುಗಳ ಬಳಿ ಕಲಿಯುಲಿದ್ದ ಅರಸುಮನೆತನದ ಬಾಲಕರನ್ನು ನೋಡಿದರೆ ಪಂಜರದಲ್ಲಿ ಜಿಗಿದಾಡುವ ಸಿಂಹದ ಮರಿಗಳನ್ನು ಕಂಡಂತೆ ಭಾಸವಾಗುತ್ತಿತ್ತು. ಅರಸುಮಕ್ಕಳಿಗೆ ಶರೀರವ್ಯಾಯಾಮ, ಯುದ್ಧವಿದ್ಯೆ, ಕುದುರೆ ಸವಾರಿ ಮೊದಲಾದವುಗಳನ್ನು ಕಲಿಸಲಿಕ್ಕಾಗಿಯೇ ಏರ್ಪಾಟಿದ್ದಿತು. ಅರಸುಮಕ್ಕಳ ಅಧ್ಯಯನಾದಿಗಳ ಸಮಾಚಾರವನ್ನು ತಿಳಿದುಕೊಳ್ಳುವದಕ್ಕೆಂದು ಮಹಾರಾಜನು ರಾಣಿಯರ ಸಮೇತನಾಗಿ ಆಗಾಗ್ಗೆ ಬಂದು ಕುಶಲವನ್ನು ಕೇಳಿಕೊಂಡು ಹೋಗುತ್ತಿದ್ದನು. ಇಲ್ಲಿಯೇ ಚಿತ್ರಕಲೆ, ರತ್ನ ಪರೀಕ್ಷೆಯ ಕಲೆ, ಸಂಗೀತ,

ನೃತ್ಯ, ಅನೆ ಕುದುರೆಗಳನ್ನು ನಾಕುವ ಬಗೆ, ಮಿಕ್ಕ ಕೈಗಾರಿಕೆ ಅವೇ ಮುಂತಾದ ವಿದ್ಯೆಗಳನ್ನು ಕಲಿಸುತ್ತಿದ್ದರು. ಹರ್ಷಮಹಾರಾಯನು ಯುದ್ಧದಲ್ಲಿ ಹೇಗೋ ಹಾಗೆ ನಾಹಿತ್ಯಶಾಸ್ತ್ರದೊಳಗೂ ಪಾರೀಣ ನಾಗಿರುವದಕ್ಕೆ ಆತನು ಸ್ವತಃ ಬರೆದ ನಾಗಾನಂದ, ರತ್ನಾವಳಿ, ಪ್ರಿಯದರ್ಶಿಕಾ ಅವೇ ಮುಂತಾದ ಕಾವ್ಯಗಳು ಆದರ್ಶವಾಗಿವೆ. ಯಾವ ವಿದ್ಯೆಯೆಂದರೆ ಅದರಲ್ಲಿ ಆತನು ಮೀರಬುದ್ಧಿಯಾದುದರಿಂದ ಭಾರತ ಜನಾಂಗವು ಸರ್ವ ವಿಧದಿಂದಲೂ ಉತ್ಕರ್ಷಗೇರಬೇಕೆಂಬ ವಿಸಲ ತಿಳಿವಳಿಕೆಯಿಂದ ವಿಸಲ ಬುದ್ಧಿಯ ಅವ್ಯಾವಧಾನಿಯಾದ ಈ ಲೋಕೈಕವೀರನನ್ನು ದೇವರು ಹುಟ್ಟಿಸಿದಂತೆ ಕಾಣುತ್ತಿತ್ತು. ಬ್ರಾಮ್ಹಣರ ಅಗ್ರಹಾರದ ಗುರುಮನೆಗಳಲ್ಲಿರುವ ಬ್ರಮ್ಹಚಾರಿಗಳು ಬೆಳಗಿನ ಜಾವಕ್ಕೆದ್ದು ಗುರುಗಳಿಂದ ವೇದಶಾನ್ತ್ರಾಧ್ಯಾಯನದ ಸಂತೆ ಹೇಳಿಸಿಕೊಂಡು ಗಟ್ಟಿ ಮಾಡುತ್ತಿದ್ದುದರಿಂದ ಅಗ್ರಹಾರವೆಲ್ಲವೂ ಅವರ ಘೋಷದಿಂದ ಗರ್ಜಿಸುತ್ತಿದ್ದಿತು. ಮಗಧ ದೇಶದೊಳಗೆ ಈ ಕಾಲಕ್ಕೆ ನಾಲಂದವೆಂಬ ಬೌದ್ಧವಿಹಾರವು ಬಹು ಘನತೆಗೇರಿದ್ದು, ಇತ್ಸಿಂಗನೆಂಬೊಬ್ಬ ಚೀನ ದೇಶದ ಯಾತ್ರಿಕನು ೧೦ ವರ್ಷಗಳ ತನಕ ಅಲ್ಲಿದ್ದು ಅಭ್ಯಾಸಮಾಡಿದನಂತೆ! ಈತನಿರುವ ಕಾಲದಲ್ಲಿ ನಾಲಂದ ವಿಶ್ವವಿದ್ಯಾಲಯದೊಳಗೆ ಮೂರು ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ನ್ಯಾಯ, ವ್ಯಾಕರಣ, ವೈದ್ಯಶಾಸ್ತ್ರ ಮೊದಲಾದವುಗಳ ಅಧ್ಯಯನಗಳು ಇಲ್ಲಿ ಸಾರೋದ್ಧಾರವಾಗಿ ಸಾಗುತ್ತಿದ್ದವು. ಜನಸಾಮಾನ್ಯರ ಶಿಕ್ಷಣದ ಕಲ್ಪನೆಯು ಮೊದಲಿನ ಜನರಿಗಿದ್ದಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ; ಆದರೂ ಧರ್ಮಶಿಕ್ಷಣವೇ ಕೆಳತರಗತಿಯ ಜನರಿಗೂ ಹೆಂಗಸರಿಗೂ ಸಮಾಧಾನದ ಪೆಟ್ಟು ಆದುದರಿಂದ ಈ ತೆರದ ಧರ್ಮಶಿಕ್ಷಣವು ಜನರಿಗೆ ಸನ್ಯಾಸಿಗಳಿಂದಲೂ, ತಮ್ಮ ವಿದ್ಯೆಯಿಂದಲೇ ಜೀವನ ನಡಿಸಿರುವ ವಿದ್ಯಾವಂತರಿಂದಲೂ ಒಂದಿಲ್ಲೊಂದು ಬಗೆಯಿಂದ ದೊರೆಯುತ್ತಿತ್ತು. ಹೀಗಾಗಿ ವಿದ್ಯೆಕಲಿತವರ ಸಂಖ್ಯೆಯು ಜನಾಂಗದ ಪ್ರಮಾಣದಿಂದ ಕಡಿಮೆಯಿದ್ದರೂ ಅನುಭವಿಕರ ಸಂಖ್ಯೆಯು ಹೆಚ್ಚಿಗಿತ್ತು.

ಜನರ ರಾಜಕೀಯ ಕಲ್ಪನೆಗಳು:– ಹಿಂದೆ ಭಾರತೇತರ ಕಾಲೀನವಾದ ರಾಜ್ಯವ್ಯವಸ್ಥೆಯನ್ನು ಕುರಿತು ಬರೆಯುವಾಗ ರಾಜಕಾರ್ಯದೊಳಗೆ ಭಾರತೀಯರ ವಿಚಾರಗಳು ಎಷ್ಟು ಮುಂದರಿದಿದ್ದವೆಂಬುದನ್ನು ಹೇಳಿದ್ದೇವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಆ ಕಾಲದ ರಾಜ್ಯವೆಂದರೆ ರಾಷ್ಟ್ರ, ರಾಜ್ಯ ಹಾಗೂ ರಾಜ ಅವು ಮೂರೂ ಒಂದೇ ಸರದೊಳಗಿನ ದೊಡ್ಡ ಮಣಿಗಳು. ಜನರಿಂದ ನಾಡು, ನಾಡಿನಿಂದ ಆ ನಾಡಿನ ಧೊರೆ. ಹೀಗಿರುವದರಿಂದ ಯಾವ ನಾಡಿನಲ್ಲಿ ಯಾವ ಬಗೆಯ ಜನರು ವಾಸಿಸುತ್ತಿದ್ದರೋ, ಅವರಿಗೆ ಆ ನಾಡಿನ ಹೆಸರಿನಿಂದ ಕರೆಯುತ್ತಿದ್ದರು. ಮತ್ತು ಯಾವ ನಾಡಿನವರನ್ನು ರಾಜನು ಆಳುತ್ತಿರುವನೋ, ಅದೇ ನಾಡಿನವರ ಹೆಸರನ್ನು ರಾಜನಿಗೆ ಕೊಡುತ್ತಿದ್ದರು. ಮುಂದೆ ಮುಂದೆ ಧರ್ಮಶಾಸ್ತ್ರಕ್ಕನುಗುಣವಾಗಿ ಆಳುವಂಥ ಕ್ಷತ್ರಿಯ ರಾಜರ ಆಳಿಕೆಯು ಬಲಗುಂದಿ ಅನಾರ್ಯರ ಆಳಿಕೆಯೇ ಪ್ರಬಲವಾದ್ದರಿಂದ ಧರ್ಮಕ್ಕೂ ರಾಜ್ಯಕ್ಕೂ ರಾಜನಿಗೂ ಇರುವ ಜೀವಾಳ ಸಂಬಂಧವು ತಪ್ಪಿಹೋಗಿ, ಕಡಿವಾಣಿಲ್ಲದ ಕುದುರೆಯಂತೆ ಅರಸುಗಳ ಸ್ಥಿತಿಯಾಯಿತು; ಇದರಿಂದ ಜನಾಂಗದ ಆಳಿಕೆಯಲ್ಲಿ ಜನರ ಕೈ ಸಂಪೂರ್ಣವಾಗಿ ಇಲ್ಲದಂತಾಗಿ ಕ್ರಮೇಣ, ನಾಗರಿಕತೆಯ ಕಲ್ಪನೆಗಳೂ ಹಕ್ಕುಗಳೂ ಮರೆತುಹೋದವು. ಇದುವರೆಗೆ ಜನಾಂಗದ ಆಳಾಗಿ, ಜನರ ಕ್ಷೇಮ ನೆಮ್ಮದಿಗಳನ್ನು ಬದಗಿಸಲಿಕ್ಕಿದ್ದ ಅರಸನು ಈಗೊಬ್ಬ ಪುಂಡ ಬಲುಮೆಗಾರನಾದನು. ರಾಜ್ಯ ಪ್ರಜೆಗಳೆಂದರೆ ಈ ಪುಂಡನು ತನ್ನ ಸುಖಕ್ಕಾಗಿ ಮಾರಲಿಕ್ಕೆ ಕೊಂಡಿರುವ ಆಸ್ತಿ. ಒಬ್ಬರೂ ರಾಜನ ಉಗುಳು ದಾಟಲಿಕ್ಕಾಗದು. ಇಂಥ ದುರವಸ್ಥೆಯಲ್ಲಿ ಜನಮತವನ್ನು ಲೆಕ್ಕಿಸುವರಾರು? ಜನಮತವನ್ನಾದರಿಸಿದ ರಾಜನು ರಾಜನಲ್ಲವೆಂದು ಸಾರಿ, ಅವನನ್ನು ಪಟ್ಟದಿಂದ ತಳ್ಳುವಷ್ಟು ನೈತಿಕ ಧೈರ್ಯವು ತತ್ಕಾಲೀನ ಹಿಂದೂಜನರಿಗೆ ಸಾಲದ್ದರಿಂದ, ರಾಜ್ಯಪದ್ಧತಿಯು ಭಟ್ಟಯೇ ಕೆಟ್ಟುಹೋಯಿತು. ಹಿಂದೂಜನರನ್ನು ಈಬಗೆಯಾಗಿ ದಾರಿಗೇಡು ಮಾಡಲಿಕ್ಕೆ ತತ್ಕಾಲಕ್ಕೆ ಅವರಲ್ಲಿ ಬಳಕೆಯಲ್ಲಿರುವ 'ರಾಜನೆಂದರೆ ದೇವರ ಅಂಶಾವತಾರ, ರಾಜ್ಯವು ಪೂರ್ವಜನ್ಮದಲ್ಲಿ ಮಾಡಿದ ತಪಸ್ಸಿನ

ಫಲ' ವೆಂಬೀ ಹುಚ್ಚು ಹಾಗೂ ಧರ್ಮಾತಿರೇಕದ ಕಲ್ಪನೆಗಳೂ ಶಕು ನಾದಿಗಳಲ್ಲಿ ಅವರ ಶ್ರದ್ಧೆಯೂ ಇವೇ ಕಾರಣವಾದವೆನ್ನಲಿಕ್ಕೆ ಅಡ್ಡಿ ಯಿಲ್ಲ. ಇವೆಲ್ಲ ಮಡ್ಡತನದ ಯೋಚನೆಗಳು ಮೆದುಳಿನಲ್ಲಿ ಮನೆಮಾಡಿ ಕೊಂಡಿದ್ದುದರಿಂದ ಹಿಂದೂಜನರ ಮೆದುಳಿನಲ್ಲಿಯ ರಾಜ್ಯಕಾರ್ಯ ವ್ಯವಹಾರದ ಆಲೋಚನೆಗೈಯುವದೊಂದು ಭಾಗವೇ ಪಾರ್ಶ್ವವಾ ಯುವಿಗೆಡೆಯಾಯಿತು. ಈ ವಿಚಾರಗಳೇ ಜನರನ್ನು ಹೆಣಮಾಡಿ ಕುಳ್ಳಿ ರಿಸಿದವು. ರಾಜ್ಯದೊಳಗೆ ಬೇಕಾದಂಥ ಕಲಕುಮಲಕುಗಳಾಗಲಿ, ಜನರು ಜೀವಾ ಒತ್ತಿಯಿಟ್ಟು ಬೇಕಾದಷ್ಟು ಕಷ್ಟಪಡುತ್ತಿದ್ದರೇ ವಿನಾ ಅವನ್ನು ಪ್ರತಿಭಟಿಸುತ್ತಿರಲಿಲ್ಲ. ರಣಹೇಡಿಯಾದ ರಾಜನಿದ್ದರೆ ಬಲಿಷ್ಠ ನಾದ ದಂಡನಾಯಕನಿಗಾಗಲಿ, ಮಂತ್ರಿಗಾಗಲಿ ರಾಜ್ಯಸೂತ್ರವು ಕೈ ಸೇರಿತೆಂತಲೇ ತಿಳಿಯತಕ್ಕದ್ದು! ಈ ಕಾಲದೊಳಗಾದ ರಾಜ್ಯಕ್ರಾಂ ತಿಗೆ ಪ್ರಾಯಶಃ ಮಂತ್ರಿಗಳೂ ಸೇನಾನಾಯಕರೂ ಪ್ರವರ್ತಕರಿದ್ದುದೇ ನಮ್ಮ ತರ್ಕಕ್ಕೆ ಅಡಿಗಲ್ಲಾಗಿದೆ. ಜನರಲ್ಲಿ ನಾಗರಿಕ ಕಲ್ಪನೆಯು ಕೆಂಡವು ಧಗಧಗಿಸುತ್ತಿದ್ದರೆ ಇಂತಹ ವೈಯಕ್ತಿಕ ರಾಜ್ಯಕ್ರಾಂತಿಗಳಿಗೆ ಅವಕಾಶ ಸಿಗುತ್ತಿತ್ತೇ? ನಾವು, ನಮ್ಮ ರಾಜ್ಯವೆಂಬೀ ಕಲ್ಪನೆಗಳಲ್ಲಿ ಒಗ್ಗಟ್ಟಿನ ಬೆಸುಗೆಯಿಲ್ಲದ್ದರಿಂದಲೂ ಜನರಲ್ಲಿ ರಾಷ್ಟ್ರಜೀವನದ ಬಾಳು ವೆಯು ತಿಳಿವಿಲ್ಲದ್ದರಿಂದಲೂ ಇಂತಹ ಘೋರ ಪರಿಣಾಮಗಳಾದವು. ಒಮ್ಮೆ ಮುಗಿಲಿನಲ್ಲಿಯ ಮೆಟ್ಟುತಪ್ಪಿ ಕೆಳಗೆ ಬಿದ್ದ ಗಂಗೆಯು ನೆಲದ ವಾಲಾಗಿ ಧೋ ಧೋ ಎಂದು ಭೋರ್ಗರೆಯುತ್ತ ಹರಿಯುವಂತೆ, ಪ್ರಾತಿನಿಧಿಕ ಉಚ್ಚ ಮೆಟ್ಟಿಲಿನಿಂದ ಅಪ್ಪಿತಪ್ಪಿ ಅಜ್ಞಾನದಿಂದ ನೆಲಕ್ಕು ರುಳಿದ ಹಿಂದೂ ರಾಜಕೀಯ ತತ್ವಗಳು ಗತಿಗಾಣದೆ ಬಹುದಿನಗಳ ವರೆಗೆ ಹಾಗೆಯೇ ಉರುಳುತ್ತುರುಳುತ್ತ ನಡೆದು ಕೊನೆಗೆ ಮೇಲಕ್ಕೇಳ ದಂತೆ ನೆಲಹಿಡಿದು ಬಿದ್ದುಕೊಂಡವು. ಹಿಂದೂ ಜನಾಂಗಕ್ಕೆ ಹೇಡಿ ತನ ಮುತ್ತಿದ ಈ ಗ್ರಹಣಕಾಲವು ಮುಂದೆಕ್ರಮವಾಗಿ ಬೆಳೆಯುತ್ತಲೇ ಹೋಯಿತಲ್ಲದೆ ಇಳಿಯುಲಿಲ್ಲವೆಂಬುದು ಮುಂಬರುವ ಸಂಗತಿಗಳಿಂದ ತಿಳಿಯುವದು.

ರಾಜ್ಯವ್ಯವಸ್ಥೆ, ದಂಡು ಮುಂತಾದವು :— ಹರ್ಷಕಾಲೀನ

ರಾಜ್ಯಪದ್ಧತಿಗೆ ಮೊದಲಿನಂತೆ, ಹಳ್ಳಿಯೇ ತಳಹದಿಯ ಸಂಸ್ಥೆಯು. ಕಾಡಿಗೆ ಕಾಡನ್ನೇ ಹಾಳುಗೊಳಿಸುವ ಬಿರುಗಾಳಿಗಳ ಉರುಬಿಗೆ ಶಿಲ್ಕ್ಕೆ ಹೆಮ್ಮರಗಳು ನೆಲಕ್ಕುರುಳಿದರೂ, ಚಿಕ್ಕ ಚಿಕ್ಕ ಗಿಡಗಳು ಕರಿಕೆಯ ಬೇರಿನಂತೆ ಹಾಗೇ ಅಚ್ಚಳಿಯದೆ ಉಳಿದುಕೊಂಡಿರುವಂತೆ, ದೇಶದೊಳಗೆ ಬೇಕಾದಂಥ ಅನಾಹೂತವಾದ ಕಲಕುಮಲಕುಗಳಾಗಲಿ, ಯುದ್ಧದ ಬೇಗೆ ಏಳಲಿ, ಈ ಗ್ರಾಮಸಂಸ್ಥೆಗಳಿಗೇನೂ ಧಕ್ಕೆ ತಗಲದೆ ಯಥಾಪ್ರಕಾರ ನಡೆಯುತ್ತಿದ್ದವು. ಈ ಗ್ರಾಮಸಂಸ್ಥೆಯ ವ್ಯವಸ್ಥೆ ನೋಡಿಕೊಳ್ಳಲಿಕ್ಕೆ ಅಕ್ಷಪಟಲಿಕ (ಪಾಟೀಲ–ಗೌಡ) ರೂ ಕರಣಿಕ (ಕುಲಕರ್ಣಿ) ರೂ ತಲೆತಲಾಂತರಗಳಿಂದ ನಿಯಮಿಸಲ್ಪಡುತ್ತಿದ್ದರು. ಆಡಳಿತೆಯ ಅನುಕೂಲಕ್ಕಾಗಿ ಭುಕ್ತಿ, ಮತ ಅಥವಾ ಮಂಡಲಗಳೆಂದು ವಿಭಾಗಗಳನ್ನುಂಟು ಮಾಡಿದ್ದರು. ವಿಷಯ ಅಥವಾ ಆಹಾರಗಳೆಂದರೆ ಈಗಿನ ತಾಲೂಕುಗಳು. ದಕ್ಷಿಣ ಹಿಂದೂ ದೇಶದೊಳಗೆ ಇವಕ್ಕೇ ನಾಡುಗಳೆಂಬ ಹೆಸರು ಬಳೆಸುತ್ತಿದ್ದರು. ಭುಕ್ತಿಗಳೆಂದರೆ ಜಿಲ್ಲೆಗಳು. ಭೂಮಿಯನ್ನು ಅಳೆಯುವದು ಗೊತ್ತಿತ್ತು. ಜನಜೀವನಕ್ಕಗತ್ಯವಾದ ಉಪ್ಪಿನ ಮಾಳಗಳು ಅಲ್ಲಲ್ಲಿ ಲೆಕ್ಕವಿಲ್ಲದಷ್ಟು ಇದ್ದವು. ಇದಕ್ಕಾಗಿ ಜನರು ರಾಜನಿಗೆ ತೆರಿಗೆ ತೆರಬೇಕಾಗುತ್ತಿತ್ತು. ರಾಜ್ಯದ ಮೇರೆಯಲ್ಲಲ್ಲೇ ದೊಡ್ಡ ದೊಡ್ಡ ಕಾಡುಗಳಿದ್ದು, ಅಲ್ಲಿಂದ ಜನರು ತಮಗೆ ಸಾಕಾಗುವಷ್ಟು ಉರುವಲ ಕಟ್ಟಿಗೆಯನ್ನು ಕಡಿದುಕೊಂಡು ಬರುತ್ತಿದ್ದರು. ದನಗಳು ಮೇಯಲಿಕ್ಕೆ ವಿಸ್ತಾರವಾದ ಹುಲ್ಲುಗಾವಲುಗಳಿದ್ದು, ಮನೆಯ ದನಗಳಿಗೆ ಮೇವಿಗಾಗಿ ಬೇಕಿದ್ದರೆ, ಪುಕ್ಕಟೆಯಾಗಿಯೂ, ಮಾರಾಟಕ್ಕಾದರೆ ಅದರ ಆರನೇ ಪಾಲನ್ನು ಕರವೆಂದು ತೆಗೆದುಕೊಂಡೂ ಕೊಡುತ್ತಿದ್ದರು. ಒಂದು ಗ್ರಾಮವೆಂದ ಮೇಲೆ ಒಂದು ಅನ್ನಛತ್ರ, ಒಂದು ಅರವಟ್ಟಿಗೆ, ಒಂದು ಧರ್ಮಶಾಲೆ, ಒಂದು ಯಜ್ಞಶಾಲೆ ಇವಿಷ್ಟು ಸಂಸ್ಥೆಗಳು ಇದ್ದೇ ತೀರಬೇಕೆಂದು ಗೊತ್ತುವಳಿ. ಮುಗಿಲು ಹರಿದಿರುವದೇನೋ ಎಂಬಂತೆ ಮಳೆಗಾಲದಲ್ಲಿ ಬಹು ಭಯಂಕರವಾಗಿ ಮಳೆಯು ಸುರಿಯುತ್ತಿದ್ದುದರಿಂದ ಸಾಧಾರಣವಾಗಿ ಯಾರೂ ಪ್ರಯಾಣಕ್ಕೆ ಹೊರಡುತ್ತಿರಲಿಲ್ಲವಾದ್ದರಿಂದ ಸತ್ರ, ಅರವಟ್ಟಿಗೆ

ಯಜ್ಞಶಾಲೆ, ಧರ್ಮಶಾಲೆಗಳಿಗಾಗಿ ಅಕಾಲದ ಮಟ್ಟಿಗೇ ಹಂದರ ಗಳನ್ನು ಹಾಕುತ್ತಿದ್ದರು. ಮಳೆಗಾಲ ಬಂದೊಡನೆ ತೆಗೆದುಬಿಡುತ್ತಿದ್ದರು. ದಂಡಿನ ವ್ಯವಸ್ಥೆಯು ಬಹು ಚನ್ನಾಗಿದ್ದಿತು. ಅರಸುಮನೆತನಕ್ಕೆ ಸಂಬಂಧಪಟ್ಟವರನ್ನೂ, ಕೈಕೆಳಗಿನ ರಾಜರ ಮನೆತನದವರನ್ನೂ, ಪ್ರಜೆಗಳಲ್ಲಿಯ ಅನೇಕ ಜಾತಿಯ ಜನರನ್ನೂ ದಂಡಿನೊಳಗೆ ಸೇರಿಸಿಕೊಳ್ಳುತ್ತಿದ್ದುದರಿಂದ ಅವರೆಲ್ಲರಲ್ಲಿ ನ್ವಾಮಿಯಬಗ್ಗೆ ಅಭಿಮಾನಜ್ಯೋತಿಯು ಹೊಳೆಯುತ್ತಿದ್ದಿತು. ದಂಡಿನವರ ಒಂದೊಂದು ಗುಂಪಿಗೆ ಒಬ್ಬ ಅಧಿಕಾರಿ, ಈ ಅಧಿಕಾರಿಗಳನ್ನೆಲ್ಲ ನೋಡಿಕೊಳ್ಳುವವನೇ ಸೇನಾಪತಿ. ದಕ್ಷಿಣ ದೇಶದ ರಾವುತರು ಬಹು ಕಾಲದಿಂದ ಹೆಸರುಪಡೆದವರಾದ್ದರಿಂದ ಹರ್ಷನು ಅವರನ್ನು ತನ್ನ ದಂಡಿನಲ್ಲಿರಿಸಿದ್ದನು. ಈ ದಂಡಾಳುಗಳ ವೆಚ್ಚವನ್ನೆಲ್ಲ ರಾಜನು ತನ್ನ ಹಣದಿಂದಲೇ ಸಾಗಿಸುತ್ತಿದ್ದನು. ತನ್ನ ದೇಶರಕ್ಷಣೆಗಾಗಿ ಎರಡನೇ ಯಾವುದೋ ಒಂದು ದೇಶದ ದಂಡಾಳುಗಳನ್ನು ಬಾಡಿಗೆಯಿಂದ ತಂದಿರಲಿಲ್ಲ. ತನ್ನ ದೇಶರಕ್ಷಣೆಗಾಗಿ ಬೇರೆ ದೇಶದ ದಂಡಾಳುಗಳಿಗೆ ಬಾಡಿಗೆ ಕೊಟ್ಟು ಇಡುವದಕ್ಕಿಂತ ಹೆಚ್ಚಿನ ಅವಮಾನವು ಮತ್ತಾವುದು? ರಾಷ್ಟ್ರೀಯ ಸೈನ್ಯದೊಳಗೆ ಕೆಚ್ಚೆದೆಯ ಕಾದಿಟ್ಟ ದಂಡಾಳುಗಳಿದ್ದು, ವಂಶಪರಂಪರೆಯಿಂದ ನಪೆದುಬಂದ ಕ್ಷಾತ್ರವೃತ್ತಿಯು ಅವರ ಮೈಯಲ್ಲುಂಡು ನುರಿತುಬೆರತು ಹೋಗಿತ್ತು.

ಧರ್ಮಮತ ವಿಚಾರಗಳು:- ಹರ್ಷನಾಳ್ವಿಕೆಯಲ್ಲಿ ಬಹಿದು ಕಾಣುವಂಥ ಹೆಚ್ಚಿನ ಸಂಗತಿಗಳೆಂದರೆ; ಬೌದ್ಧ, ಜೈನ ಮತ್ತು ಹಿಂದೂ ಮತಗಳ ಜನರಲ್ಲಿಯ ಐಕಮತ್ಯವು; ಮತ್ತು ಪರಸ್ಪರ ಸಹಾನುಭೂತಿಯು. ಈ ಮೂರು ಮತಗಳು ಒಡಹುಟ್ಟಿದ ಅಣ್ಣತಮ್ಮಂದಿರಂತೆ ಕೈಕೈ ಹಿಡಿದುಕೊಂಡು ನಾಗುತ್ತಿದ್ದನೆಂದರೆ ಹೆಚ್ಚು ಒಪ್ಪುವದು. ಹೀಗಿದ್ದುದರಿಂದ ಈ ಮತಗಳು ಒಂದೇ ರಾಜ್ಯದೊಳಗೆ ಒಲ್ಮೆಸಲೆಯಿಂದೊಡಗೂಡಿ ನಲಿದಾಡುತಿದ್ದುದೇನೂ ಸೋಜಿಗದ ಮಾತಲ್ಲ. ಒಂದೇ ಕುಟುಂಬದೊಳಗಿನವರಾದ ತಂದೆ ಮಕ್ಕಳಲ್ಲಿ ಸಹ ಒಂದು ಬಗೆಯ ಮತನ್ವಾತಂತ್ರ್ಯದ ಮನೋಜ್ಞವಾದ ಆನಂದವು ಕಂಗೊಳಿ

ಸುತ್ತಿತ್ತು. ಇದಕ್ಕೆ ಹರ್ಷವರ್ಧನನ ತಂದೆಯಾದ ಪ್ರಭಾಕರವರ್ಧನನು ಸೌರನಿದ್ದುದೂ, ಅಣ್ಣನಾದ ರಾಜ್ಯವರ್ಧನನು ಬೌದ್ಧನಿದ್ದುದೂ, ಹರ್ಷವರ್ಧನನು ಶೈವನಿದ್ದುದೂ ಅವೇ ಉದಾಹರಣೆಗಳು ಸಾಕು. ಇಷ್ಟೊಂದು ಮತಸ್ವಾತಂತ್ರ್ಯವು ಹಿಂದೂದೇಶದ ಯಾವ ಕಾಲದ ಚರಿತ್ರೆಯಲ್ಲಿಯೂ ಕಂಡುಬರುವದಿಲ್ಲ. ಈ ಮೇರೆಗೆ ಮೇಲ್ಕಾಣಿಸಿದ ಎರಡೂ ಮತದವರು ಸಲುವಳಿಯುಂದಿರಲು ಅವರೀರ್ವರೂ ಮೂರ್ತಿಪೂಜಕರಾಗಿದ್ದುದೇ ಮುಖ್ಯ ಕಾರಣ. ಬೌದ್ಧಮತಸ್ಥಾಪಕನಾದ ಬುದ್ಧದೇವನು ಈಶ್ವರನನ್ನು ಅಲ್ಲಗಳೆಯುವ ಮಟ್ಟಿಗೆ ನಾಸ್ತಿಕವಾದಿಯೂ ಅಂತಲೇ ಮೂರ್ತಿಪೂಜೆಯ ವಿರೋಧಿಯಾಗಿದ್ದರೂ ಅವನ ಘಟವು ಬಿದ್ದುಹೋದ ನಂತರ ಅತನ ಅನುಯಾಯಿಗಳು ಅವನನ್ನೇ ಪರಮೇಶ್ವರನೆಂದು ಬಗೆದು ಅವನ ಮೂರ್ತಿ ಮಾಡಿಸಿ ಪೂಜೆ ನಡಿಸಿದರು. ಮುಂದೆ ಮಹಾಯಾನ ಪಂಥದವರಲ್ಲಿಯಂತೂ ಈ ಮೂರ್ತಿಪೂಜೆಯ ಜೊಳ್ಳಾದ ಸೋಗು ಬಲಿಯುತ್ತ ಹೋಗಿ, ಜಗತ್ತೆಲ್ಲ ಹರಡಿ ಒನೇ ಶತಮಾನವಂದರೆ ಮೂರ್ತಿಪೂಜೆಯ ಯುಗವೆಂದು ಹೆಸರುವಾಸಿಯಾಯಿತು. ಹಿಂದುಗಳೂ, ಬೌದ್ಧರೂ, ಕ್ರೈಸ್ತರೂ, ಸೆಮಿಟಿಕರೂ ಎಲ್ಲರೂ ಮೂರ್ತಿಪೂಜೆಯ ಪೂಜಾರಿಗಳಾಗಿ ಆದರೊಳಗೆ ನಾಮುಂದೆ ತಾಮುಂದೆಂದು ಮೇಲಾಟ ನಡಿಸಿರುವಂತೆ ಕೋರುತ್ತಿದ್ದಿತು. ಆದರೆ ಭಗವಂತನ ಅಗಾಧವಾದ ಲೀಲೆಯೆಂತಹದೋ? ಈ ಮೂರ್ತಿಪೂಜಕರ ತಂಡಿನೊಳಗಿಂದಲೇ "ಕುಲಕ್ಕೆ ಕೇಡು ಕೊಡಲಯ್ಯ ಕಾವುಳಿ" ಎಂಬಂತೆ ಮೂರ್ತಿಭಂಜಕರದೊಂದು ಪಂಗಡವು ಮೆಲ್ಲನೆ ಮತ್ತೆದ್ದೆಂದೆಯಲ್ಲಿ ಮೊಳಕೆಯೊಡೆಯುತ್ತಿದ್ದಿತು. ಅದು ಯಾರ ಕನಸುಮನಸಿನಲ್ಲಿ ಕೂಡ ಇಣಿಕಿ ಹಾಕಿರಲಿಲ್ಲ. ಹಿಂದೂಜನರಂತೂ ಈ ಮೂರ್ತಿಪೂಜೆಯ ತಿಕ್ಕಮುಕ್ಕಾಟದೊಳಗೆ ಸಂಪೂರ್ಣವಾಗಿ ತಮ್ಮ ಮನಸನ್ನೂ ಬುದ್ಧಿಯನ್ನೂ ಹಣವನ್ನೂ ಮಾರಿಕೊಂಡು ಮಹಾ ಮಹಾ ಪ್ರಚಂಡವಾದ ದೇವಾಲಯಗಳನ್ನೋ, ಸ್ತೂಪಗಳನ್ನೋ, ಬಸದಿಗಳನ್ನೋ ಕಟ್ಟಿಸಿ, ಮನುಷ್ಯನೆತ್ತರ ಮೂರ್ತಿಗಳನ್ನು ಸ್ಥಾಪಿಸಿ, ಅದಕ್ಕಾಗಿ ನೀರಿನಂತೆ ದುಡ್ಡನ್ನು ಪೋಲು ಮಾಡುತ್ತಿದ್ದರು. ಎಲ್ಲಿ ನೋಡಿದಲ್ಲಿ ದೇವಾ

ಲಯ, ಸ್ತೂಪ ಮತ್ತು ಬಸದಿಗಳೇ. ಆಯಾ ಮತದ ಧೊರೆಗಳಿಗಾಗಲಿ, ದುಡ್ಡಿದ್ದವರಿಗಾಗಲಿ, ಗುಡಿ ಕಟ್ಟಿಸುವದು, ಅದರೊಳಗೆ ಭವ್ಯ ಮೂರ್ತಿ ಸ್ಥಾಪಿಸುವದು, ಅದಕ್ಕಾಗಿ ಹೇರಳವಾಗಿ ದುಡ್ಡು ಖರ್ಚು ಮಾಡುವದು, ಈ ವಿಷಯಗಳೇ ಜೀವಕ್ಕೆ ಮುಖ್ಯ ಸೊಗಸಿನ ಕೃತಿಗಳಾದ್ದರಿಂದ, ತತ್ಕಾಲೀನ ಹಣವೆಲ್ಲವೂ ದೇವಸ್ಥಾನಗಳಿಗೆ ಸೇರಿತು. ಮುಲ್ತಾನದೊಳಗೆ ಈ ಕಾಲಕ್ಕಿದ್ದ ಒಂದು ಸೂರ್ಯನ ಭವ್ಯಮಂದಿರವನ್ನು ಕುರಿತು ಬಣ್ಣಿಸುವಾಗ ಹ್ಯುಯೆನತ್ಸಂಗನು ಅನ್ನುವದು. "ಇಲ್ಲಿಯ ಮೂರ್ತಿಯು ಚಿನ್ನದ್ದು. ಮೈಮೇಲೆಲ್ಲ ರತ್ನ, ಹವಳ ಕೆಚ್ಚಿದ ಒಡವೆಗಳು. ಬೆಳಗು ಸಂಜೆಗೆ ದಿನಾಲು ದೇವರ ಮುಂದೆ ನೃತ್ಯ ಗಾಯನಾದಿಗಳು ನಡೆಯುತ್ತವೆ. ದೊಡ್ಡ ದೊಡ್ಡ ರಾಜರುಗಳು ಈ ದೇವಸ್ಥಾನಕ್ಕೆ ಪರ್ವಾಶನಗಳನ್ನೂ, ದಿವ್ಯವಾದ ಬೆಲೆಯುಳ್ಳ ಒಡವೆಗಳನ್ನೂ ಕಾಣಿಕೆಯಾಗಿ ಕೊಟ್ಟು, ಬಡಬಗ್ಗರಿಗಾಗಿ ಅನ್ನಸತ್ರಾದಿಗಳನ್ನು ಏರ್ಪಡಿಸಿದ್ದರಿಂದ ದಿನಾಲು ನಾವಿರಾರು ಮಂದಿ ಯಾತ್ರಿಕರು ಇಲ್ಲಿ ಬಂದು ಮುತ್ತುತ್ತಾರೆ. ದೇವಾಲಯದ ಸುತ್ತು ನೀರಿನ ಹೊಂಡಗಳೂ, ಬಗೆ ಬಗೆಯ ಹೂವಿನ ಗಿಡಗಳೂ ಬೆರೆಯುತ್ತಿದ್ದುದರಿಂದಂತೂ ಈ ದೇವಸ್ಥಾನವು ಬಹು ರಮಣೀಯವಾಗಿತ್ತು." ಕಾಶಿಯ ಶ್ರೀ ವಿಶ್ವೇಶ್ವರ ದೇವಸ್ಥಾನವನ್ನು ಕುರಿತು ಬರೆಯುವಾಗ ಈತನಂದುದು - "ಇಲ್ಲಿಯ ಈಶ್ವರನ ಪುರುಷಾಕಾರದ ಮೂರ್ತಿಯು ೫೦ ಅಡಿ ಎತ್ತರವೂ, ಅಂದವಾಗಿಯೂ ಇರುವದರಿಂದ ಜೀವಂತ ಮನುಷ್ಯನನ್ನು ನಾಚಿಸುತ್ತದೆ. ದೇವರ ದರ್ಶನಕ್ಕಾಗಿ ದಿನಾಲು ೧೦ ಸಾವಿರ ಜನರ ದಟ್ಟಣೆಯಾಗುತ್ತದೆ." ಧರ್ಮ ಹಾಗೂ ಈಶ್ವರ ವಿಷಯಕವಾದ ಹುಚ್ಚು ಕಲ್ಪನೆಗಳು ಈ ಕಾಲದ ಜನರ ತಲೆಗಳಲ್ಲಿ ತುಂಬಿ ತುಳುಕುತ್ತಿದ್ದವು. ಒಂದಾನೊಂದು ಕಾಲಕ್ಕೆ ತನ್ನ ವೈಚಾರಿಕ ಬೆಳಕಿನಿಂದ ಇಡೀ ಹಿಂದೂಧರ್ಮವನ್ನೇ ನಡುಗಿಸಿ ತನ್ನದೊಂದು ಸ್ವತಂತ್ರ ದಾರಿಯನ್ನೇ ಮಾಡಿಕೊಂಡಿರುವ ಬೌದ್ಧಮತದಂಥ ತತ್ವವಿಚಾರ ಪ್ರಧಾನವಾದ ಮತಕ್ಕೂ ಈ ಕಾಲಕ್ಕೆ ವಿಚಾರವಡಗಿ, ತಲೆತಿರುಗಿ, ಬುದ್ಧನ ಕೂದಲೆಳೆ, ಎಲುಬಿನ ಚೂರು, ಉಗುರುಗಳನ್ನೂ ಕೂಡ ಅವನ ಭಕ್ತರು ತಮ್ಮ ಮನಸಿಗೆ

ಬಂದಂತೆ ಅಗಿದು ತೆಗೆದುಕೊಂಡೊಯ್ದು ಅದರ ಮೇಲೆ ದೊಡ್ಡ ದೊಡ್ಡ ಸ್ತೂಪಗಳನ್ನೇರಿಸಿದರು. ಹಿಂದುಗಳೂ, ಬೌದ್ಧರೂ, ಜೈನರೂ ತಮ್ಮ ತಮ್ಮ ಭಾವನೆಯಂತೆ, ತಮ್ಮ ತಮ್ಮ ದೇವಾಲಯಗಳಿಗೆ ಮನವಾರೆ ಭಕ್ತಿ ಭರದಿಂದ ಕೊಟ್ಟ ಅನರ್ಘ್ಯವಾದ ಒಡವೆಗಳಿಂದ ಈ ದೇವಸ್ಥಾನ ಗಳೆಲ್ಲ ತುಂಬಿ ಸೂಸುತ್ತಿರುವದರಿಂದ ಝಗಝಗಿಸುವ ಈ ಒಡವೆಗಳೇ ಮುಂದಣ ಕಾಲದೊಳಗೆ ವಿಧರ್ಮಿಯರಾದ ಪುಂಡ ಸುಲಿಗೆಗಾರರಿಗೆ ಸುಲಿಗೆಯ ಸವಿಹಚ್ಚುವ ಸಿರಿಯ ಮೀರಿದಾ ಶೆಯ ತಾಣಗಳಾಗಿ, ನಮ್ಮ ನ್ನೂ,ನಮ್ಮ ಪವಿತ್ರವಾದ ಧರ್ಮವನ್ನೂ ಕೆಡಿಸಲಿಕ್ಕೆ ಗಂಟಲಗಾಣಗ ಳಾಗಿ ಹೇಗೆ ಪರಿಣಮಿಸಿದವೆಂಬುದರ ಇತಿಹಾಸವನ್ನೋದಿದರೆ,ಮರುಳ ಮುಕ್ಕರಾದ ನಾವೇ ನಮ್ಮ ಕಾಲ್ಮೇಲೆ ಕಲ್ಲು ಹಾಕಿಕೊಂಡುದರ ತಿಳಿ ವುಂಟಾಗಿ ಕ್ಷಣಹೊತ್ತು ಮನಸು ಮಂಕಾಗಿ ಹೋಗುತ್ತದೆ. ಇದೆಲ್ಲ ನಮ್ಮ ಧರ್ಮದ ಹುಚ್ಚು ತಿಳಿವಿನ ಪ್ರಭಾವ! ಪಾಶುಪತ, ಗಾಣಪತ್ಯ, ಅಘೋರೀ (ಕಾಳಿಕಾ) ಮೊದಲಾದ ದೇವತೆಗಳ ಉಪಾಸನೆಯು ಈ ಕಾಲದಲ್ಲಿ ಎಡೆತಡೆಯಿಲ್ಲದೆ ಅಲ್ಲಲ್ಲಿ ಸುಳಿದಾಡುತ್ತಿದ್ದರೂ, ಹರ್ಷನ ಕಾಲದೊಳಗೆ ಪಶುಹಿಂಸಾ ಪ್ರಧಾನವಾದ ಯಜ್ಞಾದಿಗಳು ನಡೆಯಲಿಲ್ಲ ವೆಂಬುದಕ್ಕೆ ಹರ್ಷನ ಬಲುದಿನದ ರಾಜದಂಡದ ಪ್ರತಾಪವೆಂದೇ ನಿಃಸಂ ಶಯವಾಗಿ ನಾರಿ ನಾರಿ ಹೇಳಬಹುದು. ಮಹಾ ಮಹಾ ಯಜ್ಞಗಳ ಹೆಸರನ್ನುಳಿದು ಮಿಕ್ಕ ಚಿಕ್ಕ ಚಿಕ್ಕ ಅಗ್ನಿಹೋತ್ರಗಳು ಮಾತ್ರ ಬ್ರಾಹ್ಮ ಣರಲ್ಲಿ ನಿರ್ಬಾಧವಾಗಿ ನಡೆದಿದ್ದವು. ಗೃಹಸ್ಥ ಬ್ರಾಹ್ಮಣರೆಲ್ಲರೂ ಬಹು ತರವಾಗಿ ಅಗ್ನಿಹೋತ್ರಿಗಳೇ. ಪ್ರಾಚೀನಕಾಲದ ವರ್ಣಾಶ್ರಮ ಧರ್ಮದ ವ್ಯವಸ್ಥೆಯ ಹೆಜ್ಜೆಗಳು ಇನ್ನೂ ಸ್ಪಷ್ಟವಾಗಿ ಸಮಾಜದೊಳಗೆ ಕಾಣಿಸುತ್ತಿದ್ದವು. ಭಾಗವತಧರ್ಮ, ಕೃಷ್ಣಭಕ್ತಿ ಅವೇ ಮುಂತಾದ ಭಕ್ತಿಪಂಥಗಳು ಮೆಲ್ಲಮೆಲ್ಲಗೆ ಜನರ ಮನಸುಗಳನ್ನು ಸೆರೆವಿಡಿದು ತಮ್ಮ ಕಡೆಗೆ ಎಳೆದುಕೊಳ್ಳುತ್ತಿದ್ದುದರಿಂದ ಯಜ್ಞದ ಕಲ್ಪನೆಯೂ, ಪಶು ವಧೆಯೂ, ಮಾಂಸಾಹಾರವೂ ಅವೆಲ್ಲ ತಮ್ಮಷ್ಟಕ್ಕೆ ತಾವೇ ಜನಾಂಗ ದೊಳಗಿಂದ ಕಾಲ್ದೆಗೆಯಲಾರಂಭಿಸಿದ್ದವು. ಕಾಲಕ್ಕೆ ತಕ್ಕಂತೆ ಧರ್ಮದ ಸಾಧನ ಭೇದವಾಗಲು,ಅದಕ್ಕನುಗುಣವಾಗಿ ನಮ್ಮ ಜನರಾದರೂ ತತ್

ಕ್ಷಣವೇ ಧರ್ಮಕ್ಕಾಗಿ ಮಾಂಸಾಹಾರವನ್ನು ಬಹಿಷ್ಕರಿಸಿದ ಸಂಗತಿಯು ಜಗತ್ತಿನ ಇತಿಹಾಸದೊಳಗೆ ಹಿರಿದಾಗಿದೆ. ಇದರಿಂದ ಹಿಂದೂಜನರಿಗೆ ಅಧ್ಯಾತ್ಮಜ್ಞಾನದ ಪಟ್ಟವು ದೊರೆಯಿತೇನೋ ನಿಜ; ಆದರೆ ಅಧ್ಯಾತ್ಮಜ್ಞಾನದ ಬೆಲೆಯನ್ನೂ, ಬೆಳಕನ್ನೂ, ಭಾರಣೆಯನ್ನೂ ಚನ್ನಾಗಿ ತಿಳಿದಳೆದು ನೋಡದ ಹಿಂದೂಜನರ ಪಾಲಿಗೆ ಕಾಲಕ್ರಮದಿಂದ ಅಧ್ಯಾತ್ಮಜ್ಞಾನವೆಂಬುದು ಕನ್ನಡಿಯೊಳಗಿನ ಗಂಟಾಗಿ ಪರಿಣಮಿಸಿ, ಅದನ್ನು ಕಾಯ್ದುಕೊಳ್ಳಲಿಕ್ಕೆ ಬದ್ದಾದುತ್ತಿರಲು ಕೈಯೊಳಗಿನ ಗಂಟಾದ ರಾಜಕೀಯ ನ್ವಾತಂತ್ರ್ಯವೇ ನಮ್ಮಕೈ ಬಿಟ್ಟು ಹೋಯಿತು. ಈ ಮೇರೆಗೆ ತ್ರಿಶಂಕುವಿನಂತೆ, ಮುಗಿಲಲ್ಲಿಯೂ, ನೆಲದ ಮೇಲೆಯೂ ಇಲ್ಲದೆ, ಅಧ್ಯಾತ್ಮಜ್ಞಾನದ ನಿಜಸ್ವರೂಪವನ್ನರಿಯದೆ ಬಾಯಿಬಡುಕವಾದ ನಮ್ಮ ಪುರಾಣ ಜನಾಂಗವು ರಾಜಕೀಯ ದೃಷ್ಟಿಯಿಂದಲೂ ಹೆಣಕ್ಕಿಂತ ಕಡೆಯಾಯಿತು. ರಾಜಕೀಯ ಜೀವನದಲ್ಲಿ ಜೀವಕಳೆಯಿಲ್ಲದ್ದರಿಂದ ಸಾಮಾಜಿಕ ಧಾರ್ಮಿಕ ಜೀವನಗಳೂ ಹುಳತು ಅಳಿದು ಹೋಗಲು, ಒಂದಾನೊಂದು ಕಾಲಕ್ಕೆ ಜಗದೊಳಗೆ ಗುಡುಗಾಡುತ್ತಿರುವ ಸಿಂಹದೊಳಗಿನ ಜೀವಕಳೆಯು ಗಾಳಿಗೆ ಗಾಳಿಯಾಗಿ ಹೋಗಲು, ಹಿಂದೂಜನಾಂಗವು ಎಲುಬಿನ ಹಂದರವಾಗಿ ನಿಂತುಕೊಂಡಿತು.

ದಕ್ಷಿಣಹಿಂದೂದೇಶ:— ಉತ್ತರಹಿಂದೂದೇಶದೊಳಗೆ ನಡೆದ ರಂಗಭೂಮಿಯಿಂದ ಕ್ಷಣಹೊತ್ತು ಮರೆಯಾಗಿ ನಾವು ದಕ್ಷಿಣಹಿಂದೂದೇಶಕ್ಕೆ ಇಳಿದು ಬಂದರೆ, ಉತ್ತರದೇಶದಷ್ಟೇ ಹೆಚ್ಚೇನು? ಅದಕ್ಕಿಂತ ಗುಂಜಿ ತೂಕ ಹೆಚ್ಚು ವೈಭವಗೌರವಗಳಿಂದ ಕೂಡಿದ ನೋಟವು ನಮ್ಮ ಕಣ್ಣಿಗೆ ಕಟ್ಟುತ್ತದೆ. ದಕ್ಷಿಣಹಿಂದೂದೇಶದೊಳಗಿನ ಚರಿತ್ರೆಯಲ್ಲಿ ಸಹ ನಾವೀಗ ಕರ್ನಾಟಕ ಹಾಗೂ ತಮಿಳ ಹೀಗೆರಡು ವಿಧವಾಗಿ ವಿಂಗಡಿಸಿದರೆ ಬಂದೊಂದು ವಿಷಯುಗಳನ್ನು ಚರ್ಚಿಸಿ ಮನದಟ್ಟು ಮಾಡಿಕೊಳ್ಳಲು ಅನುವಾಗುವದರಿಂದ ಅದೇ ಕ್ರಮವನ್ನನುಸರಿಸುವದುಚಿತ. ಈ ಕಾಲಕ್ಕೆ ದಕ್ಷಿಣಹಿಂದೂದೇಶದೊಳಗೆ ಕರ್ನಾಟಕದಲ್ಲಿ ಚಾಲುಕ್ಯರೂ,*

* ಟಿಪ್ಪಣಿ— ಚಾಲುಕ್ಯ ಹಾಗೂ ಪಲ್ಲವರ ಸಂಗತಿಗಳು ಕಿರಿಯ ಕನ್ನಡಿಗರಿಗೆ ಪ್ರಾಥಮಿಕ ಅಭ್ಯಾಸದ ವೇಳೆಯಲ್ಲಿಯೇ ಚರಿತ್ರೆಯು ಬಾಲಗುಟ್ಟಿಯೆಂದು ಹಾಕುವ

ತಮಿಳುನಾಡಿನಲ್ಲಿ ಪಲ್ಲವರೂ ತಮ್ಮ ಚಂಡಪ್ರತಾಪದಿಂದ ಮೆರೆಯುತ್ತಿದ್ದರು. ಒಂದು ಗಳಿಗ್ಗೆ ಚಾಲುಕ್ಯರು ಏಳಲಿ, ಮತ್ತೊಂದು ಕ್ಷಣಕ್ಕೆ ಪಲ್ಲವರು ಗೆಲಿಯಲಿ, ಆದೇನೇ ಇದ್ದರೂ ಅವೆರಡೇ ಸಾರ್ವಭೌಮ ಮನೆತನಗಳು ದಕ್ಷಿಣಹಿಂದೂದೇಶಕ್ಕೆ ಲಲಾಮಭೂತವಾಗಿದ್ದವು. ಇನ್ನುಳಿದ ಗಂಗ, ಕದಂಬ, ರಾಷ್ಟ್ರಕೂಟ, ಅಳುಪ ಮೊದಲಾದ ಅರಸು ಮನೆತನಗಳು ಈ ಕಾಲಕ್ಕೆ ಎಣ್ಣೆಯಿಲ್ಲದ ದೀಪಗಳಂತೆ ಯಾರೊಬ್ಬರ ಸಾಮಂತರಾಗಿ ಕಾಲಕಳೆಯುತ್ತಿದ್ದವು. ಚಾಲುಕ್ಯರ ಇಮ್ಮಡಿಪುಲಿಕೇಶಿಯ ಲೋಕೋತ್ತರವಾದ ವೀರ್ಯವೇ ಈ ಕಾಲಕ್ಕೆ ಚಾಲುಕ್ಯವಂಶಿಯರ ಮಾನವನ್ನೂ ಕಾಯಲೂ, ಕರ್ನಾಟಕದ ಅಭಿಮಾನವನ್ನು ಕಳೆಯೇರಿಸಲೂ ಕಾರಣವಾದವು. ಈ ಪೂರ್ವ ಚಾಲುಕ್ಯರಲ್ಲಿ ಬಹು ಮಟ್ಟಿಗೆ ಎಲ್ಲರೂ ವೀರರಾಜರೇ ಆಗಿಹೋದ್ದರಿಂದ ಒಂದು ಬಗೆಯಿಂದ ಆ ವೀರ ಮನೆತನದ ಚರಿತ್ರವೆಂದರೆ ಕರ್ನಾಟಕದ ಚರಿತ್ರೆ! ಅವರ ಸಿರಿಗಾಲವೇ ಕನ್ನಡಿನ ಸಿರಿಗಾಲವು! ಅವರಲ್ಲಿ ಬದಾಮಿಯ ಇಮ್ಮಡಿ ಸತ್ಯಾಶ್ರಯ ಪುಲಿಕೇಶಿಯೆಂದರೆ ಕಿರೀಟಪ್ರಾಯನು. ಈತನು ದಕ್ಷಿಣದೊಳಗಿನ ಪಲ್ಲವ, ಚೋಳ, ಚೇರ, ಪಾಂಡ್ಯ, ಕಳಿಂಗ ಮೊದಲಾದ ರಾಜರುಗಳನ್ನು ಒಕ್ಕಲಿಕ್ಕಿ ನೂರು ಹಡಗುಗಳದೊಂದು ಪಡೆಯನ್ನು ತಕ್ಕೊಂಡು ಪಶ್ಚಿಮತೀರದಲ್ಲಿರುವ ಬಡ್ಡಿಜಗನ್ನಾಧನ ಪುರಿಪಟ್ಟಣವನ್ನು ಗೆದ್ದನು. 'ದಕ್ಷಿಣಾಪಥೇಶ್ವರ' ನೆಂದು ಹಿರಿದಾದ ಬಿರುದನ್ನು ತೊಟ್ಟನು. ಮುಂದೆ ಉತ್ತರಕ್ಕೆ ನಾಗಿ, ಅಲ್ಲಾಳುತ್ತಿರುವ ಗುಜ್ಜರ, ಮಾಳವ, ಲಾಟರನ್ನು ಲೀಲೆಯಿಂದ ಅಂಗೈಯಲ್ಲಿ ತೆಗೆದುಕೊಂಡನು. ಅದರೆ ಉತ್ತರದ ಸಾರ್ವಭೌಮವಾದ ಶ್ರೀಹರ್ಷನನ್ನೂ ನರ್ಮದೆಯ ದಂಡೆಯ ಹತ್ತಿರ ನೀರಿಳಿಸಿ, ಅವನನ್ನು ನರ್ಮದೆಯಾಚೆಗಟ್ಟಿದ್ದೊಂದು ಕರ್ನಾಟಕ ಇತಿಹಾಸದೊಳಗೆ ಚಿನ್ನದಕ್ಷರಗಳಿಂದ ಬರೆದಿಡತಕ್ಕ ಬಂಗಾರದಂಥ ಮಾತು. ಹರ್ಷನನ್ನು ಗೆದ್ದುದರಿಂದ ಈತನಿಗೆ ಪರಮೇಶ್ವರನೆಂಬ ಬಿರುದು ದೊರೆಯಿತು.

ಪದ್ಧತಿಯಿರುವದರಿಂದ ಆ ವಿಷಯವನ್ನಿಲ್ಲಿ ನಾವು ಹೆಚ್ಚು ಚರ್ಚಿಸುವದಿಲ್ಲ. ಹೆಚ್ಚಿನ ವಿಷಯವನ್ನು 'ಗತವೈಭವ' ಕರ್ನಾಟಕ ಕೈಪಿಡಿಗಳಲ್ಲಿ ನೋಡಬಹುದು.

ಕರ್ನಾಟಕ ಸಾಮ್ರಾಜ್ಯದ ಹಬ್ಬುಗೆ:– ಈತನ ಸಾಮ್ರಾಜ್ಯ ವಿನ್ಯಾರವು ಪೂರ್ವಕ್ಕೆ ನರ್ಮದೆಯ ವರೆಗೆ, ದಕ್ಷಿಣಕ್ಕೆ ಪೂರ್ವ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ಸಮುದ್ರವಲಯಾಂಕಿತವಾಗಿ ಹರಡಿತ್ತು. ಪುಲಿಕೇಶಿವಲ್ಲಭ ಮಹಾರಾಯನ ಕಾಲದಲ್ಲಿ ಬಾಳಿದ ಒಬ್ಬ ಕವಿಯು ಆತನ ಜೀವಮಾನದ ಗುಟ್ಟನ್ನು ಒಂದೆರಡೇ ಸಾಲಿನಲ್ಲಿ ಹೇಳುವಾಗ "ಈತನನ್ನು ಮೊದಲು ಶೌರ್ಯವೆಂಬಗ್ನಿಯೂ, ಆ ಮೇಲೆ ಅಶ್ವಮೇಧವೆಂಬ ಹೊಗೆಯೂ, ತರುವಾಯ ಬ್ರಾಹ್ಮಣಸಮುದಾಯವೆಂಬ ಮೋಡವೂ, ಹೀಗೆ ಒಂದೊಂದು, ಒಂದೊಂದು ಕಾಲಕ್ಕೆ ಆವರಿಸಿಕೊಂಡಿದ್ದವು." ಎಂದು ಪದ್ಯ ಕಟ್ಟಿ ಹಾಡಿದ್ದರ ಮೇಲಿಂದ ಈತನೆಷ್ಟು ಶೌರ್ಯವಾಗರನೂ, ಮುನ್ನೋಟದವನೂ, ವೈದಿಕಧರ್ಮಾಭಿಮಾನಿಯೂ, ರಾಜತಂತ್ರಗಾರನೂ, ವಿದ್ಯಾಪಕ್ಷಿಯೂ ಆಗಿದ್ದನೆಂಬುದು ಸ್ಫುಟವಾಗುತ್ತಿದೆ. ಈತನು ಮೂರು ಮಹಾರಾಷ್ಟ್ರಕ* ಗಳನ್ನಾಳುತ್ತಿದ್ದನು. ಈತನ ಆಳಿಕೆಯಲ್ಲಿ ೯೯ ನಾವಿರ ಹಳ್ಳಿಗಳು ಒಳಗೊಂಡಿದ್ದವೆಂದು ಐಹೊಳೆಯ ಶಿಲಾಶಾಸನವು ಡಂಗುರ ಹೊಯ್ಯುತ್ತಿದೆ. ಮಹಾರಾಷ್ಟ್ರಗಳೆಂದರೆ ದೊಡ್ಡ ಜನಾಂಗಗಳ ಭಾಗಗಳೆಂಬರ್ಥ. ಹ್ಯುಯೆನತ್ಸಂಗನು ಹಿಂದೂದೇಶವನ್ನೆಲ್ಲ ಸುತ್ತಿಕೊಂಡು ಕರ್ನಾಟಕ ಚಕ್ರವರ್ತಿಯಾದ ಪುಲಿಕೇಶಿಯು ಆಳುತ್ತಿದ್ದ ಕರ್ನಾಟಕ ರಾಜಧಾನಿಯಾದ ಬದಾಮಿಯನ್ನು ಬಂದು ಸೇರಿ, ಆತನ ಓಲಗವನ್ನು ಕಣ್ಣಾರೆ ನೋಡಿ ತನಗೆ ಮನಗಂಡ

---

* ಟೀಪು—ಮಹಾರಾಷ್ಟ್ರಕಗಳಂದರೆ ಮಹಾರಾಷ್ಟ್ರಗಳು. ಈಗಿನ ಮಹಾರಾಷ್ಟ್ರವಷ್ಟೇ ಅಲ್ಲದೆ ಕನ್ನಡನಾಡಿಗೂ ಆ ಕಾಲಕ್ಕೆ ಮಹಾರಾಷ್ಟ್ರವೆನ್ನುತ್ತಿದ್ದರೆಂದೂ ಚಾಲುಕ್ಯರದು ಮಹಾರಾಷ್ಟ್ರರಾಜ್ಯವಿತ್ತೆಂದೂ ಕೆಲ ಜನರು ಹಟವಿಂದ ಸಾಧಿಸುತ್ತಿದ್ದಾರೆ. ಈ ಒಗ್ಗೆ ಪುಣೆಯ ತ್ರಿ. ವೈದ್ಯ ಎಂಬವರು ತಾವು ಬರೆದ 'ಮಧ್ಯಯುಗೀನ ಭಾರತ' ಎಂಬ ಗ್ರಂಥದೊಳಗಂತೂ ಒಂಟೆಯ ಓಡಿತವನ್ನೇ ಓದಿದಿದ್ದಾರೆ; ಆದರೆ ಈಗಿನ ಕರ್ನಾಟಕವು ಸಂಪೂರ್ಣವಾಗಿ ಅಚ್ಚ ಕನ್ನಡನಾಡಾಗಿತ್ತಲ್ಲದೆ, ಈಗಿನ ಮಹಾರಾಷ್ಟ್ರದ ಬಹು ಭಾಗವು ಕೂಡ ವಿಶೇಷವಾಗಿ ಕನ್ನಡನಾಡಿಗೇನೇ ಸೇರಿತ್ತೆಂಬುದೂ, ಈಗಿನ ಮಹಾರಾಷ್ಟ್ರವು ಮರಾಠರ ಏಳಿಗೆಯಿಂದ ಕನ್ನಡಿಗರ ಕೈಬಿಟ್ಟು ಹೋದ ಕನ್ನಡನಾಡೆಂಬುದೂ ಶಿಲಾಲೆಖಗಳಿಂದಲೂ, ಬೇರೆ ಐತಿಹಾಸಿಕ ಆಧಾರಗಳಿಂದಲೂ ಈಗ ಸಿದ್ಧವಾಗಿ ಹೋದ ಮಾತಾಗಿದೆ.

ವಿಚಾರಗಳನ್ನು ತನ್ನ ಪ್ರವಾಸ ವರ್ಣನೆಯಲ್ಲಿ ಬರೆದಿಟ್ಟಿದ್ದಾನೆ; ಅದರಲ್ಲಿ ಅವನನ್ನುವದು– ಈ ಮಹಾರಾಷ್ಟ್ರದ ಅಂದರೆ, ದೊಡ್ಡ ನಾಡಿನ ಸುತ್ತಳತೆಯು ೧೫೦೦ ಮೈಲು. ರಾಜಧಾನಿಯ ಪಶ್ಚಿಮಕ್ಕೊಂದು ಹೊಳೆ. ಬೆಳಸು ಭೂಮಿ. ಉಷ್ಣ ಹವೆ. ನಾಡಿಗರ ನಿಲುವಿಕೆ ಎತ್ತರ. ನಡೆಯಲ್ಲಿ ಛಲಬಲ ಬಿಂಕುಗಳುಳ್ಳ ವೀರರಾಳುಗಳು. ಉಪಕಾರಿಗಳು. ಮೋಸವನ್ನರಿಯದವರು. ಸತ್ಯವಂತರು. ಮೊರೆಹೊಕ್ಕವರನ್ನು ಕಾಪಾಡುವ ತೆತ್ತಿಗರು. ಮಾನಧನರು. ಕದ್ದು ಮುಚ್ಚಿ ಹಗೆ ತೀರಿಸಿಕೊಳ್ಳುವವರಲ್ಲ." ಎಂದು ಮುಂತಾಗಿ ವರ್ಣಿಸಿದ್ದರಲ್ಲಿ ಕನ್ನಡಿಗರ ಕನ್ನಡತನದ ಕುರುಹುಗಳ ಬಣ್ಣವು ಇದ್ದಕ್ಕಿದ್ದಂತೆ ಎದ್ದು ಮೂಡಿರುವದೆನ್ನಬಹುದು. ತನ್ನ ರಾಜ್ಯದ ಬೇರೆ ಬೇರೆ ಭಾಗಗಳನ್ನು ಈ ಮಹಾರಾಯನ ತಮ್ಮಂದಿರು, ಮಕ್ಕಳು, ಸೊಸೆಂದಿರು ಕೂಡ ಒಂದೊಂದು ಬೇರೆ ಬೇರೆ ಪ್ರಾಂತವನ್ನು ಸ್ವತಂತ್ರವಾಗಿ ಆಳಿದ ಸಂಗತಿಯನ್ನು ಶಿಲಾಶಾಸನಗಳಲ್ಲಿ ಓದಿದರೆ, ಈತನ ರಾಜ್ಯ ವಿಸ್ತಾರದ ಕಲ್ಪನೆಯಾಗುತ್ತದೆ. ಕುಬ್ಜ ವಿಷ್ಣುವರ್ಧನನೆಂಬೊಬ್ಬ ತಮ್ಮನು ಪೂರ್ವವೆಂಗಿಯಲ್ಲಿ, ಮತ್ತೊಬ್ಬ ಜಯಸಿಂಹನೆಂಬ ತಮ್ಮನು ಲಾಟದೇಶದಲ್ಲಿ (ಗುಜರಾತ) ಹಿರಿಯ ಮಗನಾದ ಚಂದ್ರಾದಿತ್ಯನು ನೋವೆ ಹಾಗೂ ನಾವಂತವಾಡಿಯಲ್ಲಿ, ಕಿರಿಯ ಮಗನು ಕೃಷ್ಣಾ, ತುಂಗಾ ನದಿಗಳ ನಡುವಿನ ನಾಡಿನಲ್ಲಿ, ಕೆಲದಿನ ಈತನ ಸೊಸೆ ವಿಜಯಭಟ್ಟಾರಿಕೆಯೂ ನಾವಂತವಾಡಿಯ ಪ್ರಾಂತವನ್ನಾಳಿದ ಬಗ್ಗೆ ಶಾಸನಗಳಿವೆ. ಹರ್ಷವರ್ಧನನ್ನು ಮುರಿದೊತ್ತಿ ಈತನು ನರ್ಮದೆಯ ದಂಡೆಯಲ್ಲಿ ತನ್ನ ರಾಜ್ಯದ ಕಾವಲಿಗಾಗಿ ದಂಡನ್ನಿಟ್ಟಿದ್ದರ ಮೇಲಿಂದ ಈತನ ರಾಜ್ಯವ್ಯವಸ್ಥೆಯ ಹಾಗೂ ರಾಜ್ಯವಾಳುವ ಮುನ್ನೆಚ್ಚರಿಟವು ಎಷ್ಟು ಸೂಕ್ಷ್ಮವಾಗಿತ್ತೆಂಬುದನ್ನು ತಿಳಿಯಲಿಕ್ಕೆ ಸಾಕು. ಈತನ ಸೈನ್ಯದೊಳಗೆ ಅರವತ್ತು ಸಾವಿರ ಅನೆಬಲ. ಈತನ ಸೈನ್ಯಕ್ಕೆ 'ಕರ್ನಾಟಕ ಬಲ'ವೆಂಬ ನಾಡಿಗತನದ ಅರಿವುಳ್ಳ ಹೆಸರು. ಇವೆಲ್ಲವುಗಳನ್ನು ನಿರೀಕ್ಷಿಸಿದರೆ ಈತನೆಷ್ಟು ಅಭಿಮಾನಿಯೂ, ವೀರನೂ ಇದ್ದನೆಂಬುದಕ್ಕೆ ಪತಾಕೆಗಳು. ಸ್ತ್ರೀಯರೂ ಸಹ ಇವರ ವಂಶದಲ್ಲಿ ರಾಜ್ಯವಾಳಿದ್ದು, ಮೇಲಾಗಿ ಉಂಬಳಿಗಳನ್ನು ಹಾಕಿಕೊಟ್ಟಿದ್ದು, ಅವು

ಗಳಿಂದ ಸ್ತ್ರೀಯರಿಗೆ ತತ್ಕಾಲದಲ್ಲಿ ರಾಜ್ಯಾಡಳಿತೆಯಲ್ಲಿ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯವಿತ್ತೆಂಬುದು ತೋರುತ್ತದೆ. ಅಜಂತೆಯ ಕೊನೆಯ ಗುಹಾಲಯದೊಳಗೆ ಪುಲಿಕೇಶಿಯು ಇರಾಣದ ಅರಸನ ನಡೆಯಿಂದ ಬಂದ ರಾಯಭಾರಿಗೆ ಭೆಟ್ಟಿಯಾಗುತ್ತಿರುವದೊಂದು ಚಿತ್ರವಿರುವದು. ಅದರಿಂದ ಇರಾಣ ಅರಸನ ಸಂಗಡ ಆತನ ಸಂಬಂಧವಿತ್ತೆಂದೂ, ಅವನ ಕಾಲಕ್ಕೆ ಈ ದೇವಾಲಯದ ಚಿತ್ರಕಾರ್ಯವು ಪೂರೈಸಲಾಯಿತೆಂದೂ ತಿಳಿಯುತ್ತದೆ. ಈತನ ಅಳಿಕೆಯ ದರ್ಪವನ್ನು ಬಣ್ಣಿಸುವ ಬಗ್ಗೆ ಹ್ಯುಯೆನ್ತ್ಸಂಗನು "ಈತನ ಬಾಯಿಂದ ಮಾತು ಹೊರಡುವದೊಂದೇ ತಡ; ಪ್ರಜೆಗಳು ಅದನ್ನು ಮಾಡಿ ಬಿಡುವರು" ಎಂದಿರುವದನ್ನು ಕುರಿತು ಯೋಚಿಸಿದರೆ, ಪ್ರಜೆಗಳಿಗೆ ಈತನ ಅಳ್ವಿಕೆಯು ಎಷ್ಟು ಇಷ್ಟವಿತ್ತೆಂಬುದು ಸಿದ್ಧವಾಗುತ್ತದೆ.

ಪುಲಿಕೇಶಿಯ ಕೊನೆಗಾಲ:– ಈ ಮೇರೆಗೆ ಮೀರಿದ ರಾಜ್ಞಿಯ ಅಟ್ಟಹಾಸದಿಂದಲೂ, ವೈಭವದಿಂದಲೂ, ಪ್ರಜೆಗಳಿಗೆ ತಂದೆಯಾಗಿಯೂ, ಪರರಾಯರಿಗೆ ಭಯಂಕರನಾದ ಹಗೆಯಾಗಿಯೂ ಇನ್ನಿದಿರಿಲ್ಲವೆಂಬುವಂತೆ ಪುಲಿಕೇಶಿಯು ರಾಜ್ಯವಾಳುತ್ತಿರಲು, ದುರ್ದೈವದಿಂದ ಕಾಲವಿದೀಗ ತಿರುಗಿತು. ಬಲ ತಪ್ಪಿದಾಗ ನೆಲವೆದ್ದು ಬಡಿಯುತೆಂಬ ನಾಣ್ನುಡಿಯಂತೆ, ಹುಟ್ಟು ಹಗೆಯಾದ ನರಸಿಂಹವರ್ಮನೆಂಬ ಮಾಂಡಲೀಕನು ಚಾಲುಕ್ಯರನ್ನಣಗಿಸಬೇಕೆಂಬ ಒಳ ಹವಣಿಕೆಯಿಂದ ಮೆಲ್ಲನೆ ಗರಿಗಟ್ಟಿಕೊಂಡು, ಚೇರ ಚೋಳ ಪಾಂಡ್ಯರ ಬೆಂಬಲದಿಂದ ಮೇರೆದಪ್ಪಿದದಂಡಿಸೊಂದಿಗೆ ಕರ್ನಾಟಕನಾಮ್ರಾಜ್ಯದೊಳಗೆ ಹೊಕ್ಕು ಪುಲಿಕೇಶಿಯೊಡನೆ ಕಾಳಗಗೊಟ್ಟು ಹೋರಾಡಿದನು. ವೀರರ ಯುದ್ಧವೆಂದರೆ ಕೇಳುವದೇನು? ಅದೊಂದು ದೇವತೆಗಳ ಕಣ್ಣೊಬಗು. ಇಬ್ಬರೂ ಪ್ರೌಢಿಯುಳಿಸಿಕೊಳ್ಳದೆ ತಮ್ಮ ಶಕ್ತಿ ಮೀರಿ ಸಾಹಸಬಟ್ಟು ಕಾದಿದರು. ಆದರೆ ಜಯಲಕ್ಷ್ಮಿಯು ಯಾರ ಮನೆ ಆಳು? ಈ ಡಿಲ್ಲದ ಹೋರಾಟದೊಳಗೆ ಪುಲಿಕೇಶಿಯು ಸೋತು ಪಲ್ಲವರಾಜನಾದ ನರಸಿಂಹವರ್ಮನಿಗೆ ಜಯಲಕ್ಷ್ಮಿಯು ಮಾಲೆ ಹಾಕಿದಳು. ಪಲ್ಲವರು ಚಾಲುಕ್ಯರ ಅಭಿಮಾನಪುರುಷನಾದ ಪುಲಿಕೇಶಿವಲ್ಲಭನನ್ನು ಸೋಲಿಸಿ

ತಮ್ಮ ಮುಯ್ಯ ತೀರಿಸಿಕೊಂಡರು. ಈ ಸಂಗತಿಯು ಕ್ರಿ. ಶ. ೬೪೨ ರಲ್ಲಿ ನಡೆಯಿತು. ಈ ಕಾಳಗದೊಳಗೇ ಪುಲಿಕೇಶಿಯು ದೇಹವನ್ನೊಡ್ಡಿ ವೀರಮರಣಕ್ಕೀಡಾದನು. ನರಸಿಂಹವರ್ಮನು ಹಿಂದಿನ ಸೇಡು ತೀರಿಸಿಕೊಳ್ಳುವ ಕಿಚ್ಚಿನಿಂದ ಬದಾಮಿಯನ್ನು ಸುಟ್ಟು ಸೂರೆ ಮಾಡಿದನು. ಈ ರೀತಿಯಾಗಿ, ಸತ್ಯಾಶ್ರಯ ಪುಲಿಕೇಶಿಯ ಕೊನೆಗಾಲವು ಒಂದು ಬಗೆಯಿಂದದುಃಖಪರ್ಯವಸಾಯಿಯಾಯಿತು. ಅತನು ಜೀವಂತವಿದ್ದರೆ ಬಹುಶಃ ಅಸಹ್ಯವಾಗಬಹುದಾಗಿತ್ತು; ಆದರೆ ಕಾಲಕ್ಕೂ ಕರ್ಮಕ್ಕೂ ಗಂಟು ಬಿದ್ದು ಅವೆರಡೂ ತಮ್ಮ ತಮ್ಮ ಕಾರ್ಯಗಳನ್ನು ಜರಗಿಸುವಾಗಲೂ, ಪುಲಿಕೇಶಿಮಹಾರಾಯನು ಕಾಲಕರ್ಮಗಳಿಗೆ ಭಾರವಾಗದೆ, ಅಥವಾ ಅವುಗಳನ್ನು ಹೊಗಳದೆ ಹಳಿಯದೆ ತನ್ನಷ್ಟಕ್ಕೆ ತಾನು ರಣರಂಗದೊಳಗೆ ಧುಮುಕಿ ತನ್ನ ಕರ್ತವ್ಯವನ್ನು ಮಾಡಿಯೇ ಬಿಟ್ಟನು. ವೀರರಿಗೆ ನಾವೆಂದರೆ ಅದೊಂದು ಸೋಗಿನ ಬದಲಾವಣೆ! ಸತ್ಯಾಶ್ರಯ ಶ್ರೀಪುಲಿಕೇಶಿವಲ್ಲಭ ಮಹಾರಾಯನ ಅಳ್ವಿಕೆಯಲ್ಲಿ ತಾಯ ತೊಡೆಯ ಮೇಲೆ ಮಕ್ಕಳು ಲೋಲ್ಯಾಡುವಂತೆ ಪ್ರಜೆಗಳು ಯಾವುದೊಂದು ಚಿಂತೆಯಿಲ್ಲದೆ ಇರುತ್ತಿರಲು ಒಮ್ಮಿಂದೊಮ್ಮೆ ಎಲ್ಲಿಂದಲೋ ಬಂದು ಹದ್ದು ಹೊಡೆದಂತೆ, ರಾಜ್ಯದವಸ್ಥೆಯು ಕೆಟ್ಟು ಮಡಿಕೆ ತಪ್ಪಿ ಸಡಿಲ ಹೋದುದು ನಾಜವು. ಮುಂದೆ ಪುಲಿಕೇಶಿಯ ವೀರಪುತ್ರನಾದ ೧ನೇ ವಿಕ್ರಮಾದಿತ್ಯನು ತನ್ನ ತಂದೆಗಾದ ಅವಮಾನದ ಪರಿಮಾರ್ಜನ ಗೈಯದೆ ಸುಮ್ಮನಿರುವದು ತನ್ನ ಗಂಡಸುತನಕ್ಕೂ ತಮ್ಮ ವೀರ ಕುಲಕ್ಕೂ ತಕ್ಕುದಲ್ಲವೆಂದು ಭಾವಿಸಿಕೊಂಡು ಸೈನ್ಯವನ್ನಳವಡಿಸಿ ಸಂಧಿ ನಾಧಿಸಿ, ತಾನು ಸ್ವತಃ ಚಿತ್ರಕಂಠವೆಂಬ ತನ್ನ ಅಕ್ಕರತೆಯ ಕುದುರೆಯನ್ನೇರಿ ತಂದೆಯ ಹಗೆಗಳಾದ ಪಲ್ಲವರ ಮೇಲೆಲೇರಿ ಹೋದನು. ಈ ವೀರನಿಗೆ ತಂದೆಯ ನಾವಿಗಿಂತ ತಮ್ಮ ಸೋಲು ಶೂಲಪ್ರಾಯವಾಗಿ ಎದೆಯಲ್ಲಿ ಚುಚ್ಚಿಕವಾಗಿತ್ತು. ಅದೇ ಚುಚ್ಚಿಕವನ್ನೇ ಪಲ್ಲವರಿಗೆ ತಿರಿಗೊಪ್ಪಿಸಿ ತಂದೆಯ ಕಾಲಕ್ಕೆ ಕೊಂಕಾದ ತಮ್ಮ ಕುಲಾಭಿಮಾನವನ್ನು ತನ್ನ ಶೌರ್ಯದಿಂದ ಬೆಲೆಗೊಂಡನು; ಪಲ್ಲವರ ಬಿಂಕದ ಸೊಲ್ಲಡಗಿತು. ನರಸಿಂಹವರ್ಮನು ಹಿಂದಕ್ಕೆ ಬಾದಾಮಿಯನ್ನು ಸುಲಿ

ದಂತೆ ಅದೇ ಖಂಗಿಟ್ಟುಕೊಂಡು ವಿಕ್ರಮಾದಿತ್ಯನು ಅದರಂತೆ ನಡೆದು ಕೊಳ್ಳದೆ, ಕಾಂಚೀಪಟ್ಟಣವನ್ನು ಸೇರಿ, ಅಲ್ಲಿಯ ಪ್ರಜೆಗಳಿಗೆ ಎಳ್ಳಷ್ಟೂ ನೋಯಿಸದೆ, ಅವರಿಗೆ ಸುಖವಾಗಿ ಬಾಳಿಕೊಂಡಿರಲು ಅಭಯವಚನ ವನ್ನಿತ್ತು, ತಾನು ರಾಜಸಿಂಹೇಶ್ವರ ದೇವಾಲಯವನ್ನು ಹೊಕ್ಕು ದೇವ ದರ್ಶನ ಮಾಡಿಕೊಂಡು ದೇವಸ್ಥಾನಕ್ಕೆ ಹಣವನ್ನು ಸಲ್ಲಿಸಿ, ಅಲ್ಲಿನವ ರಿಂದ ಹೌದೆನಿಸಿಕೊಂಡನು. ಮರಳಿ ಬರುವಾಗ ದಾರಿಯಲ್ಲಿ ಗೆದ್ದವರ ಬಾಲ ಹಿಡಿಯುವ ಚೇರ ಚೋಳ ಪಾಂಡ್ಯ ಮೊದಲಾದ ನಾಮಂತ ರಾಜರಿಗೂ ಚೆನ್ನಾಗಿಯೇ ಬುದ್ಧಿಗಲಿಸಿ, ರಾಜಧಾನಿಗೆ ಮರಳಿ ಬಂದ ಕೆಲದಿನಗಳಲ್ಲಿಯೇ ಮಡಿದನು. ಈತನ ಮಗ ವಿನಯಾದಿತ್ಯನಾದರೂ ಕಡಿಮೆ ಶೂರನಿಲ್ಲದ್ದರಿಂದ ಚಾಲುಕ್ಯರ ಕುಲಕ್ಕೆ ಭಂಗ ತರದಂತೆ ಕಾಯ್ದುಕೊಂಡು ಹೋದನು. ಈತನು ಅಷ್ಟೇ ಅಲ್ಲದೆ, ತಂದೆ ಗಿಂತ ಒಂದು ಕೈ ಮೇಲು. ಬಹು ದರ್ಪಿನವನಾದ ಈತನು ಸಿಂಹಲ ದೇಶದ ರಾಜನನ್ನು ಮೆಲ್ಲಗೆ ತನ್ನ ಬಲ್ಲಾಳ್ತನದಿಂದ ಮೆಟ್ಟಿ ಪಾಕಿ ಉತ್ತರಕ್ಕೆ ನಾಗಿ ಹೋಗಿ ಅಲ್ಲಿಯೂ ಜಯಪತಾಕೆಯನ್ನು ಹಾರಾಡಿ ಸಿದನು. ಇವನ ತರುವಾಯ ಚಾಲುಕ್ಯರಲ್ಲಾವ ಪವಾಡಪುರುಷರು ತಲೆದೋರದ್ದರಿಂದ ಇವರ ರಾಜ್ಯವು ರಾಷ್ಟ್ರಕೂಟರ ಕೈಸೇರಿತು. ತಾರಕಾಪುಂಜದಂತೆ ಒಬ್ಬರಹಿಂದೊಬ್ಬರು ವೀರಮಣಿಗಳು ಚಾಲುಕ್ಯ ವಂಶದೊಳಗೆ ಹುಟ್ಟಿ ಎರಡು ಶತಮಾನಗಳ ವರೆಗೆ ಅಖಂಡವಾಗಿ ಚಾಲುಕ್ಯವಂಶ ದೀಪವನ್ನು ಉರಿಯುತ್ತ ಇಟ್ಟಿರುವಂಥ ಸಂಗತಿಯು ಇತಿಹಾಸದೊಳಗೆ ಬಹು ಕಡಿಮೆ. ಚಾಲುಕ್ಯರ ಆಳಿಕೆಯೆಂದರೆ ಕನ್ನಡ ನಾಡಿನ ಐಸಿರಿಗಾಲವು. ನಾಡಿಗರ ಬುದ್ಧಿ, ಮನಸ್ಸುಗಳು ವೈದಿಕ ಧರ್ಮಾಭಿಮಾನದ ನವಚೈತನ್ಯದಿಂದ ತೇಜಃಪುಂಜವೆತ್ತು ಮೈಮೆಯಿಂದ ಮೆರೆಯುವ ಮೈಸಿರಿಗಾಲವು.

ಕನ್ನಡಿಗರ ಚೆನ್ನಗಾಲವು:– ಹಿಂದೂದೇಶದ ಚರಿತ್ರೆಯಲ್ಲಿ ಜನಾಂಗ ಜೀವನದ ಹೆಗ್ಗುರುತುಗಳು ಬಹು ಅಸ್ಪಷ್ಟವಾಗಿ ಕಾಣಿಸು ತ್ತಿದ್ದುದರಿಂದ ನಮಗೀಗ ಆಯಾಕಾಲದ ರಾಜವಂಶದವರ ಕ್ರಿಯಾಕ ಲಾಪಗಳನ್ನಳೆದು ತಿಳಿದು ನಮ್ಮ ಚರಿತ್ರೆಯನ್ನು ಹೊಂದಿಸಿಕೊಳ್ಳುವ

ಹೊತ್ತು ಬಂದಿದೆ. ತಿಳಿದು ನೋಡಿದರೆ, ಜನಾಂಗವೇ ಜನಾಂಗದ ಅರಸು; ಅದುದರಿಂದ ಜನಾಂಗದ ಅರಸನಿಗೆ ಎಂದಾದರೂ ಜನಾಂಗಕ್ಕಿಂತ ಕಡಿಮೆಯೆಂದು ಎಣಿಸತಕ್ಕದ್ದು; ಅದರೆ ಮಧ್ಯಯುಗದೊಳಗೆ ದುಷ್ಟರಾಜರ ದರ್ಪದಿಂದ ಜನರಲ್ಲಿಯ ಜಿಗಟೂ, ಸ್ವಾತಂತ್ರ್ಯದ ಸವಿಯೂ ಅವೇ ಮುಂತಾದ ಜನಾಂಗ ಪೋಷಕವಾದ ನಾಗರಿಕರ ಸದ್ಗುಣಗಳೆಲ್ಲ ಹಳ್ಳಕ್ಕೆ ಬಿದ್ದು ಹರಿದು ಹೋದ್ದರಿಂದ ಅವು ಕೊನೆಯವರೆಗೆ ಏಳದೆ, ಜನಾಂಗದ ಜೀವನವೇ ಹಾಳಾಯಿತು. ಅಂದಮೇಲೆ ಜನಾಂಗ ಜೀವನವನ್ನು ಲೆಕ್ಕಿಸುವರಾರು? ಅದರೆ ಕನ್ನಡಿಗರ ಸುದೈವದಿಂದ ಕನ್ನಡ ನಾಡಿಗೊಂದು ಚೆನ್ನಗಾಲವು ಬದಗಿತು. ಕನ್ನಡ ದೇಶದ ಚರಿತ್ರೆಯನ್ನೇ ಕೆಲಕಾಲ ತಮ್ಮ ಕೈಯೊಳಗೆ ತೆಗೆದುಕೊಂಡು ಅದನ್ನು ಉಜ್ಜೀವಿಸುವ ಭಾರವನ್ನು ಚಾಲುಕ್ಯರು ಹೊತ್ತರು. ನಾಡಿಗ ತನದ ನಡೆನುಡಿಗಳಿಗೆ ತಕ್ಕಂತೆ ಜನಪದವನ್ನು ಮಾರ್ಪಡಿಸಲು ಪ್ರಯತ್ನ ಪಟ್ಟವರಲ್ಲಿ ಚಾಲುಕ್ಯರೇ ಮೊದಲನೇಯವರು. ಚಾಲುಕ್ಯರು ಉದಯವಾಗುವದಕ್ಕಿಂತ ಮೊದಲು ಕನ್ನಡನಾಡು ಕನ್ನಡನುಡಿ ಇದ್ದೇ ಇದ್ದರೂ ನಾಡನ್ನಾಳುವ ಅರಸರು ನಾಡಿಗೂ ನುಡಿಗೂ ಅಷ್ಟೊಂದು ಮಹತ್ವವನ್ನು ಕೊಟ್ಟಿರಲಿಲ್ಲ. ಕನ್ನಡ ನಾಡಿನಲ್ಲಿ ಇದಕ್ಕೆ ಪೂರ್ವದಲ್ಲಿ ಕದಂಬ ಗಂಗ ಮುಂತಾದ ಅರಸುಗಳು ಆಳಿದರು; ಅವರಿಂದಲೇ ಕನ್ನಡದ ನಾಡಿಗತನದ ಕಲ್ಪನೆಗಳಿಗೆ ಪ್ರಾರಂಭ. ಅವರಲ್ಲಿ ಕೆಲವು ಅರಸುಗಳೇ ಸ್ವಂತ ಕವಿಗಳಿದ್ದುದರಿಂದ ಜನಜೀವನದ ನಾಡಿಯನ್ನವರು ಕಂಡುಹಿಡಿದುದಕ್ಕೊಂದು ಅಧಾರ. ಅನೇಕ ಕವಿಗಳನ್ನು ತಮ್ಮ ಆಶ್ರಯದಲ್ಲಿಟ್ಟುಕೊಂಡು ಪ್ರೋತ್ಸಾಹಿಸಿದ ಸಂಗತಿಯಿಂದ ಅಗಿನಿಂದಲೂ ನಾಡಿಗತನದ ಅರಿವು ಅವರಲ್ಲಿ ಅಷ್ಟಿಷ್ಟು ಇರುವದರ ಮುಂಬೆಳಕು. ಕದಂಬ ಹಾಗೂ ಗಂಗರ ಕಾಲಕ್ಕೆ ಜೈನಮತವು ಕನ್ನಡನಾಡಿನಲ್ಲಿ ಬೇರುಬಿಟ್ಟುಕೊಂಡು ಕನ್ನಡವನ್ನೇ ತನ್ನ ತಾಯ್ನಾಡಾಗಿ ಮಾಡಿ, ಕನ್ನಡ ನಾಡಿನವರೊಡನೆ ಬೆರತು ಹೋಗಿದ್ದಿತು. ಬಂದು ಬಗೆಯಿಂದ ನೋಡಿದರೆ, ಕದಂಬ ಹಾಗೂ ಗಂಗರ ಕಾಲದಲ್ಲಿ ಕರ್ನಾಟಕವಿನ್ನೂ ಎಳಕಾಗಿದ್ದಿತು. ಚಾಲುಕ್ಯರು ಕರ್ನಾಟಕದೊಳಗೆ ಮೂಡಿ ಬೆಳಗುವ ಸಮ

ಯಕ್ಕೆ ಅದು ಮೈತುಂಬಿಕೊಂಡು ತನ್ನೊಳಗಿನ ಶಾರೀರಿಕ ಶಕ್ತಿ, ಬುದ್ಧಿಶಕ್ತಿ, ಹೃದಯಶಕ್ತಿಗಳನ್ನು ಪ್ರಕಟಗೊಳಿಸಲು ತನ್ನ ಸ್ವತ್ವದ ಒಂದೊಂದೇ ಗುಣಗಳನ್ನು ಹೂವು ಅರಳುವಂತೆ ಅರಳಿಸಲುದ್ಯುಕ್ತವಾದಂತೆ ಲಕ್ಷಣಗಳು ಗೋಚರವಾಗುತ್ತವೆ; ಹೀಗಾಗಿ ಕರ್ನಾಟಕ ನಾಡಿಗತನದಲ್ಲಿ ಹರೆಯದ ಗುರುತುಗಳು ಈಗ ಕಂಡುಬರುತ್ತವೆ. ಈ ಅಂಶಗಳನ್ನು ಮನಗಾಣಿಸಲಿಕ್ಕೆ ಆಕಾಲದ ಕನ್ನಡಿಗರ ಶಾರೀರಿಕಬಲ, ಬುದ್ಧಿಬಲ, ಹೃದಯಬಲಗಳ ಜ್ಞಾನವು ನಮಗಿದ್ದೇ ತೀರಬೇಕಷ್ಟೇ? ಕನ್ನಡಿಗರ ಬಲವನ್ನಳೆಯಲಿಕ್ಕೆ ನಮಗೆ ಉತ್ತರದ ನಾರ್ವಭೌಮನಾದ ಹರ್ಷನನ್ನು ಕನ್ನಡಿಗರು ಸೋಲಿಸಿ ಸದೆಬಡಿದುದೊಂದೇ ಒಂದು ಬಹುಕಾಲದಿಂದಲೂ ಪಂಬಿನಂತುರಿಯುವ ಮಾತು ನಾಕಷ್ಟಿದೆ. ಅವರ ಬುದ್ಧಿಶಕ್ತಿಯನ್ನು ತಿಳಿಯಲಿಕ್ಕೆ ಆಯಾ ಕಾಲದಲ್ಲಿ ಹುಟ್ಟಿ ಬೆಳೆದ ಕವಿಗಳು ತಮ್ಮ ವಾಣಿಯ ಬಲದಿಂದ ಕನ್ನಡಿಗರ ಜನರ ಜೀವನದ ಪರಿಯನ್ನು ತಮ್ಮ ಅಕ್ಷರಗಳಲ್ಲಿ ಚಿತ್ರಿಸಿದ್ದೊಂದು ನಾಕು. ಜನಜೀವನದ ನೆರಳು ಈ ಕಾಲಕ್ಕೆ ರಾಜರಲ್ಲಿ ಮೂಡಿ ಮೂರ್ತಿಗೊಂಡಿತ್ತೆನ್ನಲಿಕ್ಕೆ ಚಾಲುಕ್ಯ ರಾಜರುಗಳೆಲ್ಲರೂ ಒಂದರಹಿಂದೊಬ್ಬರು ಕಡುಗಲಿಯು ಮಾನಾಳುಗಳಾಗಿ ತಮ್ಮ ಬುದ್ಧಿಶಕ್ತಿಯಿಂದ ಕನ್ನಡದ ಹೆಸರನ್ನು ಅಮರಗೊಳಿಸಿ ಹಿಂದೂದೇಶದ ಇತಿಹಾಸದೊಳಗೆ ತಮ್ಮ ಅಂದರೇನೇ ಕನ್ನಡಿಗರ ಚರಿತ್ರೆಯನ್ನು ಬರೆಯಹಚ್ಚಿದೊಂದು ನಾಕು. ಇನ್ನು ಅವರ ಹೃದಯಬಲವನ್ನರಿಯಲಿಕ್ಕೆ ಅವರೆಲ್ಲರೂ ತಮ್ಮ ಪ್ರಜೆಗಳನ್ನು ಮಕ್ಕಳಂತೆ ನಡೆಯಿಸಿಕೊಂಡು ಅವರಿಗೆ ಯೋಗ್ಯಜೀವನವನ್ನು ಕಲ್ಪಿಸಿಕೊಟ್ಟು ವಿತರಣೆಯಿಂದಲೂ ದಯೆಯಿಂದಲೂ ಅವರನ್ನಾಳಿ ತಮ್ಮ ಆಳಿಕೆಯಲ್ಲಿಯೇ ಕನ್ನಡಿಗರ ಶಿಲ್ಪಕಲೆಯದೊಂದು ಹೊಸ ಮಾದರಿಯ ಮೋಡಿಯನ್ನು ರೂಪುಗೊಳಿಸಿ, ಬಳಿಕೆಯಲ್ಲಿ ತಂದಿರುವದೊಂದು ಮಾತು ನಾಕು. ಇವೆಲ್ಲ 'ಮಾತು ನಾಕು'ಗಳಲ್ಲಿ ಮಿಡಿಗನ್ನಡಿಗರ ಮಿಡಿಯೋಟದ ನಲ್ಮೆಯ ನೋಟವು ಬಲು ಥಳಾಗಿ ಕಾಣುತ್ತಿದೆಯಲ್ಲವೇ? ಕನ್ನಡ ಸಂಸ್ಕೃತಿಯು ಮುಂದಾಡಿಗಳಾದೆ ಚಾಲುಕ್ಯರು ವೈಷ್ಣವರಾಗಿದ್ದುದು ಮುಂದೆ ಕನ್ನಡನಾಡಿನಲ್ಲಿ ವೈಷ್ಣವಮತವು ಮುಂಬರುವ ಶುಭೋದ

ಯವು. ಮುಂದೆಬರುವ ಕನ್ನಡಿಗರ ವೈಭವಗಾಲಕ್ಕೆ ಇದೀಗ ಮುಂಜಾವು. ಈ ಮುಂಜಾವಿನ ತಂಗಾಳಿಯು ಸೊಂಪನ್ನೂ ಸೊಬಗನ್ನೂ ಕೆಲಮಟ್ಟಿಗೆ ಅನುಭವಿಸಿದ್ದಾಯಿತು. ಇನ್ನು ಇಲ್ಲಿಯೇ ಕಾಲೂರಿ ನಿಲ್ಲದೆ ಮುಂದೆ ನಾಗೋಣ.

ದಾಕ್ಷಿಣಾತ್ಯರ ವಿಳಿಗೆ:– ಒಟ್ಟಿನ ಮೇಲಿಂದ ನಿರೀಕ್ಷಿಸಲಾಗಿ ಈ ಕಾಲವು ದಾಕ್ಷಿಣಾತ್ಯರಿಗೆ ಶುಭಕಾಲವು. ಕನ್ನಡನಾಡಿನಲ್ಲಿ ಹೇಗೋ ಹಾಗೆ ದಕ್ಷಿಣದೊಳಗಿನ ತಮಿಳುನಾಡಿನಲ್ಲಿಯೂ ಪಲ್ಲವ ಚೋಳರಂಥ ವೀರಾಧಿವೀರರು ಆಳಿದ್ದರಿಂದ ಈ ಕಾಲದೊಳಗೆ ದಕ್ಷಿಣ ದೇಶವು ಎಲ್ಲ ಬಗೆ ಬೆಡಗುಗಳಿಂದ ಬೆಳಗುತ್ತಿದ್ದಿತು, ರಾಜ್ಯದಾಡಳಿತೆಯಲ್ಲಿ ನೋಡಿರಿ; ಧರ್ಮದೊಳಗೆ ಹೊಕ್ಕು ನಿರೀಕ್ಷಿಸಿರಿ! ಶಿಲ್ಪಕಲೆಯಂಥ ಸೂಕ್ಷ್ಮವಾದ ಕಲೆಯಲ್ಲಿ ಕಣ್ಣಿಟ್ಟು ನೋಡಿರಿ! ಸತ್ವವನ್ನು ಕಾಯ್ದುಕೊಂಡು ಅದನ್ನೇ ಬೆಳೆಯಿಸಬೇಕೆಂಬುದೊಂದು ಕುಗ್ಗದ ಮುಗ್ಗದ ಬಲವಾದ ಮಿಡುಕು ಒಡೆದು ಕಾಣುತ್ತಿದೆ. ಈ ಮಿಡುಕು ಪಲ್ಲವರ ಕಾಲದಲ್ಲಿ ಕಾರ್ಯರೂಪದಿಂದ ಹೊರನುಗ್ಗಿದ್ದರಿಂದ ನರಸಿಂಹವರ್ಮನು ಅಪ್ಪಿಕೆಯಲ್ಲಿ ಪಲ್ಲವರ ಕ್ಷಾತ್ರತೇಜವು ಮಿಂಚಿತು. ಕಂಚಿಯಲ್ಲಿ ಈ ಹೊತ್ತು ಕಂಚು ಮಿಂಚಾಗಿ ಹೊಳೆಯುವ ಅದ್ಭುತವಾದ ಗುಡಿಗೋಪುರಗಳೆಲ್ಲವೂ ಇದೇ ಕಾಲದಲ್ಲಿ ಮಿಂಚಿದವು. ದಕ್ಷಿಣದೇಶವೆಂಬ ದ್ರಾವಿಡಸಂಸ್ಕೃತಿಯು ಗುಡಿಯೊಳಗೆ ವೈದಿಕಮತಾವಲಂಬಿಯಾದ ಶೈವ, ವೈಷ್ಣವ ಪಂಥಗಳ ಚಿರಪ್ರತಿಷ್ಠಾಪನೆಯಾಯಿತು. ಸ್ವಾಭಾವಿಕವಾಗಿಯೇ ಭಾವನೆಯ ಭಕುತರಾದ ತಮಿಳರಲ್ಲಿ ಭಕ್ತಿರಸ ದಿಂದುಕ್ಕುವ ಹಮ್ಮೀರರು ಹುಟ್ಟಿದ್ದರಿಂದ ಎಲ್ಲೆಲ್ಲಿಯೂ ಭಕ್ತಿಯ ಸುಗ್ಗಿ ಕಾಲಕ್ಕೆ ನೊರೆ ಬಂದು ಭಕ್ತಿರಸದ ಸೋನೆಯಿಂದ ದಕ್ಷಿಣನಾಡೆಲ್ಲ ತುಂಬಿ ಹರಿಯಿತು. ಇದರ ಪ್ರವಾಹ ಬಲಕ್ಕೆ ಸಿಕ್ಕು ಅಲ್ಲಲ್ಲಿ ಉಳಿದುಕೊಂಡಿರುವ ಬೌದ್ಧಮತವೆಲ್ಲವು ಹೇಳಹೆಸರಿಲ್ಲದಂತಾಯಿತು. ಕನ್ನಡಿಗರಂತೆ ಸೋದರಜನಾಂಗದವರಾದ ತಮಿಳ ತೆಲಗರಲ್ಲಿಯೂ ಈ ಸಂಧರ್ಭಕ್ಕೆ ನವಚೈತನ್ಯದ ಗಾಳಿಯು ಸುಳಿದು ಅವರನ್ನೆಲ್ಲ ರಾಷ್ಟ್ರೀಯ ಕಾರ್ಯಕ್ಕೆ ಕಂಕಣಬದ್ಧರಾಗಲು ಪ್ರೇರಿಸುವ ಹೃದಯಂಗಮವಾದ

ಚರಿತ್ರೆಯು ಇನ್ನೂ ಮುಂದಿದೆ. ಬಲುಮಾತಿನಿಂದೇನು? ದಕ್ಷಿಣ ನಾಡಿಗೇ ಈ ಕಾಲವೆಂದರೆ ಎಚ್ಚರಗಾಲವು. ದಾಕ್ಷಿಣಾತ್ಯರು ಹಿಂದೂ ದೇಶದ ರಂಗಭೂಮಿಯ ಮೇಲೆ ತಮ್ಮ ಪಾಲಿಗೆ ಬಂದ ಸೋಗನ್ನು ಮಿಕ್ಕವರು ಬೆರಳು ಕಚ್ಚಿಕೊಳ್ಳುವಂತೆ ಅಡಿ ತೋರಿಸಿದ್ದು ಬಹು ಅಭಿಮಾನದ ಸಂಗತಿಯು.

ಇಸ್ಲಾಮಧರ್ಮ ಸ್ಥಾಪಕರಾದ ಮಹಮ್ಮದ ಪೈಗಂಬರ:–

ಇದೇ ಶತಮಾನದೊಳಗೆ ಅರಬಸ್ಥಾನದ ಮರುಭೂಮಿಯ ಗುಡ್ಡಗಾಡುನಾಡಿನಲ್ಲಿ ಮುಸಲ್ಮಾನಧರ್ಮಸ್ಥಾಪಕನಾದ ಮಹಮ್ಮದ ಪೈಗಂಬರ ಎಂಬ ದೇವದೂತನೊಬ್ಬನು ಭೂತಳದಲ್ಲಿ ಹುಟ್ಟಿಬಂದನು. ಕಾಡು ಮತದ ದವಡೆಗೆ ಶಿಕ್ಕು ಬಿದ್ದಾಡುತ್ತಿರುವ ಅರಬರ ಮನಸನ್ನು ಈತನು ತನ್ನೆಡೆಗೆ ಎಳೆದುಕೊಂಡು ಅವರಲ್ಲಿ ಧರ್ಮದಿಂದೊಡಗೂಡಿದ ಕ್ಷಾತ್ರತೇಜವನ್ನುಂಟು ಮಾಡಿದನು. ಇ. ಸ. ೫೭೦ ರಲ್ಲಿ ಹುಟ್ಟಿದ ಈತನಿಗೆ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯು ಮಡಿದು ಹೋದ್ದರಿಂದ ಪರದೇಶಿತನ ಬಂದಿತು. ಚಿಕ್ಕಪ್ಪನಾದ ಅಬುತಾಲೀಬ ಎಂಬವನು ಈತನನ್ನು ರಕ್ಷಿಸಿದನು. ಚಿಕ್ಕಂದಿನಲ್ಲಿಯೇ ಈತನು ಕಕ್ಕನೊಡನೆ ವ್ಯಾಪಾರಕ್ಕಾಗಿ ಸಿರಿಯಾ ಮುಂತಾದ ಪ್ರಾಂತಗಳಿಗೆ ಆಗಾಗ್ಗೆ ಹಿಂಬಾಲಿಸುತ್ತಿದ್ದನು. ೧೪ನೇ ವರ್ಷದ ಕುಮಾರನಿರುವಾಗಲೇ ಈತನು ಕಕ್ಕನೊಡನೆ ಬಂದು ಕಾಳಗಕ್ಕೆ ಹೋಗಿ, ಆಗನಿಂದಲೇ ಬಂದು ವಿಧದಿಂದ ಕಾಳಗದ ಶಿಕ್ಷಣವನ್ನು ಪಡೆದನೆನ್ನಲಿಕ್ಕೇನೂ ಅಡ್ಡಿಯಿಲ್ಲ. ಬಂದೊಂದು ಕ್ಷಣಕ್ಕೆ ಗೋಸುಂಬೆಯಂತೆ ಅವನ ಮನೋವೃತ್ತಿಯಲ್ಲಿ ವಿಲಕ್ಷಣವಾದ ಪಲ್ಲಟವಾಗಿ ಈಕ್ಷಣಕ್ಕೆ ವೀರವೃತ್ತಿಯುಳ್ಳಿದ್ದವನು. ಇನ್ನೊಂದು ಕ್ಷಣದಲ್ಲಿ ಅಗಾಧವಾದ ತತ್ವಜ್ಞಾನದ ಚಿಂತನೆಯಲ್ಲಿ ಮಗ್ನನಾಗಿರುತ್ತಿದ್ದನು. ಕಾಡುಮರುಭೂಮಿಯ ಮಗುವಾದ ಈತನಿಗೆ ಹುಟ್ಟಾ ದೇವರ ಭಕ್ತಿಯ ಕಡೆಗೆ ಮನಸೆಳೆಯುತ್ತಿದ್ದಿತು; [ಹೀಗಾಗಿ ಎಷ್ಟೋ ವೇಳೆ ಪರವಶನಾಗಿ ಭಗವಂತನ ಚಿಂತನೆಗೆ ಸೆರೆಯಾಳಾಗಿ ಹುಚ್ಚನಂತೆ ಬಿದ್ದುಕೊಂಡಿರುತ್ತಿದ್ದನು. ಈ ತೆರವಾಗಿ ಅವನಲ್ಲಿ ಒಳಗಿಂದೊಳಗೆ ಅಧ್ಯಾತ್ಮದ ಕಿಡಿಯು ಪುಟಿಗೊಳ್ಳುತ್ತಿದ್ದುದಕ್ಕೆ, ಆಗಾಗ್ಗೆ ಕಕ್ಕನೊಡನೆ ಸಿರಿಯಾ

ಪ್ರಾಂತದ ಜಾತ್ರೆಗೆ ಹೋದಾಗ ಅದೇ ತಾನೇ ತನ್ನ ಧರ್ಮಕಾರ್ಯವನ್ನು ಮುಗಿಸಿ, ಧರ್ಮಕ್ಕಾಗಿ ತನ್ನ ಬಂಧುಗಳ ಸಿಟ್ಟಿಗೆ ತಾಳ್ಮೆಯಿಂದ ಮೈಯೊಡ್ಡಿದ ಯೇಸುಕ್ರಿಸ್ತನ ಬಗ್ಗೆ ಕೆಲ ಸಂಗತಿಗಳು ತಿಳಿದವು. ಈಗ ಮಾತನಾಡಲಿಕ್ಕೆ ಅವನಿಗೆ ಬಾಯಿ ಬರದಿದ್ದರೂ, ಒಳಗೆ ಉರಿಯುತ್ತಿರುವ ಕಿಡಿಗೆ ಇದೊಂದು ಹುಲ್ಲು ಹಾಕಿದಂತಾಯಿತು. ಮನಸ್ಸಿನ ಅಂತಸ್ಥಿತಿಯಲ್ಲಿ ಈ ಮೇರೆಗೆ ಪಲ್ಲಟವು ನಡೆದಿರಲು, ಮಹಮ್ಮದನು ೨೮ನೇ ವಯಸ್ಸಿಗೆ ತನಗಿಂತ ೧೫ ವರ್ಷಕ್ಕೆ ಹಿರಿಯಳಾದ ಖದಿಜಾ ಎಂಬವಳನ್ನು ಮದುವೆಯಾದನು ನಮ್ಮ ಕಣ್ಣಿಗೆ ಪ್ರಪಂಚದೊಳಗೆ ಮುಳುಗಿಕೊಂಡಿರುವಂತೆ, ಈತನು ಕಂಡರೂ, ಮಹಮ್ಮದನ ಮನಸ್ಸಿನಲ್ಲಿ ಏನೋ ಘೋರವಾದ ಕಾಳಗವೇ ನಡೆದಿದ್ದಿತು. ಮನಸಿನೊಳಗೆ ನಡೆದ ಈ ಕಾಳಗದ ಕೊನೆ ಮಾಡಬೇಕೆಂಬ ನಿರ್ಧಾರದಿಂದಲೇ ಮಹಮ್ಮದನು ತನ್ನ ೪೦ನೇ ವರ್ಷಕ್ಕೆ ವೈರಾಗ್ಯದಿಂದ ಪ್ರಪಂಚವನ್ನು ತೊರೆದು ಹಿರಾ ಎಂಬ ಗುಡ್ಡದ ಗವಿಯೊಳಗೆ ಹೋಗಿ ಕುಳಿತಿರುತ್ತಿದ್ದನು. 'ಈಶ್ವರನ ನಿಜವಾದ ಧರ್ಮವನ್ನು ಹರಡಲಿಕ್ಕೆಂದು ನಿನ್ನನ್ನು ಗೊತ್ತುಮಾಡಿದೆ. ಅದನ್ನು ನೀನು ಜನರೊಳಗೆ ಪ್ರಚಾರಗೊಳಿಸು' ಎಂದು ಮುಂತಾಗಿ ಅತನಿಗೆ ದೃಷ್ಟಾಂತಗಳಾದ್ದರಿಂದ ೫೦ನೇ ವರ್ಷದಿಂದ ಧರ್ಮೋಪದೇಶಕ್ಕಾಗಿ ಟೊಂಕಕಟ್ಟಿದನು. ಇಲ್ಲಿಂದ ಮೊದಲು ಅತನ ಮೈಯಲ್ಲಿ ದೇವರು ಪ್ರವೇಶಮಾಡಿ, ಅತನ ಬಾಯಿಂದ ಧರ್ಮತತ್ವಗಳನ್ನು ನುಡಿಸುತ್ತಿದ್ದನಂತೆ! ದೇವರು ಮೈಯಲ್ಲಿ ಸೇರಿಕೊಂಡ ವೇಳೆಯಲ್ಲಿ ಎಚ್ಚರತಪ್ಪಿ ಅತನು ಹೊದ್ದುಕೊಂಡಿರುವ ಕಂಬಳಿಯು ಪೂರಾ ತೊಯ್ದು, ಒದ್ದೆಯಾಗುವಷ್ಟರ ಮಟ್ಟಿಗೆ ಬೆವರಿ ನೀರಾಗುತ್ತಿದ್ದನು. ಈ ದೈವಿಕ ಸ್ಥಿತಿಯಲ್ಲಿ ಅತನ ಬಾಯಿಂದ ಗದ್ಯಪದ್ಯಮಯವಾದ ನುಡಿಗಳು ಹೊರಸೂಸುತ್ತಿದ್ದವು. ಮಹಮ್ಮದನ ಈ ದೈವಿಕಶಕ್ತಿಯನ್ನು ಕಂಡು ಬೆರಗಾಗಿ ಮೊತ್ತಮೊದಲು, ಮಹಮ್ಮದನ ಹೆಂಡತಿ, ಕಕ್ಕನ ಮಗ, ಅಳಿಯ ಅವರೆಲ್ಲರೂ ಶಿಷ್ಯರಾದರು. ನಾಕ್ಷಾತ್ಕಾರವಾದ ನಂತರ ಮಹಮ್ಮದನು ಮೂರ್ತಿ ಪೂಜೆಗೆ ವಿರೋಧಗಟ್ಟಿ ದೊಂಬಿಯನ್ನೆಬ್ಬಿಸಿದನು. ಈ ಸಂದರ್ಭದಲ್ಲಿ ಅರಬಸ್ಥಾನದೊಳಗಿನ ಮಕ್ಕಾಪಟ್ಟಣ

ಣವು ಬಹು ಊರ್ಜಿತಸ್ಥಿತಿಯಲ್ಲಿತ್ತು. ಅಲ್ಲಿರುವ ಕಾಬಾ ಎಂಬು ದೊಂದು ದೇವಾಲಯದಲ್ಲಿ ೩೬೦ ಮೂರ್ತಿಗಳಿದ್ದವು. ಬಹು ಪ್ರಾಚೀನ ಕಾಲದಿಂದಲೂ ಪರಂಪರೆಯಿಂದಲೂ ಅರಬರಿಗೆ ಈ ಮೂರ್ತಿಗಳೇ ಧರ್ಮದ ಬೀಜಗಳು; ಅದುದರಿಂದ ಅವು ಜೀವಕ್ಕಿಂತ ಹೆಚ್ಚು. "ಈ ಕಾಬಾ ದೇವಾಲಯದೊಳಗಿನ ಮೂರ್ತಿಗಳನ್ನು ಪೂಜಿಸಬೇಡಿರಿ; ಎಲ್ಲರೊಳಗಿರುವ ಒಬ್ಬನಾದ ಪರಮಾತ್ಮನನ್ನು ಪೂಜಿಸಿರಿ" ಎಂದು ಮಹಮ್ಮದನು ಹೇಳುವ ಹೊಸ ಬೋಧವು ವಿಪರೀತವಾಗಿ ಪರಿಣಮಿಸಿತು. ಎಲ್ಲ ಧರ್ಮವೀರರಿಗೆ ತಮ್ಮ ಧರ್ಮ ಪ್ರಚಾರಣೆಗಾಗಿ ಕಷ್ಟನಷ್ಟಗಳನ್ನು ಸೈರಿಸಬೇಕಾಗುವಂತೆ ಮಹಮ್ಮದ ಪೈಗಂಬರನು ಕೆಲಕಾಲ ಜನರಿಂದಾದ ಛಲನೆಯನ್ನು ತಾಳಿಕೊಂಡಿದ್ದನು. ಆದರೆ ಒರುಬರುತ್ತ ಮಕ್ಕೆಯಲ್ಲಿರುವದು ಅಸಾಧ್ಯವಾಯಿತು. ಇತ್ತ ಹೆಂಡತಿಯು ತೀರಿಕೊಂಡಳು. ಹೀಗಾಗಿ ಉತ್ತರಕ್ಕಿರುವ ಮದೀನಾ ಪಟ್ಟಣವನ್ನಾಶ್ರಯಿಸಬೇಕೆಂದು ಮನಸುಮಾಡಿ ತೊರಟನು. ದಾರಿಯಲ್ಲಿ ಕೆಲವರು ಅವನನ್ನು ಕೊಲೆಮಾಡಬೇಕೆಂದು ತೊಂಚುಹಾಕಿದ್ದರಿಂದ ಒಂದು ಗುಡ್ಡದ ಗವಿಯಲ್ಲಿ ಅಡಗಿಕೊಂಡಿದ್ದು ಅವರು ಕಾಣದಂತಾದೊಡನೆ ಮತ್ತೆ ಮದೀನಾ ಪಟ್ಟಣದ ದಾರಿ ಹಿಡಿದನು. ಮಹಮ್ಮದನು ಮಕ್ಕೆಯಿಂದ ಮದೀನಾ ಪಟ್ಟಣಕ್ಕೆ ಓಡಿಹೋದಂದಿನಿಂದ ಅವನ ಶಕಕ್ಕೆ ಹಿಜರಿಶಕವೆಂದು ಹೆಸರು ಬಂದಿತು. ಹಿಜರಿ ಅಂದರೆ 'ಓಟ' ಎಂದರ್ಥ.

ಧರ್ಮಕಾರ್ಯಕ್ಕೆ ಪ್ರಾರಂಭ :- ಮದೀನಾ ಪಟ್ಟಣವನ್ನು ಸೇರಿದ ನಂತರ ಹಜರಿತ ಮಹಮ್ಮದವರ ಆಯುಷ್ಯಕ್ಕೆ ಹೊಸದೊಂದು ತೇಜಸ್ಸೇರಿತು. ಅಲ್ಲಿರುವ ಒಬ್ಬ ದೈವುಳ್ಳ ಗೃಹಸ್ಥನೊಬ್ಬನು ಮಹಮ್ಮದರ ಶಿಷ್ಯನಾಗುವದಲ್ಲದೆ ತನ್ನ ಮಗಳನ್ನೂ ಅವರಿಗೆ ಅರ್ಪಿಸಿದನು. ಒಬ್ಬರನ್ನು ನೋಡಿ ಇನ್ನೊಬ್ಬರು ಹೀಗೆ ಅನುಯಾಯಿಗಳಾಗತೊಡಗಿದ್ದರಿಂದ ಪೈಗಂಬರರ ಶಿಷ್ಯಸಮೂಹವು ಬೆಳೆಯಿತು. ಈಕಾಲಕ್ಕೆ ಮಹಮ್ಮದವರ ವಯಸ್ಸು ೫೩; ನನ್ನತನ್ನವರೆಂಬುವರೆಲ್ಲರೂ ನೀಗಿಹೋಗಿದ್ದರು. ಎಲ್ಲವೂ ಹೊಸ ಪ್ರಪಂಚ. ಇಂಥ ಬಿಕ್ಕಟ್ಟಿನಲ್ಲಿರಲು ಎಲ್ಲೆಡೆಯಿಂದ ಖುರೇಶಿ ಜನರದೊಂದು ಕಾಟವು. ಈ ಖುರೇಶೀ ಜನರು ಮಹಮ್ಮದ

ವರ ಹೊಸ ಧರ್ಮದ ಛಲನೆಗೈಯ್ಯುವದಲ್ಲದೆ ಅವರ ಶಿಷ್ಯರನ್ನು ಪರಿ
ವರಿಯಿಂದ ಕಾಡಲಾರಂಭಿಸಿದರು. ಈ ಧರ್ಮಸಂಕಟದೊಳಗೆ ಶತ್ರು
ಗಳಿಗೆ ಬೆನ್ನುತೋರಿಸಿ ಓಡಿಹೋಗುವದು ಯುಕ್ತವಲ್ಲೆಂದೆಣಿಸಿ, ಮರು
ಭೂಮಿಯು ನಮ್ಮ ಧರ್ಮವೀರನು ಎದೆಗಾರಿಕೆಯಿಂದ ತನ್ನನ್ನು ತಾನೇ
ಕಾಯ್ದುಕೊಳ್ಳದೆ ಗತಿಯಿಲ್ಲವೆಂದರಿತು ಪರಿಸ್ಥಿತಿಯನ್ನೆದುರಿಸಿ ಬಂಡೆಗ
ಲ್ಲಿನಂತೆ ನಿಂತುಕೊಂಡನು. "ಜನಸಾಮಾನ್ಯರು ಬರಿಯ ಧರ್ಮೋಪ
ದೇಶದಿಂದ ದಾರಿಗೆ ಬರುವರಲ್ಲ; ಅವರನ್ನು ಶಸ್ತ್ರದಿಂದಲೇ ದಾರಿಗೆಳೆ
ಯಲಿಕ್ಕೆ ಬೇಕು; ಹಿಂದಕ್ಕೆ ಅನೇಕ ಮಂದಿ ಪೈಗಂಬರರು ಧರ್ಮದ
ದಾರಿಯನ್ನು ತೋಳಿ ತೋರಿಸಿದರೂ, ಜನರು ಅದಕ್ಕೆ ಕೆವಿಗೊಡದೇ
ಹೋದರು; ಆದುದರಿಂದ ನಾನೀಗ ತೋಳುವ ಧರ್ಮವನ್ನು ಲಕ್ಷಿಸದವ
ರನ್ನು ಕತ್ತಿಯ ಬಲದಿಂದ ಗೆದ್ದು, ಅವರಲ್ಲಿರುವ ಹಣವನ್ನು ಸುಲಿಯ
ತಕ್ಕದ್ದು; ಈ ಶಸ್ತ್ರಪ್ರಸಂಗದೊಳಗೆ ನಾವು ಗೆದ್ದರೆ ನಮಗೆ ಹಣ ಶಿಗು
ವದು; ಒಂದುವೇಳೆ ಗೆಲುವಾಗದಿದ್ದರೆ, ಯುದ್ಧದೊಳಗೆ ಸತ್ತುದಕ್ಕಾಗಿ
ನಮಗಾಗಿ ಸ್ವರ್ಗದ ಬಾಗಿಲು ತೆರದಿಟ್ಟಿರುವದು.' ಎಂದು ಮುಂತಾದ
ಹುರುಪಿನ ನುಡಿಗಳಿಂದ ಕಾಡು ಕಗ್ಗರಾದ ಅರಬ್ಬರಲ್ಲಿ ಹೊಸ ಜೀವ
ವನ್ನು ತುಂಬಿ, ಅವರನ್ನೆಲ್ಲ ಕಲೆಹಾಕಿ ಅವರಿಗೆ ದಂಡಿನ ಶಿಕ್ಷಣಕೊಟ್ಟು
ಬಂಟರನ್ನಾಗಿ ಮಾಡಿದರು. ಇದರಿಂದ ಇದುವರೆಗೆ ಶಾಂತತೆಯಿಂದ
ಕಾಲಕಳೆಯುವ ಈ ವೀರ ಅರಬರಿಗೆ ತಮ್ಮ ಸ್ವಭಾವಕ್ಕೆ ತಕ್ಕ ಕಾಯ
ಕವು ದೊರೆತಂತಾಯಿತು. ತಮ್ಮ ಧರ್ಮಪ್ರಸಾರಗೊಳಿಸಲು, ನೆರೆ
ಹೊರೆಯ ಪ್ರಾಂತಗಳೆಲ್ಲೆಲ್ಲ ಮಹಮ್ಮದವರು ತಮ್ಮ ದಂಡಿನ ಜನರನ್ನು
ಕಳಿಸಿ ಅವರು ತಂದ ಲೂಟಿಯನ್ನೆಲ್ಲ ಎಲ್ಲರೂ ಸಮವಾಗಿ ಹಂಚಿಕೊ
ಳ್ಳತೊಡಗಿದರು. ಹೀಗೆ ಅನೇಕ ಯುದ್ಧಗಳು ನಡೆದವು. ಧರ್ಮ
ಹಾಗೂ ರಾಜಕಾರ್ಯಗಳನ್ನು ಜೊತೆಗೊಳಿಸಿದ್ದರಿಂದ ರಾಜ್ಯವನ್ನು
ಗೆಲಿಯಲಿಕ್ಕೆ ಧರ್ಮವನ್ನೊಂದು ಸಾಧನವನ್ನಾಗಿ ಮಾಡಿಕೊಂಡು
ಸುತ್ತಣ ದೇಶದಲ್ಲೆಲ್ಲ ಧಾಳಾಧೂಳಿಯನ್ನೆಬ್ಬಿಸಿದರು. ಮೂರ್ತಿ
ಪೂಜೆಯ ಹುಚ್ಚುಗೊಂದಲವನ್ನು ಮುರಿದು, ನಿರ್ಮಾಮಗೊಳಿಸಲೋ
ಸುಗ ಮಹಮ್ಮದವರು ತಮ್ಮ ದಂಡಿನವರೊಡನೆ ಮಕ್ಕಾ ಪಟ್ಟಣವನ್ನು

ಮುತ್ತಿ ಅದನ್ನು ಕೈವಶ ಮಾಡಿಕೊಂಡು, ಕಾಬಾ ದೇವಸ್ಥಾನದೊಳಗಿರುವ ಮೂರ್ತಿಗಳನ್ನೆಲ್ಲ ಒಡೆದು ಪುಡಿಪುಡಿ ಮಾಡಿದರು. ಧರ್ಮಸ್ಥಾಪಕರಾದ ಪೈಗಂಬರವರು ಈ ಮೇರೆಗೆ ಶಸ್ತ್ರಬಲದಿಂದ ತಮ್ಮ ಧರ್ಮವನ್ನು ಸ್ಥಾಪಿಸಿ, ಅರಬರನ್ನೆಲ್ಲ ಬಂದುಗೊಳಿಸಿ, ಎಚ್ಚರಗೊಳಿಸಿ, ತಮ್ಮ ಇರುವಿಕೆಯಲ್ಲಿಯೇ ಅರಬಸ್ಥಾನವನ್ನೆಲ್ಲ ಇನ್ನಾಮುಪಯಾಗಿ ಮಾಡಿಬಿಟ್ಟರು. ಮಹಮ್ಮದವರು ಈಗ ಧರ್ಮ ಹಾಗೂ ದೇಶಕ್ಕೆ ರಾಜರಾಗಿ ವಿರಾಜಿಸತೊಡಗಿದರು. ಮತ್ತೆರಡು ಸಮಯದಲ್ಲಿ ಹೀಗೆಯೇ ದಾಳಿಯೆತ್ತಿ ಹೋಗಿರುವಾಗ ಅವರಿಗೆ ತಮ್ಮ ನಾವು ಸಮೀಪಿಸಿತೆಂದು ಹೊಳೆಯಿತು. ಪುತ್ರವಾತ್ಸಲ್ಯದಿಂದ ತಮ್ಮ ಎಲ್ಲ ಬಂಧುಗಳನ್ನೂ, ಶಿಷ್ಯರನ್ನೂ ಕರೆದು ನೆರೆಯಿಸಿ, ಅವರಿಗೆ ಧರ್ಮದ ರಹಸ್ಯವನ್ನು ತಿಳಿತೇಳಿ, "ನಡೆಯಿರಿ; ನೀವು ಮುಂದೆ ದೊಡ್ಡ ಪದವಿಗೇರುವಿರಿ" ಎಂದು ಆಶೀರ್ವದಿಸಿದರು. ತಮ್ಮ ಹತ್ತರವಿದ್ದ ದುಡ್ಡುಕಾಸನ್ನೆಲ್ಲ ಬೊಕ್ಕಸದಿಂದ ತೆಗೆಯಿಸಿ, ಸೂರೆಮಾಡಿ ಬಿಟ್ಟರು. ದಾಸರನ್ನು ಬಿಡುಗಡೆ ಮಾಡಿದರು. ಅರಬಸ್ಥಾನದೊಳಗೆ ಒಬ್ಬ ಮೂರ್ತಿಪೂಜಕನೂ ಉಳಿಯದಂತೆ ಎಚ್ಚರಾಗಿರಲಿಕ್ಕೆ ಶಿಷ್ಯರಿಗೆ ಆಜ್ಞೆಮಾಡಿ, ತಮ್ಮ ಹೆಂಡತಿಯಾದ ಆಯೇಷಾ ಬೀಬಿಯವರ ತೊಡೆಯ ಮೇಲೆ ಮಲಗಿಕೊಂಡು ಕ್ರಿ. ಶ. ೬೩೨ ರಲ್ಲಿ ಪ್ರಾಣಬಿಟ್ಟರು.

ಮಹಮ್ಮದವರ ಬಾಳ್ವೆ ಮತ್ತು ನೈತಿಕಸುಧಾರಣೆ:—ಮಹಮ್ಮದವರ ಮನೆಯೆಂದರೆ, ವಿಶ್ವಯುದ್ಧಿಯಿಂದೊಂದು ಎಲ್ಲರಿಗೂ ಮೇಲು ಪಂಕ್ತಿಯಾಗಿರುವ ಕುಟುಂಬವು. ಅವರ ಊಟವೆಂದರೆ ಗೋಧಿರೊಟ್ಟಿ; ಉಡುಪೆಂದರೆ ಬಂದು ನಿಲುವಂಗಿ. (ಬಂದೊಂದು ಸಲ ಒಲೆ ಹೊತ್ತಿಡದೆ ಎಷ್ಟೋ ತಿಂಗಳು ಹಾಗೇ ಕಳೆದು ಹೋಗುತ್ತಿದ್ದವು.) ಮಹಮ್ಮದವರು ತಮ್ಮ ನಿಲುವಂಗಿಯು ಹರಿದರೆ, ಅದನ್ನು ಸ್ವತಃ ಕೈಯಿಂದ ತಾವೇ ಹೊಲಿದುಕೊಳ್ಳುತ್ತಿದ್ದರು. ಹೆಚ್ಚಿಗೇನು? ತಾವು ಕಾಲಲ್ಲಿ ಮೆಡುವ ಚಡಾವುಗಳು ಹರಿದರೂ ತಾವೇ ಹೊಲಿದುಕೊಳ್ಳುತ್ತಿದ್ದರೆಂದೂ ಈಗಲೂ ಅವರ ನಾದಾತನದ ಬಗ್ಗೆ ಇನ್ನಾಮರು ಹೆಮ್ಮೆಪಡುವದುಂಟು. ತಮ್ಮ ಸಮಾಜದೊಳಗೆ ನೆಲೆಗೊಂಡಿರುವಂಥ ಹೆಣ್ಣು

ಮಕ್ಕಳನ್ನು ಹುಗಿಯುವ ರೂಢಿಯನ್ನು ಮುರಿದರು. ಬಹುಪ್ರತಿತ್ವದ ಪದ್ಧತಿಯನ್ನು ತಳ್ಳಿ, ವ್ಯಭಿಚಾರ ಮಾಡುವವನಿಗೆ ಘಟಕಿಯ ಶಿಕ್ಷೆಯನ್ನೂ, ವ್ಯಭಿಚಾರಿಣಿಗೆ ದೇಹಾಂತ ಶಿಕ್ಷೆಯನ್ನೂ ವಿಧಿಸಿ, ಸಮಾಜದೊಳಗೆ ಶೀಲದ ಮೇಲ್ಮೆಯನ್ನು ಬೆಳೆಯಗೊಟ್ಟರು. ತಮ್ಮ ಧರ್ಮದವರೆಲ್ಲರೂ ಬಾಂಧವ್ಯದಿಂದ ನಡೆದುಕೊಳ್ಳಬೇಕೆಂದು ಪೈಗಂಬರವರು ಮನೀಷೆಯಿಟ್ಟಿದ್ದರೂ ಕೊನೆಯ ವರೆಗೂ ಅದು ಸಫಲವಾಗದೆ ಉಳಿಯಿತು. ಮಹಮ್ಮದವರ ಉಪದೇಶಾಮೃತವು ಬರಿಯ ಗಂಡಸರಲ್ಲೇ ಮಾಡದೆ ಹೆಂಗಸರಲ್ಲಿಯೂ ಬೇರು ಬಿಟ್ಟುಕೊಂಡಿತು. ಅದರಿಂದ ಆವೇಶಗೊಂಡವರಾಗಿ, ಮಹಮ್ಮದೀಯ ಸ್ತ್ರೀಯರು ಸಹ ಯುದ್ಧಕ್ಕೆ ಪತಿಗಳೊಡನೆ ನಾಗಿ, ಅವರಿಗೆ ತಮ್ಮ ಸಹವಾಸದಿಂದ ಧೈರ್ಯಗೊಡುತ್ತಿದ್ದರು; ಮಧುರಗಾನದಿಂದ ಉತ್ಸಾಹವನ್ನುಂಟು ಮಾಡುತ್ತಿದ್ದರು.

ಇಸ್ಲಾಮಧರ್ಮದಿಂದ ಹಿಂದುಸ್ಥಾನದ ಮೇಲಾದ ಪರಿಣಾಮ:–

ಅರಬಸ್ಥಾನದಲ್ಲಿ ಹುಟ್ಟಿದ ಇಸ್ಲಾಮಧರ್ಮವು ಹಿಂದುಸ್ಥಾನಕ್ಕೆ ಯಾವ ರೀತಿಯಾಗಿ ಪರಿಣಮಿಸಿತೆಂಬದನ್ನು ನೋಡುವದೊಂದು ಚರಿತ್ರೆಗಾರರಕೆಲಸವಿದೆ. ಅರಬಸ್ಥಾನವು ಇಸ್ಲಾಮಧರ್ಮವನ್ನು ಸ್ವೀಕರಿಸುವದಕ್ಕಿಂತ ಮುಂಚೆ ಸಹ ಹಿಂದೂದೇಶಕ್ಕೂ ಅರಬಸ್ಥಾನಕ್ಕೂ ವ್ಯಾಪಾರದ ಸಂಬಂಧವಿದ್ದಿತು. ಅಂತೂ ಅರಬರಿಗೆ ಹಿಂದುಸ್ಥಾನದ ಬಗ್ಗೆ ಎಲ್ಲ ಸಂಗತಿಯು ಚೆನ್ನಾಗಿ ಗೊತ್ತಿತ್ತು; ಅದರೂ ಕೈಯಲ್ಲಿ ಬಲವಿಲ್ಲದವರಿಗೆ ಕೈ ಬಳಿಯುವವನ್ಮತವಿನ ಕಡೆಗೆ ಲಕ್ಷ ಹೋಗುವದೆಂತು? ಮಹಮ್ಮದ ಪೈಗಂಬರವರ ಉದ್ರೇಧದಿಂದ ಎಚ್ಚೆತ್ತಾಗ ರಾಜಕೀಯ ಧಾರ್ಮಿಕ ಕಾರ್ಯಗಳನ್ನು ರಟ್ಟಿಯ ಬಲದಿಂದ ಸಾಧಿಸಬೇಕೆಂಬುವ ದಿವ್ಯಮಂತ್ರವು ಕಿವಿಗೆ ಬಿದ್ದೊಡನೆ ಅರಬರು ತಮ್ಮ ಜನರನ್ನು ಗುಂಪುಗಟ್ಟಿಕೊಂಡು ಬೇರೆ ಬೇರೆ ಪ್ರದೇಶಗಳಲ್ಲಿ ನುಗ್ಗಿ ಹಳ್ಳಿಪಳ್ಳಿಗಳನ್ನು ಸುಲಿದು ಸುಡುವರು, ಅಲ್ಲಿನ ಜನರನ್ನು ದಾಸರನ್ನಾಗಿ ಮಾಡುವರು, ಇವೇ ಅಮಾನುಷ ಕರ್ಮಗಳನ್ನು ಎಗ್ಗಿಲ್ಲದೆ ನಡೆಯಿಸಿದರು. ಇದರಿಂದ ಮುಸಲ್ಮಾನಧರ್ಮವೂ, ರಾಜ್ಯವೂ ಎರಡೂ ಬೆಳೆದವು. ಅಷ್ಟೇಕೆ! ಕಾಡುಜನರೆಂದೆನಿಸಿಕೊಳ್ಳುವ ಮುಸಲ್ಮಾನರು ಮುಂದೆ ಸುಧಾರಣೆಯು

ಶಿಖರಕ್ಕಡರಿದ ರೋಮನರ ರಾಜ್ಯವನ್ನು ಸಹ ಗೆದ್ದು ಬಿಟ್ಟರು. ಕೆನಿಯಲ್ಲಿ ಗಾಳಿ ತುಂಬಿದಂತೆ ಆವೇಶಗೊಂಡವರಾದ ಮುಸಲ್ಮಾನರಿಗೆ ಭಂಗಾರದ ಹೊಗೆ ಹೊರಡುತ್ತಿರುವ ಹಿಂದುಸ್ಥಾನದಂಥ ದೇಶದ ಕಡೆಗೆ ಕಣ್ಣು ತಿರುಗದೆ ಇದ್ದೀತೆ? ಈ ಕಾಲಕ್ಕೆ ಹಿಂದುಸ್ಥಾನವೆಂದರೆ ಒಂದಾನೊಂದು ಕಾಲಕ್ಕೆ ದೇಹಬಲದಿಂದಲೂ ಬುದ್ಧಿಬಲದಿಂದಲೂ ಮೆರೆದು ಮೆರೆದು ಮುಪ್ಪಿಗೀಡಾದ ದೇಶವು. 'ಹಣ್ಣೆಲೆಯು ಉದುರುವ ಮುಂದೆ ಹಸರೆಲೆಯು ನಗುವಂತೆ' ಮಹಮ್ಮದೀಯ ಧರ್ಮದ ಮುಂದೆ ಹಿಂದೂ ದೇಶದ ಪಾಡಾಗಿತ್ತು. ಮೈಯಲ್ಲಿಯ ಬಲವೆಲ್ಲ ಬಸಿದು ಹೋಗಿ ಸ್ಮಶಾನದ ಮೇಲೆ ಕಣ್ಣಿಟ್ಟು ಕಾಲಕಳೆಯುವ ಹಿಂದುಸ್ಥಾನವೆತ್ತ? ಇದೀಗ ತಾನೇ ಮಹಮ್ಮದವರ ಶಸ್ತ್ರಪ್ರಧಾನವಾದ ಮಂತ್ರದಿಂದ ಮೈಹುರಿಗೊಂಡ ಅರಬಸ್ಥಾನವೆತ್ತ? ಮುದಿತನದ ಆಯಾಸದಿಂದ ಕೈಲಾಗದೆಂದು ಮೈ ಮುದುಡಿಕೊಳ್ಳುತ್ತಿರುವದೊಂದು ದೇಶವು! ನವತಾರುಣ್ಯ ಭರದಿಂದ ಮೈಯುಬ್ಬಿಸಿ ಎಲ್ಲರ ಮೇಲೆ ಹರಿಹಾಯುತ್ತಿರುವದು ಮತ್ತೊಂದು ದೇಶವು! ಇಂಥ ಮುದಿತನದ ಮುಪ್ಪಿನಲ್ಲಿ ಹಿಂದೂದೇಶದಂಥ ಪುರಾಣ ಜನಾಂಗದಿಂದ ಆಗುವದೇನು? ಹೇಗಿದ್ದರೂ, ಹಿಂದೂ ಜನಾಂಗದಲ್ಲಿಯ ಕ್ಷತ್ರಿಯ ಪೀಳಿಗೆಯವರಾದ ರಜಪೂತರು ಮುಸಲ್ಮಾನರನ್ನು ತಮ್ಮ ಅಳವು ಮೀರಿ ಅಡ್ಡಗಟ್ಟಿ ತಮ್ಮ ನಾಹಪ ಶೌರ್ಯಾದಿಗಳ ದೊಂದು ಕೊನೆಯ ಕೋಲ್ಮಿಂಚಿನ ಹೊಳಪನ್ನು ಹಿಂದುಸ್ಥಾನದ ಇತಿಹಾಸದೊಳಗೆ ಅಚ್ಚಳಿಯದಂತೆ, ಬೆಳಗಿಸಿದರು. ರಜಪೂತ ಸ್ತ್ರೀಯರು ತಮ್ಮ ಪಾತಿವ್ರತ್ಯವನ್ನೂ, ಶೀಲವನ್ನೂ ಕಾಯ್ದುಕೊಳ್ಳಲೋಸುಗ ಅಗ್ನಿಯೊಳಗೆ ಧುಮುಕಿ ತಮ್ಮ ಚಾರಿತ್ರ್ಯಾಗ್ನಿಯು ಜ್ಯೋತಿಯನ್ನು ಕಲ್ಪಾಂತಗಳ ವರೆಗೆ ಇತಿಹಾಸದೊಳಗೆ ಉರಿಯುತ್ತ ಇಟ್ಟರು; ಇರಲಿ. ಇಸ್ಲಾಮಧರ್ಮದ ಹುಟ್ಟುಗೆಯಿಂದ ಹಿಂದುಸ್ಥಾನದ ಪಾರತಂತ್ರ್ಯಕ್ಕೆ ಪ್ರಾರಂಭವಾಯಿತು. ಹಿಂದುಗಳ ಬಾಹ್ಯಸಂಸ್ಕೃತಿಯಲ್ಲಿ ಇಸ್ಲಾಮದ ನೆರಳು ಬಿದ್ದಿತು. ಧಾರ್ಮಿಕದೃಷ್ಟಿಯಿಂದ ಹಿಂದೂಧರ್ಮವು ಬೆಳೆಯುವದೊತ್ತಟ್ಟಿಗುಳಿದು ಅದು ದಿನವೊಂದಕ್ಕೆ ಕುಗ್ಗಿ ಕಳೆಗುಂದಲಾರಂಭಿಸಿತು. ಈ ವೇಳೆಗೆ ಬಹುಮಟ್ಟಿಗೆ ಹಿಂದೂಧರ್ಮದೊಳಗಿನ ಹುರುಳು

ಹಾರಿ ಹೋಗಿ ಬರಿಯ ಹೊಟ್ಟು ಉಳಿದಿದ್ದರೂ, ಅದೇ ನಮ್ಮ ಸಂಸ್ಕೃತಿಯನ್ನು ರಕ್ಷಿಸಲಿಕ್ಕೆ ಕಾರಣವಾಯಿತೆನ್ನಬಹುದು; ಹಾಗೆಂತಲೇ ನಮ್ಮವರು ಜೀವಕ್ಕೆರವಾಗಿ ಧರ್ಮ ಉಳಿಸಿಕೊಂಡರು. ರಾಜ್ಯಸೂತ್ರಗಳೆಲ್ಲ ಕ್ರಮವಾಗಿ ಮುಸಲ್ಮಾನರ ಕೈಸೇರಿದ್ದರಿಂದ ಧರ್ಮಕ್ಕೆ ರಾಜಾಶ್ರಯವು ತಪ್ಪಿಹೋಗಿ ಮೆಲ್ಲಗೆ ಧರ್ಮದ ತನಿಗಿಚ್ಚು ತನ್ನಷ್ಟಕ್ಕೆ ತಾನೇ ನೊಂದಿ ಹೋಗಲನುವಾಯಿತು. ಇಷ್ಟು ನಷ್ಟವಾದರೂ ಹಿಂದೂದೇಶದವರೂ ಮುಸಲ್ಮಾನರೂ ಬಹು ದಿನ ಒಂದೇ ಮನೆಯಲ್ಲಿ ಕೂಡಿರುವಂತೆ ಹೊಂದಿಕೊಂಡಿರ್ದುದರಿಂದ ಹಿಂದುಸ್ಥಾನಕ್ಕೆ ಅವರೊಬ್ಬರು ದತ್ತಕ ಪುತ್ರರಾಗಿ ಕೊನೆಯ ವರೆಗೂ ಹಿಂದೂದೇಶವನ್ನೇ ತಮ್ಮ ತಾಯ್ನಾಡನ್ನಾಗಿ ತಿಳಿದುಕೊಂಡು ಇರತೊಡಗಿದರು. ಮುಸಲ್ಮಾನರಿಂದ ಹೊದಲು ಹಿಂದೂಪುತ್ರರಿಗೆ ಎಷ್ಟೆಂದು ಕಷ್ಟನಿಷ್ಠುರಗಳನ್ನು ಸೈರಿಸುವ ಅನರ್ಥಕರವಾದ ಪ್ರಸಂಗಗಳು ಬಂದು ಮುತ್ತಿದಾಗ್ಯೂ ಹಿಂದತಾಯಿಯು ಅವರನ್ನು ಹೊರಗೆ ದಬ್ಬಿ ಹಾಕದೆ ತನ್ನ ಮನೆಯಲ್ಲಿ ಅವರಿಗೂ ಆಶ್ರಯವನ್ನು ಕೊಟ್ಟು ಇಟ್ಟುಕೊಂಡಳು. ಬರುಬರುತ್ತ ಹಿಂದೂಧರ್ಮವೂ ಇಸ್ಲಾಮಧರ್ಮವೂ ಅವಳಿ ಸೋದರಧರ್ಮಗಳಾಗಿ ಬಾಳತೊಡಗಿದವು. ಮುಂದೆ ಮುಂದಂತೂ ಹಿಂದೂಸಮಾಜದೊಳಗೆ ಇಸ್ಲಾಮರ ತತ್ವಗಳೂ, ಇಸ್ಲಾಮದೇವತೆಗಳ ಭಕ್ತಿಯೂ ಇಸ್ಲಾಮರಲ್ಲಿ ಹಿಂದೂದೇವತೆಗಳ ಭಕ್ತಿಯೂ ಒಳಗಿಂದೊಳಗೇ ಸಂಸರ್ಗವಿಶೇಷದಿಂದ ಬೆಳೆಯುತ್ತ ನಡೆದನೆಂಬುದು ಮುಂದಿನ ಇತಿಹಾಸದಿಂದ ತಾನೇ ನಿಚ್ಚಳವಾಗಿ ತಿಳಿಯುವದು.

೧೨ ನೇ ಪ್ರಕರಣ.

ಗಂಡುಗೆಟ್ಟ ಹಿಂದೂದೇಶಕ್ಕೆ ಅರಬರ ದಾಳಿ.

(ಕ್ರಿ. ಶ. ೬೦೦–೭೦೦ ವರೆಗೆ)

ಹರ್ಷನ ತರುವಾಯದ ಹಿಂದುಸ್ಥಾನವು:- ಶ್ರೀಹರ್ಷಮಹಾರಾಯನು ಮಡಿದ ನಂತರ ಪುನಶ್ಚ ಹಿಂದುಸ್ಥಾನವು ಕಟ್ಟು ಕಳಚಿ ಹೋದ ಹೊರೆಯುಂತಾಯಿತು. ಹರ್ಷನ ನಾಶೆಂದರೆ ರಾಜಕೀಯ ಹಾಗೂ ಧಾರ್ಮಿಕ ದೃಷ್ಟಿಯಿಂದ ಒಂದು ತೆರನಾಗಿ ಕ್ರಾಂತಿಯ ಧ್ವಜವೇ ಎಂದು ಹೇಳಬಹುದು. ಇತ್ತೀಚೆ ಈತನ ಕೈಯಾಸರದಿಂದಲೇ ಬೌದ್ಧಧರ್ಮವು ಕಳಸಕ್ಕೇರಿತ್ತು. ಆದರೆ ಹರ್ಷನ ನಾವಿನೊಡನೆ ಬೌದ್ಧ ಧರ್ಮಕ್ಕೂ ಹಿಂದುಸ್ಥಾನದೊಳಗಿಂದ ತಳವನ್ನು ಕಿತ್ತಿಕೊಂಡೇ ಳಬೇಕಾಯಿತು. ಹರ್ಷನ ತರುವಾಯ ಮೌಖರಿವಂಶದ ಹಳೇ ಮನೆತನದೊಳಗಿನ ವರ್ಮಾ ಅರಸರಿಗೆ ರಾಜ್ಯಸ್ಥಾಪಿಸುವ ಅವಕಾಶವುಂಟಾಗಿ ಕನೋಜದೊಳಗೆ ಅವರಾಳಿಕೆಗೆ ಮೊದಲಾಯಿತು. ವರ್ಮಾರಾಜರು ಹೇಳುವಷ್ಟೇನೂ ದರ್ಪದಿಂದ ಆಳಲಿಲ್ಲ. ಅವರಲ್ಲಿ ಯಶೋವರ್ಮನ ಆಳಿಕೆಯಲ್ಲಂತೂ ವರ್ಮ ಮನೆತನಕ್ಕೆ ಒಂದೆರಡು ದೊಡ್ಡ ಆಘಾತಗಳು ತಟ್ಟಿದವು. ಅವುಗಳಲ್ಲಿ ಮೊದಲನೇದು ಕರ್ನಾಟಕದ ಅರಸನಾದ ಚಾಲುಕ್ಯ ವಿನಯಾದಿತ್ಯನಿಂದ. ದಕ್ಷಿಣದೇಶವನ್ನು ಗೆಲ್ಲಲಿಕ್ಕೆಂದು ಹೊರಗೆ ಕಾಲಿಟ್ಟ ಯಶೋವರ್ಮನಿಗೆ ಈಗ ವಿನಯಾದಿತ್ಯನು ಹೊತೆದೋಡಿಸಿ, ಹಿಂದಕ್ಕೆ ಶ್ರೀಹರ್ಷನಿಗೆ ಚಾಲುಕ್ಯಕೇಸರಿಯಾದ ಪುಲಿಕೇಶಿಯು ತೋರಿಸಿದ ಕೈಯ ಸ್ಮರಣೆ ಮಾಡಿಕೊಟ್ಟನು. ವಿನಯಾದಿತ್ಯನ ಈ ಗೆಲವಾದರೂ ರಾಷ್ಟ್ರೀಯದೃಷ್ಟಿಯಿಂದ ಪುಲಿಕೇಶಿಯಷ್ಟೇ ಮಹತ್ವವುಳ್ಳದ್ದಾಗಿತ್ತು. ಉತ್ತರ ದೇಶಾಧಿಪನಾದ ಯಶೋವರ್ಮನಿಂದ ವಿನಯಾದಿತ್ಯನು ಅತನ ಪಾಲಿಧ್ವಜ, ಮಕರತೋರಣ, ಚಂದ್ರಸೂರ್ಯ,

ಗಂಗಾ ಯಮುನಾ ಆದೋ ಮುಂತಾದ ರಾಜಚಿಹ್ನೆಗಳನ್ನು ಸಹ ಕಸಿದು ಕೊಂಡದ್ದರಿಂದ, ಯಶೋವರ್ಮನು ಗಂಗಾ ಯಮುನಾ ನದಿಗಳ ಪ್ರದೇಶಕ್ಕೆಲ್ಲ ಅಧಿರಾಜನಿದ್ದನೆಂದೂ, ಅಂಧವನನ್ನು ವಿನಯಾದಿತ್ಯನು ಸೋಲಿಸಿದನೆಂದೂ ಇದರ ಮೇಲಿಂದ ಸಿದ್ಧವಾಗುತ್ತದೆ. ಭವಭೂತಿ ಕವಿಯು ಈತನ ಆಸ್ಥಾನಪಂಡಿತನಾಗಿದ್ದನು.

ಕಾಶ್ಮೀರದ ಕರ್ಕೋಟಕವಂಶದ ಲಲಿತಾದಿತ್ಯನು:— ಕಾಶ್ಮೀರದಲ್ಲಿ ಈ ಸಂಧಿಗೆ ಮುಕ್ತಾಪೀಡ ಲಲಿತಾದಿತ್ಯನು ರಾಜ್ಯವಾಳುತ್ತಿದ್ದನು. ಕಾಶ್ಮೀರದ ಕರ್ಕೋಟಕವಂಶವು ಏಸೇ ಶತಮಾನದಿಂದಲೇ ಪ್ರಾರಂಭವಾಗಿದ್ದರೂ, ಲಲಿತಾದಿತ್ಯನ ವರೆಗೆ ಅವರಲ್ಲಾರೂ ಕೀರ್ತಿಶೇಷರಾದ ಅರಸರಾಗಲಿಲ್ಲ. ಇದ್ದುದರಲ್ಲಿ ಲಲಿತಾದಿತ್ಯನೇ ಅವರಲ್ಲಿ ವೀರನು. ಈತನು ಕನೋಜದ ಯಶೋವರ್ಮರಾಜನ ಹಮ್ಮಿಳಿಸಿ, ಆವನನ್ನು ತನ್ನ ಹೊಗಳು ಭಟ್ಟನನ್ನಾಗಿ ಮಾಡಿಕೊಂಡನು. ದಕ್ಷಿಣದಲ್ಲಿರುವ ಅನೇಕ ರಾಜರುಗಳನ್ನು ಈ ಲಲಿತಾದಿತ್ಯನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡು ತನ್ನ ದಿಗ್ವಿಜಯಯಾತ್ರೆಯನ್ನು ಉತ್ತರಕ್ಕೆ ಹೊರಳಿಸಿದನು. ಉತ್ತರಕ್ಕೆ ಹಿಮಾಲಯದಾಚೆಯಿರುವ ದರದ, ಕಾಂಬೋಜ, (ತಿಬೆ) ಆವೆರಡೂ ದೇಶಗಳನ್ನು ಎಷ್ಟೆಷ್ಟೂ ಪ್ರಯಾಸವಿಲ್ಲದೆ ಗೆದ್ದುದಲ್ಲದೆ ತುರ್ಕರ ಮುಮ್ಮೇನಪಾನನೆಂಬ ರಾಜನನ್ನು ಮೂರು ನಾರೆ ಸೋಲಿಸಿದನು. ಭಾರತೀಯರು ಮುಸಲ್ಮಾನರಂಥ ಕಾಡುಜಾತಿಯ ಜನರ ರಾಜ್ಯದ ಮೇಲೆ ನಾಗಿ ಹೋಗಿ ತಮ್ಮ ಬಂಟಶನದಿಂದ ಅವರನ್ನು ಹೊಳಕಾಲೂರಲಿಕ್ಕೆ ಹಚ್ಚಿದ್ದು ಇತಿಹಾಸದೊಳಗೆ ಇದೇ ಮೊದಲನೆಯ ಉದಾಹರಣೆ. ಕಾಶ್ಮೀರದೇಶದ ರಾಜಕವಿಯಾದ ಕಲ್ಹಣನು "ತನ್ನ ಧೊರೆಯಾದ ಲಲಿತಾದಿತ್ಯನು ಬಲುಚಿನ್ನಾನ ತುರ್ಕಸ್ಥಾನ ರಾಜ್ಯಗಳನ್ನು ಗೆದ್ದನು." ಎಂದು ರಾಜತರಂಗಿಣಿಯಲ್ಲಿ ವರ್ಣಿಸಿದ್ದಾನೆ. ಲಲಿತಾದಿತ್ಯನು ಬಹು ಮಹತ್ವಾಕಾಂಕ್ಷಿಯಿದ್ದುದರಿಂದ ಆತನ ಜನ್ಮವೆಲ್ಲ ದಂಡಯಾತ್ರೆಯಲ್ಲಿಯೇ ಕಳೆದು ಹೋಯಿತು. ತುರ್ಕಸ್ಥಾನ ಮೊದಲಾದ ದೇಶಗಳನ್ನು ಗೆದ್ದುಕೊಂಡು ಗೋಬಿಯ ಉಸುಬಿನ ಬೈಲನ್ನು ದಾಟಿ ಮುಂದೆ ಹೋಗಬೇಕೆಂದು ಹಮ್ಮಾಸವಟ್ಟು, ಅದರಂತೆ

ಮುಂದಕ್ಕೆ ನಡೆದಿರಲು ದಾರಿಯಲ್ಲಿಯೇ ಲಲಿತಾದಿತ್ಯನು ಮಡಿದುದರಿಂದ ಅವನ ಮಹತ್ವಾಕಾಂಕ್ಷೆಯು ಅಲ್ಲಿಗೇನೇ ಕೊನೆಯಾಯಿತು. ಲಲಿತಾದಿತ್ಯನ ತರುವಾಯ ಅತನ ಮುಮ್ಮಗನಾದ ಜಯಾಪೀಡನು ನಿಜವಾಗಿಯೇ ತನ್ನಜ್ಜನ ಹೆಸರುಳಿಸಿದನು. ಜಯಾಪೀಡನು ಶೂರನಿದ್ದುದರಿಂದ ಪಂಚಗೌಡರನ್ನು ಸೋಲಿಸಿದ್ದಲ್ಲದೆ ಕನೋಜದ ಅಮೂಲ್ಯವಾದ ಸಿಂಹಾಸನವನ್ನು ಕಾಶ್ಮೀರಕ್ಕೆ ತಂದನು. ಈತನು ಸ್ವತಃ ವಿದ್ವಾಂಸನಿದ್ದುದರಿಂದ ಈತನಾಳಿಕೆಯಲ್ಲಿ ಕಾಶ್ಮೀರದೇಶವು ಸರಸ್ವತಿಯ ವಿಹಾರಭೂಮಿಯಾಯಿತು. ಆದರೆ ಮುಂದೆ ಅತನಿಗೆ ಅಹಂಕಾರವು ಒಂದು ಮುತ್ತಿದ್ದುದರಿಂದ ಪ್ರಜೆಗಳ ಶಾಪ ತಗಲಿ ಮಡಿದು ಹೋದ ನಂತರ ಉತ್ಪಲವಂಶೀಯನದವರು ಕಾಶ್ಮೀರದ ಪಟ್ಟವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆಳತೊಡಗಿದರು.

ಸಿಂಧಪ್ರಾಂತಕ್ಕೆ ಅರಬರ ದಾಳಿ:— ಹರ್ಷವರ್ಧನನು ಉತ್ತರದ ಚಕ್ರವರ್ತಿಯಾಗಿ ಆಳುತ್ತಿರುವಾಗ ಸಿಂಧದೇಶವನ್ನು ಮೌರ್ಯವಂಶದ ನಾಹಸೀರಾಯನೆಂಬ ಶೂದ್ರ ರಾಜನಾಳುತ್ತಿದನು. ಈತನು ಬೌದ್ಧ. ಈತನ ಪ್ರಜೆಗಳೂ ಬೌದ್ಧರು. ಈತನಿಗಾರೂ ಮಕ್ಕಳಿಲ್ಲದ್ದರಿಂದ ಈತನ ತರುವಾಯ ಮಂತ್ರಿಯಾದ ಚಚನೆಂಬ ಬ್ರಾಹ್ಮಣನು ಸಿಂಧ ರಾಜ್ಯವನ್ನು ಬಲುಮೆಯಿಂದ ತಾನೇ ಆಳತೊಡಗಿದನು. ಚಚನು ದುಷ್ಟ ಬುದ್ಧಿಯಿದ್ದರೂ ರಾಜತಂತ್ರಗಾರ. ಕರ್ತೃತ್ವಶಾಲಿ. ಈತನು ತನ್ನ ಪರಾಕ್ರಮದಿಂದ ಉತ್ತರದಲ್ಲಿಯು ಹಲವು ರಾಜ್ಯಗಳನ್ನು ತನ್ನ ರಾಜ್ಯಕ್ಕೆ ಬಳಪಡಿಸಿಕೊಂಡು ನೆಲೆಯಾಗಿ ಆಳಿದನು. ಈತನು ವೈದಿಕಧರ್ಮಾಭಿಮಾನಿಯಿದ್ದುದರಿಂದ ಬೌದ್ಧಧರ್ಮವನ್ನು ದೇಶಾಂತರಕ್ಕೆ ಓಡಿಸಲು ಪ್ರಯತ್ನ ಪಟ್ಟನು. ಮತ್ತೆ ಕೆಲಮಟ್ಟಿಗೆ ಅತನ ಪುನೀಷೆಯೂ ಸಾರ್ಥಕವಾಯಿತೆನ್ನಲಿಕ್ಕೆ ಕಾರಣಗಳಿವೆ. ಚಚನ ತರುವಾಯ ಅತನ ಮಗನಾದ ದಾಹರನು ಪಟ್ಟವೇರಿದನು. ದಾಹರನು ಬಲಾಢ್ಯನು. ತನಗೆ ಪಟ್ಟ ದೊರೆತೊಡನೆ ಬಂಧುಬಳಗ ನಮ್ಮವರು ತಮ್ಮವರೆಂಬವರನ್ನು ದೂರಕ್ಕೆ ದೂಡದೆ, ಅವರನ್ನೆಲ್ಲ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಅವರಿಗೆ ಬೇರೆ ಬೇರೆ ರಾಜ್ಯಗಳನ್ನಾಳಲು ಕಲ್ಪಿಸಿಕೊಟ್ಟನು. ಈತನ

ಅಳಿಕೆಯಲ್ಲಿಯೇ ಅರಬರು ಸಿಂಧದೇಶಕ್ಕೆ ದಂಡೆತ್ತಿ ಬಂದರು. ಭರತ ಖಂಡಕ್ಕೆ ಸಿಂಧದೇಶವೆಂಬುದೊಂದು ಬಹು ಅಯಕಟ್ಟಿನ ಸ್ಥಳವು. ಪರರಾಯರ ಕೈಗೆ ಶಿಲುಕಲು ಇರಬೇಕಾದಷ್ಟು ಅನುಕೂಲಗಳೆಲ್ಲ ಈ ದೇಶದ ಪಾಲಿಗೆ ಬಂದಿರುವದರಿಂದ ಹಿಂದುಸ್ಥಾನವೆಂಬ ಪೊಸಳೆಯನ್ನು ಕೊಲ್ಲಲಿಕ್ಕೆ ಸಿಂಧದೇಶವೆಂಬ ಮೂಗಿನ ಮೇಲೆ ಮೊದಲು ಪ್ರಹಾರ ಮಾಡಿದರಾಯಿತು. ಕೈ ಹಿಡಿದು ಜಗ್ಗಿದ ಮೇಲೆ ಇಡೀ ಮೈಯೆಲ್ಲ ಕೈಸೇರುವಂತೆ ಹಿಂದೂದೇಶವು ಕೈಗೆ ಬಂತೆಂತಲೇ ಎಣಿಕೆ. ಹಿಂದಣ ಕಾಲದ ಇತಿಹಾಸವನ್ನು ನಾವು ಇನ್ನೊಮ್ಮೆ ಸಿಂಹಾವಲೋಕನ ಮಾಡಿದರೆ, ಈ ದಾಳಿಯಿಂದಲೇ ಮಹಾ ಮಹಾ ದಾಳಿಗಾರರು ಹಿಂದುಸ್ಥಾನವನ್ನು ಹೊಕ್ಕು ಹಿಂದೂಜನರನ್ನು ಜರ್ಝರಿತರನ್ನಾಗಿ ಮಾಡಿರುವದು ಸ್ಪಷ್ಟವಾಗುತ್ತದೆ. ಹಿಂದಕ್ಕೆ ಹಲವು ಬಾರಿ ಪಾರಶೀಕರೂ ಸಿಂಧಪ್ರಾಂತವನ್ನು ಗೆಲ್ಲಬೇಕೆಂದು ದಾಳಿ ಮಾಡಿದರೂ, ತತ್ಕಾಲಕ್ಕೆ ಅಲ್ಲಿನ ಹಿಂದೂವೀರರು ತಮ್ಮ ಮೈ ನೆತ್ತರವನ್ನು ಬಸಿದು ಹಿಂದೂದೇಶವನ್ನು ಪರರಾಯರಿಂದ ಕಾಯ್ದುಕೊಂಡರು. ಮುಂದೆ ಮುಸಲ್ಮಾನೀಧರ್ಮವು ಮೂರ್ತರೂಪಕ್ಕೆ ಬಂದು, ಅಲ್ಲಿಯು ಖಲೀಫರ ಆಳ್ವಿಕೆಯಲ್ಲಿ ಸಹ ಬಹು ದಿನಗಳಿಂದ ಸಿಂಧಪ್ರಾಂತವನ್ನು ಸುಂಗಿನೀರು ಕುಡಿಯುವ ತಮ್ಮ ಹಟವನ್ನು ಅರಬರು ಪಟ್ಟಾಗಿ ಸಾಧಿಸಲು ಪಣತೊಟ್ಟವರಂತೆಯೇ ಬಂದಲ್ಲ ಎರಡಲ್ಲ ಅನೇಕ ದಾಳಿಗಳನ್ನಿಟ್ಟರು; ಆದರೆ ಆ ಕಾಲಕ್ಕೆ ಮುಸಲ್ಮಾನರಿಗೆ ಸಿಂಧಪ್ರಾಂತದ ನೆರೆಯಲ್ಲಿದ್ದುಕೊಂಡು ಆಗಾಗ್ಗೆ ದಂಡೆತ್ತಿ ಬರಲಿಕ್ಕೆ ತಕ್ಕ ಅನುಕೂಲ್ಯವಿರದ್ದರಿಂದ ತೊಂದರೆಯಾಗಿತ್ತು; ಅವರ ಅದೃಷ್ಟದಿಂದ ಇರಾಣದೇಶವು ಅರಬರ ಅಂಕೆಗೀಡಾಗಲು, ಸಿಂಧಪ್ರಾಂತದ ನೆರೆಯಲ್ಲಿ ಕಾಲೂರಿ ನಿಲ್ಲಲಿಕ್ಕೊಂದು ನೆಲೆ ದೊರೆಯಿತು. ಈ ಕಾಲಕ್ಕೆ ಮಹಮ್ಮದೀಯ ಧರ್ಮವು ಸಿಂಹಲದ್ವೀಪದ ವರೆಗೆ ಹಬ್ಬಿಕೊಂಡಿದ್ದಿತು. ಖಲೀಫವಾಲೀದ ಎಂಬವರು ಬಗದಾದದಲ್ಲಿ ರಾಜ್ಯವಾಳುತ್ತಿದ್ದರು. ಒಮ್ಮೆ ಸಿಂಹಲದ್ವೀಪದ ರಾಜನಿಂದ ತಮ್ಮ ಖಲೀಫರಿಗೆಮುಟ್ಟಿಸಲಿಕ್ಕೆಂದು ಬಹು ಅಮೂಲ್ಯವಾದ ರತ್ನ ಹಾಗೂ ಮುತ್ತುಗಳ ಕಾಣಿಕೆಯನ್ನು ಮುಸಲ್ಮಾನ ಪ್ರಯಾಣಿಕರು ಜಲಮಾರ್ಗದಿಂದ ಒಯ್ಯುತ್ತಿ

ದ್ದರು. ದಾರಿಯಲ್ಲಿ ಬರುಗಾಳಿಯಿಂದ ದಾರಿ ತಪ್ಪಿದವರಾಗಿ ಆ ಪ್ರವಾಸಿಕರು ಸಿಂಧುನದಿಯ ದಂಡೆಯಲ್ಲಿರುವ ದೇವಲ ಎಂಬ ರೇವಿಗೆ ಬಂದು ತಲ್ಪಿದರು. ಈ ರೇವಿನಲ್ಲಿರುತ್ತಿದ್ದ ಕೆಲವು ಸುಲಿಗೆಗಾರರು ಇವರಿಂದ ಎಲ್ಲ ನಾಮಾನುಗಳನ್ನು ಸುಲಿದುಕೊಂಡದ್ದಲ್ಲದೆ, ಅವರ ಜೊತೆಯಲ್ಲಿರುವ ಹೆಂಗಸರನ್ನು ಸೆರೆಮನೆಯಲ್ಲಿಟ್ಟರು. ಈ ವರ್ತಮಾನವು ಇರಾಣದೊಳಗಿರುವ ಸುಭೇನಾರನಿಗೆ ತಿಳಿಯಲು ಅವನು ದಾಹರನಿಗೆ ಅರಿಕೆ ಮಾಡಿಕೊಂಡನು; ಆದರೆ ದಾಹರನು ಶೂರನಿದ್ದರೂ, ಈ ಅನ್ಯಾಯವನ್ನು ಸರಿಪಡಿಸಲು ತನ್ನ ದೌರ್ಬಲ್ಯವನ್ನು ತೋರಿಸಿದ್ದರಿಂದ, ಮಹಮ್ಮದೀಯರು ಸಿಂಧುಪ್ರಾಂತದ ಅರಸನಾದ ದಾಹರನೊಡನೆ ಧರ್ಮಯುದ್ಧವನ್ನು ನಡಿಸಿದರು; ಮತ್ತು ಮಹಮ್ಮದ ಕಾಸೀಮನೆಂಬ ತಮ್ಮ ದಳವಾಯಿಯ ಕೈಲಿ ದಂಡನ್ನು ಕೊಟ್ಟು ಕಳಿಸಿದರು. ಮಹಮ್ಮದಕಾಸೀಮನು ಅಜೇಯನಾದ ವೀರನಿರುವನೆಂದು ದಾಹರನಿಗೆ ತಿಳಿದುದರಿಂದ ಅವನನ್ನೆದುರಿಸಲು ಎದೆಗೊಳ್ಳಲಿಲ್ಲ. ಮೇಲಾಗಿ ದೇವಲಪಟ್ಟಣದ ಕೋಟೆಯು ಒಹು ಭದ್ರವಾಗಿದ್ದು ಯಾರಿಗೂ ಕೈವಶವಾಗದೆಂದು ದಾಹರನ ನೆಚ್ಚಿನ ನಂಬಿಗೆಯಿರುವ ಮೂಲಕ ಶತ್ರುಗಳನ್ನು ತಡೆಗಟ್ಟುವ ಗೋಜಿಗೆ ಹೋಗದೆ ತಣ್ಣಗೆ ಕುಳಿತುಕೊಂಡನು. ದಾಹರನು ಸುಮ್ಮನೆ ಕುಳಿತುದರಿಂದ ಮಹಮ್ಮದ ಕಾಸೀಮನಿಗೆ ಹೆಚ್ಚು ಅನುವು ದೊರೆತು, ಅವನು ಸುತ್ತು ಕಪಿಯಿಂದ ದೇವಲಕೋಟೆಯ ಮೇಲೆ ಹಲ್ಲೆಗಳನ್ನು ನಡಿಸಿ, ದೇವಲಪಟ್ಟಣದೊಳಗೆ ಹೊಕ್ಕು, ಪಟ್ಟಣದೊಳಗಿರುವ ದೊಂದು ದೇವಸ್ಥಾನದ ಮೇಲೆ ಹಾರಾಡುತ್ತಿರುವ ದಾಹರನ ಧ್ವಜಪತಾಕೆಯನ್ನು ನೆಲಕ್ಕೆ ಕೆಡವಿಸಿದನು; ಈ ಬಗೆಯಾಗಿ ದೇವಲಪಟ್ಟಣವನ್ನು ಕೈವಶ ಪಡಿಸಿಕೊಂಡ ನಂತರ ಕಾಶೀಮನು ಕೈಗೆ ಬಂದಂತೆ ಊರೊಳಗಿನ ಗಂಡಸರನ್ನೆಲ್ಲ ಮೊದಲು ಕೊಲೆ ಮಾಡಿದನು. ಈತನ ಯಮಗೊಲೆಗೆ ಹೆದರಿ ನಡುಗಿ ಹೋದ ಜನರು ತಮಗೆ ಜೀವದಾನ ಕೊಡಬೇಕೆಂದು ಬೇಕಾದಷ್ಟು ಹಲುಬಿ ಬೇಡಿಕೊಂಡರೂ ಕನಿಕರ ದೋರದೆ, ಆ ಊರೊಳಗಿನ ಬೌದ್ಧವಿಹಾರದಲ್ಲಿರುವ ಏಳು ನೂರು ಮಂದಿ ಸುಂದರ ಹೆಂಗಸರನ್ನು ತನ್ನ ತೊತ್ತುಗಳನ್ನಾಗಿ ಮಾಡಿ

ಕೊಂಡು ಊರೊಳಗಿನ ಸಂಪತ್ತಿಯನ್ನೆಲ್ಲ ಸುಲಿದು ತನ್ನ ಜನರೊಳಗೆ ಹಂಚಿ ಮಿಕ್ಕುದನ್ನು ತನ್ನ ಧರ್ಮಾಜ್ಞೆಯಂತೆ ವಿಲೇಪ್ಠರ ಕಡೆಗೆ ಕಳಿಸಿದನು. ಈ ಮೇರೆಗೆ ಮಹಮ್ಮದೀಯರ ಕ್ರೂರವಾದ ದಾಳಿಗೆ ದೇವಲ ಪಟ್ಟಣವು ಮೊದಲನೇ ತುತ್ತಾಯಿತು. ಈ ದಾಳಿಯಲ್ಲಿ ಅರಬರು ಅನೇಕರನ್ನು ಬಲುಮೆಯಿಂದ ಮುಸಲ್ಮಾನರನ್ನಾಗಿ ಮಾಡಿದರು.

ಮೊದಲನೇ ಜೋಹರ್‌ವು:- ಅರಬರು ತಮಗೆ ದೊರೆತ ವಿಜಯದಿಂದ ಮದೋನ್ಮತ್ತರಾಗಿ ಸಿಂಧಪ್ರಾಂತದೊಳಗಿನ ಬಂದರಹಿಂದೊಂದು ಊರುಗಳನ್ನು ನೆಲ್ಲುತ್ತ ಬಂದರು; ಸಿಂಧುನದಿಯನ್ನು ಇಳಿದ ನಂತರ ಬ್ರಾಹ್ಮಣಾಬಾದದ ಹತ್ತರ ದಾಹರಸಿಗೂ ಕಾಸಿಮನಿಗೂ ಯುದ್ಧ ಪ್ರಸಂಗ ಒದಗಿತು. ಕ್ಷತ್ರಿಯರ ಜಿರುದಿನಂತೆ ಪೈರಿಗಳನ್ನು ಗೆಲಿಯುವೆನು ಅಥವಾ ವೀರಸ್ವರ್ಗ ಪಡೆಯುವೆನೆಂಬ ಭೀಷ್ಮಪ್ರತಿಜ್ಞೆಯಿಂದಲೇ ಮನಸು ದೃಢ ಮಾಡಿಕೊಂಡು ದಾಹರನು ಯುದ್ಧಕ್ಕೆ ಸಿದ್ಧನಾದನು. ಈ ಸಂಗ್ರಾಮದೊಳಗೆ ದಾಹರನ ಕಡೆಗೆ ೫೦ ಸಾವಿರ ಕಾಲಾಳು, ೧೦೦ ಆನೆಬಲ, ೫ ಸಾವಿರ ಕುದುರೆ ರಾಹುತರಿದ್ದು, ಸ್ವತಃ ದಾಹರನು ಮದಪೇರಿದ ಆನೆಯನ್ನೇರಿ, ಕೈಯಲ್ಲಿ ಭಾರವಾದ ಧನುಸ್ಸ್ಯವನ್ನು ಹಿಡಿದುಕೊಂಡು ಸಜ್ಜಾಗಿದ್ದನು. ಈತನು ರಣದೊಳಗೆ ಬಹು ಚಾತುರ್ಯದಿಂದ ಶರಸಂಧಾನ ನಡಿಸುವದಲ್ಲದೆ ನಡುನಡುವೆ ಭಾರತೀಯರ ವಿಶೇಷಾಸ್ತ್ರವಾದ ಚಕ್ರವನ್ನು ಬಿಡುತ್ತಿದ್ದನು. ಈ ಅಸ್ತ್ರವು ಅರಬರಿಗೆ ಅರಿಯದ್ದು. ಇದರಿಂದ ಇಂಥವನ ಮೇಲೆ ಗುರಿಯಿಟ್ಟರೆ ಸಾಕು. ಅದು ಅವನ ರುಂಡವನ್ನು ಕತ್ತರಿಸದೆ ಬಿಡುತ್ತಿರಲಿಲ್ಲ. ಈ ತೆರನಾಗಿ ಬಹು ಕೈಮೆಯಿಂದ ದಾಹರನು ಮುಂಜಾವಿನಿಂದ ಸಂಜೆಯ ವರೆಗೆ ಎಡೆಬಿಡದೆ ಯುದ್ಧ ನಡಿಸಿದನು; ಆದರೆ ಇಷ್ಟರಲ್ಲಿ ದಾಹರನ ಕಾಲವು ಒದಗಿ ಬಂದಿತು. ಅರಬರ ಬೆಂಕಿಯ ಬಾಣವೊಂದು ದಾಹರನು ಹತ್ತಿರುವ ಆನೆಗೆ ಬಂದು ತಾಗಲು, ಆನೆಯು ಗಾಬರಿಗೊಂಡು ಓಡಿ ನೆರೆಯಲ್ಲಿರುವ ದೊಂದು ಕೆರೆಯಲ್ಲಿ ಹೋಗಿ ಬಿದ್ದಿತು; ದಾಹರನ ಮೇಲೆ ಬಂದ ಸಂಕಟವನ್ನು ನಾಧಿಸಿ ಅರಬರು ಅವನ ಮೇಲೆ ನಾಗಿ ಹೋಗಿ ಅವನ ಹಾಯಕನಾರ ಅವನನ್ನು ಕೊಂದು ಬಿಟ್ಟರು. ಇತ್ತ ದಾಹರನ ಕೊಲೆ

ಯಿಂದ ದಂಡಿನೊಳಗೆ ಒಂದೇ ಒಂದು ಗೊಂದಲವೆದ್ದು ದಂಡಾಳುಗಳು ಓಡಲಾರಂಭಿಸಿದರು. ಅರಬರು ಅಸಂಖ್ಯಾಕ ಜನರ ನೆತ್ತರ ಹರಿಸಿ ಕ್ರಿ. ಶ. ೭೧೨ ರಲ್ಲಿ ಸಿಂಧಪ್ರಾಂತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಯುದ್ಧವು ನಡೆದಿರಲು ದಾಹರನ ಎರಡನೇ ರಾಣಿಯಾದ ಬಾಯಿಯೆಂಬವಳು ತನ್ನ ೧೫ ನಾವಿರ ಜನರೊಳಗೆ ರಾವೂರೆಂಬಲ್ಲಿದ್ದಳು. ಈ ಸುದ್ದಿಯನ್ನರಿತುಕೊಂಡು ಕಾಸೀಮನು ರಾವೂರಿಗೂ ಮುತ್ತಿಗೆ ಹಾಕಿದನು. ನೀಚಮಾನಸ ಭಕ್ಷಕರಾದ ಭ್ರಷ್ಟರಾಜರ ಕೈಗೆ ಪವಿತ್ರ ದೇಹವು ಸೇರಿತೆಂದರೆ, ಅಪವಿತ್ರವಾಗಿ ಹೋಗುವದೆಂಬ ಭೀತಿಯಿಂದ ಬಾಯಿಯು ತನ್ನ ಸಂಗಡಿಗರಾದ ರಜಪೂತ ಸ್ತ್ರೀಯರ ಸಲಹೆ ಕೇಳಿಕೊಂಡು, ಈ ಧರ್ಮಸಂಕಟದೊಳಗಿಂದ ಪಾರಾಗಲಿಕ್ಕೆ ಬೇರೆ ದಾರಿಯಿಲ್ಲವೆಂದು ಮನದಟ್ಟು ಮಾಡಿಕೊಂಡು ಅವರೊಡನೆ 'ಜೋಹಾರ' ಮಾಡುವದನ್ನೇ ನಿಶ್ಚಯಿಸಿ, ಅದರಂತೆ ತನ್ನ ದೇಹವನ್ನು ಅಗ್ನಿನಾರಾಯಣನಿಗೆ ಅರ್ಪಿಸಿ ಧನ್ಯಳಾದಳು. ಭಾರತೀಯರ ಇತಿಹಾಸದೊಳಗೆ ಸ್ತ್ರೀಯರು ನಡೆಯಿಸಿದ್ದು ಇದೇ ಮೊದಲನೇ ಜೋಹರವು.

ಹಿಂದೂಜನರಿಂದ ಅರಬರಿಗಾದ ಲಾಭಃ- ಕಾಡುಜಾತಿಯವರಾದ ಅರಬರಿಗೆ ಹಿಂದೂದೇಶದಂಥ ವಿದ್ಯೆ, ಕಲೆ, ಹಣ ಮೊದಲಾದವುಗಳದೊಂದು ಖನಿಯೇ ದೊರೆತದ್ದರಿಂದಾದ ಆನಂದಕ್ಕೆಣೆಯಿಲ್ಲದಂತಾಯಿತು. ದೆಮ್ಮಿನಂಥ ಗುಡ್ಡ ಬಂಡೆಗಳನ್ನು ಕೊರೆದು ಮಾರ್ಪಡಿಸಿದ ಭವ್ಯವಾದ ದೇವಾಲಯಗಳೂ, ವಿಹಾರಗಳೂ, ಮುಗಿಲು ಮುಟ್ಟುವಂಥ ಗುಡ್ಡದ ಶಿಖರದ ಮೇಲೆ ಕಟ್ಟಿದ ಕೋಟೆಕೊತ್ತಲಗಳೂ, ಗಂಗಾ ಯಮುನಾ ನದಿಗಳಿಂದ ನೂರಾರು ಮೈಲುಗಳ ವರೆಗೆ ಬುದ್ಧಿ ಕೌಶಲ್ಯಬಲದಿಂದ ಕಟ್ಟಿಸಿದ ದೊಡ್ಡ ದೊಡ್ಡ ಕಾಲುವೆಗಳೂ, ಅವೆಲ್ಲವುಗಳನ್ನು ನೋಡಿದಾಗ ಹಿಂದುಸ್ಥಾನವೆಂದರೆ "ಸೋಜಿಗಗಳ ತವರ್ಮನೆ" ಯೆಂದದವರು ಬೆರಗಾದರು. ಈ ಕಾಲಕ್ಕೆ ಹಿಂದೂದೇಶವೆಂದರೆ ಕಲಾಕೌಶಲ್ಯಗಳಲ್ಲಿ ಘನತೆಯ ಶಿಖರಕ್ಕೇರಿದ್ದಿತು. ಅರಬರು ಶಸ್ತ್ರದಿಂದ ಹಿಂದೂದೇಶವನ್ನು ಗೆದ್ದು ಸುಮ್ಮನೆ ಕುಳ್ಳಿರಲಿಲ್ಲ. ಸ್ವಾಭಾವಿಕವಾಗಿಯೇ ಅರಬರಲ್ಲಿ ತಮ್ಮ ಸಂಸ್ಕೃತಿಯನ್ನು ಉಚ್ಚಸ್ಥಿತಿಗೆ

ಮುಟ್ಟಿಸಬೇಕೆಂಬುದೊಂದು ಹವ್ಯಾಸವು ಇದೀಗ ಹೃದಯಪ್ರದೇಶದೊಳಗೆ ಹೆಚ್ಚುತ್ತಿದ್ದಿತು. ಯಾವ ಜ್ಞಾನಾಮೃತವನ್ನು ಅವರ ಗುರುವಾದ ಮಹಮ್ಮದ ಪೈಗಂಬರನು ಹಿಂದೂದೇಶದ ಕಡೆಯಿಂದ ಬೀಸುವ ಗಾಳಿಯಿಂದಲೂ, ಹಿಂದೂದೇಶದಿಂದ ಬರುವ ವರ್ತಕರಿಂದಲೂ, ಕಲಿತುಕೊಂಡು ಅದಕ್ಕೇ ಇಸ್ಲಾಮಧರ್ಮವೆಂಬ ಹೊರಿಕೆಯನ್ನು ಹೊರಿಸಿದನೋ, ಆ ಜ್ಞಾನಾಮೃತವನ್ನಲ್ಲದಿದ್ದರೂ, ಅದಕ್ಕೆ ಕೀಳಾದ ಅನೇಕ ವಿಧದ ಶಾಸ್ತ್ರವಿದ್ಯೆ ಮೊದಲಾದವುಗಳನ್ನು ಅರಬ ಸವಿಗಾರರು ಹಿಂದೂ ಜನರ ಅಡಿದಾವರೆಗಳಲ್ಲಿ ಕುಳಿತುಕೊಂಡು ಕಲಿತರು. ಬ್ರಾಮ್ಹಣರಾದವರಲ್ಲಿದ್ದುಕೊಂಡು ಅರಬ ಶೇಖರು ಅದೇ ಮೊದಲು ರಾಜತಂತ್ರ ಶಾಸ್ತ್ರದ ಮೂಲಾಕ್ಷರಗಳನ್ನು ತಿಳಿದುಕೊಂಡರು; ಇಷ್ಟೇ ಅಲ್ಲದೆ ತತ್ಕಾಲೀನ ಬಗದಾದ ಖಲೀಫನಾದ ಹರುನ-ಅಲ್-ರಸೀದ ಎಂಬವರು ಹಲವು ಹಿಂದೂ ಶಾಸ್ತ್ರಗಳನ್ನು ತಾವು ಕಲಿಯಬೇಕೆಂಬ ಅಪೇಕ್ಷೆಯಿಂದ ಹಿಂದುಸ್ಥಾನದಿಂದ ತಮ್ಮ ಒಪ್ಪೋಲಗಕ್ಕೆ ಬ್ರಾಮ್ಹಣ ಪಂಡಿತರನ್ನು ಕರೆಯಿಸಿಕೊಂಡರು. ಹೀಗಾಗಿ ಅರಬರು ಹಿಂದೂಜನರಿಂದ ಆರ್ಯಭಟ್ಟನ ಜ್ಯೋತಿಷ, ಗಣೀತಶಾಸ್ತ್ರ, ಬೀಜಗಣೀತ, ವೈದ್ಯಕೀಯ, ಶಿಲ್ಪಿಕಲೆ, ಗಾಯನಕಲೆ ಅವೇ ಮುಂತಾದ ಹಣ್ಣಿಗೆ ಬಂದ ಶಾಸ್ತ್ರಗಳನ್ನು ಕಲಿತುಕೊಂಡದ್ದಲ್ಲದೆ, ಅವುಗಳ ಗ್ರಂಥಗಳನ್ನು ತಮ್ಮ ಭಾಷೆಯಲ್ಲಿ ಪರಿವರ್ತಿಸಿ, ಅವನ್ನು ಯುರೋಪದೊಳಗೆ ಹರಡಿಸಿದರು. ತಮ್ಮ ದೇಶದೊಳಗೆ ಆಸ್ಪತ್ರೆಗಳನ್ನು ಹಾಕಿ ಜನರಿಗೆ ಔಷಧ, ವನಸ್ಪತಿಗಳ ಜ್ಞಾನ ಮಾಡಿಕೊಡಲಿಕ್ಕೆಂದು ಹಿಂದೂದೇಶದಿಂದ ಅನೇಕ ವೈದ್ಯರನ್ನು ಒಯ್ದರು. ಅರಬಸ್ಥಾನದಂಥ ದೂರಿನ ದೇಶದಿಂದ ಹುರಿದುಂಬಿದವರಾದ ಅರಬ ವಿದ್ಯಾರ್ಥಿಗಳು ಜ್ಞಾನಪಡೆಯುವ ಲಾಲಸೆಯಿಂದ ಬಂದು ಹಿಂದುಸ್ಥಾನದೊಳಗಿನ ಬೌದ್ಧವಿಹಾರ, ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಲಿಯುವ ವಿದ್ಯಾರ್ಥಿಗಳೊಡನೆ ಬಂದಾಗಿ ಕಲೆತು ನಡೆಯುತ್ತಿದ್ದರು. ವೈದ್ಯಕೀಯ ಅಭ್ಯಾಸಕ್ಕೆ ತೆಸರುವಾಸಿಯಾಗಿರುವ ತಕ್ಷಶಿಲೆಯ ವಿದ್ಯಾಲಯವಂತೂ ಬಗದಾದ ಅರಬ ವಿದ್ಯಾರ್ಥಿಗಳಿಗೆ ನಡುಮನೆ ಹಿತ್ತಲ ಮನೆಯಂತಾದ್ದರಿಂದ ಅವರೆಲ್ಲರೂ ಇಲ್ಲಿಂಯೇ ಬಂದು ಮುತ್ತುತ್ತಿದ್ದರು.

ಷ್ಯನ ಆಯುರ್ಮರ್ಯಾದೆಯು ಮೊದಲನೇ ಮೆಟ್ಟಿಲಿನಲ್ಲಿರುವಾಗಲೇ ಆಚಾರ್ಯರು ತಮ್ಮ ಪ್ರಜ್ಞಾಬಲದಿಂದ ನಡಿಸಿದ ಅಘಟಿತ ಕಾರ್ಯಕ್ಕಾಗಿ ಹಿಂದೂಜನರು ಅವರಿಗೆ ಎಷ್ಟು ಋಣಿಯಾಗಿದ್ದರೂ ಕಡಿಮೆಯೇ! ಈ ಧರ್ಮಸೂರ್ಯನು ಭಾರತೀಯ ಆಕಾಶದೊಳಗೆ ಯೋಗ್ಯ ಕಾಲಕ್ಕೆ ಮೂಡಿ ತನ್ನ ಪ್ರತಾಪಿಯಾದ ಕಿರಣಗಳಿಂದ ದುರ್ಜನರನ್ನು ಹೊಡೆದೋಡಿಸಿ, ಸಜ್ಜನರನ್ನು ಕಾಯ್ದು ಮೊರೆ ಕೇಳದಿದ್ದರೆ ಹಿಂದೂದೇಶದ ಸ್ಥಿತಿಯು ಏನಾಗುತ್ತಿತ್ತೋ ಹೇಳಲಿಕ್ಕೆ ಬಾರದು!